THE BOOK WAS DRENCHED

TEXT PROBLEM WITHIN THE BOOK ONLY

ಶ್ರೀ.

ಲಕ್ಷ್ಮೀ ನರಸಿಂಹ ಪ್ರಸನ್ನ.

ಅಕಬರಬೀರಬಲ್ಲ ಚಾತುರ್ಯ ವಾದ ವಿನೋದ ಕಥೆಗಳು.

ಭೀಮಾಚಾರ್ಯ ಸುಬ್ರಹ್ಮಣ್ಯಾಚಾರ್ಯ ಚಿತ್ತೂರ

ಇವರಿಂದ ರಚಿಸಲ್ಪಟ್ಟಿತು.

ಬಳ್ಳಾರಿ, ಕರ್ನಾಟಕ ಬುಕ್‌ಡಿಪೋ ಏಜಂಟ್.

ರಾ॥ ಶ್ರೀ. ಕನ್ನಯ್ಯ ಶೆಟ್ಟಿ ಇವರಿಗಾಗಿ


ಕರ್ನಾಟಕ ಬುಕ್‌ಡಿಪೋ ಮುದ್ರಾಯಂತ್ರದಲ್ಲಿ

ಮುದ್ರಿಸಲ್ಪಟ್ಟಿತು.

ಬಳ್ಳಾರಿ.

1915.

ಇಪ್ಪತ್ತು ಕಾಸುಗಳು.



—(ಪ್ರಸ್ತಾವನೆ.)—

ಈ ಅತಿಪುಣ್ಯ ಭೂಮಿಯಾದ ಭಾರತ ವರ್ಷದಲ್ಲಿ ಹೊಗಲು ಬಾದಶಹನಾದ ಅಕಬರನ ಮತ್ತು ಅವನ ಕೃಪಾ ಪಾತ್ರನಾದ ಬೀರಬಲನ ಹೆಸರುಗಳನ್ನು ಕೇಳದ ಒಬ್ಬ ಮನುಷ್ಯನಾದರೂ ಸಹ ದೊರೆಯಲಿಕ್ಕಿಲ್ಲ ಬಾದಶಹನ ಸಮ್ಮುಖದಲ್ಲಿ ನೀತಿ ರಸಯುಕ್ತವಾದ ಭಾಷಣಗಳಿಂದಲೂ, ಹಾಸ್ಯರಸ ಪ್ರಧಾನವಾದ ಕಥೆಗಳಿಂದಲೂ, ಜನರ ಮನಸ್ಸನ್ನು ಹರಣ ಮಾಡಿಕೊಂಡಂಥ, ಈಗ ಸಹಾ ಬೀರಬಲನ ಕಥೆಗಳನ್ನು ಕೇಳಿದ ಕೂಡಲೆ ಅವನಲ್ಲಿದ್ದ ಪ್ರಸಂಗಾವಧಾನತೆಯು ಎಷ್ಟು ತೀವ್ರವಾಗಿತ್ತೆಂಬದನ್ನು ಮನಸ್ಸಿನಲ್ಲಿ ಕಲ್ಪನೆಯನ್ನು ಸಹಾ ಮಾಡಲು ಸಾಧ್ಯವಿಲ್ಲ; ಇಂಥ ಅಕಬರ ಬೀರಬಲರ ವಿಷಯಲ್ಲಿ ಇದ್ದಂಥ ಚಮತ್ಕಾರ ಕಥೆಗಳುಳ್ಳ ಪುಸ್ತಕವು ನಮ್ಮ ಮಾತೃ ಭಾಷೆಯಾದ ಕನ್ನಡದಲ್ಲಿ ಇಲ್ಲದ್ದನ್ನು ಕಂಡು, ನಮ್ಮ ಮ. ರಾ। ರಾ॥ ಶ್ರೀ ಕೇ. ಕೃಷ್ಣಸ್ವಾಮಿ ಶೆಟ್ಟಿ, ಮತ್ತು ಕನ್ನಯ್ಯ ಶೆಟ್ಟಿ, ಕರ್ನಾಟಕ ಪ್ರೀ ಏಜಂಟ್ ಬಳ್ಳಾರಿ. ಇವರು ನನಗೆ ಮಾತೃ ಭಾಷೆಯಲ್ಲಿ ಬರೆಯ ಪ್ರೋತ್ಸಾಹಿಸಿದ್ದರಿಂದ ಹಿಂದುಸ್ತಾನೀ ಭಾಷೆಯಲ್ಲಿದ್ದ ಎರಡು ಮೂರು ಗ್ರಂಥಗಳನ್ನು ಪರಿಶೋಧಿಸಿ, ರಚಿಸಿಯಿರುವೇನು.

ತಮ್ಮ ಕೃಪಾಭಿಲಾಷಿಯಾದ

ಲೇಖಕ

ಭೀಮಾಚಾರ್ಯ. ಸುಬ್ರಹ್ಮಣ್ಯಾಚಾರ್ಯ, ಕಿತ್ತೂರ.

—(ಅ ಕ ಬ ರ ಬೀ ರ ಬ ಲ ರ.)—

ವಿಷಯಾನುಕ್ರಮಣಿಕೆ.

—(ವಿಷಯಾನುಕ್ರಮಣಿಕೆ ಸಂಪೂರ್ಣ ವಾದುದು.)—

—*(ಕಥೆಗಳ ವಿಷಯಗಳು.)*—

ಸಚಿತ್ರ ಸ್ತ್ರೀಚರಿತ್ರ ೮೦ ಕಥೆಗಳು	೨	೦	೦
ಮೋಹನಾಂಗಿಯ ಕಥೆ.	೦	೪	೦
ಸಚಿತ್ರ ಅರಬಿಯನ್‌ನೈಟ್ಸ್ ಕಥೆಗಳು.	೨	೦	೦
ಸಚಿತ್ರ ಶಿವಶರಣರ ಕಥೆಗಳು.	೧	೧೨	೦
ಸಚಿತ್ರ ಭಾಗವತ ಕಥಾಸಂಗ್ರಹ ೧೨ ಸ್ಕಂಧಗಳು ಶೇರಿಥೆ ಕಥಾರೂಪ.	೧	೪	೦
ಶೃಂಗಾರ ಸ್ತ್ರೀ ಶುಕಸಪ್ತತಿ ೩೨ ಕಥೆಗಳು.	೦	೮	೦
ಸತ್ಯಹರಿಶ್ಚಂದ್ರ ಮಹಾರಾಯನಕಥೆ.	೦	೪	೦
ಕುಶಲವರ ಕಥೆ.	೦	೩	೦
ಕನಕಾಂಗಿ ಕಥೆ.	೦	೪	೦
ಕಾಳಿದಾಸಪ್ರಣೀತ ಸಟೀಕಾ ಭೋಜಮಹಾರಾಯನ ಚರಿತ್ರೆ ೬೮೪ ಶ್ಲೋಕದ್ದು (ಶೃಂಗಾರ ರಸ)	೦	೮	೦
ಕಥಾಸಾಗರ (ಚಮತ್ಕಾರ ಕಥೆಗಳು.)	೦	೩	೦
ಕೃಷ್ಣಬೋಧಾಮೃತವೆಂಬ ೧೨ ರಾಜಪುತ್ರರ ಕಥೆಗಳು, ಇದರಲ್ಲಿ ವೇದಾಂತ ವಿಷಯವನ್ನು ತಿಳಿಸುವ ಬಹಳ ಆಶ್ಚರ್ಯವಾದ ಕಥೆಗಳು.	೦	೧೦	೦
ಸಟೀಕಾ ವಿಷ್ಣುಶರ್ಮ ಪಂಚತಂತ್ರ ಕಥೆಗಳು. ...	೦	೮	೦
ತೆನ್ನಾಲ ರಾಮಕೃಷ್ಣನ ಕಥೆಗಳು. (ಹಾಸ್ಯರಸ) ...	೦	೨	೦
ನಳದಮಯಂತಿ ಪುಣ್ಯಚರಿತ್ರೆ ಕಥಾರೂಪ ದೊಡ್ಡಕ್ಷರ ದಪ್ಪಕಾಗದ.	೦	೬	೦
ಹುಚ್ಚ ಮುಂಡೆಯ ಕಥೆಗಳು.	೦	೪	೦
ಪತಿವ್ರತಾಮಹಾತ್ಮೆ ಕಥೆಗಳು ದೊಡ್ಡಕ್ಷರ. ...	೦	೪	
ಸಿಂಹಾಸನ ಬತ್ತಿಸಪುತ್ಥಳಿ ಕಥೆಗಳು.	೦	೪	
ನಗದವರನ್ನು ನಗಿಸುವ ಕಥೆ. (ಎಲ್ಲಾ ನಗುವೆ) ...	೦	೩	
ಸಚಿತ್ರ ಶ್ರೀವಿಷ್ಣುದಶಾವತಾರ ಕಥೆಗಳು, ಮತ್ತು ಷಟ್‌ಕಾಂಡ ಶ್ರೀರಾಮಾಯಣ ಕಥಾಸಂಗ್ರಹವು. ...	೦	೧೨	
೧೮ ಪರ್ವ ಮಹಾಭಾರತ ಕಥಾರೂಪ.	೦	೬	
೩೪ ಸಂಧಿ ಜೈಮಿನಿಭಾರತ ಕಥಾರೂಪ ದೊಡ್ಡಕ್ಷರ. ...	೦	೧೨	

ಇನ್ನು ಕನ್ನಡ ವೇದಾಂತಗ್ರಂಥಗಳು ಕಾವ್ಯಗ್ರಂಥಗಳು, ಶಿವಪುರಾಣಗಳ ಚಾತುರ್ಯವಾದ ಕಥೆಗಳು, ಜ್ಯೋತಿಷ್ಯಗ್ರಂಥಗಳು. ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತಗ್ರಂಥಗಳು, ನಾಟಕಗಳು, ಕನ್ನಡ ಸಂಸ್ಕೃತಗ್ರಂಥಗಳು ಸಿಗುವವು, ಬೇಕಾದರು ಬರೆದು ತರಿಸಿಕೊಳ್ಳಬಹುದು.

ಶ್ರೀ· ಕನ್ನಯ್ಯ ಶೆಟ್ಟಿ,
ಕರ್ನಾಟಕ ಬುಕ್‌ಡಿಪ್ಪೋ ಏಜಂಟ್, ಬಳ್ಳಾರಿ.

ಪೂರ್ವಜನ್ಮದ ವೃತ್ತಾಂತ.

ಪ್ರಾಚೀನಕಾಲದಲ್ಲಿ ಈ ಆರ್ಯಾವರ್ತ ದೇಶದಲ್ಲಿ ಬ್ರೈಜರವೆಂಬ ಒಂದು ಗ್ರಾಮವಿತ್ತು. ಅಲ್ಲಿ ಮಹಾಪಂಡಿತನೂ, ಸದಾಚಾರ ಸಂಪನ್ನನೂ ಆದಂಥ ಸುಶರ್ಮನೆಂಬ ಬ್ರಾಹ್ಮಣನು ಇದ್ದನು. ಅವನಿಗೆ ಸುದಾಸನೆಂಬ ಒಬ್ಬ ಪರಮ ಸ್ನೇಹಿತನಿದ್ದನು. ಈ ಸುದಾಸನು ಜಾತಿಯಲ್ಲಿ ತಲವಾರನಿದ್ದನು. ಇವರಿಬ್ಬರು ಏನಾದರೊಂದು ಕಾರ್ಯವನ್ನು ಮಾಡುವದಿದ್ದರೆ ಪರಸ್ಪರರ ಸಮ್ಮತಿಯಿಲ್ಲದೆ ಮಾಡುತ್ತಿದ್ದಿಲ್ಲ. ಹೀಗೆ ಎಷ್ಟೋ ವರುಷಗಳು ಕಳೆದು ಹೋದಮೇಲೆ ಸುಶರ್ಮನ ಮನಸ್ಸಿನಲ್ಲಿ ರಾಜನಾಗಬೇಕೆಂಬ ಅಭಿಲಾಷೆಯು ಹುಟ್ಟಿತು. ಆಗ ಅದನ್ನು ಸಂಪಾದಿಸಬೇಕೆಂಬ ಇಚ್ಛೆಯಿಂದ ಘೋರ ತಪಶ್ಚರ್ಯವನ್ನು ಮಾಡಿ ಜಗದೀಶನನ್ನು ಒಲಿಸಿಕೊಳ್ಳಬೇಕೆಂದು ನಿಶ್ಚಯಿಸಿ, ಈ ಸಂಗತಿಯನ್ನು ತನ್ನ ಪರಮಸ್ನೇಹಿತನಾದ ಸುದಾಸನಿಗೆ ತಿಳಿಸಿದನು. ಈ ಮಾತು ಅವನ ಮನಸ್ಸಿಗೂ ಬಂತು,

ಆಗ ಸುದಾಸನು ಅನ್ನುತ್ತಾನೆ; - “ ಮಿತ್ರನೇ ನಾನಾದರೂ ನನ್ನ ಧರ್ಮಾ
ನುಸಾರವಾಗಿ ನಿನ್ನ ಸೇವಾವೃತ್ತಿಯಲ್ಲಿದ್ದು, ನನ್ನ ಮನೋಭಿಲಾಷೆಯನ್ನು
ಪೂರ್ಣಮಾಡಿಕೊಳ್ಳುವೆನು, ಈ ಮಾತಿಗೆ ನೀನು ಸಮ್ಮತಿಸು. ” ಎಂದು
ವಿನಂತಿಮಾಡಿಕೊಂಡನು. ಆಗ ಸುಶರ್ಮನು ಮಿತ್ರನ ಮಾತಿಗೆ ಆನಂದ
ದಿಂದ ಒಪ್ಪಿಕೊಂಡನು. ಈರ್ವರೂ ಕೂಡಿಕೊಂಡು ಪ್ರಯಾಗ ಕ್ಷೇತ್ರಕ್ಕೆ
ಹೋಗಿ ಜಾನ್ಹವೀತಟಾಕದಲ್ಲಿ ಒಂದು ಪರ್ಣಕುಟೀರವನ್ನು ನಿರ್ಮಾಣಮಾ
ಡಿಕೊಂಡು ವಾಸಮಾಡಹತ್ತಿದರು. ಬ್ರಾಹ್ಮಣನು ಹನ್ನೆರಡುವರುಷ ಪರಿ
ಯಂತರ ತಪವನ್ನಾಚರಿಸಿದನು; ಆದರೂ ಜಗದೀಶನು ಪ್ರಸನ್ನನಾಗಲಿಲ್ಲ.
ಆಗ ಅವನು ಖಿನ್ನಮನನಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಪುನಃ ತಪ
ವನ್ನಾರಂಭಿಸಿದನು.

ಸುದಾಸನಾದರೂ ತನ್ನ ಧರ್ಮಾನುಸಾರವಾಗಿ ಆ ಬ್ರಾಹ್ಮಣನ ಜೊ
ತೆಯಲ್ಲಿಯೇ ಇದ್ದುಕೊಂಡು ತನ್ನ ಮನೋಭೀಷ್ಟವನ್ನು ಹೊಂದಬೇಕೆಂ
ದು ಬಗೆದು, ಆ ಸನ್ಯಾಸಿಯ ಸೇವೆಯನ್ನು ಮಾಡುತ್ತ ಕಾಲಹರಣ ಮಾಡ
ಹತ್ತಿದನು.

ಈಪ್ರಕಾರ ತಪವನ್ನು ಆಚರಿಸುವದರಲ್ಲಿಯೇ ಪುನಃ ಹನ್ನೆರಡುವರು
ಷಗಳು ಕಳೆದುಹೋದವು; ಆದರೆ ಜಗದೀಶನು ಕರುಣಿಸಲಿಲ್ಲ ಇದರಿಂದ ಸು
ಶರ್ಮನು ಖಿನ್ನಾಂತಃಕರಣನಾಗಿ ತನ್ನ ಮಿತ್ರನನ್ನು ಕುರಿತು ಅನ್ನುತ್ತಾನೆ
“ ಎಲೈ ಪರಮಪ್ರಿಯ ಮಿತ್ರನಾದ ಸುದಾಸನೇ ? ನಾನು ತಪಸ್ಸನ್ನು ಮಾ
ಡಹತ್ತಿ ಇಪ್ಪತ್ತುನಾಲ್ಕು ವರುಷಗಳಾದವು, ಆದರೂ ಜಗನ್ನಿಯಂತನು ಕ
ರುಣಿಸಲಿಲ್ಲ. ಇನ್ನು ಪುನಃ ಸಂಸಾರಪಾಶದಲ್ಲಿ ಸಿಲುಕಿಕೊಂಡು ಅನುಯಾ
ಯಿದಳಲ್ಲಿ ಮುಖವನ್ನೆತ್ತಿ ಸಂಚಾರಮಾಡಲಿಕ್ಕೆ ನನ್ನ ಮನಸ್ಸು ಹಿಂಜರಿಯು
ತ್ತದೆ, ಅದರಿಂದ ಈ ಲೋಕಪಾವನೆಯಾದ ಭಾಗೀರಥಿಯಲ್ಲಿ ದೇಹಪಾತವ
ನ್ನು ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ್ದೇನೆ” ಆದರೆ ಆತ್ಮಘಾತವು ಶಾಸ್ತ್ರ
ಗಳಲ್ಲಿ ನಿಷಿದ್ಧವೆಂದು ಹೇಳಲ್ಪಟ್ಟದೆ. ಇಷ್ಟೇ ಅಲ್ಲ: ಪೂರ್ವಜರು ಹೀಗೆ
ಹೇಳಿರುವರಲ್ಲಾ - “ ಹಿಂದೆ ಮಾಡಿದ್ದನ್ನು ಮರೆತು, ಮುಂದೆ ಮಾಡತಕ್ಕದ್ದ
ನ್ನಾದರೂ ಸರಿಯಾಗಿ ಆಚರಿಸು ” ಎಂದು ಹೇಳಿದ್ದಾರೆ ಅದರಿಂದ ಮನಸ್ಸು
ಭೀತಿಯುಕ್ತವಾಗಿದೆ.

ಆಗ ಸುದಾಸನು ಅನ್ನುತ್ತಾನೆ;- “ ಅಹುದು ಆತ್ಮಘಾತಮಾಡಿಕೊ
ಳ್ಳುವದು ನನ್ನ ಮನಸ್ಸಿಗೂ ಬರುವದಿಲ್ಲ. ಆದರೆ ಈ ತ್ರಿವೇಣೀ ಸಂಗಮದಲ್ಲಿ
ದೇಹಪಾತ ಮಾಡಿಕೊಂಡರೆ ಪಾಪವು ತಟ್ಟುವದಿಲ್ಲವೆಂತಲೂ, ಮನೋಭೀ

ಷ್ಟವು ಲಭಿಸುವದೆಂತಲೂ ಎಷ್ಟೋ ಜನ ಶಾಸ್ತ್ರಜ್ಞರ ಮುಖದಿಂದ ಕೇಳಿದ್ದೇನೆ" ಎಂದು ಹೇಳಿದನು.

ಈ ಮಾತನ್ನು ಕೇಳಿದ ಕೂಡಲೆ ಸುಶರ್ಮನಿಗೆ ಪರಮಾನಂದವಾಯಿತು. ಕೂಡಲೆ ಅವರೀರ್ವರು ತಮ್ಮತಮ್ಮ ಸಾಮಾನುಗಳನ್ನು ಬೇರೆಬೇರೆಯಾಗಿ ಕಟ್ಟಿ ಒಂದು ಗುಡ್ಡದ ಓರೆಯಲ್ಲಿ ಹುಗಿದು, ಜಾನ್ಹವೀತಟಾಕಕ್ಕೆ ಬಂದರು. ಆಗ ಸುಶರ್ಮನು ಪರಜನ್ಮದಲ್ಲಿ ಸಾರ್ವಭೌಮ ನಾಗಬೇಕೆಂಬ ಇಚ್ಛೆಯಿಂದಲು ಸುದಾಸನು ಉತ್ತಮಕುಲದಲ್ಲಿ ಜನ್ಮವನ್ನು ಹೊಂದಿ ತನ್ನ ಮಿತ್ರನ ಪ್ರಧಾನಮಂತ್ರಿಯಾಗಬೇಕೆಂಬ ಇಚ್ಛೆಯಿಂತಲೂ, ದೇಹತ್ಯಾಗ ಮಾಡಿದರು. ಮತ್ತು ಪರಜನ್ಮದಲ್ಲಿ ಪೂರ್ವಜನ್ಮದ ವೃತ್ತಾಂತವು ಸ್ಮರಣೆಯಲ್ಲಿ ಇರಬೇಕೆಂಬ ಅಭಿಲಾಷೆಯು ಸಹಾ ಇತ್ತು.

ಮುಂದೆ ಅವರವರ ಇಚ್ಛಾನುಸಾರವಾಗಿ ಸುಶರ್ಮನ ಜನ್ಮವು ಹುಮಾಯೂನ ಬಾದಶಹನಲ್ಲಿ ಆಯಿತು. ಸನ್ ೧೫೪೨-ನೇ ಇಸ್ವಿಯಲ್ಲಿ ಹುಮಾಯೂನನ ಬೇಗಮ್ಮನ ಹೊಟ್ಟೆಯಲ್ಲಿ ಹುಟ್ಟಿದ ಅಕಬರಬಾದಶಹನೇ ಸುಶರ್ಮನ ಅವತಾರವು. ಸುಶರ್ಮನ ಇಚ್ಛೆಯಾದರೂ ಶ್ರೇಷ್ಟವರ್ಣದಲ್ಲಿಯೇ ಜನ್ಮತಾಳಬೇಕೆಂದು ಇತ್ತು, ಆದರೆ ತಪಸ್ಸನ್ನು ಆಚರಿಸುತ್ತಿರುವಕಾಲದಲ್ಲಿ ಕೇವಲಕ್ಷೀರವನ್ನು ಪ್ರಾಶನಮಾಡಿ ಇರಹತ್ತಿದ್ದರಿಂದ ಮುಸಲ್ಮಾನ ಕುಲದಲ್ಲಿ ಜನ್ಮಧಾರಣ ಮಾಡಬೇಕಾಗಿ ಬಂತು. ಆದರೆ ಇವನು ಪೂರ್ವಜನ್ಮದಲ್ಲಿ ಹಿಂದುವಾಗಿಯೂ ತಪವನ್ನು ಮಾಡುತ್ತಿದ್ದರಿಂದಲೂ ಅವನಿಗೆ ಹಿಂದೂ ಧರ್ಮದಮೇಲೆ ವಿಶ್ವಾಸವುಂಟಾಗಿತ್ತು.

ಅದೇ ಪಟ್ಟಣದಲ್ಲಿಯೇ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಸುದಾಸನ ಜನ್ಮವಾಯಿತು, ಬ್ರಾಹ್ಮಣನು ಆ ಕೂಸಿಗೆ "ಸ್ವಪ್ನನಾಥ,, ನೆಂದು ಹೆಸರಿಟ್ಟನು. ಆ ಬಾಲಕನು ಸುಂದರನಾಗಿದ್ದು ಚತುರನಾಗಿದ್ದನು. ಅವನು ಸ್ವಲ್ಪದಿವಸಗಳಲ್ಲಿಯೇ ಅನೇಕ ಶಾಸ್ತ್ರಗಳನ್ನೋದಿಕೊಂಡನು, ಇದರಿಂದ ಬಾದಶಹನು ಸಂತುಷ್ಟನಾಗಿ ಅವನಿಗೆ "ಬೀರಬಲ,, ಎಂದು ಕರೆಯಹತ್ತಿದನು. ಇವರಿಬ್ಬರ ಪೂರ್ವಜನ್ಮದ ಒಂದು ಆಖ್ಯಾಯಿಕೆಯು ಇದೇ ಗ್ರಂಥದಲ್ಲಿ ೧೨೦-ನೇದರಲ್ಲಿ ಬಂದದೆ.

ಜಾತಿ, ಜನ್ಮಭೂಮಿ, ಮತ್ತು ಪ್ರಾಕಟ್ಯ.

ರಾಜಾ ಬೀರಬಲ್ಲನ ಜಾತಿಯು ನಿಃಸಂದೇಹವಾಗಿ ಗೊತ್ತಾಗಿರುವದಿಲ್ಲ; ಕೆಲವರು ಇವನು "ಕಾನ್ಯಕುಬ್ಜ,, ಬ್ರಾಹ್ಮಣನೆಂದು ಹೇಳುತ್ತಾರೆ, ಕೆಲವರು "ಚೌಬೇ" ಕುಲದವನೆಂದು ಹೇಳುತ್ತಾರೆ. ಯಾಕೆಂದರೆ ಚೌಬೇ

ಕುಲದವರು ಕೇವಲ ಹಾಸ್ಯಗಾರರೂ, ಪರರ ಮನಸ್ಸನ್ನು ಒಲಿಸಿಕೊಳ್ಳುವದರಲ್ಲಿ ಕುಶಲರೂ ಇರುವರು. ಅದರಂತೆಯೇ ಈ ಬೀರಬಲನಲ್ಲಿ ಮೇಲೆಹೇಳಿದ ಗುಣಗಳು ಇದ್ದದರಿಂದ ಅವರು ತಮ್ಮ ಕುಲದವನೆಂದು ಹೇಳುತ್ತಿರಬಹುದು. ಈ ವಿಷಯದಲ್ಲಿ ಇನ್ನೊಂದು ಆಖ್ಯಾಯಿಕೆಯುಂಟು ಅದೇನಂದರೆ- “ ಬೀರಬಲನು “ ಈ ಜಗತ್ತಿನಲ್ಲಿ ಪ್ರಸಿದ್ಧನಾಗುವ ಪೂರ್ವದಲ್ಲಿ ತನ್ನ ಕವಿತ್ವದಿಂದಲೂ, ಗಾಯನದಿಂದಲೂ ದುರ್ಗಾದೇವಿಯನ್ನು ಒಲಿಸಿಕೊಂಡು, “ ನೀನು ಆರಂಭದಲ್ಲಿ ಯಾವ ವ್ಯಾಪಾರವನ್ನು ಮಾಡುವಿಯೋ ಅದರಲ್ಲಿ ನಿನಗೆ ಅಧಿಕಲಾಭವಾಗುವದು ” ಎಂಬ ವಾಗ್ದಾನವನ್ನು ಹೊಂದಿದ್ದನಂತೆ ಅದರಂತೆ ಅವನು ಉಪ್ಪನ್ನು ತುಂಬಿಕೊಂಡು ಒಂದು ಹೊಲೆಯನಿಗೆ ಮಾರಲಿಕ್ಕೆ ಕೊಟ್ಟನು, ಅದನ್ನು ಕಂಡು ದೇವಿಯು ಪುನಃ ವರವನ್ನು ಕೊಟ್ಟಳು ಏನಂದರೆ;- “ ನಿನಗೆ ಇನ್ನು ಮುಂದೆ ಹಾಸ್ಯದಿಂದಲೇ ವಿಶೇಷಲಾಭವುಂಟಾಗುವದು ” ಆಕಾಲದಿಂದ ಇವನಲ್ಲಿ ಚಾತುರ್ಯವು ಹೆಚ್ಚಾಯಿತು ಎಂಬಪಂಥ ಕಥೆಯೂ ಉಂಟು.

ಮಾರವಾಡ ದೇಶದಲ್ಲಿ ಬೀರಬಲನು “ ಮಕರ ” ವೆಂಬ ಗ್ರಾಮದಲ್ಲಿ ಜನ್ಮತಾಳಿದವನೆಂದು ಹೇಳುತ್ತಾರೆ, ಆ ಗ್ರಾಮದಲ್ಲಿ ಇದ್ದ ಸಂಗಮರವರೀ ಕಲ್ಲಿನ ಖಣಿಯನ್ನು ಸಾಂಬರವೆಂಬ ಊರಿನಲ್ಲಿದ್ದ ಒಬ್ಬವೈದ್ಯನಿಗೆ ಗೊತ್ತು ಹಚ್ಚಿಕೊಟ್ಟನೆಂತಲೂ ಆ ಖಣಿಯೊಳಗಿನ ಕಲ್ಲಿನಿಂದಲೇ ಬಾದಶಹನ ಅರಮನೆಯು ಕಟ್ಟಲ್ಪಟ್ಟಿತೆಂತಲೂ, ಈ ಕಾರಣದಿಂದಲೇ ಬಾದಶಹನವರೆಗೆ ಇವನ ಹೆಸರು ಹೋಯಿತೆಂತಲೂ ಒಂದು ಆಖ್ಯಾಯಿಕೆಯುಂಟು.

ಜಯಪುರ ಪ್ರಾಂತದವರು ಬೀರಬಲನ ಜನ್ಮವು ಅಜಮೀರದ ಹತ್ತರ ಒಂದು ಸಣ್ಣ ಜನವಸತಿಯಲ್ಲಿ ಹುಟ್ಟಿದನೆಂತಲೂ ಹೇಳುತ್ತಾರೆ; ಇವನು ಬಾದಶಹನ ಆಶ್ರಯವನ್ನು ಹೊಂದಲಿಕ್ಕೆ ಈ ಕಳಗೆ ಹೇಳಿದ ಕಾರಣವೇ ಉಂಟಾಯಿತೆಂತಲೂ ವರ್ಣನೆಮಾಡಿದ್ದಾರೆ. ಆ ಕಾರಣವು ಯಾವದೆಂದರೆ- “ ಬೀರಬಲನ ಮಾತಾಪಿತೃಗಳು ಕೇವಲ ದರಿದ್ರರಾಗಿದ್ದು, ಒಂದು ಗುಡ್ಡದ ಓರೆಯಲ್ಲಿ ಕುಟೀರವನ್ನು ಕಟ್ಟಿಕೊಂಡು ಇದ್ದರಂತೆ, ಬೀರಬಲನು ಚಿಕ್ಕವನಿದ್ದಾಗ್ಗೆ ಗುಡ್ಡದಮೇಲೆ ಹೋಗಿ ಉರುವಲಗಳನ್ನು ತರುತ್ತಿದ್ದನಂತೆ, ಒಂದಾನೊಂದು ದಿನ ಅವನು ಉರುವಲಗಳನ್ನು ತರುವದಕ್ಕೆ ತನ್ನಗೃಹದ ಹಿಂಭಾಗದಲ್ಲಿದ್ದ ಗುಡ್ಡದಮೇಲೆ ಹೋಗಿ ಕಟ್ಟಿಗೆಗಳನ್ನು ಕೂಡ ಹಾಕಿದನು. ಅವುಗಳನ್ನು ಕಟ್ಟಲಿಕ್ಕೆ ಹಗ್ಗವನ್ನು ತೆಗೆದುಕೊಂಡು ಹೋಗಿದ್ದಿಲ್ಲ, ಆಗ ಅವನು ತನ್ನ ತಾಯಿಯನ್ನು ಕೂಗಿ “ ನಾನು ಹಗ್ಗವನ್ನು ಮನೆಯಲ್ಲಿ ಮ

ರೆತುಬಂದಿದ್ದೇನೆ ಅದನ್ನು ಕಳುಹಿಕೊಡು" ಎಂದು ಹೇಳಿದನು. ಅದಕ್ಕೆ ಅವನತಾಯಿಯು "ಹಗ್ಗವು ಮನೆಯಲ್ಲಿಯೇ ಅದೆ, ಆದರೆ ಅದನ್ನು ಯಾರ ಸಂಗಡ ಕಳುಹಿಕೊಡಲಿ" ಎಂದು ಪ್ರಶ್ನೆಮಾಡಿದಳು. ಅದಕ್ಕೆ ಬೀರಬಲನು "ನಾಯಿಯ ಕೊರಳಿಗೆ ಕಟ್ಟಿ ಕಳುಹಿಕೊಡು,, ಎಂದು ಹೇಳಿದನು. ಅದ ರಂತೆ ನಾಯಿಯ ಕೊರಳಿಗೆ ಹಗ್ಗವನ್ನು ಕಟ್ಟಲು, ಆ ನಾಯಿಯನ್ನು ತನ್ನ ಹತ್ತರ ಬರುವಂತೆ ಕೂಗಲು ಅದು ಅವನ ಬಳಿಯಲ್ಲಿ ಹೋಯಿತು. ಕೂಡಲೆ ಆ ಹಗ್ಗದಿಂದ ಕಟ್ಟಿಗೆಗಳನ್ನು ಕಟ್ಟಿಕೊಂಡು ಕೆಳಗೆ ಇಳಿಯುತ್ತಿದ್ದನಂತೆ, ಆ ಸಮಯದಲ್ಲಿ ಬೇಟೆಯಾಡುತ್ತ ಬಂದಿದ್ದ ಅಕಬರನ ಕಿವಿಗೆ ಅವನಚಾತು ರ್ಯಯುಕ್ತ ಭಾಷಣವು ಕೇಳಲು, ಅವನು ಹಾಗೇ ಅವನ ಕುಟೀರದಹಗೆ ಹೋದನು ಅಷ್ಟರಲ್ಲಿ ಮಾರ್ಗದಲ್ಲಿದ್ದ ಪ್ರವಾಹದ ಸಂಗಡ ವೇಗವಾಗಿ ಬರು ತ್ತಿದ್ದ ಬೀರಬಲ್ಲನನ್ನು ಕಂಡು ಅವನಿಗ ಅತ್ಯಾನಂದವಾಯಿತು. ಅವನು ಬಂದು ಕಟ್ಟಿಗೆಯ ಹೊರೆಯನ್ನು ಇಳಿಸಿ ನಿಂತುಕೊಳ್ಳಲು, ಬಾದಶಹನು ಅವನ ಸಮೀಪಕ್ಕೆ ಹೋಗಿ ಆನಂದದಿಂದ ಅವನ ಬೆನ್ನು ಚಪ್ಪರಿಸಿದನು. ಮತ್ತು ಇನ್ನೊಂದು ಸಾರೆ ಈ ಪ್ರವಾಹವನ್ನು ದಾಟಿ ಹೋಗು; ಎಂದು ಆಪ್ಪಣೆಮಾಡಿದನು. ಆಗ ಬೀರಬಲನಿಗೆ ಮೊದಲಿನಕಿಂತಲೂ ಹೆಚ್ಚು ಹೊತ್ತು ಬೇಕಾಯಿತು ಅದಕ್ಕೆ ಬಾದಶಹನು ಪುನಃ ಪ್ರಶ್ನೆಮಾಡಿದನು. ಏನಂದರೆ;- "ಎಲೈ ಬಾಲಕನೇ! ನೀನು ಮೊದಲು ಬರುವಾಗ್ಗೆ ಶೀಘ್ರವಾಗಿ ಬಂದಿದ್ದಿ? ಈಗ ಪುನಃ ಪ್ರವಾಹವನ್ನು ದಾಟಲಿಕ್ಕೆ ಇಷ್ಟುವೇಳೆಯು ಯಾಕಹತ್ತಿತು" ಎಂದು ಪ್ರಶ್ನೆಮಾಡಲು. ಬೀರಬಲನು ತಕ್ಷಣಕ್ಕೆ ಪ್ರಾರ್ಥಿಸಿದ್ದೇನಂದರೆ;- "ಪೃಥ್ವೀನಾಥ ನಾನು ಮೊದಲುಬರುವಾಗ್ಗೆ ನನ್ನ ಶರೀರವು ಹಗುರಾಗಿತ್ತು ಆದರೆ ಹಿಂದಿರುಗಿ ಹೋಗುವ ಕಾಲದಲ್ಲಿ ತಮ್ಮ ಕೃಪಾಭಾರವು ನನ್ನಮೇಲೆ ಬಹಳವಾಯಿತು, ಅದರಿಂದ ನನಗೆ ಪ್ರವಾಹವನ್ನು ದಾಟುವದಕ್ಕೆ ಬಹಳ ಹೊತ್ತು ಹಿಡಿಯಿತು" ಎಂದು ಉತ್ತರಕೊಟ್ಟನು. ಆಗ ಬಾದಶಹನು ತನ್ನ ಮನಸ್ಸಿನಲ್ಲಿ ಅನ್ನುತ್ತಾನೆ;- "ಈ ಹುಡುಗನು ಕೇವಲ ಅಜ್ಞಾತನಾಗಿದ್ದರೂ ಸಮಯೋಚಿತವಾದ ಉತ್ತರವನ್ನು ಹೇಳುವದರಲ್ಲಿ ಚತುರನಿದ್ದಾನೆ" ಎಂದು ತಿಳಿದುಕೊಂಡು ಬೀರಬಲನ ಮಾತಾಪಿತೃಗಳ ಸಮ್ಮತಿಯನ್ನು ಪಡೆದು ತನ್ನ ಸಂಗಡಲೇ ಕರೆದುಕೊಂಡು ಹೋದನು.

ಮತ್ತೂ ಕೆಲವರು ಈ ಪ್ರಕಾರ ಹೇಳುತ್ತಾರೆ "ಇವನು ದಿಲ್ಲಿಯಲ್ಲಿ ಯಲ್ಲಿಯೇ ಇದ್ದ ಒಬ್ಬ ಬ್ರಾಹ್ಮಣ ಪುತ್ರನು, ಬೀರಬಲನು ಚಿಕ್ಕವನಿದ್ದಕಾ ಲದಲ್ಲಿ ಒಂದುದಿನ ಪಾಠಶಾಲೆಗ ಹೋಗಿ, ವಿದ್ಯೆಯನ್ನು ಕಲಿತು ಹಿಂದಿರುಗಿ

ಮನೆಗೆ ಬರುತ್ತಿದ್ದನು. ಆ ಸಮಯದಲ್ಲಿ ಬಾದಶಹನ ಅರಮನೆಯ ಎದುರಿಗೆ
ಬಹುರೂಪಿಯು ಆಟವನ್ನು ಆಡಹತ್ತಿದ್ದನು. ಅದನ್ನು ನೋಡಲಿಕ್ಕೆ ದೊಡ್ಡ
ದೊಡ್ಡ ಸರದಾರರೂ, ದರಕದಾರರೂ, ರಾಜರೂ, ಮಹಾರಾಜರೂ ಕೂಡಿ
ದ್ದರು. ಅದರಂತೆ ನಗರವಾಸಿಗಳೂ ಬಹುಮಂದಿ ಮಿಲಿತರಾಗಿದ್ದರು. ಅವರಲ್ಲಿ
ಬೀರಬಲನೂ ಆಟವನ್ನು ನೋಡಲಿಕ್ಕೆ ಹೋಗಿ ನಿಂತುಕೊಂಡಿದ್ದನು ಬಹು
ರೂಪಿಯು ಎತ್ತಿನ ವೇಷವನ್ನು ಹಾಕಿಕೊಂಡು ತನ್ನ ಚತುರತೆಯನ್ನು
ಬಾದಶಹನ ಎದುರಿಗೆ ಪ್ರಕಟಮಾಡಿ ತೋರಿಸಿದನು ಆಗನೆರೆದವರೆಲ್ಲರೂ ಮ
ತ್ತು ಬಾದಶಹನೂ ಸಹ ಆಬಹುರೂಪಿಯ ಚತುರತನವನ್ನು ಕಂಡು "ಶಹ
ಬಾಸ, ವಾಹವ್ವಾ,, ಎಂದು ಹೊಗಳಹತ್ತಿದರು. ಪ್ರಸನ್ನಚಿತ್ತನಾದ ಬಾದ
ಶಹನು ತನ್ನ ಮೈಮೇಲಿನ ಬಹು ಬೆಲೆಯುಳ್ಳವಸ್ತ್ರವನ್ನು ಪಾರಿತೋಷಕ
ವಾಗಿ ಕೊಟ್ಟುಬಿಟ್ಟನು ಆ ಆಟವನ್ನು ನೋಡುತ್ತ ನಿಂತಿದ್ದ ಬೀರಬಲನು
ಆ ಬಹುರೂಪಿಯನ್ನು ಪರೀಕ್ಷಿಸಬೇಕೆಂದು ಒಂದು ಸಣ್ಣಕಲ್ಲು ಹರಳನ್ನು
ತೆಗೆದುಕೊಂಡು ಎತ್ತಿನ ವೇಷವನ್ನು ಧರಿಸಿದ್ದ ಬಹುರೂಪಿಗೆ ಒಗೆದನು ಕೂ
ಡಲೆ ಅವನು ಸ್ವಾಭಾವಿಕ ಎತ್ತಿನಂತ ಮೈಯನ್ನು ಅಲುಗುಡಿಸಿದನು ಅದ
ನ್ನು ಕಂಡು ಬಾಲಕನಾದ ಬೀರಬಲನು ಅತ್ಯಾನಂದಿತನಾಗಿ "ವಾಹವ್ವಾ
ಶಹಬಾಸ" ಎಂದು ಹೊಗಳಿ ತನ್ನ ತಲೆಯಮೇಲಿದ್ದ ಟೊಪ್ಪಿಗೆಯನ್ನು
ಪಾರಿತೋಷಕವಾಗಿ ಕೊಟ್ಟುಬಿಟ್ಟನು ಅದನ್ನು ಕಂಡು ಬಹುರೂಪಿಯು
ಹೃಷ್ಟಮಾನಸನಾಗಿ ಆ ಟೊಪ್ಪಿಗೆಯನ್ನು ಕೈಯಲ್ಲಿಹಿಡಿದುಕೊಂಡು ಬಾದ
ಶಹನ ಸಮೀಪಕ್ಕೆ ಹೋಗಿ ಆಹುಡುಗನ ಚಾತುರ್ಯವನ್ನೂ ಗುಣಗ್ರಾಹ
ದಂತೆಯನ್ನೂ ಹೊಗಳಿ "ಪೃಥ್ವೀನಾಥ ಈ ಟೊಪ್ಪಿಗೆಯ ಒಡೆಯನು ಒ
ಳ್ಳೇ ಚತುರನಾಗಿದ್ದು ಗುಣಗ್ರಾಹಿಯಾಗಿದ್ದಾನೆ ನೀವು ಕೊಟ್ಟ ಸಾವಿರಾ
ರುರೂಪಾಯಿಗಳ ಪಾರಿತೋಷಕಕ್ಕಿಂತಲೂ ಈ ಟೊಪ್ಪಿಗೆಯು ನನಗ ಯಿ
ನಾಮಾಗಿ ಸಿಕ್ಕದ್ದರಿಂದ ಅತ್ಯಾನಂದವಾಗಿದೆ ಅವನು ಕೇವಲ ದರಿದ್ರನಾಗಿ
ದ್ದರೂ ತನ್ನಹತ್ತರ ಇದ್ದವಸ್ತುವನ್ನು ಹಿಂದುಮುಂದು ನೋಡದೆ ಕೊಟ್ಟು
ಬಿಟ್ಟನು ಎಂದು ವರ್ಣನೆ ಮಾಡಿದನು.

ಆಗ ಬಾದಶಹನು ಆ ಹುಡುಗನನ್ನು ತನ್ನ ಸಮೀಪಕ್ಕೆ ಕರಿಸಿಕೊಂಡು
ದಯೆಯಿಂದ ಅವನ ಅದ್ಯೋಪಾಂತ ವೃತ್ತಾಂತವನ್ನೆಲ್ಲ ಕೇಳಿಕೊಂಡನು,
ನಿರ್ಭಯದಿಂದ ಉತ್ತರ ಕೊಡುತ್ತಿದ್ದ ಆ ಬಾಲಕನ ಮೇಲೆ ಪ್ರೀತಿಯುಳ್ಳವ
ನಾಗಿ ಉತ್ತಮವಾದ ವಸ್ತ್ರಗಳನ್ನು ಹಾಕಿಕೊಳ್ಳುವದಕ್ಕೆಕೊಟ್ಟು ಪ್ರತಿದಿನ
ದಲ್ಲಿ ತನ್ನಸಭೆಯಲ್ಲಿ ಬಂದು ಕುಳಿತುಕೊಳ್ಳಬೇಕೆಂದು ಅಪ್ಪಣೆ ಮಾಡಿದನು.

ಬುಂದೇಲಖಂಡದವರು ಬೀರಬಲನು ತಮ್ಮ ದೇಶದವನೆಂದು ಹೇಳುತ್ತಾರೆ ಬೀರಬಲನು “ ಟಿಹರಿ ” ಪಟ್ಟಣದ ನಿವಾಸಿಯೆಂದೂ ಚಿಕ್ಕಂದಿನಲ್ಲಿಯೇ ಬಹುಬುದ್ಧಿವಂತನಿದ್ದನೆಂದೂ ಹೇಳುತ್ತಾರೆ. ಬೀರಬಲನ ಸ್ಮರಣಶಕ್ತಿಯು ಅಧಿಕವಾಗಿತ್ತು ಅವನು ಕಲಿತದ್ದನ್ನು ಎಂದೂ ಮರೆಯುಲಿಲ್ಲ ಟಿಹರಿಯಲ್ಲಿ ಕೆಲವು ದಿವಸ ವಿದ್ಯಾಭ್ಯಾಸಮಾಡಿ ಆಮೇಲೆ ಕಾಶೀಪಟ್ಟಣಕ್ಕೆ ಹೋಗಿ ವಿದ್ಯೆಯನ್ನು ಕಲಿಯಹತ್ತಿದನು. ಇವನ ಬುದ್ಧಿಸಾಮರ್ಥ್ಯವನ್ನು ಕಂಡು ಗುರುಗಳು ಅತ್ಯಾನಂದಿತರಾಗಿ ಕೆಲವು ವರುಷಗಳಲ್ಲಿಯೇ ಅದ್ವಿತೀಯ ಪಂಡಿತನನ್ನಾಗಿ ಮಾಡಿಬಿಟ್ಟರು ಆಮೇಲೆ ಬೀರಬಲನು ದಿಲ್ಲಿಗೆಬಂದು ಅರಬೀ ಪಾರಸೀ ವಿದ್ಯೆಯನ್ನು ಕಲಿತುಕೊಂಡನು ದಿಲ್ಲಿಯಲ್ಲಿ ಇರುವಕಾಲದಲ್ಲಿ ಬೀರಬಲನ ದೇಹದಲ್ಲಿ ಯಾವದೋ ಒಂದು ಜಾಡ್ಯವು ಉತ್ಪನ್ನ ವಾಗಲು ಅವನು ಒಬ್ಬ ವೈದ್ಯನ ಬಳಿಗೆ ಹೋದನು ಅವನು ಬೀರಬಲನಿಗೆ ಸರಿಯಾದ ಔಷಧವನ್ನು ಕೊಟ್ಟು ರೋಗಮುಕ್ತನನ್ನಾಗಿಮಾಡಿ ರಾಜಾತೋಡರಮಲ್ಲನ ಸಮೀಪಕ್ಕೆ ಕರದೊಯ್ದನು ತೋಡರಮಲ್ಲನು ಇವನ ಚತುರತನವನ್ನು ಪರೀಕ್ಷಿಸಿ ಬಾದಶಹನಿಗೆ ಬೆಟ್ಟಿಮಾಡಿಸಿದನು ಬಾದಶಹನು ಇವನ ರಸಭರಿತವಾದ ವಾಕ್ಚಾತುರ್ಯಕ್ಕೆ ಮೆಚ್ಚಿ ತನ್ನ ಹತ್ತರ ಇಟ್ಟುಕೊಂಡನು.

ಕೆಲಕೆಲವರ ಮತದಿಂದ ಬೀರಬಲನು ಕಾಶಿಯಲ್ಲಿ ಬ್ರಹ್ಮಘಾಟನಲ್ಲಿದ್ದ ಬ್ರಾಹ್ಮಣನೆಂದೂ ಇವನು ವಿಕ್ರಮಾರ್ಕ ಸಂವತ್ ೧೬೧೭ ನೇದರಲ್ಲಿ ಜನ್ಮ ತಾಳಿದನೆಂದ ಹೇಳುತ್ತಾರೆ ಬೀರಬಲನು ಬರೆದ ಕೆಲವು ಗ್ರಂಥಗಳಲ್ಲಿ ತನ್ನ ಉಪನಾಮವು “ ಬ್ರಹ್ಮಲಿಖಾ ” ಎಂದು ಉಲ್ಲೇಖಿಸಿದ್ದಾನೆ ಮೇಲೆಹೇಳಿದ ಶಕದಲ್ಲಿ ಏನೋ ಹೆಚ್ಚುಕಡಿಮೆ ಯಿದ್ದಂತೆಕಂಡು ಬರುತ್ತದೆ ಯಾಕಂದರೆ ಸಂವತ್ ೧೬೨೬ ನೇದರಲ್ಲಿ ಇವನು ಬಾದಶಹನ ದರಬಾರದಲ್ಲಿ ಪ್ರತಿಷ್ಠಿತನಾಗಿದ್ದಂತೆಯೂ, ಅದೇ ವರುಷ ಅವನು ಅವನು ಮಲಬಾರದ ರಾಜನ ಮತ್ತು ಬಾದಶಹನ ನಡುವೆ ಇದ್ದ ನ್ಯಾಯವನ್ನು ತೀರಿಸಿದನೆಂತಲೂ ಕಂಡು ಬರುತ್ತದೆ.

ದೇವೀಪ್ರಸಾದಜೀ ಮುನಸೀಫ ರಾಜಜೋಧಪುರ ಎಂಬವರು ತಮ್ಮ ಗ್ರಂಥದಲ್ಲಿ ಹೀಗೆ ಉಲ್ಲೇಖಿಸಿರುವರಲ್ಲಾ “ ಬೀರಬಲನ ನಿಜವಾದ ಹೆಸರು ಬ್ರಹ್ಮದಾಸನೆಂದೂ ಅದೇಜಾತಿಯು ಬ್ರಾಹ್ಮಣಗೆಂದೂ ಬರೆದಿದ್ದಾರೆ ಇವನು ಸಂಸ್ಕೃತ ಭಾಷೆಯಲ್ಲಿ ಅಸಾಧಾರಣ ಪಂಡಿತನಿದ್ದನೆಂತಲೂ ಫಾರಸೀ ಅರಬ್ಬೀ ಭಾಷೆಗಳನ್ನು ಸಹಾ ಅರಿತಿದ್ದನೆಂತಲೂ ಹೇಳಿರುವರು ಯಾವಾಗ ಇವನು ಅಕಬರ ಬಾದಶಹನ ಬಳಿಯಲ್ಲಿ ಬಂದು ನಿಂತುಕೊಂಡನೋ ಆಮೇಲೆ

ಅತ್ಯಲ್ಪ ಕಾಲದೊಳಗಾಗಿ ತನ್ನ ಬುದ್ಧಿಸಾಮರ್ಥ್ಯದಿಂದಲೂ ಸಮಯೋಚಿತ ಮಾತು ಕಥೆಗಳಿಂದಲೂ ಬಾದಶಹನನ್ನು ಪ್ರಸನ್ನೀಕರಿಸಿಕೊಂಡನೆಂತಲೂ ಇವನ ಅಗಲುವಿಕೆಯಿಂದ ಬಾದಶಹನಿಗೆ ವ್ಯಸನವುಂಟಾಗುತ್ತಿತ್ತೆಂತಲೂ, ಉಲ್ಲೇಖಿಸಿದ್ದಾರೆ.

ಬೀರಬಲನ ವೃದ್ಧಿಯೂ, ಪ್ರತಿಷ್ಠಿತೆಯೂ ಮತ್ತು ವಿಶೇಷ ಇತಿಹಾಸಸಂಗತಿಯೂ.

ಬೀರಬಲನು ಕೇವಲ ಸಭಾಚತುರನೂ ಕೇಳಿದ ಪ್ರಶ್ನೆಗೆ ತತ್‌ಕ್ಷಣದಲ್ಲಿ ಸಮರ್ಪಕ ಉತ್ತರಕೊಡುವದರಲ್ಲಿ ಧುರೀಣನೂ ಇದ್ದದ್ದಲ್ಲದೆ ಅವನಲ್ಲಿ ಕವಿತಾಚಾತುರ್ಯವೂ ಇತ್ತೆಂಬಂತೆ ಕಂಡು ಬರುತ್ತದೆ ಅವನು ಸಮಯಾನುಸಾರವಾಗಿ ತನ್ನ ಸಣ್ಣ ಸಣ್ಣ ಮನೋಹರವಾದ ಕವಿತೆಗಳಿಂದ ಬಾದಶಹನನ್ನು ಪ್ರಸನ್ನನನ್ನಾಗಿ ಮಾಡಿಬಿಡುತ್ತಿದ್ದನು ಅವನ ಕವಿತೆಗಳನ್ನು ಕೇಳಿ ಆಕಾಲದಲ್ಲಿದ್ದ ಕವಿಗಳೆಲ್ಲರೂ ತಲೆದೂಗುತ್ತಿದ್ದರೂ ಬಾದಶಹನು ಇವನ ಕವಿತಾಚಾತುರ್ಯವನ್ನು ಕಂಡು ಮೊದಲು "ಕವಿರಾಯನೆಂದು ಪದವಿಯನ್ನು ಕೊಟ್ಟನು ಆಮೇಲೆ ಇವನ ನ್ಯಾಯವಿಮರ್ಶೆಯನ್ನು ಕಂಡು "ರಾಜ"ನೆಂಬ ಪದವಿಯನ್ನಿತ್ತು ತನ್ನ ಅಮಾತ್ಯಗಣದಲ್ಲಿ ಸೇರಿಸಿಕೊಂಡನು ಮತ್ತು ನಗರಕೋಟದ ಸುತ್ತ ಮುತ್ತಲಿನ ಪ್ರದೇಶವನ್ನು ಜಹಾಗೀರಾಗಿ ಕೊಟ್ಟುಬಿಟ್ಟನು ಆ ಮೇಲೆ ಕೆಲವು ಕಾಳಗಗಳಲ್ಲಿ ಬೀರಬಲನು ತನ್ನ ಶೌರ್ಯವನ್ನು ಪ್ರಕಟಪಡಿಸಿದ್ದರಿಂದ ಬಾದಶಹನು "ವೀರವರ" ನೆಂಬ ಬಹುಮಾನದ ಪದವಿಯನ್ನಿತ್ತನು.

ಆ ಸಮಯದಲ್ಲಿ ನಗರಕೋಟದಲ್ಲಿ "ಕಟೋಚ" ಜಾತಿಯ ರಜಪೂತನಾದ ಜಯಚಂದನೆಂಬವನು ಆಳುತ್ತಿದ್ದನು ಅವನು ಪ್ರಾಯಶಃ ಬಾದಶಹನ ಅಂಕಿತನಾಗಿಯೇ ಇದ್ದನು ಸಂವತ್ ೧೬೨೯ ನೇದರಲ್ಲಿ ಬಾದಶಹನು ಯಾವದೋ ಒಂದು ಕಾರಣದಿಂದ ಕ್ರುದ್ಧನಾಗಿ ಪಂಜಾಬದ ಸುಭೇದಾರನಾದ ಹುಸೇನ ಕುಲೀಖಾ ಎಂಬವನಿಗೆ ಒಂದು ಹುಕುಮನ್ನು ಬರೆದು ಕಳುಹಿಸಿ "ನಗರಕೋಟದ ರಾಜನನ್ನು ಬಂದಿಯನ್ನಾಗಿ ಮಾಡಿ, ಆರಾಜ್ಯವನ್ನು ಬೀರಬಲ್ಲನ ಸ್ವಾಧೀನ ಪಡಿಸಬೇಕೆಂದು ಅಪ್ಪಣೆಯನ್ನಿತ್ತನು.

ಆಗ ರಾಜಾ ಬೀರಬಲನು ಬಾದಶಹನ ಅನುಜ್ಞೆಯನ್ನು ಹೊಂದಿ ಲಾಹೋರಕ್ಕೆ ಹೋಗಿ ಹುಸೇನ ಕುಲೀಖಾನನಿಗೆ ಭೆಟ್ಟಿಯಾದನು ಆಗಖಾನನು ತನ್ನ ಸೈನ್ಯವನ್ನು ತೆಗೆದುಕೊಂಡು ಬೀರಬಲನ ಸಹಾಯಕ್ಕೆ ಹೊರಟನು. ಇವರಿಬ್ಬರೂ ಕೂಡಿಕೊಂಡು ಅರಣ್ಯವನ್ನು ಕಡಿಯುತ್ತಾ ರಜಪೂತ

ಸೈನ್ಯದೊಡನೆ ಹೋರಾಡುತ್ತಾ "ಕಾಂಗಡೆ" ಎಂಬಗ್ರಾಮಕ್ಕೆ ತಲುಪಿದರು ಆಗ ಜಯಚಂದನ ಮಗನಾದ ವಿಧಿಚಂದ್ರನು ಕೋಟೆಯ ಹೊರಮುಗ್ಗಲಿಗೆ ಬಂದು ಕಾಳಗಮಾಡಹತ್ತಿದನು, ಸ್ವಲ್ಪ ಹೊತ್ತಿನವರೆಗೆ ಉಭಯಪಕ್ಷವಲ್ಲಿ ನಿಕರದ ಕಾಳಗವೆಸಗಿತು, ಕೋಟೆಯು ಕೈವಶವಾಗುವ ಸಮಯವು ಬಂದು ಒದಗಿತು ಅಷ್ಟರಲ್ಲಿ ಮಿರಜಾ ಇಬ್ರಾಹಿಮಖಾನನು ಲಾಹೋರದ ಮೇಲೆ ದಂಡೆತ್ತಿ ಬರಹತ್ತಿದ್ದಾನೆಂಬ ವಾರ್ತೆಯು ಸೈನ್ಯದೊಳಗೆ ಪಸರಿಸಿತು. ಆಗ ಹುಸೇನ ಕುಲೀಖಾನನು ಬೀರಬಲ್ಲನಿಗೆ ಕೇಳುತ್ತಾನೆ;- "ಈಗ ಏನುಮಾಡಬೇಕು" ಎಂದನು. ಆಗ ಬೀರಬಲ್ಲನು ಉತ್ತರಕೊಟ್ಟದ್ದೇನಂದರೆ "ಬಾದಶಹನ ಅಪ್ಪಣೆಯನ್ನು ಮೊದಲು ಪಾಲಿಸಲಿಕ್ಕೆಬೇಕು" ಎಂದು ಹೇಳಿದನು ಆಗ ಕುಲೀಖಾನನು ವಿಧಿಚಂದ್ರನಿಗೆ :" ಈ ರಾಜ್ಯವು ಬಾದಶಹನ ಅಪ್ಪಣೆಯಮೇರೆಗೆ ಬೀರಬಲನಿಗೆ ಕೊಡಲ್ಪಟ್ಟಿದೆ, ಆದ್ದರಿಂದ ನೀನು ಅವನನ್ನು ಪ್ರಸನ್ನೀಕರಿಸಿಕೊಂಡರೆ ನಾನು ಹಿಂದಿರುಗಿ ಹೋಗುವೆನು" ಎಂದು ಹೇಳಲು ವಿಧಿಚಂದ್ರನು ಇದು ಉತ್ತಮವಾದ ಪಕ್ಷವೆಂದು ತಿಳಿದು ಬೀರಬಲನು ಕೇಳಿದಷ್ಟು ಹಣವನ್ನು ಕೊಟ್ಟು, ಐದುಮಣ ಬಂಗಾರವನ್ನು ಬಾದಶಹನಿಗೆ ಕಾಣಿಕೆಯಾಗಿ ಕೊಟ್ಟು ಕಳಿಸಿದನು.

ಆ ಸೈನ್ಯದಲ್ಲಿ ಮುಸಲ್ಮಾನ ಜನರೇ ಅಧಿಕರಾಗಿದ್ದರು ಅವರು ಕಾಂಗಡಾ ಪ್ರದೇಶದಲ್ಲಿ ಅತಿ ಅತ್ಯಾಚಾರವನು ನಡೆಯಿಸಿದರು ಮಹಾಮಾಯೆಯ ದೇವಸ್ಥಾನವನ್ನುಸುಲಿದು ಪೂಜಾರಿಗಳನ್ನೂ ಬ್ರಾಹ್ಮಣರನ್ನೂ ಬಹುಪರಿಯಾಗಿ ಪೀಡಿಸಿ ಗೋವಧವನ್ನು ಮಾಡಿ, ಪಾದರಕ್ಷೆಗಳಲ್ಲಿ ಗೋರಕ್ತವನ್ನು ತುಂಬಿ. ಪಟ್ಟಣದಲ್ಲಿ ಒಗೆಯಹತ್ತಿದರು ಇದರಿಂದ ಹಿಂದೂ ಜನರು ಬೀರಬಲನನು ಬಹುಪ್ರಕಾರವಾಗಿ ನಿಂದಿಸಹತ್ತಿದರು, ಅದರಿಂದ ಬೀರಬಲನಿಗೆ ಬಹುವ್ಯಸನವಾಯಿತು ಅವನು ತಿರುಗಿ ತನ್ನ ಜಹಾಗೀರಿಯ ಪ್ರದೇಶಕ್ಕೆ ಹೋಗಲೇ ಇಲ್ಲ, ಅದರಿಂದ ಬಾದಶಹನು ಪಂಜಾಬದಲ್ಲಿದ್ದ ಕಾಲಿಂಜರ ಪರಗಣೆಯನ್ನು ರಾಜಾ ಬೀರಬಲನಿಗೆ ಜಹಾಗೀರಿಯನ್ನಾಗಿ ಹಾಕಿಕೊಟ್ಟನು.

ನಗರಕೋಟದಿಂದ ಹೊರಟು ರಾಜಾ ಬೀರಬಲನೂ, ಹುಸೇನ ಕುಲೀಖಾನನೂ, ಮಿರಜಾ ಇಬ್ರಾಹೀಮನ ಬೆನ್ನುಹತ್ತಿದರು. ಈ ವಾರ್ತೆಯನ್ನು ಕೇಳಿ ಮಿರಜಾ ಇಬ್ರಾಹೀಮನು ಲಾಹೋರದಕಡೆಗೆ ಸಾಗಹತ್ತಿದನು ಉಭಯ ಪಕ್ಷದವರಿಗೆ ಮುಲ್ತಾನದಲ್ಲಿ ಕಾಳಗವಾಯಿತು, ಮಿರಜಾನು ಕಾಳಗವನ್ನು ಬಿಟ್ಟು ಪಲಾಯನಮಾಡಿದನು. ಅವನ ತಮ್ಮನಾದ ಮಸಾಲು

ನೆಂಬವನು ಕೈಸೆರೆಸಿಕ್ಕನು. ಆಗ ಇವರಿಬ್ಬರು ಅವನನ್ನು ತೆಗೆದುಕೊಂಡು
ಬಾದಶಹನ ಹತ್ತಿರ ಹೋದರು. ಬಾದಶಹನು ಪ್ರಸನ್ನನಾಗಿ ಹುಸೇನ ಕು
ಲೀಖಾನನಿಗೆ "ಖಾನಜಹಾ" ಎಂಬ ಪದವಿಯನ್ನೂ ಬೀರಬಲನಿಗೆ "ಮು
ಸಾಹಿಬ ದಾನಿಶವರ" ಅಂದರೆ ಬುದ್ಧಿವಂತನಾದ ಮಂತ್ರಿ ಎಂಬ ಪದವಿಯ
ನ್ನು ಕೊಟ್ಟನು.

ಮರುವರುಷ ಮಿರಜಾ ಇಬ್ರಾಹೀಮನ ತಮ್ಮನಾದ ಮಹಮ್ಮದಹು
ಸೇನನು ದಂಡಾಳುಗಳನ್ನು ಕೂಡಿಕೊಂಡು ಗುಜರಾಥದ ಸುಭೇದಾರನಾದ
ಖಾನ ಅಜಮನನ್ನು ಅಹಮ್ಮದಾಬಾದಿನಲ್ಲಿ ಮುತ್ತಿದನು ಆಗ ಅವನಸಹಾ
ಯಕ್ಕೆ ಬಾದಶಹನು ಸ್ವತಃ ತಾನೇ ಮಂತ್ರಿಗಳನ್ನು ಕರೆದುಕೊಂಡು ಒಂ
ಬತ್ತು ದಿವಸಗಳಲ್ಲಿ ಅಹಮದಾಬಾದಕ್ಕೆ ಮುಟ್ಟಿದನು, ಆ ಸಮಯದಲ್ಲಿ ಬೀ
ರಬಲನೂ ಬಾದಶಹನ ಜೊತೆಯಲ್ಲಿದ್ದನು.

ಬಾದಶಹನು ತನ್ನ ಮಹಲಿನ ಸಮೀಪಕ್ಕೇ ಬೀರಬಲನಿಗೋಸುಗ
ಒಂದು ಮಂದಿರವನ್ನು ಕಟ್ಟಿಸಿಕೊಟ್ಟನು, ಅದು ಸಂವತ್ ೧೬೩೯ನೇ ವರು
ಷ ಪೂರ್ಣವಾಯಿತು. ಆಗ ಬೀರಬಲನು ಆ ಗೃಹಕ್ಕೆ ಹೋಗುವಪೂರ್ವದಲ್ಲಿ
ಬಾದಶಹನಿಗೆ ಆಮಂತ್ರಣವನ್ನು ಕೊಟ್ಟನು, ಬಾದಶಹನು ಅವನ ಆಮಂ
ತ್ರಣವನ್ನು ಸ್ವೀಕರಿಸಿ ಆ ಗೃಹದಲ್ಲಿ ಹೋಗಿ ಭೋಜನಮಾಡಿದನು.

ಮರುವರುಷ ಬಾದಶಹನು ಪ್ರಯಾಗದಲ್ಲಿ ಒಂದು ಕೋಟೆಯನ್ನು
ಕಟ್ಟಿಸಿದನು, ಆ ಕೋಟೆಯನ್ನು ಪ್ರವೇಶಿಸುವ ಸಮಾರಂಭದ ಕಾಲದಲ್ಲಿ
ಬೀರಬಲನು ಬಾದಶಹನಿಗೆ ಬಹು ಅಮೂಲ್ಯವಾದ ರತ್ನಗಳನ್ನು ಕಾಣಿಕೆ
ಯನ್ನಾಗಿ ಸಮರ್ಪಿಸಿದನು, ಇದರಿಂದ ಬಾದಶಹನು ಬಹು ಹೃಷ್ಟಮಾನಸ
ನಾದನು.

ರೇವಾದೇಶದ ಅರಸನಾದ ರಾಮಚಂದ್ರನಿಗೆ ಬಹಳ ಗರ್ವವಿತ್ತು,
ಅವನು ಒಂದು ದಿವಸ ತಾನಸೇನನಿಗೆ ಒಂದುಕೋಟಿ ರೂಪಾಯಿಗಳನ್ನು
ಪಾರಿತೋಷಕವಾಗಿ ಕೊಟ್ಟನು. ಮತ್ತು ಲೋದೀವಂಶದ ಸುಲ್ತಾನ ಇ
ಬ್ರಾಹೀಮ ಶಹನಿಗೆ ಒಂದು ಅಮೂಲ್ಯವಾದ ಉಡುಪನ್ನು ಕಾಣಿಕೆಯಾಗಿ
ಸಮರ್ಪಿಸಿದ್ದನು, ಈ ಎಲ್ಲ ಕಾರಣಗಳಿಂದ ಅವನು ಬಹುದಾತೃವೆಂದು ಪ್ರ
ಸಿದ್ಧನಾಗಿದ್ದನು. ಆದರೆ ಅವನಿಗೂ ಅಕಬರಬಾದಶಹನಿಗೂ ಸಮಾಗಮವಾ
ಗಿದ್ದಿಲ್ಲ, ರಾಮಚಂದ್ರನು ಬಾದಶಹನ ಕಾಣಿಕೆಯನ್ನು ತನ್ನ ಪುತ್ರನ ಕೈ
ಯಲ್ಲಿಕೊಟ್ಟು ಕಳಿಸುತ್ತಿದ್ದನು, ಪ್ರಯಾಗದಲ್ಲಿ ಕೋಟೆಯು ಸಿದ್ಧವಾದನಂ
ತರ ಅಕಬರ ಬಾದಶಹನು ಅಲ್ಲಿಯೇ ವಾಸಮಾಡಹತ್ತಿದನು. ಆಗ ರೇವಾಪ

ಟ್ಟಣದ ಅರಸನ ಸ್ಮರಣೆಯಾಯಿತು, ಪ್ರಯಾಗಕ್ಕ ರೇವಾರಾಜ್ಯವು ಅತಿನಿಕಟವಾಗಿ ಇತ್ತು, ಬಾದಶಹನು ಅವನಮೇಲೆ ಸೈನ್ಯವನ್ನು ಕಳಿಸಬೇಕೆಂದು ಯೋಚನೆಮಾಡಿದನು ಆ ಸಮಯದಲ್ಲಿ ಆ ರಾಮಚಂದ್ರನ ಮಗನು ಬಾದಶಹನ ದರ್ಬಾರದಲ್ಲಿಯೇ ಇದ್ದನು. ಆಗ ಅವನು ಎದ್ದು ನಿಂತು ನಿವೇದನಮಾಡಿಕೊಂಡದ್ದೇನಂದರೆ;- "ಇಷ್ಟು ಅತ್ಯಲ್ಪಕಾರ್ಯಕ್ಕೋಸುಗ ಸೈನ್ಯವನ್ನೆ ಕಳುಹಿಸಿಕೊಡುವ ಅವಶ್ಯಕತೆಯಿಲ್ಲ, ಯಾವನಾದರೊಬ್ಬ ಮಂತ್ರಿಯನ್ನು ಕಳುಹಿಸಿಕೊಟ್ಟರೆ ಸಾಕು ಅವನ ಸಂಗಡಲೇ ನನ್ನ ತಂದೆಯು ಬಂದೇಬರುತ್ತಾನೆ" ಎಂದು ಅರುಹಿದನು. ಆಗ ಬಾದಶಹನು ಆ ರಾಜನ ಪ್ರತಿಷ್ಟೆಗೆ ಸರಿಯಾಗಿ ಬೀರಬಲನನ್ನೇ ಕಳುಹಿಕೊಟ್ಟರೆ ಉತ್ತಮವೆಂದು ಯೋಚಿಸಿ, ಬೀರಬಲನನ್ನೇ ಆ ಕಾರ್ಯಕ್ಕೆ ನಿಯಮಿಸಿದನು ಬೀರಬಲನು ಬಾಂಧವಗಡಕ್ಕೆ ತಲಪುವದರೊಳಗಾಗಿ ರಾಜಾ ರಾಮಚಂದ್ರನಿಗೆ ಈ ವರ್ತಮಾನವು ತಿಳಿದು ಬಂದದ್ದರಿಂದ ಅವನು ತನ್ನ ಪರಿವಾರಸಮೇತನಾಗಿ ಬಂದು ಬೀರಬಲನನ್ನು ಎದುರುಗೊಂಡು ಕರೆದುಕೊಂಡು ಹೋಗಿ ಬಹಳ ಸನ್ಮಾನಮಾಡಿದನು. ಆ ಮೇಲೆ ಬೀರಬಲನ ಜೊತೆಯಲ್ಲಿಯೇ ದಿಲ್ಲಿಗೆ ಬಂದು ಬಾದಶಹನಿಗೆ ಬೆಟ್ಟಿಯಾದನು.

ರಾಜಾ ಬೀರಬಲನು ಬಾದಶಹನ ಮನಸ್ಸನ್ನು ಒಲಿಸಿಕೊಂಡುಬಿಟ್ಟಿದ್ದನು, ಒಂದರಕ್ಷಣ ಸಹಾ ಬಾದಶಹನು ಬೀರಬಲನನ್ನು ಕಣ್ಮರೆಯಾಗಗೊಡುತ್ತಿದ್ದಿಲ್ಲ. ಆದರೆ ಬೀರಬಲನ ಮೃತ್ಯುವೇ ಸಮೀಪಿಸಿದ್ದರಿಂದ ಅಫಗಾನಿಸ್ತಾನದಲ್ಲಿ ಬಂಡಾಯವನ್ನು ಎಬ್ಬಿಸಿದ "ಯೂಸಫಜಯಿ" ಎಂಬ ಪಠಾಣನಮೇಲೆ ಕಳುಹಿಸಿಕೊಡಬೇಕೆಂದು ಬಾದಶಹನ ಮನಸ್ಸಿನಲ್ಲಿ ಬಂತು, ಆದರೂ ಅವನನ್ನು ಕಳುಹಿಸದೆ ಜೈನಖಾಕೋಕಾ ಎಂಬ ಸರದಾರನನ್ನು ಕೊಟ್ಟು ಕಳುಹಿಸಿದ್ದನು. ಯೂಸಫಜಯಿಯು ಬುನೇರ, ಮತ್ತು ಬಾಜೋರ ಎಂಬಲ್ಲಿ ಒಳ್ಳೇ ಪುಂಡತನವನ್ನು ನಡೆಯಿಸಿದ್ದನು, ಅವನಲ್ಲಿ ಸೂರರಾದ ಎಷ್ಟೋಜನ ಪಠಾಣರಿದ್ದರು, ಜೈನಖಾನು ಪ್ರಥಮದಲ್ಲಿಯೇ ಪರಾಜಯವಟ್ಟನು, ಆಗ ಅವನು ಬಾದಶಹನಿಗೆ ತನ್ನ ಸಹಾಯಕ್ಕೆ ಇನ್ನೂ ಹೆಚ್ಚಾಗಿ ಸೈನ್ಯವನ್ನು ಕಳುಹಿಸಿಕೊಡಬೇಕೆಂದು ಪತ್ರಮುಖದಿಂದ ತಿಳಿಸಿದನು ಅದರಂತೆ ಎಷ್ಟೋಸಾರೆ ದಂಡನ್ನು ಕೊಟ್ಟು ಕಳುಹಿಸಿದನು, ಆದರೆ ಅದರಿಂದ ಏನೂ ಫಲವಾಗದೆ ಹೋಯಿತು ಕಟ್ಟಕಡೆಗೆ ಸಂವತ್ ೧೬೪೨-ನೇ ವರುಷದಲ್ಲಿ ನಿರ್ವಾಹವಿಲ್ಲದೆ ಬೀರಬಲನನ್ನು ಕೊಟ್ಟು ಕಳುಹಿಸಬೇಕಾಯಿತು, ಆ ವಿಷಯವನ್ನು ಸವಿಸ್ತಾರವಾಗಿ ಕೆಳಗೆ ವಿವರಿಸಿದೆ.

ಯೂಸಫಜಯಿಯು ಬಹು ದಿವಸಗಳಾದರೂ ಪರಾಜಿತನಾಗದಿರಲು, ಪುನಃ ಸೈನ್ಯದೊಡನೆ ಯಾರನ್ನು ಕಳುಹಿಸಬೇಕೆಂದು ಬಾದಶಹನು ಆಲೋಚನೆ ಮಾಡತೊಡಗಿದನು. ಆಗ ಅಬುಲಫಜಲ್ಲನು ನಾನು ಹೋಗುವೆನೆಂದು ಹೇಳಿದನು, ಬೀರಬಲನು ನಾನು ಹೋಗುತ್ತೇನೆಂದು ಇಚ್ಛೆಯನ್ನು ತೋರಿಸಿದನು. ಆಗ ಬಾದಶಹನು ಅವರೀರ್ವರ ಹೆಸರನ್ನು ಬರೆದು ಚೀಟಿಯನ್ನು ಹಾಕಿದನು ಅದರಲ್ಲಿ ಬೀರಬಲನ ಚೀಟಿಯೇ ಹೊರಟಿತು ಆಗ ಬಾದಶಹನು ಕಾಸಮುಖ್ವಾಜಾ, ಗದಾಬೇಗ, ಆಹಮದಬೇಗ, ಹಾಜೀತ್ರಾಶಬೇಗ, ಹಿಸಾಮುಷ್ಟೀನಖ್ವಾಜಾ ಮೊದಲಾದ ಸರದಾರರನ್ನು ಕೊಟ್ಟು, ಬೀರಬಲನನ್ನು ಅಫಗಾನಿಸ್ಥಾನಕ್ಕೆ ಕಳುಹಿಕೊಟ್ಟನು.

ರಾಜಾ ಬೀರಬಲನು ಅಫಗಾನಿಸ್ಥಾನದಲ್ಲಿ ಬಂಡಾಯವೆದ್ದ ಸ್ಥಲಕ್ಕೆ ಹೋಗಿ ತಲುಪಿ ಪಠಾಣರನ್ನು ಹೊಡಿಯುತ್ತ ಹಿಂದಕ್ಕೆಸರಿಸುತ್ತ ಗುಡ್ಡದ ಕಣಿವೆಯಲ್ಲಿ ಪ್ರವೇಶಮಾಡಿದನು ಆ ಪ್ರದೇಶವು ಕೇವಲ ಗುಡ್ಡಗಾಡು, ಬೀರಬಲನ ಸೈನ್ಯವು ಬಹಳೇ ಇಕ್ಕಟ್ಟಾದ ಸ್ಥಳದಲ್ಲಿ ಹೋಗಹತ್ತಿರಲು ಪಠಾಣ ಸೈನ್ಯವು ಹಿಂದೆಮುಂದ ಬಂದು ಮಾರ್ಗವನ್ನು ಕಟ್ಟಿ ಯುದ್ಧಮಾಡಹತ್ತಿತು ಆ ಯುದ್ಧದಲ್ಲಿ ಬಾದಶಹನ ಸೈನ್ಯವು ಹಾನಿಯಾಯಿತು, ಅಂತೂ ಇಂತೂ ಮರುದಿವಸ ಬೀರಬಲನು ಉಳಿದ ಸೈನ್ಯದೊಂದಿಗೆ ಬಯಲು ಪ್ರದೇಶವನ್ನು ಸೇರಿದನು ಆಗ ಬಾದಶಹನು ಕಳುಹಿಸಿಕೊಟ್ಟಿದ್ದ ಹಕೀಮ ಅಬ್ದುಲ್‌ಫತಹ ಎಂಬ ಸರದಾರನು ಕೆಲವು ಸೈನ್ಯದೊಡನೆ ಬಂದು ತಲ್ಪಿದನು, ಅವರಿಬ್ಬರೂ ಕೂಡಿಕೊಂಡು ಬಾಜೋರ ಎಂಬ ಸ್ಥಳಕ್ಕೆಹೋದರು, ಮುಂದೆ ಒಂದೆರಡು ದಿವಸಗಳಲ್ಲಿಯೇ ಆ ಸ್ಥಳವು ಇವರ ಕೈವಶವಾಯಿತು. ಅಲ್ಲಿಂದ ಜಗದೇರದಲ್ಲಿದ್ದ ಕೋಕಾನ ಸಹಾಯಕ್ಕೆ ಹೊರಟರು, ಅಲ್ಲಿ ಹೋದ ಮರುದಿವಸವೇ ಈ ತ್ರಿವರ್ಗರಲ್ಲಿ ವೈಮನಸ್ಸುಂಟಾಯಿತು ಮನಸ್ಸಿನಲ್ಲಿದ್ದ ದ್ವೇಷಬುದ್ಧಿಯು ಪ್ರಕಟವಾಯಿತು ಬಾದಶಹನ ಕಾರ್ಯವು ಕೆಟ್ಟುಹೋದೀತೆಂಬ ಚಿಂತೆಯು ಯಾರಮನಸ್ಸಿನಲ್ಲಿಯೂ ಬರಲಿಲ್ಲ. ಕೋಕಾನು ಮಾಡಿದ ಪ್ರಯತ್ನವೆಲ್ಲಾ ನಿಷ್ಫಲವಾಯಿತು ರಾಜಾ ಮತ್ತು ಹಕೀಮ ಇವರೀರ್ವರಲ್ಲಂತೂ ವಿರೋಧಭಾವವು ಅಧಿಕವಾಯಿತು ಆದರೂ ಬೀರಬಲನು ಸಮಾಧಾನವನ್ನು ತಂದುಕೊಂಡು ಕೋಕಾ ಮತ್ತು ಹಕೀಮ ಇವರಿಬ್ಬರಿಗೂ ಹೇಳಿದ್ದೇನಂದರೆ- " ನೀವೀರ್ವರೂ ಕೆಲವುಸೈನ್ಯವನ್ನು ಇಟ್ಟುಕೊಂಡು ಜಗದೇರ ಕೋಟೆಯನ್ನು ಕೈವಶಮಾಡಿಕೊಳ್ಳಿರಿ, ನಾನು ಪಠಾಣರಮೇಲೆ ಸಾಗಿಹೋಗುತ್ತೇನೆ ಇದು ನಿಮ್ಮಮನಸ್ಸಿಗೆ ಬರದಿದ್ದರೆ ನೀವೇ ಪಠಾಣರಮೇಲೆಹೋಗಿರಿ ನಾನೋ

ಬ್ಬನೇ ಈ ಕೋಟೆಯನ್ನು ಕೈವಶಮಾಡಿಕೊಳ್ಳುವ ಪ್ರಯತ್ನವನ್ನು ಮಾಡು ತ್ತೇನೆ, ಆದರೆ ಈಮಾತು ಹಕೀಮನ ಮನಸ್ಸಿಗೆ ಬರಲಿಲ್ಲ ಆಗ ಹಕೀಮನು ಅಂದದ್ದೇನಂದರೆ;- ಈ ದೇಶವನ್ನು ಲೂಟಿಮಾಡಿ ಹಾಳುಮಾಡಿ ಬಿಡಬೇಕೆಂದು ಬಾದಶಹನ ಅಪ್ಪಣೆಯಾಗಿದೆಯೇ ಹೊರ್ತು ಈ ಪ್ರದೇಶವನ್ನು ಕೈವಶ ಮಾಡಿಕೊಂಡು ಆ ಬಂಡುಗಾರನನ್ನು ಹಣ್ಣಿಗೆ ತರಬೇಕೆಂದು ಬಾದಶಹನು ಹೇಳಿರುವದಿಲ್ಲ ಅದರಿಂದ ನಾವೆಲ್ಲರೂ ಕೂಡಿಕೊಂಡು ಶತ್ರುಗಳನ್ನು ಕೊಲ್ಲು ತ್ತಬೆನ್ನಟ್ಟಿ ಅವರ ಮೂಲಸ್ಥಾನದವರೆಗೆ ಹೋಗೋಣ ಎಂದು ಹೇಳಿದನು.

ಅದಕ್ಕೆ ಜೈನಖಾನು ಅಂದದ್ದೇನಂದರೆ;- ಇದು ಒಳ್ಳೇ ದುಃಖದ ಪ್ರಸಂಗವು, ಯಾಕಂದರೆ ಅತಿಸಾಹಸಮಾಡಿ ಕೈವಶಮಾಡಿಕೊಂಡಂಥ ದೇಶವನ್ನು ಆನ್ಯಾಕ್ರಾಂತವಾಗಿಮಾಡಿ ಹೋಗುವದೆಂದರೆ ದುಃಖದಸಂಗತಿಯಲ್ಲವೇ ಅದ್ದರಿಂದ ಇಲ್ಲಿಂದಲೇ ಹಿಂದಿರುಗಿದರೆ ಮನುಷ್ಯಹಾನಿಯಾದರೂ ಆಗಲಿಕ್ಕಿಲ್ಲ.

ರಾಜಾ ಬೀರಬಲನು ಇವರ ಮಾತುಗಳಾವನ್ನೂ ಕಿವಿಯ ಮೇಲೆ ಹಾಕಿಕೊಳ್ಳದ ಮರುದಿವಸವೇ ಪ್ರಯಾಣಸನ್ನದ್ಧನಾದನು ಅದನ್ನು ಕಂಡು ಉಳಿದ ಸರದಾರರೆಲ್ಲರೂ ನಿರುಪಾಯರಾಗಿ ತಮ್ಮ ದಂಡಾಳುಗಳನ್ನೊಡಗೊಂಡು ಅವನ ಸಂಗಡಲೇ ಹೊರಟರು ಆದಿವಸ ಐದುಹರದಾರಿ ಮಾರ್ಗವು ಸಾಗಿತು ಮರುದಿವಸದ ಮಾರ್ಗವು ಕಠಿಣತರವಿದ್ದರಿಂದ ಅರ್ಧಹರದಾರಿ ಸಹಸಾಗಲಿಲ್ಲ ಆಗ ಬೀರಬಲನು ಕೆಲವು ಜನದಂಡಾಳುಗಳನ್ನು ಒಡಗೊಂಡು ಒಬ್ಬನೇಘಟ್ಟದ ಮಾರ್ಗವನ್ನು ನಡೆಯುಹತ್ತಿ ಕತ್ತಲೆಯಾಗುವದರೊಳಗೆ ಘಟ್ಟವನ್ನೇರಿ ಹೋಗಿ ನಿಂತುಕೊಂಡನು ಕೂಡಲೆ ಅಲ್ಲಿ ವಾಸಮಾಡಿಕೊಂಡಿದ್ದ ಕೆಲವು ಪಠಾಣರು ಇವರ ಮೇಲೆ ಹಲ್ಲಾಮಾಡ ಹತ್ತಿದರು ದಂಡಾಳುಗಳು ಮಾರ್ಗಾಯಾಸದಿಂದ ಕಂಗೆಟ್ಟವರಾದ್ದರಿಂದಲೂ, ಕತ್ತಲೆಯ ದಿವಸವಿದ್ದದರಿಂದಲೂ ದಂಡಾಳುಗಳು ನಿಂತಲ್ಲೆ ನಿಂತುಕೊಳ್ಳಲ ಸಮರ್ಥರಾಗಿ ಹಿಂದಕ್ಕೆ ಹಿಂದಕ್ಕೆ ಕಾಲ್ದೆಗೆಯ ಹತ್ತಿದರು ಆಸಮಯದಲ್ಲಿ ಪಠಾಣರು ನಡುವೇ ಬಂದು ಯುದ್ಧಮಾಡ ಹತ್ತಿದ್ದರಿಂದ ಬೀರಬಲನ ಸೈನ್ಯವು ಇಭಾಗವಾಯಿತು ಜೈನಖಾನನು ಒಂಟಿಗನಾಗಿ ಬಂದು ಬೀರಬಲನನ್ನು ಕೂಡಿಕೊಂಡನು ಈಪ್ರಕಾರ ಅತಿ ಬಿಕ್ಕಟ್ಟಾದ ಸ್ಥಳದಲ್ಲಿ ಸೈನ್ಯವು ಬಂದು ನಿಂತುಕೊಳ್ಳುವಷ್ಟರಲ್ಲಿ ಹಿಂದೆಯೂ ಮುಂದೆಯೂ ಮಾರ್ಗವನ್ನು ಆವರೋಧ ಮಾಡಿಕೊಂಡು ನಿಂತು ಕಾದುಹತ್ತಿದರು ಎತ್ತುಗಳಮೇಲೆಯೂ ಒಂಟೆಗಳಮೇಲೆಯೂ ಹೇರಿರುವ ಆಹಾರ

ಕೊಂಡು ಬಿಟ್ಟರು ಈಪ್ರಕಾರ ಅಂತೂ ಇಂತೂ ಜೀವದಿಂದ ಪಾರಾಗಿ ಆ ರುಸುರದಾರಿಯಮೇಲೆ ಇದ್ದ ಕೋಕಾನಸೈನ್ಯವನ್ನು ಕೂಡಿಕೊಂಡನು ಆಗ ಕೋಕಾನು ಬೀರಬಲನ ಹತ್ತರ ಬಂದು ಹೇಳಿದ್ದೇನಂದರೆ,-"ನಮ್ಮ ಹಿಂದೆಯೂ ಮುಂದೆಯೂ ಹತ್ತಲ ಸಾಧ್ಯವಾದ ಘಟ್ಟಗಳು ಅವೆ; ನಮ್ಮಸೈನ್ಯವು ನಿರ್ಬಲವಾಗಿ ಹೋಗಿದೆ ಇದಲ್ಲದೆ ಪಠಾಣ ಸಿಪಾಯಿಗಳು ಮಾರ್ಗವರೋಧ ಮಾಡಿಕೊಂಡು ಕುಳಿತು ಬಿಟ್ಟಿದ್ದಾರೆ; ಇಲ್ಲಿ ನೀರು ಹುಲ್ಲು ಮೊದಲಾದವುಗಳ ಕೊರತೆ ಇಲ್ಲ ಆದ್ದರಿಂದ ಇಲ್ಲಿಯೇ ಕೆಲವುದಿವಸ ನಿಂತುಕೊಂಡು, ದಿಲ್ಲಿಯಿಂದ ಹೊಸಸೈನ್ಯವನ್ನು ಸಹಾಯ್ಕೆಕರಿಸಿಕೊಂಡು ಪಠಾಣರಮೇಲೆ ಏರಿಹೋಗಿ ಅವರನ್ನು ನಿರ್ಮೂಲಮಾಡಿ ಬಿಡಬೇಕು ಈಮಾತಿಗೆ ನಮ್ಮತಿಯು ಇಲ್ಲದೆ ಇದ್ದಪಕ್ಷದಲ್ಲಿ ಪಠಾಣರ ಮುಖ್ಯಸ್ಥನೊಡನೆ ಸಂಧಿಯನ್ನು ಮಾಡಿಕೊಂಡು ನಾವು ಕೈಸೆರೆಹಿಡಿದಿರುವ ಅವರದಂಡಾಳುಗಳನ್ನು ಬಿಟ್ಟುಕೊಟ್ಟು ಹಿಂದಿರುಗುವದು ಲೇಸೆಂದು ತೋರುತ್ತದೆ ನಾನುಹೇಳಿದ ಈ ಎರಡು ಮಾರ್ಗಗಳಲ್ಲಿ ಸುಗಮವಾಗಿರುವದನ್ನು ಕೈಕೊಳ್ಳಬೇಕು" ಎಂದು ವಿನಂತಿಮಾಡಿಕೊಂಡನು.

ಪ್ರಾರಬ್ಧದಲ್ಲಿ ಇದ್ದದ್ದು ಎಂದೂ ತಪ್ಪುವದಿಲ್ಲ ಕೋಕಾ ಸರದಾರನು ಹೇಳಿದ ಸತ್ಪರಾಮರ್ಶವು ಯಾರ ಮನಸ್ಸಿಗೂ ಬರಲಿಲ್ಲ ಮರುದಿನವೇ ಅಲ್ಲಿಂದ ಪ್ರಯಾಣೋನ್ಮುಖರಾದರು ಕೂಡಲೆ ಕಾಳಗಕ್ಕೇ ಆರಂಭವಾಯಿತು ಕೋಕಾನು ಸೈನ್ಯದ ಹಿಂಭಾಗವನ್ನು ಕಾಯ್ದುಕೊಂಡು ವೈರಿಗಳಿಂದ ಬರುತ್ತಿರುವ ಬಾಣಗಳ ಹೊಡತವನ್ನು ತಪ್ಪಿಸಿಕೊಳ್ಳತ್ತ ಬರಹತ್ತಿದನು. ಮಾರ್ಗವು ಕಠಿಣತರವಾಗುತ್ತಬಂತು ಸಾಯಂಕಾಲವು ಸಮೀಪಿಸಿತು ಇಬ್ಬರುಕೂಡಿಕೊಂಡು ಹೋಗುವಷ್ಟು ಸಹಾ ಮಾರ್ಗವಿದಿಲ್ಲ; ಇಂಥ ಇಕ್ಕಟ್ಟಾದಮಾರ್ಗದಲ್ಲಿ ಸಿಲುಕಿಕೊಂಡ ಬೀರಬಲನ ಸೈನ್ಯದ ಮೇಲೆ ಪಠಾಣರು ಬಾಣಗಳ ಮತ್ತುಕಲ್ಲುಗಳ ಮಳೆಗರೆಯಹತ್ತಿದರು ಆನೆ, ಕುದುರೆ, ಒಂಟೆಗಳು ಒಂದರಮೇಲೊಂದು ಬೀಳಹತ್ತಿದವು ಆ ಕಾಳಗವು ಕೇವಲ ಅಂತಕನ ವಾಸಸ್ಥಳದಂತೆ ತೋರ ಹತ್ತಿತು ಜೈನಖಾನು ಲಜ್ಜಿತನಾಗಿ ರಣದಲ್ಲಿಯೇ ಮಡಿಯಬೇಕೆಂದು ನಿಶ್ಚಯಿಸಿದನು ಆದರೆ ನಾಲ್ವತ್ತುಜನ ಸಿಪಾಯಿಗಳು ಅವನನ್ನು ಸುತ್ತುಗಟ್ಟಿಕೊಂಡು ಹಿಂದಕ್ಕೆ ಕರೆದು ತಂದರು ಮಾರ್ಗದಲ್ಲಿ ಸತ್ತು ಬಿದ್ದ ಆನೆ, ಒಂಟೆಗಳಲೆಕ್ಕವೇ ಹತ್ತದಂತಾಯಿತು ಕುದುರೆಯ ಮೇಲೆ ಕುಳಿತುಕೊಂಡು ಹೋಗುವದಕ್ಕೆ ಬರದಂತಾಗಿತ್ತು ಅಂತೂ ಇಂತೂ ಏಳುತ್ತ ಬೀಳುತ ಮಂಜಿಲ ಎಂಬಸ್ಥಳಕ್ಕೆ ಬಂದು ಮುಟ್ಟಿದರು ಮಾರ್ಗದಲ್ಲಿ ಪ್ಲುತ್ತೆ

ಎಷ್ಟೋಜನ ದಂಡಾಳುಗಳು ಮಡಿದರು ಕೆಲವರು ಪಠಾಣರಕೈಗೆ ಸಿಕ್ಕರು ಹಕೀಮ ಅಬದುಲ್ಲ ಫತೆಹನು ಕಷ್ಟಪಟ್ಟು ಜೀವದಿಂದ ಉಳಿದುಬಂದು ಜೈನಖಾನನನ್ನು ಕೂಡಿಕೊಂಡನು ಆದರೆ ಬೀರಬಲನು ಉಳಿದಿರುವನೋ, ಅಥವಾ ಮರಣ ಹೊಂದಿದನೋ ಎಂಬ ವರ್ತಮಾನವೇ ತಿಳಿಯದೆ ಹೋಯಿತು ಈಕಾಳಗದಲ್ಲಿ ಮೂರು ಸಾವಿರಕ್ಕಿಂತ ಹೆಚ್ಚು ಜನರು ಯಮಪುರಿಯನ್ನು ಸೇರಿದರು ಸತ್ತುಹೋದವರಲ್ಲಿ ಹಸನಖಾ ಪನಿಗದಾಬೇಗ ರಾಜಾ ಧರ್ಮಾಂಗದ ಮುಲ್ಲಾಶೇರಿ ಸಂಗ್ರಾಮಖಾ ಮೊದಲಾದವರ ಶವಗಳು ಸಿಕ್ಕವು ಬೀರಬಲನ ಗುರುತು ಸಹಾ ಹತ್ತದೆ ಹೋಯಿತು.

ಶೇಖ ಅಬುಲ್ಲ ಫಜಲ್ಲನು " ಅಕಬರ ನಾಮ ,, ಎಂಬಗ್ರಂಥದಲ್ಲಿ ಬಾದಶಹನ ಮೂವತ್ತನೇ ವರುಷದ ಹುಟ್ಟಿದ ದಿವಸದ ಸಮಾರಂಭದ ವರ್ಣನೆ ಮಾಡಿದ್ಧರಲ್ಲಿ ಹೀಗೆ ಉಲ್ಲೇಖಿಸಿರುವನಲ್ಲಾ " ಅಫಗಾನಿಸ್ತಾನದ ಕಾಳಗವನ್ನು ಬೇಗನೇ ಸಮಾಪ್ತವನ್ನಾಗಿ ಮಾಡಬೇಕೆಂದು ತಿಳಿದು ಕೇವಲ ವಿಶ್ವಾಸಿಕನಾದ ಯಾವಸರದಾರ ನೊಡನೆ ಸೈನ್ಯವನ್ನು ಕಳಿಸಬೇಕೆಂಬ ಯೋಚನೆಯಲ್ಲಿರಲು, ನಾನು (ಅಬುಲ ಫಜಲ್ಲನು) ನೀವೇದಿಸಿಕೊಂಡನ್ನೇನಂದರೆ- "ನಾನು ನಿಮ್ಮ ಸನ್ನಿಧಾನದಲ್ಲಿ ಸುಖಸಮಾಧಾನದಿಂದಲೂ ಪ್ರತಿಷ್ಟೆಯಿಂದಲೂ ಇದ್ದೇನೆ; ಆದರೆ ನಿಮ್ಮನ್ನು ಬಿಟ್ಟು ದೂರ ಹೋಗಿ ಕೆಲವು ಅಲ್ಪಸ್ವಲ್ಪ ಕಾರ್ಯವನ್ನು ಸಫಲಗೊಳಿಸು ವದರಿಂದ ಇದಕ್ಕೂ ಹೆಚ್ಚಾಗಿ ಪ್ರತಿಷ್ಟೆಯುಂಟಾಗ ಬಹುದೆಂದು ಯೋಚಿಸಿದ್ದೇನೆ" ಎಂಬು ಹೇಳಲು, ಅದಕ್ಕೆ ಬಾದಶಹನು ಉತ್ತರಕೊಟ್ಟದ್ದೇನಂದರೆ- " ನಾನು ನಿನ್ನನು ಶೂರರಾದ ಎಷ್ಟೋಜನ ದಂಡಾಳುಗಳೊಡನೆ ಕಳಿಸಬೇಕೆಂದು ಯೋಚಿಸಿದ್ದೇನೆ,, ಎಂದುಹೇಳಿದನು. ನಾನು, ಪ್ರಯಾಣ ಸನ್ನಾಹದಲ್ಲಿರಲು ಹೊರಡುವದಿವಸ ಮೂರನೇ ಪ್ರಹರದಲ್ಲಿ ಬಾದಶಹನು, ನನ್ನ ಮತ್ತು ಬೀರಬಲನ ಹೆಸರಿನಿಂದ ಚೀಟಿಯನ್ನು ಹಾಕಿಸಿದನು ಅದರಲ್ಲಿ ಬೀರಬಲನ ಹೆಸರು ಹೊರಟಿತು ಅದರಿಂದ ನನ್ನ ಮತ್ತು ಬಾದಶಹನಮನಸ್ಸಿಗೆ ವಿಷಾದವಾಯಿತು ನಿರ್ವಾಹವಿಲ್ಲದೆ ಮಾಘ ಶುಕ್ಲ ದ್ವಾದಶೀ ದಿವಸ ಬಾದಶಹನು ಬೀರಬಲನಿಗೆ ಅನುಜ್ಞೆಯನ್ನಿತ್ತನು ಅವನೊಡನೆ ಕಾಸಮ ಖ್ವಾಜಾಗದಾ ಬೇಗ ಹಾಜೀ ಸಾಕ, ಆಹಮ್ಮದಬೇಗ, ತಾಸಬೇಗ, ಹಾಜಾಮುದ್ದೀನ ಖ್ವಾಜಾಮೊದಲಾದ ಸರದಾರರನ್ನು ಕಳುಹಿಸಿದನು ಆದಿವಸ ಪ್ರಾತಃಕಾಲದಲ್ಲಿ ಎದ್ದು ಬಾದಶಹನ ದರ್ಶನ ತೆಗೆದುಕೊಂಡು ಹೊರಟು ಹೋದನು.

" ತಬಕಾತ ಅಕಬರೀ " ಎಂಬ ಗ್ರಂಥದಲ್ಲಿ ರಾಜಾ ಬೀರಬಲನನ್ನು

ಕಳಿಸಿಕೊಟ್ಟ ದಿನವು ಸಫರ, ತಿಂಗಳ ೧೦ನೇ ತಾರೀಖು ಎಂದು ಬರೆವದೆ. ಆ ದಿನವು ಚಂಡೂ ಪಂಚಾಂಗದ ಅನುಸಾರವಾಗಿ ಮಾಘಶುಕ್ಲ ದ್ವಾದಶೀ ಶುಕ್ರವಾರವೇ ಆಗುತ್ತದೆ.

ರಾಜಾ ಬೀರಬಲನು ಸ್ವಾತ ಮೈದಾನಕ್ಕೆ ತಲುಪಿ ಪಠಾಣರನ್ನು ಒಳಿತಾಗಿ ಹಣ್ಣಿಗೆ ತಂದನು ಅವರಿದ್ದ ಸ್ಥಳವನ್ನು ಕೈವಶಮಾಡಿಕೊಂಡು, ಅವರನ್ನು ಅಲ್ಲಿಂದ ಓಡಿಸಿದನು ಅವರನ್ನು ಕೇವಲ ಕೈಶಸ್ತ್ರಗಳಿಂದಲೇ ಪರಾಜಿತರನ್ನಾಗಿ ಮಾಡಿದನು ಆಗ ಪಠಾಣರ ಸೈನ್ಯದಲ್ಲಿ ಘಟ್ಟದ ಮಾರ್ಗಗಳನ್ನು ಕಾಯ್ದುಕೊಂಡು ಇದ್ದ ಕೆಲವು ಸೈನಿಕರು ಮಾತ್ರ ಉಳಿದಿದ್ದರು ಅವರನ್ನು ಕೈವಶ ಮಾಡಿಕೊಳ್ಳುವದು ಅತಿದುಷ್ಕರವಾದದ್ದೆಂದು ಯೋಚಿಸಿ ಜೈನಖಾನು ಮತ್ತೆ ಕೆಲವು ಸೈನ್ಯವನ್ನು ಸಹಾಯಕ್ಕೆ ಕಳುಹಿಸಬೇಕೆಂದು ಪತ್ರವನ್ನು ಬರೆದನು ಬಾದಶಹನು ಬೀರಬಲನನ್ನು ಕಳುಹಿಸಿಕೊಟ್ಟ ಒಂಭತ್ತು ದಿವಸದ ಮೇಲೆ ಪುನಃ ಹಕೀಮ ಅಬುಲ್ಲಫತಹನನ್ನು ಕಳಿಸಿಕೊಟ್ಟನು ಬೀರಬಲ್ಲ ಮತ್ತು ಕೋಕಾ ಇವರಿಬ್ಬರ ನಡುವೆ ಬಹುದಿವಸದಿಂದ ದೀರ್ಘವಾದ ದ್ವೇಷವಿತ್ತು ಅದರಂತೆ ಹಕೀಮ ಮತ್ತು ರಾಜಾ ಬೀರಬಲ್ಲ ಇವರ ನಡುವೆಯೂ ಅಸೂಯೆಯು ಇತ್ತು. ರಾಜಾ ಬೀರಬಲನ ಮೇಲೆ ಬಾದಶಹನು ದಿನದಿನಕ್ಕೆ ಹೆಚ್ಚು ಹೆಚ್ಚು ಪ್ರೀತಿ ಮಾಡ ಹತ್ತಿದಂತೆ ಕೋಕಾ ಮತ್ತು ಹಕೀಮ ಇವರೀರ್ವರ ಮನಸ್ಸಿನಲ್ಲಿ ಅಸೂಯಾಗ್ನಿಯು ಪ್ರಬಲವಾಗಹತ್ತಿತು ಈಪ್ರಕಾರ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದ ಈ ಮೂವರು ಸರದಾರರು ಒಂದೇಕೆಲಸದಮೇಲೆ ನಿಯಮಿಸಲ್ಪಡಲು "ತೀನತೇರಾನೌ, ಅಠರಾ" ಎಂಬ ಸಾಮತಿಯಂತೆ ಆಯಿತು.

ಬೀರಬಲ್ಲನ ಮರಣದ ವಾರ್ತೆಯನ್ನು ತಿಳಿದು ಬಾದಶಹನು ದುಃಖಪಟ್ಟದ್ದು.

"ಅಕಬರನಾಮಾ" ಎಂಬ ಗ್ರಂಥದಲ್ಲಿ ಬರೆದದ್ದೇನಂದರೆ;- "ಬಾದಶಹನಿಗೆ ಬೀರಬಲನ ಮರಣವಾರ್ತೆಯು ತಿಳಿದಕೂಡಲೆ ಬಹು ಖೇದವಾಯಿತು ಬಾದಶಹನು ಎರಡು ದಿವಸ ಅನ್ನವನ್ನು ಸಹಾ ಮುಟ್ಟಲಿಲ್ಲ ಒಂದುಮೂಲೆಯಲ್ಲಿ ಕುಳಿತು ಶೋಕಮಾಡಹತ್ತಿದನು ಕಡೆಗೆ ಅವನ ತಾಯಿಯೂ, ದರಬಾರದ ಮುತ್ಸದ್ದಿಗಳೂ ಬಹು ಪರಿಯಾಗಿ ಹೇಳಿಕೊಂಡದ್ದರಿಂದ ಎರಡು ದಿವಸದಮೇಲೆ ಎದ್ದು ಭೋಜನ ಮಾಡಿ ಬೀರಬಲನನ್ನು ಕೊಂದ ಮನುಷ್ಯನಿಗೆ ನಾನೇ ಯೋಗ್ಯ ಪ್ರಾಯಶ್ಚಿತ್ತವನ್ನುಂಟು ಮಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಅಫಗಾನಿಸ್ತಾನಕ್ಕೆ ಹೊರಡಲನುವಾದನು ಆದರೆ ಶುಭಚಿಂತಕರಾದ ಕೆಲವು ಸರದಾರರು ಅವನನ್ನು ಹೋಗಗೊಡಲಿಲ್ಲ.

"ಮುಂತ ಖಬುಲ್,, ಎಂಬ ಗ್ರಂಥದಲ್ಲಿ ಹೀಗೆ ಬರೆದಿರುವದಲ್ಲಾ; — ಬಾದಶಹನಿಗೆ ಬೀರಬಲನ ಹೊರತು ಯುದ್ಧದಲ್ಲಿ ಎಷ್ಟೋಜನ ಸರದಾರರು ಸತ್ತುಹೋಗಿದ್ದರೂ ಸಹ ಅವನಿಗೆ ಅಷ್ಟು ವ್ಯಸನವಾಗಿದ್ದಿಲ್ಲ; ಆದರೆ ಬೀರಬಲನ ಮರಣದಿಂದ ಬಾದಶಹನಿಗೆ ಹೇಳಕೊಡದಷ್ಟು ವ್ಯಸನವಾಯಿತು, ಅವನು ಒಂದೊಂದುಸರತಿ " ಬೀರಬಲನ ಶವವನ್ನು ಯಾವನಾದರೂ ಸರದಾರನು ಆ ಇಕ್ಕಟ್ಟಾದ ಘಟ್ಟದೊಳಗಿಂದ ಹೊರಗೆ ತೆಗೆದುಕೊಂಡು ಬಂದು ನನಗೆ ಹೇಳಿಕಳುಹಿಸಿದ್ದರೆ ನಾನು ಅವನ ದಹನ ಕ್ರಿಯೆಯನ್ನು ಯಥಾವಿಧಿಯಾಗಿ ನೆರವೇರಿಸಿ, ಅವನ ಋಣದೊಳಗಿಂದ ಅಲ್ಪಸ್ವಲ್ಪ ಮಟ್ಟಿಗೆ ಬಿಡುಗಡೆಯಾಗುತ್ತಿದ್ದೆನಲ್ಲಾ " ಎಂದು ಹಂಬಲಿಸುತ್ತಿದ್ದನು. ಒಂದೊಂದುಸರತಿ ಬೀರಬಲನು ಯಾವತ್ತು ಸಂಸಾರ ಬಂಧನದೊಳಗಿಂದ ಪಾರಾಗಿ ಜೀವನ್ಮುಕ್ತನಾಗಿ ಹೋದನು. ಅವನ ಕೀರ್ತಿಯು ಈ ನಶ್ವರವಾದ ಜಗತ್ತಿನಲ್ಲಿ ಅಜರಾಮರಣವಾಗಿ ನಿಂತುಕೊಂಡದೆ. ಎಂದು ಸಂತೋಷಪಡುತ್ತಿದ್ದನು.

ಗುಜರಾಥದ ಸುಭೇದಾರನಾದ ಖಾನಖಾನನಿಗೆ ಬರೆದ ಆಜ್ಞಾಪತ್ರದಲ್ಲಿ ಬೀರಬಲನ ಮೃತ್ಯುವಿನ ವಿಷಯದಲ್ಲಿ ಅಕಬರಬಾದಶಹನು ಬರೆದ ಆಶೆಯವನ್ನು " ಅಬುಲ್ ಫಜಲನು " ತನ್ನ " ಆಬುಲ್‌ಫಜಲ್ ಮನಶಿಯಾತ್ ಎಂಬ ಗ್ರಂಥದಲ್ಲಿ ಸಾದ್ಯಂತವಾಗಿ ಬರೆದು ಇಟ್ಟಿದ್ದಾನೆ. ಅದರ ಸಾರಾಂಶವೇನಂದರೆ;-

" ಆ ದಿವಸ ಮೇಲಿಂದಮೇಲೆ ಜಯವಾದ ವರ್ತಮಾನಗಳೇ ಬರುತ್ತಿದ್ದವು. ಅಷ್ಟರಲ್ಲಿ ಸ್ವಾತ ಮತ್ತು ಬಾಜೋರ ಎಂಬ ಸ್ಥಲಗಳನ್ನು ಜಯಿಸಲಿಕ್ಕೆ ಕಳುಹಿಸಿದ ಸೈನ್ಯವು ಬಹಳವಾಶವಾಗಿ ಆ ಪ್ರಾಂತಗಳು ಕೈವಶವಾಗುವ ಸುಸಮಯವು ಸಮೀಪಿಸಿತ್ತು, ಶತ್ರು ಸೈನ್ಯವು ಪರ್ವತದ ಕಂದರಗಳಲ್ಲಿ ಹೋಗಿ ಜೀವ ಉಳಿಸಿಕೊಳ್ಳುವ ಹವ್ಯಾಸದಲ್ಲಿದ್ದರು. ಸೈನ್ಯದ ನಾಯಕನು (ಅಫಸರ) ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂದು ಯೋಚಿಸುತ್ತಿದ್ದನು. ಆದರೆ ಈ ಅಕಬರ ಬಾದಶಹನು ಕಳುಹಿಸಿಕೊಟ್ಟ ಈ ನಾಲ್ಕು ಜನ ಸರದಾರರು ಮಿಲಿತರಾದ ಸಮಯವು ಕುಮುಹೂರ್ತವಾಗಿತ್ತು, ಅದರಿಂದ ಬಾದಶಹನ ಸೈನ್ಯವು ಪರಾಜಿತವಾಗಿ ಹಿಂದಿರುಗಿಬಂತು, ಈ ಯುದ್ಧದಲ್ಲಿ ನಮ್ಮ ಸಭಾರತ್ನವೂ, ನಮ್ಮ ದರಬಾರದ ಆಧಾರಸ್ತಂಭವೂ, ಬುದ್ಧಿವಂತನಾದ ಮಂತ್ರಿಯೂ ಆದ ನನ್ನ ಪರಮಮಿತ್ರನಾದ ಬೀರಬಲನು ನಶ್ವರವಾದ ಜಗತ್ತನ್ನು ತ್ಯಾಗಮಾಡಿ ಪರಲೋಕಕ್ಕೆ ಹೊರಟುಹೋದನು. ನನ್ನ ಸಂತೋಷವೆಲ್ಲ ಲಯವಾಗಿ ರಸಾತಳಕ್ಕೆಹೋಯಿತು ಈ ಸಂಸಾರವು

ಕೇವಲ ದುಃಖದಿಂದಲೇ ತುಂಬಿದ್ದಾಗಿದೆ ಸುಖದಹಿಂದೆ ದುಃಖವು ಇದ್ದೇಯಿರುವದು ಅಂಥಾ ಪರಮ ಮಿತ್ರನು ನನಗೆ ಇನ್ನು ಮೇಲೆ ದೊರೆಯಲಾರನು, ಅವನ ವಿಷಯದಲ್ಲಿ ನಾನು ಎಷ್ಟು ದುಃಖಪಟ್ಟರೂ ಅದು ಅತ್ಯಲ್ಪವೇ ಆಗಿದೆ ಈ ಜಗತ್ತಿನಲ್ಲಿ ಜನ್ಮಹೊಂದಿದವನು ಎಂದಾದರೂ ಒಂದುದಿವಸ ಮರಣ ಹೊಂದತಕ್ಕವನೇ ಎಂಬದನ್ನು ತಿಳಿದುಕೊಂಡು ಶಾಂತತೆಯನ್ನು ಧರಿಸುವದೇ ಮೇಲುಪಾಯವು. ಇಂಥ ಸ್ಥಿತಿಯಲ್ಲಿ ಈಶ್ವರನ ಸಂಕಲ್ಪದಂತೆ ಮನಸ್ಸನ್ನು ಸ್ಥಿರಪಡಿಸಿಕೊಂಡು ಇರಲಿಕ್ಕೇಬೇಕು, ಈ ಪ್ರಕಾರ ಅನಾಹುತವನ್ನುಂಟುಮಾಡಿದ ಪಠಾಣರನ್ನು ಜಯಿಸಲಿಕ್ಕೆ ತೋಡರಮಲ್ಲನೊಡನೆ ಬಹಳ ಸೈನ್ಯವನ್ನು ಕೊಟ್ಟು ಕಳಿಸಿದ್ದೇನೆ ಅವನು ಒಳ್ಳೇ ಶೀರತನದಿಂದ ಕಾದಿ ಪಠಾಣರನ್ನು ಸೋಲಿಸಿ ಹಿಂದಿರುಗಿ ಬರಬಹುದು ನಾನು ಇನ್ನು ಸ್ವಲ್ಪದಿವಸದೊಳಗಾಗಿ ನಿಮ್ಮ ದೇಶದಕಡೆಗೆ ಬರುವೆನು."

ರಾಜಾ ಬೀರಬಲನಮೇಲೆ ಅಕಬರನಪ್ರೀತಿಯು ಎಷ್ಟಿತ್ತೆಂಬದನ್ನು "ಜುಲೂಸ ಉಂತೀಸ" ಎಂಬ ಗ್ರಂಥದಲ್ಲಿ ಈಪ್ರಕಾರ ವರ್ಣಿಸಿದ್ದಾನೆ.

"ಸಂವತ್ ೧೬೪೦ ರಲ್ಲಿ ಒಂದುದಿವಸ ಬಾದಶಹನೂ ಬೀರಬಲನೂ ಕೂಡಿ ಆನೆಯ ಕಾಳಗವನ್ನು ನೋಡುತ್ತ ಕುಳಿತುಕೊಂಡಿದ್ದರು, ಆ ಆನೆಗಳಲ್ಲಿ "ದಲಚಾತುರ" ಎಂಬ ಆನೆಯು ಮನುಷ್ಯರನ್ನು ಕೊಲ್ಲುವದರಲ್ಲಿ ಒಳ್ಳೇ ಹೆಸರಾಗಿತ್ತು, ಅದು ಒಮ್ಮಿಂದೊಮ್ಮೆ ಹಿಂದಿರುಗಿ ಬೀರಬಲನ ಕಡೆಗೆ ತಿರುಗಿತು, ಮತ್ತು ಆ ಕೂಡಲೆ ಬೀರಬಲನನ್ನು ತನ್ನ ಸೊಂಡೆಯಿಂದ ಹಿಡಿದು ತಿರುಗಿಸಿ ಹೊಡೆಯಬೇಕೆನ್ನುವಷ್ಟರಲ್ಲಿ ಬಾದಶಹನು ತನ್ನ ಹತ್ತಿರ ನಿಂತಿದ್ದ ಶಿಪಾಯಿಯ ಕೈಯೊಳಗಿನ ಕತ್ತಿಯನ್ನು ಕಿತ್ತುಕೊಂಡು ಆ ಆನೆಯ ಶುಂಡಾಗ್ರದಲ್ಲಿ ಹೊಡೆದು ಬೀರಬಲನನ್ನು ಬದುಕಿಸಿಕೊಂಡನು. ಬೀರಬಲನು ಸತ್ತುಹೋದಮೇಲೆ ಕೆಲವು ದಿವಸ ಬಾದಶಹನು ದರಬಾರಕ್ಕೆಹೋಗುವದನ್ನೂ ಪರದೇಶದ ವಕೀಲರೊಡನೆ ಸಂಭಾಷಣೆ ಮಾಡುವದನ್ನೂ ಬಿಟ್ಟುಬಿಟ್ಟಿದ್ದನು."

"ಇಕಬಾಲ ಜಹಾಂಗಿರಿ" ಎಂಬ ಗ್ರಂಥದಲ್ಲಿ ಬರದದ್ದೇನಂದರೇ;-

"ಅಕಬರನು ಸಿಂಹಾಸನಾರೂಢನಾದ ದಿವಸದಿಂದ ಬೀರಬಲನ ಮರಣದ ವಾರ್ತೆಯನ್ನು ಕೇಳಿದ ದಿವಸದತನಕ ಅವನಮೇಲೆ ಒಂದು ದಿವಸವಾದರು ದುಃಖದ ಪ್ರಸಂಗವು ಬಂದಿದ್ದಿಲ್ಲ, ಬಾದಶಹನು ಬೀರಬಲನ ಮೃತ್ಯುವಿನ ಶೋಕದಲ್ಲಿ ಕೆಲವು ಕವಿತೆ (ಮರಸಿ) ಗಳನ್ನು ಮಾಡಿದ್ದಾನೆ ಅವುಗಳಲ್ಲ ಎರಡು ಶ್ಲೋಕಗಳನ್ನು ಇದರಡಿಯಲ್ಲಿ ಬರೆದಿರುವೆನು.

ಪೂರ್ವಜನ್ಮದ ವೃತ್ತಾಂತ.

" ದೀನಜಾನ ಸಬದೀನ ಏಕದುರಾಯೋ ದುಸಹ ದುಖ
ಸೋ ಅಬಹಮಕೋ ದಿನ, ಕಛನಹಿಁ ರಾಖ್ಯೋ ಬೀರಬರ
ಪೀಥಲ ಸೋವುಜಲಿಸ ಗಯಿ, ತಾನಸೇನಸೋ ರಾಗ
ಹಁಸಿಬೋ ರಮಿಬೋ ಬೋಲಿಬೋ, ಗಯೋಬೀರಬಲಸಾಥ ॥೨॥

ಬೀರಬಲನ ಮರಣದ ವಾರ್ತೆಯು ಫಾಲ್ಗುಣ ಶುಕ್ಲ ದ್ವಿತೀಯಾ ಗುರುವಾರ ದಿವಸ ಬಂದುಮುಟ್ಟಿತು. ಮುಂದೆ ಶುಕ್ಲಪಕ್ಷ ಸಪ್ತಮಿಯ ದಿವಸ ಕೋಕಾ ಮತ್ತು ಹಕೀಮ ಇವರಿಬ್ಬರು ಮೋರೆಯನ್ನು ಒಣಗಿಸಿಕೊಂಡು ಲಜ್ಜಿತರಾಗಿ ಬಾದಶಹನಿಗೆ ಬಂದು ಭೆಟ್ಟಿಯಾದರು. ಆಗ ಬಾದಶಹನು ಬಹುಕ್ರುದ್ಧನಾಗಿ ಕೆಲವು ದಿವಸ ಅವರನ್ನು ದರಬಾರಕ್ಕೆ ಕರಿಸದೆ ಬಿಟ್ಟುಬಿಟ್ಟಿದ್ದನು.

ಬಾದಶಹನ ಅಪ್ಪಣೆಯ ಮೇರೆಗೆ ರಾಜಾ ಮಾನಸಿಂಹನು ಖೈಬರಘಟ್ಟದಲ್ಲಿದ್ದ ಪಠಾಣರೊಡನೆ ಹೋರಾಡುತ್ತಿರಲು, ತೋಡರ ಮಲ್ಲನು "ಸ್ವಾತಬುನೇರೆ" ಎಂಬ ಸ್ಥಳವನ್ನು ಕೈವಶಮಾಡಿಕೊಂಡು ಹಿಂದಿರುಗಿ ಬಂದು ಖೈಬರ ಘಟ್ಟದಲ್ಲಿ ಯುದ್ಧಮಾಡುತ್ತಿದ್ದ ಮಾನಸಿಂಹನ ಸಹಾಯಕ್ಕೆ ಬಂದನು, ಎರಡೂ ಕಡೆಯಿಂದ ಬರುವ ಶರವೃಷ್ಟಿಗಳನ್ನು ತಾಳಲಾರದೇ ಪಠಾಣರು ಕೈಸೆರೆಸಿಕ್ಕರು ಅವರನ್ನು ತುರ್ಕಸ್ಥಾನಕ್ಕೆ ಕಳಿಸಿ ಗುಲಾಮರಂತೇ ವಿಕ್ರಯಿಸಿ ಬಿಟ್ಟರು.

ಈಪ್ರಕಾರ ಬಾದಶಹನು ಇಂಥ ಅನನ್ವಿತ ಕೃತ್ಯಕ್ಕೆ ಹಿಂದೆ ಎಂದೂ ಅಪ್ಪಣೆಕೊಟ್ಟಿದ್ದಿಲ್ಲ, ಆದರೆ ಬೀರಬಲನ ಮರಣದ ಸೇಡು ತೀರಿಸಿಕೊಳ್ಳಬೇಕೆಂದು ಈಪ್ರಕಾರ ಅಪ್ಪಣೆಯನ್ನು ಕೊಟ್ಟನು, ಇದರಹೊರ್ತು ಅನ್ಯಥಾ ಕಾರಣವಿದ್ದಿಲ್ಲ.

ವೇಷಧಾರಿಯಾದ ಬೀರಬಲ.

ಅಕಬರ ಬಾದಶಹನಿಗೆ ಸಂತೋಷವಾಗಬೇಕೆಂದು ಕೆಲವು ಜನರು ಬೀರಬಲನು ಸತ್ತಿಲ್ಲವೆಂತಲೂ, ಕಾಳಗದಲ್ಲಿ ಘಾಯಪಟ್ಟು ಬದುಕಿಕೊಂಡಿರುವನೆಂತಲೂ, ಅನೃತ ವರ್ತಮಾನವನ್ನು ಹುಟ್ಟಿಸಿದ್ದರು. ಮತ್ತೆ ಕೆಲವರು ಅವನನ್ನು ಹುಡುಕಿಕೊಂಡು ಬರುವೆವೆಂತಲೂ ವಚನವನ್ನು ಕೊಟ್ಟಿದ್ದರು. ಒಬ್ಬ ಮೋಸಗಾರನು ತಾನೇ ಬೀರಬಲನೆಂದು ಪ್ರಕಟವಾಗಿದ್ದನು.

ಬೀರಬಲನು ಸ್ವರ್ಗಸ್ಥನಾಗಿ ಎರಡು ವರುಷಗಳಾದಮೇಲೆ " ಸೀಥೀ ಎಂಬ ಗ್ರಾಮದಲ್ಲಿ ಇದ್ದ ಒಬ್ಬ ಬ್ರಾಹ್ಮಣನು ತಾನೇ ಬೀರಬಲನೆಂದೂ, ಪಠಾಣರ ಸಂಗಡ ಕಾಳಗಮಾಡುವಾಗ ಘಾಯಹೊಂದಿ ಬಿದ್ದಿರುವಾಗ ಒಬ್ಬ

ಸಾಧುಪುರುಷನು ತನ್ನನ್ನು ಬದುಕಿಸಿದನೆಂತಲೂ ಹೇಳುತ್ತಿದ್ದನು. ಬೀರಬಲ್ಲ ಮತ್ತು ಆ ಬ್ರಾಹ್ಮಣನ ರೂಪದಲ್ಲಿ ಸಾಮ್ಯತೆಯಿತ್ತು, ಮತ್ತು ಅವನು ಬೀರಬಲನು ಮಾಡಿದ ಕೆಲಸಗಳನ್ನೆಲ್ಲ ಅರಿತುಕೊಂಡದ್ದರಿಂದ ಹಿಂದಿನ ಎಲ್ಲ ಕೃತಿಗಳನ್ನು ಜನರಿಗೆ ನಂಬಿಗೆಯಾಗುವಂತೆ ಹೇಳುತ್ತಿದ್ದನು. ಈ ಎಲ್ಲಾ ಕಾರಣಗಳಿಂದ ಬೀರಬಲನು ಜೀವಂತನಾಗಿರುವನೆಂದು ಜನರೊಳಗೆಲ್ಲ ಪ್ರಚಾರವಾಯಿತು. ಈ ವರ್ತಮಾನವು ಬಾದಶಹನ ಕಿವಿಯವರೆಗೆ ಹೋಗಲು ಅವನು ಆ ಬ್ರಾಹ್ಮಣನನ್ನು ಕರೆಯಿಸಿಕೊಂಡನು. ಅವನು ಮಾರ್ಗದಲ್ಲಿ ಬರುತ್ತಿರುವಾಗ ಯಾವದೋ ಒಂದು ವ್ಯಾಧಿಯಿಂದ ಪರಲೋಕವನ್ನೈದಿದನು ಈ ಸಂಗತಿಯು "ಅಕಬರನಾಮಾ" ಎಂಬ ಗ್ರಂಥದಲ್ಲಿ ಬರೆದದೆ.

ಇದರಂತೆಯೇ "ಮುಂತಖಬುಲ ತವಾರೀಖ" ಎಂಬ ಗ್ರಂಥದಲ್ಲಿಯೂ ಈ ಸಂಗತಿಯನ್ನು ಈ ಪ್ರಕಾರ ಬರೆದಿದ್ದಾನೆ;- "ಹಿಜರೀ ಸನ್ ೯೯೬-ನೇ ವರುಷ ಅಂದರೆ (ಸಂವತ್ ೧೬೪೪) ನೇದರಲ್ಲಿ ಬೀರಬಲನು ಕಾಳಗದಲ್ಲಿ ಘಾಯಹೊಂದಿ ವ್ಯಾಧಿಯಿಂದಬಳಲುತ್ತ ನಗರಕೋಟದ ಹತ್ತರಬಂದು ಸನ್ಯಾಸಿಯ ವೇಷಧಾರಣೆ ಮಾಡಿಕೊಂಡು ವಾಸವಾಗಿದ್ದಾನೆ" ಎಂದು ಹುಟ್ಟಿದ ವರ್ತಮಾನವನ್ನು ಕೇಳಿ, ಬಾದಶಹನು ಯೋಚಿಸಿದ್ದೇನೆಂದರೆ;- "ಕಾಳಗದಲ್ಲಿ ಪರಾಜಿತನಾದ್ದರಿಂದ ಮುಖತೋರಿಸಲಿಕ್ಕೆ ನಾಚಿಕೆಪಟ್ಟು, ಅಲ್ಲಿ ವಾಸವಾಗಿದ್ದರೂ ಆಗಿರಬಹುದು" ಎಂದು ನಿಶ್ಚಯಿಸಿ, ನಗರಕೋಟಕ್ಕೆ ಒಬ್ಬ ಮನುಷ್ಯನನ್ನು ಕಳಿಸಿ ನಿಜಸಂಗತಿಯನ್ನು ತಿಳಿದುಕೊಳ್ಳಬೇಕೆಂದು ಯೋಚಿಸಿದನು, ಆದರೆ ಅದು ಅನೃತವಾದ ವರ್ತಮಾನವೆಂದು ಒಬ್ಬ ನಂಬಿಗಸ್ತ ಮನುಷ್ಯನ ಮುಖದಿಂದ ತಿಳಿದುಬಂತು. ಮತ್ತೊಂದುಸಾರೆ ಬೀರಬಲನು ತನಗೆ ಜಹಾಗೀರಿಯಾಗಿ ಕೊಟ್ಟ ಕಾಲಿಂಜರವೆಂಬಲ್ಲಿ ಅಡಗಿಕೊಂಡು ಕುಳಿತುಕೊಂಡಿದ್ದಾನೆಂದು ವರ್ತಮಾನಹುಟ್ಟಿತು ಆಗ ಕಾಲಿಂಜರದಲ್ಲಿದ್ದ ಕಿಲ್ಲೇದಾರನಿಗೆ "ಪ್ರಚ್ಛನ್ನನಾಗಿದ್ದ ಬೀರಬಲನನ್ನು ಕಳುಹಿಕೊಡಬೇಕೆಂದು" ಆಜ್ಞಾಪತ್ರವನ್ನು ಬರೆದನು ಆ ಕಿಲ್ಲೇದಾರನು ಒಬ್ಬಯಾತ್ರಿಕನನ್ನು ಬೀರಬಲನೆಂದು ತಿಳಿದು ತನ್ನ ಬಳಿಯಲ್ಲಿ ಇಟ್ಟುಕೊಂಡಿದ್ದನು. ಬಾದಶಹನ ಆಜ್ಞಾಪತ್ರವು ಬಂದು ತಲ್ಪಿದಕೂಡಲೆ ಬಾದಶಹನು ತನಗೆ ಏನುಶಾಸನವನ್ನು ಮಾಡುವರೋ ಎಂಬ ಭೀತಿಯಿಂದ ಅವನನ್ನುಕೊಂದು ಬಾದಶಹನಿಗೆ "ನಮ್ಮಲ್ಲಿ ಬೀರಬಲನಿದ್ದದ್ದು ನಿಜ, ಆದರೆ ಈಗ ಕೆಲವು ದಿವಸಗಳ ಹಿಂದೆ, ಅವನು ಅಕಸ್ಮಾತ್ತಾಗಿ ಮರಣಹೊಂದಿದನು." ಎಂದು ರಿಪೋರ್ಟನ್ನು ಬರೆದು ಬಾದಶಹನ ಸನ್ನಿಧಿಗೆ ಕಳುಹಿಸಿದನು. ಇದನ್ನು ಕೇಳಿದಮೇಲೆ ಬಾದ

ಶಹನಿಗೆ ಪರಮಾವಧಿ ದುಃಖವಾಯಿತು, ಆಗ ಈ ವರ್ತಮಾನವನ್ನು ತನಗೆ ಮೊದಲು ಯಾಕೆ ತಿಳಿಸಲಿಲ್ಲೆಂಬ ಅಪರಾಧವನ್ನು ಹೊರಿಸಿ, ಆ ಕಿಲ್ಲೇದಾರನಿಗೆ ದಂಡಮಾಡಿದನು.

ಬೀರಬಲನ ಕವಿತಾಚಾತುರ್ಯ.

ಬೀರಬಲನು ಕಾವ್ಯಮಾಡುವಪರಲ್ಲಿ ಬಹು ಪ್ರವೀಣನಿದ್ದನು. ಸಮಸ್ಯಾ ಪೂರ್ತಿಯನ್ನು ಬಹುಬೇಗ ಮಾಡುತ್ತಿದ್ದನು. ಅವನು ತಾನುಮಾಡಿದ ಗ್ರಂಥಗಳಮೇಲೆ ತನ್ನ ಹೆಸರಿನ ಸ್ಥಳದಲ್ಲಿ "ಬ್ರಹ್ಮ" ಎಂಬ ಶಬ್ದವನ್ನು ಉಪಯೋಗಿಸುತ್ತಿದ್ದನು. ಅವನುಮಾಡಿದ ಪದ್ಯಗಳು ಅರ್ಥ ಗೌರವವುಳ್ಳವಾಗಿ, ಮನೋರಂಜನಯಾಗುವಂತೆ ಇರುತ್ತಿದ್ದವು. ಆದರೆ ಅವನು ಬರೆದ ಗ್ರಂಥಗಳು ಪ್ರಚುರವಲ್ಲಿ ಇಲ್ಲ. ಆದರೂ ಕೆಲಕೆಲವು ಪದ್ಯಗಳುಮಾತ್ರ ಕೇಳಿಕೆಯಲ್ಲಿರುವವು ಅವುಗಳಲ್ಲಿ ಒಂದೆರಡನ್ನು ಕೆಳಗೆ ವಿವರಿಸುದ್ದೇನೆ.

ಸವಾಯಿ.

" ಪೂತಕುಪೂತ ಕುಲಕ್ಷಣನಾರೀಲರಾಕ ಪರೋಸ ಲಜಾವ
ನಸಾರೋ । ಭಾಯಿಬ ಆದೀಖ ಹಿತೂ ಕಚಲಂಪಟ ಕಪಟೀ
ಮಿತ ಅತೀತ ಘುತಾರೋ। ಸಾಹುಬಸೂಮುಕಿಸಾನ ಕಠೋರಾ
ಔಮಾಲಿಕ ಚೋರದಿವಾನನಕಾರೋ। ಬ್ರಹ್ಮಭನ್ನೆಸುನುಶಾ
ಹ ಅಕಬ್ಬರ ಬಾರಹು ಬಾಂಧಿ ಸಮುದ್ರಮಿಡಾರೋ ॥೧॥
ಗರ್ಭಚರ್ಚಿಶುಸಿಸೂಪಚಢ ಪಲಸಾಪೃಚಢ ಚಢಗೋಢಘಸಾ
ಕೆ॥ ಹಾಥೀಚಢೀ ಫಿರ ಅಶ್ವಚಢೀ ಸುಖಪಾಲಚಢೀಚಢ ಜೋ
ಮಧಸಾಕ । ವೃರಿ ಔ ಮಿತ್ರಕಚಿತ್ರಚಢೀ ಕವಿಬ್ರಹ್ಮಭನ್ನೆದಿ
ನಬೀತಪಸಾಕ ॥ ಈಶ್ವರಪಾಲುಕೀ ಜಾನ್ಯೂನಹೀಅಬ
ಕಾಂಧಚಢ ಚಲಿಚಾರಜನುಕ ॥೨॥ ಜಬದಾಂತನಥ ತಬದೂ
ಧದಯೋ ಜಬದಾಂತಭಯತೋ ಅನಾಜಹುದ್ಯೆಹ್ಯೆ । ಜೀವ
ಬಸ್ಯೆಥಲ ಔ ಜಲಮು ತಿನಕೀ ಸುಥಲೀತ ಸೋತೋರಿಹುಲ್ಯೆ
ಹ್ಯೆ । ಕ್ಯೊ ಅಬ ಸೋಚಕರ್ಯೆ ಮನಮೂರಖ ಸೋಚಕರ್ಯೆಕು
ಛಹಾಥನಐಹ್ಯೆ ॥೩॥ ಯದ್ಯಪಿದ್ರವ್ಯಕೋ ಸೋಚಕರ್ಯೆ ಕಹು
ಗರ್ಬಮೆಕೇತೋ ಹೂಗಾಂಂಠಿತಖಾಯೋ । ಜಾಪನಜನ್ಮಲ
ಯೋಜಗಮೆಜಬಕೇತಿಕ ಕೋಟಿಲಿಯೆಸಗ ಆಯೋ । ವಾ
ಕೋಭರೋಸೋತ್ಯೋಖಾಡಿಅರೆಮನಜಾನೋಅಹಾರ ಅಚೇ
ತಮೆಪಾಯೋ । ಬ್ರಹ್ಮಭನ್ನೆಜನಿಸೋಚಕರ್ಯೆವಹಿ ಸೋಚಿ

ಹೈಜೋಬಿರುಲಾವ್ರಲಹಾಯೋ ॥ ೪ ॥

ನ್ಯಾಯಪರಾಯಣತೆಯು.

ರಾಜಾ ಬೀರಬಲನು ನ್ಯಾಯ ವಿಮರ್ಶೆಮಾಡುವದರಲ್ಲಿ ಅದ್ವಿತೀಯನಾಗಿದ್ದನು ಅವನುತನ್ನ ಬುದ್ಧಿಬಲದಿಂದ ಅಕಬರಬಾದಶಹನ ಮೇಲೆ ವರ್ಚಸ್ಸನ್ನುಂಟು ಮಾಡಿದ್ದನು ಒಂದೊಂದು ಸಮಯದಲ್ಲಿ ಬಾದಶಹನು ಇವನ ನ್ಯಾಯ ವಿಮರ್ಶೆಯಜಾಣತನವನ್ನು ಕಂಡು ಬೆರಗಾಗಿ ಹೋಗುತ್ತಿದ್ದನು.

" ಅಕಬರ ನಾಮಾ " ಎಂಬ ಗ್ರಂಥದಲ್ಲಿ ಹೀಗೆ ಉಲ್ಲೇಖವಿರುವದು, ಎಂತೆಂದರೆ " ಜಲೂನಿ ಸನ್ ೨೭ (ಸಂವತ್ ೧೬೩೮) ನೇದರಲ್ಲಿ ನೂತನ ವರುಷಾರಂಭದ ಉತ್ಸವದಲ್ಲಿ ಬಾದಶಹನು ತನ್ನ ಮುತ್ಸದ್ದಿಗಳನ್ನು ಕುರಿತು " ರಾಜಾ ಮತ್ತು ಪ್ರಜೆಗಳಿಗೆ ಹಿತನಾಗುವಂಥ ಒಂದೊಂದು ಸಂಗತಿಯನ್ನು ನಿವೇದಿಸಿರಿ " ಎಂದು ಅಪ್ಪಣೆಯನ್ನಿತ್ತನು ಆ ಸಮಯದಲ್ಲಿ ರಾಜಾ ಬೀರಬಲನು ನಿವೇದಿಸಿದ್ದೇನಂದರೆ " ನ್ಯಾಯ ವಿಮರ್ಶೆಮಾಡತಕ್ಕ ಮನುಷ್ಯನು ಯಾವಾಗಲೂ ಪ್ರಜೆಗಳಲ್ಲಿ ಕೂಡಿಕೊಂಡು ಹೋಗತಕ್ಕದ್ದು; ಅಂದರೆ- ಪ್ರಜೆಗಳು ತಮಗೆ ಉಂಟಾಗುವ ಸುಖದುಃಖಗಳನ್ನು ನಿರ್ಭಯದಿಂದ ಹೇಳಬಡುವರು" ಎಂದು ಹೇಳಿದ ಬೀರಬಲನ ಯುಕ್ತಿ ಯುಕ್ತವಾದ ಮಾತುಗಳಿಂದ ಬಾದಶಹನು ಪ್ರಸನ್ನನಾಗಿ ಆ ಕೆಲಸವನ್ನು ಬೀರಬಲನಿಗೆ ಒಪ್ಪಿಸಿದನು. ಮುಂದೆ ಎರಡು ವರುಷಗಳಾದ ಮೇಲೆ " ಕಾಸಮಖಾ, ಹಕೀಮ ಹಮಾಮ. ಮತ್ತು ಶಮಶೇರಖಾ, ಕೊತವಾಲ, ಅಬುಲಫಜಲ್ ಮೊದಲಾದ ಕಾರಭಾರಿಗಳನ್ನು ಬೀರಬಲನ ಅಂಕಿತರನ್ನಾಗಿ ಮಾಡಿ ಅವರಿಗೆ ಆಜ್ಞಾಪಿಸಿದ್ದೇನಂದರೆ- " ಶಪಥ ಮತ್ತು ಸಾಕ್ಷಿಗಳಮೇಲೆ ವಿಶ್ವಾಸವನ್ನಿಡದೆ ಕುಶಾಗ್ರಬುದ್ಧಿಯಿಂದಲೂ ಅನುಭವದಿಂದಲೂ ನ್ಯಾಯ ವಿಮರ್ಶೆಯನ್ನು ಮಾಡಿರಿ ಮತ್ತು ಅಭಿಯೋಗಿಗಳ ವಿಚಾರಣೆ ಮಾಡುವದರಲ್ಲಿ ಅಧಿಕ ಕಾಲಹರಣ ಮಾಡಬೇಡಿರಿ;-

ನ ಡಾ ವ ಳಿ.

ಬೀರಬಲನ ಸ್ವಭಾವವು ಬಹಳ ಉತ್ತಮವಾದದ್ದಿತ್ತು ಜನರನ್ನು ಒಲಿಸಿಕೊಳ್ಳುವದರಲ್ಲಿ ಯಂತೂ ಅಪ್ರತಿಮನಾಗಿದ್ದನು ಇವನು ಬಾದಶಹನ ದರಬಾರದಲ್ಲಿ ಉಚ್ಚಪದವಿಯನ್ನು ಹೊಂದಿ ಸದ್ವ್ಯವಹಾರದಿಂದ ವರ್ತಿಸಿ ಪ್ರಜೆಗಳಿಗೆಲ್ಲರಿಗೂ ಮಹದುಪಕಾರವನ್ನು ಮಾಡಿದನು. ಸಮಯೋಚಿತವಾದ ಸಂಭಾಷಣೆಗಳನ್ನು ಮಾಡುವವರಲ್ಲಿ ಇವನ ಹೆಸರು ಪ್ರಥಮದಲ್ಲಿತ್ತು, ಬ್ರಾಹ್ಮಣರಿಗೆ ಎಷ್ಟೋಗ್ರಾಮಗಳಲ್ಲಿ " ಚೌಥಾಯಿ " ಎಂಬ ಹಕ್ಕನ್ನು ಕೊಡಿ

ಸಿದನು ಗೋವಧೆಯನ್ನು ನಿಲ್ಲಿಸಿದನು ಹಿಂದುಮುಸಲ್ಮಾನರಲ್ಲಿ ಇದ್ದದ್ವೇಷ ಬುದ್ಧಿಯನ್ನು ಕಡಿಮೆ ಮಾಡಿದನು ಇದರಿಂದ ಎರಡೂ ಪಕ್ಷದವರಲ್ಲಿಯ ವೈರಭಾವವು ನಿರ್ಮೂಲವಾಗಿ ಹೋಯಿತು ಯಾವತ್ತೂ ಭಾರತ ವರ್ಷದಲ್ಲಿ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿತ್ತು.

ದಾತೃತ್ವ.

ಅಕಬರ ಬಾದಶಹನ ಕಾಲದಲ್ಲಿ ಬೀರಬಲನು ದಾತೃಗಳಲ್ಲಿ ಮೇಲಾದವನೆಂದು ಖ್ಯಾತಿಗೊಂಡಿದ್ದನು. ಹಿಂದುಗಳಲ್ಲಿಯಂತೂ ಅನೇಕ ಕವಿಗಳು ಇವನ ದಾತೃತ್ವವನ್ನು ವರ್ಣಿಸಿದ್ದಾರೆ ಇಷ್ಟೇ ಅಲ್ಲ; ಮುಸಲ್ಮಾನ ಕವಿಗಳು ರಚಿಸಿದ ಅನೇಕ ಗ್ರಂಥಗಳಲ್ಲಿ ಇವನ ದಾತೃತ್ವವು ವರ್ಣಿಸಲ್ಪಟ್ಟದೆ. "ಮುಆಸಿರುಲ್ ಉಮರಾ" ಎಂಬ ಗ್ರಂಥದಲ್ಲಿ ಬರೆದಿರುವದೇನಂದರೆ;— "ರಾಜಾ ಬೀರಬಲನು ಆ ಕಾಲದಲ್ಲಿ ದಾನಿಗಳೆಂದುಖ್ಯಾತಿಗೊಂಡವರಲ್ಲಿ ಮೊದಲನೆಯವನೆಂದೂ, ಪಾರಿತೋಷಕ, ಮತ್ತು ಉಪಹಾರಗಳನ್ನು ಕೊಡುವದರಲ್ಲಿ ಪ್ರಸಿದ್ಧನಾಗಿದ್ದನೆಂದೂ ವರ್ಣಿಸಿದ್ದಾರೆ" ಆಕಾಲದಲ್ಲಿದ್ದ ಕವಿಗಳು ಇವನ ಉದಾರತ್ವವನ್ನು ಅತ್ಯಧಿಕವಾಗಿ ಪ್ರಶಂಸೆ ಮಾಡಿದ್ದಾರೆ ಗಂಗಕವಿಯೆಂಬವನು ಈಪ್ರಕಾರ ವರ್ಣಿಸಿದ್ದಾನೆ.

ಶ್ಲೋಕ॥ ದಿಲ್ಲೀಸೆನ ತಖ್ತ ಬಖ್ತ ಮುಗಲನಸೆ ಹೋಯೇಹೈ । ಹೋ
ಯೇಹೈ ನಗರ ನಕಹೂ ಅಗದೆ ನಗರಸೆ । ಖಾನನಮೆ ಖಾನ
ಖಾನಾ ರಾಜನಮೆ ರಾಜಾ ಮಾನ, ಹೌಹೈನ ಬಜೀರ ಕಹೂಁ
ಟನಡನ ಟೋಡರಸೆ । ಕವಿಗಂಗಸೆ ಗುನೀ ನತಾನಸೇನ ತಾ
ನಧಾರೀ, ಬೂಚನಸೆ ನಕಾನುಗೊ ನದಾತಾ ಬೀರಬರಸೆ
ಸಾತದ್ವೀಪಕೆ ಮಁಝೂರ ಸಾತಹೂ ಸಮುಂದ್ರಪಾರ ಹೌಹೈ
ನಜಲಾಲ ದೀನ ಗಾಜೀ ಅಕಬರಸೆ ॥

ಕೇಶವದಾಸನೆಂಬ ಕವಿಯು ಉಚ್ಛ್ರಾ ಪಟ್ಟಣದ ಅರಸನಾದ ಇಂದ್ರಜಿತನೆಂಬವನ ಓಲಗದಲ್ಲಿದ್ದನು ಅವನು ಯಾವದೋ ಒಂದು ಕಾರ್ಯದ ನಿಮಿತ್ತವಾಗಿ ಅಕಬರ ಬಾದಶಹನ ಓಲಗಕ್ಕೆ ಬಂದಿದ್ದನು ಆಗ ಕೇಶವದಾಸನಿಗೆ ದ್ರವ್ಯದ ಅನಾನುಕೂಲತೆಯುಂಟಾಯಿತು ಆಗ ಅವನು ಬೀರಬಲನ ಹತ್ತರ ಕೇಳಬೇಕೆಂದು ಬಂದನು ಆಗ ಬೀರಬಲನು ತನ್ನ ಗೃಹದ ಹಿಂಭಾಗದಲ್ಲಿ ಕುಳಿತುಕೊಂಡಿದ್ದನು ಆಗ ಕೇಶವದಾಸನಿಗೆ ಹೇಳಿ ಕಳುಹಿಸಿದ್ದೇನಂದರೆ;- "ತಿರುಗಿ ಬರಬೇಕು, ಯಾಕಂದರೆ ನನಗೆ ಈಗ ಅಜೀರ್ಣವಾಗ ಹತ್ತಿದೆ, ಆದ್ದರಿಂದ ಹೊರಗೆ ಬರುವದಕ್ಕೆ ಅನುಕೂಲ್ಯವಿಲ್ಲ,, ಕೇಶವ ದಾಸನು

ಈ ಮಾತನ್ನು ಕೇಳಿ ಈ ಕೆಳಗೆ ಬರೆವ "ದೋಹಾ" ಹೇಳಿದನು.

" ಯಶಜಾರ್‌ಯೋ ಸಬ ಜಗತ್‌ಕೋ, ಭಯೋ ಆಜೀರನ
ತೋಯ, ಅಪಯಶಕೀ ಗೋಲೀ ದೇಗೊ ತತಕಾಲಹಿ ಶುಧ
ಹೋಯ ॥ ೧ ॥

ಈ ಮೇಲೆ ಬರೆದ ಕವಿತ್ವವನ್ನು ಓದಿಕೊಂಡ ಕೂಡಲೆ ಬೀರಬಲನುಹೊರಗೆ ಬಂದನು ಕೇಶವದಾಸನು ಅವನನ್ನು ನೋಡಿದ ಕೂಡಲೆ ಈ ಸವಾಯಿಯನ್ನು ಹೇಳಿದನು.

" ಭೂ ರವಿ ಪಚ್ಛಿಬಸೂ ನದನಾಗೆ ನವೀನವ ಲೋಕರಚೆ ದಶ
ಚಾರೀ । ಕೇಶವ ದೇವ ಅದೇವರಚೆ ನರದೇವರಚೆ ರಚನಾನಿ
ವಾರೀ ರಚಿಕೆ ನೃಪನಾಥ ಬಲೀ ಬಲಬೀರ ಭಯೋಕೃತಕೃತ್ಯ
ಮಹಾ ವೃತಧಾರೀ।ದೈಕರತಾರಪನೋ ಕರತೋಹಿಪ ಈ ಕ
ರತಾರದುಹೂಕರತಾರೀ ॥

ಈ ಪ್ರಕಾರ ಕೇಶವದಾಸನ ಕವಿತ್ವವನ್ನು ಕೇಳಿ ರಾಜಾ ಬೀರಬಲನು ಪ್ರಸನ್ನನಾಗಿ ತನ್ನ ಹತ್ತರ ಬರೆದು ಇಟ್ಟುಕೊಂಡಿದ್ದ ಆರುಕ್ರೋಡದಾಮು (ಹನ್ನೆರಡುವರಿಲಕ್ಷ ರೂಪಾಯಿಯ) ಹುಂಡೀ ಕಾಗದವನ್ನು ಆ ಕವೀಶ್ವರನಿಗೆ ಕೊಟ್ಟು ಬಿಟ್ಟನು. ಆಗ ಆಕವಿಯು ಎರಡನೇ ಸವಾಯಿಯನ್ನು ಹೇಳಿದನು.

" ಕೇಶವದಾಸಕೆ ಭಾಲ ಲಿಖ್ಯೋವಿಧಿ, ರಂಕಕೊ ಅಂಕಬನಾ
ಯ ಸವಾರ್‌ಯೊ । ಧೊಯೆಧುಪ್ಯೋ ನಹಿಛೋಡೆ ಛುಟ್ಯೋ
ಬಹುತೀರಥಕೆ ಜಲಜಾಯ ಪಖಾರ್‍ಯೋ । ಹ್ವೈಗಯೋ ರಂ
ಕಕೊ ರಾವ ತಬೈಜಬ ಬೀರಬಲೀ ನೃಪನಾಥನಿಹಾರ್‍ಯೋ ।
ಭೂಲಿಗಯೊ ಜಗಕೀ ರಚನಾ, ಚತುರಾನನ ಬಾರಿ ರಹ್ಯೋ
ಮುಖಚಾರ್‌ಯೋ ॥ ೧ ॥

ರಾಜಾ ಬೀರಬಲನು ದಿವಂಗತನಾಗಲು, ಆಕಾಲದಲ್ಲಿ ದುಃಖಿತರಾದ ಕೆಲವು ಕವಿಗಳು, ಕೆಲವು "ಮರ್ಸಿ" ಎಂಬ ಕವಿತೆಗಳನ್ನು ಮಾಡಿದ್ದಾರೆ. ಅವುಗಳಲ್ಲಿಸಹಾ ಬೀರಬಲನ ದಾತೃತ್ವವನ್ನು ವರ್ಣಿಸಿದ್ದಾರೆ. ಸ್ವತಃ ಅಕಬರ ಬಾದಶಹನು ರಚಿಸಿದ " ಮರ್ಸಿ " ಗಳಲ್ಲಿ ಪ್ರಥಮ ದೋಹಾದಲ್ಲಿ ಈಪ್ರಕಾರ ವರ್ಣವು ಬಂದಿರುವದು ಕವಿಕೇಶವದಾಸನು ಸ್ಪಷ್ಟವಾಗಿ ತನ್ನ ಕವಿತ್ವದಲ್ಲಿ ಹೇಳಿದ್ದಾನೆ. ಬೀರಬಲನ ಮರಣದಿಂದ ದರಿದ್ರರಾದವರ ಗೃಹದಲ್ಲಿ ಸಹಾ ಶೋಕವು ಕೇಳಿ ಬರಹತ್ತಿತು ಆಶೋಕೋಕ್ತಿಗಳು ಈ ಪ್ರಕಾರ ವಿರುವವು.

ಸ ವಾ ಯಿ.

"ಪಾಪಕೆ ಮಂಜ ಪಖಾವಜ ಕೇಶವ, ಶೋಕಕೆ ಶಂಖ ಸುನೆ ಸುಖಮಾಮೆ । ಝೂಠಕೀ ಝಾಲರ ಝಾಂಝು ಅಲೋಕಕೀ, ಕೌತುಕ ಭೋಕಲಿಕೆ ಶುರಮಾಮೆ । ಭೇದಕಿ ಭೇರಿ ಬಡೆ ಡರಕೇ ಡಫ ಆವಜ ಯುತ್ಥನಜಾನೀ ಜಮಾಮೇ । ಜಾಝು ತಹೀ ಬಲಬೀರ ಬಜೇಬಹು ದಾರಿದಕೆ ಪರಬಾರ ನಮಾಮೆ ॥ ೧ ॥

ರಾಜಾ ಬೀರಬಲನ ಈಪ್ರಕಾರದ ಉದಾರತೆಯ ವರ್ಣನವನ್ನು ಕೇಳಿ ಮನಸ್ಸಿನಲ್ಲಿ ಒಂದು ಪ್ರಕಾರದ ಸಂದೇಹ ವುಂಟಾಗುತ್ತದೆ ಏನಂದರೆ "ರಾಜಾ ಬೀರಬಲನು ವಂಶ ಪರಂಪರಾಗತವಾಗಿ ನಡೆದು ಬಂದ ಅಮೀರರ ವಂಶದವನಲ್ಲ; ಬಾದಶಹನು ಕೇವಲಪ್ರೀತನಾಗಿ ರಾಜನೆಂಬ ಪದವಿಯನ್ನು ಕೊಟ್ಟಿದ್ದನು ಅವನಿಗೆ ಎರಡು ಸಾವಿರ ಸವಾರರನ್ನು ಇಟ್ಟುಕೊಳ್ಳುವಷ್ಟು ಮನಸಬದಾರಿಯಿತ್ತು ಈ ಸವಾರರಖರ್ಚು ನಡಿಸುವದು ಅಸಾಮಾನ್ಯರ ಕೆಲಸವಲ್ಲ ಹೀಗಿದ್ದು ಒಂದೊಂದು ಸಮಯದಲ್ಲಿ ಆರು ಆರು ಕರೋಡ ರೂಪಾಯಿಗಳನ್ನು ಕೇಶವದಾಸನಂಥ ಕವಿಗಳಿಗೆ ಕೊಡುವದೆಂದರೆ ಎಂಥ ಆಶ್ಚರ್ಯದಸಂಗತಿಯು ! ಆದರೆ ಈ ಸಂಗತಿಯು ಅಸಂಭಾವ್ಯವಾದದಲ್ಲ: ರಾಜಾಬೀರಬಲನಿಗೆ ಎರಡು ಸಾವಿರ ಸವಾರರ ಮನಸಬದಾರಿ ಇದ್ದದ್ದಲ್ಲದೆ ಬಾದಶಹನ ಕೃಪಾಛತ್ರವು ಇವನ ಮೇಲೆ ಪೂರ್ಣವಾಗಿತ್ತು ಬಾದಶಹನು ಇವನಹೇಳಿಕೆಯಂತೆಯೇ ವರ್ತಿಸುತ್ತಿದ್ದನು ತನ್ನ ಮನಸ್ಸಿಗೆ ಬಂದದ್ದನ್ನು ಮಾಡಲು ಪೂರ್ಣಸಮರ್ಥನಾಗಿದ್ದನು. "ಮುಂತಖಿಬುಲ್ ಲುಬಾಬ" ಎಂಬಗ್ರಂಥದಲ್ಲಿ ಬರೆದಿರುವದೇನಂದರೆ—"ರಾಜಾಬೀರಬಲನಿಗೆ ಎರಡುಸಾವಿರ ಮನಸಬದಾರಿಯಿತ್ತು ಆದರೆ ಅವನು ತನ್ನ ಚಾತುರ್ಯದಿಂದಲೂ ಸಮಯೋಚಿತ ಉತ್ತರವನ್ನು ಕೊಡುವ ನೈಪುಣ್ಯದಿಂದಲೂ ಬಾದಶಹನ ಮನಸ್ಸನ್ನು ಪೂರ್ಣವಾಗಿ ಒಲಿಸಿಕೊಂಡು ಬಿಟ್ಟಿದ್ದನು ಇದರಿಂದ ಪ್ರತಿಮಾಸದಲ್ಲಿ ಲಕ್ಷ ಲಕ್ಷ ರೂಪಾಯಿಗಳನ್ನು ಪಾರಿತೋಷಕವಾಗಿ ತೆಗದುಕೊಳ್ಳುತ್ತಿದ್ದನು ಮತ್ತು ದೂರ ದೂರಿನ ಅಮೀರ ಉಮರಾವರು ಬಹು ಮೂಲ್ಯವಾದ ಕಾಣಿಕೆಗಳನ್ನು ಕಳುಹಿಸಿ ಕೊಡುತ್ತಿದ್ದರು ಇದಲ್ಲದೆ ಬಾದಶಹನ ರಾಣೀವಾಸದಿಂದ ಸಹಾ ಅನರ್ಘ್ಯವಾದ ಪಾರಿತೋಷಕಗಳು ಮೇಲಿಂದ ಮೇಲೆ ಬರುತ್ತಿದ್ದವು.

ಬೀರಬಲನ ಸಂತತಿ.

ರಾಜಾ ಬೀರಬಲನಿಗೆ ಎಷ್ಟುಮಂದಿ ಮಕ್ಕಳಿದ್ದರೆಂಬ ಸಂಗತಿಯು ನಿಶ್ಚಯಾತ್ಮಕವಾಗಿ ತಿಳಿದು ಬರುವದಿಲ್ಲ ಆದರೆ ಅಕಬರ ಮತ್ತು ಜಹಂಗೀರ ಇವರ ಚರಿತ್ರಗಳಲ್ಲಿ ಲಾಲಾ ಮತ್ತು ಹರಿಹರರಾಯ ಎಂಬ ಈರ್ವರು ಪುತ್ರರು ಇದ್ದಂತೆ ವ್ಯಕ್ತವಾಗುತ್ತದೆ "ಅಕಬರನಾಮಾ" ಎಂಬಗ್ರಂಥದಲ್ಲಿ ಲಾಲಾನ ವಿಷಯವಾಗಿ ಈ ಪ್ರಕಾರ ಉಲ್ಲೇಖವಿರುವದು "ಲಾಲಾನು ತನ್ನ ಆದಾಯಕ್ಕಿಂತ ಹೆಚ್ಚು ವ್ಯಯವನ್ನು ಮಾಡುತ್ತಿದ್ದನು ಇದರಿಂದ ಸ್ವಲ್ಪ ದಿವಸಗಳಲ್ಲಿಯೇ ದಿಲ್ಲಿಯನ್ನು ಬಿಟ್ಟು ಹೊರಟು ಹೋಗುವ ಪ್ರಸಂಗ ವುಬಂತು ಆದರಿಂದ ಅವನು ಬಾದಶಹನ ಅಪ್ಪಣೆಯನ್ನು ಪಡೆದು ಸನ್ ೪೭ ಜುಲೂಸೀ (ಸಂವತ್ ೧೬೫೮) ನೇದರಲ್ಲಿ ಪ್ರಯಾಗಕ್ಕೆಹೋಗಿ ಅಲ್ಲಿ ಜಹಾಂಗೀರನ ಆಶ್ರಯದಲ್ಲಿ ಇರಹತ್ತಿದನು.

ಹರಿಹರ ರಾಯನು ಬಾದಶಹನ ಸೇವೆಯಲ್ಲಿಯೇ ಇದ್ದನು ಇವನು ಒಂದುಸಾರೆ ಸನ್ ೪೮ ಜುಲೂಸೀ (ಸಂವತ್ ೧೬೫೯)ನೇ ವರುಷ ಆಗ್ರಾದಿಂದ ದಕ್ಷಿಣಕ್ಕೆ ಹೊರಟಿರುವ ಶಹಾಜಾದಾ ದಾನಿಯಲನಕೂಡ ಹೋದಂತೆ ಕಂಡು ಬರುತ್ತದೆ.

ರಾಜಾ ಬೀರಬಲನ ರಾಣೀ ಜನರು.

ರಾಜಾ ಬೀರಬಲನ ಮರಣಾನಂತರ ಬಾದಶಹನು ಬೀರಬಲನ ಹೊಟ್ಟೆಯ ಗಂಡು ಮಕ್ಕಳಲ್ಲಿ ಸುಸಂಸ್ಕೃತನಾದವನನ್ನು ಕುರಿತು "ಬೀರಬಲನ ಸಂಗಡ ಎಷ್ಟುಜನರಾಣಿಯರು ಸತಿಹೋದರು?" ಎಂದು ಪ್ರಶ್ನೆಮಾಡಿದನು ಆಗ ಅವನು—"ವೀರತಾಬುದ್ಧಿವಂತಿಕೆ, ಉದಾರತಾ, ಎಂಬ ಮೂರುಜನ ಸತಿಯರು ಸಹ ಗಮನಮಾಡಿದರು ಕೀರ್ತಿಎಂಬ ಸ್ತ್ರೀಯುಮಾತ್ರ ಬದುಕಿರುವಳು." ಎಂದು ಉತ್ತರಕೊಟ್ಟನು. ಬಾದಶಹನು ಅವನಉತ್ತರವನ್ನುಕೇಳಿ ಸಂತುಷ್ಟನಾಗಿ ಅಂದದ್ದೇನಂದರೆ—"ನೆಟ್ಟಗಾಯಿತು ಅವಳು ಇರಲಿಕ್ಕೇಬೇಕು ಯಾಕಂದರೆ ಅವಳು ಹೋಗಿ ಬಿಟ್ಟದ್ದರೆ ದೋಷವು ಬರುತ್ತಿತ್ತು.

ಬೀರಬಲನ ಉಪದೇಶಪರ, ಮತ್ತು ಹಾಸ್ಯರಸೋತ್ಪಾದಕ ಸಣ್ಣ ಸಣ್ಣ ಕಥೆಗಳು.

ಇವನ ಸ್ವಭಾವದಲ್ಲಿ ಹಾಸ್ಯವು ಮನಪ್ರಸನ್ನಮಾಡಿ ಬಿಡುವಂಥ ಮಾತುಗಳೂ, ಲಮಯೋಚಿತ ಉತ್ತರಗಳನ್ನು ಕೊಡುವಂಥ ಶಕ್ತಿಯೂ ಅವರ್ಣನೀಯವಾಗಿತ್ತು ಇವನ ಉಪದೇಶಪರವಾದ ವಾಕ್ಯಗಳೂ, ಮನ

ಸ್ಪನ್ನು ಪ್ರಸನ್ನವಾಗಿ ಮಾಡಿಬಿಡುವಂಥ ಸಣ್ಣ ಸಣ್ಣ ಹಾಸ್ಯರಸೋತ್ಪಾದಕ ಕಥೆಗಳೂ, ಸಮರ್ಪಕವಾಗಿ ಕೇಳಿದಪ್ರಶ್ನೆಗೆ ಉತ್ತರಕೊಟ್ಟಂಥ ಸಂಗತಿಗಳೂ, ಈ ಭಾರತವರ್ಷದ ಪ್ರತಿಯೊಂದು ಜನವಸತಿಯಲ್ಲಿ ಪ್ರಸಿದ್ಧವಾಗಿವೆ ಈ ಪುಸ್ತಕದಲ್ಲಿ ಬೀರಬಲನ ಉಪದೇಶಪರವಾದ ನೀತಿ ರಸಭರಿತವಾದ ನಗಿಯನ್ನು ಹುಟ್ಟಿಸುವ ಅನೇಕ ಸಂಗತಿಗಳನ್ನು ವರ್ಣಿಸಿದ್ದೇನೆ ಬೀರಬಲನಿಗೆ ಸರಸ್ವತೀದೇವಿಯು ಪ್ರಸನ್ನಳಾಗಿದ್ದಳೆಂದೂ ಅವನಬುದ್ಧಿಗೆ ಹರಿಯದೆ ಇದ್ದ ಸಂಗತಿಗಳನ್ನು ತಾನು ಸ್ವತಃ ತಿಳಿಸಿ ಇವನಮುಖದಿಂದ ಹೊರಬೀಳಿಸುತ್ತಿದ್ದಳೆಂದೂ ಜನರಲ್ಲಿ ವಾಡಿಕೆಯುಂಟು ಒಂದುಸಾರೆ ಬಾದಶಹನು ಒಂದು ಜಲಭರಿತವಾದ ಜಲಾಶಯವನ್ನು ಕಂಡು “ಬೀರಬಲ ಇದರಲ್ಲಿ ಏನು ತುಂಬಿದೆ?” ಎಂದು ಪ್ರಶ್ನೆಮಾಡಿದನು ಅದಕ್ಕೆ ಬೀರಬಲನ ತತ್‌ಕ್ಷಣದಲ್ಲಿ “ಮಳಲು ತುಂಬಿದೆ” ಎಂದು ಹೇಳಿಬಿಟ್ಟನು ಈ ಮಾತನ್ನು ಸತ್ಯವನ್ನಾಗಿಮಾಡಿ ತೋರಿಸಬೇಕೆಂದು ತಿಳಿದು ಸರಸ್ವತೀದೇವಿಯು ಅ ಜಲಾಶಯದಲ್ಲಿದ್ದ ಜಲವನ್ನೆಲ್ಲ ಶೋಷಿಸಿ, ಮಳಲನ್ನು ಉಂಟುಮಾಡಿ ತೋರಿಸಿದಳು ಆ ದಿವಸದಿಂದ ಸರಸ್ವತೀದೇವಿಯು ಬೀರಬಲನಮೇಲೆ ಅಪ್ರಸನ್ನತೆಯುಳ್ಳವಳಾಗಿ ಇವನ ಮಗಳ ಮುಖದಿಂದ ಬೀರಬಲನಿಗೆ ತಿಳಿಯದೆ ಇದ್ದ ಮಾತುಗಳನ್ನು ಹೇಳಿಸುತ್ತಿದ್ದಳಂತೆ.

ಬೀರಬಲನ ವಿಷಯದಲ್ಲಿ ಉಂಟಾದ ಆಕ್ಷೇಪಗಳ ನಿರ್ಣಯ.

ಎಷ್ಟೋ ಜನ ಅಲ್ಪಬುದ್ಧಿಗಳಾದ ಮುಸಲ್ಮಾನರು ತಮ್ಮ ಮತಾನುಯಾಯಿಗಳನ್ನು ಪ್ರಸನ್ನೀಕರಿಸಿ ಕೊಳ್ಳುವದಕ್ಕಾಗಿ, “ಮುಲ್ಲಾದುಪ್ಯಾಜಿ” ಎಂಬವನು ಬೀರಬಲನನ್ನು ಮಾತಿನಲ್ಲಿ ಸೋಲಿಸಿರುವನೆಂದು ಹೇಳುತ್ತಾರೆ ಆದರೆ ಈ ಸಂಗತಿಯು ಪೂರ್ಣ ನಿರಾಧಾರವಾಗಿದೆ ಯಾಕಂದರೆ ಅಕಬರ ಬಾದಶಹನಕಾಲದಲ್ಲಿಯ ಯಾವಗ್ರಂಥಗಳಲ್ಲಿಯೂ “ಮುಲ್ಲಾದುಪ್ಯಾಜಾ” ಎಂಬ ಮನುಷ್ಯನ ನಾಮನಿರ್ದೇಶವೇ ಇರುವದಿಲ್ಲ.

ಶ್ರೀರಸ್ತು.

ಅಕಬರ ಬೀರಬಲ

ಚಾತುರ್ಯವಾದ ವಿನೋದ ಕಥೆಗಳು.

೧. ಚಾತುರ್ಯದಿಂದ ದೇವರನ್ನು ಗುರುತಿಸಬೇಕು.

ಅಕಬರ ಬಾದಶಹನ ಕಾಲದಲ್ಲಿ ಒಬ್ಬಾನೊಬ್ಬ ಚಿತ್ರಕಾರನು ಚಿತ್ರಕಲೆಯಲ್ಲಿ ಒಳ್ಳೇ ನಿಪುಣತೆಯನ್ನು ಹೊಂದಿದ್ದನು. ಪ್ರತಿಯೊಂದು ಭಾವಪಟವನ್ನು ಸಿದ್ಧಪಡಿಸಬೇಕಾದರೆ ಐದುಸಹಸ್ರ ರೂಪಾಯಿಗಳ ಬೆಲೆಯನ್ನು ಹೇಳುತ್ತಿದ್ದನು. ಇವನ ಚಾತುರ್ಯವನ್ನು ಪರೀಕ್ಷಿಸಬೇಕೆಂದು ದೇವರು ಸಾವುಕಾರನ ವೇಷವನ್ನು ಧರಿಸಿಕೊಂಡು, ಆ ಚಿತ್ರಕಾರನ ಬಳಿಗೆ ಬಂದು ನುಡಿದದ್ದೇನಂದರೆ;- " ನೀನು ನನ್ನ ಭಾವಚಿತ್ರವನ್ನು ನನ್ನ ಪ್ರತಿಯೊಂದು ಅವಯವವಿದ್ದಂತೆ ಬರೆದು ಕೊಟ್ಟರೆ ನಿನಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಕೊಡುತ್ತೇನೆ " ಎಂದು ಹೇಳಿದನು ಆಗ ಚಿತ್ರಕಾರನು ಆ ಸಾವುಕಾರನ ಮಾತಿಗೆ ಸಂತೋಷದಿಂದ ಒಪ್ಪಿಕೊಂಡನು ಮುಂದೆ ಸ್ವಲ್ಪದಿವಸಗಳ ಮೇಲೆ ಒಂದು ಚಿತ್ರವನ್ನು ಬರೆದುಕೊಂಡು ಬಂದು ಆಸಾವುಕಾರನಿಗೆ ತೋರಿಸಿದನು. ಆಗ ಆಸಾವುಕಾರನು ತನ್ನ ಭಾವ ಚಿತ್ರವನ್ನು ಪರೀಕ್ಷಿಸ ಹತ್ತಲು ಒಂದು ಕಿವಿಯು ಸ್ವಲ್ಪ ಉದ್ದವಾಗಿದ್ದಂತೆ ಕಂಡು ಬಂತು ಕೂಡಲೆ ಇದು ಸರಿಯಾಗಿ ಇಲ್ಲವೆಂದು ಹೇಳಿ ಅದರೊಳಗಿನ ನ್ಯೂನತೆ

ಯನ್ನು ತೋರಿಸಿದನು ಆಗ ಚಿತ್ರಕಾರನು ಹಿಂದಕ್ಕೆ ಹೋಗಿ ನಾಲ್ಕಾರು ದಿವಸದಲ್ಲಿ ಮತ್ತೊಂದು ಭಾವಪಟವನ್ನು ಬರೆದುಕೊಂಡು ಬಂದನು ಆಗ ಆ ಸಾವುಕಾರನು ಅದನ್ನು ನಿರೀಕ್ಷಿಸಹತ್ತಲು ಕೈಗಳಲ್ಲಿಸ್ವಲ್ಪ ಹೆಚ್ಚುಕಡಿಮೆ ಯುಂಟಾಗಿದ್ದಂತೆ ಕಂಡು ಬಂತು ಕೂಡಲೆ ಆಪಟವನ್ನು ಚಿತ್ರಕಾರನಿಗೆ ಕೊಟ್ಟನು ಈಪ್ರಕಾರ ಚಿತ್ರಕಾರನು ಅತಿಪ್ರಯಾಸ ಪಟ್ಟು ಸಿದ್ಧ ಪಡಿಸಿ ಕೊಂಡು ಬಂದಂಥ ಭಾವಚಿತ್ರದಲ್ಲಿ ಯಾವದಾದರೊಂದು ನ್ಯೂನತೆಯನ್ನು ತೋರಿಸ ಹತ್ತಲು. ಚಿತ್ರಕಾರನು ಉತ್ಸಾಹ ಹೀನನಾಗಿ ತನಗೆ ಅಪಯಶ ಸ್ಸುಂಟಾಗುವದೆಂಬ ಭೀತಿಯಿಂದ ಯಮುನಾನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ನಿಶ್ಚಯದಿಂದ ಯಮುನಾ ತಟಾಕಕ್ಕೆ ಹೋದನು. ಆಗ ದೈವಸಂಕಲ್ಪದಿಂದ ಬೀರಬಲನೆಂಬ ಒಬ್ಬ ಬಡಬ್ರಾಹ್ಮಣನು ಅಲ್ಲಿಗೆಬಂ ದನು. ವ್ಯಾಕುಲ ಚಿತ್ತನಾದ ಚಿತ್ರಕಾರನನ್ನು ಕಂಡು ಬೀರಬಲನು "ಎಲೈ ಸದ್ಗೃಹಸ್ಥನೇ ನೀನು ಇಲ್ಲಿ ಈಪರಿ ಉದಾಸೀನನಾಗಿ ಕುಳಿತ ಕಾರಣವೇ ನು?" ಎಂದು ಪ್ರಶ್ನೆಮಾಡಿದನು ಆಗ ಚಿತ್ರಕಾರನು ತನ್ನ ಸಮಗ್ರವೃ ತ್ತಾಂತವನ್ನು ಹೇಳಿದನು ಅದಕ್ಕೆ ಬೀರಬಲನು "ನೀನು ಏನೂ ಚಿಂತೆಮಾ ಡಬೇಡ ನಾನು ಆಸಾವುಕಾರನ ಇಚ್ಛಾನುಸಾರವಾಗಿ ಒಂದು ಚಿತ್ರವನ್ನು ಬರೆದು ಕೊಡುವೆನು ನನಗೆ ಒಂದು ಸಾರೆ ಆ ಸಾವುಕಾರನನ್ನು ತೋರಿಸು ಎಂದು ಹೇಳಿದನು.

ಬೀರಬಲನ ಮಾತಿಗೆ ಆಚಿತ್ರಲೇಖಕನು ಸಂತೋಷದಿಂದ ಸಮ್ಮತಿಸಿ ಅವನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಆಸಾವುಕಾರನ ಬಳಿಗಹೋ ಗಹತ್ತಿದನು ಆಗ ಬೀರಬಲನು ಪೇಟೆಯಲ್ಲಿ ಒಂದು ದರ್ಪಣವನ್ನು ಕ್ರಯ ಕ್ಕೆ ತಗೆದುಕೊಂಡು ಚಿತ್ರಕಾರನ ಬೆನ್ನು ಹತ್ತಿದನು ಇವರಿಬ್ಬರು ಆಸಾವು ಕಾರನ ಮನೆಯನ್ನು ಹೊಕ್ಕ ಕೂಡಲೆ ಅವನು ಇವರನ್ನು ನೋಡಿ "ಭಾ ವಪಟವು ಸಿದ್ಧವಾಯಿತೋ?" ಎಂದು ಪ್ರಶ್ನೆಮಾಡಿದನು ಆಗ ಬೀರಬಲನು ಮುಂದೆ ಬಂದು "ಅಹುದು. ಸಿದ್ಧವಾಗಿದೆ" ಎಂದು ಉತ್ತರ ಕೊಟ್ಟು ತಾ ನು ತೆಗೆದು ಕೊಂಡು ಬಂದ ದರ್ಪಣವನ್ನು ಆಸಾವುಕಾರನ ಎದುರಿಗೆ ಹಿಡಿ ದನು ಕೂಡಲೆ ಅವನ ಪ್ರತಿಬಿಂಬವು ದರ್ಪಣದಲ್ಲಿ ಕಾಣಹತ್ತಿತು ಆಗ ಸಾ ವುಕಾರನು ನಿರುಪಾಯನಾಗಿ ಆಚಿತ್ರಕಾರನಿಗೆ ಇಪ್ಪತ್ತೈದು ಸಾವಿರ ರೂ ಪಾಯಿಗಳನ್ನು ಕೊಟ್ಟನು ಅವುಗಳನ್ನು ತೆಗೆದುಕೊಂಡು ಸಂತೋಷದಿಂದ ಚಿತ್ರಕಾರನು ಹೊರಟು ಹೋದನು. ಅವನು ಹೋದ ಮೇಲೆ ಬೀರಬಲನು ಆ ಸಾವುಕಾರನ ಪಾದಗಳಮೇಲೆ ಅಡ್ಡಬಿದ್ದು "ಮಹಾರಾಜ! ನೀವು ಮ

ನುಷ್ಯರಲ್ಲಿ ಮನುಷ್ಯರೂಪದಿಂದ ಪ್ರಕಟವಾದ ದೇವರಿದ್ದೀರಿ. ಆದ್ದರಿಂದ ನಾನು ನಿಮ್ಮ ಪಾದವನ್ನು ಬಿಡುವದಿಲ್ಲ." ಎಂದು ನುಡಿಯಲು ದೇವರು ಇವನ ಚಾತುರ್ಯಕ್ಕೆ ಮೆಚ್ಚಿ ಪ್ರಕಟನಾಗಿ ಈ ದಿವಸದಿಂದ ನಿನ್ನ ಬುದ್ಧಿಸಾಮರ್ಥ್ಯವು ಹೆಚ್ಚಾಗಲಿ ಎಂದು ವರವನ್ನು ಕೊಟ್ಟು ಅಂತರ್ಧಾನನಾದನು. ಆ ದಿವಸದಿಂದ ಬೀರಬಲನ ಕೀರ್ತಿಯು ಜಗತ್ತಿನಲ್ಲಿ ಪಸರಿಸ ಹತ್ತಿತು ಆಚಿತ್ರಸಟದಲ್ಲಿ ಒಂದಿಲ್ಲ ಒಂದು ನ್ಯೂನತೆಯನ್ನು ಮೇಲಿಂದ ಮೇಲೆ ತೋರಿಸ ಹತ್ತಿದ್ದರಿಂದ ಬೀರಬಲನು ತನ್ನ ಬುದ್ಧಿಚಾತುರ್ಯದಿಂದ ಇವನು ಸಾಮಾನ್ಯ ಮನುಷ್ಯನಲ್ಲ ದೇವರೇ ಈ ರೂಪದಿಂದ ಅವತರಿಸಿದ್ದಾನೆಂದು ನಿಶ್ಚಯಿಸಿಕೊಂಡು ಅವನ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡನು ಆ ದಿವಸದಿಂದ "ಬುದ್ಧಿಚಾತುರ್ಯದಿಂದ ದೇವರನ್ನು ಕಂಡು ಹಿಡಿದನು ಎಂದು ಬೀರಬಲನ ಖ್ಯಾತಿಯು ಜಗತ್ತಿನಲ್ಲೆಲ್ಲ ಪಸರಿಸಿತು.

೨ ಗೋಮಹಿಮೆ.

ಒಂದು ದಿವಸ ಬಾದಶಹನ ದರಬಾರದಲ್ಲಿ ಗೋಪ್ರಶಂಸೆಯ ಮಾತು ಹೊರಟಿತು ಆಗ ಒಬ್ಬ ಮುಸಲ್ಮಾನನು ಎದ್ದು ನಿಂತು "ನಮ್ಮ ಮತಗ್ರಂಥಗಳಲ್ಲಿ ಗೋಕ್ಷೀರವು ಸ್ವಾಸ್ಥ್ಯವನ್ನುಂಟು ಮಾಡುವದೆಂತಲೂ ಮಾಂಸವು ದೇಹದಲ್ಲಿ ಅಸ್ವಾಸ್ಥ್ಯತೆಯನ್ನು ಹೆಚ್ಚಿಸುವದೆಂತಲೂ ಹೇಳಿರುವದು" ಎಂದನು ಆಗ ಬೀರಬಲನು ತತ್ಕ್ಷಣಕ್ಕೆ ನುಡಿದನ್ನೇನಂದರೆ "ನಿಮ್ಮ ಹೇಳಿಕೆಯಂತೆ ಗೋಕ್ಷೀರವು ಪ್ರಶಂಸಾರ್ಹವಾದದ್ದರಿಂದಲೇ ನಿಮ್ಮ ಕುರಾನ ಗ್ರಂಥದ ಆರಂಭದಲ್ಲಿ,, ಬಕರ" ಪ್ರಾಣಿಯ ಚಿತ್ರವನ್ನು ಬರೆದಿದ್ದಾರೆ." ಎಂದು ಹೇಳಿದನು ಈಮಾತನ್ನು ಕೇಳಿ ಬಾದಶಹನಿಗೆ ನಗೆಯುಬಂತು.

ಪಾರಸೀಭಾಷೆಯಲ್ಲಿ ಗೋವಿಗೆ "ಬಕರ" ವೆಂದು ಅನ್ನುತ್ತಾರೆ.

೩ ಎರಡುತಿಂಗಳು ಕೂಡಿಸಿ ಒಂದೇ ತಿಂಗಳು.

ಒಂದು ದಿವಸ ಬಾದಶಹನು ಬೀರಬಲನನ್ನು ಕುರಿತು "ನಾನು ಈದಿವಸದಿಂದ ಎರಡುತಿಂಗಳು ಕೂಡಿಸಿ ಒಂದೇತಿಂಗಳನ್ನು ಮಾಡಬೇಕೆಂದು ನಿಶ್ಚಯಿಸಿದ್ದೇನೆ" ಎಂದು ಹೇಳಿದನು ಆಗ ಬೀರಬಲನು—"ಖಾವಿಂದ ಹಾಗೆ ಮಾಡಿದರೆ ಬಹಳೇ ನೆಟ್ಟಗಾಗುವದು; ಯಾಕಂದರೆ ಸಂಪೂರ್ಣ ಒಂದುತಿಂಗಳವರೆಗೆ ಬೆಳದಿಂಗಳು ಇರುವಂತಾಯಿತು" ಈ ಮಾತನ್ನು ಕೇಳಿ ಬಾದಶಹನು ಲಜ್ಜಿತನಾದನು.

೪ ಇದಾದರೂ ನಮ್ಮದೇ ಅದೆ.

ಒಂದುದಿವಸ ಬೀರಬಲನು ಭೋಜನಾನಂತರ ಹೊಟ್ಟೆಯಮೇಲೆ ಕೈ

ಯೊಡಿಸಿಕೊಳ್ಳುತ್ತ ಕುಳಿತಿದ್ದನು ಅದನ್ನು ಒಬ್ಬ ಚೋಪದಾರನು ಕಂಡು ಅನ್ನುತ್ತಾನೆ;—"ಎಂಥಾ ಉತ್ತಮವಾದ ಹೊಟ್ಟೆಯಿರುವದು?" ಬೀರಬಲನು ಅನ್ನುತ್ತಾನೆ;—"ನೀನೂ ಇಟ್ಟುಕೋ ನಾನು ನೋಡುತ್ತೇನೆ" ಆಗ ಚೋಪದಾರನು ನಕ್ಕು—"ಇದಾದರೂ ನಮ್ಮದೇ ಅದೆ ನಾನೇ ಹಾಗೆ ಮಾಡಿಟ್ಟುಕೊಳ್ಳುವ ಕಾರಣವಿಲ್ಲ" ಎಂದನು ಬೀರಬಲನು ನಗುತ್ತ ಎದ್ದು ಹೋದನು.

೫ ತಾವು ಬಾದಶಹರು ಹ್ಯಾಗಾಗುತ್ತಿದ್ದಿರಿ?

ಅಕಬರ ಬಾದಶಹನು ಅನ್ನುತ್ತಾನೆ;—"ಈ ಅರಸುತನವು ಬಾದಶಾಹತ್ಯವು! ಎಂದೂ ನಷ್ಟವಾಗದಿದ್ದರೆ ಎಂಥಾ ಉತ್ತಮವಾಗುತ್ತಿತ್ತು?" ಬೀರಬಲನು ಅನ್ನುತ್ತಾನೆ;—"ಹಾಗಾಗಿದ್ದರೆ ತಮಗೆ ಬಾದಶಹರಾಗುವ ಸಂಧಿಯು ಹ್ಯಾಗೆ ದೊರೆಯುತ್ತಿತ್ತು?"

೬ ಶೂರ ಮತ್ತು ಅಂಜುಗುಳಿ.

ಒಂದು ದಿವಸ ಬಾದಶಹನು ಬೀರಬಲನಿಗೆ ಹೇಳಿದ್ದೇನಂದರೆ—"ಒಬ್ಬ ಶೂರನನ್ನೂ ಮತ್ತು ಒಬ್ಬ ಅಂಜುಗುಳಿಯನ್ನೂ ಈ ಪಟ್ಟಣದಲ್ಲಿ ಹುಡಿಕಿಕೊಂಡು ಕರೆದುಕೊಂಡು ಬಾ" ಎಂದು ಅಪ್ಪಣೆಯನ್ನಿತ್ತನು ಕೂಡಲೆ ಬೀರಬಲನು ಪೇಟೆಯೊಳಗೆಹೋಗಿ ಒಬ್ಬಸ್ತ್ರೀಯನ್ನು ಕರೆದುಕೊಂಡುಬಂದನು ಆಗ ಬಾದಶಹನು ಕೇಳುತ್ತಾನೆ?- "ನಾನು ಇಬ್ಬರನ್ನು ಕರೆದುಕೊಂಡು ಬಾ, ಎಂದು ಹೇಳಿದ್ದು ನೀನು ಒಬ್ಬಳನ್ನೇ ಯಾಕೆ ಕರೆದುಕೊಂಡು ಬಂದಿ ?

ಬೀರಬಲನು ಅನ್ನುತ್ತಾನೆ;—"ಪೃಥ್ವೀನಾಥ! ಈ ಸ್ತ್ರೀಯು ಶೂರಳೂ, ಮತ್ತು ಅಂಜುಗುಳಿಯೂ ಆಗಿದ್ದಾಳೆ.

ಬಾದಶಹ—ಅದು ಹ್ಯಾಗೆ ?

ಬೀರಬಲ—ವರ್ಷಾಕಾಲದ ಅಂಧಕಾರಯುಕ್ತವಾದ ಅರ್ಧರಾತ್ರಿಯ ಸಮಯದಲ್ಲಿ ಇವಳು ಹೆದರದೆ ತನ್ನ ಪ್ರಾಣದಾಶೆಯನ್ನುಳಿದು ನಗರ ರಕ್ಷಕರ ಕಾವಲಿನೊಳಗಿಂದ ತಪ್ಪಿಸಿಕೊಳ್ಳುತ್ತ ತನ್ನ ಪ್ರಿಯನ ಮನೆಗೆ ಹೋಗುತ್ತಿರುವಳು; ಅಂದಮೇಲೆ ಇವಳಂಥಶೂರಳು ದೊರಕುವದೆಲ್ಲಿ ಮತ್ತು ತನ್ನ ಮನೆಯಲ್ಲಿದ್ದಾಗ ರಾತ್ರಿಯಲ್ಲಿ ಮೂಷಕಗಳ ಓಡಾಟದ ಸಪ್ಪಳವನ್ನು ಕೇಳಿದ ಕೂಡಲೆ ಭೀತಿಗ್ರಸ್ತಳಾಗಿ ನಡುಗ ಹತ್ತುವಳು ಅಂದಮೇಲೆ ಇವಳಂಥ ಭೀರುವು ಎಲ್ಲಿಯಾದರೂ ದೊರಕುವಳೇ

೭ ನಿಜವಾದ ಮೈಗಳ್ಳ.

ಒಂದುಸಾರೆ ಬಾದಶಹನು ದಿಲ್ಲಿಯೊಳಗಿದ್ದ ಎಲ್ಲ ಮೈಗಳ್ಳರನ್ನು ಕೂಡಿಸಿ, ಇವರಿಗೆ "ನನ್ನ ಬೊಕ್ಕಸದೊಳಗಿಂದ ಊಟ ಉಡಿಗೆಗಳನ್ನು ಕೊಡಬೇಕು ಮತ್ತು ಇಂಥ ಅನ್ಯಜನ ರಾರಾದರೂ ಬಂದರೆ ಅವರನ್ನು ಸಹಾ ಪೋಷಣೆ ಮಾಡತಕ್ಕದ್ದು;" ಎಂದು ಕಟ್ಟಪ್ಪಣೆ ಮಾಡಿದನು ಆಗ ಈವಾರ್ತೆಯನ್ನು ಕೇಳಿದವರೆಲ್ಲರೂ ನಾನೂ ಮೈಗಳ್ಳ ನೀನೂ ಮೈಗಳ್ಳ ಎಂದು ಅನ್ನುತ್ತ, ದಿಲ್ಲಿಯಲ್ಲಿ ಬಂದು ಕೂಡಹತ್ತಿದರು ಇದನ್ನು ಕಂಡು ಬಾದಶಹನಿಗೆ ಅತ್ಯಾಶ್ಚರ್ಯವಾಯಿತು ಆಗ ಬಾದಶಹನು ಬೀರಬಲನನ್ನು ಕರೆದು "ಇವರಲ್ಲಿ ನಿಜವಾದ ಮೈಗಳ್ಳರು ಎಷ್ಟುಮಂದಿ ಇರುವರೆಂಬದನ್ನು ಹುಡಿಕಿ ತೆಗೆ" ಎಂದು ಅಪ್ಪಣೆ ಮಾಡಿದನು ಆಗ ಬೀರಬಲನು ಪಟ್ಟಣದ ಬಹಿರ್ಭಾಗದಲ್ಲಿ ಒಂದುಹುಲ್ಲಿನ ಚಪ್ಪರವನ್ನು ಹಾಕಿಸಿ ಮೈಗಳ್ಳರೆಲ್ಲರೂ ಆಚಪ್ಪರದಲ್ಲಿ ಹೋಗಿ ಇರಬೇಕು ಎಂದು ಅಪ್ಪಣೆಮಾಡಿದನು ಮುಂದೆ ಕೆಲವು ದಿವಸಗಳಾದಮೇಲೆ ರಾತ್ರಿಯಲ್ಲಿ ಅವರೆಲ್ಲರೂ ಮಲಗಿಕೊಂಡಿರುವಸಮಯದಲ್ಲಿ ಆಚಪ್ಪರಕ್ಕೆ ಬೆಂಕಿಯನ್ನು ಹಚ್ಚಿಸಿ ಬಿಟ್ಟನು ಆಗ ಮೈಗಳ್ಳರೆಂದು ಕೂಡಿಕೊಂಡಿದ್ದ ಎಷ್ಟೋಜನರು ಗಾಬರಿಯಾಗಿ ತಮ್ಮ ತಮ್ಮ ಜೀವವನ್ನುಳಿಸಿಕೊಳ್ಳಬೇಕೆಂದು ಸಿಕ್ಕಸಿಕ್ಕಕಡೆಗೆ ಓಡಿಹೋದರು ಅಲ್ಲಿ ನಿಜವಾದ ಮೈಗಳ್ಳರು ಇಬ್ಬರೇ ಉಳಿದರು ಅವರನ್ನು ಕರೆದುಕೊಂಡು ಬಾದಶಹನಬಳಿಗೆ ಬಂದನು. ಬೀರಬಲನ ಈ ಚಾತುರ್ಯದಿಂದ ಬಾದಶಹನು ಸಂತುಷ್ಟನಾದನು.

೮ ಕಡುಲೋಭಿಯಾದ ಮನುಷ್ಯ.

ದಿಲ್ಲಿಯಲ್ಲಿ ಒಬ್ಬ ಕಡುಲೋಭಿಯಾದ ಮನುಷ್ಯನಿದ್ದನು. ಒಬ್ಬ ಕವಿಯು ಆ ಮನುಷ್ಯನ ಸ್ತುತಿಯುಕ್ತವಾದ ಒಂದು ಕವಿತೆಯನ್ನು ರಚಿಸಿಕೊಂಡು ಆ ಲೋಭಿಯಾದ ಮನುಷ್ಯನ ಮನೆಗೆಬಂದನು. ಆಗ ಲೋಭಿಯು ತನ್ನ ಮನಸ್ಸಿನಲ್ಲಿ ತಿಳಿದುಕೊಂಡದ್ದೇನಂದರೆ ಈ "ಮನುಷ್ಯನುನನ್ನನ್ನು ಪ್ರಸನ್ನೀಕರಿಸಿಕೊಂಡು ಏನಾದರೂ ಪಾರಿತೋಷಕವನ್ನು ಹೊಂದಬೇಕೆಂಬ ಆಶೆಯಿಂದ ಬಂದಂತೆ ಕಾಣುತ್ತದೆ, ಇರಲಿ ನಾನು ನನ್ನ ಸ್ತುತಿಪರವಾದ ಕವನವನ್ನು ಕೇಳಿ ಸಂತೋಷಯುಕ್ತನಾದ ಮೇಲೆ ಬರಿಯಮಾತಿನಿಂದಲೇ ಇವನನ್ನು ತೃಪ್ತಿಗೊಳಿಸಿ ಹಿಂದಿರುಗಿ ಕಳುಹಿಸಿಬಿಟ್ಟರಾಯಿತು" ಎಂದು ಯೋಚಿಸಿಕೊಂಡು, ಆ ಕವಿಯನ್ನು ಒಳ್ಳೇ ಮರ್ಯಾದೆಯಿಂದ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು, ಬಂದಕಾರ್ಯವೇನೆಂದು ಪ್ರಶ್ನೆಮಾಡಿದನು ಆಗ ಕವಿಯು ತಾನುಮಾಡಿದ ಕವಿತ್ವವನ್ನು ಹೇಳಿದನು ಆಗ ಲೋಭಿಯು

ಅಂದದ್ದೇನಂದರೆ- "ವಾಹವ್ವಾ ? ಕವಿರಾಜ ಬಹಳೇ ಉತ್ತಮವಾದ ಪದ್ಯವನ್ನು ರಚಿಸಿರುವಿರಿ ಪ್ರಾಸಗಳೂ ಅನುಪ್ರಾಸಗಳೂ ಸರಿಯಾಗಿ ಕೂಡಿವೆ, ನೀವು ನಾಳೆ ನನಗೆ ಬೆಟ್ಟಿಯಾಗಿರಿ ಅಂದರೆ ನಿಮ್ಮ ಮನಸ್ಸನ್ನು ತೃಪ್ತಿಪಡಿಸುವೆನು" ಎಂದು ಮಧುರವಚನಗಳಿಂದ ಸತ್ಕರಿಸಿ, ಕವಿಯನ್ನು ಕಳುಹಿಸಿ ಕೊಟ್ಟನು ಆ ಕವಿಗೆ ತುಂಬಾ ಆನಂದವಾಯಿತು.

ಮರುದಿವಸ ಆ ಕವಿಯು ಪುನಃ ಆ ಲೋಭಿಯ ಬಳಿಗೆಬಂದನು ಆಗ ಲೋಭಿಯು ಏನೂ ಅರಿಯದವನಂತೆ ನಟಿಸಿ, "ನೀವು ಯಾರು ? ಇಲ್ಲಿಗೆ ಯಾತಕ್ಕೆ ಬಂದಿರಿ" ಎಂದು ಪ್ರಶ್ನೆ ಮಾಡಿದನು. ಆಗ ಕವಿಯು ನಾನುನಿನ್ನೆ ತಮ್ಮ ಸ್ತುತಿಯುಕ್ತವಾದ ಒಂದು ಪದ್ಯವನ್ನು ರಚಿಸಿ ತಮ್ಮೆದುರಿಗೆ ಹೇಳಿದ್ದೆನು, ಆ ಕವನದಿಂದ ತಾವು ಹರ್ಷಚಿತ್ತರಾಗಿ ನಾಳಿಗೆಬರಬೇಕೆಂದು ಅಪ್ಪಣೆಮಾಡಿದ್ದಿರಿ ಇಷ್ಟರಲ್ಲಿ ನನ್ನ ಪರಿಚಯವನ್ನು ಮರೆತುಬಿಟ್ಟಿರಾ ! ಎಂದು ಕೇಳಿದನು. ಕೂಡಲೆ ಲೋಭಿಯು ಅನ್ನುತ್ತಾನೆ:- ನಿನ್ನಿನ ಮಾತು ನಿನ್ನೇ ಆಗಿಹೋಯಿತು, ಈ ದಿವಸ ಆ ಮಾತಿನಿಂದ ಪ್ರಯೋಜನವೇನು ? ನೀವು ನಿನ್ನೆ ಪದ್ಯವನ್ನು ಹೇಳಿ ನನ್ನ ಮನಸ್ಸನ್ನು ಸಂತೋಷಪಡಿಸಿದಂತೆ ನಾನಾದರೂ ಮಾತಿನಿಂದಲೇ ನಿಮ್ಮನ್ನು ತೃಪ್ತಿಗೊಳಿಸಿ ಅಪ್ಪಣೆ ಕೊಟ್ಟುಬಿಟ್ಟಿದ್ದೆನು, ನೀವು ಮಾಡಿದಂತೆ ನಾನಾದರೂ ಮಾಡಿಬಿಟ್ಟಿದ್ದೇನೆ." ಎಂದು ನುಡಿಯಲು ಭಗ್ನಮನೋರಥನಾಗಿ ಕವಿಯು ಹಿಂದಕ್ಕೆ ಬಂದನು.

ಮುಂದೆ ಒಂದುದಿವಸ ಆ ಕವಿಯು ಸ್ನೇಹಿತನೊಬ್ಬನು ದಿಲ್ಲಿಗೆ ಬಂದನು, ಅವನೆದುರಿಗೆ ಆ ಲೋಭಿಯ ಸಂಗತಿಯನ್ನು ಹೇಳುತ್ತ ನಿಂತುಕೊಂಡಿದ್ದನು ಅಷ್ಟರಲ್ಲಿ ಬೀರಬಲನು ಅಲ್ಲಿಗೆಬಂದನು, ಅವರು ಮಾತಾಡುತ್ತಿರುವ ಮಾತುಗಳೆಲ್ಲ ಇವನಿಗೆ ಕೇಳಬಂದವು ಆಗ ಅವನು ಮುಂದೆಬಂದು. "ನೀವಿಬ್ಬರೂ ಕೂಡಿಕೊಂಡು ಏನೇನು ಮಾತಾಡುತ್ತಿರುವಿರಿ ! ನನ್ನೆದುರಿಗೆ ಹೇಳುವದಕ್ಕೆ ಸಾಧ್ಯವಿದ್ದರೆ ಹೇಳಬಹುದು" ಎಂದು ಕೇಳಿದನು ಅವರಿಬ್ಬರೂ ಬೀರಬಲನನ್ನು ಗುರುತಿಸಿದರು ಅವನೆದುರಿಗೆ ಯಾವತ್ತೂ ಸಂಗತಿಯನ್ನು ವಿಶದಪಡಿಸಿದರು, ಆಗ ಅವರಿಬ್ಬರನ್ನೂ ಕರೆದುಕೊಂಡು ಬೀರಬಲನು ತನ್ನ ಮನೆಗೆ ಬಂದನು.

ಮನೆಗೆ ಬಂದಮೇಲೆ ಬೀರಬಲನು ಆ ಕವಿಯನ್ನು ಕುರಿತು, "ಕವಿರಾಜ ! ನೀನು ಈ ದಿವಸದಿಂದ ನಾಲ್ಕೈದು ದಿವಸಗಳಾದಮೇಲೆ ಈ ನಿಮ್ಮ ಮಿತ್ರನನ್ನು ಆ ಲೋಭಿಮನುಷ್ಯನ ಮನೆಗೆ ಕಳುಹಿಕೊಡಿರಿ ಇವರುಹೋಗಿ ಅವನೊಡನೆ ಸರಸಸಲಿಗೆಯನ್ನು ಬೆಳಿಸಲಿ, ಈಪ್ರಕಾರ ಪರಸ್ಪರರಲ್ಲಿ

ಸ್ನೇಹವು ವೃದ್ಧಿಯಾದಮೇಲೆ ಅವನನ್ನು ನಿಮ್ಮ ಮನೆಗೆ ಭೋಜನಕ್ಕೆ ಬರಬೇಕೆಂದು ಆಮಂತ್ರಣಕೊಡಿರಿ; ಅಂದರೆ ಅವನು ಬಂದೇಬರುವನು ಆ ದಿವಸ ನನಗೂ ಭೋಜನಕ್ಕೆ ಹೇಳಿರಿ ಅಂದರೆ ಮುಂದಿನ ಯಾವತ್ತೂ ಸಂಗತಿಯನ್ನು ವಿಚಾರಮಾಡೋಣ ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.

ಆ ಕವಿಗಳಿಬ್ಬರೂ ಚತುರರಿದ್ದರು ಬೀರಬಲನ ಆಶಯವು ತಿಳಿದುಬಂದಿತು, ಮುಂದೆ ಸ್ವಲ್ಪದಿವಸಗಳಾದ ಮೇಲೆ ಆ ಎರಡನೇ ಕವಿಯು ಆ ಲೋಭಿಯೊಡನೆ ಸ್ನೇಹವನ್ನು ಬೆಳಿಸಿ ದಿನಾಲು ಅವನಮನೆಗೆ ಹೋಗಿ ಬರಹತ್ತಿದನು, ಈಪ್ರಕಾರ ಕೆಲವು ದಿವಸಗಳಲ್ಲಿ ಅವರಿಬ್ಬರ ನಡುವೆ ದೃಢವಾದ ಮೈತ್ರಿಯುಂಟಾಯಿತು, ಎರಡನೇಕವಿಯು ಆ ಲೋಭಿಗೆ ಒಂದುದಿವಸ ಔತಣಕೊಟ್ಟನು, ಅದರಂತೆ ಬೀರಬಲನಿಗೂ ತನ್ನ ಮಿತ್ರನಿಗೂ ಔತಣಕೊಟ್ಟನು ಅವರಿಬ್ಬರೂ ತಮ್ಮ ವೇಷವನ್ನು ಮರೆಮಾಜಿಕೊಂಡು ಊಟಕ್ಕೆ ಬಂದರು, ಸ್ವಲ್ಪ ಹೊತ್ತಿನೊಳಗಾಗಿ ಆ ಲೋಭಿಯೂ ಅಲ್ಲಿಗೆ ಬಂದನು. ಕವಿಯು ಆ ಲೋಭಿಗೆ ವಿಶೇಷವಾಗಿ ಆದರಸತ್ಕಾರ ಮಾಡಿದನು; ಆ ಲೋಭಿಯು ಅವರನ್ನು ಗುರುತಿಸಲಿಲ್ಲ ಎಲ್ಲರೂ ಮಾತಾಡುತ್ತ ಕುಳಿತುಕೊಂಡರು ಸಂಜೆಯಾಗುತ್ತಬಂತು, ಆದರೆ ಭೋಜನದಮಾತೇ ಹೊರಡಲಿಲ್ಲ ಲೋಭಿಯುಹೊರತು ಉಳಿದವರೆಲ್ಲರೂ ತಮ್ಮ ತಮ್ಮ ಮನೆಯಲ್ಲಿ ಊಟವನ್ನು ತೀರಿಸಿಕೊಂಡೇ ಬಂದಿದ್ದರು, ಲೋಭಿಯುಮಾತ್ರ ಉಪವಾಸನಾಗಿಯೇ ಇದ್ದನು ಇದರಿಂದ ಅವನುಬೇಸತ್ತು ಕಟ್ಟಕಡೆಗೆ "ಇನ್ನೂ ಭೋಜನವಾಗಬೇಕಾದರೆ ಎಷ್ಟು ಸಮಯವುಬೇಕು ? ಏನಾದರೂ ಸಿದ್ಧತೆಯನ್ನು ಮಾಡಿರುವಿರೋ" ಎಂದು ಪ್ರಶ್ನೆಮಾಡಿದನು. ಆಗ ಕವಿಯು ಮಿತ್ರನು "ಯಾತರಸಿದ್ಧತೆ ?" ಎಂದು ಕೇಳಿದನು. ಲೋಭಿಯು ಅನ್ನುತ್ತಾನೆ; - "ನೀವು ನನಗೆ ಭೋಜನಕ್ಕೆ ಆಮಂತ್ರಣಕೊಟ್ಟಿದ್ದಿಲ್ಲವೋ ?" ಎಂದು ಕೇಳಿದನು. ಆಗ ಬೀರಬಲನು- "ನಾನು ನಿಮ್ಮನ್ನು ಪ್ರಸನ್ನೀಕರಿಸಿಕೊಳ್ಳಬೇಕೆಂದು ಆಮಂತ್ರಣವನ್ನು ಹೇಳಿದ್ದೆನು, ಇಷ್ಟೇ ಹೊರತು ಅನ್ಯಥಾ ಇಲ್ಲ. ನಾವೆಲ್ಲರೂ ಭೋಜನತೀರಿಸಿಕೊಂಡೇ ಕುಳಿತಿದ್ದೇವೆ" ಎಂದು ಹೇಳಿದಕೂಡಲೆ ಲೋಭಿಯ ಕಣ್ಣು ಕೆಂಪಗಾದವು ಅವರೊಡನೆ ಲೋಭಿಯು ಹೊಡೆದಾಡಹತ್ತಿದನು. ಆಗ ಬೀರಬಲನು ತನ್ನ ವೇಷವನ್ನು ತೆಗೆದುಚಲ್ಲಿ ಅವರೆದುರಿಗೆನಿಂತುಕೊಂಡು "ಸದ್ಗೃಹಸ್ಥನೇ ನೀನು ಹಿಂದಕ್ಕೆ ಇದೇಪ್ರಕಾರವಾಗಿ ಒಬ್ಬ ಕವಿಗೆ ಚೇಷ್ಟೆಯನ್ನು ಮಾಡಿದ್ದಿಲ್ಲವೇ ? ಅವನಿಗೆ ಅದರಿಂದ ಎಷ್ಟು ಕಷ್ಟವಾಗಿದ್ದೀತು ?" ಎಂದು ಕೇಳಿದನು. ಅದಕ್ಕೆಲೋಭಿಯು ಆ ಕವಿಯು ಯಾರು ? ನಾನುಚೆ

ಷ್ಟವಮಾಡಿದ್ದೆಲ್ಲಿ? ಕಷ್ಟವುಂಟಾದದ್ದುಯಾರಿಗೆ? ಎಲ್ಲವೂ ಚಮತ್ಕಾರವಾಗಿಯೇ ಕಾಣುತ್ತದೆ, ಈಪ್ರಕಾರ ಕೇಳುವವನು ನೀನುಯಾರು?" ಎಂದು ಸಿಟ್ಟಿಗೆದ್ದು ಕೇಳಿದನು. ಆಗ ಬೀರಬಲನು ಹೇಳುತ್ತಾನೆ;- "ನಾನು ಬೀರಬಲನು, ಇವನೇ ನಿನ್ನಿಂದ ಅವಮಾನಿತನಾದ ಕವಿಯೇ ಇವನು, ಇವನನ್ನು ನೀನು ಈಗ ಪ್ರಸನ್ನೀಕರಿಸಿಕೊಳ್ಳದಿದ್ದರೆ ನಿನಗೆ ಯೋಗ್ಯವಾದ ದಂಡನೆಯನ್ನು ವಿಧಿಸುವೆನು" ಎಂದು ಹೇಳಿದಕೂಡಲೆ ಲೋಭಿಯು ಕೆಲವು ರೂಪಾಯಿಗಳನ್ನು ಆ ಕವಿಗೆಕೊಟ್ಟು ಪ್ರಸನ್ನನಾಗಿ ಮಾಡಿಕೊಂಡನು.

—(೯. ಕನ್ನಡಿಯಲ್ಲಿ ಚಿತ್ರ.)—

ದಿಲ್ಲಿಯಲ್ಲಿ ಒಬ್ಬ ಧನವಂತನಾದ ಗೃಹಸ್ಥನಿದ್ದನು, ಅವನು ತನ್ನ ಅವಯವಗಳನ್ನು ಬೇಕಾದಹಾಗೆ ಹೆಚ್ಚುಕಡಿಮೆ ಮಾಡಿಕೊಳ್ಳುವ ಸಾಧನೆಯನ್ನು ಅರಿತವನಾಗಿದ್ದನು. ಆವನು ಒಂದುದಿವಸ ಒಬ್ಬ ಚತುರನಾದ ಚಿತ್ರಲೇಖನನ್ನು ಕರೆದು ತನ್ನ ಭಾವಪಟವನ್ನು ಸರಿಯಾಗಿ ತೆಗೆದುಕೊಂಡುಬಾ ಎಂದು ಅಪ್ಪಣೆಯಿತ್ತನು. ಆ ಚಿತ್ರಗಾರನು ಅದರ ಮೌಲ್ಯವನ್ನು ಗೊತ್ತುಮಾಡಿಕೊಂಡು ಸ್ವಲ್ಪ ದಿವಸಗಳಲ್ಲಿಯೆ ತೆಗೆದುಕೊಂಡು ಬರುತ್ತೇನೆಂದು ಹೇಳಿ ಹೊರಟುಹೋದನು. ಮುಂದೆ ಕೆಲವು ದಿವಸಗಳಾದಮೇಲೆ ಚಿತ್ರವನ್ನು ಸಿದ್ಧಪಡಿಸಿಕೊಂಡು ಆ ಧನವಂತನ ಬಳಿಗೆ ಬಂದನು. ಆಗ ಸಾವುಕಾರನು ತನ್ನ ರೂಪದಲ್ಲಿ ಹೆಚ್ಚುಕಡಿಮೆ ಮಾಡಿಕೊಂಡು ತನ್ನ ರೂಪಕ್ಕೂ ಆ ಚಿತ್ರಕ್ಕೂ ಸರಿಯಾಗಿಲ್ಲವೆಂದು ಹೇಳಿದನು, ಆಗ ಚಿತ್ರಗಾರನಿಗೆ ಅತ್ಯಾಶ್ಚರ್ಯವಾಯಿತು ಕೂಡಲೆ ಅವನು ತನ್ನ ತಪ್ಪನ್ನು ಒಪ್ಪಿಕೊಂಡು ಎರಡನೆ ಭಾವಪಟವನ್ನು ತೆಗೆದುಕೊಂಡು ಬರುತ್ತೇನೆಂದು ಹೇಳಿ ಮನೆಗೆಬಂದನು. ಮುಂದೆ ನಾಲ್ಕಾರು ದಿವಸಗಳಲ್ಲಿ ಬಹಳ ಶ್ರಮಪಟ್ಟು ಮತ್ತೊಂದು ಚಿತ್ರವನ್ನು ಬರೆದುಕೊಂಡು ಬಂದನು, ಆಗ ಸಹ ತನ್ನ ಮುಖಚರ್ಯೆಯನ್ನು ಪರಿವರ್ತನಮಾಡಿಕೊಂಡು ಸರಿಯಾಗಿಲ್ಲವೆಂದು ಹೇಳಿ ಹಿಂದಕ್ಕೆ ಕಳುಹಿಸಿದನು ಈಪ್ರಕಾರ ಚಿತ್ರಗಾರನು ಯಾವ ಯಾವ ಚಿತ್ರವನ್ನು ತಂದು ತೋರಿಸಹತ್ತಿದನೋ ಆಗ ತನ್ನ ರೂಪದಲ್ಲಿ ಪರಿವರ್ತನಮಾಡಿಕೊಂಡು ಸರಿಯಾಗಿಲ್ಲವೆಂದು ಹೇಳಿ ಹಿಂದಕ್ಕೆ ಕಳುಹಿಸುತ್ತಿದ್ದನು. ಈಪ್ರಕಾರ ತನ್ನ ಪ್ರಯತ್ನವು ನಿಷ್ಫಲವಾಗ ಹತ್ತಿದ್ದನ್ನು ಕಂಡು ಚಿತ್ರಗಾರನು ಬೇಸತ್ತು, ತನ್ನ ಶ್ರಮದ ಫಲವನ್ನು ಕೊಡಬೇಕೆಂದು ಕೇಳಿದನು. ಆಗ ಧನವಂತನು "ನೀನು ಭಾವಪಟವನ್ನೇ ಸರಿಯಾಗಿ ಲೇಖನಮಾಡಿಕೊಂಡು ಬರಲಿಲ್ಲ ನಾನುಕ್ರಯ

ವನ್ನು ನಿನಗೆ ಹ್ಯಾಗೆ ಕೊಡಬೇಕು!" ಎಂದನು. ಆಗ ಅವರಿಬ್ಬರ ನಡುವೆ ವಾದ ವಿವಾದವಾಗಿ ಕಡೆಗೆ ಚಿತ್ರಗಾರನು ಬೀರಬಲನ ಕಡೆಗೆ ಬಂದು ತನ್ನ ಸಂಗತಿಯನ್ನೆಲ್ಲ ಅರಿಕೆಮಾಡಿಕೊಂಡನು, ಆಗ ಬೀರಬಲನು ಚಿತ್ರಗಾರನಿಂದ ಲೇಖಿಸಲ್ಪಟ್ಟ ಐದು ಚಿತ್ರಗಳನ್ನು ಚೆನ್ನಾಗಿ ಪರಿಶೀಲನವಾಡಿ ನೋಡಿ ಆ ಮನುಷ್ಯನಲ್ಲಿ ತನ್ನ ರೂಪದಲ್ಲಿ ಪರಿವರ್ತನಮಾಡಿಕೊಳ್ಳುವ ಶಕ್ತಿಯುಳ್ಳವನಾಗಿರ ಬಹುದೆಂದು ನಿಶ್ಚಯಿಸಿ ಆ ಚಿತ್ರಗಾರನನ್ನು ಕುರಿತು ಅನ್ನುತ್ತಾನೆ;- ನೀನು ಇನ್ನು ಮೂರು ದಿವಸಗಳಾದ ಮೇಲೆ ಒಂದು ನಿಲುಗನ್ನಡಿಯನ್ನು ತೆಗೆದುಕೊಂಡು ಆ ಮನುಷ್ಯನ ಹತ್ತರಹೋಗು ? ನಾನು ನಿನ್ನ ಬೆಂಬಲಕ್ಕೆ ಇಬ್ಬರು ಜವಾನರನ್ನು ಗುಪ್ತರೀತಿಯಿಂದ ಕಳುಹಿಸಿಕೊಡುವೆನು, ನೀನು ಅವನಬಳಿಗೆ ಹೋಗಿ ಈಸಾರೆ ತಮ್ಮ ಚಿತ್ರವನ್ನು ಸರಿಯಾಗಿ ತೆಗೆದುಕೊಂಡು ಬಂದಿದ್ದೇನೆ ಪರಿಶೀಲಿಸಬೇಕು ಎಂದು ಹೇಳು ? ಎಂದು ಕಳುಹಿಸಿಕೊಟ್ಟನು. ಅದರಂತೆ ಆ ಚಿತ್ರಗಾರನು ಆ ಧನವಂತನಬಳಿಗೆ ಹೋಗಿ ದರ್ಪಣವನ್ನು ತೋರಿಸಿದನು, ಆಗ ಆ ಧನವಂತನು ತನ್ನ ರೂಪದಲ್ಲಿ ಹ್ಯಾಗೆಹ್ಯಾಗೆ ಪರಿವರ್ತನ ಮಾಡಿಕೊಳ್ಳಹತ್ತಿದನೋ ಹಾಗೆ ಹಾಗೆ ಆ ದರ್ಪಣದಲ್ಲಿ ಕಾಣಹತ್ತಿತು. ಆಗ ಆ ಧನವಂತನು ಅನ್ನುತ್ತಾನೆ;- "ಏನಯ್ಯಾ ಈ ಬರೀಕನ್ನಡಿಯನ್ನು ನನಗೆ ಯಾಕೆ ತೋರಿಸುತ್ತೀ ? ನೀನು ತೆಗೆದ ಭಾವಚಿತ್ರವು ಎಲ್ಲಿ ಅದೆ ! " ಎಂದು ಕೇಳಿದನು. ಅದಕ್ಕೆ ಚಿತ್ರಗಾರನು "ನಿಮ್ಮ ರೂಪ ಸದೃಶವಾದ ಭಾವಚಿತ್ರವೇ ಇದು ! " ಎಂದು ಹೇಳಿದನು. ಆಗ ಧನವಂತನು "ನಾನು ನಿನಗೆ ನನ್ನ ಭಾವಪಟವನ್ನು ತೆಗೆಯಲಿಕ್ಕೆ ಎಂದು ಹೇಳಿದ್ದೆನು" ಎಂದು ಕೇಳಿದನು. ಆಗ ಚಿತ್ರಗಾರನು;- "ನೀವು ಹೀಗೆ ವಚನದಲ್ಲಿ ಯಾಕೆಪರಿವರ್ತನ ಮಾಡುವಿರಿ ? ನಾನು ನಿಮ್ಮ ಹೇಳಿಕೆಯಂತೆ ಐದು ಸಾರೆ ಚಿತ್ರವನ್ನು ತೆಗೆದುಕೊಂಡು ಬಂದು ತೋರಿಸಿದೆನು ಆಗ ನೀವು ಅವುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವನ್ನು ತೋರಿಸಿದ್ದರಿಂದ ಹಿಂದಕ್ಕೆತೆಗೆದುಕೊಂಡು ಹೋಗಿ ಈಸಾರ ಸ್ವಲ್ಪಾದರೂ ವ್ಯತ್ಯಾಸವಿಲ್ಲದಂತೆ ತೆಗೆದುಕೊಂಡು ಬಂದಿದ್ದೇನ ಅದ್ದರಿಂದ ನೀವುಆದಿ ಗೊತ್ತುಮಾಡಿದ ಮೂಲ್ಯವನ್ನು ಕೊಟ್ಟು ಕಳುಹಿಸಬೇಕು" ಎಂದನು. ಧನವಂತನು ಅವನಮಾತಿಗೆ ಒಪ್ಪಿಕೊಳ್ಳಲಿಲ್ಲ ಆಗ ಕರ್ಮಚಾರಿಗಳಿಬ್ಬರು ಮುಂದೆ ಬಂದು, ಅಯ್ಯಾ ಭ್ರಷ್ಟಪ್ರತಿಜ್ಞನಾದ ಶ್ರೀಮಂತನೇ ? ಈ ಮನುಷ್ಯನು ಅತಿಕಷ್ಟಪಟ್ಟು ಐದುಸಾರೆ ತೆಗೆದುಕೊಂಡುಬಂದ ಚಿತ್ರಗಳನ್ನು ನಿರಾಕರಿಸಿ ಬಿಟ್ಟು ಆರನೇಸಾರೆ ಸರಿಯಾಗಿ ಚಿತ್ರವನ್ನು ಲೇಖಿಸಿಕೊಂಡು ಬಂದು ತೋರಿಸಿದರೂ ನಿರಾಕರಿಸುತ್ತಿರುವಿ

ಯೂ ಈಮಾತು ನಿನಗೆ ಲಾಂಛನಾಸ್ಪದವಲ್ಲವೇ ? ಹೀಗೆಮಾಡಬೇಡ ಇವನ ಶ್ರಮದ ಫಲವನ್ನು ಸರಿಯಾಗಿ ಮುಟ್ಟಿಸು ? ಇಲ್ಲವಾದರೆ ನ್ಯಾಯಾಧೀಶನ ಬಳಿಗೆನಡೆ" ಎಂದು ಒತ್ತಾಯಮಾಡಿದರು. ಆಗ ಆ ಧನಿಕನು ಅನ್ನುತ್ತಾನೆ "ನನ್ನನ್ನು ನ್ಯಾಯಾಸ್ಥಾನಕ್ಕೆ ಕರೆದೊಯ್ಯುವದಕ್ಕೆ ನೀವ್ಯಾರು" ಎಂದು ಕೇಳಿದನು. ಆಗ ಅವರಿಬ್ಬರು ತಮ್ಮ ಮೇಲುಹೊದಿಕೆಗಳನ್ನು ತೆಗೆದುಚಲ್ಲಿಕೊಟ್ಟು ನಿಂತುಕೊಂಡರು. ಆಗೆ ಅವರನ್ನು ನೋಡಿ ಗಾಬರಿಯಾಗಿ ಧನವಂತನು ಹಣವನ್ನು ಕೊಡುತ್ತೇನೆಂದು ಬಹುಸರಿಯಾಗಿ ಹೇಳಿಕೊಳ್ಳಹತ್ತಿದನು, ಅದಕ್ಕೆ ಕರ್ಮಚಾರಿಗಳಿಬ್ಬರೂ ಸಮ್ಮತಿಸದೇ ಅವನನ್ನು ಬೀರಬಲನ ಕಡೆಗೆ ಕರೆದುಕೊಂಡು ಹೋದರು. ಕೂಡಲೆ ಬೀರಬಲನು- "ಇವನ ಬೆನ್ನು ಮೇಲೆ ವ್ರಣಗಳಾಗುವಂತೆ ಬಳಿತಾಗಿ ಹೊಡೆಯಿರಿ" ಎಂದು ಅಪ್ಪಣೆಮಾಡಲು, ಇಬ್ಬರು ಕರ್ಮಚಾರಿಗಳು ಕೈಯೊಳಗೆ ವೇತ್ರಾಯುಧವನ್ನು ಹಿಡಿದುಕೊಂಡುಬಂದು ನಿಂತರು. ಸಾವುಕಾರನು ಭಯಗ್ರಸ್ತನಾಗಿ ತನ್ನ ತಪ್ಪಿತವನ್ನೊಪ್ಪಿಕೊಂಡನು. ಕೂಡಲೇ ಅವನಿಗೆ ಕಾರಾಗೃಹದ ಶಿಕ್ಷೆಯನ್ನು ಕೊಟ್ಟು ಚಿತ್ರಗಾರನಿಗೆ ಸರಿಯಾದ ಮೂಲ್ಯವನ್ನು ಕೊಡಿಸಿ, ಕಳುಹಿಸಿ ಕೊಟ್ಟನು.

—(೧೦. ವ್ಯಸನಿಯಾದವನ ವ್ಯಸನ.)—

ಒಂದುದಿವಸ ಸಾಯಂಕಾಲದ ಮುಂದೆ ಬಾದಶಹನೂ ಬೀರಬಲನೂ ಪ್ರಚ್ಛನ್ನ ವೇಷಧಾರಿಗಳಾಗಿ ನಗರಸಂಚಾರಕ್ಕೆ ಹೊರಟರು, ಆಗ ಒಂದು ಓಣಿಯಲ್ಲಿ ಒಬ್ಬ ಭಿಕ್ಷೆಯವಳು ನಿಂತುಕೊಂಡಿದ್ದಳು, ಅವಳ ಸಮೀಪಕ್ಕೆ ಯಾರಾದರೂ ಹಾಯ್ದುಹೋದರೆ ದುರ್ವಾಸನೆಯು ಬರದೆ ಇರುತ್ತಿದ್ದಿಲ್ಲ, ಅವಳು ಅತಿಕುರೂಪಿಣಿ ಯಾದದ್ದಲ್ಲದೇ ಗರ್ಭಿಣಿಯಾಗಿದ್ದಳು. ಅವಳನ್ನು ನೋಡಿ ಬಾದಶಹನು ಆಶ್ಚರ್ಯಾನ್ವಿತನಾಗಿ ಬೀರಬಲನಿಗೆ;- "ಕಾಮದೇವನ ಲೀಲೆಯು ಅತಿ ಪ್ರಬಲತರದಾದದ್ದು? ಈ ಸ್ತ್ರೀಯಳಸಮೀಪಕ್ಕೆ ಹಾಯ್ದು ಹೋದರೆ ದುರ್ಗಂಧಿಯು ಘ್ರಾಣೇಂದ್ರಿಯಕ್ಕೆ ತಗಲುತ್ತದೆ; ಹೀಗಿದ್ದು ಇವಳೊಡನೆ ವಿಲಾಸವನ್ನು ಅನುಭೋಗಿಸಿದ ಪ್ರಾಣಿಯು ಯಾವನಿರಬಹುದು ?

ಅದಕ್ಕೆ ಬೀರಬಲನು ಅನ್ನುತಾನೆ, "ಮನುಷ್ಯನು ಒಮ್ಮೆ ವ್ಯಸನಾಧೀನನಾದ ನೆಂದರೆ ಆ ವ್ಯಸನವು ಅವನನ್ನು ಯಾವಜ್ಜೀವ ಪರಿಯಂತರವೂ ಬಿಡುವದಿಲ್ಲ. ಹ್ಯಾಗಂದರೆ ಬುಭುಕ್ಷಿತನಾದವರಿಗೆ ಹಳಸಿದ ಅನ್ನವೂ ಸಂ

ಚೆಭಕ್ಷ್ಯ ಪರಮಾನ್ನದಂತೆಯೂ ನಿದ್ರೆ ಇಲ್ಲದ ಮನುಷ್ಯನಿಗೆ ಹಾಸಿಗೆ ಅಥವಾ ಭೂಮಿ ಇವುಗಳ ಪರಿಜ್ಞಾನವು ಉಂಟಾಗುವದಿಲ್ಲವೋ ತದ್ವತ್ ಕಾಮಿ ಪುರುಷನಿಗೆ ಸುಜಾತಿ ಕುಜಾತಿಗಳ ವಿಚಾರವು ಬರುವದಿಲ್ಲ ಇಂಥ ವ್ಯಸನಾಧೀನರಾದ ಎಷ್ಟೋ ಜನರನ್ನು ನಾನು ಕಂಡಿದ್ದೇನೆ. ಬಾದಶಹನು ಅನ್ನುತ್ತಾನೆ "ಕದಾಚಿತ್ ಹೀಗಿದ್ದರೂ ಇರಬಹುದು ನೀನು ಇವಳೊಡನೆ ರಮಮಾಣನಾದ ಪುರುಷನನ್ನು ಕಂಡು ಹಿಡಿಯ ಬಲ್ಲೆಯಾ" ಬೀರಬಲನು ಅನ್ನುತ್ತಾನೆ, "ಕದಾಚಿತ್ ನಾವು ಇಲ್ಲಿಯೇ ಸ್ವಲ್ಪಹೊತ್ತು ಸಂಚಾರ ಮಾಡಹತ್ತಿದರೆ, ಅವನು ಯಾರಿರಬಹುದೆಂದು ಸಹಜವೇ ಗೊತ್ತಾಗುವದು"

ಈ ಪ್ರಕಾರ ಅವರಿಬ್ಬರೂ ಮಾತಾಡುತ್ತ ಸ್ವಲ್ಪದೂರ ಹೋದರು ಬೀರಬಲನು ಹಿಂದು ಮುಂದು ನೋಡುತ್ತಾ ಹೋಗುತ್ತಿದ್ದನು ಅಷ್ಟರಲ್ಲಿ ಮಾರ್ಗದಲ್ಲಿ ಒಬ್ಬ ವಿಲಾಸಿಯಾದ ಪುರುಷನು ಬರಹತ್ತಿದ್ದನು ಆವನು ಶ್ರೇಷ್ಟಕುಲೋತ್ಪನ್ನನಾಗಿದ್ದನು, ಆದರೆ ಅತಿವ್ಯಭಿಚಾರಿಯಾಗಿದ್ದನು ಬೀರಬಲನು ಅವನನ್ನು ಚೆನ್ನಾಗಿ ನೋಡಿ ಬಾದಶಹನಿಗೆ ಹೇಳುತ್ತಾನೆ, "ಪೃಥ್ವೀನಾಥ ಬಹುಳವಾಗಿ ಈ ಮನುಷ್ಯನೇ ಆ ಸ್ತ್ರೀಯೊಡನೆ ಕಾಮವಿಲಾಸವನ್ನು ಅನುಭವಿಸಿದವನಾಗಿರ ಬಹುದೆಂಬಂತೆ ಕಾಣುತ್ತದೆ.

ಬಾದಶಹ—ಅದುಯಾತರ ಮೇಲಿಂದ !

ಬೀರಬಲ—ಇವನನ್ನು ನೋಡುತ್ತ ಸ್ವಲ್ಪಹೊತ್ತು ಇಲ್ಲಿಯೇ ಗುಪ್ತವಾಗಿ ನಿಂತುಕೊಳ್ಳೋಣ ಅಂದರೆ ನಿಜಸ್ಥಿತಿಯು ಹೊರಬೀಳುವದು.

ಮುಂದೆ ಸ್ವಲ್ಪಹೊತ್ತಿನಲ್ಲಿಯೇ ಆ ವಿಲಾಸೀ ಪುರುಷನು ಆ ಸ್ತ್ರೀಯು ಳಸಮೀಪಕ್ಕೆ ಹೋಗಿ ಏನೋ ಒಂದು ಸಂಕೇತವನ್ನು ಮಾಡಿ ಮುಂದೆ ಹೊರಟು ಹೋದನು ಅವನು ಮುಂದೆ ಹೋಗಹತ್ತಲು ಆ ಸ್ತ್ರೀಯು ಮೆಲ್ಲಗೆ ಆವನ ಬೆನ್ನು ಹತ್ತಿದಳು ಆಗ ಬಾದಶಹನಿಗೆ ಆ ಸ್ತ್ರೀಯನ್ನು ಅನುಭೋಗಿಸಿದಪುರುಷನು ಇವನೇ ಇಂದು ನಿಶ್ಚಯವಾಯಿತು.

ಈ ಸಂಗತಿಯು ವಿದಿತವಾದ ಸ್ವಲ್ಪಹೊತ್ತಿನ ಮೇಲೆ ಇಬ್ಬರೂ ತಮ್ಮ ತಮ್ಮ ಗೃಹವನ್ನು ಕುರಿತು ಹೊರಟು ಹೋದರು ಮರುದಿವಸದ ಓಲಗದಲ್ಲಿ ಬಾದಶಹನು ಬೀರಬಲನಿಗೆ ಪ್ರಶ್ನೆಮಾಡಿದನು "ಬೀರಬಲ, ನೀನು ನಿನ್ನೆ ತೋರಿಸಿದ ಪುರುಷನು ಆ ಸ್ತ್ರೀಯಳನ್ನು ಅನುಭವಿಸಿದವನೆಂದು, ನಿನಗೆ ಹ್ಯಾಗೆ ಗೊತ್ತಾಯಿತು ಅದಕ್ಕೆ ಬೀರಬಲನು ಪೃಥ್ವೀನಾಥ ! ಇದನ್ನು ತಿಳಿದು ಕೊಳ್ಳುವದು ಸ್ವಲ್ಪಕಠಿಣವದೆ ! ನಿನ್ನೆನಾವಿಬ್ಬರೂ ಅಲ್ಲನಿಂತು ಕೊಂಡಿರಲು, ದೂರಿನಿಂದ ಬರುತ್ತಿರುವ ಇಲ್ಲಿನಮೇಲೆ ನನ್ನದೃಷ್ಟಿಯು

ಬಿತ್ತು ಆಗ ಇವನಕೈಯಲ್ಲಿ ತಂಬಾಕವಿತ್ತು ಆದರೆ ಸುಣ್ಣವಿದ್ದಿಲ್ಲ, ಅಷ್ಟ ರಲ್ಲಿ ಅದೇ ಸುಣ್ಣವನ್ನು ಹಚ್ಚಿದ ಒಂದು ಪಾಯಖಾನೆಯ ಗೋಡೆಯು ದೃಷ್ಟಿಗೆ ಬಿತ್ತು ಕೂಡಲೆ ಇವನು ತ್ವರೆಯಿಂದ ಅಲ್ಲಿಗೆ ಹೋಗಿ ಬೆರಳಿನಿಂದ ಗೋಡೆಯನ್ನು ಕೆದರಿ ತಂಬಾಕಕ್ಕೆ ಹಚ್ಚಿಕೊಂಡು ಬಾಯಿಯೊಳಗೆ ಹಾಕಿಕೊಂಡನು ಇಂಥ ಹೊಲಸು ಸ್ಥಳದಲ್ಲಿಯ ಸುಣ್ಣವನ್ನು ತೆಗೆದುಕೊಳ್ಳಲಿಕ್ಕೆ ಯಾವ ಮನುಷ್ಯನು ಹಿಂದು ಮುಂದು ನೋಡಲಿಲ್ಲವ್ರೋ, ಅಂಥ ಮನುಷ್ಯನು ಎಂಥ ಸ್ತ್ರೀಯ ಮೇಲಾದರೂ ಲಂಪಟನಾಗಬಹುದೆಂದು ಯೋಚಿಸಿದೆನು ಎಂದು ಹೇಳಿದನು.

ಬಾದಶಹನು ಬೀರಬಲನ "ಅವಲೋಕನಾ ಚಾತುರ್ಯ" ಕ್ಕೆ ಬೆರಗಾಗಿ ಸಂತೋಷವನ್ನು ಪ್ರಕಟ ಪಡಿಸಿದನು.

—(೧೧-ಬೀರಬಲನ ವರ್ಣ.)—

ಬೀರಬಲನು ಸ್ವಲ್ಪ ಶ್ಯಾಮ ವರ್ಣದವನಿದ್ದನು. ಒಂದು ದಿವಸ ದಿಲಗದಲ್ಲಿ ಮನುಷ್ಯರ ಸುಂದರತನದ ವಿಷಯವಾಗಿ ಚರ್ಚೆಯು ನಡೆದಿತ್ತು. ಆಗ ಬೀರಬಲನು ದಿಲಗಕ್ಕೆ ಬರಲು, ಎಲ್ಲರೂ ಅವನನ್ನು ನೋಡಿ ಹಾಸ್ಯ ಮಾಡಹತ್ತಿದರು, ಇದರ ಕಾರಣವನ್ನು ತಿಳಿದುಕೊಳ್ಳಬೇಕೆಂಬ ಯೋಚನೆ ಬಂತು, ಆದರೂ ಮನಸ್ಸನ್ನು ಸ್ಥಿರಪಡಿಸಿಕೊಂಡು ಸಮಯನೋಡಿಕೊಂಡು ಬಾದಶಹನಿಗೆ ಅನ್ನುತ್ತಾನೆ:-ಪೃಥ್ವೀನಾಥ ? ಈ ಹೊತ್ತು ಬಹಳೇ ಆನಂದದಲ್ಲಿ ಇದ್ದಂತೆ ಕಂಡುಬರುತ್ತದೆ" ಬಾದಶಹನು ಸ್ವಲ್ಪನಕ್ಕು "ನಿಮ್ಮ ಕುರೂಪತೆಯನ್ನು ನೋಡಿ ಇವರೆಲ್ಲರೂ ಹಾಸ್ಯಮಾಡ ಹತ್ತಿದ್ದಾರೆ ನಾವೆಲ್ಲರೂ ಗೌರಾಂಗರಾಗಿದ್ದು ನೀನು ಮಾತ್ರ ಶ್ಯಾಮಾಂಗನಾಗಿರುವದು ಯಾಕೆ ? " ಎಂದು ಪ್ರಶ್ನೆಮಾಡಿದನು.

ಬೀರಬಲ—"ಇದರ ಕಾರಣವು ನಿಮಗೆ ವಿದಿತವಾಗಿರುವದಿಲ್ಲವ್ರೋ ,,

ಬಾದಶಹ—" ನನಗೆ ಈ ಕಾರಣವು ವಿದಿತವಾಗಿಲ್ಲ ಹೀಗಾಗಿದ್ದ ಕಾರಣವೇನು ? ,,

ಬೀರಬಲ-" ಪರಮೇಶ್ವರನು ಸೃಷ್ಟಿಯ ನಿರ್ಮಾಣ ಮಾಡಲು ಸಿದ್ಧನಾಗಿ ಪ್ರಥಮದಲ್ಲಿ ವೃಕ್ಷಗಳನ್ನು ನಿರ್ಮಿಸಿದನು. ಅದರಿಂದ ಅವನ ಮನಸ್ಸು ತೃಪ್ತವಾಗಲಿಲ್ಲ. ಆಮೇಲೆ ಪಕ್ಷಿಗಳನ್ನು ನಿರ್ಮಾಣ ಮಾಡಿದನು ಅದರಿಂದ ಅವನಿಗೆ ಸ್ವಲ್ಪಕಾಲ ಆನಂದವುಂಟಾಯಿತು ಮುಂದೆ ಈ ಪ್ರಾಣಿಗಳಲ್ಲಿ ಇನ್ನೂ ಕೆಲವು ಶ್ರೇಷ್ಟವಾದ ಪ್ರಾಣಿಗಳನ್ನು ಸೇರಿ

ಸಬೇಕೆಂದು ತಿಳಿದು ಮನುಷ್ಯವರ್ಗವನು ನಿರ್ಮಿಸಿದನು ಆ ಮೇಲೆ ಮನುಷ್ಯನಿಗೆ ಅವಶ್ಯವಾಗಿ ಬೇಕಾಗಿರುವ ರೂಪ, ಧನ, ಬುದ್ಧಿ, ಸಾಮರ್ಥ್ಯ ಎಂಬವುಗಳನ್ನು ನಿರ್ಮಿಸಿ, ಅವುಗಳನ್ನು ಪ್ರತ್ಯೇಕವಾಗಿ ಇಟ್ಟು, ಈ ನಾಲ್ಕು ಪದಾರ್ಥಗಳಲ್ಲಿ ನಿಮ್ಮ ನಿಮ್ಮ ಮನಸ್ಸಿಗೆಬಂದ ಪದಾರ್ಥಗಳನ್ನು ತೆಗೆದು ಕೊಳ್ಳಿರಿ ? ಎಂದು ಆಜ್ಞಾಯಿತ್ತನು. ನಾನು ಮೊಟ್ಟಮೊದಲು ಹೋಗಿ ಬುದ್ಧಿಯನ್ನು ತೆಗೆದು ಕೊಂಡೆನು ; ಆ ಮೇಲೆ ಎರಡನೇ ಪದಾರ್ಥಗಳನ್ನು ತೆಗೆದುಕೊಳ್ಳಬೇಕೆಂದು ಹೋಗುವಷ್ಟರಲ್ಲಿಯೇ ನೀವೆಲ್ಲರೂ ನಿಮ್ಮ ನಿಮ್ಮ ಮನಸ್ಸಿಗೆ ಬಂದ ಉಳಿದ ಪದಾರ್ಥಗಳನ್ನು ತೆಗೆದು ಕೊಂಡು ಬಿಟ್ಟದ್ದರಿಂದ ನನಗೆ ಬುದ್ಧಿಯು ಹೊರತು ಅನ್ಯಪದಾರ್ಥಗಳು ಸಿಕ್ಕಲೇ ಇಲ್ಲ ಇದರಿಂದ ನನ್ನ ದೇಹವು ಕೃಷ್ಣವರ್ಣವುಳ್ಳದ್ದಾಯಿತು" ಎಂದು ಹೇಳಿದನು.

ಬೀರಬಲನ ಸಮಯೋಚಿತವಾದ ಸಂಭಾಷಣೆಯಿಂದ ಬಾದಶಹನು ಹರುಷನಿರ್ಭರನಾದನು. ಆವನು ಮನಸ್ಸಿನಲ್ಲಿ ಯೋಚಿಸಿದ್ದೇನಂದರೆ "ಬೀರಬಲನು ನಮ್ಮನ್ನು ಕೇವಲ ರೂಪಧಾರಿಗಳಾದ ಮೂರ್ತಿಗಳನ್ನಾಗಿ ಮಾಡಿ ಬುದ್ಧಿಹೀನರೆಂದು ಹೇಳಿ ತಾನು ಬುದ್ಧಿವಂತನೆಂದು ಹೇಳಿಕೊಂಡಂತಾಯಿತು" ಬೀರಬಲನು ಹೇಳಿದ ಯುಕ್ತಿ ಯುಕ್ತವಾದ ಮಾತುಗಳಿಂದ ಸಭಿಕರೆಲ್ಲರೂ ಪ್ರಸನ್ನರಾಗಿ, ತಾವು ನಿಷ್ಕಾರಣವಾಗಿ ಬೀರಬಲನನ್ನು ಪರಿಹಾಸ ಮಾಡಿದೆವೆಂದು ಲಜ್ಜಿತರಾಗಿ ಸುಳಿತು ಕೊಂಡರು ಅವರೆಲ್ಲರನ್ನು ಬೀರಬಲನು ತನ್ನ ಚಾತುರ್ಯದಿಂದ ವಶಪಡಿಸಿಕೊಂಡನು.

—(೧೨. ನ್ಯಾಯ ದ ಗಂ ಟೆ.)—

ಅಕಬರ ಬಾದಶಹನ ಮನಸ್ಸಿನಲ್ಲಿ, ತನ್ನ ರಾಜ್ಯದಲ್ಲಿ ಭಿಕ್ಷುಕನಿಂದ ಮೊದಲುಮಾಡಿ ಆಗರ್ಭ ಶ್ರೀಮಂತನವರೆಗೂ ಸರಿಯಾದ ನ್ಯಾಯ ಸಿಗಬೇಕೆಂಬ ಅಪೇಕ್ಷೆಯಿತ್ತು, ಅದಕ್ಕೋಸುಗವಾಗಿ ಅವನು ಮಧ್ಯವಸತಿಯಲ್ಲಿ ಒಂದು ಎತ್ತರವಾದ ಸ್ತಂಭವನ್ನು ನಿರ್ಮಿಸಿ, ಅದಕ್ಕೆ ಒಂದು ಕಬ್ಬಿಣದವಂಕಿಯನ್ನು ಕೂಡಿಸಿ, ಅದರೊಳಗೆ ಒಂದು ಹಗ್ಗವನ್ನು ಹಾಕಿ ಕೆಳಗೆ ಬಿಟ್ಟು ಅದರ ಎರಡನೇ ತುದಿಗೆ ಒಂದು ಗಂಟೆಯನ್ನು ಕಟ್ಟಿ ತನ್ನ ಮಹಲಿನೊಳಗೆ ಒಯ್ದಿದ್ದನು. ಯಾರಾದರೂ ನ್ಯಾಯನಿರ್ಮಿಸಗೋಸುಗ ಬಂದು ಆ ಹಗ್ಗವನ್ನು ಜಗ್ಗಿದಕೂಡಲೆ ಬಾದಶಹನು ಹೊರಗೆ ಬಂದು ವಿಚಾರಣೆಯನ್ನು ಮಾಡುತ್ತಿದ್ದನು. ಅದಕ್ಕೆ ಪ್ರಾತಃಕಾಲ ಮತ್ತು ಸಾಯಂಕಾಲದ ಒಂದೆರಡುತಾ

ಸುಗಳನ್ನು ನಿಯಮಿಸಿದ್ದನು.

ಜ್ಯೇಷ್ಠಮಾಸದಲ್ಲಿ ಒಂದುದಿವಸ ಒಳ್ಳೇಬಿಸಿಲು ಬಿದ್ದಿತ್ತು, ಶೆಕೆಯು ಅಧಿಕವಾಗಿತ್ತು, ಬಾದಶಹನು ಅಂತಃಪುರದಲ್ಲಿಮಲಗಿಕೊಂಡಿದ್ದನು ಇಬ್ಬರು ಪರಿಚಾರಿಕೆಯರು ಎಡಬಲದಲ್ಲಿ ನಿಂತುಕೊಂಡು ಬೀಸಣಿಕೆಯಿಂದ ಗಾಳಿಯನ್ನು ಬೀಸುತ್ತಿದ್ದರು, ಇಬ್ಬರು ಸೇವಕರು ಚರಣಸೇವೆಯನ್ನು ಮಾಡುತ್ತ ಕುಳಿತುಕೊಂಡಿದ್ದರು, ಅಷ್ಟರಲ್ಲಿ ಗಂಟೆಯು ಬಾರಿಸಿತು ಕೂಡಲೇ ಬಾದಶಹನು ಎಚ್ಚತ್ತು ಹೊರಗೆ ಯಾರು ಬಂದಿರುವರು ನೋಡಿಕೊಂಡು ಬಾ? ಎಂದು ಹೇಳಿ ಕಳುಹಿಸಿಕೊಟ್ಟನು. ಆ ಸೇವಕನು ಹೊರಗೆಹೋಗಿ ಬಂದು ಒಂದು ಎತ್ತು ಗಂಟೆಯ ಹಗ್ಗವನ್ನು ತನ್ನ ಕೋಡಿಗೆ ಸಿಕ್ಕಿಸಿಕೊಂಡು ಜಗ್ಗಾಡಿದ್ದರಿಂದ ಗಂಟೆಯು ಬಾರಿಸಿತು ಎಂದು ಹೇಳಿದನು, ಬಾದಶಹನು ಮತ್ತೆ ಶಯನಮಾಡಿದನು. ಸ್ವಲ್ಪ ಹೊತ್ತಿನಲ್ಲಿ ಪುನಃ ಗಂಟೆಯು ಸಪ್ಪಳವುಂಟಾಯಿತು ಮತ್ತೆ ಸೇವಕನನ್ನು ಕಳುಹಿಸಿಕೊಟ್ಟನು. ಆಗಲೂ ಸಹ ಮೊದಲಿನಂತೆ ಅ ಗೂಳಿಯೇ ಹಗ್ಗವನ್ನು ಜಗ್ಗಿತೆಂದು ಹೇಳಿದನು. ಅದಕ್ಕೆ ಬಾದಶಹನು ಯೋಚಿಸುತ್ತ ಕುಳಿತುಕೊಂಡಿರುವಾಗಲೇ ಪುನಃ ಗಂಟೆಯು ಬಾರಿಸಿತು, ಆಗ ಬಾದಶಹನು ಅಂದದ್ದೇನಂದರೆ;- "ಗಂಟೆಯನ್ನು ಬಾರಿಸಿದವನು ಮನುಷ್ಯನೇ ಆಗಲಿ, ಎತ್ತೇ ಆಗಲಿ ಕರೆದುಕೊಂಡು ಬಾ?" ಎಂದು ಅಪ್ಪಣೆಮಾಡಿದನು ಸೇವಕರು ಓಡುತ್ತ ಹೋಗಿ ಹಗ್ಗದಿಂದ ಬಂಧನಮಾಡಿ ಎತ್ತನ್ನು ಹಿಡಿದುಕೊಂಡು ಬಂದು ಬಾದಶಹನ ಎದುರಿಗೆತಂದು ನಿಲ್ಲಿಸಿದರು ಆಗ ಬಾದಶಹನು ಸಭಿಕರನ್ನು ಕುರಿತು "ಈ ಎತ್ತಿನ ಪ್ರಾರ್ಥನೆಯು ಏನಿರುವದೆಂಬದನ್ನು ವಿಚಾರಿಸಿರಿ?" ಎಂದು ಅಪ್ಪಣೆಮಾಡಿದನು ಎತ್ತಿನಪ್ರಾರ್ಥನೆಯನ್ನು ಹ್ಯಾಗೆಕೇಳಿ ತಿಳಿಯಬೇಕೆಂಬ ಯೋಚನೆಯಿಂದ ಯೆಲ್ಲರೂ ಸ್ತಂಭಿತರಾಗಿ ಕುಳಿತುಕೊಂಡಿದ್ದರು, ಅಷ್ಟರಲ್ಲಿ ಬೀರಬಲನು ಓಲಗಕ್ಕೆಬರಲು ಬಾದಶಹನು ಈ ಎತ್ತಿನ ಸಂದೇಶವೇನಿರುವದೆಂಬದನ್ನು ತಿಳಿದುಕೊಂಡು ಹೇಳು ಎಂದು ಅಪ್ಪಣೆಮಾಡಿದನು. ಬೀರಬಲನು ಆ ಎತ್ತಿನ ಹತ್ತಿರ ಹೋಗಿ ಅದರಮೈಮೇಲೆ ಕೈಯಾಡಿಸಿ ಹೇಳಿದ್ದೇನಂದರೆ- "ಜಹಾಪನಾ? ಈ ಎತ್ತು ತಮ್ಮಸನ್ನಿಧಿಯಲ್ಲಿ ಅರಿಕೆಮಾಡಿಕೊಳ್ಳುವದೇನಂದರೆ;- ನಾನು ಪ್ರಾಯಸ್ಥನಿದ್ದಾಗ್ಗೆ ಒಡೆಯನ ಹೇಳಿಕೆಯಂತೆ ಎಲ್ಲಕಾರ್ಯವನ್ನು ಜರಗಿಸುತ್ತಿದ್ದೆನು, ಆದರೆ ಈಗ ನಿರ್ಬಲತೆಯು ನನ್ನನ್ನು ಆವರಿಸಿಕೊಂಡಿರುವದರಿಂದ ಯಾವಕೆಲಸವೂ ನನ್ನಿಂದ ಸಾಗದಹಾಗಾಯಿತು, ಅದರಿಂದ ನನ್ನಸ್ವಾಮಿಯು ಕೋಪಿತನಾಗಿ ನನ್ನನ್ನು ಮನೆಬಿಡಿಸಿ ಹೊರಗೆ ಹಾಕಿದ್ದಾನೆ;"

ಎಂದು ತಮ್ಮಡಿಯಲ್ಲಿ ಪ್ರಾರ್ಥನೆಮಾಡಲಿಕ್ಕೆ ಬಂದದೆ ಎಂದು ಹೇಳಿದನು.

ಕೂಡಲೆ ಬಾದಶಹನು "ಬೀರಬಲ ನಿನ್ನ ಹೇಳಿಕೆಯು ನಿಜವೆಂಬಂತೆ ತೋರುತ್ತದೆ, ಈ ಎತ್ತಿನ ನಿಜವಾದ ಕಷ್ಟವನ್ನು ದೂರಮಾಡಲಿಕ್ಕೆಬೇಕು ಆದ್ದರಿಂದ ಈ ಎತ್ತಿನ ಒಡೆಯನು ಯಾವನೆಂಬದನ್ನು ಗೊತ್ತುಹಚ್ಚಿಕೊಂಡು ನನ್ನೆಡೆಗೆ ಕರೆದುಕೊಂಡು ಬಾ" ಎಂದು ಅಪ್ಪಣೆಮಾಡಿದನು.

ಕೂಡಲೆ ಆ ಎತ್ತಿನಹಿಂದೆ ನಾಲ್ಕಾರು ಜನ ಜವಾನರನ್ನು ಕಳುಹಿಸಿಕೊಟ್ಟನು, ಆ ಎತ್ತು ನೆಟ್ಟಗೆ ತನ್ನ ಯಜಮಾನನ ಮನೆಯಮುಂದೆಹೋಗಿ ನಿಂತುಕೊಳ್ಳಲು, ಸಿಪಾಯಿಗಳು ಅವನನ್ನು ಹಿಡಿದುಕೊಂಡು ಬಂದು ಬಾದಶಹನ ಎದುರಿಗೆ ನಿಲ್ಲಿಸಿದರು.

ಆಗ ಬೀರಬಲನು- ಯಾಕೆ ಸೆಟ್ಟರೇ ಈ ಎತ್ತು ನಿಮ್ಮದೋ !

ಸೆಟ್ಟಿ—ಅಹುದು ನನ್ನದಾಗಿದೆ;

ಬೀರಬಲ —ಇದು ನಿಮ್ಮದಾಗಿದ್ದರೆ ಇದನ್ನು ಹೀಗೆಯಾಕೆ ಬಿಟ್ಟಿರುವಿರಿ

ಸೆಟ್ಟಿ—ಮಹಾರಾಜ ? ಈಗ ಇದು ಮುಪ್ಪಿನದಾಗಿದ್ದು, ಇದರಿಂದ ಯಾವ ಕೆಲಸವೂ ಆಗುವದಿಲ್ಲ ಅದರಿಂದ ಇದನ್ನು ಬಿಟ್ಟುಬಿಟ್ಟಿದ್ದೇನೆ.

ಬೀರಬಲ—ನಿಮ್ಮ ಮನೆಯೊಳಗೆ ಯಾವನಾದರೂ ಒಬ್ಬಮನುಷ್ಯನು ವೃದ್ಧನಾಗಿ ಅವನಕಡೆಯಿಂದ ಏನೂಕಾರ್ಯವು ಆಗದಿದ್ದರೆ, ಅವನನ್ನಾದರೂ ಹೀಗೇ ಬಿಟ್ಟುಬಿಡುತ್ತೀರಲ್ಲವೇ !

ಸೆಟ್ಟಿ—ಮನೆಯೊಳಗಿನ ಮನುಷ್ಯನನ್ನು ಹ್ಯಾಗೆ ಬಿಡುವದಕ್ಕೆಬಂದೀತು.

ಬೀರಬಲ—ಅಂದಮೇಲೆ ಈ ಮೂಕಪ್ರಾಣಿಯನ್ನು ಹ್ಯಾಗೆಬಿಟ್ಟೆ ನೋಡು ಇದು ತನ್ನ ಪ್ರಾಯದಕಾಲದಲ್ಲಿ ಎಂಥಎಂಥ ಕೆಲಸಗಳನ್ನು ಮಾಡಿತು ಹಸಿವೆ ನೀರಡಿಕೆಗಳ ಪರಿವೆಯಿಲ್ಲ ನಿನ್ನ ಮನೆಯಲ್ಲಿ ದುಡಿಯಲಿಲ್ಲವೇ ? ನಿನಗೆ ಪರರಸುಖದುಃಖಗಳ ಪರಿವೆ ಇಲ್ಲವೆಂಬಂತೆಕಾಣುತ್ತದೆ ನೀನು ಬಹಳೇ ನಿರ್ದಯನಾದ ಮನುಷ್ಯನೆಂಬಂತೆ ಕಂಡುಬರುತ್ತದೆ, ಈಗ ಈ ಎತ್ತು ಸರಕಾರದ ಪಶುರಕ್ಷಣ ಗೃಹಕ್ಕೆ ಕಳಿಸಿಕೊಡುತ್ತೇನೆ ಇದರ ಹೊಟ್ಟೆಯ ಖರ್ಚಿನಸಲುವಾಗಿ ವರುಷಕ್ಕೆ ಐದುನೂರು ರೂಪಾಯಿಗಳು ಬೇಕಾಗುತ್ತವೆ ಅದನ್ನು ನೀನೇ ಕೊಡಬೇಕು.

ಸೆಟ್ಟಿ—(ಆಶ್ಚರ್ಯದಿಂದ) ಇನ್ನು ಎಷ್ಟುವರುಷ ಈ ಎತ್ತು ಬದುಕಬಹುದು ? ಇದರಹೊಟ್ಟೆಯ ಖರ್ಚಿಗೆ ವರುಷಕ್ಕೆ ಐದುನೂರು ರೂಪಾಯಿಗಳೆಂದರೆ ಬಹಳವಾಯಿತು; ನಾನೇ ಇದನ್ನು ಮನೆಗೆ ಒಯ್ದು ಪಾಲಿಸುತ್ತೇನೆ.

ಬೀರಬಲ—ಇನ್ನು ಹಾಗೆಮಾಡಲಿಕ್ಕೆ ಬರುವದಿಲ್ಲ; ರಾಜಾಜ್ಞೆಯ ಮೇರೆಗೆ ಐದುನೂರು ರೂಪಾಯಿಗಳನ್ನು ಕೊಡಲಿಕ್ಕೇಬೇಕು ಈ ಮಾತಿನವಿಷಯವಾಗಿ ನೀನು ಮೊದಲೇ ಎಚ್ಚರಗೊಳ್ಳಬೇಕಾಗಿತ್ತು, ದಂಡದ ಹಣವನ್ನು ಬೇಗನೇ ಕಳುಹಿಸಿಕೊಡು ?

ಎಂದು ಅಪ್ಪಣೆಮಾಡಿ ಆ ಎತ್ತನ್ನು ಸರಕಾರದಿಂದ ಇಡಲ್ಪಟ್ಟ "ಪಶುರಕ್ಷಣ ಗೃಹ" ಕ್ಕೆ ಕಳುಹಿಸಿಕೊಟ್ಟನು. ಆಮೇಲೆ ಇಬ್ಬರು ಕರ್ಮಚಾರಿಗಳನ್ನು ಕರೆದು "ಈ ಸೆಟ್ಟಿಯ ಕಡೆಯಿಂದ ಐದುನೂರು ರೂಪಾಯಿಗಳನ್ನು ವಸೂಲಮಾಡಿರಿ, ಒಂದುವೇಳೆ ಇವನು ಹಣವನ್ನು ಕೊಡದಿದ್ದರೆ ಆರುತಿಂಗಳಮಟ್ಟಿಗೆ ಕಠಿಣವಾದ ಕಾರಾಗೃಹದಲ್ಲಿ ಹಾಕಿಬಿಡಿರಿ" ಎಂದು ಅಪ್ಪಣೆ ಮಾಡಿದನು.

ಕಾರಾಗೃಹವಾಸದಿಂದ ತನ್ನ ಪ್ರತಿಷ್ಠೆಯು ಕಡಿಮೆಯಾಗುವದೆಂದು ತಿಳಿದು ರಾಜಾಜ್ಞೆಯ ಮೇರೆಗೆ ಐದುನೂರು ರೂಪಾಯಿಗಳನ್ನು ಕೊಡಲೊಪ್ಪಿಕೊಂಡನು. ಬೀರಬಲನ ನ್ಯಾಯನಿರ್ಣಯವನ್ನು ಕಂಡು ಬಾದಶಹನಿಗೆ ಅತ್ಯಾನಂದವಾಯಿತು.

—(೧೩. ಸ್ವಪ್ನದ ಅರ್ಥ.)—

ಒಂದುಸಾರೆ ಸ್ವಪ್ನದಲ್ಲಿ ಬಾದಶಹನ ಎಲ್ಲಾ ಹಲ್ಲುಗಳು ಬಿದ್ದಂತಾಗಿ ಒಂದೇಹಲ್ಲು ಉಳಿದಂತೆ ಕಂಡುಬಂತು, ಮರುದಿವಸ ಬಾದಶಹನು ರಮಲಶಾಸ್ತ್ರವನ್ನು ಬಲ್ಲಂಥ ಒಬ್ಬ ಮನುಷ್ಯನನ್ನು ಕರೆಯಿಸಿ, ಸ್ವಪ್ನದಫಲವೇನೆಂದು ಕೇಳಿದನು. ಅದಕ್ಕೆ ಅವನು "ರಾಜಾಧಿರಾಜ ನಿಮ್ಮ ಸಂಬಂಧಿಗಳೆಲ್ಲರೂ ನಿಮ್ಮಕ್ಕಿಂತಲೂ ಮೊದಲೇ ಮರಣಹೊಂದುವರು" ಎಂದು ಹೇಳಿದನು ಈತರದ ಅಪ್ರಿಯವಾದ ವಚನಗಳನ್ನಾಲಿಸಿ ಬಾದಶಹನು ಕೃದ್ಧನಾಗಿ, ಆ ರಮಲಶಾಸ್ತ್ರಜ್ಞನನ್ನು ಹೊರಗೆ ದೂಡಿಸಿ ಬಿಟ್ಟನು.

ಮುಂದೆ ಸ್ವಲ್ಪಹೊತ್ತಿನಲ್ಲಿ ಬೀರಬಲನುಬಂದನು; ಆಗ ಬಾದಶಹನು ಅವನಿಗೆ ಅದೇ ಪ್ರಶ್ನೆಯನ್ನು ಮಾಡಿದನು, ಕೂಡಲೆ ಬೀರಬಲನು ಉತ್ತರ ಕೊಟ್ಟದ್ದೇನಂದರೆ;-"ಮಹಾರಾಜ ? ಇದರ ಸುಪರಿಣಾಮವು ಸ್ಪಷ್ಟವಾಗಿ ಕಂಡುಬರುತ್ತಿದೆ, ತಾವು ತಮ್ಮ ಎಲ್ಲ ಆಪ್ತ ಇಷ್ಟರಕಿಂತಲೂ ಹೆಚ್ಚುಕಾಲ ಈ ಭೂಮಿಯಲ್ಲಿ ಬಾಳುವಿರಿ ಆದರೆ ಒಬ್ಬನುಮಾತ್ರ ನಿಮ್ಮ ಕಿಂತಲು ಹೆಚ್ಚು ಆಯುಷ್ಯವಂತನಾಗಿ ಬಾಳುವನು."

ಬೀರಬಲನ ನಮ್ರತೆಯಿಂದ ಯುಕ್ತವಾದ ಮತ್ತು ವಿದ್ವತ್ತು ಪ್ರಚು

ರವಾದ ಉತ್ತರವನ್ನು ಕೇಳಿ ಬಾದಶಹನು ತುಷ್ಟನಾದನು.

—(೧೪) ನಾಲ್ಕೂ ಪ್ರಶ್ನೆಗಳಿಗೆ ಒಂದೇ ಉತ್ತರ.)—

ಒಂದು ದಿವಸ ಬಾದಶಹನು ಬೀರಬಲನಿಗೆ ಕೇಳುತ್ತಾನೆ;- ಒಬ್ಬಾ ನೊಬ್ಬಗುರುವು ತನ್ನ ಶಿಷ್ಯನಿಗೆ ನಾಲ್ಕುಪ್ರಶ್ನೆಗಳನ್ನು ಮಾಡಿದನು ಅದಕ್ಕೆ ಶಿಷ್ಯನು ಒಂದೇ ಉತ್ತರವನ್ನು ಕೊಟ್ಟು ಗುರುವಿನ ಮನಸ್ಸನ್ನು ತೃಪ್ತಿ ಬಡಿಸಿದನು, ಆ ಪ್ರಶ್ನೆಗಳು ಯಾವವೆಂದರೆ;-

" ಪಾನಸಡ್ಯೆ ಘೋಡಾ ಅಡ್ಯೆ ವಿದ್ಯಾಬೀಸರ ಜಾಯ
ಜಗರೀಪರಬಾಟಿ ಜಲ್ಯೆ ಚೇಲಾಕೌನ ಉಪಾಯ "

ನೀನು ಈ ಪ್ರಶ್ನೆಗಳಿಗೆ ಸರಿಯಾದ ಒಂದೇ ಉತ್ತರವನ್ನು ಕೊಡಬಲ್ಲೆಯೋ ! ಎಂದು ಕೇಳಿದನು ಬೀರಬಲನು ಅಂದದ್ದೇನಂದರೆ - ಪೃಥ್ವೀನಾಥ ಆ ಶಿಷ್ಯನು ಹೇಳಿದ ಉತ್ತರವು ಯಾವದೆಂದರೆ;- " ಗುರುವರ್ಯ ? ತಿರುಗಾಟವಿಲ್ಲ " ಎಂದು ಹೇಳಿದಂತೆ ಕಾಣುತ್ತದೆ.

ಬಾದಶಹನು ಪುನಃ ಪ್ರಶ್ನೆಮಾಡುತ್ತಾನೆ; - ಈ ಉತ್ತರದ ವಿವರಣೆಯನ್ನು ಸ್ಪಷ್ಟವಾಗಿ ವಿಶದಪಡಿಸು.

ಬೀರಬಲ-" ಎಲೆಗಳನ್ನು ತಿರುವಿಹಾಕದಿದ್ದರೆ ಕೊಳೆತುಹೋಗುತ್ತವೆ, ಕುದುರೆಯನ್ನು ದಿನಾಲು ತಿರುವದಿದ್ದರೆ ಅದು ಚನ್ನಾಗಿ ನಡೆಯಲಾರದು, ಭೂಮಿಯನ್ನು ಚನ್ನಾಗಿ ತಿರುವಿಹಾಕದಿದ್ದರೆ, ಬಿತ್ತಿದ ಪೈರುಗಳು ನಷ್ಟವಾಗಿ ಹೋಗುತ್ತಿವೆ. ವಿದ್ಯೆಯನ್ನು ಮೇಲಿಂದಮೇಲೆ ಪುನಶ್ಚರಣ ಮಾಡದಿದ್ದರೆ ಮರೆತುಹೋಗುತ್ತದೆ. ಬಾದಶಹನು ಬೀರಬಲನ ವಿವರಣೆಯಿಂದ ಹೃಷ್ಟಮಾನಸ ನಾದನು.

—(೧೫. ಮಾವಿನ ಹಣ್ಣಿನ ಸಿಪ್ಪೆ.)—

ಒಂದುದಿವಸ ಒಬ್ಬನು ಬಾದಶಹನಿಗೆ ಕೆಲವು ಉತ್ತಮವಾದ ಮಾವಿನ ಹಣ್ಣುಗಳನ್ನು ಕಾಣಿಕೆಯಾಗಿ ಕಳುಹಿಕೊಟ್ಟಿದ್ದನು, ಬಾದಶಹನು ಅವುಗಳಲ್ಲಿಯ ಕೆಲವು ಹಣ್ಣುಗಳನ್ನು ತನ್ನ ರಾಣೀವಾಸದ ಜನರಿಗೆಲ್ಲ ಹಂಚಿಕೊಟ್ಟು ಉಳಿದವುಗಳನ್ನು ತನ್ನ ಮುಖ್ಯರಾಣಿಯಬಳಿಗೆ ಕಳುಹಿಕೊಟ್ಟು ಹಿಂದಿನಿಂದ ತಾನೂ ಹೋಗಿ ಇಬ್ಬರೂ ಕೂಡಿಕೊಂಡು ತಿನ್ನಹತ್ತಿದರು, ಬಾದಶಹನು ಹಣ್ಣುಗಳನ್ನು ತಿಂದು ಸಿಪ್ಪೆಗಳನ್ನೂ ಬೀಜವನ್ನು ರಾಣಿಯಬನ್ನ ಒಂದೆ ಚೆಲ್ಲರತ್ತಿದನು, ಅದನ್ನು ರಾಣಿಯುನೋಡಿ ಮನಸ್ಸಿನಲ್ಲಿ "ನನ್ನ ಕಿಂ

ತಲೂ ತಾನು ಹೆಚ್ಚು ತಿಂದೆನೆಂಬದನ್ನು ತೋರಿಸಬೇಕೆಂದು ನನ್ನ ಹಿಂದೆ ಚೆಲ್ಲುತ್ತಿರಬಹುದು" ಎಂದು ಕಲ್ಪನೆಮಾಡಿಕೊಂಡು ಸುಮ್ಮನಿದ್ದಳು.

ಮುಂದೆ ಸ್ವಲ್ಪಹೊತ್ತಿನಲ್ಲಿ ಬೀರಬಲನು ಅವರಿಬ್ಬರು ಕುಳಿತುಕೊಂಡ ಅಂತಃಪುರಕ್ಕೆ ಬಂದನು. ಆಗ ಬಾದಶಹನು ಬೇಗ ಮನಿಗೆ ಹಾಸ್ಯಮಾಡಬೇಕೆಂದು ಯೋಚಿಸಿ ಬೀರಬಲನಿಗೆ ಅನ್ನುತ್ತಾನೆ- "ಬೀರಬಲ ಇವಳು ಎಷ್ಟು ತಿನ್ನಾಸಕಳು ಇದ್ದಾಳೆ ನೋಡಿದಿಯಾ: ? ನಾನು ಇಷ್ಟು ಹೊತ್ತಾದರೂ ಒಂದು ಹಣ್ಣನ್ನು ಸಹ ತಿನ್ನಲಿಲ್ಲ, ಆದರೆ ಇವಳು ಬಹಳ ಹಣ್ಣುಗಳನ್ನು ತಿಂದು ಸಿಪ್ಪೆಯನ್ನೂ ಬೀಜಗಳನ್ನೂ ರಾಶಿರಾಶಿಯಾಗಿ ಹಾಕಿಬಿಟ್ಟಿದ್ದಾಳೆ" ಎಂದು ಪರಿಹಾಸಮಾಡಿದನು. ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಲಸಮರ್ಥಳಾಗಿ ರಾಣಿಯು ಮುಖವನ್ನು ತಗ್ಗಿಸಿಕೊಂಡು ಕುಳಿತುಬಿಟ್ಟಳು, ಬೀರಬಲನು ಬೇಗಮ್ಮನ ದುರ್ದೆಶೆಯನ್ನು ಕಂಡು ಆವಳ ಪಕ್ಷವನ್ನು ವಹಿಸಿ, ಬಾದಶಹನಿಗೆ ಅನ್ನುತ್ತಾನೆ;- "ಪೃಥ್ವಿಯೊಡೆಯನೇ ! ರಾಜ್ಞಿಯವರು ಬಹುತಿನ್ನಾಸಕರಿದ್ದಾರೆಂಬ ಸಂಗತಿಯು ಸ್ಪಷ್ಟವಾಗಿ ಕಂಡುಬರುತ್ತದೆ, ಆದರೆ ತಾವು ಅವರಕಿಂತಲೂ ಅಧಿಕವಾದ ತಿನ್ನಾಸಕರಿದ್ದಂತೆಕಂಡು ಬರುತ್ತದೆ; ಅದು ಹ್ಯಾಗಂದರೆ- ರಾಜ್ಞಿಯವರು ಹಣ್ಣುಗಳನ್ನು ತಿಂದುತಿಂದು ಬೀಜಗಳನ್ನೂ ಸಿಪ್ಪೆಯನ್ನೂ ಚಲ್ಲಿಕೊಟ್ಟಿರುವರು ತಾವು ಅವುಗಳನ್ನು ಸಹಾ ತಿಂದುಬಿಟ್ಟಿದ್ದೀರಿ, ಇದರಮೇಲಿಂದ ಯಾರುಹೆಚ್ಚು ಬುಭುಕ್ಷಿತರಿರುವರೆಂಬದು ಸಹಜವೇ ವ್ಯಕ್ತವಾಗುತ್ತದೆ,

ಬೀರಬಲನ ಸಮಯೋಚಿತ ಉತ್ತರವನ್ನು ಕೇಳಿ ಬಾದಶಹನು ನಿರುತ್ತರನಾಗಿ ಕುಳಿತುಕೊಂಡನು, ಬೇಗಮ್ಮಳಿಗೆ ಪರಮಾನಂದವಾಯಿತು.

—(೧೬ ಕೈಯೊಳಗಿನ ಕಂಕಣಗಳೂ ಗಡ್ಡದೊಳಗಿ ಕೂದಲುಗಳು.)—

ಒಂದು ದಿವಸ ಬಾದಶಹನೂ ಮತ್ತು ಬೀರಬಲನೂ ಕೂಡಿಕೊಂಡು ಏಕಾಂತಗೃಹದಲ್ಲಿ ಮಾತನಾಡುತ್ತ ಕುಳಿತುಕೊಂಡಿದ್ದರು. ಆ ಸಮಯದಲ್ಲಿ ಬಾದಶಹನು ಅನ್ನುತ್ತಾನೆ, ನೀನು ಬಹಳಮಾಡಿ ನಿನ್ನ ಪತ್ನಿಯ ಹಸ್ತಸ್ಪರ್ಶವನ್ನು ಪ್ರತಿದಿನದಲ್ಲಿ ಎಷ್ಟೋ ಸಾರೆ ಮಾಡುತ್ತಿರಬಹುದು ಅಂದಮೇಲೆ ಅವಳಕೈಯಲ್ಲಿದ್ದ ಕಂಕಣಗಳು ಎಷ್ಟಿರುತ್ತವೆಂಬ ಸಂಗತಿಯು ನಿನಗೆಗೊತ್ತು ಇರಬಹುದು; ಇದ್ದರೆ ಅವುಗಳ ಸಂಖ್ಯೆಯನ್ನು ತಿಳಿಸು,, ಎಂದು ಕೇಳಿದನು.

ಬಾದಶಹನ ಪ್ರಶ್ನೆಯನ್ನು ಕೇಳಿ ಬೀರಬಲನು ವಿಚಾರದಲ್ಲಿಬಿದ್ದನು

ಅವನು ಮಿಥ್ಯಾವಾದಿಯಾಗಿದ್ದಿಲ್ಲ ಆಗ ಅವನು ಹೇಳಿದ್ದೇನಂದರೆ; "ಪೃಥ್ವೀನಾಥ, ನಾನು ನನ್ನ ಪತ್ನಿಯಹಸ್ತಸ್ಪರ್ಶವನ್ನು ದಿವಸಕ್ಕೆ ಒಂದೆರಡು ಸಾರೆಮಾತ್ರ ಮಾಡುತ್ತಿರುವೆನು ಆದರೆ ತಮ್ಮ ಕೈಗಳು ನೂರಾರು ಸರತಿಗಡ್ಡವನ್ನು ಹಿಡಿದುಕೊಳ್ಳುತ್ತವೆ, ಹೀಗಾದಮೇಲೆ ತಮ್ಮ ಗಡ್ಡದಲ್ಲಿರುವ ಕೂದಲುಗಳ ಸಂಖ್ಯೆಯು ತಮಗೆ ವಿದಿತವಾಗಿರಬಹುದು. ಆದರಿಂದ ಆಕೂದಲುಗಳ ಸಂಖ್ಯೆಯು ಎಷ್ಟಿರುವದೆಂಬದನ್ನು ದಯಮಾಡಿ ಹೇಳಬೇಕು.

ಬೀರಬಲನ ಈ ಪ್ರಶ್ನೆಯಿಂದ ಬಾದಶಹನು ಕೆಲವು ಹೊತ್ತು ಸ್ತಬ್ಧನಾಗಿ ಕುಳಿತುಕೊಂಡು ಆಮೇಲೆ ಪುನಃ ನುಡಿದದ್ದೇನಂದರೆ- "ಗಡ್ಡದೊಳಗಿನ ಕೂದಲುಗಳನ್ನು ಎಣಿಸಲು ಯಾರಿಗೂ ಸಾಧ್ಯವಲ್ಲ, ಆದರೆ ಕಂಕಣಗಳನ್ನು ನೀನು ಸಹಜವಾಗಿ ಲೆಕ್ಕಮಾಡಿರಬಹುದು" ಬೀರಬಲನು ಅನ್ನುತ್ತಾನೆ; "ಮಹಾರಾಜ ಸ್ತ್ರೀಯರ ಮನಸ್ಸು ಚಂಚಲವಾದದ್ದು ಒಂದೊಂದುಸಾರೆ ಅವರು ಹೆಚ್ಚು ಕಂಕಣಗಳನ್ನು ಇಟ್ಟುಕೊಳ್ಳುತ್ತಾರೆಒಂದೊಂದು ಸಾರೆ ಕಡಿಮೆ ಇಟ್ಟುಕೊಳ್ಳುತ್ತಾರೆ. ಆದರೆ ನೀವು ದಿನಾಲು ಅಂತಃಪುರಕ್ಕೆ ಎಷ್ಟೋ ಸಾರೆ ಹೋಗಿಬರುತ್ತಿರುತ್ತೀರಿ; ಅದರಿಂದ ಅಂತಃಪುರಕ್ಕೆ ಹತ್ತಿ ಹೋಗುವ ಸ್ಥಳದಲ್ಲಿ ಪಾವಟಿಗೆ (ಮೆಟ್ಟು) ಗಳು ಎಷ್ಟಿರುತ್ತವೆಂಬದನ್ನು ಲೆಕ್ಕಮಾಡಿರಬಹುದು"

ಬಾದಶಹನು ಅನ್ನುತ್ತಾನೆ: "ಬೀರಬಲ? ನಾನು ಆ ಪಾವಟಿಗೆಗಳನ್ನು ಎಂದೂ ಎಣಿಸಿ ನೋಡಿಲ್ಲ.

ಬೀರಬಲನು ಆ ಮಾತಿಗೆ ಅನ್ನುತ್ತಾನೆ: "ನೀವು ಸ್ಥಿರವಾದ ಪಾವಟಿಗೆಗಳನ್ನೇ ಎಣಿಸಿಟಿದ್ದಮೇಲೆ, ನಾನು ಅನಿಯಮಿತವಾಗಿರುವ ಕಂಕಣಗಳನ್ನು ಎಣಿಸಿರುವ ಸಂಭವವು ಹೇಗೆ"

ಬಾದಶಹನು ಬೀರಬಲನ ಚಾತುರ್ಯದಿಂದ ಆನಂದವುಳ್ಳವನಾದನು

—(೧೭ ನೂತನ ವಿವಾಹ.)—

ಒಂದು ದಿವಸ ಬಾದಶಹನೂ ಬೀರಬಲನೂ ವಿನೋದದ ಮಾತುಗಳನ್ನಾಡುತ್ತ ಕುಳಿತುಕೊಂಡಿರಲು, ಬೀರಬಲನು ಬಾದಶಹನ ಚೇಷ್ಟೆಮಾಡಿನಕ್ಕನು, ಆಗ ಬಾದಶಹನ ಮನಸ್ಸು ಬೇರೆಕಡೆಗೆ ಇದ್ದದರಿಂದ, ಇವನು ನಗುವ ಧ್ವನಿಯನ್ನು ಕೇಳಿ, ಕೋಪವು ಬಂತು ಕೂಡಲೆ ಬಾದಶಹನು ಬೀರಬಲನ ಮನಸಿಗೆ ಹತ್ತುವಂತೆ ಮಾತಾಡಿದನು ಮೊದಲು ಅದು ಪರಿಹಾಸವೆಂದೇ ಬೀರಬಲನು ತಿಳಿದುಕೊಂಡನು ಆದರೆ ಬಾದಶಹನನೇತ್ರಗಳು ಹೆ

ಚ್ಚು ಹೆಚ್ಚು ಆರಕ್ತ ವರ್ಣವುಳ್ಳವುಗಳಾಗುವದನ್ನು ನೋಡಿ ಸುಮ್ಮನೆ ಕು ಳಿತುಕೊಂಡನು ಈ ಕಾರಣದಿಂದಂತೂ ಬಾದಶಹನ ಕೋಪವು ಮಿತಿಮೀರಿ ತು ಆಗ ಬಾದಶಹನು, "ಬೀರಬಲ! ನೀನು ನನ್ನೊಡನೆ ವಾದಮಾಡುತ್ತೀ ಯಲ್ಲವೆ? ನೀನು ಈ ದಿವಸದಿಂದ ನನ್ನ ಓಲಗಕ್ಕೆ ಬರಬೇಡ ಹೊರಟು ಹೋಗು?" ಎಂದು ಹೇಳಿದನು. ಆಗ ಬೀರಬಲನು; ಬಾದಶಹನಿಗೆ ಅತಿಶ ಯ ಕೋಪ ವುಂಟಾಗಿರುವದರಿಂದ ಏನೂ ಮಾತಾಡದೆ ಸುಮ್ಮನೆ ಹೊರಟು ಹೋದನು.

ಒಂದು ತಿಂಗಳು ಕಳೆದು ಹೋಯಿತು ಬಾದಶಹನು ಬೀರಬಲನ ಹೆಸ ರನ್ನೇ ಎತ್ತಲಿಲ್ಲ ದಿವಾನಪದವಿಯನ್ನು ಬೇರೊಬ್ಬನಿಗೆ ಕೊಟ್ಟುಬಿಟ್ಟನು.

ಬೀರಬಲನು ತನ್ನ ಕೆಲಸದಿಂದ ದೂರವಾದ ಮೇಲೆ ಒಂದು ತಿಂಗಳ ವರೆಗೆ ಗೃಹದಲ್ಲಿಯೇ ವಾಸಮಾಡಿಕೊಂಡಿದ್ದನು. ಆಮೇಲೆ ಎಲ್ಲಿಯೋ ಹೊ ರಟು ಹೋದನು. ಈ ಸಂಗತಿಯು ಅವನ ಮನೆಯವರಿಗೆ ಸಹಾ ತಿಳಿಯದೆ ಹೋಯಿತು ಅವರು ಸ್ವಸ್ಥವಾಗಿ ದಿಲ್ಲಿಯಲ್ಲಿಯೇ ಇದ್ದು ಬಿಟ್ಟರು. ಈ ಪ್ರ ಕಾರ ಮೂರು ತಿಂಗಳುಗಳು ಕಳೆದು ಹೋದವು.

ನೂತನವಾಗಿ ಬಂದ ದಿವಾನನ ಮೇಲೆ ಬಾದಶಹನ ನಂಬಿಗೆಯು ಪೂರ್ಣವಾಗಿದ್ದಿಲ್ಲ, ಅದರಿಂದ ಮತ್ತೊಬ್ಬ ದಿವಾನನನ್ನು ನಿಯಮಿಸಿಕೊಳ್ಳ ಬೇಕೆಂದು ಯೋಚಿಸಿ; "ಯಾವ ಮನುಷ್ಯನು, ದಿಲ್ಲಿಯ ಓಲಗದಲ್ಲಿ ಕೇಳ ಲ್ಪಡುವ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಗಳನ್ನು ಹೇಳುವನೋ ಅವ ನಿಗೆ ದಿವಾನಗಿರಿಯನ್ನು ಕೊಡುತ್ತೇನೆ, ಯಾವನಿಂದ ಎಲ್ಲ ಪ್ರಶ್ನೆಗಳ ಉ ತ್ತರವನ್ನು ಹೇಳಲಿಕ್ಕೆ ಆಗುವದಿಲ್ಲವೋ ಅಂಥವನನ್ನು ನಾವು ಸ್ವೀಕರಿಸ ಲಾರೆವು" ಎಂದು ಬರೆದು ಜಾಹೀರ ಪತ್ರಿಕೆಗಳನ್ನು ದೇಶದೇಶಗಳಿಗೆ ಕಳು ಹಿಕೊಟ್ಟನು ಮುಂದೆ ಒಂದು ತಿಂಗಳಾದರೂ ಯಾರೂ ಬರಲಿಲ್ಲ ಆಗ ಬಾದ ಶಹನು ಪುನಃ "ಈಗ ನನ್ನ ದರಬಾರದಲ್ಲಿರುವವರು ಯಾರಾದರೂ ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಟ್ಟರೆ; ಅವರಿಗೆ ಸಹಾ ದಿವಾ ನಗಿರಿಯ ಉಚ್ಚ ಪದವಿಯನ್ನು ಕೊಡುತ್ತೇನೆಂಬದಾಗಿ" ಹೇಳಿದನು ಆದ ರೂ ಯಾರೂ ಮುಂದೊರೆಯಲಿಲ್ಲ.

ಈ ಪ್ರಕಾರ ಷಣ್ಮಾಸಗಳು ಕಳೆದು ಹೋದವು ಆ ಮೇಲೆ ನಾಲ್ಕಾ ರು ಜನರು ದಿವಾನಗಿರಿಯನ್ನು ಹೊಂದಬೇಕೆಂಬ ಆಶೆಯಿಂದ ಬಂದು ಬಾದ ಶಹನಿಗೆ ಬೆಟ್ಟಿಯಾದರು ಕೂಡಲೆ ಒಂದು ಮಹಾಸಭೆಯು ನೆರಸಲ್ಪಟ್ಟಿತು. ಆ ಸಭೆಗೆ ದರಬಾರೀ ಜನರ ಹೊರತು ಬೇರೆಯವರಿಗೆ ಬರುವದಕ್ಕೆ ಪ್ರತಿಬಂ

ಥವಿತ್ತು ದಿವಾನ ಪದವಿಯನ್ನು ಹೊಂದಬೇಕೆಂದು ಬಂದನಾಲ್ಕಾರು ಜನರು ಸಭೆಗೆ ಬಂದರು ಅವರಲ್ಲಿ ಒಬ್ಬನು ಅತಿ ಸಡಿಲವಾದ ಚಲ್ಲಣವನ್ನು ಹಾಕಿಕೊಂಡು ಬಿಗಿಯಾಗಿರುವ ಅಂಗಿಯನ್ನು ತೊಟ್ಟುಕೊಂಡಿದ್ದನು. ತಲೆಗೆ ಒಂದು ರುಮಾಲವನ್ನು ಒಂದುಕಣ್ಣು ಮುಚ್ಚುವಂತೆ ಸುತ್ತಿಕೊಂಡಿದ್ದನು ಅವನಗಡ್ಡದ ಕೂದಲುಗಳಲ್ಲಿ ಅರ್ಧ-ಕರೀ ಕೂದಲುಗಳೂ, ಅರ್ಧ-ಬಿಳೀಕೂದಲುಗಳೂ ಇದ್ದವು ಮೋರೆಯು ಕಾಂತಿಯುಕ್ತವಾಗಿತ್ತು. ಇಂಥ ಮನುಷ್ಯನನ್ನು ಕಂಡು ದರಬಾರಿಗಳೆಲ್ಲರಿಗೂ ನಗೆಯು ಬರಹತ್ತಿತು ಪರೀಕ್ಷಕರು ಆ ಜನರನ್ನು ಮುಂಚಕ್ಕೆ ಕರೆದು ಪ್ರಶ್ನೆಗಳನ್ನು ಮಾಡಹತ್ತಿದರು.

ಪ್ರಥಮದಲ್ಲಿ ಜಗನ್ನಾಥ ಪಂಡಿತನು ಪ್ರಶ್ನೆಮಾಡಿದನು “ಈದಿವಸದ ಸಭೆಯಲ್ಲಿ ನಾವು ಮಾಡಿದ ಯಾವತ್ತು ಪ್ರಶ್ನೆಗಳಿಗೆ ಯಾವನು ಸಮರ್ಪಕವಾದ ಉತ್ತರಗಳನ್ನು ಕೊಡುವನೋ ಅವನಿಗೆ ದಿವಾನ ಪದವಿಯು ಕೊಡಲ್ಪಡುವದು. ನಾನು ಈಗ ಪ್ರಥಮದಲ್ಲಿ ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳದಿದ್ದರೆ, ಅವರಿಗೆ ಎರಡನೇ ಪ್ರಶ್ನೆಯನ್ನು ಕೇಳಲಾರೆವು ನಾನು ಕೇಳುವಪ್ರಥಮ ಪ್ರಶ್ನೆಯೇನಂದರೆ- “ಈ ಪೃಥ್ವಿಯಲ್ಲಿರುವ ಯಾವತ್ತು ಸಮುದ್ರಗಳಲ್ಲಿ ಕೂಡಿ ಎಷ್ಟು ಮುತ್ತಿನ ಸಿಂಪುಗಳಾಗುವವು ”

ಈ ಪ್ರಶ್ನೆ ಉತ್ತರವನ್ನು ಹೇಳಲಿಕ್ಕೆ ಆ ಗಡ್ಡದ ಮನುಷ್ಯನೊಬನೇ ಮುಂದೆ ಬಂದು, “ ಈಸಂಸಾರದಲ್ಲಿಯ ಯಾವತ್ತು ಮನುಷ್ಯರ ಕಣ್ಣುಗಳು ಎಷ್ಟು ಸಂಖ್ಯೆಯಾಗುವದೋ ಅಷ್ಟುಸಿಂಪುಗಳು ಸಮುದ್ರದಲ್ಲಿರುವವು ,, ಎಂದು ಉತ್ತರಕೊಟ್ಟನು ಕೂಡಲೆ ಎಲ್ಲ ಕಡೆಯಿಂದಲೂ “ವಾಹವ್ವಾ ಶಹಬಾಸ, ಧನ್ಯಧನ್ಯ,, ಎಂಬ ಆನಂದೋದ್ಗಾರವು ಕೇಳಬರಹತ್ತಿತು ಆಮೇಲೆ ಜಗನ್ನಾಥ ಪಂಡಿತನು ಎರಡನೇ ಪ್ರಶ್ನೆಯನ್ನು ಮಾಡಿದನು “ಶರೀರಕ್ಕೆ ಪ್ರಥಮ ಸುಖವ್ಯಾವದು ? ” “ ಆರೋಗ್ಯವು,, ಎಂದು ಉತ್ತರಕೊಟ್ಟನು

ಆಮೇಲೆಖಾನಖಾನನೆಂಬ್ಬವನು “ ಎಲ್ಲಕ್ಕೂ ಶ್ರೇಷ್ಟವಾದ ಶಸ್ತ್ರವ ಯಾವದು ಎಂದು ಹೇಳಿದನು. ಅದಕ್ಕೆ “ ಬುದ್ಧಿಯು, ಯಾವತ್ತು ಶಸ್ತ್ರಗಳಿಗಿಂತಲೂ ಮಿಗಿಲಾದದ್ದೆಂದು,, ಉತ್ತರ ಕೊಟ್ಟನು.

ರಾಜಾ ತೋಡರಮಲ್ಲನು “ ತೌಡು, ಮತ್ತು ಮಳಲು, ಎರಡೂ ಒಂದಕ್ಕೊಂದು ಬೆರತುಕೊಳ್ಳಲು ಆ ಮಿಶ್ರಣವನ್ನು ನೀರಿನಲ್ಲಿ ಹಾಕದೆ, ಬೇರೆ ಯಾವ ಉಪಾಯದಿಂದ ಪೃಥಕ್ಕರಣ ಮಾಡಲಿಕ್ಕೆ ಬರುವದು ,, ಎಂದು ಕೇಳಿದನು. ಅದಕ್ಕೆ ಅವನು “ ಆಮಿಶ್ರಣವನ್ನು ಭೂಮಿಯ ಮೇಲೆ ಆಗಲವಾಗಿ ಹರವಬೇಕು ಅಂದರೆತೌಡನ್ನು ಗುಬ್ಬಿಗಳುತಿಂದುಬಿಡುತ್ತವೆ ಕಡೆಗೆಮಳಲೇ

ಯೋಗ್ಯನಾದವನು ಬೀರಬಲನು, ಪಾಮರನಾದ ನನ್ನಿಂದ ಈ ಅಧಿಕಾರವು ಸುಯಂತ್ರವಾಗಿ ಸಾಗಲಾರದು "

ಅದಕ್ಕೆ ಬಾದಶಹನು ಹೇಳುತ್ತಾನೆ; - ನಾನು ಬೀರಬಲನನ್ನು ಅಧಿಕಾರದಿಂದ ದೂರಮಾಡಿದೆನು ಅವನು ಎಲ್ಲಿರುವನೆಂಬ ಸಂಗತಿಯು ಇದುವರೆಗೆ ತಿಳಿಯದೆ ಹೋಯಿತು ಈ ಕಾರಣದಿಂದ ಹೊಸಮನುಷ್ಯನನ್ನು ಅವಶ್ಯವಾಗಿ ನಿಯಮಿಸಿಕೊಳ್ಳಬೇಕಾಯಿತು, ಇನ್ನುಮೇಲೆ ಅವನು ಇರುವಸ್ಥಳವು ವಿದಿತವಾದರೆ ಅವನನ್ನು ಅವಶ್ಯವಾಗಿ ಕರೆಯಿಸಿಕೊಳ್ಳುವೆನು ಅಲ್ಲಿಯತನಗೆ ನೀನು ಕೆಲಸವನ್ನು ಸಾಗಿಸು!

ಅದಕ್ಕೆ ನೂತನಮಂತ್ರಿಯು ಅನ್ನುತ್ತಾನೆ; - " ಧೊರೆಯೇ ತಾವು ಮನಸ್ಸುಗೊಟ್ಟು ಅವನನ್ನು ಶೋಧಮಾಡಿಸಿದ್ದರೆ ನಿಶ್ಚಯವಾಗಿ ಸಿಕ್ಕೇಸಿಗುತ್ತಿದ್ದನು.

ಬಾದಶಹನು—ಇಲ್ಲ ಇಲ್ಲ; ನಾನು ಬಹುವಿಧದಿಂದ ಶೋಧಮಾಡಿಸಿದೆನು, ಇನ್ನು ಮಾಡತಕ್ಕ ಪ್ರಯತ್ನವು ಒಂದೇ ಉಳದಿರುವದು. ಅದನ್ನಷ್ಟು ಮಾಡಿಬಿಟ್ಟರೆ ಅವನು ಸಿಗುವದೆಂದು ನಾನು ನಂಬಿದ್ದೇನೆ.

ನೂತನ ಮಂತ್ರಿ—ಆದರೆ ಜಹಾಁಪನಾ ? ಅವನು ಇನ್ನು ಕೆಲವು ದಿವಸಗಳ ಮೇಲೆ ಬಂದು ಬೆಟ್ಟಿಯಾದರೆ ಆವನಿಗೆ ಮೊದಲಿನ ಕೆಲಸವನ್ನು ಕೊಡುವಿರಾ !

ಬಾದಶಹ—ಕೊಡುವೆನು, ಅವನನ್ನು ಆದಷ್ಟು ಸಾಹಸಪಟ್ಟು ಶೋಧಮಾಡಿ ಕರಿಸಿಕೊಳ್ಳಬೇಕೆಂಬ ಆತುರತೆಯುಂಟು.

ನೂತನ ಮಂತ್ರಿ—ಅವನು ವಾಸಮಾಡಿಕೊಂಡಿರುವ ಸ್ಥಳವು ನನಗೆವಿದಿತವದೆ ?

ಬಾದಶಹ—ಆ ಸ್ಥಳವನ್ನು ನೀನು ನನಗೆ ತಿಳುಹಿಸಿದರೆ ನಾನು ನಿನ್ನುಪಕಾರವನ್ನು ಯಾವಜ್ಜನ್ಮ ಪರಿಯಂತರ ಮರೆಯಲಾರೆನು.

ಈಪ್ರಕಾರ ಬಾದಶಹನಿಗಿರುವ ಆತುರತೆಯನ್ನು ಕಂಡು, ತಾನು ಧರಿಸಿರುವ ಕೃತ್ರಿಮವೇಷವನ್ನು ತೆಗೆದು ಚೆಲ್ಲಿ ನಿಂತುಕೊಂಡನು. ಬಾದಶಹನಿಗೆ ಅತಿಸಂತೋಷವಾಗಿ ಅವನನ್ನು ಆಲಿಂಗನಮಾಡಿಕೊಂಡನು, ಸಭಿಕರೆಲ್ಲರು ಆನಂದದಿಂದ ಚಪ್ಪಾಳೆಗಳನ್ನು ಹೊಡೆಯಹತ್ತಿದರು,

ಆಮೇಲೆ ಬಾದಶಹನು· ನೀನು ಇಷ್ಟುದಿವಸಗಳವರೆಗೆ ಎಲ್ಲಿ ಇದ್ದೀ ! ಎಂದು ಪ್ರಶ್ನೆಮಾಡಿದನು. ಆಗ ಬೀರಬಲನು ಹೇಳುತ್ತಾನೆ; ನಾನು ತಮ ಸನ್ನಿಧಿಯಿಂದ ಹೊರಟುಬಂದು ಒಂದು ಮಾಸಪರಿಯಂತರ ಗುಪ್ತವಾಗಿ

ಮನೆಯಲ್ಲಿಯೇ ಇದ್ದೆನು, ಆಮೇಲೆ ಪ್ರಚ್ಛನ್ನ ವೇಷಧಾರಿಯಾಗಿ ಹಗಲು ರಾತ್ರಿಗಳಲ್ಲಿ ಪಟ್ಟಣದೊಳಗೆ ಸಂಚರಿಸಹತ್ತಿದೆನು ರಾತ್ರಿಯಲ್ಲಿ ನಾನುಕಳ್ಳರನ್ನು ಹಿಡಿಯುವಕೆಲಸವನ್ನು ಕೈಕೊಂಡಿದ್ದೆನು. ಇಷ್ಟಾದರೂ ನನ್ನನ್ನು ಯಾರೂ ಗುರುತಿಸಲಿಲ್ಲ ಆಮೇಲೆ ಈ ವೇಷದಲ್ಲಿ ನನ್ನನ್ನು ಯಾರೂ ಗುರುತಿಸಲಾರರೆಂದು ನಿಶ್ಚಯವಾದಮೇಲೆ ಪ್ರತಿದಿವಸ ಸಭೆಗೆ ಬಂದು ಅಲ್ಲಿಯುವ ರ್ತಮಾನಗಳನ್ನು ತಿಳಿಯಹತ್ತಿದೆನು, ಈಸಭೆಯ ವರ್ತಮಾನವು ತಿಳಿಯ ಬರಲಾಗಿ ಈದಿವಸ ಇಲ್ಲಿಗೆ ಪ್ರಾಪ್ತನಾದೆನು.

ನೂತನ ಮಂತ್ರಿಗೆ ಕೊಡಬೇಕೆಂದು ತರಿಸಿಕೊಂಡಿದ್ದ ಉಡುಪುಗಳನ್ನೆಲ್ಲ ಬೀರಬಲನಿಗೇ ಕೊಟ್ಟು ಅವನ ಮೊದಲಿನಕೆಲಸ ನಿಯಮಿಸಿದನು. ಆದರಿಂದ ಎಲ್ಲ ಸಭಿಕರಿಗೂ ನಗರವಾಸಿಗಳಿಗೂ ಅತ್ಯಾನಂದವಾಯಿತು.

—(೧೮) ನಾಲ್ಕುಜನ ವರ್ತಕರೂ ಮತ್ತು ಬಾದಶಹನು.)—

ಗ್ರೀಷ್ಮಕಾಲವು ಆರಂಭವಾಗಿತ್ತು, ಸುಳಿಗಾಳಿಯು ಮೆಲ್ಲಮೆಲ್ಲಗೇ ಸುಳಿದಾಡುತ್ತಿತ್ತು, ಋತುಮಾನಕ್ಕನುಸರಿಸಿ ತೆಳ್ಳಗಿನ ವಸ್ತ್ರಗಳನ್ನುಹೊದ್ದುಕೊಂಡು ಬಾದಶಹನೂ ಬೀರಬಲನೂ ಉದ್ಯಾನವನದಲ್ಲಿ ಸಂಚರಿಸುತ್ತಿದ್ದರು. ಆಗ ಬಾದಶಹನು ಬೀರಬಲನಿಗೆ ಕೇಳುತ್ತಾನೆ;- “ ಬೀರಬಲ ವರ್ತಕರು ತಾವು ಚತುರತಾಯಿಯ ಮಕ್ಕಳು ” ಎಂದು ಹೇಳಿಕೊಳ್ಳುತ್ತಾರೆ ಇದು ನಿಜವೇ ?

ಬೀರಬಲ—ನಿಜವು.

ಹೀಗಿದ್ದರೆ ಅದನ್ನು ಸಿದ್ಧಮಾಡಿ ತೋರಿಸು ! ಎಂದು ಬಾದಶಹನು ಹೇಳಿದನು. ಆಗ ಬೀರಬಲನು ಪೇಟೆಯೊಳಗಿಂದ ಉದ್ಭಿನಕಾಳುಗಳನ್ನುತರಿಸಿ ನಾಲ್ಕುಜನ ವರ್ತಕರನ್ನು ಕರೆಯಿಸಿ ಅವರೆದುರಿಗೆ ಆ ಕಾಳುಗಳನ್ನಿಟ್ಟು “ ವರ್ತಕರೇ ಈ ಕಾಳಿನ ಹೆಸರನ್ನುಹೇಳಿರಿ ” ಎಂದು ಅಪ್ಪಣೆಮಾಡಿದನು.

ಆಗ ಚತುರತಾಯಿಯ ಮಕ್ಕಳಾದ ವರ್ತಕರಿಗೆ ವಿಚಾರವು ಬಿತ್ತು, ಈ ಉದ್ಭಿನಕಾಳುಗಳನ್ನು ಅರಿಯದವರಾರು ? ಇದರ ಹೆಸರನ್ನು ಹೇಳುವದು ಸುಲಭಸಾಧ್ಯವದೆ; ಹೀಗಿದ್ದರೂ ಇದರ ಹೆಸರನ್ನು ಬಾದಶಹನು ಕೇಳಿ ತಿಳಿದುಕೊಳ್ಳಬೇಕಾದರೆ ಇದರಲ್ಲಿ ಏನೋ ಒಂದು ಗೂಢವಿರಬೇಕು, ಆದ್ದರಿಂದನಾವು ಇದರವಿಷಯದಲ್ಲಿ ಚನ್ನಾಗಿವಿಚಾರಮಾಡಿ ಹೇಳಬೇಕು ಎಂದು ಯೋಚಿಸತೊಡಗಿದರು. ಈಪ್ರಕಾರ ವಿಚಾರಮಗ್ನರಾದ ಆ ವರ್ತಕರನ್ನು

ಕುರಿತು ಬಾದಶಹನು ಅನ್ನುತ್ತಾನೆ;-ನೀವು ಇಷ್ಟು ವಿಚಾರಮಗ್ನರಾದದ್ದು
ಯಾಕೆ! ಇವರ ಹೆಸರನ್ನು ಹೇಳುವಿರೋ ಇಲ್ಲವೋ? ಎಂದು ಕೇಳಿದನು.
ಅಷ್ಟರಲ್ಲಿ ಒಬ್ಬ ವರ್ತಕನು ಮುಂದೆಬಂದು 'ಸ್ವಲ್ಪ ಉಪ್ಪಿನಕಾಳುಗಳನ್ನು
ಕೈಯಲ್ಲಿ ತೆಗೆದುಕೊಂಡು ಹೇಳಿದ್ದೇನಂದರೆ-" ಈ ಕಾಳುಗಳು ಬಹಳಮಾಡಿ
ಜೋಳವಾಗಿರಬಹುದು " ಎಂದನು. ಮತ್ತೊಬ್ಬನು- " ಛೀ ಅಲ್ಲ ಮೆಣಸಿನ
ಕಾಳುಗಳು " ಎಂದು ಹೇಳಿದನು. ಮೂರನೆಯವನು- " ಸುಳ್ಳು ಇವು ಕಡಲೆ
ಯ ಕಾಳಿಗಿಂತ ಸಣ್ಣವಾಗಿವೆ; ಇವುಗಳ ಹೆಸರು ನೆನಪಿಗೆ ಬರಲೊಲ್ಲದು "
ಎಂದು ಅನ್ನಹತ್ತಿದನು. ಇವರ ಮಾತುಗಳನ್ನು ಕೇಳಿ ಬಾದಶಹನು " ನೀ
ವೆಲ್ಲರೂ ಭ್ರಾಂತರಾದಂತೆ ಕಾಣುತ್ತದೆ, ಇವು ಉಪ್ಪಿನಕಾಳುಗಳಲ್ಲವೇ?
ಎಂದನು. ಆಗ ವರ್ತಕನೊಬ್ಬನು ಅನ್ನುತ್ತಾನೆ- " ಹಾ ಹಾ? ಖಾವಿಂದ
ಅದೇ ಅದೇ; ಬಾದಶಹನು " ಅದೇ " ಎಂದರೇನು! ಹೆಸರು ಹೇಳಬಾರದೇ
ಎಂದನು, ಅದಕ್ಕೆ ವರ್ತಕನು "ಪೃಥ್ವೀನಾಥ! ಇದೇ ಈಗನೀವು ಹೇಳಿದಿರ
ಲ್ಲಾ; ಅದೇ " ಅದಕ್ಕೆ ಬಾದಶಹನು ಪುನಃ ನಾನು ಈಗ ಯಾವಹೆಸರನ್ನು
ಹೇಳಿದೆನು? ವರ್ತಕನು- ಖಾವಿಂದ ಆ ಹೆಸರು ಮರೆತುಹೋಯಿತು. ಬಾ
ದಶಹನು " ಏನು? ಉಪ್ಪು " ವರ್ತಕರು ಜಹಾಪನಾ ಅದೇ? ಎಂದನು.
ಇಷ್ಟಾದರೂ ಆ ವರ್ತಕರು " ಉಪ್ಪು " ಎಂಬ ಹೆಸರನ್ನು ಹೇಳಲಿಲ್ಲ, ಇದ
ನ್ನು ಕಂಡು ಬಾದಶಹನು ಸಂತುಷ್ಟನಾದನು.

—(೧೯. ವಿಶ್ವಾಸವು ಅಧಿಕವೋ! ದೇವರು ಅಧಿಕವೋ?)—

ಒಂದುಸಾರೆ ಅಕಬರ ಬಾದಶಹನ ಓಲಗದಲ್ಲಿ ಅನೇಕದೇಶದ ರಾಯ
ಭಾರಿಗಳು ಕಪ್ಪವನ್ನು ಕೊಡಲೋಸುಗ ಮಿಲಿತರಾಗಿದ್ದರು. ಎಲ್ಲ ದರಬಾ
ರದ ಜನರು ತಮ್ಮತಮ್ಮ ಕೆಲಸಗಳಲ್ಲಿ ಮಗ್ನರಾಗಿ ಕುಳಿತುಕೊಂಡಿದ್ದರು,
ಬಾದಶಹನ ಸಮ್ಮುಖದಲ್ಲಿ ವಾರಾಂಗನೆಯರ ನೃತ್ಯಗಾಯನಾದಿಗಳು ನಡೆ
ದಿದ್ದವು ಪರದೇಶದ ರಾಯಭಾರಿಗಳು ಅನೇಕ ದುರ್ಮಿಳವಾದ ಪದಾರ್ಥಗಳ
ನ್ನು ಕಾಣಿಕೆಯಾಗಿ ಸಮರ್ಪಿಸುತ್ತಿದ್ದರು. ಆ ದಿವಸ ಬಾದಶಹನು ಸಾವಿ
ರಾರುಜನ ಫಕ್ಕೀರರಿಗೂ, ಮುಲ್ಲಾ ಮೌಲವಿಗಳಿಗೂ ದಾನವನ್ನು ಕೊಟ್ಟ
ನು. ಅಷ್ಟರಲ್ಲಿ ಬಾದಶಹನ ಮುಖ್ಯಗುರುವು ಬಂದನು, ಅವನಿಗೆ ಅನರ್ಘ್ಯ
ವಾದ ಅನೇಕ ವಸ್ತುಗಳನ್ನು ಕಾಣಿಕೆಯಾಗಿ ಸಮರ್ಪಿಸಿದನು ಎಲ್ಲ ಜನರು
ಆಶೀರ್ವಾದಮಾಡಿ ತಮ್ಮತಮ್ಮ ಸ್ಥಳಗಳನ್ನು ಕುರಿತು ಹೊರಟುಹೋದರು
ಇದನ್ನೆಲ್ಲ ನೋಡಿ ಬೀರಬಲನಿಗೆ ಸ್ವಲ್ಪನಗೆಯು ಬಂತು, ಎಲ್ಲ ಕಾರ್ಯವು

ಸಮಾಪ್ತಿಯಾದ ಮೇಲೆ ಬಾದಶಹನು- "ಬೀರಬಲ ದೇವರು ಅಧಿಕವ್ರೋ? ಅಥವಾ ವಿಶ್ವಾಸವು ಅಧಿಕವಾದದ್ದೋ" ಎಂದು ಪ್ರಶ್ನೆಮಾಡಿದನು. ಬೀರಬಲನು ಆಕ್ಷಣಕ್ಕೇ ಎದ್ದು ನಿಂತುಕೊಂಡು- "ಸ್ವಾಮಿಯೇ? ವಿಶ್ವಾಸವು ಅಧಿಕವಾದದ್ದು" ಎಂದು ಉತ್ತರಕೊಟ್ಟನು.

ಬಾದಶಹ—ವಿಶ್ವಾಸವು ಎಂದೂ ಅಧಿಕವಾಗಲಾರದು, ದೇವರಿದ್ದರೇ ವಿಶ್ವಾಸವುಂಟಾಗುವದು.

ಬೀರಬಲ—ಹಾಗಲ್ಲ; ವಿಶ್ವಾಸದಿಂದಲೇ ದೇವರಲ್ಲಿ ಮಹತ್ವವುಂಟಾಗಿದೆ.

ಬಾದಶಹ—(ಸ್ವಲ್ಪಕೃದ್ಧನಾಗಿ) ಬೀರಬಲ್ಲ! ನೀನು ಹೇಳುವದು ಅಸಂಭಾವ್ಯವು, ದೇವರನ್ನು ಭಜನೆಮಾಡಿದರೆ ಅವನು ಪ್ರಸನ್ನನಾಗುವವಿಲ್ಲವೆ

ಬೀರಬಲ—ಅಹುದು? ನಿಜ; ನಾವು ದೇವರನ್ನು ವಿಶ್ವಾಸದಿಂದ ಭಜನೆಮಾಡಿದರೇ ಅವನು ಪ್ರಸನ್ನನಾಗುವನು. ಹಿಂದುಗಳಾದನಾವು ಮೂರ್ತಿಪೂಜಕರಾಗಿದ್ದೇವೆ, ಆದರೆ ಆ ಮೂರ್ತಿಗಳು ನಮಗೆ ಇಷ್ಟಾರ್ಥವನ್ನು ಕೊಡುವದಿಲ್ಲ. ನಾವು ಅವುಗಳಲ್ಲಿ ವಿಶ್ವಾಸವನ್ನಿಟ್ಟು ಪೂಜೆಮಾಡಿದರೇ ನಮ್ಮ ಮನೋಬಯಕೆಗಳು ಪೂರ್ಣವಾಗುವವು ಇಲ್ಲದಿದ್ದರೆ ಇಲ್ಲಾ?

ಈಮಾತಿಗೆ ಬಾದಶಹನು ಸಮ್ಮತಿಸದೆ- "ನೀನು ದೇವರಕಿಂತಲೂ ವಿಶ್ವಾಸವು ಅಧಿಕವಾದದ್ದೆಂದು ಪ್ರತ್ಯಕ್ಷಪ್ರಮಾಣದಿಂದ ತೋರಿಸುವಿಯೋ? ಎಂದು ಕೇಳಿದನು.

ಅದಕ್ಕೆ ಬೀರಬಲನು ಸ್ವಾಮಿ! ಈ ಕೆಲಸವು ಒಂದೆರಡು ದಿವಸಗಳಲ್ಲಿ ಸಾಧಿಸತಕ್ಕದ್ದಲ್ಲ.

ಬಾದಶಹ—ನಿನಗೆ ನಾನು ಒಂದು ತಿಂಗಳ ಅವಧಿಯನ್ನು ಕೊಡುತ್ತೇನೆ ಅಷ್ಟರಲ್ಲಿ ನೀನು ನಿನ್ನಮಾತನ್ನು ಸಿದ್ಧಮಾಡಿ ತೋರಿಸದಿದ್ದರೆ ನಿನ್ನಶಿರವು ನಿನ್ನದೇಹದಮೇಲೆ ನಿಲ್ಲಲಾರದು ಎಂಬ ಮಾತನ್ನುಲಕ್ಷ್ಯದಲ್ಲಿ ಇಟ್ಟುಕೋ?

ಬೀರಬಲ—ಒಳ್ಳೇದು; ಹಾಗೇ ಆಗಲಿ.

ಈ ಸಂಗತಿಯು ನಡೆದು ನಾಲ್ಕಾರು ದಿವಸಗಳಾದಮೇಲೆ ಬೀರಬಲನು ಬಾದಶಹನ ಅಂತಃಪುರಕ್ಕೆ ಹೋಗಿ ಅವನದೊಂದು ಪಾದರಕ್ಷೆಯನ್ನು ಕದ್ದುಕೊಂಡು ಬಂದು, ಅದನ್ನು ಒಂದು ಉತ್ತಮವಾದ ರೇಶಿಮೆವಸ್ತ್ರದಲ್ಲಿ ಸುತ್ತಿ ನಗರದ ಬಹಿರ್ಭಾಗದಲ್ಲಿ ಗುಪ್ತರೀತಿಯಿಂದ ಒಂದು ಕಬರ [ಗೋರಿ] ವನ್ನು

ಸಿದ್ಧಪಡಿಸಿ ಅದರಲ್ಲಿ ಆ ಪಾದರಕ್ಷೆಯ ಗಂಟನ್ನು ಯಿಟ್ಟು ಅದರಮೇಲೆ ಒಂದು ಹಾಸುಗಲ್ಲನ್ನು ಭದ್ರವಾಗಿ ಕೂಡಿಸಿ ಅದರಮೇಲೆ ಒಬ್ಬ ಮುಸಲ್ಮಾನನನ್ನು ನಿಯಮಿಸಿ ಅವನಿಗೆ ಈ ಗೋರಿಯು ಯಾರದು ? ಎಂದು ಯಾರಾದರೂ ಪ್ರಶ್ನೆ ಮಾಡಿದರೆ ನೀನು ಇದು " ಯಕೀನ ಶಾಹಪೀರ " ಎಂಬ ಸಾಧು ಪುರುಷನ ಗೋರಿಯೆಂದು ಹೇಳು, ಮತ್ತು ನಿನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಜನರವಿಶ್ವಾಸವು ಇದರಮೇಲೆ ಉಂಟಾಗುವಂತೆ ಪ್ರಯತ್ನ ಮಾಡು. ಎಂದು ಅಪ್ಪಣೆಯಿತ್ತನು.

ಅವನು ಬೀರಬಲನ ಶಿಕ್ಷಾನುಸಾರವಾಗಿ " ಜನರೊಳಗೆ ಅದರ ಪ್ರಶಂಸೆಯನ್ನು ಮಾಡಹತ್ತಿದನು ಅದರಿಂದ ಮುಂದೆ ನಾಲ್ಕಾರು ದಿವಸಗಳಾಗುವದರೊಳಗೆ ಜನ ಸಮುದಾಯವು ಆ ಗೋರಿಯ ದರ್ಶನಕ್ಕೆ ಹೋಗಿ ಬರಹತ್ತಿದರು. ಯಂತ್ರ, ಮಂತ್ರ, ತಂತ್ರಗಳನ್ನು ಮಾಡಹತ್ತಿದನು ದಿನಒಂದಕ್ಕೆ ಅಲ್ಲಿ ಜನಸಮುದಾಯವು ಹೆಚ್ಚು ಹೆಚ್ಚು ಕೂಡ ಹತ್ತಿತು ನನಗೆ ಯಂತ್ರ ಮಾಡಿ ಕೊಡಿರಿ. ನನಗೆ ದಾರವನ್ನು ಮಂತ್ರಿಸಿ ಕೊಡಿರಿ, ನನ್ನ ಮಗಳಿಗೆ ಭೂತಬಾಧೆಯಾಗಿದೆ, ಅದನ್ನು ಪರಿಹಾರ ಮಾಡಿಕೊಡಿರಿ " ಎಂಬ ಜನರು ನಾಮುಂದೆ, ನೀಮುಂದೆ, ಎಂದು ಹಾತೊರೆಯ ಹತ್ತಿದರು ಸ್ವಲ್ಪದಿವಸಗಳೊಳಗೆ ಯಕೀನಶಾಹ ಪೀರನ ವರ್ತಮಾನವು ದರಬಾರದವರೆಗೆ ಒಂದು ಮುಟ್ಟಿತು, ದರಬಾರೀ ಜನರೆಲ್ಲರೂ ಬಾದಶಹನ ಮುಂದೆ ಆ ಪೀರನನ್ನು ಸ್ತೋತ್ರ ಮಾಡಹತ್ತಿದರು ಅವರಲ್ಲಿ ಒಬ್ಬನಂತೂ, " ಜಹಪನಾ ! ಹುಮಾಯೂನ ಬಾದಶಹದವರು ಈ ಯಕೀನ ಶಹಾಪೀರನನ್ನು ಭಕ್ತಿಯಿಂದ ಪೂಜಿಸಿದ್ದರಿಂದಲೇ ಪುನಃ ಅವರಿಗೆ ರಾಜ್ಯಪ್ರಾಪ್ತವಾಯಿತು, " ಎಂದು ಹೊಗಳಿದನು ಈ ಪ್ರಕಾರ ಪಟ್ಟಣದ ಜನರೆಲ್ಲರೂ ಆ ಪೀರನನ್ನು ಹೊಗಳಹತ್ತಲು, ಬಾದಶಹನ ಮನಸ್ಸಿನಲ್ಲಿ ದರ್ಶನ ತೆಗೆದುಕೊಂಡು ಬರಬೇಕೆಂಬ ಇಚ್ಛೆಯು ಪ್ರಬಲವಾಯಿತು.

ಮರುದಿವಸ ಬಾದಶಹನು ತನ್ನ ಮಂತ್ರಿಮಂಡಲದವರನ್ನೂ ಮುತ್ಸದ್ದಿಗಳನ್ನೂ, ಸರದಾರರನ್ನೂ ಕರೆದುಕೊಂಡು ಪಾದಚಾರಿಯಾಗಿ ಪೀರನ ದರ್ಶನಕ್ಕೆ ಹೋದನು. ಅಲ್ಲಿ ಜನಸಮುದಾಯವು ಬಹಳಕೂಡಿತ್ತು ಅನೇಕ ಪ್ರಕಾರದ ವಸ್ತುಗಳ ಕ್ರಯವಿಕ್ರಯವು ಭರದಿಂದ ನಡೆಯ ಹತ್ತಿತ್ತು ಬಾದಶಹನು ಅದನ್ನೆಲ್ಲ ನೋಡಿ ಸಂತೋಷಪಟ್ಟನು. ಹಿಂದೂ ಮತ್ತು ಮುಸಲ್ಮಾನ ಮುತ್ಸದ್ದಿಗಳ ಸಹಿತವಾಗಿ ಗೋರಿಯ ಸಮೀಪಕ್ಕೆ ಹೋಗಿ ಪ್ರಣಾಮ ಮಾಡಿದನು ಆ ಜನರಲ್ಲಿ ಬೀರಬಲನೂ ಇದ್ದನು ಬಾದಶಹನು ಪೀರನ

ಗೋರಿಗೆ ನಮಸ್ಕಾರ ಮಾಡು ಎಂದು ಆಗ್ರಹ ಮಾಡಿದನು ಆಗಬೀರಬಲನು ಅನ್ನುತ್ತಾನೆ;- ಪೃಥ್ವೀನಾಥ, ತಾವು ದೇವರಕಿಂತಲೂ, ವಿಶ್ವಾಸವು ಅಧಿಕ ವಾದದ್ದೆಂದು ಒಪ್ಪಿಕೊಂಡರೆ ನಾನು ಪ್ರಣಾಮ ಮಾಡುತ್ತೇನೆ " ಎಂದನು.

ಆಗ ಬಾದಶಹನು ಅನ್ನುತಾನೆ;- ನಾನು ಈಗ ಸದ್ಯಕ್ಕೆ ವಿಶ್ವಾಸ ಕ್ಕಿಂತಲೂ, ದೇವರೇ ಶ್ರೇಷ್ಟವಾದದ್ದೆಂದು ಅನ್ನುತ್ತೇನೆಯೇ ಹೊರತು, ನಿನ್ನಮಾತಿ ಗೆಸಮ್ಮತಿಸಲಾರೆನು. ನಾನು ಈ ಪೀರಸಾಹೇಬನಿಗೆ ಪ್ರಾರ್ಥಿ ಸುವದೇನಂದರೆ,- " ನನ್ನಮಗನು ಪ್ರತಾಪ ಸಿಂಹನನ್ನು ಜಯಿಸಿಕೊಂಡು ಬಂದರೆ, ಈ ಗೋರಿಯ ಮೇಲೆ ಸಂಗಮರವರೀ ಕಲ್ಲಿನ ಮಸೂತಿಯನ್ನು ಕಟ್ಟಿಸುವೆನು. " ಎಂದು ಹೇಳಿದನು.

ಈ ಪ್ರಕಾರ ಅವರಿಬ್ಬರ ನಡುವೆ ವಾದವಿವಾದವು ನಡೆದಿರಲು ಒಬ್ಬ ಕುದುರೆಯ ಸವಾರನು ಕುದರೆಯನ್ನು ಓಡಿಸುತ್ತ ಬಂದು ಮುಜರೆ ಮಾಡಿ ನಿಂದದ್ದೇನಂದರೆ;- " ತಮ್ಮ ಜೇಷ್ಟಪುತ್ರರಾದ ಸೇಲೀಮ ಬಾದಶಹರು ಹೇಳಿ ಕಳುಹಿಸಿರುವ ದೇನಂದರೆ;- " ಮೇವಾಡದ ರಾಣಾಪ್ರತಾಪ ಸಿಂಹ ನು ನಿರ್ಬಲನಾಗಿ, ನಮ್ಮ ಕೈವಶವಾಗುವದಕ್ಕೆ ಒಪ್ಪಿಕೊಂಡಿದ್ದಾನೆ: ಇನ್ನು ಸ್ವಲ್ಪದಿವಸಗಳಲ್ಲಿಯೇ ಅವನನ್ನು ಕರೆದುಕೊಂಡು ಸನ್ನಿಧಿಗೆ ಬರುತ್ತೇನೆ" ಎಂಬದಾಗಿ ವಿಜ್ಞಾಪನೆ ಮಾಡಿಕೊಂಡಿದ್ದಾರೆ. " ಎಂದು ಉಸುರಿದನು.

ಈ ಆನಂದದ ವಾರ್ತೆಯನ್ನು ಕೇಳಿದ ಕೂಡಲೇ ಬಾದಶಹನಿಗೆ ಅ ತ್ಯಾನಂದವಾಯಿತು. ಆಗ ಅವನು ಬೀರಬಲನ ಕಡೆಗೆ ತಿರುಗಿ, " ಬೀರಬಲ್ಲ ಈಗಾದರೂ ವಿಶ್ವಾಸಕ್ಕಿಂತಲೂ ದೇವರು ಅಧಿಕನೆಂದು ತಿಳಿಯ ಬಂತೋ? ನಾನು ಪೀರಶಾಹನಿಗೆ ಬೇಡಿಕೊಳ್ಳುವಷ್ಟರಲ್ಲಿಯೇ ಈ ಆನಂದದವಾರ್ತೆ ಯು ಬಂದುತಲ್ಪಿತು, ನೋಡಿದಿಯಾ !

ಆಗ ಬೀರಬಲನು ಅನ್ನುತ್ತಾನೆ: ಸ್ವಾಮಿ! ಈಪೀರನ ಮೇಲೆತಮ್ಮ ವಿಶ್ವಾಸವು ಹುಟ್ಟಿ ಪ್ರಾರ್ಥಿಸಿಕೊಂಡದ್ದರಿಂದಲೇ ಈಗಿ ನಂದದ ವಾರ್ತೆಯು ಬಂತಷ್ಟೇ? ಇವರ ಮೇಲಿಂದ ವಿಶ್ವಾಸವೆಂಬದೇ ಅಧಿಕವಾದದ್ದೆಂದು ಸ್ಪ ಷ್ಟವಾಗಿ ಕಂಡು ಬರುತ್ತದೆ.

ಬಾದಶಹನು ಅನುತ್ತಾನೆ;- " ಈ ನಿನ್ನ ವಿಶ್ವಾಸವು ಒತ್ತಟ್ಟಿಗಿರಲಿ ನನಗಂತೂ ಅದು ಅಧಿಕವೆಂದು ಕಂಡು ಬರುವದಿಲ್ಲ? ನೀನು ಮಾಡಿದ ಪ್ರ ತಿಜ್ಞೆಯಂತೂ ನಿಷ್ಫಲವಾಯಿತು ಆದ್ದರಿಂದ ಮರಣಕ್ಕೆ ಸಿದ್ಧನಾಗು " ಎಂದನು.

ಅದಕ್ಕೆ ಬೀರಬಲನು;- " ಪೃಥ್ವೀನಾಥ ! ನಾನು ಇಷ್ಟು ತಮಗೆ ಪ್ರ

ಮಾಣಗಳನ್ನು ತೋರಿಸಿ ಕೊಟ್ಟರೂ, ಅವುಗಳಮೇಲೆ ತಮ್ಮ ವಿಶ್ವಾಸವುಂಟಾಗಲಿಲ್ಲ ಉಪಾಯವಿಲ್ಲ " ಎಂದನು.

ಆಗ ಬಾದಶಹನು ಕ್ರುದ್ಧನಾಗಿ "ಇನ್ನು ನಿನಗೆ ಮರಣವು ತಪ್ಪದು, ನಿನ್ನ ಮೃತ್ಯುವು ಸಮೀಪಿಸಿತು ಎಲ್ಲಿ ಅಲ್ಲಿ ಯಾರಿದ್ದೀರಿ ? ತಲೆಹೊಡೆಯುವವರನ್ನು ಕರೆ, ಎಂದು ಅಪ್ಪಣೆಮಾಡಿದನು ಆಗ ಬೀರಬಲನು ಇನ್ನು ಈ ಪ್ರಸಂಗವನ್ನು ಹೆಚ್ಚು ಬಲಿಯಗೊಡಬಾರದು ಅದರಿಂದ ಏನೂ ಪ್ರಯೋಜನವಾಗುವದಿಲ್ಲ " ಎಂದು ನಿಶ್ಚಯಿಸಿ, ಆ ಪೀರನ ಗೋರಿಗೆ ಅಡ್ಡಬಿದ್ದು, " ಯಕೀನಶಾಹ ಪೀರನೇ ಈ ದಿವಸ ನಾನು ಜೀವದಿಂದ ಪಾರಾಗಿ ಬದುಕಿ ಕೊಂಡರೆ, ನಿನ್ನ ಮಕಾನವನ್ನು ಕಟ್ಟಿಸಿ ಕೊಡುವೆನು " ಎಂದು ಬೇಡಿಕೊಂಡನು ಬೀರಬಲನು ಪ್ರಾರ್ಥಿಸಿ ಕೊಂಡದ್ದನ್ನು ಕೇಳಿಬಾದಶಹನಿಗೆ ನಗೆಯು ಬಂತು ನಕ್ಕನು. ಆಮೇಲೆ ಬೀರಬಲನನ್ನು ಕುರಿತು " ಯಾಕೆಬೀರಬಲ ! ಈಗ ತಿಳುವಳಿಕೆಯುಂಟಾದಂತೆ ಕಾಣುತ್ತದೆ, ಕಡೆಗೆ ನಾನು ಹೇಳಿದ ಮಾತು ಸಿದ್ಧವಾಯಿತಷ್ಟೇ ? ಎಂದನು ಆಗ ಬೀರಬಲನು ಜೀ, ಹಾಂ ? ನಾನು ಅಂತ್ಯದಲ್ಲಿ ಯಕೀನಶಾಹನನ್ನು ಬೇಡಿಕೊಳ್ಳಬೇಕಾಗಿಬಂತು ಎಂದು ಹೇಳಿ ಆ ಗೋರಿಯ ಸಮೀಪಕ್ಕೆ ಹೋಗಿ, ಮಧ್ಯದಲ್ಲಿ ಕೂಡ್ರಿಸಿದ ಹಾಸುಗಲ್ಲನ್ನು ಮೇಲಕ್ಕೆಬ್ಬಿಸಿ, ಅದರೊಳಗಿಂದ ಆ ರೇಶಿಮೆಯ ವಸ್ತ್ರದ ಗಂಟನ್ನು ಹೊರಗೆ ತೆಗೆದನು ಅದನ್ನು ನೋಡಿ ಬಾದಶಹನಿಗೆ ಅತ್ಯಾಶ್ಚರ್ಯವಾಯಿತು ಆಗ ಬಾದಶಹನು ಪ್ರಶ್ನೆಮಾಡುತ್ತಾನೆ.- " ಬೀರಬಲ ! ಇದು ಏನು " ಬೀರಬಲನು ಉತ್ತರಕೊಡುತ್ತಾನೆ, " ಇದು ತಮ್ಮ ಯಕೀನಶಹಾ ಪೀರನು " ಎಂದು ಹೇಳಿ ಸುತ್ತಿದವಸ್ತ್ರವನ್ನು ಬಿಚ್ಚಿದನು. ಆಗ ಅದರಲ್ಲಿ ಹೊರಟ ಪಾದರಕ್ಷೆಯನ್ನು ಕಂಡು ಲಜ್ಜಿತನಾದನು ಆಗ ಬೀರಬಲನು ಕೇಳುತ್ತಾನೆ, "ಮಹಾರಾಜ ಯಾಕೆ ಮುಖವನ್ನು ತಗ್ಗಿಸಿದಿರಿ ದೇವರು ಅಧಿಕವಾದದ್ದೋ ಅಥವಾ ವಿಶ್ವಾಸವು ಅಧಿಕವಾದದ್ದೋ ? ಎಂಬದನ್ನು ಹೇಳಿರಿ ನಮ್ಮಲ್ಲಿ ವಿಶ್ವಾಸವೇ ಹುಟ್ಟದಿದ್ದಮೇಲೆ ಯಾವ ದೇವರು ಏನು ಮಾಡುವನು ? ಆದ್ದರಿಂದ ವಿಶ್ವಾಸವು ಅಧಿಕವಾದದ್ದು " ಭಕ್ತಿಯೇ ಮುಕ್ತಿಯ ಸಾಧನ " ವೆಂಬ ನಾಣ್ಣುಡಿಯೂ ಇದಕ್ಕೋಸುಗವೇ ಉಂಟಾಗಿದೆ ಎಂದು ಹೇಳಿದನು.

ಈ ಮಾತಿಗೆ ಬಾದಶಹನು ಒಪ್ಪಿಕೊಂಡಿದ್ದನು ಯಕೀಶಾಹನ ಹೆಸರಿನಮೇಲೆ ಅಲ್ಲಿ ಬಹಳ ದ್ರವ್ಯಸಂಚಯವಾಗಿತ್ತು ಆದ್ದರಿಂದ ಅಲ್ಲಿ ಬೀರಬಲನು ಅ ದೇವರ ಹೆಸರನ್ನಿಟ್ಟು ಒಂದು ಮಸೀದಿಯನ್ನು ಕಟ್ಟಿಸಿದನು.

—(೨೦-ತುಪ್ಪದ ವ್ಯಾಪಾರ.)—

ಒಬ್ಬ ವರ್ತಕನು ಒಂದು ದಿವಸ ಬೀರಬಲನ ಹತ್ತಿರ ಬಂದು ಪ್ರಾರ್ಥನೆಮಾಡಿ ಕೊಂಡದ್ದೇನಂದರೆ:- ನಾನು ಒಬ್ಬ ವರ್ತಕನಿಗೆ ಐದು ನೂರು ರೂಪಾಯಿಗಳನ್ನು ಕೈಗಡವಾಗಿ ಕೊಟ್ಟಿದ್ದೆನು ಈಗ ಅವನು ಅವುಗಳನ್ನು ಕೊಡುವದಕ್ಕೆ ನಿರಾಕರಿಸುತ್ತಾನೆ: ನನ್ನ ಹತ್ತಿರ ಅವನ ಕಡೆಯಿಂದ ಯಾವ ಪ್ರಕಾರದ ಲೇಖವೂ ಇಲ್ಲ ಮತ್ತು ಸಾಕ್ಷಿಗಳೂ ಇಲ್ಲ ಆದ್ದರಿಂದ ತಾವು ಅವನನ್ನು ಕರೆಯಿಸಿಕೊಂಡು ಯೋಗ್ಯವಿಚಾರವಾಡಿ ನನ್ನ ರೂಪಾಯಿಗಳನ್ನು ಕೊಡಿಸುವಂತೆ ಮಾಡಬೇಕು,,

ಈ ಪ್ರಕಾರ ಪ್ರಾರ್ಥಿಸಿಕೊಂಡ ವರ್ತಕನ ಮಾತುಗಳನ್ನು ಕೇಳಿ ಬೀರಬಲನು ಆ ಎರಡನೇ ವರ್ತಕನನ್ನು ಕರೆಯಿಸಿಕೊಂಡು ಎಲ್ಲಸಂಗತಿಯನ್ನು ವಿಚಾರಿಸಿದನು ಆಗ ಆ ಎರಡನೆ ವರ್ತಕನು ಹೇಳಿದ್ದೇನಂದರೆ "ಮಹಾರಾಜ, ಇವನು ನನ್ನ ಮೇಲೆ ವೃಥಾರೋಪವನ್ನು ಹೊರಿಸುತ್ತಾನೆ ನಾವಿಬ್ಬರೂ ಒಂದೇ ಪ್ರಕಾರದ ವ್ಯಾಪಾರವನ್ನು ಮಾಡುತ್ತಿರುವದರಿಂದ ಇವನಿಗೆ ಸಹನವಾಗಲೊಲ್ಲದು ಪ್ರಭುಗಳು ಯೋಗ್ಯ ವಿಚಾರಣೆಯನ್ನು ಮಾಡಬೇಕು ಅಂದರೆ; ಇವನ ಮೋಸವು ತಾನೇ ವ್ಯಕ್ತವಾಗುವದು "

ಬೀರಬಲನು ಎದುರಾಳಿಯಾದ ವರ್ತಕನ ಮಾತುಗಳಿಗೆ ಸಮ್ಮತಿಸಿದವನಂತೆ ತೋರಿಸಿ ಅವನನ್ನು ಹಿಂದಿರುಗಿ ಮನೆಗೆ ಕಳುಹಿಸಿಬಿಟ್ಟನು ಆ ಮೇಲೆ ಮೊದಲನೇ ವರ್ತಕನನ್ನು ಕರೆದು ಹೇಳಿದ್ದೇನಂದರೆ " ನೀನು ಅಲ್ಪ ಕಾಲ ಧೈರ್ಯವಾಗಿರು ಆ ಮೇಲೆ ಸಮಯವನ್ನು ಸಾಧಿಸಿಕೊಂಡು ನನ್ನೆಡೆಗೆ ಬಾ ! ಹಿಂದೆ ನಡೆದ ಸಂಗತಿಯನ್ನೆಲ್ಲ ಮರೆತು ಬಿಟ್ಟವನಂತೆ ತೋರಿಸುತ್ತ ನಿನ್ನ ಎದುರಾಳಿಯೊಡನೆ ಸ್ನೇಹವನ್ನು ಬೆಳೆಯಿಸು " ಎಂದು ಹೇಳಿ ಕಳುಹಿಸಿಕೊಟ್ಟನು.

ಮುಂದೆ ಏಳೆಂಟು ದಿವಸಗಳಾದ ಬಳಿಕ ಬೀರಬಲನು ನಾಲ್ಕು ತುಪ್ಪದ ಕೊಡಗಳನ್ನು ತರಿಸಿ ಎರಡುಕೊಡಗಳಲ್ಲಿ ಒಂದೊಂದು ವರಹವನ್ನು ಹಾಕಿದನು. ಆಮೇಲೆ ವಾದಿ ಪ್ರತಿವಾದಿಯನ್ನೂ ಮತ್ತು ಬೇರೆ ಎರಡು ಜನ ವರ್ತಕರನ್ನೂ ಕರೆಯಿಸಿ, " ನನ್ನ ಹತ್ತಿರ ನಾಲ್ಕು ತುಪ್ಪದ ಕೊಡಗಳು ಅವೆ ಇವುಗಳಲ್ಲಿಯ ತುಪ್ಪವು ಸ್ವಲ್ಪಕೆಟ್ಟಿದೆ, ನೀವು ಪ್ರತಿಯೊಬ್ಬೊಬ್ಬರು ಒಂದೊಂದು ಕೊಡವನ್ನು ತೆಗೆದುಕೊಂಡು ಹೋಗಿ ವ್ಯಾಪಾರವಾಡಿರಿ ಲಾಭವಾದ ಹಣವನ್ನು ನೀವು ತೆಗೆದುಕೊಂಡು ನನ್ನ ಹಣವನ್ನು ನನಗೆಮುಟ್ಟಿ

ಸಿರಿ" ಎಂದು ಹೇಳಿದನು. ಬೀರಬಲನು ಹೇಳಿದ ಮಾತುಗಳನ್ನು ಕೇಳಿ ಪ್ರತಿವಾದಿಯು. "ಮಹಾರಾಜ? ಈ ಕೆಲಸಕ್ಕೆ ನಾಲ್ಕುಜನರು ಯಾಕೆಬೇಕು ಯಾವನಾದರೊಬ್ಬನಿಗೆ ಈ ನಾಲ್ಕೂ ಕೊಡಗಳನ್ನು ಒಪ್ಪಿಸಿಬಿಡಿರಿ, ಅಂದರೆ ಅವನು ಅವುಗಳನ್ನು ಮಾರಿ ಹಣವನ್ನು ನಿಮಗೆತಂದು ಒಪ್ಪಿಸುವನು," ಎಂದುಸುರಿದನು. ಆಮಾತಿಗೆ ಬೀರಬಲನು ಹಾಗೆಬೇಡ ಎಲ್ಲರೂ ನನಗೆ ಪ್ರಿಯರಾದವರೇ ಇರುವರು, ಇಂಥ ಅಲ್ಪಕಾರ್ಯದಲ್ಲಿ ಮನುಷ್ಯನ ಮನಸ್ಸನ್ನು ನೋಯಿಸುವದು ನ್ಯಾಯವಲ್ಲ; ಎಂದು ಹೇಳಿ ಒಂದೊಂದು ಕೊಡವನ್ನು ಒಬ್ಬೊಬ್ಬನ ಸ್ವಾಧೀನಪಡಿಸಿದನು. ಅವರಲ್ಲಿ ವಾದಿ ಪ್ರತಿವಾದಿಗಳಿಗೆ ಮಾತ್ರ ವರಹವನ್ನು ಹಾಕಿದ ಕೊಡವನ್ನೇ ಕೊಡಿಸಿದನು.

ವರ್ತಕರೆಲ್ಲರೂ ತಮ್ಮ ತಮ್ಮ ಕೊಡಗಳನ್ನು ತೆಗೆದುಕೊಂಡು ಹಿಂದಿರುಗಿ ಮನೆಗೆಬಂದರು, ತುಪ್ಪವು ಸ್ವಲ್ಪ ಕೆಟ್ಟಿದ್ದರಿಂದ ಅದನ್ನು ಕಾಯಿಸಲಿಕ್ಕೆಯಿಟ್ಟರು. ವಾದಿಯಾದ ವರ್ತಕನು ತುಪ್ಪವನ್ನು ಚೆನ್ನಾಗಿ ಕಾಯಿಸಿ, ಬೇರೆಕೊಡಕ್ಕೆ ಸುರುವುತ್ತಿರಲು ಅದರೊಳಗಿಂದ ವರಹವು ಕೆಳಗೆಬಿತ್ತು ಆಗ ಅವನು ಕೂಡಲೆ ಅದನ್ನು ತೆಗೆದುಕೊಂಡು ಹೋಗಿ ಬೀರಬಲನವಶಕ್ಕೆ ಕೊಟ್ಟನು, ಅದರಿಂದ ವಾದಿಯು ಸತ್ಯವಂತನಿರುವನೆಂದು ಬೀರಬಲನ ಮನಸ್ಸಿನಲ್ಲಿ ನಂಬಿಗೆಯುಂಟಾಯಿತು, ಇದರಂತೆ ಪ್ರತಿವಾದಿಯಾದ ವರ್ತಕನಕೊಡದಲ್ಲಿಯೂ ಒಂದು ವರಹವು ಹೊರಡಲು ಅವನು ಆಶಾಬದ್ಧನಾಗಿ ಅದನ್ನು ಬೀರಬಲನಿಗೊಪ್ಪಿಸದೆ ತನ್ನ ಮಗನ ವಶಕ್ಕೆ ಕೊಟ್ಟು, ನಾನು ಬೇಡಿದಾಗ ಇದನ್ನು ನನಗೆಕೊಡು ಎಂದು ಅಪ್ಪಣೆಮಾಡಿ ಮಾರಿಬಂದಹಣವನ್ನು ತನ್ನ ಬಳಿಯಲ್ಲಿ ಇಟ್ಟುಕೊಂಡನು.

ನಾಲ್ಕನೇ ದಿವಸ ನಾಲ್ವರೂವರ್ತಕರು ತಮ್ಮ ಹತ್ತಿರ ಬಂದಷ್ಟು ಹಣವನ್ನು ತೆಗೆದುಕೊಂಡು ಬೀರಬಲನಿಗೆ ಒಪ್ಪಿಸುವದರಸಲುವಾಗಿ ಅವನ ಮನೆಗೆ ಬಂದರು ಮೂವರೂ ತಮ್ಮ ತಮ್ಮ ಹಣವನ್ನು ಕೊಟ್ಟುಬಿಟ್ಟರು ಪ್ರತಿವಾದಿಯು ಹಣವನ್ನು ಕೊಡಹೋದನು ಆಗ ಬೀರಬಲನು ಅನ್ನುತ್ತಾನೆ;- ನೀನು ತೆಗೆದುಕೊಂಡುಹೋದ ಕೊಡದಲ್ಲಿ ಒಂದೂಕಾಲುಮಣ ತುಪ್ಪವಿತ್ತು

ಪ್ರತಿವಾದಿ—ಮಹಾರಾಜ ನನ್ನ ಕೊಡದಲ್ಲಿ ಒಂದುಮಣಕ್ಕಿಂತ ಹೆಚ್ಚು ತುಪ್ಪವಿದ್ದಿಲ್ಲ.

ಬೀರಬಲ—ನೀನು ಅದನ್ನು ಸರಿಯಾಗಿ ತೂಕಮಾಡಿದಿಯೋ!

ಪ್ರತಿವಾದಿ—ಅಹುದು: ನಾನೇ ಸ್ವತಃ ತೂಕಮಾಡಿ ನೋಡಿದ್ದೇನೆ, ಆಕಾಲಕ್ಕೆ ನನ್ನ ಹಿರಿಯಮಗನೂ ಸಹ ಅಲ್ಲಿಯೇ ನಿಂತುಕೊಂಡಿದ್ದನು.

ಅಷ್ಟರಲ್ಲಿ ಬೀರಬಲನು ಯಾವದೋ ಒಂದು ಬೇರೆಕಾರ್ಯಕ್ಕೆ ಹೋಗುವವನಂತೆ ಓಲಗದಿಂದ ಎದ್ದು ಬೇರೆಕಡೆಗೆ ಹೋಗಿ ಕರ್ಮಚಾರಿಯೋರ್ವನನ್ನು ಕರೆದು ಪ್ರತಿವಾದಿಯಾದ ವರ್ತಕನಮನೆಗೆ ಹೋಗಿ ಅವನಹಿರಿಯಮಗನಿಗೆ ಹೇಳಬೇಕಲ್ಲಾ- "ತುಪ್ಪವನ್ನು ಕಾಸಿ ಎರಡನೇ ಕೊಡಕ್ಕೆ ಹಾಕುವಕಾಲದಲ್ಲಿ ಹೊರಟ ವರಹವನ್ನು ತೆಗೆದುಕೊಂಡು ಓಲಗಕ್ಕೆಬರಬೇಕೆಂದು ನಿಮ್ಮ ತಂದೆಯು ಹೇಳಿ ಕಳುಹಿಸಿದ್ದಾನೆ, ಅದರಿಂದ ಬೇಗನೇ ಬಾ ಎಂದು ಹೇಳಿ, ಅವನನ್ನು ಕರೆದುಕೊಂಡು ಬಾ" ಎಂದು ಅಪ್ಪಣೆಮಾಡಿದನು.

ಕರ್ಮಚಾರಿಯು ಕೂಡಲೆ ಆ ವರ್ತಕನಮನೆಗೆ ಹೋಗಿ ವರಹಸಹಿತವಾಗಿ ಅವನ ಹಿರಿಯಮಗನನ್ನು ಕರೆದುಕೊಂಡು ನ್ಯಾಯಸ್ಥಾನಕ್ಕೆ ಬಂದನು, ತನ್ನ ಮಗನು ನ್ಯಾಯಸ್ಥಾನಕ್ಕೆ ಬಂದದ್ದನ್ನು ನೋಡಿ ಆಶ್ಚರ್ಯಾನ್ವಿತನಾದನು. ಆದರೆ ಬೀರಬಲನ ಕಟ್ಟಪ್ಪಣೆಯಿಂದ ಇಬ್ಬರಿಗೂ ಮಾತನಾಡಲು ಸಂಧಿಯು ದೊರೆಯಲಿಲ್ಲ.

ಬೀರಬಲನು ವರ್ತಕನ ಮಗನನ್ನು ಕುರಿತು, ನಿನ್ನ ತಂದೆಯು ಕೊಟ್ಟಂಥ ವರಹವನ್ನು ತಂದಿರುವಿಯೋ ! ಎಂದು ಪ್ರಶ್ನೆಮಾಡಲು ಆ ಹುಡುಗನು ಅಹುದು, ತೆಗೆದುಕೊಳ್ಳಬೇಕು ಎಂದು ಕೊಟ್ಟನು. ಆಗ ಬೀರಬಲನು ಪುನಃ ಅನ್ನುತ್ತಾನೆ:- "ನಿನ್ನತಂದೆಯು ತುಪ್ಪದಕೊಡದಲ್ಲಿ ನಾಲ್ಕು ಮೋಹರುಗಳು ಹೊರಟಿರುವವೆಂದು ಹೇಳಿದ್ದಾನೆ, ನೀನು ಒಂದೇ ಮೋಹರನ್ನು ತಂದುಕೊಟ್ಟೆಯಲ್ಲಾ ?

ಆಗ ಆ ಹುಡುಗನು ತನ್ನ ತಂದೆಯಕಡೆಗೆ ನೋಡಿ- "ಪಿತನೇ ! ನಾಲ್ಕುವರಹಗಳು ಯಾವಾಗಹೊರಟಿದ್ದವು ? ನೀವು ನನ್ನಕೈಯಲ್ಲಿ ಒಂದನ್ನೇ ಕೊಡಲಿಲ್ಲವೇ" ಎಂದು ಕೇಳಿದನು. ಆ ಮಾತಿಗೆ ಆ ವರ್ತಕನು ಅಂದದ್ದೇನಂದರೆ;- ವರಹವು ಯಾವಾಗ ಹೊರಟಿತ್ತು !

ಮಗನು ಸರಲತೆಯಿಂದ- "ನೀವು ತುಪ್ಪವನ್ನು ಕಾಯಿಸಿ ಬೇರೆಕೊಡಕ್ಕೆ ಹಾಕುವಾಗ ಹೊರಡಲಿಲ್ಲವೇ"

ವರ್ತಕನು- ಇವನಿಗೆ ಏನೂ ಬುದ್ಧಿಯಿಲ್ಲ, ಇವನಿಗೆ ಯಾವಾಗಬುದ್ಧಿ ಬರುವದೋ ಕಾಣೆ ? ಎಂದು ಗುಣುಗುಟ್ಟ ಹತ್ತಿದನು ಪಿತಾಪುತ್ರರಲ್ಲಿ ನಡೆದಸಂಭಾಷಣೆಯನ್ನು ಕೇಳಿ ಸಭಿಕರೆಲ್ಲರಿಗೂ ಆಶ್ಚರ್ಯಪುಂಟಾಯಿತು, ಆಗ ಬೀರಬಲನು ಅನ್ನುತ್ತಾನೆ:- ನೀನು ಆ ವರ್ತಕನಿಗೆ ರೂಪಾಯಿಗಳನ್ನು ಕೊಡತಕ್ಕದ್ದು ನಿಜವ್ರೋ ಅಥವಾ ಸುಳ್ಳೋ ! ಎಂದು ಕೇಳಲು, ಆ ವರ್ತಕನು ಏನೂ ಮಾತಾಡದೆ ಸುಮ್ಮನೇ ನಿಂತುಕೊಂಡನು. ಆಗ ಬೀರಬಲನು ಪುನಃ

ಯಾವಮನುಷ್ಯನು ಒಂದು ವರಹಕ್ಕೋಸುಗ ಅನೃತವನ್ನು ಹೇಳಲಿಕ್ಕೆ ಹಿಂಸುಮುಂದು ನೋಡಲಿಲ್ಲವ್ರೋ ಅಂಥಮನುಷ್ಯನು ಐದುನೂರು ರೂಪಾಯಿಗಳನ್ನು ಕೊಡಲಿಕ್ಕೆ ಹ್ಯಾಗೆ ಒಪ್ಪಿಕೊಂಡಾನು ? ಎಂದನು. ಈಮಾತಿಗೂ ಪ್ರತಿವಾದಿಯು ಏನೂ ಉತ್ತರಕೊಡಲಿಲ್ಲ, ಆಗ ಒಬ್ಬ ಕರ್ಮಚಾರಿಯನ್ನು ಕರೆದು ಇವನ ಬೆನ್ನಮೇಲೆ ಒಳಿತಾಗಿ ಪೆಟ್ಟುಗಳನ್ನು ಹಾಕು; ಎಂದು ಅಪ್ಪಣೆಮಾಡಿದನು. ಆಗ ಆ ವರ್ತಕನ ಮಗನು ಅನ್ನುತ್ತಾನೆ- "ಪಿತನೇ ? ನೀನು ಒಂದಕ್ಕೆ ಒಂದುದಿವಸ ಈ ವರ್ತಕನಿಗೆ ಐದುನೂರು ರೂಪಾಯಿಗಳನ್ನು ಕೊಡಬೇಕಾಗಿದೆ ಎಂದು ಹೇಳಿಲ್ಲಿಲ್ಲವೇ ? ಈಗ ಹ್ಯಾಗಾದರೂ ರೂಪಾಯಿಗಳು ಮನೆಯಲ್ಲಿ ಅವೆ, ಕೊಟ್ಟುಬಿಡಬೇಕು." ಈಪ್ರಕಾರ ಮಗನು ಸತ್ಯವನ್ನು ನುಡಿದದ್ದರಿಂದಲೂ ಬೆನ್ನಮೇಲೆ ಪೆಟ್ಟುಗಳು ಬೀಳುವವೆಂಬ ಹೆದರಿಕೆಯಿಂದಲೂ ತನ್ನ ಅಪರಾಧವನ್ನೊಪ್ಪಿಕೊಂಡನು. ಆಗ ಬೀರಬಲನು ಪ್ರತಿವಾದಿಯ ಕಡೆಯಿಂದ ಐದುನೂರು ರೂಪಾಯಿಗಳನ್ನುವಾದಿಗೆಕೊಡಿಸಿ ಪ್ರತಿವಾದಿಯನ್ನು ಕಾರಾಗ್ರಹದಲ್ಲಿಡುವಂತೆ ಆಜ್ಞಾಪಿಸಿ, ಪುನಃ ಅಂದದ್ದೇನಂದರೆ;- ವರ್ತಕರಾದವರೆಲ್ಲರೂ ತಮ್ಮ ತಮ್ಮ ನಡಾವಳಿಯಲ್ಲಿಯೂ ಮಾತುಕಥೆಗಳಲ್ಲಿಯೂ ಸತ್ಯದಿಂದಲೇ ವರ್ತಿಸತಕ್ಕದ್ದು, ಇದರಿಂದ ಅವರಿಗೆ ಮೇಲುಂಟಾಗುವದು. ಅಸತ್ಯವನ್ನು ನುಡಿದರೆ ಅದುಮೊದಲು ಸುಖಕರವಾಗಿ ತೋರುತ್ತದೆ; ಆದರೆ ಅಂತ್ಯದಲ್ಲಿ ಅದರ ದುಷ್ಪರಿಣಾಮವು ಕಂಡುಬರುತ್ತದೆ, ಮಾತಾಪಿತೃಗಳಾದವರು ತಮ್ಮಮಕ್ಕಳಿಗೆ ಸತ್ಯವನ್ನೇ ಹೇಳುವಂತೆ ಕಲಿಸಬೇಕು. ಈ ಪ್ರತಿವಾದಿಯ ಮಗನು ಇಲ್ಲಿಯವರೆಗೆ ಸತ್ಯವನ್ನೇ ಅವಲಂಬಿಸಿದ್ದಾನೆ, ಇದರಂತೆ ಕಡೆತನಕ ಸತ್ಯದಿಂದಲೇ ಇದ್ದರೆ ಸುಖದಿಂದಜೀವಿಸಬಹುದು, ಹೀಗೆ ಇರದೆ ತಂದೆಯ ಗುಣವನ್ನು ಅವಲಂಬಿಸಿದರೆ ಮಾತ್ರ ಗುರಿಯಾಗುವದು ಎಂದು ಹೇಳಿ ಎಲ್ಲರಿಗೂ ಅಪ್ಪಣೆಕೊಟ್ಟು ಕಳಿಸಿದನು.

—(೨೧. ಬಾದಶಹ ಮತ್ತು ಗಂಗಕವಿ.)—

ಒಂದುದಿವಸ ಬೇಗಮ್ಮ ಜನರೂ, ಮತ್ತು ಅವರ ಹೆಣ್ಣು ಮಕ್ಕಳೂ, ಎಲ್ಲರೂ ಒಂದು ಅಂತಃಪುರದಲ್ಲಿ ಕೂಡಿದ್ದರು ಗಾಯನವಾದನವು ನಡೆದಿತ್ತು ಆ ಸಮೂಹದಲ್ಲಿ ಪುರುಷನೆಂದರೆ ಬಾದಶಹನೊಬ್ಬನೇ ಇದ್ದನು. ಬಾದಶಹನನ್ನು ಎಂದೂ ಹೊರಗೆ ಬಿಡಗೊಡಬಾರದೆಂದು ಬೇಗಮ್ಮ ಜನರೆಲ್ಲರೂ ಈ ಯುಕ್ತಿಯನ್ನು ತೆಗೆದಿದ್ದರು, ಅವರ ಈಸಾಹಸವು ಸ್ವಲ್ಪಸ್ವಲ್ಪ ಕೈಗೂಡುತ್ತಬಂದಿತ್ತು, ಆ ಸಮಯದಲ್ಲಿ ಒಬ್ಬ ಬೇಗಮ್ಮಳು ಕೋಮಲಸ್ವರದಿಂದ ವಿ

ರಹವ್ಯಥೆಯನ್ನು ವರ್ಣಿಸತಕ್ಕಪದ್ಯವನ್ನು ಹಾಡತೊಡಗಿದಳು. ಆಗ ಬಾದಶಹನು "ಇಂಥ ಪದ್ಯದಿಂದ ಏನುಪ್ರಯೋಜನ" ಎಂದು ಪ್ರಶ್ನೆ ಮಾಡಿದನು. ಈ ಸುಸಮಯವನ್ನು ಎದುರು ನೋಡುತ್ತಕುಳಿತ ಒಬ್ಬತರುಣ ಬೇಗಮ್ಮಳು, ಸ್ವಾಮಿ ತಾವು ಸರ್ವಕಾಲದಲ್ಲಿ ಯುದ್ಧಾಸಕ್ತರಾಗಿ ನಮ್ಮನ್ನು ಮರೆತುಬಿಟ್ಟಿರುವಿರಲ್ಲಾ! ಇದು ಎಂಥಾ ಅನ್ಯಾಯ; ತಾವು ಯಾವಯಾವ ಕಾಲದಲ್ಲಿ ಯುದ್ಧಕ್ಕೆ ಹೊರಟು ಹೋಗುವಿರೋ ಆ ಆ ಕಾಲದಲ್ಲಿ ನಮ್ಮೆಲ್ಲರಿಗೂ ಎಷ್ಟು ವಿರಹವ್ಯಥೆಯನ್ನು ಅನುಭೋಗಿಸಬೇಕಾಗುತ್ತದೆಂಬ ಸಂಗತಿಯನ್ನು ಈಶ್ವರನಹೊರತು ಅನ್ಯರಾರಿಗೂ ತಿಳಿಯುವದಕ್ಕೆ ಕಠಿಣವು, ತಾವು ಈಗ ಎಷ್ಟೋಮಾಸಗಳಿಂದ ಯುದ್ಧಾಸಕ್ತರಾಗಿ ಹೋಗಿಬಿಡೋಣವಾಗಿತ್ತು ಈಗ ನಾಲ್ಕಾರು ದಿವಸದಿಂದ ತಮ್ಮ ದರ್ಶನಸುಖವು ದೊರೆಯುತ್ತಿದೆ, ಆದ್ದರಿಂದ ಇನ್ನು ಕೆಲವುದಿವಸ ನಮ್ಮಬಳಿಯಲ್ಲಿಯೇ ಇದ್ದು ನಮಗೆ ಸಂತೋಷವನ್ನುಂಟು ಮಾಡಬೇಕು ಈಗರಾಜ್ಯದಲ್ಲಿ ಯಾವಪ್ರಕಾರದ ತೊಂದರೆಗಳು ಇದ್ದಂತೆ ಕಂಡು ಬರುವದಿಲ್ಲ" ಎಂದು ವಿನಯ ಪೂರ್ವಕವಾಗಿ ಬೇಡಿಕೊಂಡಳು ಆಗ ಬಾದಶಹನು ಅನ್ನುತ್ತಾನೆ,- "ಪ್ರಾಣೇಶ್ವರೀ ಯುದ್ಧಗಳು ಸರ್ವಕಾಲದಲ್ಲಿ ನಡೆಯುತ್ತಿರುವ ದೇ ಹ್ಯಾಗೆ! ವರ್ಷದಲ್ಲಿ ಎರಡು ಮೂರು ತಿಂಗಳು ಹೋಗುವ ಪ್ರಸಂಗವು ಬರುತ್ತದೆ. ನಾನು ಈ ಸುಖವಿಲಾಸದಲ್ಲಿ ಮಗ್ನನಾಗಿ, ಅಂತಃಪುರದಲ್ಲಿ ವಾಸಮಾಡ ಹತ್ತಿದರೆ ನನ್ನ ಪ್ರಜೆಗಳಿಗೆ ಎಷ್ಟು ದುಃಖಗಳು ಉಂಟಾಗುತ್ತವೆಂಬದನ್ನು ಹೇಳಲಸಾಧ್ಯವು ನನ್ನರಾಜ್ಯವು ಸುಯಂತ್ರವಾಗಿ ಹ್ಯಾಗೆ ನಡೆದೀತು? ನಾನು ಸಂಪಾದಿಸಿದ ಕೀರ್ತಿಯೆಲ್ಲವು ಮಣ್ಣುಪಾಲಾಗಿ ಹೋದೀತು? ಹತ್ತು ಹದಿನೈದು ದಿವಸಗಳ ವಟ್ಟಿಗೆ ಹ್ಯಾಗಾದರೂ ನಡೆದೀತು, ಆದರೆ ನೀವು ಅಜಸ್ರ ಪರಿಯಂತರ ಅಂತಃಪುರದಲ್ಲಿಯೇ ಇರಬೇಕೆಂದು ಆಗ್ರಹ ಮಾಡುತ್ತಿರುವಿರಿ ಇದು ಸಮಂಜಸವಾದ ಮಾತಲ್ಲ ನನ್ನಮಕ್ಕಳು ಮತ್ತು ಸರದಾರರು ನನ್ನೊಡನೆ ವೈರವನ್ನು ಬೆಳೆಯಿಸಿ ನನ್ನನ್ನು ರಾಜ್ಯಾಧಿಕಾರದಿಂದ ದೂರ ಮಾಡಿಬಿಟ್ಟರೆ ಎಷ್ಟು ಕಠಿಣವಾದೀತು; ಎಂಬದರಕಡೆಗೆ ನಿಮ್ಮ ಲಕ್ಷ್ಯವ ಇದ್ದಂತೆ ಕಂಡು ಬರುವದಿಲ್ಲ ಇರಲಿ ನನ್ನ ರಾಜ್ಯಕಾರ್ಯಗಳೆಲ್ಲ ನಿವೃತ್ತವಾದಮೇಲೆ ನಾನು ಮೃಗಯಾ ವಿಹಾರದ ಸಲುವಾಗಿ ಎಷ್ಟು ಸಮಯವನ್ನು ವ್ಯಯ ಮಾಡುವೆನೋ ಆ ಸಮಯವನ್ನೆಲ್ಲ ನಿಮ್ಮ ಸಮಾಗಮ ಸುಖದಲ್ಲಿಯೇ ವ್ಯಯಮಾಡುವೆನು, ಅಂದರೆ ನಿಮ್ಮ ವಾಂಛಿತವು ಈ ಡೇರಿದಂತಾಗುವದಿಲ್ಲವೇ ಎಂದನು,

ಈ ಮಾತುಗಳನ್ನಾಲಿಸಿ ಮುಖ್ಯ ಬೇಗಮ್ಮಳು ಅನ್ನುತ್ತಾಳೆ:- ಸ್ವಾಮಿೂ! ತಾವು ನುಡಿದ ಮಾತುಗಳೆಲ್ಲ ಸತ್ಯವಾಗಲಿ! ಆದರೆ ನಮ್ಮ ಜನ್ಮವು ಪಶುಗಳಿಗಿಂತ ನಿಂದ್ಯವಾದದ್ದು, ಎಂದು ತಿಳಿದುಕೊಳ್ಳುತ್ತೇವೆ ಇದು ನಮ್ಮ ದುರ್ದೈವವೇಸರಿ.

ಮತ್ತೊಬ್ಬ ಬೇಗಮ್ಮಳು ಅನ್ನುತ್ತಾಳೆ:- "ಜಹಾಪನಾ! ತಾವು ರಾಜ್ಯದಲ್ಲಿಯ ಒಬ್ಬಯಃಕಶ್ಚಿತ ಮನುಷ್ಯನ ಪ್ರಾರ್ಥನೆಯನ್ನು ಸಹಾ ಮನಸುಗೊಟ್ಟು ಕೇಳಿಕೊಳ್ಳುತ್ತೀರಿ ಹೀಗಿದ್ದು ನಮ್ಮ ಪ್ರಾರ್ಥನೆಯನ್ನು ಕಿವಿಯ ಮೇಲೆ ಸಹಾ ಹಾಕಿಕೊಳ್ಳುವದಿಲ್ಲ ವಲ್ಲಾ? ಇರಲಿ; ನೀವು ಇನ್ನು ಈ ರಾಣೀವಾಸದಿಂದ ಹ್ಯಾಗೆ ಪಾರಾಗಿ ಹೋಗುವಿರೋ! ನೋಡುತ್ತೇನೆ" ಎಂದಳು.

ಮೂರನೆಯವಳೊಬ್ಬಳು ಮುಂದೆಬಂದು, "ಛೇ! ಯಜಮಾನರು ಅಷ್ಟುಕಠಿಣ ಹೃದಯರಲ್ಲ! ಇವರು ಇನ್ನು ಮೇಲೆ ನಮ್ಮನ್ನು ವಿರಹ ವ್ಯಥೆಗೆ ಗುರಿಮಾಡಿ, ಎಂದೂ ಹೋಗಲಾರರು ಎಂದು ನಾನು ನಿಶ್ಚಯವಾಗಿ ಹೇಳುತ್ತೇನೆ" ಎಂದಳು.

ನಾಲ್ಕನೆಯವಳೊಬ್ಬಳು ತನ್ನ ನೇತ್ರ ಕಟಾಕ್ಷಗಳನ್ನು ಬೀರುತ್ತ ಮುಂದೆ ಬಂದು,- "ನಾವು ಇಷ್ಟು ಸಮಯದ ವರೆಗೆ ಪ್ರಾರ್ಥನೆ ಮಾಡಿಕೊಡರೂ ಸಹಾ ಅವರಿಂದ ಸಮ್ಮತಿಯ ಒಂದು ಶಬ್ದವಾದರೂ ಹೊರಡಲಿಲ್ಲ ಅವರ ಮುಖದಲ್ಲಿ ಸೂಸುತ್ತಿರುವ ಮುಗುಳು ನಗೆಯೇ ನಮ್ಮ ಮಾತಿಗೆ ಒಪ್ಪಿಕೊಂಡಿರುವರೆಂಬ ಸಂಗತಿಯನ್ನು ಸೂಚಿಸುತ್ತದೆ" ಎಂದುನುಡಿದಳು.

ಬಾದಶಹನು ಆ ಮೋಹಿನೀಮೂರ್ತಿಗಳ ನೇತ್ರಕಟಾಕ್ಷದಿಂದ ಮೋಹಿತನಾಗಿ ಹೋದನು ಅವರಿಗೆ ಉತ್ತರಕೊಡಬೇಕೆಂಬ ಪ್ರಜ್ಞೆಯು ಸಹಾ ಇಲ್ಲದಂತಾಯಿತು ಸ್ವಲ್ಪ ಹೊತ್ತಿನ ಮೇಲೆ ಅನ್ನುತ್ತಾನೆ, "ಪ್ರಿಯಸಹಚರಿಯರೇ ನಾನು ನಿಮ್ಮೆಲ್ಲರ ಅತ್ಯಂತ ಆಗ್ರಹಕ್ಕೆ ಸಿಲುಕಿ ಬಿದ್ದು ನಿಮ್ಮ ಸಮಾಗಮ ಸುಖದಲ್ಲಿಯೇ ಕಾಲಹರಣ ಮಾಡಬೇಕೆಂದು ನಿಶ್ಚಯಿಸಿದ್ದೇನೆ ಎಂದನು.

ಬಾದಶಹನ ಮುಖದಿಂದ ಹೊರಟ ಮಧುರವಾಣಿಯನ್ನು ಕೇಳಿ ಬೇಗಮ್ಮರಿಗೆಲ್ಲ ಉಂಟಾದ ಆನಂದಕ್ಕೆ ಪಾರವೇ ಇಲ್ಲದಾಯಿತು ಅವರೆಲ್ಲರು ತಮ್ಮತಮ್ಮ ಶೃಂಗಾರಚೇಷ್ಟೆಗಳಿಂದ ಬಾದಶಹನನ್ನು ಹೆಚ್ಚು, ಹೆಚ್ಚು, ಮೋಹ ಪಾಶಬದ್ಧನನ್ನಾಗಿ ಮಾಡಿಬಿಟ್ಟರು ಬಾದಶಹನಿಗೆ ತನ್ನರಾಜ್ಯದ ಪರಿವೆಯು ಸಹಾ ಇಲ್ಲದೆ ಹೋಯಿತು ಇದೇ ಪ್ರಕಾರ ಎಂಟು ಹತ್ತು ಮಾ

ಳು ಕಳೆದು ಹೋದವು ದರಬಾರದ ಜನರೆಲ್ಲರೂ ಬಾದಶಹನ ಶೋಧವ ನಡೆಯಿಸಿದರು ಬಾದಶಹನು ರಾಣೀವಾಸದಲ್ಲಿರುವ ನೆಂಬುದು ಯಾರಿ ತಿಳಿಯಲಿಲ್ಲ. ರಾಜ್ಯದಲ್ಲಿ ಅರಾಜಕತೆಯು ಪ್ರಬಲವಾಗಹತ್ತಿತು ಮು ದ್ದಿಗಳೆಲ್ಲರೂ ಭಯಗ್ರಸ್ತರಾಗಿ ಹೋದರು. ಈ ವರ್ತಮಾನವು ಬಾದಶ ಗೆ ಸ್ವಲ್ಪಾದರೂ ತಿಳಿಯಗೊಡಬಾರದೆಂದು ಬೇಗಮ್ಮ ಜನರೆಲ್ಲರೂ ಎ ರದಿಂದಲೇ ಇರಹತ್ತಿದರು ಬಾದಶಹನಿಗೆ ಹಗಲು ರಾತ್ರಿಗಳು ಸಹಾ ಯದೆ ಹೋದವು ಬೇಗಮ್ಮರೆಲ್ಲ ತಿಳಿದುಕೊಂಡದ್ದೇನಂದರೆ, “ಬಾದಶಹ ಅಂತಃಪುರದಲ್ಲಿ ವಾಸವಾಗಿದ್ದಾನೆಂಬ ಸಂಗತಿಯು ಬೀರಬಲ್ಲ ಅಥವಾ ಗಕವಿ ಈ ಎರಡು ಜನರ ಕಿವಿಗೆ ಬಿದ್ದರೆ, ಅವರು ಬಾದಶಹನನ್ನು ಆಕಾ ಾತಾಳದಲ್ಲಿದ್ದರೂ ಸಹಾ ಗೊತ್ತುಹಚ್ಚದೆ ಬಿಡಲಾರರು” ಎಂಬದನ್ನು ದುಕೊಂಡು ಯಾರನ್ನೂ ಅಂತಃಪುರದೊಳಗೆ ಬಿಡಬಾರದೆಂದು ದಾಸೀ ರಿಗೂ, ಹೊರಗಿನ ಕಾವಲಿನ ಜನರಿಗೂ ಕಟ್ಟಪ್ಪಣೆ ಮಾಡಿಬಿಟ್ಟಿದ್ದರು.

ದರಬಾರದಲ್ಲಿ ಎಷ್ಟೋ ಕಾಗದ ಪತ್ರಗಳು, ಬಾದಶಹನ ಸಹಿ ಇಲ್ಲ ದ್ದು ಬಿಟ್ಟಿದ್ದವು. ಬಾದಶಹನ ಆಜ್ಞೆಯಿಂದಲೇ ನಡೆಯತಕ್ಕ ಕಾರ್ಯ ನಿಂತು ಹೋಗಿದ್ದವು ಪರದೇಶದಿಂದ ಬಂದರಾಯಭಾರಿಗಳೆಲ್ಲರೂ ಬರಿ ರುವ ಸಿಹ್ಮಾಸನವನ್ನು ನೋಡಿ ಆಶ್ಚರ್ಯ ಪಡಹತ್ತಿದರು ಜನರಲ್ಲಿ ಕ ಪ್ರಕಾರದ ಕಲ್ಪನೆಗಳು ಪಸರಿಸಹತ್ತಿದವು. ಈ ಸಂಧಿಯಲ್ಲಿ ಪರಶ ಗಳು ಯಾರಾದರೂ ಬಂದು ರಾಜ್ಯವನ್ನು ಎಲ್ಲಿಹರಣ ಮಾಡಿಕೊಂಡು ೀಗುವರೋ, ಎಂಬ ಭೀತಿಯು ಮುತ್ಸದ್ದಿಗಳಲ್ಲಿ ಉತ್ಪನ್ನವಾಯಿತು ಲ್ಲ ಅರಾಜಕತ್ವದ ಲಕ್ಷಣಗಳು ತಲೆದೋರಹತ್ತಿದ್ದರಿಂದ ಬಾದಶಹನ ಹ್ಯಾಗಾದರೂ ಮಾಡಿ ಗೊತ್ತು ಹಚ್ಚಬೇಕೆಂದು ಬೀರಬಲನು ನಿಶ್ಚ ದನು. ಅವನು ಒಂದು ದಿವಸ ತನ್ನ ವಿಶ್ವಾಸಿಕರಾಗಿದ್ದ ಅನೇಕ ಜನ ಾನದರನ್ನು ತನ್ನ ಡೆಗೆ ಬರಮಾಡಿಕೊಂಡು ಅವರ ಸಮ್ಮುಖದಲ್ಲಿ ಅಂದ ರಂದರೆ:- “ರಾಜ್ಯವು ನಷ್ಟವಾಗಲಿಕ್ಕೆ ಇನ್ನು ಕಾಲಾವಧಿಯು ಇಲ್ಲ ಶಹನು ಗುಪ್ತವಾಗಿರುವನೆಂಬ ಸಂಗತಿಯು ರಾಜ್ಯದೊಳಗೆಲ್ಲ ಪಸರಿಸ ದೆ ಪರದೇಶದ ರಾಯಭಾಗರಿಗಳೆಲ್ಲರೂ ದಂಗೆಯನ್ನು ಎಬ್ಬಿಸಬೇಕೆಂಬ ಶಿಕೆಯಲ್ಲಿದ್ದಾರೆ. ಶತ್ರುಗಳಾದವರು ಬಂದು ಪ್ರತ್ಯಕ್ಷನಿಂತು ಕೊಂಡರೆ ಂಗವು ಬಹಳೇ ಕಠಿಣವಾದೀತು ಒಬ್ಬನೇ ಶತ್ರುವನ್ನು ಹ್ಯಾಗಾದರೂ ಡಿ ಜಯಿಸಬಹುದು ಆದರೆ ಈಗ ನಾಲ್ಕೂ ಕಡೆಯಿಂದಲೂ, ವೈರಿಗಳು ವ ಸಂಭವವದೆ ಆದ್ದರಿಂದ ಏನಾದರೂ ಸಾಹಸಮಾಡಿ, ಬಾದಶಹನ

ಅನ್ವೇಷಣ ಮಾಡಲಿಕ್ಕೇ ಬೇಕು " ಎಂದನು.

ಆಗ ತೋಡರ ಮಲ್ಲನು ಅನ್ನುತ್ತಾನೆ, "ಮಂತ್ರಿವರ್ಯನೇ! ತಮಗೆ ಅಂತಃಪುರದಲ್ಲಿ ಪ್ರವೇಶಮಾಡಲಿಕ್ಕೆ ಆತಂಕವಿಲ್ಲವಷ್ಟೇ ! ಅಂದಮೇಲೆ ನಿಮಗೆ ಸಾಧ್ಯವಾದಷ್ಟು ಅನ್ಯರಿಂದ ಸಾಧಿಸಲಾಗುವದಿಲ್ಲ ,, ಅದಕ್ಕೆ ಬೀರ ಬಲನು. " ನೀವು ಹೇಳುವದಕ್ಕಿಂತ ಪೂರ್ವದಲ್ಲಿಯೇ ನಾನು ಶೋಧಮಾಡಿ ನೋಡಿದ್ದೇನೆ, ನನಗೆ ಬಾದಶಹನ ಇರುವಿಕೆಯು ಅವಗತವಾಗದೆ ಹೋದ್ದ ರಿಂದ, ನಾನು ನಿಮ್ಮೆಲ್ಲರ ಮುಂದೆ ಈ ಮಾತನ್ನು ತೆಗೆದೆನು ,, ಎಂದುತ್ತರ ಕೊಟ್ಟನು. ಆಗ ಗಂಗಕವಿಯು ಅನ್ನುತ್ತಾನೆ, "ಅಮಾತ್ಯವರ್ಯರೇ ನನಗೆ ಬಾದಶಹನ ದರ್ಶನವು ಇಷ್ಟರವುಟ್ಟಿಗೆ ಅತ್ಯವಶ್ಯಕ ವಿರುವದೆಂಬ ಸಂಗತಿ ಯನ್ನು ನೀವು ಅರಿತಿರುವಿರಷ್ಟೇ ? ನಾನು ಪ್ರಯಾಸಪಟ್ಟು ನಿನ್ನೆ ಬಾದ ಶಹನನ್ನು ದೂರಿಂದಲೇ ನೋಡಿದೆನು ,, ಎಂದನು ಆಗ ಸಭಾಸದರೆಲ್ಲರೂ ಒಂದೇಧ್ವನಿಯಿಂದ " ಕವಿರಾಜ! ತಾವು ಬಾದಶಹರವರನ್ನು ಎಲ್ಲಿನೋಡಿ ದರಿ ? " ಎಂದು ಪ್ರಶ್ನೆಮಾಡಿದರು ಆಗ ಗಂಗಕವಿಯು, " ದಿಲಾರಾಮ ಬೇ ಗಮ್ಮಳ ಅಂತಃಪುರದಲ್ಲಿ ,, ಎಂದುತ್ತರಕೊಟ್ಟನು. ಆಗ ಬೀರಬಲನು ಅನ್ನು ತ್ತಾನೆ, " ಬೇಗಮ್ಮ ಜನರ ಮೋಹ ಪಾಶದಿಂದ ಬಂಧಿಸಲ್ಪಟ್ಟ ಬಾದಶಹ ನನ್ನು ಹೊರಗೆ ಕರೆತರುವದಕ್ಕೆ ಏನು ಹಂಚಿಕೆಯನ್ನು ಮಾಡಬೇಕು ? ,, ಎಂದನು ಆಗ ಪುನಃ ಗಂಗಕವಿಯು ಅನ್ನುತ್ತಾನೆ ! " ನಾನಂತೂ ನನ್ನ ಪ್ರಾಣವನ್ನು ಸಂಕಟಕ್ಕೆ ಗುರಿಮಾಡಿ ಬಾದಶಹ ನನ್ನಂತೂ ಗೊತ್ತುಹಚ್ಚಿ ಕೊಟ್ಟಿದ್ದೇನೆ ಆದರೆ ಅವನನ್ನು ಹೊರಗೆ ತೆಗೆಯುವದು ಮಾತ್ರ ಕಠಿಣವು ,, ಎಂದನು.

ಬೀರಬಲ — ಕವಿರಾಜ ! ಬಾದಶಹನನ್ನು ಓಲಗಕ್ಕೆ ಕರೆತರುವ ಕೆಲಸವು ನಿಮ್ಮಿಂದಲೇ ಸಾಧ್ಯವಾಗುವದಲ್ಲದೆ ಅನ್ಯರಿಂದಾಗಲಾರದು.

ತೋಡರಮಲ್ಲ — ತಾವು ಈ ಅಮರಕೀರ್ತಿಯನ್ನು ತಮ್ಮ ಪಾಲಿಗೆ ತೆಗೆದು ಕೊಳ್ಳಬೇಕು, ಸಾವಿರಾರು ಜನರ ಮೇಲೆ ಉಪಕಾರಮಾಡಿದಂತಾ ಗುತ್ತದೆ. ಆದ್ದರಿಂದ ತಾವೇ ಈ ಕಾರ್ಯವನ್ನು ಕೈಕೊಳ್ಳಬೇಕು. ವಿಲಂಬವು ಹಿತಕರವಲ್ಲ.

ಗಂಗಕವಿ — " ನೀವೆಲ್ಲರೂ ನನ್ನ ಪ್ರಾಣವನ್ನು ತೆಗೆದುಕೊಳ್ಳಬೇಕೆನ್ನು ವಿರೋ ?

ಖಾನಖಾನ — ಕವಿರಾಜ ! ಇದರಲ್ಲಿ ಜೀವದಮೇಲಿನ ಪ್ರಸಂಗವೇನಿರುವದು ಬಂದವೇಳೆ ಬಾದಶಹನಿಗೆ ಕೋಪವು ಬಂದರೆ ನಿಮ್ಮನ್ನು ಕಂಡವಾ

ತ್ರದಿಂದಲೇ ಪ್ರಸನ್ನನಾಗಿ ಹೋಗುವನು ಈ ಕೆಲಸವು ಸಾಮಾನ್ಯ ವಾದದ್ದಲ್ಲ, ಇದರಿಂದ ತಮ್ಮ ಕೀರ್ತಿಯು ಜಗತ್ತಿನಲ್ಲೆಲ್ಲ ಪ್ರಸಿದ್ಧ ವಾಗುವದು.

ಗಂಗಕವಿ—ಬೇಗಮ್ಮರೆಲ್ಲರೂ ಬಾದಶಹನ ಮನಸ್ಸನ್ನು ಮೃದುವಾಣಿಗಳಿಂದ ಪ್ರಸನ್ನೀಕರಿಸಿಕೊಂಡು ಬಿಟ್ಟಿದ್ದಾರೆ; ವ್ಯರ್ಥವಾಗಿ ನನ್ನ ಸತೀಸುತರು ಪ್ರಾಣಕ್ಕೆ ಎರವಾದಾರು ಈಗ ನಾನು ಕೈಕೊಳ್ಳಬೇಕೆಂಬ ಕಾರ್ಯವು ಸಿಂಹನಕೂಡ ಸರಸವಾಡಿದಂತೆ ಇರುವದು.

ಬೀರಬಲ—ಬೇಗಮ್ಮ ಜನರ ಪಾಶದೊಳಗಿಂದ ಬಾದಶಹನು ಒಮ್ಮೆ ಸುರಕ್ಷಿತವಾಗಿ ದಾಟಿ ಬಂದಮೇಲೆ ಪುನಃ ಎಂದಿಗೂ ಮೋಸ ಹೋಗಲಾರನು, ಹೀಗೆನಾನು ನಿಶ್ಚಯವಾಗಿ ನಂಬಿದ್ದೇನೆ ಈಗಲಾದರೂ ಹ್ಯಾಗೆಮೋಸ ಹೋದನೋ ತಿಳಿಯದು.

ರಾಜಾ ಮಾನಸಿಂಹ—ಕವೀಶ್ವರರೇ! ನೀವೇ ಇಂಥಕಾರ್ಯದಲ್ಲಿ ಹಿಂದೆಮುಂದೆ ನೋಡಹತ್ತಿದರೆ ಹ್ಯಾಗಾದೀತು? ಕವಿಗಳು ತಮ್ಮ ಕವಿತಾಶಕ್ತಿಯಿಂದ ಪರರಮನಸ್ಸನ್ನು ಹರಣಮಾಡಿಕೊಳ್ಳುವಷ್ಟು ಸಾಮರ್ಥ್ಯವುಳ್ಳವರೆಂಬ ಕೀರ್ತಿಯು ಜಗತ್ತಿನಲ್ಲಿ ಪಸರಿಸಿರುವದು. ಎಷ್ಟೋ ಯುದ್ಧಗಳಲ್ಲಿ ಕವಿಗಳ ವೀರರಸ ಪರಿಪೂರ್ಣವಾದ ಪದ್ಯಗಳನ್ನು ಶ್ರವಣ ಮಾಡಿವೀರರು ಜಯಾಂಗನೆಯನ್ನು ಒಲಿಸಿಕೊಂಡಿರುವರೆಂಬ ಆಖ್ಯಾಯಿಕೆಗಳನ್ನು ಕೇಳಿದ್ದೇನೆ. ನೀವು ಈಗ ಹತಸಾಹಸಿಗಳಾದರೆ ಭಾರತವರ್ಷವೆಲ್ಲವೂ ದುಃಖಕ್ಕೆ ಗುರಿಯಾಗುವಪ್ರಸಂಗವು ಸಮೀಪಿಸಿರುವದೆಂದು ತಿಳಿಯಬೇಕಾಗುತ್ತದೆ,

ಬೀರಬಲ—ಕವಿರಾಜ? ನೀವು ಈಪ್ರಕಾರ ಧೈರ್ಯಹೀನರಾದದ್ದನ್ನು ಕಂಡು ನನಗೂ ಪರಮಾಶ್ಚರ್ಯವಾಗುವದು; ರಾಜ್ಯದ ದೈವಗತಿಯೇ ವಿಪರೀತವಾಗಿರುವದೋ ಏನೋ ಪರಮೇಶ್ವರನಿಗೇ ಗೊತ್ತು.

ಗಂಗಕವಿ—ಬೀರಬಲ? ನೀವು ಇನ್ನುಮೇಲೆ ಮಾತಾಡಬೇಡಿರಿ; ಯಾಕಂದರೆ ನಿಮ್ಮವಾಕ್ಯಗಳು ಶ್ರವಣಪಥದಲ್ಲಿಪ್ರವೇಶಿಸಿದಕೂಡಲೆ ಮನಸ್ಸು ತಾತ್ಕಾಲಕ್ಕೇ ಉಲ್ಹಾಸಿತವಾಗುತ್ತದೆ ನಿಮ್ಮ ವಾಕ್‌ಸಾಮರ್ಥ್ಯದಲ್ಲಿ ಏನು ಮೋಹಿನಿಯು ತುಂಬಿರುವದೋ ಜಗನ್ನಿಯಂತನೇ ಬಲ್ಲನು.

ತೋಡರಮಲ್ಲ—ಮೋಹಿನಿ? ಮೋಹಿನಿ? ಎಂದು ಅನ್ನುತ್ತ ಯಾಕೆಸುಮ್ಮನೇ ಕಾಲಹರಣ ಮಾಡುವಿರಿ? ನಿಮ್ಮಲ್ಲಿ ಸಾಹಸವಿದ್ದರೇ ಈ ಕಾರ್ಯಕ್ಕೆ ಉದ್ಯುಕ್ತರಾಗಿರಿ, ಇಲ್ಲದಿದ್ದರೆ ಆಗುವದಿಲ್ಲವೆಂದು ಸ್ಪಷ್ಟವಾಗಿ

ಹೇಳಿಬಿಡಿರಿ.

ಗಂಗಕವಿ—ನಿರ್ವಾಹವಿಲ್ಲದೆ ನಿಮ್ಮೆಲ್ಲರಮಾತುಗಳಿಗೆ ಒಪ್ಪಿಕೊಳ್ಳಬೇಕಾಗು ತ್ತದೆ, ಈಕಾರ್ಯದಲ್ಲಿ ಒಂದುವೇಳೆ ನನ್ನ ಜೀವದಮೇಲೆ ಏನಾದರೂ ಪ್ರಸಂಗಬಂದರೆ ನೀವು ನನ್ನನ್ನು ರಕ್ಷಿಸಿಕೊಳ್ಳುವಿರಾ!

ಬೀರಬಲನು ಕೂಡಲೆ ನೇತ್ರಸಂಕೇತಮಾಡಿದನು. ಆಗ ಎಲ್ಲಾ ಸಭಾಸದರು ಮುಕ್ತಕಂಠದಿಂದ- "ನಾವು ಹ್ಯಾಗಾದರೂಮಾಡಿ ನಿನ್ನಜೀವವನ್ನು ರಕ್ಷಿಸಿಕೊಳ್ಳುವೆವು" ಎಂದು ಹೇಳಿದರು.

ಬೀರಬಲ—ಕವಿರಾಜ! ಇವರೆಲ್ಲರ ಹಿತವು ನಿಮ್ಮನ್ನೇ ಅವಲಂಬಿಸಿರುವದು, ಈ ಜನರೆಲ್ಲರು ಹೇಳಿರುವಮಾತುಗಳನ್ನು ನೀವು ಬಾದಶಹನಸಮ್ಮುಖದಲ್ಲಿ ಹೇಳಿದರೆ ಅವನ ಮನಸ್ಸು ತಿರುಗದೆ ಹೋದೀತೇ?

ತೋಡರಮಲ್ಲ—ಕವಿರಾಜ! ನಿಮ್ಮ ಭಾಷಣವು ಬಾದಶಹನ ಕರ್ಣಪ್ರವೇಶಕ್ಕೆ ಬಿದ್ದಕೂಡಲೆ ದರಬಾರಕ್ಕೆ ಬಂದೇ ತೀರಬೇಕು? ಹೀಗೆ ಏನಾದರೂ ಒಂದು ಹಂಚಿಕೆಯನ್ನು ಹುಡುಕಿ ತೆಗೆಯಿರಿ.

ಗಂಗಕವಿ—ನೀವು ಹೇಳುವದೆಲ್ಲಾ ನಿಜವು, ಆದರೆ ಈಕಾರ್ಯಕ್ಕೆ ನನ್ನಮನಸ್ಸು ಹಿಂದುಮುಂದು ನೋಡುತ್ತದೆ- ಇಂಥ ಅಮರಕೀರ್ತಿಯು ಪ್ರಾಪ್ತವಾಗುವದೆಂದಮೇಲೆ ಉಳಿದ ಸಭಾಸದರು ಯಾಕೆ ಹಿಂದು ಮುಂದುನೋಡುತ್ತಾರೆ? ಬೀರಬಲ, ತೋಡರಮಲ್ಲ, ಖಾನಖಾನ, ಮಾನಸಿಂಹ ಮೊದಲಾದ ಪ್ರಭೃತಿಗಳು ಈ ಕಾರ್ಯಭಾರವನ್ನು ತಮ್ಮ ಶಿರಸ್ಸಿನಮೇಲೆ ಯಾಕೆ ತೆಗೆದುಕೊಳ್ಳಬಾರದು! ಯಾರಾದರೂ ಇದನ್ನು ಕೈಕೊಳ್ಳುವದಕ್ಕೆ ಸಿದ್ಧರಿದ್ದರೆ ನಾನು ಆನಂದದಿಂದ ಹಿಂದಕ್ಕೆ ಸರಿಯುತ್ತೇನೆ.

ರಾಜಾ ಮಾನಸಿಂಹನು ನಾವು ಸಾಹಸಪಟ್ಟು ಇಷ್ಟು ಹೊತ್ತಿನವರೆಗೆ ಬೋಧಮಾಡಿದ್ದೆಲ್ಲವೂ ವ್ಯರ್ಥವಾಗುವದೆಂದು ತಿಳಿದು ಅನ್ನುತ್ತಾನೆ "ಕವಿರಾಜ! ಈಕಾರ್ಯವು ನಮ್ಮಂಥ ಪಾಮರರಿಂದ ಅಸಾಧ್ಯವು, ಈ ಕಾರ್ಯವು ಕವಿಗಳಿಂದ ಜರಗತಕ್ಕದ್ದೇ ಹೊರತು ಅನ್ಯರಿಂದಾಗತಕ್ಕದ್ದಲ್ಲ."

ಈಮಾತಿಗೆ ಮರುಳಾಗಿ ಗಂಗಕವಿಯು ಮೋಸಹೋದನು ಆಗ ಅವನು ಬಾದಶಹನನ್ನು ಹ್ಯಾಗಾದರೂ ಮಾಡಿ ದರಬಾರಕ್ಕೆ ಬರುವಹಾಗೆ ಮಾಡುತ್ತೇನೆ ಇದರಲ್ಲಿ ನನ್ನಪ್ರಾಣ ಹೋದರೂ ಚಿಂತೆಯಿಲ್ಲ ಎಂದು ಪ್ರತಿಜ್ಞೆ ಮಾಡಿ ಹೇಳಿದನು ಸಭಾಸದರಿಗೆಲ್ಲರಿಗೂ ಅತ್ಯಾನಂದವಾಯಿತು, ಎಲ್ಲರೂ ತಮ್ಮತಮ್ಮ ಗೃಹಗಳಿಗೆ ತೆರಳಿದರು.

ಆಮೇಲೆ ಗಂಗಕವಿಯು ಮನಸ್ಸಿನಲ್ಲಿ ಯೋಚಿಸಿದ್ದೇನಂದರೆ;- "ಈ ಕಾರ್ಯಭಾರವಂತೂ ನನ್ನಮೇಲೆಯೇ ಬಿತ್ತು, ಇನ್ನು ವಿಲಂಬಮಾಡಿ ಪ್ರಯೋಜನವಿಲ್ಲ, ಈ ದಿವಸವೇ ಉದ್ಯುಕ್ತನಾಗಲಿಕ್ಕೇಬೇಕು ನಾಳಿಗೆ ಮಾಡಿದರೆತೀರಿತು ಎಂಬುವಹಾಗೆ ಇಲ್ಲ; ಯಾಕಂದರೆ ಈವಾರ್ತೆಯು ಕರ್ಣೋಪಕರ್ಣವಾಗಿ ಬೇಗನ್ನು ಜನರಿಗೆ ತಿಳಿದುಬಂದರೆ ಅವರು ಬಾದಶಹನನ್ನುಮೊದಲಿನ ಸ್ಥಳದಿಂದ ಬೇರೆಕಡೆಗೆ ಇರಿಸಬಹುದು, ಹೀಗಾದರೆ ಯಾವಕಾರ್ಯವೂ ಸಾಧಿಸದೇ ಹೋದೀತು."

ಕವಿರಾಜನು ಈಪ್ರಕಾರ ಯೋಚಿಸಿದ್ದು ಸತ್ಯವೇ ಅರ್ಧರಾತ್ರಿಯ ಸಮಯದಲ್ಲಿ ಗಂಗಕವಿಯು ಆಪಾದಮಸ್ತಕಪರಿಯಂತರ ಕೃಷ್ಣವಸ್ತ್ರಪರಿಧಾನ ಮಾಡಿಕೊಂಡು, ತಲೆಯಮೇಲೆ ಎರಡುಮೊಳ ಎತ್ತರವಾಗಿರುವ ಒಂದು ಶಿರಸ್ತ್ರಾಣವನ್ನು ಧರಿಸಿಕೊಂಡು, ಕೈಯೊಳಗೆ ಗಟ್ಟಿಮುಟ್ಟಾದ ಒಂದು ಡೊಣ್ಣೆಯನ್ನು ಹಿಡಿದುಕೊಂಡು, ಮತ್ತೊಂದುಕೈಯಲ್ಲಿ ಜಪಮಾಲೆಯನ್ನು ತಕ್ಕೊಂಡು ಮನೆಬಿಟ್ಟು ಹೊರಬಿದ್ದನು. ಮಾರ್ಗದಲ್ಲಿ ಎಷ್ಟೋ ಜನರು ಹೋಗಿಬರುತ್ತಿದ್ದರು ಅವರೆಲ್ಲರನ್ನು ತಪ್ಪಿಸುತ್ತಹೊರಟನು, ಗಾಢಾಂಧಕಾರದಲ್ಲಿ ಇವನವೇಷವು ರಾಕ್ಷಸನಂತೆಯೇ ಕಾಣುತ್ತಿತ್ತು; ಈಪ್ರಕಾರ ಅವನು ರಾಣೀವಾಸದ ಉದ್ಯಾನದಪರಿಯಂತರ ತಲುಪಿದನು ಮಹಾದ್ವಾರದಲ್ಲಿ ಕಾವಲುಗಾರರು ಎಚ್ಚರದಿಂದ ಕುಳಿತುಕೊಂಡಿದ್ದರು ಅದನ್ನು ಕಂಡು ಒಂದುಗುಪ್ತ ದ್ವಾರದಿಂದ ಒಳಗೆ ಪ್ರವೇಶಮಾಡಿದನು, ಪ್ರಾತಃಕಾಲಕ್ಕೆ ಸ್ವಲ್ಪ ಸಮಯವೇ ಉಳಿದಿತ್ತು. ಆಗ ಅವನು ಅಲ್ಲಿ ಅಲ್ಲಿ ನಿಂತುಕೊಳ್ಳುತ್ತ, ಅಡಗಿಕೊಳ್ಳುತ್ತ ದೀಪದಪ್ರಕಾಶವು ಕಾಣಬರುತ್ತಿದ್ದ ಅಂತಃಪುರದ ಸಮೀಪಕ್ಕೆ ಹೋಗಿ ನಿಂತುಕೊಂಡನು. ಆ ಸಮಯದಲ್ಲಿ ಬಾದಶಹನು ಎದ್ದು ಕುಳಿತುಕೊಂಡು ದಂತಧಾವನ ನಡೆಯಿಸಿದ್ದನು, ಅವನ ಎಡಬಲದಲ್ಲಿ ಚಂದ್ರವದನೆಯರಿಬ್ಬರು ಜಲವನ್ನು ಹಿಡಿದುಕೊಂಡು ಸಿದ್ಧರಾಗಿ ನಿಂತುಕೊಂಡಿದ್ದರು, ಒಬ್ಬಳು ಕರವಸ್ತ್ರವನ್ನು ಹಿಡಿದುಕೊಂಡು ನಿಂತಿದ್ದಳು. ಈ ವೈಭವವನ್ನೆಲ್ಲ ನೋಡಿ ಗಂಗಕವಿಯು ಮನಸ್ಸಿನಲ್ಲಿ ಅನ್ನುತ್ತಾನೆ;- "ಅಹಹಾ ಇಂಥ ಸ್ವರ್ಗಸುಖವನ್ನು ಬಿಟ್ಟು ಬರುವದಕ್ಕೆ ಯಾವನಮನಸ್ಸು ಆದೀತು ? ಇಂಥಾ ಸುಖದಿಂದ ಬಾದಶಹನನ್ನು ದೂರೀಕರಿಸಿ ಕರೆದುಕೊಂಡು ಹೋಗುವದು ಸಹಾ ಪಾಪದಕೆಲಸವು. ಆದರೆ ನಾನು ಕರ್ತವ್ಯಬದ್ಧನಾಗಿದ್ದೇನೆ; ನನ್ನ ಹಣೇಬರಹದಲ್ಲಿ ಇದ್ದಂತೆ ಆಗಲಿ ! " ಎಂದು ನಿಶ್ಚಯಿಸಿಕೊಂಡು, ಗವಾಕ್ಷದ ಕೆಳಗೆ ನಿಂತುಕೊಂಡು ಬಾದಶಹನಿಗೆ ಕೇಳಬರುವಂತೆ ಉಚ್ಚಸ್ವರದಿಂದ-

" ಬಾದಶಹನೇ ? ನೀನು ನನಗೆ ಮನುಷ್ಯನ ಹಾಗೆ ಕಾಣಿಸುವಿ ? ಆದರೇ ಕೆಲವರು ನಿನಗೆ ಕುದುರೆಯೆಂದೂ, ಕೆಲವರು ಕತ್ತೆಯೆಂದೂ ಅನ್ನುತ್ತಾರೆ ಆದರೆ ಹೀಗೆಯೇಕೆ ಅನ್ನುತ್ತಿರುವರೆಂಬದನ್ನು ನೀನೇ ವಿಚಾರಮಾಡಿ ತಿಳಿದುಕೋ " ಎಂದು ಕೂಗಿ, ಅಲ್ಲಿಂದ ಶೀಘ್ರವಾಗಿ ಪಲಾಯನಮಾಡಹತ್ತಿದನು. ಆಗ ಬಾದಶಹನು- " ಎಲ್ಲೈ ಅಲ್ಲಿ ಯಾರಿದ್ದೀರಿ ? ಆ ಓಡಿಹೋಗುವವ ಮನುಷ್ಯನನ್ನು ಹಿಡಿದು ಬಂಧಿಸಿ ಯಮಸದನಕ್ಕೆಕಳುಹಿಸಿರಿ ? ಎಂದು ಅಪ್ಪಣೆಮಾಡಿದನು. ಆದರೆ ಬಾದಶಹನಿಗೆ ಕೂಗಿದವನ ಸ್ವರವು ಗಂಗಕವಿಯ ಸ್ವರದಹಾಗೆ ಕೇಳಿಸಿತು; ಗುರುತುಮಾತ್ರಹತ್ತಲಿಲ್ಲ, ಕೂಗಿದವನ ಆಶಯವೂ ತಿಳಿಯಬಂತು, ಯಾವ ಅಂತಃಪುರದಲ್ಲ ಪಶುಪಕ್ಷಿಗಳಿಗೆ ಬರುವದಕ್ಕೆ ಅಸಾಧ್ಯವೋ ಅಂಥಸ್ಥಳದಲ್ಲಿ ಪರಮನುಷ್ಯನುಬರುವದೆಂದರೆ ಎಂಥಾ ಆಶ್ಚರ್ಯದ ಮಾತು ! ಗಂಗಕವಿಯಂತೂ ಜೀವವನ್ನು ಎಡಗೈಯಲ್ಲಿ ಹಿಡಿದುಕೊಂಡು ಪಲಾಯನಮಾಡ ಹತ್ತಿದನು, ಆದರೆ ಉದ್ಯಾನವನ್ನು ದಾಟಿ ಹೋಗಲು ಸಮರ್ಥನಾಗಲಿಲ್ಲ ಹಿಂದಿನಿಂದ ಕಾವಲುಗಾರರುಬಂದು ಹಿಡಿದುಕೊಂಡುಬಿಟ್ಟರು ಅವನು ಧರಿಸಿಕೊಂಡಿದ್ದ ಉಡುಪುಗಳನ್ನೆಲ್ಲ ಕಿತ್ತುಹಾಕಿದರು ಗಂಗಕವಿ ಎಂದು ತಿಳಿಯಬಂತು, ಕೂಡಲೆ ಅವನ ಕೈಕಾಲುಗಳನ್ನು ಕಟ್ಟಿದರು, ಬಾದಶಹನ ಅಪ್ಪಣೆಯಂತೆ ಕೊಲ್ಲಲಿಲ್ಲ ಬಾದಶಹನು ಕೃದ್ಧನಾಗಿ ಅಂತಃಪುರದಿಂದ ಹೊರಬಿದ್ದನು ಬೇಗಮ್ಮ ಜನರೆಲ್ಲರೂ ಬಾದಶಹನು ಹೊರಗೆಹೋಗದ ಹಾಗೆ ಅನೇಕಪ್ರಯತ್ನಗಳನ್ನು ಮಾಡಿದರು ಆದರೆ ಅವು ಸಾಧ್ಯವಾಗಲಿಲ್ಲ, ಬಾದಶಹನಿಗೆ " ಕತ್ತೆ, ಕುದುರೆ " ಎಂದ ಮನುಷ್ಯನ ಆಶಯವೂ ಸ್ಪಷ್ಟವಾಗಿ ತಿಳಿಯಿತು. ಬೇಗಮ್ಮ ಜನರು ಸಭಾಸದರಿಗೆಲ್ಲ ಅನೇಕ ಶಾಪಗಳನ್ನು ಕೊಟ್ಟರು ಈಶಾಪಗಳಿಂದ ಬಾದಶಹನಿಗೆ ಏನೂ ತೊಂದರೆಯುಂಟಾಗಲಿಲ್ಲ ಬಾದಶಹನು ಕೃದ್ಧನಾಗಿ ಆ ಮನುಷ್ಯನಿಗೆ ಪ್ರಾಣದಂಡನೆಯನ್ನು ಮಾಡದದೆ ಬಿಡಲಿಕ್ಕಿಲ್ಲ, ಆ ಮನುಷ್ಯನಿಗುಂಟಾದ ದುರವಸ್ಥೆಯನ್ನು ಕಂಡು ಇತರರಾರೂ ಇಂಥ ಕೆಲಸಕ್ಕೆ ಮುಂದೆಯಾದರೂ ಪ್ರವೃತ್ತರಾಗಲಾರರು, ಎಂದು ಬೇಗಮ್ಮ ಜನರೆಲ್ಲರೂ ತಮ್ಮ ತಮ್ಮೊಳಗೇ ಸಂತೋಷಪಡಹತ್ತಿದರು.

ಬಾದಶಹನು ಪ್ರಕಟನಾದ ವರ್ತಮಾನವು ಪ್ರಾತಃಕಾಲದೊಳಗಾಗಿ ಪಟ್ಟಣದ ಎಲ್ಲೆಡೆಯಲ್ಲಿಯೂ ಪಸರಿಸಿತು ರಾಜನಿಷ್ಠರಾದ ಪ್ರಜೆಗಳಿಗೆ ಅತ್ಯಾನಂದವೂ, ಅತ್ಯಾಚಾರಿಗಳಾದವರಿಗೆ ಭಯವೂ ಉಂಟಾದವು ಅಪರಾಹ್ನಕಾಲದಲ್ಲಿ ಸಭೆಯು ಕೂಡಿತು. ಕ್ರೋಧಯುಕ್ತವಾದ ಮುಖದಿಂದ ಬಾದಶಹನು ಬಂದು ಸಿಂಹಾಸನಾರೂಢನಾದನು. ಸರದಾರರೂ ಮುತ್ಸದ್ದಿಗ

ಳೂ, ಬಾದಶಹನಿಗೆ ಕುರ್ನಿಸಾತವನ್ನು ಮಾಡಿ ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತು ಕೊಂಡರು. ಬಾದಶಹನನ್ನು ಕಣ್ಣೆತ್ತಿ ನೋಡುವದಕ್ಕೆ ಯಾರಿಂದಲೂ ಎದೆಯಾಗಲಿಲ್ಲ, ಮುಂದೆಸ್ವಲ್ಪ ಹೊತ್ತಿನೊಳಗಾಗಿ ಗಂಗಕವಿಯನ್ನು ರಾತ್ರಿಯಲ್ಲಿದ್ದ ವೇಷದಿಂದಲೇ ಕಟ್ಟಿಕೊಂಡು ಕರ್ಮಚಾರಿಗಳು ಸಭೆಯಲ್ಲಿ ತಂದು ನಿಲ್ಲಿಸಿದರು ಬಾದಶಹನು ಗಂಗಕವಿಯನ್ನು ಗುರುತಿಸದೆ ಅನ್ನುತ್ತಾನೆ; ಇದು ಭೂತವೋ ಅಥವಾ ಪ್ರೇತವ್ರೋ ಇಲ್ಲವೆ ಪಿಶಾಚವ್ರೋ ಏನಿರುವದು ? ಇವನು ಯಾರು ? ” ಎಂದು ಪ್ರಶ್ನೆಮಾಡಿದನು ಆಗ ಗಂಗಕವಿಯು ಅವನತನಾಗಿ ಬಾದಶಹನಿಗೆ ಸಲಾಮು ಮಾಡಿದನು. ಆಗ ಅವನ ತಲೆಯ ಮೇಲಿದ್ದ ಆಚ್ಛಾದನವು ಕೆಳಗೆ ಬಿತ್ತು, ಆಗ ಬಾದಶಹನು ಅವನನ್ನು ಗುರುತಿಸಿ ಅನ್ನುತ್ತಾನೆ- “ ನನ್ನ ರಾಣೀವಾಸದಲ್ಲಿ ಬರುವದಕ್ಕೆ. ನಿನಗೆ ಧೈರ್ಯವು ಹ್ಯಾಗೆ ಬಂತು ? ನಿನಗೆ ಮರಣದಂಡನೆಯೇ ಯೋಗ್ಯವಾದದ್ದು ಎಂದು ನುಡಿದನು ಈ ಮಾತಿಗೆ ಗಂಗಕವಿಯು ಪ್ರತ್ಯುತ್ತರವನ್ನು ಕೊಡದೆ ಸುಮ್ಮನೆ ನಿಂತುಕೊಂಡು ಬಿಟ್ಟನು. ವಧಿಕರು ತಮ್ಮ ತಮ್ಮ ಆಯುಧಗಳನ್ನು ಹಿಡಿದುಕೊಂಡು ಸಿದ್ಧರಾಗಿ ನಿಂತುಕೊಂಡರು ಗಂಗಕವಿಯು ಸಭಾಸದರನ್ನೆಲ್ಲ ನೋಡಿದನು ತನ್ನನ್ನು ಬದುಕಿಸಿಕೊಳ್ಳಿರೆಂದು ಸಂಕೇತದಿಂದಲೇ ಪ್ರಾರ್ಥಿಸಿದನು. ಆದರೆ ಒಬ್ಬನಾದರೂ ತಲೆಯೆತ್ತಿ ಇವನನ್ನು ನೋಡಲಿಲ್ಲ, ಎಲ್ಲರೂ ಬಾದಶಹನ ಕ್ರೋಧ ಮುದ್ರೆಯಿಂದ ಸ್ತಂಭೀಭೂತನಾಗಿ ಕುಳಿತು ಕೊಂಡು ಬಿಟ್ಟರು ಇದನ್ನೆಲ್ಲಕಂಡು ಬಾದಶಹನಿಗೂ ಸ್ವಲ್ಪಸ್ವಲ್ಪ ಆಶ್ಚರ್ಯವುಂಟಾಗಹತ್ತಿತು ಆಗ ಅನ್ನುತ್ತಾನೆ,- “ ಗಂಗನೇ ! ಇದು ಏನು ನಡೆಯಿಸಿರುವಿ ! ಇದು ದರಬಾರವು ? ಗೊಂಬೆಯಾಟವಲ್ಲ ? ” ಎಂದು ಬೆದರಿಸಿದನು. ಆಗ ಗಂಗನು ಮನಸ್ಸಿನಲ್ಲಿ ಅನ್ನುತ್ತಾನೆ,- “ನಿನ್ನೆನನ್ನನ್ನು ಹ್ಯಾಗಾದರೂ ಮಾಡಿ ರಕ್ಷಿಸಿಕೊಳ್ಳುವೆವೆಂದು ಹೇಳಿದ ಈ ಸಭಾಸದರೆಲ್ಲರೂ ಈದಿವಸ ನನ್ನ ಕಡೆಗೆ ಕಣ್ಣೆತ್ತಿ ಸಹಾ ನೋಡದೆ, ಸ್ವಸ್ಥರಾಗಿ ಕುಳಿತುಕೊಂಡು ಬಿಟ್ಟಿರುವರಲ್ಲಾ ! ನನಗಂತೂ ಮರಣವು ಸಿದ್ಧವಾಗಿಯೇ ಇರುವದು ಆದರೆ ಈ ಅವಿಶ್ವಾಸಿಗಳ ಕೃತ್ಯವನ್ನು ಬೈಲಿಗೆ ಎಳೆದುಬಿಡೋಣ ಬಾದಶಹನು ಪುನಃ ಪ್ರಶ್ನೆಯನ್ನೂ ಮಾಡಿದ್ದಾನೆ, ಅದದ್ದಾಗಲಿ ; ” ಎಂದು ನಿಶ್ಚಯಿಸಿಕೊಂಡು ಆ ಸಭಾಸದರನ್ನೆಲ್ಲ ತೋರಿಸಿ, ಅನ್ನುತ್ತಾನೆ, “ ನಾನು ಇವರ ಮಾತುಗಳ ಮೇಲೆ ವಿಶ್ವಾಸವನಿಟ್ಟು ಈ ದಂಡನೆಗೆ ಪಾತ್ರನಾಗಬೇಕಾಯಿತು ” ಎಂದು ನುಡಿದು ತನ್ನ ಸಮಗ್ರ ವೃತ್ತಾಂತವನ್ನೆಲ್ಲ ನಿರೂಪಿಸಿದನು ಇವನ ಸಂಗತಿಯನ್ನು ಕೇಳಕೇಳಿದ ಹಾಗೆ ನಗೆಯು ಬರಹತ್ತಿತು ಗಂಗನ

ಪ್ರಾಣರಕ್ಷಣೆಯ ವಿಷಯದಲ್ಲಿ ನಂಬಿಗೆಯನ್ನಿಟ್ಟಿದ್ದ ಸಭಾಸದರ ಹೀನಸ್ಥಿತಿಯನ್ನು ಕಂಡಮೇಲಂತೂ, ಬಾದಶಹನಿಗೆ ಅತಿಶಯ ನಗೆಯು ಬಂತು ಎಲ್ಲವೃತ್ತಾಂತವನ್ನು ಕೇಳಿದಮೇಲೆ ಕವಿಗಂಗನಿಗೆ ಕ್ಷಮಿಸಿ ಬಿಟ್ಟನು. ಮೃತ್ಯುವಿನ ಬದಲು ಪಾರಿತೋಷಕವು ಸಿಕ್ಕಿತು. ಆಗ ಬಾದಶಹನು ಅನ್ನುತ್ತಾನೆ,- "ಕವಿರಾಜ! ಇನ್ನು ಮೇಲಾದರೂ, ಪರರು ಹೇಳಿದ ಸವಿಮಾತುಗಳನ್ನು ನಂಬದೆ ಅದರಲ್ಲಿ ಯೋಗ್ಯವಾದದ್ದು ಯಾವದು ಅಯೋಗ್ಯವಾದದ್ದು ಯಾವದು ? ಎಂಬ ಸಂಗತಿಯನ್ನು ಚನ್ನಾಗಿ ವಿಚಾರಮಾಡಿಕೊಂಡು ಯಾವದಾದರೂ ಕಾರ್ಯಕ್ಕೆ ಕೈಹಾಕಬೇಕು" ಎಂದು ಬುದ್ಧಿವಾದವನ್ನು ಹೇಳಿ ಸಭಾಸದರನ್ನು ಕುರಿತು ಹೇಳಿದ್ದೇನಂದರೆ,- "ನಿರಪರಾಧಿಯಾದ ಈ ಕವಿಯನ್ನು ಸಂಕಟಕ್ಕೆ ಗುರಿಮಾಡಿದ್ದಿರಿ! ಅವನನ್ನು ಬದುಕಿಸಿಕೊಳ್ಳುವ ಯತ್ನವು ನಿಮಗೆ ತಿಳಿಯದೆ ಹೋಯಿತು" ಎಂದನು ಆಗ ಬೀರಬಲನು ಅನ್ನುತ್ತಾನೆ,- "ಪೃಥ್ವೀನಾಥ! ಗಂಗಕವಿಯು ಮಹಾ ಪರೋಪಕಾರಿಯಾಗಿದ್ದಾನೆ; ಇವನು ಸಾವಿರಾರು ಜನರ ಪ್ರಾಣವನ್ನು ರಕ್ಷಿಸುವದಕ್ಕಾಗಿ ತನ್ನ ಪ್ರಾಣವನ್ನು ಸಂಕಟಕ್ಕೆ ಗುರಿ ಮಾಡಿದ್ದನು ಇದಲ್ಲದೆ ನೀವು ಒಳ್ಳೇವಿಚಾರ ಪರರಾಗಿರುವಿರಿ! ಪರಿಣಾಮದ ಕಡೆಗೆ ಲಕ್ಷ್ಯಕೊಡುವವರು ಆಗಿರುವಿರಿ! ನೀವು ಎಂದೂ ಗಂಗಕವಿಯ ಮೇಲೆ ಸಿಟ್ಟಾಗಲಾರಿರಿ; ಎಂಬ ಸಂಗತಿಯನ್ನು ನಾವು ತಿಳಿದು ಕೊಂಡದ್ದರಿಂದಲೇ ನಾವು ನಡುವೆ ಬಾಯಿ ಹಾಕಲಿಲ್ಲ ನಾವು ಈ ವಿಷಯದಲ್ಲಿ ಏನಾದರೊಂದು ಮಾತಾಡಿದ್ದರೆ, ನಿಮಗೆ ಅಧಿಕವಾದ ಕೋಪವು ಉಂಟಾಗುತ್ತಿತ್ತು. ಅದರಿಂದಲೇ ನಾವು ಒಂದು ತುಟಿಯನ್ನು ಎರಡು ಮಾಡಲಿಲ್ಲ" ಎಂದು ಹೇಳಿದನು ಆದಿವಸದಿಂದ ಬಾದಶಹನು ನಿತ್ಯದಲ್ಲಿ ದರಬಾರಕ್ಕೆ ಬರಹತ್ತಿದನು.

—(೨೨. ವೇಶ್ಯೆಯ ಗೃಹದಲ್ಲಿದ್ದ ಬಡವನ ಮಗಳು.)—

ದಿಲ್ಲಿಯಲ್ಲಿ ಒಬ್ಬ ಬಡವನಾದ ಮನುಷ್ಯನಿದ್ದನು. ಅವನಿಗೆ ಎಂಟುವರುಷದ ಒಬ್ಬ ಮಗಳಿದ್ದಳು. ಆ ಹುಡುಗಿಯನ್ನು ಒಬ್ಬ ಮೋಸಗಾರನು ಮೋಸದಿಂದ ಎತ್ತಿಕೊಂಡು ಹೋದನು ಕೆಲವು ದಿವಸ ಆ ಹುಡುಗಿಯನ್ನು ತನ್ನ ಮನೆಯಲ್ಲಿಟ್ಟುಕೊಂಡು ಆ ಮೇಲೆ ಅವಳನ್ನು ಒಬ್ಬ ವೇಶ್ಯಾಸ್ತ್ರೀಯಳಿಗೆ ಮಾರಿಕೊಂಡು ಬಿಟ್ಟನು ಆವಣ್ಯಾಂಗನೆಯು ಆ ಹುಡುಗಿಯನ್ನು ಚನ್ನಾಗಿ ಜೋಪಾನ ಮಾಡಹತ್ತಿದಳು. ಅದರಿಂದ ಆ ಹುಡುಗಿಯು ಕೆಲವು ದಿವಸಗಳಲ್ಲಿ ತನ್ನ ತಂದೆಯನ್ನು ಮರೆತು ಬಿಟ್ಟಳು. ಆ ಹುಡುಗಿಯ ತಂದೆ

ಯು, ನಗರದ ಯಾವತ್ತು ಬಾಗಗಳಲ್ಲಿ ಚೆನ್ನಾಗಿ ಶೋಧವಮಾಡಿ ನೋಡಿದ ನು. ಎಲ್ಲಿಯೂ ಸಿಗಲಿಲ್ಲ ಕಡೆಗೆ ನಿರಾಶೆಯಿಂದ ಸ್ವಸ್ಥಕುಳಿತುಕೊಂಡು ಬಿಟ್ಟನು. ಆ ವಾರಾಂಗನೆಯು ಆ ಬಾಲಕಿಗೆ ಚೆನ್ನಾಗಿ ನೃತ್ಯಗಾಯನಾದಿಗಳನ್ನು ಕಲಿಸಿ, ಚತುರಳನ್ನಾಗಿ ಮಾಡಿಬಿಟ್ಟಳು. ಅವಳ ನೃತ್ಯಗಾಯನದ ಪ್ರಶಂಸೆಯು ದಿಲ್ಲಿಯಲ್ಲಿ ಎಲ್ಲಕಡೆಗೂ ಪಸರಿಸಿತು. ಒಂದು ದಿವಸ ಒಬ್ಬಸರದಾರನ ಗೃಹದಲ್ಲ ಆ ಬಾಲಕಿಯನೃತ್ಯವು ನಡೆದಿತ್ತು. ಅಕಸ್ಮಾತಾಗಿ ಆಬಾಲಕಿಯ ತಂದೆಯು ಅಲ್ಲಿಗೆ ಬಂದನು. ಆಗ ಅವನಿಗೆ ತನ್ನ ಪುತ್ರಿಯ ಪರಿಚಯವು ಹತ್ತಿತು. ಆಗ ಅವನು ಅಲ್ಲಿ ನೆರೆದಿರುವ ಜನಸಮೂಹದಲ್ಲಿ ವಿಚಾರ ಮಾಡಹತ್ತಲು ಆ ಬಾಲಕಿಯು ಒಬ್ಬ ವಾರಾಂಗನೆಯ ಗೃಹದಲ್ಲಿರುವಂತೆ ತಿಳಿಯಬಂತು ಆಗ ಅವನು ತನ್ನ ಮನಸ್ಸಿನಲ್ಲಿ ವಿಚಾರವಮಾಡಿ ತಿಳಿದುಕೊಂಡದ್ದೇನಂದರೆ;- ನಾನು ಈಗ ಇವಳನ್ನು ನನ್ನಸಂಗಡಬಾ ಎಂದು ಕರೆದರೆ ಎಂದಿಗೂ ಬರಲಾರಳು ಇವಳು ಇಲ್ಲಿ ಒಳ್ಳೇ ಸೌಖ್ಯದಿಂದ ಇದ್ದಾಳೆ ನನ್ನ ಬಳಿಯಲ್ಲಿ ಕಷ್ಟಪಡುವದಕ್ಕೆ ಯಾಕೆ ಬಂದಾಳು? ಇದು ಸರಿಯಾಗಿ ತೋರುವದಿಲ್ಲ, ಬಾದಶಹನ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡರೆ ಅವನು ನನ್ನ ಪುತ್ರಿಯನ್ನು ನನ್ನ ಸ್ವಾಧೀನಕ್ಕೆ ಕೊಡಿಸಬಹುದು ಎಂದು ನಿಶ್ಚಯಿಸಿಕೊಂಡು ಬೀರಬಲನ ಕಡೆಗೆ ಹೋಗಿ ಯಾವತ್ತು ಸಂಗತಿಯನ್ನು ಅರಿಕೆ ಮಾಡಿಕೊಂಡನು ಬೀರಬಲನು ಆ ಸಂಗತಿಯನ್ನು ಬಾದಶಹನ ಕಿವಿಯಮೇಲೆ ಹಾಕಿದನು. ಬಾದಶಹನು ಒಬ್ಬ ಕರ್ಮಚಾರಿಯನ್ನು ಕಳುಹಿಸಿ ಆವಾರಾಂಗನೆಯನ್ನೂ ಆ ಬಾಲಕಿಯನ್ನೂ ತನ್ನೆಡೆಗೆ ಬರಮಾಡಿಕೊಂಡನು. ಆಗ ಬೀರಬಲನು ಬಾದಶಹನ ಆಜ್ಞೆಯ ಪ್ರಕಾರ ಆ ವಾರಾಂಗನೆಯನ್ನು ಕುರಿತು, “ ಈ ಬಾಲಕಿಯು ಯಾರ ಮಗಳು? ಎಂದು ಪ್ರಶ್ನೆಮಾಡಿದನು. ಆ ವೇಶ್ಯೆಯಾದರೂ ಒಳ್ಳೇಚತುರಳಿದ್ದಳು. ಆಬಾಲಕಿಗೆ ಮನೆಯಿಂದಲೇ ಕಲಿಸಿಕೊಂಡು ಬಂದಿದ್ದಳು. ಆ ವೇಶ್ಯೆಯು ಬೀರಬಲನ ಪ್ರಶ್ನೆಗೆ ಉತ್ತರ ಕೊಟ್ಟದ್ದೇನಂದರೆ;- ಇವಳು ಒಬ್ಬ ಫಕೀರನ ಮಗಳು, ಇವಳ ತಂದೆಯು ಇವಳನ್ನು ತೀರ ಅಜ್ಞಾನದೆಶೆಯಲ್ಲಿದ್ದಾಗಲೇ ನನಗೆ ವಿಕ್ರಯಿಸಿ ಬಿಟ್ಟನು. ಆಗ ಇವಳಿಗೆ ಇನ್ನೂ ಮಾತಾಡಲಿಕ್ಕೆ ಸಹ ಬರುತ್ತಿದ್ದಿಲ್ಲ” ಬೀರಬಲನು ಆ ಬಾಲಿಕೆಯನ್ನು ಕುರಿತು;- ನಿನ್ನ ತಾಯಿ ತಂದೆಗಳು ಯಾರು? ಎಂಬಸಂಗತಿಯನ್ನು ಬಲ್ಲಿಯಾ? ಎಂದು ಕೇಳಿದನು ಅದಕ್ಕೆ ಅವಳು “ ಮಹಾರಾಜ ಇಲ್ಲ ; ನಾನು ನನ್ನ ಮಾತಾಪಿತೃಗಳು ಎಂಥವರಿದ್ದರೆಂಬದೂ ಸಹಗೊತ್ತು ಇಲ್ಲ, ನಾನು ಇವಳನ್ನೇ ತಾಯಿಯೆಂದು ತಿಳಿದುಕೊಂಡಿದ್ದೇನೆ ಇವಳೇನ

ನ್ನ ಪಾಲನೆ ಪ್ರೋಷಣೆಯನ್ನು ಮಾಡಿದವಳು ” ಎಂದು ಉತ್ತರ ಕೊಟ್ಟಳು ಆ ಮೇಲೆ ಬೀರಬಲನು, “ ಈ ಹುಡುಗಿಯ ಹೆಸರೇನು ? ” ಎಂದು ಆ ವಾರಾಂಗನೆಗೆ ಕೇಳಿದನು. ಆಗ ಅವಳು, “ ಇವಳ ಹೆಸರು “ ಕಾಶಿ ” ಎಂದು ಹೇಳಿದಳು. ಆಮೇಲೆ ನೀವಿಬ್ಬರೂ ನಾಳೆಯದಿನ ಇಲ್ಲಿಗೆ ಬರಬೇಕೆಂದು ಆಜ್ಞಾಪಿಸಿ ಅಪ್ಪಣೆಕೊಟ್ಟು ಕಳುಹಿಸಿದನು.

ಮರುದಿವಸ ಆ ಬಾಲಿಕೆಯ ಪಿತನನ್ನು ಮೊದಲೇ ಕರಿಸಿಕೊಂಡು “ ನಿನ್ನ ಮಗಳ ನಾಮಧೇಯವೇನು ? ” ಎಂದು ಕೇಳಿದ್ದಕ್ಕೆ ಅವನು “ ನಾನು ಇವಳಿಗೆ “ ಲಕ್ಷ್ಮಿ ” ಎಂದು ಹೆಸರಿಟ್ಟಿದ್ದೆನು ಈ ಸಂಗತಿಯು ನನ್ನ ಮನೆಯ ನೆರೆ ಹೊಯಲ್ಲಿದ್ದವರಿಗೆಲ್ಲ ಗೊತ್ತು ಅದೆ ” ಎಂದು ಉತ್ತರಕೊಟ್ಟನು, ಬೀರಲನಿಗೆ ನೆರೆಹೊರೆಯವರನ್ನು ಕರಿಸಿ ಕೇಳಿಕೊಳ್ಳುವ ಅವಶ್ಯಕತೆಯೇ ಇದ್ದಿಲ್ಲ ಅಷ್ಟರಲ್ಲಿ ಆ ಪಣ್ಯಾಂಗನೆಯು ಆ ಬಾಲಿಕೆಯನ್ನೊಡಗೊಂಡು ಬೀರಬಲನ ಓಲಗಕ್ಕೆ ಬಂದಳು ಈ ವ್ಯಾಜ್ಯದ ನಿರ್ಣಯವು ಏನಾಗುತ್ತದೆಂಬದನ್ನು ಅರಿತುಕೊಳ್ಳುವದಕ್ಕೆ ಎಷ್ಟೋ ಜನರು ಕೂಡಿದ್ದರು, ಆಗ ಬೀರಬಲನು ಒಬ್ಬ ಸಿಪಾಯಿಯನ್ನು ಕರೆದು,- ನೀನು ಈ ಜನಸಮೂಹದಲ್ಲಿ ಹೋಗಿ “ ಲಕ್ಷ್ಮೀ, ಲಕ್ಷ್ಮೀ ” ಎಂದು ಕೂಗು, ಈ ಧ್ವನಿಯನ್ನು ಕೇಳಿ ಯಾರು ಮುಂದೆ ಬರುವರೋ, ಅವರನ್ನು ನನ್ನೆಡೆಗೆ ಕರೆದುಕೊಂಡು ಬಾ ” ಎಂದು ಅಪ್ಪಣೆಮಾಡಿದನು ಸಿಪಾಯಿಯು ಕೂಗಿದ ಕೂಡಲೆ ಒಬ್ಬ ಹುಡುಗಿಯು ಮುಂದೆ ಬಂದಳು ಅವನು ಅವಳನ್ನು ಕರೆದುಕೊಂಡು ಬೀರಬಲನ ಹತ್ತರ ಬಂದನು ಆ ವಾರಾಂಗನೆಯೂ ಆ ಬಾಲಿಕೆಯ ಬೆನ್ನ ಮೇಲೆಯೇ ಬಂದಳು ಆ ಬಾಲಿಕೆಯನ್ನು ನೋಡಿ ಬೀರಬಲನು ಅನ್ನುತ್ತಾನೆ:- “ ನಿನ್ನ ಹೆಸರು “ ಕಾಶಿ ” ಎಂದು ಹೇಳಿದ್ದಿಲ್ಲವೇ ? ಹೀಗಿದ್ದು “ ಲಕ್ಷ್ಮೀ ” ಎಂದು ಕೂಗಿದರೆ, ನೀನು ಯಾಕೆ ಬಂದಿ ? ” ಅದಕ್ಕೆ ಆ ಬಾಲಿಕೆಯು ಗಾಬರಿಯಾಗಿ,- “ ನನ್ನ ತಂದೆಯು ನನಗೆ ಲಕ್ಷ್ಮೀ ಎಂದು ಕರೆಯುತ್ತಿದ್ದನು. ಆ ಮೊದಲಿನ ಹೆಸರು ಕಿವಿಗೆ ಬಿದ್ದದರಿಂದ, ದಿಗ್ಭ್ರಮೆಯುಳ್ಳವಳಾಗಿ ಮುಂದೆ ಬಂದು ಬಿಟ್ಟೆನು ” ಎಂದು ಹೇಳಿದಳು. ಆಮೇಲೆ ಬೀರಬಲನು- ನಿನ್ನೆ ನೀನು “ ನನಗೆ ಮಾತಾ ಪಿತೃಗಳ ಪರಿಚಯವಿಲ್ಲವೆಂದು ಹೇಳಿದವಳು ” ಈ ಹೊತ್ತು ಹೀಗೆ ವಿಪರೀತವಾಗಿ ಯಾಕೆ ಹೇಳುತ್ತೀ ? ” ಎಂದು ಪ್ರಶ್ನೆ ಮಾಡಿದನು. ಆ ಬಾಲಿಕೆಗೆ ಏನೂ ಉತ್ತರಕೊಡುವದಕ್ಕೆ ತಿಳಿಯದೆ ಹೋಯಿತು. ಸುಮ್ಮನೆ ನಿಂತುಕೊಂಡು ಬಿಟ್ಟಳು. ಅಗ ಆ ವಾರಾಂಗನೆಯು ಮುಂದೆ ಬಂದು ಮಾತನಾಡಹತ್ತಿದಳು. ಆಗ ಅವಳಿಗೆ ಮಾತನಾಡಗೊಡದೆ ಬೀರಬಲನು ಅನ್ನುತ್ತಾನೆ;-

" ನೀನು ನಿನ್ನೆ ಹೇಳಿದ ಸಂಗತಿಗೂ, ಈದಿವಸ ಹೇಳುತ್ತಿರುವ ಸಂಗತಿಗೂ ಬಹಳೇ ಅಂತರವದೆ; ನೀನು ಬಹಳೇ ಮೋಸಗಾರಳಿದ್ದಂತೆ ಕಂಡುಬರುತ್ತದೆ, ಆದ್ದರಿಂದ ನಿನಗೆ ಯೋಗ್ಯ ಶಿಕ್ಷೆಯನ್ನು ಮಾಡುತ್ತೇನೆ " ಎಂದು ಹೇಳಿ ಒಬ್ಬ ಕರ್ಮಚಾರಿಗೆ ನೇತ್ರಸಂಕೇತ ಮಾಡಿದನು. ಕೂಡಲೆ ಅವನು ಆಯುಧಪಾಣಿಯಾಗಿ ಮುಂದೆಬಂದುನಿಲ್ಲಲು, ವೇಶ್ಯೆಯು ಗಾಬರಿಯಾಗಿ ಅನ್ನುತ್ತಾಳೆ- " ನಾನು ಸತ್ಯವನ್ನೇ ಹೇಳುತ್ತೇನೆ, ನಾನು ಈ ಬಾಲಿಕೆಯನ್ನು ಮೂರುವರುಷದ ಹಿಂದೆ ಕ್ರಯಕ್ಕೆ ತೆಗೆದುಕೊಂಡದ್ದು ನಿಜವು ಯಾವನೋ ಒಬ್ಬನು ಇವಳನ್ನು ನನಗೆಕೊಟ್ಟು ಹೊರಟುಹೋಗಿರುವದು ಸತ್ಯವು ನನ್ನ ಅಪರಾಧವನ್ನು ಕ್ಷಮಿಸಬೇಕು " ಎಂದು ಪ್ರಾರ್ಥನೆಮಾಡಿಕೊಂಡಳು. ವೇಶ್ಯೆಯು ಹೇಳಿದ ಸಂಗತಿಯನ್ನು ಕೇಳಿದಕೂಡಲೆ ಆ ಬಾಲಿಕೆಯಪಿತನು ಮುಂದೆಬಂದನು, ಬೀರಬಲನು ಆ ಬಾಲಿಕೆಯನ್ನು ಕುರಿತು ಇವನು ನಿನ್ನ ಪಿತನಲ್ಲವೇ ! ಎಂದು ಪ್ರಶ್ನೆಮಾಡಿದಳು, ಮೊದಲೇ ಆ ಬಾಲಿಕೆಯು ಗಾಬರಿಯಾಗಿದ್ದಳು ಸುಳ್ಳುಹೇಳಿದರೆ ಶಿಕ್ಷೆಯಾಗುವದೆಂಬ ಅಂಜಿಕೆಯೂ ಹುಟ್ಟಿತು, ಅದರಿಂದ ಅವಳು ಅಹುದು, ಇವನೇ ನನ್ನ ಪಿತನು ? ಎಂದು ಸತ್ಯವನ್ನೇ ಹೇಳಿಬಿಟ್ಟಳು. ಆಮೇಲೆ ಎದುರಿಗೆ ನಿಂತುಕೊಂಡಿದ್ದ ತಂದೆಯನ್ನು ಆಲಿಂಗನೆಮಾಡಿಕೊಂಡಳು, ಬೀರಬಲನು ಆ ಪಣ್ಯಾಂಗನೆಯನ್ನು ಕುರಿತು ಅನ್ನುತ್ತಾನೆ "ನಿನ್ನ ಮೇಲೆ ಮೂರು ಅಪರಾಧಗಳುಂಟು; ಮೊದಲನೇದು ಅಜ್ಞಾನಿಯಾದ ಬಾಲಿಕೆಯನ್ನು ಮೋಸಗೊಳಿಸಿದ್ದು, ಎರಡನೇದು ದಾಸಿಯಂತೆ ಇವಳನ್ನು ಕ್ರಯಕ್ಕೆ ತೆಗೆದುಕೊಂಡದ್ದು, ಮೂರನೇದು ಸತ್ಯವನ್ನು ಮರೆಮಾಜಿ ಶಿಕ್ಷೆಯಾಗುವದೆಂಬ ನಂಬಿಕೆಯುಹುಟ್ಟಿದಮೇಲೆ ಅಪರಾಧವನ್ನು ಸ್ವೀಕರಿಸಿದ್ದು ಹೀಗೆ ಮೂರು ಅಪರಾಧಗಳನ್ನು ಮಾಡಿದ್ದರಿಂದ ನಿನಗೆ ಕಠಿಣವಾದಕಾರಾಗೃಹವಾಸವು ತಪ್ಪದು " ಎಂದು ಹೇಳಿದಕೂಡಲೆ ಸಿಪಾಯಿಗಳುಬಂದು ಅವಳನ್ನು ಬಂಧನಮಾಡಿ ಕಾರಾಗಾರಕ್ಕೆ ಎಳೆದೊಯ್ದರು. ಬೀರಬಲನು ಆ ವೃದ್ಧಮನುಷ್ಯನಿಗೆ ಅನ್ನುತ್ತಾನೆ-" ಈ ನಿನ್ನ ಪುತ್ರಿಯು ನಿನಗೆಸಿಕ್ಕಳು ಆದರೆ ಇವಳು ಇನ್ನು ಮುಂದೆ ನಿನ್ನ ಬಳಿಯಲ್ಲಿ ಸುಖಸಮಾಧಾನದಿಂದ ಇರಲಾರಳು, ಆದ್ದರಿಂದ ಇವಳನ್ನು ಯೋಗ್ಯನಾದ ಒಬ್ಬ ವರನಿಗೆಕೊಟ್ಟು ವಿವಾಹಮಾಡಿಕೊಡು ! " ಎಂದು ಬುದ್ಧಿವಾದವನ್ನು ಹೇಳಿ ಮನೆಗೆ ಕಳುಹಿಸಿಕೊಟ್ಟನು.

-(೨೩. ಸಂತೋಷದಿಂದಲೋ ಅಥವಾ ಅಸಂತೋಷದಿಂದಲೋ.)-

ಒಂದುದಿನ ಅಕಬರ ಬಾದಶಹನು ಬೀರಬಲನಿಗೆ ಪ್ರಶ್ನೆಮಾಡಿದನು,

ಏನಂದರೆ;- "ಬೀರಬಲ! ರಮಜಾನ ತಿಂಗಳು ಸಂತೋಷದಿಂದ ಹೋಗುವದೋ, ಅಥವಾ ಅಸಂತೋಷದಿಂದ ಹೋಗುವದೋ" ಎಂದು ಕೇಳಿದಕ್ಕೆ ಬೀರಬಲನು "ಸಂತೋಷದಿಂದ" ಎಂದುತ್ತರವಿತ್ತನು. ಅದಕ್ಕೆ ಬಾದಶಹನು ಪುನಃ ಅದು ಹ್ಯಾಗೆ! ಎಂದು ಕೇಳಿದನು, ಆಗ ಬೀರಬಲನು-; "ಅದು ಸಂತೋಷದಿಂದ ಹೋಗದಿದ್ದರೆ ಪ್ರತಿವರುಷ ಅದು ಕರೆಯಿಸಿಕೊಳ್ಳದೆ ಯಾಕೆಬರುತ್ತಿತ್ತು" ಎಂದು ಉತ್ತರಕೊಟ್ಟನು ಬಾದಶಹನು ಪ್ರಸನ್ನನಾದನು.

—(೨೪. ಹನ್ನೆರಡರಲ್ಲಿ ನಾಲ್ಕುಹೋದರೆ ಎಷ್ಟು?)—

ಒಂದು ದಿವಸ ಬಾದಶಹನು ಬೀರಬಲನಿಗೆ;- "ಹನ್ನೆರಡರಲ್ಲಿ ನಾಲ್ಕು ಹೋದರೆ ಎಷ್ಟು ಉಳಿಯಿತು" ಎಂದು ಪ್ರಶ್ನೆಮಾಡಿದನು ಅದಕ್ಕೆ ಬೀರಬಲನು- "ಏನೂ ಉಳಿಯಲಿಲ್ಲ" ಎಂದು ಉತ್ತರಕೊಟ್ಟನು. ಅದುಹ್ಯಾಗೆ? ಎಂದು ಬಾದಶಹನು ಪುನಃ ಪ್ರಶ್ನೆಮಾಡಿದನು ಆಗ ಬೀರಬಲನು ಸರಕಾರ ಹನ್ನೆರಡು ತಿಂಗಳುಗಳಲ್ಲಿ ವರ್ಷಾಕಾಲದ ನಾಲ್ಕುತಿಂಗಳು ಹೋದರೆ ಉಳಿದತಿಂಗಳುಗಳಲ್ಲಿ ಏನು ಅರ್ಥವಿರುವದು ಎಂದು ಉತ್ತರ ಕೊಡಲು, ಬಾದಶಹನು ಪರಮ ಸಂತೋಷಪಟ್ಟನು.

—(೨೫- ಕಾಳಿಕಾದೇವತೆಗೆ ಮಾಡಿದಚೇಷ್ಟೆ.)—

ಒಂದುದಿವಸ ಕಾಳಿಕಾದೇವತೆಯು ಬೀರಬಲನನ್ನು ಹೆದರಿಸಬೇಕೆಂದು ಸಹಸ್ರ ಶಿರಗಳನ್ನು ಧಾರಣಮಾಡಿಕೊಂಡು ದರ್ಶನಕೊಟ್ಟಳು, ದೇವಿಯು ಈಪ್ರಕಾರದ ರೂಪವನ್ನು ನೋಡಿ ಬೀರಬಲನು ನಗುತ್ತ ನಮಸ್ಕಾರ ಮಾಡಿ ಖಿನ್ನನಾಗಿ ಕುಳಿತುಕೊಂಡನು. ದೇವಿಯು, ಬೀರಬಲನು ಹೆದರದೇ ಇದ್ದದ್ದನ್ನೂ, ನಗುತ್ತ ನಮಸ್ಕಾರಮಾಡಿದ್ದನ್ನೂ ಆಮೇಲೆ ಖಿನ್ನನಾಗಿ ಕುಳಿತುಕೊಂಡದ್ದನ್ನೂ ನೋಡಿ ವಿಚಾರಗ್ರಸ್ತಳಾಗಿ ಸ್ವಲ್ಪ ಹೊತ್ತಿನಮೇಲೆ ಬೀರಬಲನಿಗೆ- "ಭಕ್ತಾಗ್ರಣಿಯೇ! ನೀನು ಮೊದಲು ನಕ್ಕದ್ದುಯಾಕೆ, ಆಮೇಲೆ ಉದಾಸೀನನಾದದ್ದು ಯಾಕೆ" ಎಂದು ಪ್ರಶ್ನೆಮಾಡಿದಳು, ಬೀರಬಲನು ಬದ್ಧಾಂಜಲಿಯಾಗಿ ವಿಜ್ಞಾಪನೆಮಾಡಿಕೊಂಡನು. ಏನಂದರೆ- "ಜಗಜ್ಜನನೀ! ನಿನ್ನದರುಶನವು ಲಭಿಸಿದ್ದರಿಂದ ಹರುಷಿತನಾಗಿ ಮೊದಲು ನಕ್ಕೆನು, ಆಮೇಲೆ ಖಿನ್ನತೆಯುಂಟಾದ ಕಾರಣವನ್ನುಮಾತ್ರ ನಾನು ಹೇಳಲಾರೆನು ನನ್ನ ಅಪರಾಧವನ್ನು ಕ್ಷಮಿಸಬೇಕು" ಎಂದನು. ಅದರ ಕಾರಣವನ್ನು ಹೇಳಲಿಕ್ಕೇಬೇಕೆಂದು ದೇವಿಯು ಅತಿ ಆಗ್ರಹಮಾಡಿದ್ದರಿಂದ ಬೀರಬಲನು- "ಎಲೈ ಜಗನ್ಮಾತೆಯೇ! ನೀನು ಎಲ್ಲರ ಮನಸ್ಸಿನಲ್ಲಿದ್ದದ್ದನ್ನು ತಿಳಿ

ದುಕೊಳ್ಳುವಷ್ಟು ಶಕ್ತಿಯುಳ್ಳವಳಾಗಿರುವಿ? ನಿನ್ನನ್ನು ಮರೆಮಾಜಿಸುವಷ್ಟು ಶಕ್ತಿಯು ಅಲ್ಪನಾದ ನನ್ನಲ್ಲಿ ಇರುವದಿಲ್ಲ. ಆದರೆ ನೀವು ಅತ್ಯಾಗ್ರಹಮಾಡಿದ್ದರಿಂದ ಹೇಳುತ್ತೇನೆ ಕ್ಷಮಿಸಬೇಕು, " ನನಗೆ ಎರಡುಕೈಗಳೂ, ಒಂದು ನಾಸಿಕವೂ ಇರುವದು. ನನಗೆ ಯಾವಾಗಾದರೊಮ್ಮೆ ಸೀತಬಾಧೆಯಾಗಲು ನಾಸಿಕವನ್ನು ಸ್ವಚ್ಛಮಾಡಿಕೊಳ್ಳಬೇಕಾದರೆ ಬೇಸತ್ತುಹೋಗುವೆನು. ಆದರೇ ನಿಮಗೆ ಒಂದುಸಹಸ್ರ ನಾಸಿಕಗಳು ಇರುವವು ಹಸ್ತಗಳಾದರೊ ಎರಡೇ ಇರುವವು, ನಿಮಗೆ ನನ್ನಂತೆ ಸೀತಬಾಧೆಯಾದರೆ ಹ್ಯಾಗೆ ಸಹಿಸಿಕೊಳ್ಳುವಿರೋ ? " ಎಂಬ ಚಿಂತೆಯುತ್ಪನ್ನವಾದ್ದರಿಂದ ಉದಾಸೀನನಾಗಿ ಕುಳಿತುಕೊಂಡೆನು ಇಷ್ಟೇಸರಿ ಎಂದು ಉತ್ತರಕೊಟ್ಟನು. ಅದನ್ನುಕೇಳಿ ಜಗಜ್ಜನನಿಯು ಬೀರಬಲನ ಬುದ್ಧಿಚಾತುರ್ಯಕ್ಕೆ ಹರುಷಿತಳಾಗಿ ಆಶೀರ್ವಾದಿಸಿ ಅದೃಶ್ಯಳಾಗಿ ಹೊರಟುಹೋದಳು.

—(೨೬. ಸುವರ್ಣಕಾರರ ಚತುರತೆ.)—

ಒಂದುಸಾರೆ ಬಾದಶಹನು ಬೀರಬಲನಿಗೆ ಕೇಳುತ್ತಾನೆ: - " ಕಸಬುದಾರರು ತಮ್ಮಕಡೆಗೆ ಮಾಡಲಿಕ್ಕೆ ಹಾಕಿದ ಪದಾರ್ಥಗಳಲ್ಲಿ ಅಲ್ಪಸ್ವಲ್ಪಾದರೂ ಕಳ್ಳತನಮಾಡಿ ಉಳಿಸಿಕೊಳ್ಳುತ್ತಾರೆ " ಎಂದು ಲೋಕದಲ್ಲಿ ವಾಡಿಕೆಯಿರುವದು, ಈಮಾತು ಸತ್ಯವಾದದ್ದೇ ಹ್ಯಾಗೆ !

ಬೀರಬಲ—ಪೃಥ್ವೀನಾಥ ? ಪ್ರತಿಯೊಬ್ಬ ಕಸಬುದಾರನು ತನ್ನತನ್ನ ಕಸಬಿನಲ್ಲಿ ಅಲ್ಪಸ್ವಲ್ಪಾದರೂ ಚತುರತೆಯನ್ನು ತೋರಿಸುತ್ತಿರುವದು ನಿಜವು.

ಬಾದಶಹ—ಸಿಂಪಿಗರು, ಅಕ್ಕಸಾಲಿಗರು ಸಹ ತಮ್ಮ ತಮ್ಮ ಕೆಲಸಗಳಲ್ಲಿ ಕಳ್ಳತನ ಮಾಡುತ್ತಿರುವರೇ !

ಬೀರಬಲ—ಎಲ್ಲರೂ ಕಳ್ಳತನ ಮಾಡುತ್ತಿರುವರೆಂದು ನಾನು ಹೇಳುವದಿಲ್ಲ, ಸುವರ್ಣಕಾರರ ವಿಷಯದಲ್ಲಿ ಮಾತ್ರ ಜನರಲ್ಲಿ ಈಪ್ರಕಾರ ಪ್ರಸಿದ್ಧಿ ಇರುವದು. ಏನಂದರೆ- ವಸ್ತುಗಳನ್ನು ಮಾಡಲಿಕ್ಕೆಹಾಕಿದವನು ಅವನಮುಂದೆ ಕುಳಿತು, ಕಣ್ಣೊಳಗೆ ಕಣ್ಣಿಟ್ಟು ನೋಡುತ್ತಿದ್ದರೂ ಸಹ ಸ್ವಲ್ಪಾದರೂ ಬಂಗಾರವನ್ನು ಕದ್ದುಕೊಳ್ಳದೇ ಬಿಡಲಾರನು, ಅವನ ಚಾತುರ್ಯವು ಕಣ್ಣೊಳಗಿನ ಕಾಡಿಗೆಯನ್ನು ಕದ್ದುಕೊಳ್ಳುವಷ್ಟು ಚಾತುರ್ಯಕ್ಕೆ ಸರಿಯಾದದ್ದೆಂತಲೂ ಅವರು ತಮ್ಮ ಅಕ್ಕತಂಗಿಯರ ಬಂಗಾರದಲ್ಲಿಸಹ ಕದ್ದುಕೊಳ್ಳದೆ ಬಿಡಲಾರರು; ಈ ವಿಷಯದಲ್ಲಿ ನನಗೆ

ಗೊತ್ತುಯಿದ್ದ ಒಂದು ಆಖ್ಯಾಯಿಕೆಯನ್ನು ಹೇಳುತ್ತೇನೆ ಕೇಳಬೇಕು.

ಒಂದು ಊರಲ್ಲಿ ಒಬ್ಬ ಸುವರ್ಣಕಾರನಿದ್ದನು ಅವನಿಗೆ ಒಬ್ಬ ಮಗನಿದ್ದನು ತಂದೆಯು ವೃದ್ಧನಾದ್ದರಿಂದ ಅವನ ಮಗನೆ ಯಾವತ್ತು ಕೆಲಸಗಳನ್ನು ನೋಡಿಕೊಂಡು ಹೋಗುತ್ತಿದ್ದನಂತೆ, ವೃದ್ಧನು ಅಂಗಡಿಯ ಒಂದು ಮೂಲೆಯಲ್ಲಿ ಕುಳಿತುಕೊಂಡು "ರಾಮ ರಾಮ" ಎಂದು ಜಪಮಾಡುತ್ತ ಮಗನಿಗೆ ಆಭರಣಗಳನ್ನು ಮಾಡಲಿಕ್ಕೆ ಕಲಿಸುತ್ತ ಕಾಲಹರಣಮಾಡಹತ್ತಿದನು. ಒಂದು ದಿವಸ ಆ ವೃದ್ಧ ಸುವರ್ಣಕಾರನ ಮಗಳು, ಅತ್ತೇಮನೆಯಿಂದ ತವರುಮನೆಗೆ ಬರುವಾಗ್ಗೆ ಆಭರಣಗಳನ್ನು ಮಾಡಿಸಬೇಕೆಂದು ಬಂಗಾರವನ್ನು ತೆಗೆದುಕೊಂಡು ಬಂದಿದ್ದಳು. ಅದನ್ನು ಎರಡನೇಯವರ ಹತ್ತರ ಆಭರಣಗಳನ್ನು ಮಾಡಿಸಲಿಕ್ಕೆ ಮನಒಪ್ಪದೇ ತನ್ನ ಅಣ್ಣನಹತ್ತರವೇ ಕೊಟ್ಟು ತಾನು ಅವನಯೆದುರಿಗೆ ಸ್ವಸ್ಥವಾಗಿ ಕುಳಿತುಕೊಂಡು ಬಿಟ್ಟಳು. ವೃದ್ಧನ ಮನಸ್ಸಿನಲ್ಲಿ ಆಗ ಒಂದುಕಲ್ಪನೆಯು ಹುಟ್ಟಿತು ಏನಂದರೆ:- "ನನ್ನ ಮಗನು ತನ್ನ ತಂಗಿಯ ಬಂಗಾರದಲ್ಲಿ ಸ್ವಲ್ಪಾದರೂ ಕಳವು ಮಾಡಲಿಕ್ಕಿಲ್ಲ; ಅದರಿಂದ ಅವನಿಗೆ ಕದ್ದುಕೋ, ಎಂದು ಹೇಳಬೇಕು" ಎಂದು ಯೋಚಿಸಿ ಪ್ರಕಟವಾಗಿ ಹೇಳಲಿಕ್ಕೆ ಬರದಹಾಗೆ ಇದ್ದದರಿಂದ ಸಾಂಕೇತಿಕಶಬ್ದಗಳಿಂದ ಅವನಿಗೆ ತಿಳಿಯ ಬರುವಂತೆ- "ಎಲೈ ರಾಮನೇ! ನಿನಗೆ ಎಲ್ಲಪ್ರಾಣಿಗಳು ಸಮಾನರಷ್ಟೇ" ಎಂದು ಮೇಲಿಂದಮೇಲೆ ನುಡಿಯುತ್ತಿದನು. ಮಗನಿಗೆ ವೃದ್ಧನಸಂಕೇತವು ತಿಳಿಯಿತು, ಆದರೆ ಆಗ ಯಾವಪ್ರಕಾರದಿಂದಲೂ ಪ್ರತ್ಯುತ್ತರವನ್ನು ಕೊಡದೆ ತನ್ನ ಕೈಯೊಳಗಿನ ಕೆಲಸವನ್ನೇ ಮಾಡಹತ್ತಿದನು, ಅವನ ತಂಗಿಯು ತಾನು ಕುಳಿತುಕೊಂಡೇ ಅವನಸಂಗಡ ಮಾತನಾಡಲಾರಂಭಿಸಿದಳು. ಈ ಪ್ರಕಾರ ಮಗನು ಪ್ರತ್ಯುತ್ತರವನ್ನೀಯದೆ ಕುಳಿತಿದ್ದರಿಂದ ತಾನುಮಾಡಿದ ಸಂಕೇತವು ಮಗನಿಗೆ ತಿಳಿಯಲಿಲ್ಲವೆಂಬಂತೆ ಕಂಡುಬರುತ್ತದೆ ಆದ್ದರಿಂದ ಮತ್ತೊಂದುಸಾರೆ ಯಾದರೂ ತಿಳಿಸಿಹೇಳೋಣ ಎಂದು ಯೋಚಿಸಿ "ರಾಮನೆ ನಿನಗೆ ಎಲ್ಲಪ್ರಾಣಿಗಳು ಸಮಾನರೇ" ಎಂಬ ವಾಕ್ಯವನ್ನು ಮೇಲಿಂದಮೇಲೆ ಅನ್ನಹತ್ತಿದನು. ಇದನ್ನು ಕೇಳಿಕೇಳಿ ಮಗನಿಗೆ ಬೇಸರಿಕೆಯು ಬಂತು ತಾನುಪ್ರತ್ಯುತ್ತರವನ್ನು ಕೊಡದಹೋದರೆ ಇವನು ಸುಮ್ಮನಾಗಲಾರನು ಎಂದುತಿಳಿದು ಅಂದದ್ದೇನಂದರೆ- "ತಂದೆಯೋ? ಮೇಲಿಂದಮೇಲೆ ರಾಮ ರಾಮ ಎಂದು ಯಾಕೆ ಕೂಗಿಕೊಳ್ಳುತ್ತೀ; ರಾಮನು ಲಂಕೆಯನ್ನು ಸುಲಿಗೇಮಾಡಿ ಎಷ್ಟೋ ದಿವಸಗಳಾಗಿ ಹೋದವು ಈಗ ಅಲ್ಲಿ ಇರುವದಾದರೂ ಏನು?" ಎಂದು ನುಡಿದಕೂಡಲೇ ವೃದ್ಧನು ಸುಮ್ಮನೇ ಕುಳಿತುಕೊಂಡನು. ಅವನು

ತಂದೆಯು ಹೇಳುವದಕ್ಕಿಂತ ಮೊದಲೇ ಬಂಗಾರವನ್ನು ಕದ್ದು ಬೂದಿಯಲ್ಲಿ ಮುಚ್ಚಿಟ್ಟು ಬಿಟ್ಟಿದ್ದನು. ಸ್ವಾಮಿ! ಕಸುಬುದಾರರು ಒಳ್ಳೇ ಕುಶಲರಾದ ಕಳ್ಳರಿರುತ್ತಾರೆ, ಅವರು ಕಳವುಮಾಡಿದ್ದು ಯಾರಿಗೂ ಗೊತ್ತು ಆಗುವದಿಲ್ಲ ಈಕಾರಣದಿಂದ ಶಾಸ್ತ್ರಕಾರರು ಸುವರ್ಣಕಾರರಿಗೆ "ಪಶ್ಯತೋಹರ" ಅಂದರೆ ನೋಡನೋಡುವ ಹಾಗೆ ಕಳವುಮಾಡುವವರು. ಎಂದು ಹೆಸರು ಕೊಟ್ಟಿದ್ದಾರೆ.

—(೨೭. ಎಲ್ಲಕ್ಕಿಂತ ಅಧಿಕವಾದ ಪ್ರಿಯವಸ್ತು.)—

ಒಂದು ದಿವಸ ಬಾದಶಹನು ತನ್ನ ಪ್ರೇಮ ಪಾತ್ರಳಾದ ರಾಣಿಯ ಮೇಲೆ ಸಿಟ್ಟಾಗಿ;- "ನೀನು ಈಗಿಂದೀಗ ನನ್ನ ಅಂತಃಪುರವನ್ನು ಬಿಟ್ಟು ಹೊರಗೆ ಹೋಗು ತಡಮಾಡಿದರೆ ನಾನು ಕ್ಷಮಿಸಲಾರೆನು" ಎಂದು ಆಜ್ಞಾಪಿಸಿದನು. ಬಾದಶಹ ಕ್ರೂರವಾದ ಆಜ್ಞೆಯನ್ನು ಕೇಳಿ ರಾಣಿಯು ಗಾಬರಿಯಾಗಿ, ಅನೇಕ ವಿಧದಿಂದ ಪ್ರಾರ್ಥನೆ ಮಾಡಿಕೊಂಡಳು. ಆದರೂ ಬಾದಶಹನ ಕ್ರೋಧವು ಕಡಿಮೆಯಾಗಲಿಲ್ಲ ಆದ್ದರಿಂದ ಅವಳು ಬೀರಬಲನನ್ನು ತನ್ನೆಡೆಗೆ ಬರಮಾಡಿಕೊಂಡು ತನ್ನ ವೃತ್ತಾಂತವನ್ನೆಲ್ಲ ತಿಳಿಸಿದಳು ಅವನು ಅವಳಿಗೆ ಒಂದು ಹಂಚಿಕೆಯನ್ನು ಹೇಳಿಕೊಟ್ಟು ತನ್ನ ಮನೆಗೆ ಬಂದನು. ಆ ಹಂಚಿಕೆಯು ಅವಳ ಮನಸ್ಸಿಗೆ ಬಂತು ಅವಳು ಆ ಕೂಡಲೆ ಒಬ್ಬ ಪರಿಚಾರಕನನ್ನು ಕರೆದು ಕೆಲವು ಸಾಮಾನುಗಳ ಗಂಟನ್ನು ಕಟ್ಟಿಸಿಟ್ಟು ಬಾದಶಹನನ್ನು ಕರೆಯಿಸಿ ಕೊಂಡಳು ಅವನು ಬರುವದರೊಳಗೆ ಒಂದು ಬಂಗಾರದ ಪೇತಿಯಲ್ಲಿ ಸ್ವಲ್ಪ ಮದ್ಯವನ್ನು ಬೆರಿಸಿ ಒಂದುಸ್ವಾದಿಷ್ಟವಾದ ಪೇಯವನ್ನು ಸಿದ್ಧಪಡಿಸಿ ಕೊಂಡಿದ್ದಳು ಬಾದಶಹನು ಬಂದಕೂಡಲೆ ಅವನೊಡನೆ ಕೆಲವು ವಿನೋದದ ಮಾತುಗಳನ್ನಾಡ ಹತ್ತಿದಳು ಆದರಿಂದಲೂ ಬಾದಶಹನು ಪ್ರಸನ್ನನಾಗದಿರಲು, ಅಂತ್ಯದಲ್ಲಿ "ನಾನು ತಮ್ಮ ಆಜ್ಞೆಯನ್ನು ಕಾಲತ್ರಯಗಳಲ್ಲಿಯೂ ಮೀರಲಾರೆನು" ಎಂದು ರೋದನಮಾಡ ತೊಡಗಿದಳು ಆಗ ಬಾದಶಹನು ಅನ್ನುತ್ತಾನೆ,- ಇಂಥ ಹಟಮಾರಿತನದಿಂದ ನನ್ನ ಆಜ್ಞೆಯು ತಿರುಗಲಾರದು, ಬೇಕಾದರೆ ಈಗೃಹದಲ್ಲಿ ನಿನಗೆ ಅಧಿಕವಾಗಿ ಪ್ರಿಯವಾಗಿರುವ ಯಾವತ್ತು ಒಡವೆಗಳನ್ನು ತೆಗೆದುಕೊಂಡು ಹೋದರೂ ಸಹ ಅಡ್ಡಿಯಿಲ್ಲ,, ಎಂದನು. ಆಗ ಅವಳು ಅತಿ ಖಿನ್ನತೆಯಿಂದ "ಖಾವಿಂದ, ನಿಮ್ಮ ಅಪ್ಪಣೆಯೇ ನನಗೆ ಮಾನ್ಯವು ಆದರೆ ನನ್ನದೊಂದು ವಿಜ್ಞಾಪನೆಯುಂಟು; ಅದೇನಂದರೆ,- "ಈ ಪೇಯವನ್ನು ತಾವು ಸ್ವೀಕರಿಸಬೇಕು,

ಇನ್ನು ತಮ್ಮ ದರ್ಶನ ಲಾಭವು ಎಂದಿಗಾಗುವದೋ ದೇವರೇ ಬಲ್ಲನು ,, ಎಂದು ವಿಜ್ಞಾಪಿಸಿದಳು ಬಾದಶಹನು ಸ್ತ್ರೀಚರಿತ್ರಕ್ಕೆ ಮರುಳಾಗಿ ಆ ಪೇಯವನ್ನು ಪ್ರಾಶನ ಮಾಡಿದನು ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ ಬಾದಶಹನಿಗೆ ಅದರಿಂದ ಪ್ರಜ್ಞೆಯು ತಪ್ಪಿ ಮಲಗಿಕೊಂಡು ಬಿಟ್ಟನು. ಆಗ ಅವಳು ಬಾದಶಹನನ್ನು ಒಂದು ಮೇಣೆಯಲ್ಲಿ ಮಲಗಿಸಿ ತಾನೊಂದು ಮೇಣೆಯಲ್ಲಿ ಕುಳಿತುಕೊಂಡು ತನ್ನ ತಂದೆಯ ಮನೆಗೆ ಬಂದು ಬಾದಶಹನನ್ನು ಒಂದು ಮಂಚದಮೇಲೆ ಮಲಗಿಸಿ, ತಾನು ಎಚ್ಚರದಿಂದ ಕಾಯುತ್ತ ಕುಳಿತುಕೊಂಡಳು ಮದ್ಯದ ಮದವು ಇಳಿದಮೇಲೆ ಬಾದಶಹನು ಎಚ್ಚತ್ತು ಕುಳಿತುಕೊಂಡು ಸುತ್ತುಮುತ್ತ ನೋಡಿ ತನ್ನ ಅಂತಃಪುರದಂತೆ ಕಾಣದೆ ಹೋಗಲು ಆಶ್ಚರ್ಯಾಣ್ವಿತನಾಗಿ ಕುಳಿತುಕೊಂಡನು ಮುಂದೆ ಸ್ವಲ್ಪಹೊತ್ತಿನಮೇಲೆ ಮೇಲಕ್ಕೆ ತಲೆಯೆತ್ತಿನೋಡಹತ್ತಲು ರಾಣಿಯು ಕಂಡುಬಂದಳು ಆಗಅವಳನ್ನು ಕುರಿತು;- “ ನಾನು ಜಾಗ್ರದಾವಸ್ಥೆಯಲ್ಲಿರುವೆನೋ? ಅಥವಾ ಸುಷುಪ್ತಾವಸ್ಥೆಯಲ್ಲಿರುವನೋ? ಎಂದು ಪ್ರಶ್ನೆಮಾಡಿದನು ಆಗ ಬೇಗಮ್ಮನು ಅನ್ನುತ್ತಾಳೆ;- “ ಸ್ವಾಮಿ! ತಾವು ಇಷ್ಟು ಹೊತ್ತಿನವರೆಗೆ ಮಲಗಿಕೊಂಡೇ ಇದ್ದಿರಿ; ಪ್ರಾತಃಕಾಲವು ಸಮೀಪಿಸಲು ತಮಗೆ ಎಚ್ಚರವಾಗಿದೆ! ಮೋರೆಯನ್ನು ತೊಳೆದುಕೊಂಡು ದೇವರ ಪ್ರಾರ್ಥನೆಯನ್ನು ಮಾಡಿರಿ!

ಬಾದಶಹ—ಇದು ನನ್ನ ಅಂತಃಪುರದಂತೆ ಕಾಣುವದಿಲ್ಲ! ನಾನು ಇಲ್ಲಿಗೆ ಹ್ಯಾಗೆಬಂದೆನು? ಎಂಬ ಸಂಗತಿಯನ್ನು ಮೋದಲು ತಿಳಿಸು;

ಬೇಗಮ್ಮ—(ಕೈಮುಗಿದುಕೊಂಡು ನಿಂತು) ಸ್ವಾಮಿ! ಇದು ನನ್ನ ತಂದೆಯಗೃಹವು ತಮ್ಮ ಆಜ್ಞಾನುಸಾರವಾಗಿ ನಾನು ತಮ್ಮನ್ನು ಇಲ್ಲಿಗೆ ಕರೆತಂದಿದ್ದೇನೆ.

ಯಾಕಂದರೆ, ತಾವು ನನಗೆ ನಿನ್ನೆಯ ದಿವಸ, “ ನಿನಗೆ ಪ್ರಿಯವಾದ ವಸ್ತುವನ್ನು ತೆಗೆದುಕೊಂಡು ಹೋಗು! ” ಎಂಬದಾಗಿ ಆಜ್ಞಾಪಿಸಿದಷ್ಟೇ? ಇದರಂತೆ ಈ ಪ್ರಪಂಚದಲ್ಲಿ ನನಗೆ ಅತ್ಯಧಿಕ ಪ್ರಿಯವಾಗಿದ್ದ ತಮ್ಮನ್ನೇ, ತೆಗೆದುಕೊಂಡು ಬಂದಿದ್ದೇನೆ. ಕ್ಷಮೆ ಇರಬೇಕು ,, ಎಂದಳು. ಬಾದಶಹನು ಬೇಗಮ್ಮಳ ಚಾತುರ್ಯಕ್ಕೆ ಮೆಚ್ಚಿ ಆಗಳಿಗೆ ಕ್ಷಮೆಯನ್ನು ಮಾಡಿ ತನ್ನ ಸ್ವಶುರನಿಗೆ ಭೆಟ್ಟಿಯಾಗಿ ಅವನ ಅಪ್ಪಣೆಯನ್ನು ಪಡೆದುಕೊಂಡು ಬೇಗಮ್ಮಳನ್ನೊಡಗೊಂಡು ತನ್ನ ಅರಮನೆಗೆ ಬಂದನು.

ಮುಂದೆ ಕೆಲವು ದಿವಸಗಳಾದ ಮೇಲೆ ಬೇಗಮ್ಮಳು, “ ನಾನು ತಮ್ಮನ್ನು ತೆಗೆದುಕೊಂಡು ಹೋಗಿದ್ದ ಯುಕ್ತಿಯನ್ನು ತಿಳಿಸಿ ಇದನ್ನು ಬೀರಬಲ

ನು ತನಗೆ ಹೇಳಿಕೊಟ್ಟನೆಂದು ಹೇಳಿದಳು" ಅದರಿಂದ ಬಾದಶಹನು ಬೀರಬಲನ ಚಾತುರ್ಯಕ್ಕೆ ಮೆಚ್ಚಿ, ಧನ್ಯವಾದವನ್ನು ಕೊಟ್ಟನು.

—(೨೮. ಮಾವಿನ ಹಣ್ಣಿನ ಕಳವು.)—

ಒಂದು ದಿವಸ ಕೇಶವ ದಾಸನೆಂಬ ವರ್ತಕನು ಓಲಗಕ್ಕೆ ಬಂದು ವಿಜ್ಞಾಪ್ತಿಮಾಡಿ ಕೊಂಡದ್ದೇನಂದರೆ;- " ಈ ಪಟ್ಟಣದಿಂದ ಅರ್ಧ ಹರದಾರಿಯ ಮೇಲೆ ನನ್ನದೊಂದು ಮಾವಿನ ತೋಪು ಅದೆ. ಅಲ್ಲಿರುವ ವೃಕ್ಷಗಳಿಗೆ ನಾನು ನೀರನ್ನು ಹಾಕಿ, ಬೆಳೆಯಿಸಿದೆನು. ಅವುಗಳನ್ನು ಜೋಪಾನ ಮಾಡ ಹತ್ತಿ ಏಳು ವರುಷಗಳಾದವು ಈ ವರುಷ ಆ ವೃಕ್ಷಗಳು ಫಲಭರಿತವಾಗಿರುವದನ್ನು ಕಂಡು ನನ್ನ ನೆರೆಯಲ್ಲಿದ್ದ ಪ್ರೇಮಳದಾಸನಿಗೆ ಹೊಟ್ಟೇಕಿಚ್ಚು ಬಿದ್ದು ಈ ಗಿಡಗಳು ತನ್ನವೆಂದು ಹೇಳಕೊಳ್ಳ ಹತ್ತಿದ್ದಾನೆ; ಆದ್ದರಿಂದ ದಯಾಳುಗಳಾದ ತಾವು ಯೋಗ್ಯ ನಿರ್ಣಯವನ್ನು ಮಾಡಬೇಕು" ಈ ಪ್ರಕಾರ ವಿಜ್ಞಾಪನೆ ಮಾಡಿಕೊಂಡ ಮೇಲೆ ಬೀರಬಲನು, ಅವನಿಗೆ ನಾಳೆಯ ದಿವಸ ಓಲಗಕ್ಕೆ ಬರಬೇಕೆಂದು ಅಪ್ಪಣೆಯಿತ್ತು ಕಳುಹಿಸಿದನು.

ಕೇಶವ ದಾಸನು ಹೊರಟು ಹೋದ ಮೇಲೆ ಬೀರಬಲನು ಪ್ರೇಮಳ ದಾಸನನ್ನು ಕರೆಯಿಸಿಕೊಂಡು ಕೇಳಿದನು. ಅದಕ್ಕೆ ಪ್ರೇಮಳದಾಸನು ಹೇಳುತ್ತಾನೆ, " ಸ್ವಾಮಿ, ಆ ವೃಕ್ಷಗಳು ನನ್ನವು ನಾನೇ ಅವುಗಳನ್ನು ಹಚ್ಚಿ ಪ್ರತಿದಿನದಲ್ಲಿ ನೀರು ಹಾಕಿ ಬೆಳೆಯಿಸಿದೆನು ಈ ಹೊತ್ತಿಗೆ ಏಳು ವರುಷಗಳಾದವು ಈಗ ಅವುಗಳು ಫಲಭರಿತವಾಗಿವೆ ಅದನ್ನು ಕಂಡು ಕೇಶವ ದಾಸನಿಗೆ ಮನಸ್ಸು ವಿಗಲಿತವಾಗಿದೆ ತಾವುತಂದೆತಾಯಿಗಳಂತೆ ಇರುವಿರಿ! ಯೋಗ್ಯವಾದ ನಿರ್ಣಯವನ್ನು ಮಾಡಬೇಕು.

ಬೀರಬಲ—ಅವುಗಳನ್ನು ಕಾಯುವವರು ಯಾರಿದ್ದಾರೆ;

ಪ್ರೇಮಳ—ಒಬ್ಬ ಮನುಷ್ಯನನ್ನು ಕಾಯುವದಕ್ಕೆ ಇಟ್ಟದ್ದಲ್ಲದೆ, ನಾನೂ ಮತ್ತುಕೇಶವದಾಸನೂ ಸಹ ಒಮ್ಮೊಮ್ಮೆ ಕಾಯಲಿಕ್ಕೆ ಹೋಗುತ್ತಿರುತ್ತೇವೆ ಬೀರಬಲನು ಕಾಯುವವನ್ನು ಕರೆಯಿಸಿ,-ನೀನು ಯಾರ ಮಾವಿನಗಿಡಿಗಳನ್ನು ಕಾಯುತ್ತಿರುವಿ? ಆಗಿಡಗಳ ಒಡೆಯನು ಯಾರು! ,, ಎಂದು ಪ್ರಶ್ನೆಮಾಡಿದನು ಆಗ ಅವನು. " ನಾನು ಆಗಿಡಗಳನ್ನು ರಕ್ಷಣೆಮಾಡ ಹತ್ತಿ ಎರಡು ತಿಂಗಳಾದವು ಆ ಗಿಡಗಳು ಯಾರವು? ಎಂಬ ಸಂಗತಿಯನ್ನು ನಾನರಿಯೆನು ಕೇಶವದಾಸನೂ, ಪ್ರೇಮಳದಾಸನೂ ಕೂಡಿಯೇನನ್ನನ್ನು ಕಾಯಲಿಕ್ಕೆ ಇಟ್ಟಿದ್ದಾರೆ ., ಎಂದು ಉತ್ತರಕೊಟ್ಟನು ಆಗ ಬೀರಬಲನು

ಆ ವೃಕ್ಷ ರಕ್ಷಕನಿಗೆ ಅಲ್ಲಿಯೇ ಕುಳಿತುಕೊಳ್ಳುವಂತೆ ಅಪ್ಪಣೆಮಾಡಿ ಪ್ರೇಮು ಳದಾಸನಿಗೆ ಹೋಗು! ಎಂದು ಅಪ್ಪಣೆಕೊಟ್ಟು ಕಳಿಸಿದನು. ಸಾಯಂಕಾ ಲವಾದ ಮೇಲೆ ಕಾವಲು ಕಾರನನ್ನು ಕರೆದು,- "ಈ ದಿವಸ ನೀನು ಅರ್ಧ ರಾತ್ರಿಯ ಸುಮಾರಕ್ಕೆ ಕೇಶವದಾಸ ಮತ್ತು ಪ್ರೇಮುಳದಾಸ ಇವರಿಬ್ಬರ ಮನೆಗೆ ಹೋಗಿ, " ಕೆಲವು ಶಸ್ತ್ರಧಾರಿಗಳಾದ ಜನರು ಬಂದು ಆ ವೃಕ್ಷಗಳ ಗಳನ್ನು ಕೊಯ್ಯುಹತ್ತಿದ್ದಾರೆ. ಅವರನ್ನು ನನ್ನೊಬ್ಬನಿಂದಲೇ ತಡೆಯುವದು ಅಸಾಧ್ಯವು ಆದರಿಂದ ನೀವು ಬೇಗನೆ ಬರಿ" ಎಂದು ಹೇಳಿ ನಿನ್ನ ಮನೆಗೆ ಹೊರಟು ಹೋಗು! ನಾನು ಹೇಳಿದ್ದರಲ್ಲಿ ಸ್ವಲ್ಪಾದರೂ ಹೆಚ್ಚು ಕಡಿಮೆ ಮಾಡಬೇಡ ನಿನ್ನಸಂಗಡ ನಮ್ಮಕಡೆಯ ಇಬ್ಬರು ಸಿಪಾಯರನ್ನು ಕಳುಹಿ ಸಿಕೊಡುತ್ತೇನೆ,

ಈ ಪ್ರಕಾರ ಹೇಳಿ ಆಕಾವಲುಗಾರನನ್ನು ಸಿಪಾಯರ ಸ್ವಾಧೀನ ಮಾಡಿದನು ಆ ಸಿಪಾಯಿಗಳಿಗೆ ಆಜ್ಞಾಪಿಸಿದ್ದೇನಂದರೆ " ನೀವು ಪ್ರತಿಯೊ ಬ್ಬರು ಅವರಿಬ್ಬರದ್ವಾರದಲ್ಲಿ ಕುಳಿತುಕೊಂಡು ಅಲ್ಲಿ ಯಾವ ಯಾವ ಮಾತು ಗಳು ನಡೆಯುವವು ಎಂಬದನ್ನು ಕೇಳಿಕೊಂಡು, ನನಗೆ ಬಂದು ತಿಳಿಸಬೇ ಕು" ಎಂದು ಹೇಳಿ ಕಳುಹಿಸಿ ಕೊಟ್ಟನು.

ರಾತ್ರಿಯಾದ ಕೂಡಲೆ ಆ ಮೂವರೂ ಮೊದಲು ಕೇಶವದಾಸನ ಮ ನೆಗೆ ಹೋದರು. ಆಗ ಕೇಶವದಾಸನು ಮನೆಯಲ್ಲಿ ಇದ್ದಿಲ್ಲ ಅದರಿಂದ ಕಾವ ಲುಗಾರನು ಕೇಶವದಾಸನ ಪತ್ನಿಗೆ ಹೇಳಿದ್ದೇನಂದರೆ;- " ನಿಮ್ಮ ಯಜಮಾ ನರು ಮನೆಗೆ ಬಂದಕೂಡಲೆ ತೋಟಕ್ಕೆ ಕಳುಹಿಸಿಕೊಡಿರಿ. ಯಾಕಂದರೆ:- ಶಸ್ತ್ರಧಾರಿಗಳಾದ ಕೆಲವು ಜನರುಬಂದು ಹಣ್ಣುಗಳನ್ನು ಕೊಯ್ದುಕೊಂಡು ಹೋಗಹತ್ತಿದ್ದಾರೆ" ಎಂದು ತಿಳುಹಿಸಿ ಪ್ರೇಮುಳದಾಸನ ಮನೆಗೆ ಹೋದ ನು ಅಲ್ಲಿಯೂ ಎರಡನೇ ಸಿಪಾಯಿಯು ಅಡಗಿಕೊಂಡು ಕುಳಿತನು.

ಕಾವಲುಗಾರನು ಪ್ರೇಮುಳದಾಸನ ಮನೆಗೆ ಹೋಗಿ ಅಲ್ಲಿಯೂ ಮೊ ದಲಿನಂತೆ ಹೇಳಿ ಮನೆಗೆ ಹೊರಟುಹೋದನು. ಅಲ್ಲಿಯು ಎರಡನೆ ಸಿಪಾಯಿ ಯು ಅಡಗಿಕೊಂಡು ಕುಳಿತನು.

ಮುಂದೆ ಸ್ವಲ್ಪಹೊತ್ತಾದಮೇಲೆ ಕೇಶವದಾಸನು ಮನೆಗೆಬಂದನು ಅವನ ಸ್ತ್ರೀಯು ಕಾವಲುಗಾರನು ಹೇಳಿದಸಂಗತಿಯನ್ನೆಲ್ಲ ತಿಳಿಸಿದಳು. ಆಗ ಕೇಶ ವದಾಸನು ಅನ್ನುತ್ತಾನೆ; "ಮಾವಿನಗಿಡಗಳು ನನ್ನವಲ್ಲ ಬೇಕಾದವರು ಹಂ ಣುಗಳನ್ನು ಕೊಯಿದುಕೊಂಡು ಹೋಗಲಿ! ನಾನಂತೂ ಪ್ರೇಮುಳದಾಸನ ಮೇಲೆ ಸರಕಾರದಲ್ಲಿ ಫಿರ್ಯಾದಿಯನ್ನು ಮಾಡಿದ್ದೇನೆ, ಅದರಲ್ಲಿ ಯೋಗ್ಯನಿ

ರ್ಣಯವಾಗಿ ನನ್ನ ಸ್ವಾಧೀನಕ್ಕೆ ಗಿಡಗಳುಬಂದರೆ ಹಣ್ಣುಗಳು ಸಿಗುತ್ತವೆ, ಇಲ್ಲವಾದರೆ ಇಲ್ಲ; ಇದರಲ್ಲಿ ನನಗೆಹಾನಿಯು ತಪ್ಪುವಂತೆಯಿಲ್ಲ. ಅಂಧಕಾರಮಯವಾದ ರಾತ್ರಿಯಲ್ಲಿ ಯಾರು ಅಲ್ಲಿಗೆ ಕಾಯಲಿಕ್ಕೆಹೋಗಬೇಕು" ಎಂದು ಸುಮ್ಮನೆ ಕುಳಿತುಕೊಂಡನು. ಹೊರಗೆ ಕುಳಿತುಕೊಂಡಿದ್ದ ಸಿಪಾಯಿಯು ಅವನಮಾತುಗಳನ್ನೆಲ್ಲ ಕೇಳಿಕೊಂಡು ಸುಮ್ಮನೇ ಬೀರಬಲನ ಮನೆಗೆ ಬಂದನು.

ಪ್ರೇಮಳದಾಸನು ಮನೆಗೆ ಬಂದಕೂಡಲೆ ಅವನಸ್ತ್ರೀಯು ಕಾವಲುಗಾರನು ಹೇಳಿದ ಸಮಾಚಾರವನ್ನೆಲ್ಲ ತಿಳಿಸಿದಳು. ಆಗ ಪ್ರೇಮಳದಾಸನು ಆಯುಧಪಾಣಿಯಾಗಿ ಹೊರಟನು, ಅವನಸ್ತ್ರೀಯು- "ಊಟಮಾಡಿಕೊಂಡು ಹೋಗಬೇಕು" ಎಂದು ಹೇಳಿದಳು. ಆಗ ಪ್ರೇಮಳದಾಸನು-"ಊಟಮಾಡುತ್ತ ಕುಳಿತುಕೊಂಡರೆ ಮಾವಿನಹಣ್ಣುಗಳೆಲ್ಲವನ್ನು ಕೊಯಿದುಕೊಂಡು ಹೋದಾರು ! ಅದರಿಂದ ಮೊದಲು ತೋಟಕ್ಕೆ ಹೋಗಿ ಅಲ್ಲಿಯ ಸಮಾಚಾರವನ್ನೆಲ್ಲ ತಿಳಿದುಕೊಂಡು ಬಂದಮೇಲೆ ಊಟಮಾಡಬಹುದು ! ಸತತ ಏಳುವರುಷಗಳವರೆಗೆ ಜೋಪಾನಮಾಡಿದ ಶ್ರಮವು ಸ್ವಲ್ಪದರಲ್ಲಿ ನಿಷ್ಫಲವಾಗಿ ಹೋಗಬಹುದು." ಎಂದು ಹೇಳಿ ಅರ್ಧ ರಾತ್ರಿಯಲ್ಲಿಯೇ ಮಾವಿನತೋಪಿನಕಡೆಗೆ ಹೋದನು, ಅವನು ಹೊರಟುಹೋದಮೇಲೆ ಅಲ್ಲಿ ಕುಳಿತುಕೊಂಡಿದ್ದ ಸಿಪಾಯಿಯೂ, ಹಿಂದಿರುಗಿ ಬೀರಬಲನ ಬಳಿಗೆ ಬಂದನು. ಮರುದಿವಸ ಕೇಶವದಾಸನೂ ಪ್ರೇಮಳದಾಸನೂ ಓಲಗಕ್ಕೆಬಂದರು ಆಗ ಬೀರಬಲನು ಅವರಿಬ್ಬರನ್ನೂ ಕುರಿತು ಹೇಳಿದ್ದೇನಂದರೆ- "ನಾನು ನಿಮ್ಮನಿಮ್ಮ ಹೇಳಿಕೆಯಂತೆ ಎಲ್ಲ ಸಂಗತಿಗಳನ್ನು ಪೂರ್ಣವಾಗಿ ವಿಚಾರಮಾಡಿ ನೋಡಲಾಗಿ ಆ ವೃಕ್ಷಗಳಲ್ಲಿ ಆಗಿರುವಫಲಗಳಿಗೆ ನೀವಿಬ್ಬರೂ ಸಮಭಾಗಿಗಳಾಗಿರುವಿರಿ ? ಆದ್ದರಿಂದ ಈಗಿಂದೀಗ ಆ ಫಲಗಳನ್ನೆಲ್ಲಕೊಯಿದು ಸರಿಯಾಗಿಹಂಚಿಕೊಳ್ಳಿರಿ ಎಂದು ಆಜ್ಞಾಪಿಸಿದನು.

ಈ ನಿರ್ಣಯವನ್ನು ಕೇಳಿ ಕೇಶವದಾಸನಿಗೆ ಬಹಳ ಸಂತೋಷವಾಯಿತು, ಆದರೆ ಪ್ರೇಮಳದಾಸನಿಗೆ ಬಹಳದುಃಖವಾಯಿತು ಆಗ ಅವನು ಕೈಮುಗಿದು ಪ್ರಾರ್ಥಿಸಿಕೊಂಡದ್ದೇನಂದರೆ- "ಸ್ವಾಮಿ ! ಮಾವಿನಕಾಯಿಗಳು ಇನ್ನೂ ಬಲಿಯದೇ ಇದ್ದದರಿಂದ ಯಾವಕೆಲಸಕ್ಕೂ ಉಪಯೋಗವಾಗುವಂತೆ ಇಲ್ಲ, ಅವುಗಳನ್ನು ಈಗಲೇ ಕೊಯ್ಯುವದರಿಂದ ಪ್ರಯೋಜನವೇನು ತಮ್ಮ ಇಚ್ಛೆಯಿದ್ದರೆ ಅವುಗಳನ್ನು ಕೇಶವದಾಸನಿಗೇ ಕೊಟ್ಟುಬಿಡಿರಿ ? ನನ್ನಿಂದಂತೂ ಅವುಗಳನ್ನು ಕೊಯ್ಯುವದಕ್ಕೆ ಆಗಲಾರದು" ಎಂದು ಹೇಳಿ

ಸುಮ್ಮನಾದನು. ಆಗ ಬೀರಬಲನಿಗೆ ಗಿಡಗಳು ಪ್ರೇಮುಳದಾಸನವೇ ಎಂದು ಗೊತ್ತಾಯಿತು, ಕೂಡಲೆ ಕೇಶವದಾಸನನ್ನು ಒಳಿತಾಗಿ ತಳಿಸಿರಿ ? ಎಂದು ಕರ್ಮಚಾರಿಗಳಿಗೆ ಹೇಳಿದನು. ಆಗ ಕೇಶವದಾಸನು ಬೀರಬಲನ ಪಾದಗಳ ಮೇಲೆ ಅಡ್ಡಬಿದ್ದು, ಮಹಾರಾಜ ? ನನ್ನನ್ನು ಹೊಡೆಸಬೇಡಿರಿ ಮಾವಿನಗಿಡಗಳು ಪ್ರೇಮುಳದಾಸನವೇ ಅಹುದು ? ಎಂದು ಹೇಳಿದನು. ಆಗ ಬೀರಬಲನು ಆ ಗಿಡಗಳನ್ನು ಪ್ರೇಮುಳದಾಸನ ವಶಕ್ಕೆ ಕೊಡಿಸಿ, ಕೇಶವದಾಸನಿಗೆ ದಂಡನೆಯನ್ನು ವಿಧಿಸಿದನು.

—(೨೯. ಪ್ರಾರಬ್ಧವು ಹೆಚ್ಚೋ, ಅಥವಾ ಉದ್ಯೋಗವ್ರೋ ?)—

ಒಂದುದಿವಸ ಬಾದಶಹನು ತನ್ನ ದರಬಾರದ "ಮುತ್ಸದ್ದಿಗಳಿಗೆ ಪ್ರಾರಬ್ಧವು ಅಧಿಕವಾದದ್ದೋ ! ಅಥವಾ ಉದ್ಯೋಗವು ಶ್ರೇಷ್ಠವಾದದ್ದೋ" ಎಂದು ಪ್ರಶ್ನೆ ಮಾಡಿದನು. ಆಗ ಅವರೆಲ್ಲರೂ ಒಂದೇಸ್ವರದಿಂದ "ಉದ್ಯೋಗವು ಶ್ರೇಷ್ಠವಾದದ್ದು" ಎಂದುತ್ತರಕೊಟ್ಟರು, ಆಗ ಬೀರಬಲನಿಗೆ ಪುನಃ ಇದೇಪ್ರಶ್ನೆಯನ್ನು ಮಾಡಿದನು. ಆಗ ಬೀರಬಲನು- "ಮಹಾರಾಜ ! ಉದ್ಯೋಗಕ್ಕಿಂತ ಪ್ರಾರಬ್ಧವು ಬಲವಾದದ್ದು" ಎಂದು ಹೇಳಿದನು.

ಬಾದಶಹ—ಯಾವ ಮನುಷ್ಯನು ಪ್ರಾರಬ್ಧವನ್ನು ನಂಬಿ ಏನೂ ವುದ್ಯೋಗವಮಾಡದೆ ಕುಳಿತುಕೊಂಡರೆ ಅವನಿಗೆ ಉದರಂಭರಣೆಯು ಹ್ಯಾಗಾಗುವದು ?

ಬೀರಬಲ—ಪ್ರಭುಗಳೇ ? ಮನುಷ್ಯನು ಬೇಕಾದ ಉದ್ಯೋಗವನ್ನು ಮಾಡಲಿ, ಅದು ಅವನಪ್ರಾರಬ್ಧದಲ್ಲಿ ಲಭಿಸುವದೇ ಇಲ್ಲದಿದ್ದರೆ ಏನೂಫಲ ದೊರೆಯಲಾರದು; ಆದ್ದರಿಂದ ಪ್ರಾರಬ್ಧವೇ ಶ್ರೇಷ್ಠವಾದದ್ದು.

ಉಳಿದ ಸಭಾಸದರು—ಪೃಥ್ವೀನಾಥ ? ಬೀರಬಲನು ಪ್ರಾರಬ್ಧವೇಶ್ರೇಷ್ಠವಾದದ್ದೆಂದು ಹೇಳುತ್ತಿರುವನಷ್ಟೇ ! ಈಮಾತಿಗೆ ತಕ್ಕಪ್ರಮಾಣಗಳಾದರೂ ಅವನ ಬಳಿಯಲ್ಲಿರಬಹುದು.

ಬೀರಬಲ—ಇಂಥ ಪ್ರಮಾಣಗಳನ್ನು ಯಾರೂ ಸಂಗಡಕಟ್ಟಿಕೊಂಡು ಬಂದಿರಲಾರರು, ಸ್ವಲ್ಪಾವಕಾಶವನ್ನು ಕೊಟ್ಟರೆ ಪ್ರಮಾಣವನ್ನು ತೋರಿಸಿಕೊಡುವೆನು.

ಈಪ್ರಕಾರ ಮಾತು ಕಥೆಗಳಾದಮೇಲೆ ಸಭೆಯು ವಿಸರ್ಜನವಾಯಿತು, ಆಮೇಲೆ ಮುಂದೆಕೆಲವು ದಿವಸಗಳು ಗತಿಸಿಹೋದಮೇಲೆ ಬಾದಶಹನುತನ್ನ ಮುಖ್ಯಮುಖ್ಯ ಮಂತ್ರಿಗಳನ್ನು ಸಂಗಡ ಕರೆದುಕೊಂಡು ಯಮುನಾತೀ

ರಕ್ಕೆ ವಾಯುಸೇವನಾರ್ಥವಾಗಿ ಹೋದನು ಎಲ್ಲರೂ ಒಂದು ನಾವೆಯನ್ನೇರಿ ಕುಳಿತುಕೊಂಡರು, ಸ್ವಲ್ಪಹೊತ್ತು ಆಕಡೆಯ ಈಕಡೆಯ ವರ್ತಮಾನಗಳು ಹೊರಟುಹೋದಮೇಲೆ ಬಾದಶಹನು ಪ್ರಾರಬ್ಧ ಮತ್ತು ಉದ್ಯೋಗದ ಪ್ರಶ್ನೆಯನ್ನು ತೆಗೆದನು. ಮತ್ತು ಬೀರಬಲನಿಗೆ ಅನ್ನುತ್ತಾನೆ “ಬೀರಬಲ ನೀನು ಪ್ರಾರಬ್ಧವೇ ಅಧಿಕವಾದದ್ದೆಂದು ಹೇಳಿದಮಾತು ನಿನ್ನ ಸ್ಮರಣೆಯಲ್ಲಿರುವದಷ್ಟೇ ?” ಎಂದು ಕೇಳಿದನು. ಅದಕ್ಕೆ ಬೀರಬಲನು “ಅಹುದು” ಎಂದು ಹೇಳಿದನು. ಆಗ ಬಾದಶಹನಿಗೆ ಕ್ರೋಧವು ಬಂತು, ಅವನು ತನ್ನ ಅಂಗುಲಿಯಲ್ಲಿದ್ದ ಸುವರ್ಣದುಂಗುರವನ್ನು ನದಿಯಲ್ಲಿ ಒಗೆದು ಹೇಳುತ್ತಾನೆ “ಬೀರಬಲ ! ನೀನು ಪ್ರಾರಬ್ಧಬಲದಿಂದ ಈ ಉಂಗುರವನ್ನು ಒಂದು ಮಾಸದೊಳಗಾಗಿ ಸಂಪಾದಿಸಿ ತೋರಿಸದಿದ್ದರೆ ನಿನಗೆ ಪ್ರಾಣದಂಡನೆಯನ್ನು ವಿಧಿಸುವೆನು” ಎಂದು ಅಪ್ಪಣೆಕೊಟ್ಟಕೂಡಲೆ ಸಭಾಸದರೆಲ್ಲರೂ ನಡುಗಹತ್ತಿದರು, ಬೀರಬಲನು ಸ್ವಸ್ಥಕುಳಿತುಕೊಂಡನು. ಮುದ್ರಿಕೆಯನ್ನು ಒಗೆದಸ್ಥಳದಲ್ಲಿ ನೀರು ಬಹಳ ಆಳವಾಗಿತ್ತು; ಮಂತ್ರಿಗಳೆಲ್ಲರೂ “ಇಲ್ಲಿಂದ ಮುದ್ರಿಕೆಯು ಹೊರಹೊರಡುವದು ಅಸಂಭವವು ಇದರಲ್ಲಿ ಬೀರಬಲನು ಸಾಯುವದೇ ನಿಶ್ಚಯವು” ಎಂದು ತಿಳಿದುಕೊಂಡುಬಿಟ್ಟರು, ಬಾದಶಹನು ತಿರುಗಿಮನೆಗೆ ಹೋಗುವಮುಂದ ಅಲ್ಲಿ ಕೆಲವುಜನ ಸಿಪಾಯರನ್ನು ಕಾವಲಿಟ್ಟು “ಬೀರಬಲನು ಇಲ್ಲಿಂದ ಮುದ್ರಿಕೆಯನ್ನು ತೆಗೆದುಕೊಂಡು ಹೋಗದಂತೆ ಜೋಕೆಯಿಂದ ಹಗಲು ಇರುಳು ಕಾಯುತ್ತಿರಬೇಕು” ಎಂದು ಆಜ್ಞಾಪಿಸಿ ಹಿಂದಿರುಗಿ ಅರಮನೆಗೆ ಬಂದುಬಿಟ್ಟನು ಬೀರಬಲನು ಪ್ರಾರಬ್ಧವನ್ನುನಂಬಿಕೊಂಡು ಸ್ವಸ್ಥಚಿತ್ತದಿಂದ ಮನೆಯಲ್ಲಿ ಕುಳಿತುಕೊಂಡು ಬಿಟ್ಟನು, ಒಂದುಮಾಸವು ಕಳೆದುಹೋಯಿತು ಆಮೇಲೆ ಬಾದಶಹನು:- ಬೀರಬಲ್ಲ ! ಈಗಲಾದರೂ ಉದ್ಯೋಗವು ಶ್ರೇಷ್ಠವಾದದ್ದೆಂದು ಒಪ್ಪಿಕೋ ? ಅಂದರೆ ಜೀವದಿಂದ ಉಳಿದುಕೊಳ್ಳುತ್ತೀ ? ಒಂದುಮಾಸವು ಪೂರ್ತಿಯಾಗುವದಕ್ಕೆ ಇನ್ನು ಮೂರೇ ದಿವಸಗಳ ಅವಧಿಯು ಉಳಿದಿರುವದು ಎಂದು ಹೇಳಿದನು.

ಬೀರಬಲ—ಪ್ರಭುವೇ ? ಪ್ರಾರಬ್ಧಕ್ಕಿಂತ ಉದ್ಯೋಗವು ಎಂದೂ ಶ್ರೇಷ್ಠವಾಗಲಾರದು ಇನ್ನು ಮೂರುದಿವಸಗಳಲ್ಲಿ ಆ ಉಂಗುರವು ಯಾಕೆ ಸಿಗಬಾರದು !

ಈ ಉತ್ತರದಿಂದ ಬಾದಶಹನು ಅತಿ ಸಂತಪ್ತನಾದನು. ನಾಲ್ಕನೇದಿವಸ ಬಾದಶಹನು ಬೀರಬಲನನ್ನು ಕರೆಯಿಸಿ ಉಂಗುರವನ್ನು ಕೊಡುಯೆಂದು ಕೇಳಿದನು,

ಬೀರಬಲ-ಪೃಥ್ವೀನಾಥ ನನ್ನ ಉದ್ಯೋಗದಿಂದ ಮುದ್ರಿಕೆಯು ದೊರೆಯಲಿಲ್ಲ.
ಬಾದಶಹ—(ಕ್ರೋಧದಿಂದ) ಹಾಗಾದರೆ ಮರಣಕ್ಕೆಸಿದ್ಧನಾಗು.

ಬೀರಬಲನು ಮರಣಕ್ಕೆ ಸಿದ್ಧನಾದನು, ಅವನ ಕೈಕಾಲುಗಳನ್ನು ಕಟ್ಟಿದರು ಅದನ್ನು ನೋಡಿ ಬಾದಶಹನು ಕಳವಳಪಟ್ಟು:- "ಬೀರಬಲ ಈಗಲಾದರೂ ನಿನ್ನ ಮಾತನ್ನು ತಿರುಗಿಸು" ಎಂದನು.

ಬೀರಬಲ-ಪ್ರಭುವೇ ! ಮರಣಕ್ಕೆಸಿದ್ಧನಾದ ನನ್ನನ್ನು ವ್ಯರ್ಥವಾಗಿಯಾಕೆ ಪೀಡಿಸುವಿರಿ, ತಲೆಹೊಡೆಯುವದಕ್ಕೆಬೇಗನೆ ಅಪ್ಪಣೆಯನ್ನು ಕೊಡಿರಿ
ಬಾದಶಹ—ಅದಕ್ಕೇನು ಬಹಳ ಅವಕಾಶವು ಹತ್ತುವಂತೆಯಿಲ್ಲ.

ಬಾದಶಹನ ಅಪ್ಪಣೆಯಮೇರೆಗೆ ಬೀರಬಲನನ್ನು ವಧಸ್ಥಾನಕ್ಕೆ ಕರೆದುಕೊಂಡು ಹೋದರು ಪ್ರಜೆಗಳಿಗೆಲ್ಲರಿಗೂ ಅದನ್ನು ನೋಡಿ ಬಹಳ ದುಃಖವಾಯಿತು ಸಾವಿರಾರುಜನರು ನೆರೆದರು, ಬೀರಬಲನ ಆಪ್ತೇಷ್ಟರು ರೋದಿಸಹತ್ತಿದರು, ಬೀರಬಲನು ವಧಸ್ತಂಭದಕೆಳಗಿರುವ ಹಲಿಗೆಯನ್ನು ಹತ್ತಿ ನಿಂತುಕೊಂಡನು. ಆಗ ವಧಿಕರು - "ನಿಮ್ಮ ಅಂತ್ಯಾಪೇಕ್ಷೆಯು ಏನಿರುವದು ?" ಎಂದು ಪ್ರಶ್ನೆಮಾಡಿದರು, ಅವನು ಉತ್ತರಕೊಡಬೇಕೆನ್ನುವಷ್ಟರಲ್ಲಿ ಒಬ್ಬಫಕೀರನು ಅಕಸ್ಮಾತ್ತಾಗಿ ಆ ಜನಸಮ್ಮರ್ದದೊಳಗಿಂದ ಪರಮೇಶ್ವರನ ನಾಮೋಚ್ಚಾರಣೆಯನ್ನುಮಾಡುತ್ತ ಬೀರಬಲನ ಸಮೀಪಕ್ಕೆಬಂದು "ಬೀರಬಲ್ಲ ! ಪ್ರಾರಬ್ಧಯೋಗದಿಂದ ನಿನಗೆ ಮರಣದಂಡನೆಯು ಪ್ರಾಪ್ತವಾಯಿತು, ಆಗಲಿ ! ಮೃತ್ಯುವು ನಿನ್ನನ್ನು ಗ್ರಾಸಮಾಡುವದರೊಳಗಾಗಿ ಒಂದು ಪುಣ್ಯದಕಾರ್ಯವನ್ನು ಮಾಡು ? ಪ್ರಾತಃಕಾಲವು ಸಮೀಪಿಸಿದೆ, ಈ ಸಮಯದಲ್ಲಿ ಅನ್ನದಾನಮಾಡಿದರೆ ಬಹಳೇ ಪುಣ್ಯವು ಲಭಿಸುವದು, ನನಗಂತೂ ಕ್ಷುದ್ಬಾಧೆಯು ಅತಿಶಯವಾಗಿರುವದು ? ಒಂದು ಮತ್ಸ್ಯವನ್ನು ತಂದು ನೀನೇ ಅದನ್ನು ಕೊಯಿದು, ನನಗೆ ಅಡಿಗೆಯನ್ನುಮಾಡಿ ಉಣಿಸು" ಎಂದು ಕೇಳಹತ್ತಿದನು.

ಆಮಾತಿಗೆ ಬೀರಬಲನು, ಫಕೀರಸಾಹೇಬ ? ನೀವು ಎಂಥ ಅನುಚಿತವಾದ ಕಾರ್ಯವನ್ನು ಹೇಳಿದಿರಿ; ನಾನು ಉಚ್ಚಕುಲದ ಬ್ರಾಹ್ಮಣನಾಗಿದ್ದು, ಇಂಥ ನಿಕೃಷ್ಟಕೆಲಸವನ್ನು ಹ್ಯಾಗೆಮಾಡಲಿ !

ಫಕೀರ—ನೀನು ಸಾಯುವಮೊದಲು ನನ್ನ ಇಚ್ಛೆಯನ್ನು ಪೂರ್ಣಮಾಡಿದರೆ ನಿನಗೂ ನಿನ್ನ ಮಕ್ಕಳು ಮರಿಗಳಿಗೂ ಕಲ್ಯಾಣವಾಗುವದು.

ಈ ಪ್ರಕಾರ ಫಕೀರನು ಹೇಳಲಾಗಿ, ಅಲ್ಲಿ ನೆರೆದವರೆಲ್ಲರೂ ಫಕೀರನ ಅಪೇಕ್ಷೆಯನ್ನು ಪೂರ್ಣಮಾಡು ಎಂದು ಹೇಳಿದರು. ಸ್ವಲ್ಪಹಿಂದು ಮುಂದೆ

ನೋಡಿ ಬೀರಬಲನು ಆ ಮಾತಿಗೆ ಸಮ್ಮತಿಸಿದನು. ಒಬ್ಬನು ಮೀನವನ್ನು ಹಿಡಿದುಕೊಂಡು ಬರುವದಕ್ಕೆ ಯಮುನಾನದಿಗೆ ಓಡಿದನು. ಸ್ವಲ್ಪಹೊತ್ತಿನೊಳಗಾಗಿ ಒಂದು ಮೀನವನ್ನು ಹಿಡಿದುಕೊಂಡು ಬಂದು ಬೀರಬಲನಿಗೆ ಕೊಟ್ಟನು. ಆಗ ಅವನು ಚೂರಿಯಿಂದ ಆ ಮೀನದ ಹೊಟ್ಟೆಯನ್ನು ಸೀಳಲು ಅದರೊಳಗಿಂದ ಬಾದಶಹನ ಸುವರ್ಣಮುದ್ರಿಕೆಯು ಹೊರಬಿತ್ತು. ಬಾದಶಹನು ಮೇಲುಪ್ಪರಿಗೆಯಲ್ಲಿ ಗವಾಕ್ಷದೊಳಗಿಂದ ವಧಸ್ಥಾನದ ಕಡೆಗೆ ನೋಡುತ್ತ ನಿಂತುಕೊಂಡಿದ್ದನು. ಆಗ ಬೀರಬಲನು ಮೀನವನ್ನು ಕೊಯ್ಯುವದು ಅವನ ದೃಷ್ಟಿಗೆ ಬಿತ್ತು ಆದರೆ ಬೀರಬಲನಿಗೂ ಫಕೀರನಿಗೂ ನಡೆದ ಸಂಭಾಷಣವು ಮಾತ್ರ ಕೇಳಿಸಲಿಲ್ಲ ಮುದ್ರಿಕೆಯು ಹೊರಟ ಕೂಡಲೆ ಬೀರಬಲನು ಆ ಮತ್ಸ್ಯವನ್ನು ಕೆಳಗಿಟ್ಟು ಎದ್ದು ನಿಂತುಕೊಂಡು ಫಕೀರನನ್ನು ನೋಡಿದನು ಆದರೆ ಅವನು ಕಾಣಿಸಲಿಲ್ಲ ಅಗ ಬೀರಬಲನು ತನ್ನ ಸುತ್ತುಮುತ್ತುಕೊಂಡಿದ್ದ ಕರ್ಮಚಾರಿಗಳನ್ನು ನೋಡಿ: ನನಗೆ ಇನ್ನೊಂದು ಸಾರೆ ಬಾದಶಹನನ್ನು ಕಾಣಬೇಕೆಂಬ ಇಚ್ಛೆಯುದೆ" ಎಂದನು ಕೂಡಲೆ ಅವರು ಅವನನ್ನು ಕರೆದುಕೊಂಡು ಬಾದಶಹನ ಹತ್ತರ ಬಂದರು ಆಗ ಬಾದಶಹನು ತನ್ನ ಮನಸ್ಸಿನಲ್ಲಿ "ಇವನು ಪ್ರಯತ್ನವು ಶ್ರೇಷ್ಠವಾದದ್ದು ಎಂದು ಒಪ್ಪಿಕೊಳ್ಳುವದಕ್ಕೆ ಬಂದಂತೆ ತೋರುತ್ತದೆ. ಆಗಲಿ ನಾನಂತೂ ಇವನಿಗೆ ಕ್ಷಮೆಯನ್ನು ಮಾಡಬಾರದು ಎಂದು ಯೋಚಿಸುತ್ತ ಕುಳಿತುಕೊಂಡನು ಬೀರಬಲನು ಬಾದಶಹನ ಸಮ್ಮುಖದಲ್ಲಿ ನಿಂತುಕೊಂಡು ಕೈಮುಗಿದನು.

ಆಗ ಬಾದಶಹನು—ಯಾಕೆ ಬೀರಬಲ್ಲ! ಈಗ ಉದ್ಯೋಗವು ಶ್ರೇಷ್ಠವಾದದ್ದೆಂದು ಒಪ್ಪಿಕೊಳ್ಳುವದಕ್ಕೆ ಬಂದಂತೆ ತೋರುತ್ತದೆ ಈಗ ನಿನ್ನ ಪ್ರಾರ್ಥನೆಯು ಸಫಲವಾಗಲಾರದು.

ಬೀರಬಲ—ಪೃಥ್ವೀನಾಥ ? ನಾನು ಉದ್ಯೋಗವು ಶ್ರೇಷ್ಠವಾದದ್ದೆಂದು ಒಪ್ಪಿಕೊಳ್ಳುವದಕ್ಕೆ ಬಂದಿರುವದಿಲ್ಲ ಈಗಲಾದರೂ ಪ್ರಾರಬ್ಧವೇ ಅಧಿಕವಾದದ್ದೆಂದು ಹೇಳಲಿಕ್ಕೆ ಬಂದ್ದಿದ್ದೇನೆ.

ಬಾದಶಹ—(ಆಶ್ಚರ್ಯದಿಂದ) ಹಾಗಿದ್ದರೆ, ಪುನರಪಿ ನೀನು ನನ್ನ ದರ್ಶನಕ್ಕೆ ಬಂದದ್ದು ಯಾಕೆ!

ಬೀರಬಲ—ಪ್ರಾರಬ್ಧವು ಶ್ರೇಷ್ಠವಾದದ್ದಿರುವದು, ಎಂದು ನಿಮ್ಮನ್ನು ಒಡಂಬಡಿಸುವದಕ್ಕೆ.

ಬಾದಶಹ—ಹೂ ಹೀಗೋ ?

ಬೀರಬಲ—(ಮುದ್ರಿಕೆಯನ್ನು ಮುಂದಿಟ್ಟು) ಪ್ರಭುವೇ! ತಮ್ಮ ಮುದ್ರಿಕೆ

ಯನ್ನು ಸ್ವೀಕರಿಸಬೇಕು.

ಬಾದಶಹನು ಆಶ್ಚರ್ಯದಿಂದ ಆಮುದ್ರಿಕೆಯನ್ನು ಕೈಯಲ್ಲಿತೆಗೆದುಕೊಂಡು ನೋಡಿದನು. ಅದುತನ್ನದೇ ಆಗಿತ್ತು ಯಾವ ಮುದ್ರಿಕೆಯನ್ನು ನಾನು ಗಂಭೀರವಾದ ಯಮುನಾ ಪ್ರವಾಹದಲ್ಲಿ ಚೆಲ್ಲಿಕೊಟ್ಟಿದ್ದು ಈಗ ಇವನಿಗೆ ಹ್ಯಾಗೆ ದೊರಕಿತು ? " ಎಂದು ಆಶ್ಚರ್ಯಪಡುತ್ತ, " ಬೀರಬಲ್ಲ ! ನಿನಗೆ ಈ ಮುದ್ರಿಕೆಯು ಹ್ಯಾಗೆ ದೊರಕಿತು " ಎಂದು ಕೇಳಿದನು.

ಆಗ ಬೀರಬಲನು—ಪೃಥ್ವೀನಾಥ ! ನನ್ನ ಪ್ರಾರಬ್ಧವಶದಿಂದಲೇ ಲಭಿಸಿತು. ನನ್ನಪ್ರಾರಬ್ಧವು ಬಲವತ್ತರವಾಗಿರದಿದ್ದರೆ ಇದು ನನಗೆ ಹ್ಯಾಗೆ ದೊರಕುತ್ತಿತ್ತು ? " ಎಂದು ನುಡಿದು ಯಾವತ್ತೂ ಸಮಾಚಾರವನ್ನು ತಿಳಿಸಿದನು. ಆಗ ಬಾದಶಹನಿಗೆ ಪರಮಾನಂದವಾಯಿತು. ಅದರಿಂದ ಅವನು ಬೀರಬಲನಿಗೆ ಹತ್ತು ಸಾವಿರ ಮೋಹರುಗಳನ್ನೂ ಬಹು ಮೂಲ್ಯವುಳ್ಳ ಒಂದು ಜರತಾರಿಯ ಶಾಲನ್ನೂ ಪಾರಿತೋಷಕವಾಗಿ ಕೊಟ್ಟು ಸನ್ಮಾನಿಸಿದನು. ಈವರ್ತಮಾನವು ನಗರದ ಯಾವತ್ತೂ ಭಾಗಗಳಲ್ಲಿ ಪಸರಿಸಿದ್ದರಿಂದ ನಗರವಾಸಿಗಳೆಲ್ಲರಿಗೂ ಪರಮಾನಂದ ವಾಯಿತು ಬಾದಶಹನು ಬೀರಬಲನ ಮನೆಯ ಜನರಿಗೆಲ್ಲ ಒಂದೊಂದು ವಸ್ತ್ರವನ್ನು ಉಡುಗರೆಯಾಗಿ ಕೊಟ್ಟು ಕಳಿಸಿದನು ಮತ್ತು ಎಲ್ಲ ಸಭಾಸದರ ಸಹಿತವಾಗಿ ಪಾರಬ್ಧವು ಶ್ರೇಷ್ಠವಾದದ್ದೆಂದು ಒಪ್ಪಿಕೊಂಡನು.

(೩೦ ಈರ್ವರೂ ಕೂಡಿಕೊಂಡೇ ಬರುವೆವು.)—

ದಿಲ್ಲಿಯಲ್ಲಿದ್ದ ಇಬ್ಬರು ಮೋಸಗಾರರು ಒಬ್ಬಸಾವುಕಾರನನ್ನು ಮೋಸಗೊಳಿಸ ಬೇಕೆಂದು ಮೊದಲು ಬಹು ಮೂಲ್ಯವುಳ್ಳ ಕೆಲವು ಆಭರಣಗಳನ್ನು ತೆಗೆದುಕೊಂಡುಹೋದರು ಆಮೇಲೆ ಆವರ್ತಕನಿಗೆ ಆ ಆಭರಣಗಳನ್ನು ತೋರಿಸಿ "ನಾವು ಇವುಗಳನ್ನು ಮಾರಬೇಕೆಂದು ಬಂದಿದ್ದೇವೆ ಇವುಗಳನ್ನು ನೀವು ವಿಕ್ರಯ ಮಾಡಿಕೊಟ್ಟರೆ ನಮ್ಮ ಮೇಲೆ ಬಹಳೇ ಉಪಕಾರ ಮಾಡಿದಂತಾಗುತ್ತದೆ " ಎಂದರು.

ಆ ಸಾವುಕಾರನು ಆ ಆಭರಣಗಳನ್ನೆಲ್ಲ ನೋಡಿ, " ಒಳ್ಳೇದು ; ಇವುಗಳನ್ನು ನನ್ನ ಬಳಿಯಲ್ಲಿ ಇಟ್ಟುಹೋಗಿರಿ ! ನಾಲ್ಕಾರು ಜನರಿಗೆ ತೋರಿಸಿ ಇದರ ಮೂಲ್ಯವನ್ನು ನಿಶ್ಚಯಿಸಿ ಇಟ್ಟಿರುತ್ತೇನೆ ನೀವು ನಾಳೆ ಮಧ್ಯಾಹ್ನ ಕಾಲದಲ್ಲಿ ಬರ್ರಿ ! ಎಂದು ಹೇಳಿದನು.

ಮೋಸಗಾರರು—ಈ ಆಭರಣಗಳನ್ನು ಇಟ್ಟುಕೊಳ್ಳಿರಿ ! ನಾವು ನಾಳೆ ಮ

ಧ್ಯಾಹ್ನದಲ್ಲಿ ಬರುತ್ತೇವೆ ಕದಾಚಿತ್ ನಮ್ಮಿಬ್ಬರಲ್ಲಿ ಯಾವನಾದರೂ ಒಬ್ಬನೇ ಬಂದ ಪಕ್ಷದಲ್ಲಿ ಅವುಗಳನ್ನು ಕೊಡಬೇಡಿರಿ! ನಾವಿಬ್ಬರೂ ಕೂಡಿಕೊಂಡೇಬಂದರೆ ಕೊಡಿರಿ.

ಆವರ್ತಕನು ಆ ಆಭರಣಗಳನ್ನು ತನ್ನ ಪೆಟ್ಟಿಗೆಯಲ್ಲಿ ಇಟ್ಟು ಕೊಂಡನು ಆಮೇಲೆ ಆ ಮೋಸಗಾರರು ಸ್ವಲ್ಪದೂರ ಹೋಗಿ ನಿಂತುಕೊಂಡರು ಮುಂದೆ ಸ್ವಲ್ಪ ಅವಕಾಶವನ್ನು ಬಿಟ್ಟು ಅವರೊಳಗಿನವನೊಬ್ಬನು ಆವರ್ತಕನ ಹತ್ತಿರ ಬಂದು;- " ಸೇಟಸಾಹೇಬ! ನಮ್ಮ ಆಭರಣಗಳನ್ನು ಕೊಟ್ಟು ಬಿಡಿರಿ! ನಾಳೆ ನಾವು ಮಧ್ಯಾಹ್ನಕ್ಕೆ ಬರುವ ಮುಂದೆ ಅವುಗಳನ್ನು ತೆಗೆದುಕೊಂಡು ಬರುತ್ತೇವೆ " ಎಂದು ಕೇಳಿದನು.

ವರ್ತಕ—ನಿಮ್ಮ ಸಂಗಡಿಗನು ಎಲ್ಲಿ ಇದ್ದಾನೆ!

ಮೋಸಗಾರ—(ಅಲ್ಲಿ ನಿಂತುಕೊಂಡಿದ್ದ, ಎರಡನೇ ಮೋಸಗಾರನನ್ನು ಬೆರಳಿನಿಂದ ತೋರಿಸಿ) ಅಗೋ, ಅಲ್ಲಿನಿಂತು ಕೊಂಡಿದ್ದಾನೆ ನೋಡಿರಿ.

ಆಗ ಆ ವರ್ತಕನು ದೂರದಲ್ಲಿ ನಿಂತುಕೊಂಡಿದ್ದವನನ್ನು ನೋಡಿದನು. ಆ ಮೋಸಗಾರನು ಯಾವನ ಸಂಗಡಲೋ ಮಾತ ನಾಡುತ್ತ ನಿಂತುಕೊಂಡಂತೆ ಕಂಡಿತು ಆಗ ಅವನು ಅಂಗಡಿ ಯೊಳಗೆ ಬಂದು ಪೆಟ್ಟಿಗೆಯಲ್ಲಿ ಇಟ್ಟಿದ್ದ ಆಭರಣಗಳನ್ನು ತೆಗೆದು, ವಿಶ್ವಾಸದಿಂದ ಆ ಮೋಸ ಗಾರನ ಕೈಯಲ್ಲಿ ಕೊಟ್ಟನು.

ಮರುದಿವಸ ಮಧ್ಯಾಹ್ನದಲ್ಲಿ ಆ ಎರಡನೇ ಠಕ್ಕನು, ಆವರ್ತಕನ ಬಳಿಗೆ ಬಂದು ಆಭರಣಗಳನ್ನು ಕೊಡಿರಿ! ಎಂದು ಕೇಳಹತ್ತಿದನು. ಆಗ ಆ ವರ್ತಕನು ಅನ್ನುತಾನೆ;- " ನಿಮ್ಮ ಜೊತೆಗಾರನು ಆಕೂಡಲೇ ಬಂದು, ಆಭರಣಗಳನ್ನು ತೆಗೆದುಕೊಂಡು ಹೋದನು ಈಗ ನೀನೇಕೆ ಕೇಳಲಿಕ್ಕೆ ಬಂದಿ? ಅವನು ಈ ಸಂಗತಿಯನ್ನು ನಿನಗೆ ತಿಳಿಸಲಿಲ್ಲವ್ಯೋ?

ಮೋಸಗಾರ—"ಇಂಥ ಮೋಸದ ಮಾತುಗಳನ್ನು ನನ್ನೆದುರಿಗೆ ಹೇಳಬೇಡ ನಾವಿಬ್ಬರೂ ಕೂಡಿಕೊಂಡು ಬಂದರೇ ಆಭರಣಗಳನ್ನು ಕೊಡಿರಿ " ಎಂದು ನಾವು ಮೊದಲೇ ಹೇಳಿದ್ದಿಲ್ಲವೇ? ಹೀಗಿದ್ದು ಬುದ್ಧಿವಂತನೆಂದು ಹೆಸರಾಗಿರುವನೀನು, ಅವನೊಬ್ಬನೇ ಬಂದಕಾಲದಲ್ಲಿ ಯಾಕೆ ಕೊಟ್ಟೆ! ನಾನೇನು ಹೀಗೆ ಹೋಗತಕ್ಕವನಲ್ಲ! ಆಭರಣಗಳನ್ನು ಕೊಟ್ಟುಬಿಡು!!

ವರ್ತಕ—ನೀನು ನಮ್ಮ ಅಂಗಡಿಯಿಂದ ಸ್ವಲ್ಪದೂರದಲ್ಲಿ ನಿಂತುಕೊಂಡಿದ್ದಿ ಆಗ ನಿನ್ನ ಜತೆಗಾರನು ಬಂದು ಆಭರಣಗಳನ್ನು ತೆಗೆದುಕೊಂಡು

ಹೋದನು.

ಮೋಸಗಾರ—ನಾನೇನು ಅವುಗಳನ್ನು ತೆಗೆದುಕೊಂಡು ಬಾ, ಎಂದು ಹೇ ಳಿದ್ದಿಲ್ಲ ಇಂಥ ಒಣಮಾತುಗಳಿಂದ ಪ್ರಯೋಜನವಿಲ್ಲ ನನ್ನ ಆಭರಣ ಗಳನ್ನು ನನಗೆ ಕೊಟ್ಟುಬಿಡು ! ಇಲ್ಲದಿದ್ದರೆ ನ್ಯಾಯಾಧೀಶನ ಎದು ರಿಗೆ ನಿನ್ನನು ನಿಲ್ಲಿಸುವೆನು.

ಈ ಪ್ರಕಾರ ಅವರಿಬ್ಬರ ನಡುವೆ ಕೆಲವು ಹೊತ್ತು ವಾದವಿವಾದ ಮೇಲೆ ವರ್ತಕನು ಸಿಟ್ಟಿಗೆದ್ದು- " ನಾನಂತೂ ಈ ಮೊದಲೇ ಆಭರಣಗಳನ್ನು ಕೊಟ್ಟು ಬಿಟ್ಟಿದ್ದೇನೆ. ಎಂದು ಸತ್ಯವಾಗಿ ಹೇಳುತ್ತೇನೆ. ಇದರಮೇಲೆ ನೀ ನು ಬೇಕಾದಲ್ಲಿ ಹೋಗಿ ಹೇಳು ! ಎಂದು ನುಡಿದನು.

ಆ ಕೂಡಲೆ ಆ ಎರಡನೇ ಮೋಸಗಾರನು ಬೀರಬಲನ ಹತ್ತಿರಹೋಗಿ ತನ್ನ ವೃತ್ತಾಂತವನ್ನು ತಿಳಿಸಿದನು. ಬೀರಬಲನು ಆ ಠಕ್ಕನ ಯಾವತ್ತು ಸಂಗತಿಯನ್ನು ಕೇಳಿಕೊಂಡ ಮೇಲೆ ಆ ಸಾವುಕಾರನನ್ನು ತನ್ನ ಹತ್ತಿರ ಕರಿಸಿ ಕೊಂಡನು ಆಗ ಆವರ್ತಕನು ಬಂದು ತನ್ನ ಅಂಗಡಿಯಲ್ಲಿ ನಡೆದ ಯಾವತ್ತು ಸಂಗತಿಯನ್ನು ತಿಳಿಸಿ ತನ್ನ ನೆರೆ ಹೊರೆಯ ನಾಲ್ಕು ಜನ ಪ್ರ ತಿಷ್ಠಿತರಾದ ವರ್ತಕರ ಸಾಕ್ಷಿಯನ್ನು ಕೊಟ್ಟನು. ಈ ವೃತ್ತಾಂತವನ್ನೆಲ್ಲ ಕೇಳಿಕೊಂಡ ಮೇಲೆ ವಾದಿಯು ಮೋಸಗಾರನಾಗಿದ್ದಾನೆಂಬ ನಂಬಿಕೆಯು ಹುಟ್ಟಿತು ಈ ವರ್ತಕನ ಮೇಲೆ ಸುಮ್ಮನೆ ಅಪವಾದವನ್ನು ಹೊರಿಸಿದ್ದಾನೆ ಎಂದು ಮನವರಿಕೆ ಮಾಡಿಕೊಂಡು ಆ ಮೋಸಗಾರನನ್ನು ಕುರಿತು " ಈ ವರೂ ಕೂಡಿಕೊಂಡು ಬಂದರೇ ಆಭರಣಗಳನ್ನು ಕೊಡಬೇಕೆಂದು " ಹೇ ಳಿದ್ದಿಯಷ್ಟೇ " ಎಂದು ಪ್ರಶ್ನೆಮಾಡಿದನು. ಆಗ ಆ ಠಕ್ಕನು ಮಹರಾಜ ಅಹುದು, ಹೀಗೆ ನಾವು ಹೇಳಿದ್ದೆವು" ಎಂದನು. ಆಗ ಬೀರಬಲನು;- " ಹಾ ಗಾದರೆ ಆಭರಣಗಳನ್ನು ತೆಗೆದುಕೊಂಡು ಹೋಗಲಿಕ್ಕೆ ನೀನೊಬ್ಬನೇ ಯಾ ಕೆಬಂದಿ ? ಎಂದು ಪುನಃ ಪ್ರಶ್ನೆಮಾಡಿದನು.

ಆಗ ಮೋಸಗಾರನು ಏನೂ ಮಾತಾಡದೆ ಅಲ್ಲಿಂದ ಹೊರಟು ಹೋದ ನು. ಆ ಮೇಲೆ ಬೀರಬನು ಆ ವರ್ತಕನಿಗೆ " ಇನ್ನು ಮೇಲೆ ಆ ಆಭರಣಬೇ ಡಲಿಕ್ಕೆ ಯಾರಾದರೂಬಂದರೆ ಅವರನ್ನು ನನ್ನಹತ್ತಿರ ಕರೆದುಕೊಂಡು ಬಾ ಎಂದು ಹೇಳಿ ಆ ವರ್ತಕನನ್ನು ಕಳುಹಿಸಿಕೊಟ್ಟನು. ಆದಿನ ಮೊದಲ್ಗೊಂ ಡು ಆ ಮೋಸಗಾರರು ಆ ವರ್ತಕನಿಗೆ ತಮ್ಮ ಕೃಷ್ಣವದನವನ್ನು ಒಂದೂ ತೋರಿಸಲಿಲ್ಲ.

—(೩೧. ಬೀರಬಲನ ನಿಂದೆ.)—

ಒಂದುಸಾರೆ ಬೀರಬಲನ ಯಾವನೋ ಒಬ್ಬ ವೈರಿಯು ಬೀರಬಲ್ಲನ ಮಾನಹಾನಿಯನ್ನು ಮಾಡಬೇಕೆಂದು ಯೋಚಿಸಿ, ಎಷ್ಟೋ ನಿಂದಾಯುಕ್ತವಾದ ಮಾತುಗಳನ್ನು ಒಂದು ಕಾಗದದಮೇಲೆ ಬರೆದು ಒಂದುಗೋಡೆಗೆ ಹಚ್ಚಿ ಇಟ್ಟಿದ್ದನು. ಈ ಸುದ್ದಿಯು ಬೀರಬಲನಿಗೆ ತಿಳಿದಕೂಡಲೇ ತನ್ನ ಸಂಗಡ ಕೆಲವು ಜನರನ್ನು ಕರೆದುಕೊಂಡು ಆ ಸ್ಥಳಕ್ಕೆ ಬಂದನು ಅಲ್ಲಿ ಎಷ್ಟೋ ಜನರು ನೆರೆದಿದ್ದರು ಅವರಲ್ಲಿ ಬೀರಬಲನಿಗೆ ಸ್ನೇಹಿತರಾದವರೂ ಇದ್ದರು; ವೈರಿಗಳಾದವರೂ ಇದ್ದರು ಆ ಕಾಗದವು ಸ್ವಲ್ಪ ಎತ್ತರದಮೇಲೆ ಹಚ್ಚಿತ್ತು ಜನರಿಗೆ ನೆಟ್ಟಗೆ ಓದಲಿಕ್ಕೆ ಬರುತ್ತಿದ್ದಿಲ್ಲ ಅದರಿಂದ ಬೀರಬಲನು "ಆ ಕಾಗದವನ್ನು ತೆಗೆದು ಕೆಳಗೆ ಹಚ್ಚು" ಎಂದು ಒಬ್ಬ ಸೇವಕನಿಗೆ ಆಜ್ಞಾಪಿಸಿದನು ಆಗ ಅವನ ಅಪ್ಪಣೆಯಮೇರೆಗೆ ಆ ಕಾಗದವನ್ನು ಓದಲಿಕ್ಕೆ ಯಾವತ್ತರಿಗೂ ಕಾಣಿಸುವಂತೆ ಹಚ್ಚಿದನು. ಆಮೇಲೆ ಅದನ್ನು ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಓದಿತೋರಿಸಿದನು, ಬಳಿಕ ಅಲ್ಲಿ ನೆರೆದಿದ್ದ ಎಲ್ಲಜನರನ್ನು ದ್ದೇಶಿಸಿ ಅಂದದ್ದೇನಂದರೆ- "ಈ ಸ್ಥಳದಲ್ಲಿ ಏಕತ್ರರಾಗಿದ್ದ ಜನರು ಹೀಗೆ ತಿಳಿದುಕೊಳ್ಳಬೇಕಲ್ಲಾ! ಈ ಕಾಗದವು ನನ್ನ ಮತ್ತು ನಿಮ್ಮೆಲ್ಲರ ನಡುವೆ ಆದ ಒಪ್ಪಂದದ ಕಾಗದವು, ಇದು ಈ ಗೋಡೆಯಮೇಲೆ ಎತ್ತರವಾಗಿ ಹಚ್ಚಲ್ಪಟ್ಟಿತ್ತು ಅದರಿಂದ ಎಲ್ಲರಿಗೂ ಚೆನ್ನಾಗಿ ಓದಲಿಕ್ಕೆ ಬರುತ್ತಿದ್ದಿಲ್ಲ, ಅದರಿಂದ ಅದನ್ನು ಈಗ ಕೆಳಗೆ ಹಚ್ಚಿಸಿದ್ದೇನೆ ಈಗ ಮಾತ್ರ ಎಲ್ಲರಿಗೂ ಓದಲಿಕ್ಕೆ ಬರುವಂತಾಯಿತು ಇನ್ನು ನನಗೆ ಶತ್ರುಗಳಾಗಿದ್ದವರು ತಮ್ಮ ಇಚ್ಛಾಪ್ರಕಾರ ನನ್ನ ಸಂಗಡ ವರ್ತಿಸಬೇಕು, ನಾನು ನನ್ನ ಮನಸ್ಸಿಗೆ ಬಂದಹಾಗೆ ಅವರಸಂಗಡ ನಡೆದುಕೊಳ್ಳುವೆನು." ಎಂದು ಹೇಳಿ ಬೀರಬಲನು ಅಲ್ಲಿಂದ ಹೊರಟನು. ಅವನು ಆಡಿದ ಭಾಷಣಗಳನ್ನು ಕೇಳಿ ಜನರಿಗೆಲ್ಲ ಬಹಳ ಭಯವುಂಟಾಯಿತು, ಅದರಿಂದ ಎಲ್ಲರೂ ಕೂಡಿ ಆ ಕಾಗದವನ್ನು ಹರಿದು ಬಿಸುಟಬಿಟ್ಟರು. ಅಂದಿನಿಂದ ಶತ್ರುಗಳಾಗಿದ್ದವರು ತಮ್ಮ ಶತೃತ್ವವನ್ನು ಬಿಟ್ಟುಬಿಟ್ಟರು.

—(೩೨. ಚಾತುರ್ಯದ ಪರೀಕ್ಷೆ.)—

ಒಂದುಸಾರೆ ಬೀರಬಲನು ರೋಗಪೀಡಿತನಾಗಿದ್ದನು, ಆಗ ಅವನಿಗೆ ಮೂರುದಿವಸ ಅನ್ನ ನೀರುಸಹ ಹೋಗಿದ್ದಿಲ್ಲ; ನಾಲ್ಕನೇದಿವಸ ಔಷಧದಿಂದ ಸ್ವಲ್ಪ ಗುಣವಾಯಿತು. ಆಗ ಬಾದಶಹನು ಅವನ ಯೋಗಕ್ಷೇಮವನ್ನು ತಿಳಿದುಕೊಳ್ಳಬೇಕೆಂದು ಸ್ವತಃ ಬೀರಬಲನ ಮನೆಗೆ ಬಂದನು, ಕ್ಷೇಮಸಮಾಚಾರದ

ಮಾತುಕಥೆಗಳು ನಡೆದವು, ಸ್ವಲ್ಪ ಹೊತ್ತಾದಮೇಲೆ ಬೀರಬಲನಿಗೆ ಮೂತ್ರ ಬಾಧೆಯಾದ್ದರಿಂದ ಅಲ್ಲಿಂದಯೆದ್ದು ಬೇರೆಕಡೆಗೆಹೋದನು ಆಗ ಬಾದಶಹನ ಮನಸ್ಸಿನಲ್ಲಿ- "ಈ ಬೇನೆಯಿಂದ ಬೀರಬಲನ ಚಾತುರ್ಯದಲ್ಲಿ ಏನಾದರೂ ನ್ಯೂನಾಧಿಕವಾಗಿದೆಯೋ ಹ್ಯಾಗೆ?" ಎಂಬದನ್ನು ಪರೀಕ್ಷಿಸಿ ನೋಡಬೇಕೆಂದು ಯೋಚನೆಯು ಹುಟ್ಟಿತು. ಆ ಕೂಡಲೆ ಒಬ್ಬಸೇವಕನನ್ನು ಕರೆದು ನಾಲ್ಕುಕಾಗದದ ಚೂರುಗಳನ್ನು ಅವನಕೈಯಲ್ಲಿಕೊಟ್ಟು ಇವುಗಳನ್ನು ಒಂದೊಂದು ಮಂಚದ ಕಾಲಿನಕೆಳಗೆ ಇಡು ಎಂದು ಹೇಳಿದನು. ಅದರಂತೇ ಆ ಸೇವಕನು ಬೀರಬಲನ ಮಂಚದ ಕಾಲಿನಕೆಳಗೆ ಒಂದೊಂದು ಚೂರನ್ನು ಇಟ್ಟನು, ಸ್ವಲ್ಪಹೊತ್ತಿನಮೇಲೆ ಬೀರಬಲನು ಬಂದು ಆ ಮಂಚದಮೇಲೆ ಮಲಗಿಕೊಂಡನು. ಆಗ ಬಾದಶಹನು ಏನೂ ಅರಿಯದವನಂತೆ ಆಕಡೆಯ ಈಕಡೆಯ ವರ್ತಮಾನಗಳನ್ನು ಹೇಳುತ್ತ ಕುಳಿತುಕೊಂಡನು. ಆಗ ಬೀರಬಲನು ಬಾದಶಹನಸಂಗಡ ಮಾತಾಡುತ್ತಿದ್ದರೂ ಅವನಕಣ್ಣುಗಳು ಸುತ್ತುಮುತ್ತು ಮೇಲೆಕೆಳಗೆ ನೋಡುತ್ತಿದ್ದವು. ಆಗ ಬಾದಶಹನು "ನಿನ್ನ ಮನಸ್ಸು ಸ್ವಸ್ಥವಾಗಿದ್ದಂತೆ ಕಾಣುವದಿಲ್ಲ ನೀನು ಒಂದೇಸವನೆ ಮೇಲೆಕೆಳಗೆ ಯಾಕೆ ನೋಡುತ್ತಿರುವಿ" ಎಂದು ಪ್ರಶ್ನೆಮಾಡಿದನು; ಆಗ ಬೀರಬಲನು ಅನ್ನುತ್ತಾನೆ:- "ಬಾವಿಂದ ನಾನುಮಲಗಿರುವ ಮಂಚವು ಮೊದಲು ಇದ್ದಹಾಗೆ ಇಲ್ಲ, ಏನೋ ಹೆಚ್ಚುಕಡಿಮೆಯಾದಂತೆ ಕಂಡುಬರುತ್ತದೆ."

ಬಾದಶಹ—ಏನು ಹೆಚ್ಚುಕಡಿಮೆ ಯಾಗಿದೆ!

ಬೀರಬಲ-ಈ ಮಂಚವು ಕಾಗದದಚೂರಿನಷ್ಟು ಎತ್ತರವಾದಂತೆ ಕಾಣುತ್ತೆ.

ಬಾದಶಹ-ನಿನ್ನ ದೇಹದಲ್ಲಿಯ ನಿರ್ಬಲತೆಯಿಂದ ಹಾಗೆ ಕಾಣುತ್ತಿರಬಹುದು.

ಬೀರಬಲ—ಪೃಥ್ವೀನಾಥ! ನನ್ನ ದೇಹವು ನಿರ್ಬಲವಾಗಿದ್ದರೂ ಬುದ್ಧಿಯು ನಿರ್ಬಲವಾಗಿಲ್ಲ.

ಈಪ್ರಕಾರ ಬೀರಬಲನ ಚಾತುರ್ಯವನ್ನು ಪರೀಕ್ಷಿಸಿ ನೋಡಿದಮೇಲೆ ಬಾದಶಹನಿಗೆ ಅತ್ಯಾನಂದವುಂಟಾಯಿತು, ಆಗ ತಾನುಮಾಡಿದ ಯುಕ್ತಿಯನ್ನು ಬೀರಬಲನಿಗೆ ತಿಳಿಸಿದನು.

—(೩೩, ತೊಗರಿಯಲ್ಲಿ ನವಿಲು.)—

ಒಂದುದಿವಸ ಬಾದಶಹನೂ, ಮತ್ತು ಬೀರಬಲನೂ ಕೂಡಿಕೊಂಡು ವಾಯುಸೇವನಾರ್ಥವಾಗಿ ಹೋಗಹತ್ತಿದ್ದರು; ಆಗ ತೊಗರೆಯ ಹೊಲದಲ್ಲಿ ಹೋಗುತ್ತಿರುವ ಒಂದು ನವಿಲನ್ನು ಕಂಡು "ಬೀರಬಲ್ಲ! ತೋರ್ರಮೆ ಮೋರ

ಘೂಸತಾ ಹೈ! (ತೊಗರಿಯಲ್ಲಿ ನವಿಲು ಹೋಗುವದೇ !) ಎಂದನು. ಆಗ ಬೀರಬಲನು "ಅಹುದು! ತೋರಘಟತಹೈ, ಮೋರಘೂಸತಹೈ (ತೊಗರೆಯ ಕಾಳು ಒಡೆಯುತ್ತದೆ, ಇರಿವೆಯು ಹೋಗುತ್ತದೆ) ಎಂದು ಉತ್ತರಕೊಟ್ಟನು, ಅದನ್ನು ಕೇಳಿ ಬಾದಶಹನಿಗೆ ನಗೆಯುಬಂತು.

ಫಾರ್ಸೀಭಾಷೆಯಲ್ಲಿ ಮೋರ ಎಂದರೆ ಇರಿವೆಯೆಂದು ಅರ್ಥವಾಗುತ್ತದೆ.

೩೪. ಬಲೆಯೊಳಗಿನ ಹಣ್ಣು, ಮತ್ತು ಮಲವಿಸರ್ಜನೆಯ ಕಾಲದಲ್ಲಿ ಬಂದ ದೇವರು.

ಒಂದುದಿವಸ ಬಾದಶಹನ ಮನಸ್ಸಿನಲ್ಲಿ;- " ಬೀರಬಲನು ಯಾವಾಗ ನೋಡಿದರೂ ಆಗ ನನ್ನನ್ನು ಮಾತಿನಲ್ಲಿ ಸೋಲಿಸುತ್ತಿರುವನು ಆದ್ದರಿಂದ ಏನಾದರೂ ಮಾಡಿ ಅವನು ಲಜ್ಜಿತನಾಗುವಂತೆ ಮಾಡಬೇಕು, " ಎಂದು ಯೋಚಿಸಿ ಯಾವನಾದರೂ ಕೈಮುಟ್ಟಿದಕೂಡಲೆ ಅವನಕೈಯುಂ ಸಿಕ್ಕಿಹೋಗಬೇಕು ಇಂಥಪ್ರಕಾರದ ಒಂದು ಬಲೆಯನ್ನು ಸಿದ್ಧಪಡಿಸಿ ಅದರೊಳಗೆ ಒಂದು ಹಣ್ಣನ್ನು ಇಡಿಸಿ, ಅದನ್ನು ಒಂದುಕೋಣೆಯಲ್ಲಿ ಇಡಿಸಿದನು. ಪ್ರತಿದಿವಸದಂತೆ ಬೀರಬಲನುಬಂದು ಬಾದಶಹನಿಗೆ ನಮಸ್ಕಾರಮಾಡಿ ನಿಂತುಕೊಂಡನು. ಆಗ ಬಾದಶಹನು "ಬೀರಬಲ್ಲ! ಆ ಬಲೆಯೊಳಗಿನ ಹಣ್ಣನ್ನು ತೆಗೆದುಕೊಂಡು ಬಾ" ಎಂದು ಹೇಳಿದನು, ಆಜ್ಞಾನುಸಾರವಾಗಿ ಬೀರಬಲನು ಆ ಹಣ್ಣನ್ನು ತೆಗೆದುಕೊಳ್ಳುವದಕ್ಕೆ ಆ ಬಲೆಯೊಳಗೆ ಕೈಹಾಕಲು ಅದು ಸಿಕ್ಕಿಕೊಂಡಿತು, ಅದನ್ನು ಬಿಡಿಸಿಕೊಳ್ಳಬೇಕೆಂದು ಎರಡನೆ ಕೈಯನ್ನು ಹಾಕಲು ಆ ಎರಡನೇ ಕೈಯೂ ಸಿಕ್ಕಿಕೊಂಡಿತು ಎಷ್ಟು ಹಿಂದುಮುಂದು ಜಗ್ಗಾಡಿದರೂ ಕೈಗಳು ಹೊರಗೆಬರಲಿಲ್ಲ; ಅದರಿಂದ ಬೀರಬಲನು ಲಜ್ಜಿತನಾಗಿ ಮೋರೆಯನ್ನು ಕೆಳಗೆಮಾಡಿದನು, ಅಷ್ಟರಲ್ಲಿ ಬಾದಶಹನು ಅಲ್ಲಿಗೆ ಬಂದನು, ಬೀರಬಲನ ಅವಸ್ಥೆಯನ್ನು ಕಂಡು ಬಾದಶಹನು ಅನ್ನುತ್ತಾನೆ- " ಈಕೋಣೆಯಲ್ಲಿದ್ದ ಸಾಮಾನುಗಳು ಹಗಲೆಲ್ಲ ಕಳವಾಗಿ ಹೋಗುತ್ತಿದ್ದವು ಅವುಗಳನ್ನು ಕದ್ದೊಯ್ಯುವ ಮನುಷ್ಯನು ಈಹೊತ್ತು ಸಿಕ್ಕಂತಾಯಿತು ಈದಿವಸ ನಾನು ಅಂತಃಕರುಣದಿಂದ ನಿನ್ನನ್ನು ಬಿಟ್ಟುಬಿಡುತ್ತೇನೆ ಇನ್ನು ಮೇಲೆಮಾತ್ರ ಇಂಥಕೆಲಸವನ್ನು ಮಾಡಬೇಡ" ಬೀರಬಲನು ಏನೊಂದು ಉತ್ತರವನ್ನು ಕೊಡಲಿಲ್ಲ, ಆಮೇಲೆ ಬಾದಶಹನು ಆ ಕೈಯನ್ನು ತೆಗಿಸಿಬಿಟ್ಟನು.

ಮರುದಿವಸ ನೇಮದಂತೆ ಬೀರಬಲನು ಓಲಗಕ್ಕೆಬರಲಾಗಿ ಬಾದಶಹನು " ಬೀರಬಲ್ಲ? ಬಲೆಯೊಳಗಿನ ಹಣ್ಣು ಹ್ಯಾಗೆಯಿತ್ತು ! " ಎಂದು ಕೇಳಿ

ದನು, ಬೀರಬಲನು ಏನೊಂದುತ್ತರವನ್ನೂ ಕೊಡದೆ ಮುಖತಗ್ಗಿಸಿದನು. ಇದರಂತೆ ಪ್ರತಿದಿವಸ ತಪ್ಪದೆ ಬಾದಶಹನು ಅನ್ನುತ್ತಿದ್ದನು; ಕಡೆಗೆ ಬೀರಬಲನು ಕೆಲವು ದಿವಸಗಳವರೆಗೆ ಇಲ್ಲಿಂದ ಹೊರಟು ಹೋಗಬೇಕು; ಎಂದು ನಿಶ್ಚಯಿಸಿದನು.

ಮುಂದೆ ಕೆಲವು ದಿವಸಗಳಾದಮೇಲೆ ಸಮಯವನ್ನು ನೋಡಿಕೊಂಡು "ಶ್ರೀ ಜಗನ್ನಾಥನ ಯಾತ್ರೆಗೆ" ಹೋಗುವೆನೆಂದು ಹೇಳಿ ಎರಡು ತಿಂಗಳ ಮಟ್ಟಿಗೆ ಬಾದಶಹನ ಅಪ್ಪಣೆಯನ್ನು ಕೇಳಿದನು. ಬಾದಶಹನು ಸಂತೋಷದಿಂದ ಅಪ್ಪಣೆಕೊಟ್ಟನು. ಬೀರಬಲನು ಮನೆಗೆಬಂದು ಯತಿಯ ವೇಷವನ್ನು ಧಾರಣಮಾಡಿಕೊಂಡು ಯಾತ್ರಾರ್ಥವಾಗಿ ಹೊರಟವನಂತೆ ನಟಿಸಿ, ಬಾದಶಹನು ಮೃಗಯಾವಿಹಾರಕ್ಕಾಗಿ ಕಾದುಯಿಟ್ಟಿದ್ದ ಅಡವಿಯೊಳಗೆ ಹೋಗಿ ಇರಹತ್ತಿದನು.

ಮುಂದೆ ಹತ್ತೆಂಟು ದಿವಸಗಳಾದ ಬಳಿಕ ಬಾದಶಹನು ಸಾಯಂಕಾಲದ ಸಮಯದಲ್ಲಿ ಮೃಗಯಾ ವಿಹಾರಕ್ಕೋಸುಗ ಆ ಅರಣ್ಯಕ್ಕೆ ಹೋದನು ಅಲ್ಲಿ ಅಕಸ್ಮಾತ್ತಾಗಿ ಒಂದು ಹರಿಣವು (ಚಿಗರೆಯು) ದೃಷ್ಟಿಗೆ ಬೀಳಲು, ಅದರ ಬೆನ್ನುಹತ್ತಿ ಕುದುರೆಯನ್ನು ಓಡಿಸಿದನು, ಅಷ್ಟರಲ್ಲಿ ಮುಬ್ಬುಗತ್ತಲಾದ್ದರಿಂದ ಚಿಗರೆಯು ಕಾಣದಹೋಯಿತು ಬಾದಶಹನಿಗೆ ಮಾರ್ಗವು ತಿಳಿಯದೇ ಹೋಯಿತು ಸೈನ್ಯದವರೆಲ್ಲರು ಹಿಂದುಳಿದುಬಿಟ್ಟರು ಆ ಸಮಯದಲ್ಲಿ ಬಾದಶಹನಿಗೆ ದೀರ್ಘಶಂಕೆ (ಮಲವಿಸರ್ಜನೆ) ಗೆ ಹೋಗಬೇಕಾಗಿ ಬಂತು ಆಗ ಅವನು ಕುದುರೆಯನ್ನು ಒಂದುಗಿಡಕ್ಕೆ ಕಟ್ಟಿಹಾಕಿ, ಮತ್ತೊಂದು ಮರದಬುಡಕ್ಕೆ ಮಲವಿಸರ್ಜನೆಗೆ ಕುಳಿತುಕೊಂಡನು. ಇಂಥ ಸಮಯನಿರೀಕ್ಷಣಮಾಡುತ್ತ ಕುಳಿತುಕೊಂಡಿದ್ದ ಬೀರಬಲನು;- "ದೀರ್ಘದಂತೆ, ಕಪ್ಪಾದ ಮೋರೆ, ಉದ್ದವಾದ ತುಟಿಗಳುಳ್ಳ ಅಕರಾಳವಿಕರಾಳ" ಸ್ವರೂಪವನ್ನು ಧಾರಣಮಾಡಿಕೊಂಡು ಆ ವೃಕ್ಷದ ಹಿಮ್ಮಗ್ಗಲಿನಿಂದ ಒದರುತ್ತ, ಕೂಗುತ್ತ, ಕುಣಿದಾಡುತ್ತ ಬಾದಶಹನನ್ನು ಅಂಜಿಸಬೇಕೆಂದು ಎದುರಿಗೆಬಂದು ನಿಂತುಕೊಂಡನು. ಇಂಥ ಭಯಾನಕ ಸ್ವರೂಪವನ್ನು ನೋಡಿ ಬಾದಶಹನು ಗದಗದನೇ ನಡುಗಹತ್ತಿದನು. ಆಗ ವೇಷಧಾರಿಯಾಗಿದ್ದ ಬೀರಬಲನು ಚೀತ್ಕಾರಮಾಡುತ್ತ- "ಎಲೈ ನರಾಧಮನೇ ? ನೀನು ನಿನ್ನ ಪ್ರಜೆಗಳಮೇಲೆ ಬಹಳೇ ಬಲಾತ್ಕಾರವನ್ನು ನಡಿಸಿರುತ್ತೀ ! ಅದರಿಂದ ಅನ್ಯಾಯವರ್ತನವುಳ್ಳ ನಿನ್ನನ್ನು ತಿಂದುಬಿಡುತ್ತೇನೆ" ಎಂದು ಹೇಳಿದನು. ಆಗ ಬಾದಶಹನ ಮೈಮೇಲಿನ ಪ್ರಜ್ಞೆಯು ತಪ್ಪಿಹೋಯಿತು, ನಾಲಿಗೆಯು ತತ್ತರಿಸಹತ್ತಿತು. ಆಗ

ಅವನು ರಾಕ್ಷಸನಿಗೆ ನಮಸ್ಕಾರಮಾಡಿ “ಹೇ ದೇವ? ನನ್ನ ಅಪರಾಧವನ್ನು
ಕ್ಷಮಿಸು ನಿನ್ನ ಅಪ್ಪಣೆಯಮೇರೆಗೆ ನಡೆದುಕೊಳ್ಳುತ್ತೇನೆ.” ಎಂದು ಬೇಡಿ
ಕೊಳ್ಳಹತ್ತಿದನು. ಆಗ ಆ ರಾಕ್ಷಸರೂಪಿಯಾದ ಬೀರಬಲನು “ನಾನು ಹೇ
ಳಿದಂತೆ ಕೇಳುವಿಯಾ? ಹಾಗಾದರೆ ನೀನು ಮೈಮೇಲಿನ ಎಲ್ಲವಸ್ತ್ರಗಳನ್ನು
ತೆಗೆದುಚಲ್ಲಿ ನಗ್ನನಾಗಿ ಈ ನನ್ನ ಪಾದರಕ್ಷೆಗಳನ್ನು ತಲೆಯಮೇಲೆ ಹೊತ್ತು
ಕೊಂಡು ಒಂದುನೂರು ಮೊಳದೂರ ಹೋಗಬೇಕು ಅಂದರೆ ನಾನು ನಿನಗೆ
ಜೀವದಾನಕೊಡುತ್ತೇನೆ” ಎಂದು ಹೇಳಿದನು ಬಾದಶಹನು ಆಮಾತಿಗೆ ಸ
ಮ್ಮತಿಸಿದನು, ಆಮಾತು ಕೇಳಿ ರಾಕ್ಷಸರೂಪಿಯಾದ ಬೀರಬಲನ ಮನಸ್ಸಿ
ನಲ್ಲಿ ದಯೆಹುಟ್ಟಿ ಹಾಗೆಯೇ ಹೋಗೆಂದು ಹೇಳಿ ಬಿಟ್ಟುಬಿಟ್ಟನು. ಬಾದಶ
ಹನು ಅಲ್ಲಿಂದ ಏಳುತ್ತ ಬೀಳುತ್ತಬಂದು ಪಟ್ಟಣಕ್ಕೆ ತಲುಪಿದನು, ಆದರೂ
ಅವನ ಮನಸಿನೊಳಗಿಂದ ಆ ರಾಕ್ಷಸನಭಯವು ಕಡಿಮೆಯಾಗಲಿಲ್ಲ ಆದರಿಂದ
ಅವನು ಅನ್ನನೀರುಗಳನ್ನು ಸಹಾ ಬಿಟ್ಟುಬಿಟ್ಟನು.

ಎರಡು ತಿಂಗಳುಗಳಾದ ಮೇಲೆ ಬೀರಬಲನು ಮನೆಗೆ ಬಂದನು ಈ
ವರ್ತಮಾನವು ಬಾದಶಹನಿಗೆ ತಿಳಿದ ಕೂಡಲೆ, ಅವನು ಬೀರಬಲನನ್ನು ಕ
ರೆಯಿಸಿಕೊಂಡನು. ಅವನುಬಂದು ಭೆಟ್ಟಿಯಾದ ಕೂಡಲೆ ಬಾದಶಹನು “ಬೀ
ರಬಲ್ಲ! ಬಲೆಯೊಳಗಿನ ಹಣ್ಣು!” ಎಂದನು ಆಕೂಡಲೆ ಬೀರಬಲನು “ಪೃ
ಥ್ವೀನಾಥ! ಮಲವಿಸರ್ಜನೆಯ ಕಾಲಕ್ಕೆ ಬಂದದೇವರು! ಎಂದು ಹೇಳಿದನು

ಈ ಮಾತು ಕಿವಿಗೆ ಬಿದ್ದಕೂಡಲೆ ಬಾದಶಹನು ಲಜ್ಜಿತನಾದನು ಆದಿ
ವಸದಿಂದ ಬಾದಶಹನು ತಿರುಗಿ ಆ ಮಾತನ್ನೇ ಬಿಟ್ಟುಬಿಟ್ಟನು. ಮುಂದೆ ಸ್ವ
ಲ್ಪದಿವಸಗಳಾದ ಮೇಲೆ ಬೀರಬಲನು ಮಾಡಿದ ಕೃತಿಯು ಗೊತ್ತಾಗಲು-
ಮನಸಿನೊಳಗಿನ ಭಯವೆಲ್ಲ ಹೋಯಿತು. ಆನಂದದಿಂದ ಇರ ಹತ್ತಿದನು.

—(೩೫. ಅರ್ಧಬಿಸಿಲೂ, ಅರ್ಧನೆರಳೂ.)—

ಒಂದು ಸಮಯದಲ್ಲಿ ಬಾದಶಹನು ಬೀರಬಲನ ಮೇಲೆ ಕ್ರುದ್ಧನಾಗಿ
ತನ್ನ ಪಟ್ಟಣದಿಂದ ಹೊರಗೆ ಹೋಗೆಂದು ಆಜ್ಞಾಪಿಸಿದನು. ಅದರಂತೆ ಬೀ
ರಬಲನು ಬೇರೊಂದು ಗ್ರಾಮದಲ್ಲಿ ಹೋಗಿ ಗುಪ್ತದಿಂದ ಇರಹತ್ತಿದನು.
ಮುಂದೆ ಕೆಲವು ದಿವಸಗಳು ಕಳೆದು ಹೋದಮೇಲೆ ಬೀರಬಲನು ಸ್ಮರಣೆಗೆ
ಬಂದನು ಆಗ ಅವನು ಇರುವಸ್ಥಳವನ್ನು ಕಂಡು ಹಿಡಿಯಬೇಕೆಂದು, ಸೇವ
ಕರನ್ನು ಕಳುಹಿಸಿ, ಬೇರೆ ಬೇರೆ ಪಟ್ಟಣಗಳಲ್ಲಿಯೂ; ಜನವಸತಿಯಲ್ಲಿಯೂ
ಹುಡುಕಿಸಿದನು. ಆದರೆ ಎಲ್ಲಿಯೂ ಶೋಧವಾಗಲಿಲ್ಲ ಆಗ ಬಾದಶಹನು.-

" ಯಾವನು ಅರ್ಧ ಬಿಸಿಲಿನಲ್ಲಿಯೂ, ಅರ್ಧ ಛಾಯೆಯಲ್ಲಿಯೂ ನನ್ನ ಎದುರಿಗೆ ಬರುವನೋ, ಅವನಿಗೆ ಒಂದು ಸಾವಿರ ರೂಪಾಯಿಗಳನ್ನು ಪಾರಿತೋಷಕವಾಗಿ ಕೊಡುವೆನು " ಎಂದು ಡಂಗುರವನ್ನು ಸಾರಿಸಿದನು. ಈ ವರ್ತಮಾನವು ಕರ್ಣೋಪಕರ್ಣವಾಗಿ ಬೀರಬಲನಿದ್ದ ಗ್ರಾಮಕ್ಕೆ ಬಂದು ತಲ್ಪಿತು: ಆಗ ಅವನು ಒಂದು ಹೊರಸನ್ನು ತರಿಸಿ, ಒಬ್ಬ ಮನುಷ್ಯನಿಗೆ ಕೊಟ್ಟು ಇದನ್ನು ತೆಗೆದುಕೊಂಡು ಹೋಗಿ ಬಾದಶಹನ ಸಮ್ಮುಖದಲ್ಲಿ ನಿಂತುಕೊಂಡು " ತಮ್ಮ ಅಪ್ಪಣೆಯ ಮೇರೆಗೆ ಅರ್ಧ ಬಿಸಿಲಿನಲ್ಲಿಯೂ ಅರ್ಧ ಛಾಯೆಯಲ್ಲಿಯೂ ಬಂದಿದ್ದೇನೆ. ತಾವು ಪಾರಿತೋಷಕವಾಗಿ ಕೊಡುತ್ತೇವೆಂದು ಪ್ರಕಟ ಪಡಿಸಿದ ಪ್ರಕಾರ ನನಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕು " ಎಂದು ಕಲಿಸಿ ಕೊಟ್ಟು ಅವನನ್ನು ಕಳುಹಿಸಿದನು.

ಬೀರಬಲನ ಶಿಕ್ಷಣಾನುಸಾರವಾಗಿ ಆ ಮನುಷ್ಯನು ಆ ಹೊರಸ(ಖಾಟ)ನ್ನು ತಲೆಯ ಮೇಲೆ ಹೊತ್ತುಕೊಂಡು ಬಾದಶಹನ ಎದುರಿಗೆ ಬಂದು ನಿಂತುಕೊಂಡು ಬೀರಬಲನು ಕಲಿಸಿಕೊಟ್ಟಂತೆ ನಿವೇದನ ಮಾಡಿದನು. ಆಗ ಬಾದಶಹನು " ಎಲೈ ನಿನಗೆ ಈ ಯುಕ್ತಿಯನ್ನು ಯಾರು ಹೇಳಿದರು! ಎಂಬ ಸಂಗತಿಯನ್ನು ನಿಜವಾಗಿ ಹೇಳು ! ಎಂದು ಆಜ್ಞಾಪಿಸಿದನು. ಆಗ ಆ ಮನುಷ್ಯನು,- " ಪೃಥ್ವೀನಾಥ ನಮ್ಮ ಊರಲ್ಲಿ ಬೀರಬಲನೆಂಬ ಒಬ್ಬ ಬ್ರಾಹ್ಮಣನಿದ್ದಾನೆ. ಅವನೇ ನನಗೆ ಈ ಹಂಚಿಕೆಯನ್ನು ಕಲಿಸಿಕೊಟ್ಟನು " ಎಂದು ವಿಜ್ಞಾಪ್ತಿಯನ್ನು ಮಾಡಿಕೊಂಡನು. ಈ ಮಾತನ್ನು ಕೇಳಿದ ಕೂಡಲೆ ಬಾದಶಹನಿಗೆ ಬಹಳ ಹರುಷವಾಯಿತು ಆಗ ಆ ಮನುಷ್ಯನಿಗೆ ಒಂದುಸಾವಿರ ರೂಪಾಯಿಗಳನ್ನಿತ್ತು ಬೀರಬಲನನ್ನು ಕರೆಯಿಸಿಕೊಂಡನು

—(೩೬ ನೀನು ದೊಡ್ಡ ಕರ್ತೃಯಾಗಿರುವಿ !)—

ಒಂದು ಸಮಯದಲ್ಲಿ ಬಾದಶಹನೂ ಬೀರಬಲನೂ ಮಾತಾಡುತ್ತ ಬಹಳ ಹೊತ್ತು ಕುಳಿತುಕೊಂಡಿದ್ದರು. ಆಗ ಅಕಸ್ಮಾತ್ತಾಗಿ ಬೀರಬಲನಿಂದ ಅಧೋವಾಯುವು ಹೊರಟಿತು ಆಗ ಬಾದಶಹನು,- " ನೀನು ದೊಡ್ಡ ಕರ್ತೃಯಾಗಿರುವಿ " ಎಂದನು. ಅದಕ್ಕೆ ಬೀರಬಲನು ; " ಪ್ರಭುವೇ ! ನಾನು ಮೊದಲು ಒಳ್ಳೇಬುದ್ಧಿವಂತನಿದ್ದೆನು. ಆದರೆ ಈಗ ತಮ್ಮ ಸಂಗಡ ಇದ್ದುದರಿಂದ ಕರ್ತೃಯಾಗ ಬೇಕಾಯಿತು " ಎಂದು ಉತ್ತರ ಕೊಟ್ಟನು ಬಾದಶಹನು ನಿರುತ್ತರನಾದನು.

—(೩೭. ಯಾತರ ಮೇಲೆ ಹತ್ತುವಿರಿ !)—

ಬಾದಶಹನೂ ಬೀರಬಲನೂ ಕೂಡಿಕೊಂಡು ಮೃಗಯಾವಿಹಾರಕ್ಕೆ

ಹೋಗಿದ್ದರು ಆಗ ಒಂದು ಕೃಷ್ಣಮೃಗವು ದೃಷ್ಟಿಗೆ ಬಿದ್ದದರಿಂದ ಇಬ್ಬರೂ ಬಹುದೂರ ಹೋಗಿ ಬಿಟ್ಟರು, ಬಳಿಯಲ್ಲಿ ತಿನ್ನುವದಕ್ಕೆ ಏನೂ ಇದ್ದಿಲ್ಲ ಬಿಸಿಲು ಬಲಿಯಿತು. ಆಗ ಅವರು ಶ್ರಾಂತರಾಗಿ ಒಂದು ಮರಕ್ಕೆ ಕುದುರೆಗಳನ್ನು ಕಟ್ಟಿ, ಶ್ರಮನಿವಾರಣೆಯ ಗೋಸುಗ ಕುಳಿತುಕೊಂಡರು ಆದರೆಕ್ಷುದ್ಬಾಧೆಯು ಸಹಿಸಲಸದಳವಾಯಿತು. ಬಾದಶಹನು ಕುದುರೆಯ ತೋಬರಿಯಲ್ಲಿಷ್ಟ ಕಡಲೇ ಕಾಳುಗಳನ್ನು ತಿನ್ನಹತ್ತಿದನು ಅಕಸ್ಮಾತ್ತಾಗಿ ಮೂರು ನಾಲ್ಕು ಜನಸ್ತ್ರೀಯರು ಆ ಮಾರ್ಗವಾಗಿ ಹೋಗುತ್ತಿದ್ದರು ಅವರನ್ನು ನೋಡಿ ಕುದುರೆಗಳು ಹೇಷಾರವವನ್ನು ಮಾಡಿದವು ಆಗ ಬಾದಶಹನು ಆ ಸ್ತ್ರೀಯರಿಗೆ,- "ನಿಮ್ಮನ್ನು ನೋಡಿ ಕುದುರೆಗಳು ಏನು ಹೇಳಹತ್ತಿವೆ? ಎಂದು ಪ್ರಶ್ನೆಮಾಡಿದನು. ಆಗ ಆ ಸ್ತ್ರೀಯರು- ಎಲೋ ಯಾತ್ರಿಕರೇ ಆ ಕುದುರೆಗಳು ಹೇಳಿದ್ದೇನಂದರೆ, "ನಮ್ಮ ಮೇಲೆ ಕುಳಿತು ಕೊಳ್ಳತಕ್ಕ ಯಜಮಾನರು ನಮ್ಮ ತೋಬರಿಯೊಳಗಿನ ಕಾಳುಗಳನ್ನು ತಿನ್ನಹತ್ತಿದ ಮೇಲೆ, ತಿರುಗಿ ಯಾತರಮೇಲೆ ಹತ್ತಿಕೊಂಡು ಹೋಗುವರು!" ಎಂದು ನಮಗೆ ಪ್ರಶ್ನೆಮಾಡಿದವು" ಎಂದು ಉತ್ತರಕೊಟ್ಟು ತಮ್ಮ ಮಾರ್ಗವನ್ನು ಹಿಡಿದು ಹೋದರು.

—(೩೮. ಮುಂದೆ ಹೋಗಿ ಸಾಯಬೇಕೆನ್ನುವಿಯಾ ?)—

ಒಂದು ದಿವಸ ಬಾದಶಹನು ಯಾವದೋ ಒಂದು ಉನ್ನತವಾದ ಸ್ಥಳದಮೇಲೆ ಹೋಗಬೇಕೆಂದು ನಿಚ್ಚಣಿಕೆಯನ್ನುಹಚ್ಚಿ ಏರಹತ್ತಿದ್ದನು. ಆಗ ಬಾದಶಹನು,- ನಾನು ಈ ನಿಚ್ಚಣಿಕೆಯ ಕಡೆಯ ಹಲ್ಲನ್ನು ಮುಟ್ಟುವದರೊಳಗಾಗಿ ನೀನು ನನಗೆ ನಗೆಯು ಬರುವಹಾಗೆ ಮಾಡದಿದ್ದರೆ ನಿನ್ನ ಆಯುಷ್ಯವು ಈ ದಿವಸ ತೀರಿತೆಂದು ತಿಳಿದುಕೋ!" ಎಂದು ಹೇಳಿದನು. ಆಗ ಬೀರಬಲನು ಅನೇಕ ಪ್ರಕಾರದ ಹಾಸ್ಯದ ಮಾತು ಕಥೆಗಳನ್ನು ಹೇಳಹತ್ತಿದನು, ಆದರೆ ಬಾದಶಹನು ಒಂದುತುಟಿಯನ್ನು ಎರಡು ಮಾಡಲಿಲ್ಲ. ಇನ್ನು ಆ ನಿಚ್ಚಣಿಕೆಯ ಹಲ್ಲು ಒಂದೇ ಉಳಿಯಿತು. ಆಗ ಬೀರಬಲನು "ಯಾಕೆ? ಈಗ ಮುಂದೆಹೋಗಿ ಸಾಯಬೇಕೆನ್ನುವಿಯಾ ?" ಎಂದುನುಡಿದನು, ಅದನ್ನು ಕೇಳಿದಕೂಡಲೆ ಬಾದಶಹನು. ಕಿಲಕಿಲ ನಕ್ಕನು.

— (೩೯, ವುನೋಚಂದ್ರಕೊ ಚೀರ ಕುಸುಮ ಚುಮಾಯೋ.)—

ಒಂದು ಸಾರೆ ಬಾದಶಹನು ತನ್ನ ಪ್ರಿಯ ಪಾತ್ರಳಾದ ರಾಣಿಗೆ ತನ್ನ ಬಾಯಿಯಲ್ಲಿದ್ದ ವೀಳ್ಯವನ್ನು ತಿನ್ನಿಸಿದನು ಅವಳು ತಾಂಬೂಲವನ್ನು ಮುಖದಲ್ಲಿ ಇಟ್ಟುಕೊಂಡು ಒಂದಕ್ಕೆ ಸರಿಯಬೇಕೆನ್ನು ವಷ್ಟರಲ್ಲಿ ಬಾದಶ

ಹನು ನಗುತ್ತ ಅವಳಕೈಯನ್ನು ಹಿಡಿದುಕೊಂಡನು ಈ ಪ್ರಕಾರ ಮಾಡಿದ ಬಾದಶಹನ ಕೃತಿಯನ್ನು ಕೃತಿಯನ್ನು ಕಂಡು ಬೇಗಮ್ಮಳಿಗೆ ನಗೆಯು ಬಂತುಮತ್ತು ಆ ನಗೆಯಸಂಗಡಲೇ (ಬಾಯೊಳಗಿನ ಉಗುಳಿನ ಒಂದುಹನಿ ಯು ಬಂದು ಬಾದಶಹನ ತೊಡೆಯಮೇಲೆ ಬಿತ್ತು ಆ ಕೂಡಲೆ ಬಾದಶಹನು ಆವಿಷಯದಮೇಲೆ ಒಂದು ಸಮಸ್ಯೆಯನ್ನು ರಚಿಸಿ ಸಭಾಸ್ಥಾನಕ್ಕೆ ಬಂದು ಈ ಸಮಸ್ಯೆಯನ್ನು ಪೂರ್ಣಮಾಡಿರಿ ! ಎಂದು ಹೇಳಿದನು. ಸಭೆಯಲ್ಲಿದ್ದ ಪಂಡಿತರೆಲ್ಲರೂ ಸುಮ್ಮನೆ ಕುಳಿತುಕೊಂಡು ಬಿಟ್ಟರು. ಆಗ ಬೀರಬಲನು ಎದ್ದು ನಿಂತು ಈ ಕೆಳಗೆ ಬರೆದ ಪದ್ಯವನ್ನು ಹೇಳಿದನು.

" ಏಕ ಸಮೈಪ್ರಿಯಸೇ ಮುಖಸೆ ಮುಖ ಜೋಲಕೆ ಆಪತಮೋಲ
ಖವಾಯೋ । ಚಂದ್ರಮುಖೀ ಮುಖನಾಯಕೆ ಆಪನ ಜ್ಯೋಂಕರ
ಜೋರಕೆ ಶೀಶನವಾಯೋ ॥ ಲಾಲ ಉರೋಜ ಗಹೆ ಕರಸೆ ಉಮ
ಗೀಛತಿಯಾ ಜಿಯರಾ ಹುಲಸಾಯೋ । ಮುಸಕಾತಹಿ ಪೀಕಗಿರಿ
ಮುಖಸೋ ಮನೋಚಂದ್ರಕೋಬೀರ ಕುಸೂಮ ಚುವಾಯೋ ॥

ಬೀರಬಲನಿಗಂತೂ ಅಂತಃಪುರದಲ್ಲಿ ನಡೆದ ಯಾವ ಸಮಾಚಾರವೂ ಗೊತ್ತಿಯಿಲ್ಲ, ಹೀಗಿದ್ದು ಸಮಯಾನುಸಾರವಾಗಿ ಸಮಸ್ಯೆಯನ್ನು ಸರಿ ಯಾಗಿ ಹ್ಯಾಗೆ ಪೂರ್ಣಮಾಡಿದನು ಎಂದು ಬಾದಶಹನಿಗೆ ಅತ್ಯಾಶ್ಚರ್ಯ ವಾಯಿತು.

—(೪೦ " ಕಿಹಿಕಾರಣ ಡೋಲಮೆ ಹಾಲತಪಾನೀ. ")—

ಒಂದುದಿವಸ ಬಾದಶಹನು ಮೇಲುಪ್ಪರಿಗೆಯ ಮುಂದಿನ ಭಾಗದಲ್ಲಿ ನಿಂತುಕೊಂಡು ಮಾರ್ಗದಲ್ಲಿ ನಡೆಯುವ ಚಮತ್ಕಾರಗಳನ್ನು ನೋಡುತ್ತಿದ್ದ ನು ಆಗ ಅಕಸ್ಮಾತ್ತಾಗಿ ಬಗಲೊಳಗೆ ನೀರಿನಿಂದತುಂಬಿದ ಕೊಡವನ್ನು ಹೊ ತ್ತುಕೊಂಡು ಹೋಗುತ್ತಿರುವ ಒಬ್ಬ ಸುಂದರಿಯಮೇಲೆ ಬಾದಶಹನದೃಷ್ಟಿ ಯು ಬಿತ್ತು, ಅವಳು ಹೋಗುತ್ತಿರುವಾಗ ಕೊಡದೊಳಗಿನನೀರು ಅಲ್ಲಾಡು ತ್ತಿತ್ತು, ಅದನ್ನು ನೋಡಿದ ಕೂಡಲೆ ಬಾದಶಹನು (ಮೇಲೆ ಬರೆದ) ಒಂದು ಸಮಸ್ಯೆಯನ್ನು ರಚಿಸಿ, ಸಭಾಸ್ಥಾನಕ್ಕೆಬಂದು ಈ ಸಮಸ್ಯೆಯನ್ನು ಪೂರ್ಣ ಮಾಡು ? ಎಂದು ಬೀರಬಲನಿಗೆ ಆಜ್ಞಾಪಿಸಿದನು ಬೀರಬಲನು ಆ ಸಮಸ್ಯೆ ಯನ್ನು ಈಪ್ರಕಾರ ಪೂರ್ಣಮಾಡಿದನು.

" ಏಕಸಮೈ ಜಲಲಾವನಕೋ ಘರಸೋನಿಕಸೀ ಅಬಲಾಬ್ರಜನಾರೀ
ಜಾತಹಿಕೂಪಮೆ ಡೋಲ ಭರ್‍ಯೋ ಜಲಪೈ ಚನಮೋ ಅಗಿಯಾಮಸ

ಕಾನೀ ॥ ದೇಖಿಸಭಾ ಉಸರೀಛತಿಯಾ ಕವಿಸತ್ಯಕಹ್ಯೆ ಮನಸಾಲಲಚಾನೀ। ಹಾಥವಿನಾ ಪಛಿತಾತರಹೀ ಇಹಿಕಾರಣ ಶೋಭನೆಹಾಲತಪಾನೀ ॥ ”

ಬಾದಶಹನು ಈ ಕವನವನ್ನು ಕೇಳಿ ಬಹುಪ್ರಸನ್ನನಾದನು.

—(೪೧. “ ಕನಿಸ್ಯೋರವಿ ಘೋಡ ಪಹಾಡಕೆ ತಾಈ ”)—

ಬಾದಶಹನು ಒಂದುದಿವಸ ಒಂಟಿಗನಾಗಿ ಯಮುನಾತಟಾಕಕ್ಕೆ ಸಂಚಾರಾರ್ಥವಾಗಿ ಹೋಗಿದ್ದನು, ಅಲ್ಲಿ ಒಬ್ಬ ಸುಂದರ ತರುಣಿಯು ತನ್ನ ಮೈಮೇಲಿನ ವಸ್ತ್ರಗಳನ್ನೆಲ್ಲ ತೆಗೆದಿಟ್ಟು ಒಂದು ಧೋತರವನ್ನುಟ್ಟುಕೊಂಡು ಸ್ನಾನಾರ್ಥವಾಗಿ ನದಿಯ ಪಾತ್ರೆಯಲ್ಲಿಳಿದು ಅವಗಾಹನ ಸ್ನಾನವನ್ನು ಮಾಡಿದಳು. ನೀರೊಳಗೆ ಮುಳುಗಿ ಮೇಲಕ್ಕೆದ್ದ ಕೂಡಲೆ ಅವಳ ಮುಂಗುರುಳುಗಳು ಮೋರೆಯನ್ನು ಆವರಿಸಿಕೊಂಡಿದ್ದವು ಅದರಿಂದ ಅವುಗಳನ್ನು ಅವಳು ತನ್ನ ಎರಡೂಕೈಗಳಿಂದ ಹಿಂದಕ್ಕೆ ಸರಿಸಿಕೊಂಡಳು, ಅದನ್ನು ನೋಡಿ ಬಾದಶಹನು ಒಂದು ಸಮಸ್ಯೆಯನ್ನು ರಚನಾಮಾಡಿಕೊಂಡು ಸಭೆಗೆ ಬಂದ ಕೂಡಲೇ ಬೀರಬಲನನ್ನು ಕರೆದು- “ ನಿಕಸ್ಯೋರವಿ ಘೋಡ ಪಹಾಡಕೆ ತಾಈ ಎಂದು ಹೇಳಿ ಇದನ್ನು ಪೂರ್ಣಮಾಡು ! ಎಂದು ಆಜ್ಞಾಪಿಸಿದನು; - ಆಗ ಬೀರಬಲನು—

“ ನಾತಸನ್ಯೆ ರಸಕೇಲಿಕಿಯೋ ಅರುಘೋರಭಯೆ ಉಠಿಮಜ್ಜನ ಥಾಈ
ನೀರಕೆಭೀರಮೆ ದೈಡುಬಕೀ ಯಮುನಾಜಲಮೆ ಜಸಚಂದ್ರಿಕಾಛಾಈ ॥
ಲೈಡುಬಕೀ ಜಲಸೋ ನಿಕಸೀ ಉರಝೀ ಅಲಕೈಮುಜಸ್ಯೆ ಛಿತರಾಈ ।
ದೋಊ ಕರಕೇಶ ಸವಾರಲಿಯೆ ನಿಕಸ್ಯೋರವಿಘೋಡ ಪಹಾಡಕೆತಾಈ॥

ಈ ಪದ್ಯವನ್ನು ಕೇಳಿದ್ದರಿಂದ ಬಾದಶಹನು ಅವನನ್ನು ಬಹಳ ಪ್ರಶಂಸೆ ಮಾಡಿದನು.

—(೪೨. ದೀಪದ ಬುಡದಲ್ಲಿ ಕತ್ತಲೆ.)—

ಒಂದು ಸಮಯದಲ್ಲಿ ಬಾದಶಹನೂ ಬೀರಬಲನೂ ಕೂಡಿಕೊಂಡು ಪಟ್ಟಣದ ಕಡೆಯ ಉಕ್ಕಡದಕೋಟೆಯ ಕೊತ್ತಳದಮೇಲೆ ಕುಳಿತುಕೊಂಡು ಆ ಸಮಂತಾದ್ಭಾಗದಲ್ಲಿದ್ದ ವನಶ್ರೀಯನ್ನು ಅವಲೋಕಿಸುತ್ತ ಕುಳಿತುಕೊಂಡಿದ್ದರು, ಆಗ ಬಾದಶಹನು ದೂರದಲ್ಲಿ ಅವಲೋಕಿಸುತ್ತಿರಲು ಕಳ್ಳರು ಸುಲಿದುಕೊಳ್ಳುತ್ತಿರುವ ಒಬ್ಬ ಪಥಿಕನು ಕಂಡುಬಂದನು, ಅಷ್ಟರಲ್ಲಿ ಕಳ್ಳರಿಂದ ಬಿಡಲ್ಪಟ್ಟವನಾಗಿ ಆ ಪಥಿಕನು, ಬಾದಶಹನು ಕುಳಿತುಕೊಂಡಿದ್ದ ಕೊತ್ತ

ಳದ ಬುಡದಲ್ಲಿ ಬಂದು ಬಾದಶಹನಿಗೆ ಸಲಾಮುಮಾಡಿ "ಪೃಥ್ವೀನಾಥ? ದರಿದ್ರನಾದ ನಾನು ತಮ್ಮ ಸಮ್ಮುಖದಲ್ಲಿಯೇ ಕಳ್ಳರಿಂದ ಸುಲಿಗೆಮಾಡಿಸಿಕೊಳ್ಳಲ್ಪಟ್ಟೆನು" ಎಂದು ನಿವೇದಿಸಿದನು. ಆಮಾತು ಬಾದಶಹನ ಕಿವಿಗೆ ಬಿದ್ದ ಕೂಡಲೆ ಸಿಟ್ಟಿಗೆದ್ದು ಬೀರಬಲನಕಡೆಗೆ ನೋಡುತ್ತ - "ಬೀರಬಲ! ನೀನು ರಾಜ್ಯದಲ್ಲಿ ಮಾಡಿದ್ದ ಯೋಗ್ಯವ್ಯವಸ್ಥೆಯು ಇದೇಪ್ರಕಾರವಿರುವಂತೆ ಕಂಡುಬರುತ್ತದೆ. ನಮ್ಮ ಸಮ್ಮುಖದಲ್ಲಿಯೇ ಈ ಬಡವನನ್ನು ಕಳ್ಳರು ಸುಲಿದುಕೊಂಡುಬಿಟ್ಟರು, ಅಂದಮೇಲೆ ನಮ್ಮ ಅಪರೋಕ್ಷದಲ್ಲಿ ಪ್ರಜೆಗಳದುರವಸ್ಥೆಯು ಏನಾಗುತ್ತಿರಬಹುದು" ಎಂದು ಪ್ರಶ್ನೆಮಾಡಿದನು, ಆಗ ಬೀರಬಲನು ಧೈರ್ಯದಿಂದ "ಪೃಥ್ವೀಪತಿಯೇ? ದೀಪದ ಬುಡದಲ್ಲಿ ಕತ್ತಲೆಯು ಇದ್ದೇಯಿರುವದು" ಎಂದು ಉತ್ತರಕೊಟ್ಟನು. ಈ ಉತ್ತರದಿಂದ ಬಾದಶಹನಿಗೆ ಆನಂದವಾಯಿತು.

—[೪೩. ಯಾವಕಾಲವು ಹಿತಕರವಾದದ್ದು!]—

ಒಂದುದಿವಸ ಬಾದಶಹನು ರಾಜಕಾರ್ಯದಿಂದ ನಿವೃತ್ತನಾಗಿ ಸಭಾಸದರೊಡನೆ ವಿನೋದದಿಂದ ಮಾತಾಡುತ್ತ ಕುಳಿತುಕೊಂಡಿದ್ದನು, ಆಗ ಎಲ್ಲ ಸಭಾಸದರನ್ನು ಕುರಿತು- "ಪ್ರಜೆಗಳಿಗೆ ಯಾವಕಾಲವು ಹಿತಕರವಾದದ್ದು" ಎಂದು ಪ್ರಶ್ನೆಮಾಡಿದನು. ಆಗ ಅಲ್ಲಿ ಕುಳಿತುಕೊಂಡಿದ್ದ ಕೆಲವರು ಹಿಮಕಾಲವು ಹಿತವಾದದ್ದೆಂದೂ, ಕೆಲವರು ಉಷ್ಣಕಾಲವು ಹಿತವಾದದ್ದೆಂತಲೂ ಕೆಲವರು ವರ್ಷಾಕಾಲವು ಹಿತಕರವಾದದ್ದೆಂದೂ ತಮ್ಮತಮ್ಮ ಮನಸ್ಸಿಗೆ ತಿಳಿದಹಾಗೆ ಹೇಳಿದರು. ಈ ಉತ್ತರದಿಂದ ಬಾದಶಹನಿಗೆ ಸಂತೋಷವಾಗಲಿಲ್ಲ ಆಗ ಅವನು ಬೀರಬಲನಿಗೆ ಕೇಳಿದನು ಆಗ ಬೀರಬಲನು- "ಸ್ವಾಮಿೀ ಹೊಟ್ಟೆತುಂಬಿದ ಮೇಲೆ ಎಲ್ಲಕಾಲಗಳೂ ಹಿತಕರಗಳಾಗಿಯೇ ಪರಿಣಮಿಸುವವು ಬುಭುಕ್ಷಿತನಾದವನಿಗೆ ಯಾವಕಾಲದಲ್ಲಿ ಯಾದರೂ ಸುಖವು ದೊರೆಯಲಾರದು" ಎಂದು ಹೇಳಿದನು, ಇದರಿಂದ ಬಾದಶಹನಿಗೆ ಸಂತೋಷವಾಯಿತು.

—[೪೪. ಲೋಟಾ ನಥಾ.]—

ಒಂದುದಿವಸ ಬಾದಶಹನು ಬೀರಬಲನನ್ನು ಕುರಿತು - "ಬ್ರಾಹ್ಮಣನು ನೀರಡಿಸಿದ್ದು ಯಾಕೆ? ಮತ್ತು ಕತ್ತೆಯು ಉದಾಸೀನತೆಯನ್ನು ಯಾಕೆಧರಿಸಿದೆ!" ಎಂದು ಎರಡು ಪ್ರಶ್ನೆಗಳನ್ನು ಮಾಡಿದನು. ಆ ಕೂಡಲೆ ಬೀರಬಲನು "ಲೋಟಾನಥಾ" ಎಂದು ಉತ್ತರಕೊಟ್ಟನು. ಅದುಹ್ಯಾಗೆ ವಿವರಿಸಿಹೇಳು? ಎಂದು ಬಾದಶಹನು ಕೇಳಿದನು, ಅದಕ್ಕೆ ಬೀರಬಲನು "ಬ್ರಾ

ಹ್ಮಣನಹತ್ತಿರ ತಂಬಿಗೆಯು ಇಲ್ಲದ್ದರಿಂದ ಅವನು ನೀರಡಿಸಿ ಇರಬೇಕಾಯಿ ರಬೇಕಾಯಿತು, ಕತ್ತೆಗೆ ಮನಮುರಿ ಸಂಚಾರವಾಗದ್ದರಿಂದ ಅದು ಉದಾ ಸೀನತೆಯನ್ನು ಧರಿಸಿದೆ" ಎಂದು ವಿಸ್ತರಿಸಿ ಹೇಳಿದನು. ಬಾದಶಹನು ತಾ ನುವಮಾಡಿದ ಎರಡು ಪ್ರಶ್ನೆಗಳಿಗೆ ಸಮರ್ಪಕವಾದ ಒಂದೇ ಉತ್ತರವು ಬಂ ದದ್ದನ್ನು ನೋಡಿ ಸಂತೋಷಿತನಾದನು.

—[೪೫. ನಾಲ್ಕು ಪ್ರಶ್ನೆಗಳು.]—

ಒಂದುಸಾರೆ ಬಾದಶಹನು ಬೀರಬಲನಿಗೆ ಕೇಳುತ್ತಾನೆ;- "ಮಳೆಗಾ ಲವನ್ನು ಯಾರು ಅಪೇಕ್ಷಿಸುವರು! ಬಿಸಿಲನ್ನು ಅಪೇಕ್ಷಿಸುವವರು ಯಾರು ವಾಕ್ಪಟುತೆಯನ್ನು ಯಾರು ಅಪೇಕ್ಷಿಸುವರು? ಯಾರು ಮೌನವಾಗಿರುವ ದನ್ನು ಅಪೇಕ್ಷಿಸುವರು!" ಈ ನಾಲ್ಕು ಪ್ರಶ್ನೆಗಳಿಗೆ ನಿನ್ನಿಂದ ಸಮರ್ಪಕ ಉತ್ತರವು ದೊರೆಯದಿದ್ದರೆ ನಿನಗೆ ಪ್ರಾಣದಂಡನೆಯನ್ನು ವಿಧಿಸುತ್ತೇನೆಂ ದು ಹೇಳಿದನು. ಆ ಕೂಡಲೆ ಬೀರಬಲನು;—

"ಮಾಲೀಚಾಹ್ಯೆ ಬರಸನಾ, ಧೋಬೀಚಾಹ್ಯೆ ಧೂಪ।
ಸಾಹುಜುಚಾಹ್ಯೆ ಬೋಲನಾ, ಚೋರಜುಚಾಹ್ಯೆ ಧೂಪ" ॥

ಬಾದಶಹ—ಈ ಪದ್ಯವನ್ನು ನೀನು ಒಳ್ಳೇ ಸರಸಾಗಿ ಹೇಳಿದಿ? ಆದರೆ ಅದರಿಂದ ನನಗೆ ಆಗತಕ್ಕಷ್ಟು ಸಂತೋಷವಾಗಲಿಲ್ಲ, ಆದರಿಂದ ಮತ್ತೊಂ ದು ಪ್ರಕಾರವಾಗಿ ಹೇಳು!

"ಅತಿಕಾಭಲಾ ನ ಬರಸನಾ, ಅತಿಕೀ ಭಲೀ ನ ಧೂಪ।
ಅತಿಕಾಭಲಾ ನ ಬೋಲನಾ, ಅತಿಕೀಭಲೀ ನ ಚೂಪ॥

—(೪೬. ಯಾರು ಏನನ್ನು ಮಾಡಲಾರರು!)—

ಒಂದುದಿವಸ ಬಾದಶಹನು ರಾಜಕಾರ್ಯಗಳಿಂದನಿವೃತ್ತನಾಗಿ ವಿನೋ ದದಿಂದ ಮಾತಾಡುತ್ತ ಕುಳಿತಿರಲು, ಬಾದಶಹನಿಗೆ ಒಂದುಪದ್ಯವು ಸ್ಮರಣೆಗೆ ಬಂತು ಅದುಯಾವದೆಂದರೆ;-

ಕಹಾನ ಅಬಲಾ ಕರಸಕ್ಕೆ, ಕಹಾನಸಿಂಧು ಸಮಯ।
ಕಹಾನ ಪಾವಕನು ಜಲ್ಕೈ ಕಾಹಿಕಾಲ ನಹಿಖಾಯ॥

ಈ ಪದ್ಯದ ಉತ್ತರವನ್ನು ಈಗಿಂದೀಗ ಹೇಳಬೇಕೆಂದು ಬೀರಬಲ ನಿಗೆ ಆಜ್ಞಾಪಿಸಿದನು. ಬೀರಬಲನು - "ಸುತನಹಿ ಅಬಲಾ ಕರಸಕ್ಕೆ ಯಶ ನಹಿಸಿಂಧು ಸಮಾಯ। ಧರ್ಮನಪಾವಕನು ಜಲ್ಕೆ: ನಾಮಕಾಲ ನಹಿಖಾ ಯ॥" ಎಂಬ ಪದ್ಯದಿಂದ ಉತ್ತರಕೊಟ್ಟನು. ಈ ಉತ್ತರದಿಂದ ಬಾದಶ

ಹನು ಸಂತುಷ್ಟನಾಗಿ ಪಾರಿತೋಷಕವನ್ನಿತ್ತನು,

೪೭. ನೂರು ಗೋವುಗಳನ್ನು ರಕ್ಷಿಸುವದೂ, ಅಥವಾ ಕೊಲ್ಲಿಸುವದೂ ನಿಮ್ಮ ಕೈಯಲ್ಲಿಯೇ ಅದೆ.

ಒಂದುದಿವಸ ಬೀರಬಲನಿಗೂ ಮತ್ತು ತಾನಸೇನನಿಗೂ ತಮ್ಮ ತಮ್ಮಲ್ಲಿದ್ದ ಗುಣಗಳು ಶ್ರೇಷ್ಠವಾದದ್ದೆಂಬದರ ಬಗ್ಗೆ ವಾದವಿವಾದವು ನಡೆಯಿತು, ಆಗ ಬಾದಶಹನು- "ಈಪ್ರಕಾರ ನೀವಿಬ್ಬರೂ ವಾದವಿವಾದಮಾಡುತ್ತ ಕುಳಿತುಕೊಳ್ಳುವದು ಸರಿಯಾದದ್ದಲ್ಲ: ಆದ್ದರಿಂದ ನೀವಿಬ್ಬರೂ ಕೂಡಿ ಯಾವನಾದರೊಬ್ಬ ಮೂರನೆಯವನ ಹತ್ತರ ಹೋಗಿ ನ್ಯಾಯದ ನಿರ್ಣಯವನ್ನು ಮಾಡಿಕೊಂಡು ಬರಿ" ಎಂದು ಹೇಳಿದನು. ಆಗ ಅವರಿಬ್ಬರು ತಾವು ಯಾರ ಬಳಿಯಲ್ಲಿ ಹೋಗೆಂದು ಹೇಳುವಿರೋ ಅಲ್ಲಿಗೆ ಹೋಗುತ್ತೇವೆ ಎಂದು ಉತ್ತರಕೊಡಲು, ಬಾದಶಹನು- ಮಹಾರಾಣಾ ಪ್ರತಾಪಸಿಂಹನ ಬಳಿಯಲ್ಲಿ ಹೋಗಿರಿ; ಎಂದು ಆಜ್ಞಾಪಿಸಿದನು. ಆ ಕೂಡಲೇ ಅವರಿಬ್ಬರು ಉದಯಪುರಕ್ಕೆ ಬಂದರು, ತಾನಸೇನನು ಗಾನನಿಪುಣನಿದ್ದನು ಅವನು ಮಹಾರಾಣಾಜಿಯ ಬಳಿಯಲ್ಲಿ ಹೋಗಿ ಗಾಯನವಾದನವನ್ನಾರಂಭಿಸಿದನು ಬೀರಬಲನು ಸಮಯನಿರೀಕ್ಷಣೆ ಮಾಡುತ್ತ ಕುಳಿತುಕೊಂಡನು. ಆಗ ಬೀರಬಲನ ಮನಸ್ಸಿನಲ್ಲಿ ತಾನಸೇನನು ತನ್ನ ಗಾನ ನೈಪುಣ್ಯದಿಂದ ಮಹಾರಾಣಾಜಿಯ ಮನಸ್ಸನ್ನು ಒಲಿಸಿಕೊಂಡು ಜಯಪತ್ರವನ್ನು ಹೊಂದಿ ಹೋಗಬಹುದು, ಎಂದು ಯೋಚಿಸಿ ಸ್ವಲ್ಪಮುಂದೆ ಬಂದು ನಮಸ್ಕಾರ ಮಾಡಿ- ಮಹಾರಾಣಾಜಿಯವರೇ? ನಾವಿಬ್ಬರೂ ಬಾದಶಹನಿಂದ ಆಜ್ಞಾಪ್ತರಾಗಿ ತಮ್ಮ ಸನ್ನಿಧಿಗೆ ಬರುವ ಸಮಯದಲ್ಲಿ ನಾನು ತಮ್ಮ ಪುಷ್ಕರಕ್ಷೇತ್ರದಲ್ಲಿ ಹೋಗಿ "ನಾನು ಮಹಾರಾಣಾಜಿಯವರಿಂದ ಜಯಪತ್ರವನ್ನು ಹೊಂದಿದರೆ ಒಂದುನೂರು ಗೋವುಗಳನ್ನು ದಾನಮಾಡುತ್ತೇನೆಂದು" ಸಂಕಲ್ಪಮಾಡಿಕೊಂಡು ಬಂದಿದ್ದೇನೆ, ತಾನಸೇನನು ಖ್ವಾಜೇಸಾಹೇಬನ ದರಗಾಕ್ಕೆ ಹೋಗಿ ನನಗೆ ಈ ಪ್ರಸಂಗದಲ್ಲಿ ರಾಣಾಜಿಯವರು ಮಾನಪತ್ರವನ್ನು ಕೊಟ್ಟರೆ ನಿನ್ನ ದರಗಾದ ಎದುರಿಗೆ ಒಂದು ನೂರು ಆಕಳುಗಳನ್ನು ಕೊಲ್ಲುತ್ತೇನೆ; - ಎಂಬದಾಗಿ ನಿಶ್ಚಯಮಾಡಿಕೊಂಡು ಬಂದಿದ್ದಾನೆ, ಆದ್ದರಿಂದ ನೂರು ಆಕಳುಗಳನ್ನು ಕೊಲ್ಲಿಸುವದೂ ಅಥವ ಉಳಿಸುವದೂ ನಿಮ್ಮ ಕೈಯೊಳಗೇ ಅದೆ ಎಂದನು. ಆಗ ರಾಣಾಜಿಯು ಬೀರಬಲನು ಒಳ್ಳೇ ಗುಣವಂತನಿದ್ದಾನೆ ಎಂದು ಬರೆದು ಕಳುಹಿಸಿದನು. ತಾನಸೇನನು ಬಾಯಿಮುಚ್ಚಿಕೊಂಡು ಸುಮ್ಮನೇ ಬಂದುಬಿಟ್ಟನು.

೪೮. ಖುರಾನ ಎಂಬ ಗ್ರಂಥಕ್ಕೆ (೦) ಬಿಂದುವಿಲ್ಲದೆ ಇರುವ ಶಬ್ದಗಳಿಂದ ಮಾಡಿದ ಟೀಕೆಯು.

ಮುಸಲ್ಮಾನ ಜಾತಿಯಲ್ಲಿ ಒಳ್ಳೇ ಪ್ರಸಿದ್ಧ ವಿದ್ವಾಂಸನಾಗಿಯೂ ಪ್ರತಿಷ್ಟಿತ ಮಂತ್ರಿಯಾಗಿಯೂ ಇದ್ದ ಶೇಖಫೈಜಿ ಎಂಬವನು ಖುರಾನಕ್ಕೆ "ಸವಾಹತ ಉಲ್ ಇಲಹಾಮ್" ಎಂಬ ಹೆಸರಿನ ಟೀಕಾಗ್ರಂಥವನ್ನು ಬರೆದನು. ಅದರಲ್ಲಿ ಬಿಂದುವಿಲ್ಲದ ಶಬ್ದಗಳೇಬಂದಿದ್ದವು, ಇಂಥ ಅಮೌಲಿಕಗ್ರಂಥವನ್ನು ಹಿಂದಕ್ಕೆಯಾರೂ ರಚಿಸಿದ್ದಿಲ್ಲ; ಯಾಕಂದರೆ ಫಾರಸೀ, ಮತ್ತೂ ಅರಬ್ಬೀ ಅಕ್ಷರಗಳಲ್ಲಿ ಬಿಂದುವಿಲ್ಲದ ಅಕ್ಷರಗಳು ಹದಿನೈದು, ಬಿಂದುವಿನಿಂದ ಕೂಡಿದ ಅಕ್ಷರಗಳು ಹದಿನೆಂಟು ಇರುವವು ಈ ಕೆಲಸವು ಒಳ್ಳೇ ಪ್ರಶಂಸಾರ್ಹವಾಗಿತ್ತು, ಆದರೆ "ಬಿಸಮಿಲ್ಲಾ" ಎಂಬ ಶಬ್ದವನ್ನು ಬರೆಯುವದಕ್ಕೆ ಅವನಿಗೆ ಗ್ರಂಥಾರಂಭದಲ್ಲಿಯೇ ಸಂದೇಹವುಂಟಾಯಿತು. ಯಾಕಂದರೆ- ಈ ಶಬ್ದವನ್ನು ಬರೆಯುವದು ಬಹುಕಾಲದಿಂದ ಮುಸಲ್ಮಾನರಲ್ಲಿ ಪ್ರಚಾರವಿತ್ತು ಆದರೆ ಆ ಶಬ್ದವು ಬಿಂದುವಿಲ್ಲದೆ ಬರಿಯಲಿಕ್ಕೇ ಬರುವಂತೆಯುಳ್ಳಿಲ್ಲ ಅದರಿಂದ ಅವನು ಬಹಳಚಿಂತೆಗೊಳಗಾದನು. ಕಡೆಗೆ ಅವನು ಬೀರಬಲನ ಬಳಿಗೆ ಬಂದು, "ಮಿತ್ರವರ್ಯ ? ನಾನು ಬಿಂದುವಿಲ್ಲದ ಶಬ್ದಗಳಿಂದ ಖುರಾನಕ್ಕೆ ಟೀಕೆಯನ್ನು ಬರೆದಿದ್ದೇನೆ. ಆದರೆ ಗ್ರಂಥಾರಂಭದಲ್ಲಿ "ಬಿ ಸ ಮಿ ಲ್ಲಾ" ಎಂಬ ಶಬ್ದವನ್ನು ಹಾಕುವಪದ್ಧತಿಯು ನಮ್ಮಜನರಲ್ಲ ಉಂಟು; ಆದರೆ ಆಶಬ್ದವು ಬಿಂದುವಿಲ್ಲದೆ ಬರೆಯಲಿಕ್ಕೇ ಬರುವದಿಲ್ಲ. ಆದದರಿಂದ ಆ ಸ್ಥಳದಲ್ಲಿ ಯಾವಶಬ್ದದ ಯೋಜನೆಮಾಡಲಿ" ಎಂದು ಕೇಳಿದನು, ಬೀರಬಲನು ಒಳ್ಳೇ ದೂರದರ್ಶಿಯಾಗಿದ್ದದರಿಂದ ಆ ಕೂಡಲೆ "ಕಲಮಾ" ಎಂದು ಬರೆ; ಎಂದುಹೇಳಿದನು. ಆಗ ಫೈಜಿಯು ಅವನಜಾಣತನಕ್ಕೆ ತಲೆದೂಗಿದನು. "ಕ ಲ ಮಾ" ಎಂಬ ಶಬ್ದದಲ್ಲಿ ಬಿಂದುವೇ ಬರುವಂತೆ ಇದ್ದಿಲ್ಲ, ಕಡೆಗೆ ಫೈಜಿಯು "ಪಂಡಿತ ಮಹಾಶಯ ? ಈ ಒಂದೇ ಶಬ್ದವನ್ನು ನೀನು ನನಗೆ ಹೇಳಿದ್ದರಿಂದ ಈ ಗ್ರಂಥದಲ್ಲಿ ಗುರುವಿನ ಸ್ಥಾನದಲ್ಲಿ ನಿನ್ನಹೆಸರನ್ನು ಬರೆಯುತ್ತೇನೆ, ಎಂದು ಹೇಳಿದನು.

—(೪೯ ಯಾತರದು ಒಳ್ಳೇದು.)—

ಒಂದು ದಿನಸ ಬಾದಶಹನು ಓಲಗದಲ್ಲಿ ಕುಳಿತುಕೊಂಡಿದ್ದನು. ರಾಜಕಾರ್ಯಗಳ ವಿಚಾರಣೆಯು ನಡೆದಿತ್ತು ? ಅಷ್ಟರಲ್ಲಿ ಬೀರಬಲನು ಸಭಾಸ್ಥಾನಕ್ಕೆ ಬಂದನು ಅದನ್ನುಕಂಡು ಬಾದಶಹನು;- "ಕ್ಷೀರವು ಯಾವ

ಪ್ರಾಣಿಯದು ಒಳ್ಳೇದು ; ಯಾವವೃಕ್ಷದ ಪರ್ಣಗಳು ಶ್ರೇಷ್ಟವು ಯಾವ ಪುಷ್ಟವು ಶ್ರೇಷ್ಟವಾದದ್ದು ; ಯಾವ ಫಲವು ಉತ್ತಮ ? ಯಾವ ರಾಜನು ಶ್ರೇಷ್ಟನು ಯಾವ ಮಾಧುರ್ಯವು ಸ್ರೇಷ್ಟವಾದದ್ದು ? " ಎಂದು ಪ್ರಶ್ನೆಮಾಡಿದನು ಬೀರಬಲನ ಹೊರತು ಉಳಿದಸಭಾಸದರೆಲ್ಲರು ಸುಮ್ಮನೆ ಕುಳಿತು ಕೊಂಡರು ಬೀರಬಲನು ಕೈಮುಗಿದು " ಜೀಯಾ ! ಕ್ಷೀರವು ಮಾತೆಯದು ಶ್ರೇಷ್ಟವಾದದ್ದು ಯಾಕಂದರೆ, ಸ್ತನ್ಯಪಾನದಿಂದಲೇ ಯಾವತ್ತು ಪ್ರಾಣಿಗಳ ಪಾಲನಪೋಷಣೆ ಯಾಗುವದು ವೀಳ್ಯದ ಎಲೆಯು ಶ್ರೇಷ್ಟವಾದದು: ಯಾಕಂದರೆ ಯಾವದಾದರೊಂದು ಕಾರ್ಯಕ್ಕೆ ಕೈಹಾಕಿದ ಮನುಷ್ಯನಿಗೆ, ಅವನ ಯಜಮಾನನು ನೆರೆದ ಸಭೆಯಲ್ಲಿ ವೀಳ್ಯವನ್ನು ಕೊಡುತ್ತಾನ ಅದರಿಂದ ವೀಳ್ಯವನ್ನು ಸ್ವೀಕರಿಸಿದ ಮನುಷ್ಯನು ತನ್ನ ಪ್ರಾಣಾಂತ್ಯದವರೆಗೂ ಕಾರ್ಯವನ್ನು ಮಾಡಿಯೇ ತೋರಿಸುತ್ತಾನೆ. ಪುಷ್ಪಗಳಲ್ಲಿ ಹತ್ತಿಯ ಹೂವು ಶ್ರೇಷ್ಟವಾದದ್ದು ಯಾಕಂದರೆ ಆಪುಷ್ಪದಿಂದಲೇ ಯಾವತ್ತು ಮನುಷ್ಯಪ್ರಾಣಿಗಳ ಮಾನವು ಉಳಿಯುತ್ತದೆ. ಇನ್ನು ಫಲಗಳಲ್ಲಿ ಪುತ್ರಫಲವು ಅಧಿಕವಾದದ್ದು; ಯಾಕಂದರೆ ಆ ಪುತ್ರನಿಂದ ಕುಲಕೋಟಿಗಳೆಲ್ಲ ಉದ್ಧೃತವಾಗುತ್ತವೆ ರಾಜರಲ್ಲಿ ಇಂದ್ರನು ಶ್ರೇಷ್ಟನಾದವನು ಯಾಕಂದರೆ ಇಂದ್ರನು ವೃಷ್ಟಿಯನ್ನುಂಟು ಮಾಡಿ ಯಾವತ್ತೂ ಚರಾಚರಗಳನ್ನು ರಕ್ಷಿಸುತ್ತಾನೆ. ಮಾಧುರ್ಯದಲ್ಲಿ ವಾಂಙ್ಮಾಧುರ್ಯವು ಶ್ರೇಷ್ಟವಾದದ್ದು ಯಾಕಂದರೆ ವಾಂಙ್ಮಾಧುರ್ಯದಿಂದ ಯಾವತ್ತೂ ಜನರ ಮನಸ್ಸನ್ನು ಒಲಿಸಿಕೊಳ್ಳುವದಕ್ಕೆ ಬರುತ್ತದೆ.

—(೫೦. ದಂಡನೆಗೆ ಪ್ರತಿಯಾಗಿ ಪಾರಿತೋಷಕವು.)—

ದಿಲ್ಲಿಯಲ್ಲಿ ಒಬ್ಬ ಮನುಷ್ಯನಿದ್ದನು ಅವನ ಮುಖವನ್ನು ಪ್ರಾತಃಕಾಲದಲ್ಲಿ ಎದ್ದಕೂಡಲೆ ಅವಲೋಕನ ಮಾಡಿದರೆ, ಸಂಜೆಯ ವರೆಗೆ ನೋಡಿದವನಿಗೆ ಅನ್ನವು ಸಿಗುವದಿಲ್ಲ " ಎಂದು ಜನರಲ್ಲಿ ದೃಢನಂಬಿಗೆಯು ಉತ್ಪನ್ನವಾಗಿತ್ತು ಅದರಿಂದ ಮಧ್ಯಾಹ್ನದ ವರೆಗೆ ಆ ಮನುಷ್ಯನ ಮುಖವನ್ನು ನೋಡಲಿಕ್ಕೆ ಯಾರೂ ಇಷ್ಟಪಡುತ್ತಿದ್ದಿಲ್ಲ ಈವಾರ್ತೆಯು ಕರ್ಣೋಪಕರ್ಣವಾಗಿ ಬಾದಶಹನಿಗೆ ತಲುಪಿತು. ಆಗ ಅವನು ಆಮಾತನ್ನು ಪರೀಕ್ಷಿಸಿ ನೋಡಬೇಕೆಂದು ನಿಶ್ಚಯಿಸಿ, ಆ ಮನುಷ್ಯನನ್ನು ಕರೆಯಿಸಿಕೊಂಡು ತನ್ನ ಅಂತಃಪುರದಲ್ಲಿ ಒಂದುದಿವಸ ಇಟ್ಟುಕೊಂಡನು. ಮರುದಿವಸ ಪ್ರಾತಃಕಾಲದಲ್ಲಿ ಎದ್ದ ಕೂಡಲೆ ಮಟ್ಟಮೊದಲು ಬಾದಶಹನು ಅವನ ಮುಖವನ್ನವಲೋಕಿಸಿದನು.

ಭೋಜನ ಸಮಯವು ಸಮೀಪಿಸಿತು ಸೇವಕರು ಸುವರ್ಣಪಾತ್ರೆಗಳಲ್ಲಿ ಭೋಜನವನ್ನು ಸಿದ್ಧಪಡಿಸಿ ತಂದಿಟ್ಟರು. ಆಗ ಪಾತ್ರೆಯಲ್ಲಿ ಅಕಸ್ಮಾತ್ತಾಗಿ ಒಂದು ಹಲ್ಲಿಯು ಬಿತ್ತು ಅದರಿಂದ ಅನ್ನವೆಲ್ಲ ಅಪವಿತ್ರವಾಯಿತು ಆಗ ಬಾದಶಹನ ಮನಸ್ಸಿನಲ್ಲಿ " ಆಮನುಷ್ಯನ ಮುಖದರ್ಶನ ದೋಷದಿಂದಲೇ ಈ ಪ್ರಮಾದವುಂಟಾಯಿತು ಇಂಥ ಮನುಷ್ಯನು ಈ ಪಟ್ಟಣದಲ್ಲಿರುವದು ಯಾಕೆ ಈ ಪೃಥ್ವಿಯಲ್ಲೇ ಇರಬಾರದು : " ಎಂದು ನಿಶ್ಚಯಿಸಿ ಅವನನ್ನು ಗಲ್ಲಿಗೆ ಹಾಕಬೇಕೆಂದು ಅಪ್ಪಣೆಮಾಡಿದನು.

ರಾಜಾಜ್ಞೆಯಂತೆ ಕರ್ಮಚಾರಿಗಳು ಆ ದುರ್ದೈವಿಯನ್ನು ವಧಸ್ಥಾನಕ್ಕೆ ತೆಗೆದು ಕೊಂಡು ಹೋದರು. ಈ ವಾರ್ತೆಯು ಬೀರಬಲನ ಕರ್ಣದ ಮೇಲೆ ಬಿತ್ತು ನಿರಪರಾಧಿಯಾದ ಮನುಷ್ಯನನ್ನು ವ್ಯರ್ಥ ಮರಣಕ್ಕೆಗುರಿಯಾಗಗೊಡುವದು ಅನುಚಿತವಾದದ್ದು ! ಎಂದು ಯೋಚಿಸಿ ಆ ಮನುಷ್ಯನ ಹತ್ತರ ಬಂದು: " ನೀನುಧೈರ್ಯಗುಂದಬೇಡ ! ನಾನು ನಿನ್ನ ಜೀವವನ್ನು ಉಳಿಸಿಕೊಳ್ಳುವೆನು ನಾನು ಹೇಳಿದಂತೆಕೇಳು ನಿನ್ನನ್ನು ವಧಸ್ತಂಭಕ್ಕೇರಿಸುವ ಮೊದಲು ಕರ್ಮಚಾರಿಗಳು " ನಿನ್ನ ಅಂತಿಮ ಇಚ್ಛೆಯೇನಿರುವದೆಂದು ಕೇಳುವರು" ಆಗ ನೀನು "ನನ್ನ ಮುಖಾವಲೋಕನದಿಂದ ಜನರಿಗೆ ಒಂದು ದಿವಸ ಉಪವಾಸವು ಬರುತ್ತದೆ. ಆದರೆ ಬಾದಶಹನ ಮುಖಾವಲೋಕನ ಮಾಡಿದ ಮನುಷ್ಯನಿಗೆ ಮರಣವೇ ಪ್ರಾಪ್ತವಾಗುತ್ತದೆ. ಹ್ಯಾಗಂದರೆ ಈ ದಿವಸ ಪ್ರಾತಃಕಾಲದಲ್ಲಿ ಬಾದಶಹನು ನನ್ನಮುಖಾವಲೋಕನ ಮಾಡಿದಂತೆ ನಾನಾದರೂ ಮುಟ್ಟಮೊದಲು ಬಾದಶಹನ ಮುಖವನ್ನೇ ಅವಲೋಕಿಸಿದೆನು. ಅದರಿಂದ ಈ ದಿವಸ ನನಗೆ ಮರಣವು ಪ್ರಾಪ್ತವಾಯಿತು ಅದರಿಂದ ಪ್ರಾತಃಕಾಲದಲ್ಲಿ ಯಾರೂ ಬಾದಶಹನ ಮುಖವನ್ನು ನೋಡಬೇಡಿರಿ ,, ಎಂಬದಾಗಿ ಹೇಳಿಬಿಡು ,, ಎಂದು ಕಲಿಸಿಕೊಟ್ಟು ಅಲ್ಲಿಂದು ಹೊರಟು ಹೋದನು.

ಯೋಗ್ಯ ಸಮಯದಲ್ಲಿ ಕರ್ಮಚಾರಿಗಳು ಪ್ರಶ್ನೆಮಾಡಿದ ಕೂಡಲೆ, ಬೀರಬಲನ ಶಿಕ್ಷಣಾನು ಸಾರವಾಗಿ ಆಮನುಷ್ಯನು ಕರ್ಮಚಾರಿಗಳ ಮುಂದೆ ಹೇಳಿದನು ಆಗ ಕರ್ಮಚಾರಿಗಳು ಈ ಸಂಗತಿಯನ್ನು ಬಾದಶಹನಿಗೆತಿಳಿಸಿದರು ಆಗ ಬಾದಶಹನ ಮನಸಿಗೆ ಬಹುವಿಷಾದವಾಯಿತು ಕೂಡಲೆ ಆಮನುಷ್ಯನನ್ನು ತನ್ನ ಬಳಿಗೆ ಕರೆಯಿಸಿಕೊಂಡು ಕೆಲವುದ್ರವ್ಯವನ್ನು ಪಾರಿತೋಷಕವಾಗಿ ಕೊಟ್ಟು ಕಳುಹಿಸಿದನು.

—(೫೧. ಚತುರ ಮತ್ತು ಮೂರ್ಖ.)—

ಒಂದುದಿನ ಬಾದಶಹನು ರಾಜಕಾರ್ಯಸಮಾಪ್ತಿಯನಂತರ ಅನ್ನುತ್ತಾನೆ, "ಬೀರಬಲ ಈ ಸಂಸಾರದಲ್ಲಿ ಚತುರರು ಯಾರು ಮೂರ್ಖರು ಯಾರು, ಎಂದು ಪ್ರಶ್ನೆಮಾಡಿದನು. ಈ ಪ್ರಶ್ನೆಗೆ ಬೀರಬಲನು ಬಹಳಹೊತ್ತುಯೋಚಿಸಬೇಕಾಗಲಿಲ್ಲ ಆಕೂಡಲೆ, "ರಾಜಾಧಿರಾಜ! ಯಾವನ ಹಂಚಿಕೆಯು ಸಿದ್ಧಿಗೆ ಹೋಗಿ ಫಲಪ್ರದವಾಗುವದೋ ಅವನು ಚತುರನು ಯಾವನ ಹಂಚಿಕೆಯು ನಿಷ್ಫಲವಾಗುವದೋ ಅವನು ಮೂರ್ಖನು" ಎಂದುತ್ತರವಿತ್ತನು.

ಈ ಉತ್ತರವನ್ನು ಕೇಳಿ, ಬಾದಶಹನಿಗೂ ಸಭಾಸದರಿಗೂ ಅತ್ಯಾನಂದ ವಾಯಿತು.

—(೫೨. ಯಾವನು ಸುಖಿಯಾಗಿರುವನು.)—

ಒಂದು ದಿವಸ ನೆರೆದ ಸಭೆಯಲ್ಲಿ ಬಾದಶಹನು,- "ಬೀರಬಲ! ಈ ಸಂಸಾರದಲ್ಲಿ ಸುಖಿಯಾಗಿರುವವನು ಯಾವನು ;" ಎಂದು ಪ್ರಶ್ನೆಮಾಡಿದನು. ಆ ಕೂಡಲೆ ಬೀರಬಲನು, "ಮನುಷ್ಯನ ಮರಣದ ಮೇಲೆ ಸುಖದುಃಖಗಳ ನಿರ್ಣಯವಾಗುತ್ತದೆ" ಎಂದನು. ಅದು ಹ್ಯಾಗೆ, ಎಂದು ಬಾದಶಹನು ಪ್ರಶ್ನೆಮಾಡಿದನು ಆಗ ಬೀರಬಲನು, ಈ ದಿವಸ ಯಾವನು ಸುಖಿಯಾಗಿರುವನೋ ಅವನ ಮೇಲೆ ನಾಳೆಗೆ ಯಾವ ವಿಪತ್ತಿಯು ಬಂದೊದಗುವದೆಂಬದರ ನಿಯಮವಿಲ್ಲ ಅಂದಮೇಲೆ ಸುಖಿಯಾಗಿರುವನೆಂದು ಹ್ಯಾಗೆ ತಿಳಿದುಕೊಳ್ಳಬೇಕು ಎಷ್ಟೋಜನರು ಬಹಿರಂಗದಲ್ಲಿ ಸುಖಿಗಳಾಗಿದ್ದಂತೆ ಕಂಡುಬರುವದು ಆದರೆ ಅವರಿಗೆ ಅಂತರಂಗದಲ್ಲಿ ಯಾವ ದುಃಖವಿರುವದೆಂಬದು ತಿಳಿಯಲಸಾಧ್ಯವು ಆದ್ದರಿಂದ ಮನುಷ್ಯನಿಗೆ ಸುಖಪೂರ್ವಕ ಮರಣ ಬದಗಿದರೆ ಅವನು ಸುಖಿಯಾಗಿದ್ದನೆಂದು ಹೇಳಬಹುದು.

—(೫೩. ಸ್ವರ್ಗ ಮತ್ತು ನರಕ.)—

ಒಂದು ಸಾರೆ ಬಾದಶಹನು ಬೀರಬಲನನ್ನು ಕುರಿತು;- ಸ್ವರ್ಗವಾಸವು ಯಾರಿಗೆ ಲಭಿಸುತ್ತದೆ? ಮತ್ತು ನರಕವಾಸವು ಯಾರಿಗುಂಟಾಗುತ್ತದೆ ಎಂದು ಪ್ರಶ್ನೆಮಾಡಿದನು. ಅದಕ್ಕೆ ಬೀರಬಲನು:- "ಖಾವಿಂದ! ಸತ್ತು ಹೋದ ಮೇಲೆ ಯಾವನಿಗೆ ಜನರು ಉತ್ತಮ,, ನೆಂದು ಹೊಗಳುವರೋ ಅವನಿಗೆ ಸ್ವರ್ಗವಾಸವು ಲಭಿಸುತ್ತದೆ, ಯಾವನನ್ನು ನಿಂದಿಸುತ್ತಿರುವರೋ ಅವನಿಗೆ ನರಕವಾಸ ವುಂಟಾಗುತ್ತದೆ. ಎಂದು ತಿಳಿಯ ಬೇಕು,, ಎಂದುತ್ತರಕೊಟ್ಟನು. ಈ ಉತ್ತರದಿಂದ ಬಾದಶಹನಿಗೆ ಸಂತೋಷವಾಯಿತು.

ಮಾತನ್ನು ಕೇಳು ?" ಎಂದನು. ಅದಕ್ಕೆ ಮಾನಕಚಂದನು ಪೆಟ್ಟಿನ ಹೆದರಿಕೆಗೆ ಅವರು ಸುಳ್ಳುಹೇಳುತ್ತಾರೆ ಎಂದನು. ಅದಕ್ಕೆ ಬೀರಬಲನು "ಇವರು ಕಣ್ಣಿನಿಂದ ರತ್ನವನ್ನು ಕಂಡವರಾಗಿದ್ದರೆ ಅವರ ಆಕಾರವಿದ್ದಷ್ಟು ಮಣ್ಣಿನ ಉಂಡೆಗಳನ್ನು ಮಾಡುತ್ತಿದ್ದರು ಈ ವಿಷಯದಲ್ಲಿ ನೀನು ಅಸತ್ಯವನ್ನು ನುಡಿದದ್ದೇ ನಿಜ ?" ಎಂದು ಹೇಳಿ ಕರ್ಮಚಾರಿಗಳಿಗೆ ನೇತ್ರಸಂಕೇತಮಾಡಲು ಅವರು ಮಾನಕಚಂದನ ಬೆನ್ನಮೇಲೆ ಒಳಿತಾಗಿ ಒಂದುಪೆಟ್ಟು ಕೊಟ್ಟರು ಆ ಕೂಡಲೆ ಮಾನಕಚಂದನು ತನ್ನಲ್ಲಿದ್ದ ಎರಡೂ ರತ್ನಗಳನ್ನು ತೆಗೆದು ಮುಂದಿಟ್ಟನು. ಅವುಗಳಲ್ಲೊಂದನ್ನು ಜವಾಹರಚಂದನಿಗೆ ಕೊಟ್ಟು ಮತ್ತೊಂದನ್ನು ರಾಜಭಂಡಾರದಲ್ಲಿಡಿಸಿ ಅಸತ್ಯಭಾಷಣ ಮಾಡಿದಬಗ್ಗೆ ಮಾನಕಚಂದನಿಗೂ, ಅವನ ಪಕ್ಷವನ್ನು ಸ್ವೀಕರಿಸಿಬಂದ ಜನರಿಗೂ, ಕಠಿಣವಾದ ದಂಡನೆಯನ್ನು ವಿಧಿಸಿದನು. ... ...

—(೧೪೭. ವಿಶ್ವಾಸಘಾತಕಿಯಾದ ಮಿತ್ರ.)—

ದಿಲ್ಲಿಯಲ್ಲಿ ಮೋತೀಚಂದ ನಾಮಕನಾದ ಒಬ್ಬ ವರ್ತಕನಿದ್ದನು ಅವನಿಗೆ ರಾಮದಾಸನೆಂಬ ಒಬ್ಬ ಸ್ನೇಹಿತನಿದ್ದನು, ಉಭಯತರಲ್ಲಿ ಅನಿರ್ವಾಚ್ಯವಾದ ಮೈತ್ರಿಯಿತ್ತು, ಮೋತೀಚಂದನು ಯಾತ್ರೆಗೆ ಹೊರಡಬೇಕೆಂಬ ಇಚ್ಛೆಯಿಂದ ತನ್ನಲ್ಲಿದ್ದ ಯಾವತ್ತು ಆಸ್ತಿ ಮನೆಮಾರು ಮೊದಲಾದ ಯಾವತ್ತು ಸ್ವತ್ತನ್ನು ರಾಮದಾಸನಿಗೊಪ್ಪಿಸಿ ಕುಟುಂಬಸಮೇತನಾಗಿ ಹೊರಟುಹೋದನು ಆ ಕಾಲದಲ್ಲಿ ಉಗಿಬಂಡಿಯು ಇದ್ದಿಲ್ಲ, ಕಾಲುನಡಿಗೆಯಿಂದಲೆ ಪ್ರಯಾಗ, ಕಾಶೀ, ಗಯಾ, ಮೊದಲಾದ ಪವಿತ್ರಸ್ಥಳಗಳ ಯಾತ್ರೆಯನ್ನು ಮಾಡುತ್ತಾ ಮಾಡುತ್ತಾ ಮೂರು ವರುಷಗಳಾದಮೇಲೆ ಮರಳಿ ದಿಲ್ಲಿಗೆಬಂದನು. ಮನೆಗೆಬಂದು ನೋಡಲು ದ್ವಾರವು ತೆರೆದಿತ್ತು ಒಳಗೆ ಪ್ರವೇಶಮಾಡಿ ನೋಡಲು ಒಂದಾದರೂ ಪದಾರ್ಥವಿದ್ದಿಲ್ಲ ಮನೆಯೆಲ್ಲ ಮಲಿನವಾಗಿ ಹೋಗಿತ್ತು, ಇಲಿ ಹೆಗ್ಗಣಗಳು ವಾಸಮಾಡಿಕೊಂಡಿದ್ದವು. ಆಗ ಅವನು ರಾಮದಾಸನ ಗೃಹಕ್ಕೆಬಂದನು ಪರಸ್ಪರರಲ್ಲಿ ಕುಶಲಪ್ರಶ್ನೆಗಳಾದವು, ಆಮೇಲೆ ಮೋತೀಚಂದನು ತನ್ನ ಯಾವತ್ತು ಸ್ವತ್ತನ್ನು ಮರಳಿಕೊಡು ! ಎಂದು ಕೇಳಲು ರಾಮದಾಸನು- "ನನ್ನಲ್ಲಿ ನೀನು ಯಾವಸ್ವತ್ತನ್ನು ಇಟ್ಟುಹೋಗಿರುವಿ ! ಯಾರಲ್ಲಿ ಇಟ್ಟಿದ್ದಿಯೋ ಅವರನ್ನು ಕೇಳಿಕೋ" ಎಂದನು.

ಮೋತೀಚಂದ—ನಾನು ನನ್ನ ಸ್ವತ್ತನ್ನೆಲ್ಲ ನಿನಗೇ ಒಪ್ಪಿಸಿ ಹೋಗಿದ್ದೆನು, ಅದರಿಂದಲೇ ನಿನ್ನನ್ನು ಕೇಳಲಿಕ್ಕೆ ಬಂದಿದ್ದೇನೆ ಇದು ವಿನೋದಕ್ಕೆ ಸಮಯವಲ್ಲ ಕೃಪೆಮಾಡಿ ನನ್ನ ಆಸ್ತಿಯನ್ನು ನನಗೆಕೊಡು.

ರಾಮದಾಸ— ನೀನು ನನ್ನ ಬಳಿಯಲ್ಲಿ ಯಾವ ಆಸ್ತಿಯನ್ನೂ ಇಟ್ಟಿರುವದಿಲ್ಲ ಅದರಿಂದ ನೀನು ಇಲ್ಲಿಂದ ಸುಮ್ಮನೇ ಹೊರಟು ಹೋಗು ! ಇಲ್ಲವಾದರೆ ಸೇವಕರಿಂದ ತಳ್ಳಿಸಿಬಿಡುತ್ತೇನೆ, ನಾನು ನಿನ್ನೊಡನೆ ವಿನೋದವನ್ನು ಮಾಡುವೆನೋ ! ... ... *

ಈ ಮಾತುಗಳನ್ನು ಕೇಳಿ ಮೋತೀಚಂದನಿಗೆ ಬಹಳ ಆಶ್ಚರ್ಯವಾಯಿತು ಅವನು ಸದ್ಗದಿತ ವಂತನಾಗಿ, ನಾನು ನಿನ್ನಂನು ಜೀವದಗೆಳೆಯನೆಂದು ತಿಳಿದು ಎಲ್ಲ ಆಸ್ತಿಯನ್ನು ಒಪ್ಪಿಸಿದ್ದಕ್ಕೆ ನನಗೆ ಈ ದುರವಸ್ಥೆಯನ್ನಂಟು ಮಾಡಿದಿ ! ನಿನಗೆ ಇಂಥ ದುರ್ಬುದ್ಧಿಯು ಯಾಕೆಹುಟ್ಟಿತು, ಪ್ರಾಜ್ಞನಾಗಿದ್ದು ವಿಶ್ವಾಸಘಾತಕದ ಪಾಪವನ್ನು ಯಾಕೆತಲೆಯಮೇಲೆ ಹೊತ್ತುಕೊಳ್ಳುತ್ತೀ ? ಈ ಲೋಕದಲ್ಲಿ ಈ ಪಾಪದಪರಿಣಾಮವು ನಿನಗೆ ತಪ್ಪಿದಿದ್ದರೂ ಪರಲೋಕದಲ್ಲಿ ಇದರ ದುಷ್ಪರಿಣಾಮವು ಸೋಂಕದೆ ಬಿಡಲಾರದು ಪರಮೇಶ್ವರನ ಕಠಿಣಶಿಕ್ಷೆಗೆ ಭೀತನಾಗಿ ನನ್ನ ಸ್ವತ್ತನ್ನು ನನಗೊಪ್ಪಿಸು; ಇದರಿಂದ ನಿನಗೆ ಕಲ್ಯಾಣವಾಗುವದು " ಎಂದನು. ... ... *

ಈ ಮಾತಿನಿಂದ ರಾಮದಾಸನಿಗೆ ಅತಿಕೋಪವು ಬಂತು ಕಂಣುಗಳು ಕೆಂಪಗಾದವು ಅದನ್ನು ಕಂಡು ಮೋತೀಚಂದನು " ಇನ್ನು ಇಲ್ಲಿನಿಂತುಕೊಳ್ಳುವದು ಸರಿಯಲ್ಲ " ಎಂದು ಯೋಚಿಸಿ ಸುಮ್ಮನೆ ಮರಳಬಂದನು. ರಾಮದಾಸನು ಬರಕೊಟ್ಟ ಹಸ್ತಪತ್ರಿಕೆಯೂ ಇದ್ದಿಲ್ಲ, ಮತ್ತು ಸ್ವತ್ತನ್ನು ಒಪ್ಪಿಸುವಕಾಲಕ್ಕೆ ಅನ್ಯರಾರೂ ಇದ್ದಿಲ್ಲ; ಅದರಿಂದ ಸರಕಾರದಲ್ಲಿ ಅಭಿಯೋಗವನ್ನು ಸಹ ನಡೆಯಿಸಲಿಕ್ಕೆ ಬರುವಂತೆ ಇದ್ದಿಲ್ಲ. ಈ ವಿಷಯವನ್ನು ಬೀರಬಲನ ಕಿವಿಯಮೇಲೆ ಹಾಕಿನೋಡೋಣ ? ಮುಂದೆ ನನ್ನದೈವದಲ್ಲಿ ಇದ್ದಂತೆ ಆಗಲಿ ಎಂದು ನಿಶ್ಚಯಿಸಿಕೊಂಡು ಮನೆಗೆಬಂದು, ಮರುದಿವಸ ಬೀರಬಲನ ಬಳಿಗೆಹೋಗಿ ಆದ್ಯೋಪಾಂತ ವೃತ್ತಾಂತವನ್ನೆಲ್ಲ ಹೇಳಿ ಈ ಕಾರ್ಯದಲ್ಲಿ ತಾವು ಪೂರ್ಣ ಸಹಾಯವನ್ನು ಮಾಡಬೇಕೆಂದು ಪ್ರಾರ್ಥನೆಮಾಡಿಕೊಂಡನು. ಅದಕ್ಕೆಬೀರಬಲನು ಇನ್ನು ನಾಲ್ಕುದಿವಸಗಳನ್ನು ಬಿಟ್ಟು ನನ್ನ ಬಳಿಗೆ ಬಾ ? ನಿನಗೆ ಯಾವದಾದರೊಂದು ಹಂಚಿಕೆಯನ್ನು ತೋರಿಸುತ್ತೇನೆ? ಎಂದು ಹೇಳಿದನು. ... ... *

ಮೂರನೇ ದಿವಸ ಬೀರಬಲನು ರಾಮದಾಸನನ್ನು ಕರೆಯ ಕಳುಹಿದನು. ಆಗ ರಾಮದಾಸನು ಸ್ವಲ್ಪಗಾಬರಿಯಾದನು, ಆಗ ಅವನು ಮನಸ್ಸಿನಲ್ಲಿ " ಮೋತೀಚಂದನ ಹೇಳಿಕೆಯಿಂದಂತೂ ನನ್ನಂನು ಕರೆಯಿಸಿರುವದಿಲ್ಲ ಒಂದುವೇಳೆ ಕರೆಯಿಸಿದ್ದರೆ ನಾನೇನು ಮೋತೀಚಂದನಿಗೆ ನಿನ್ನ ಈ ಈ ಪ್ರ

ಕಾರದ ಸ್ವತ್ತು ನನ್ನ ಬಳಿಯಲ್ಲಿದೆ ಎಂದು ಲೇಖನವನ್ನು ಬಲದುಕೊಟ್ಟಿಲ್ಲ ಮತ್ತೆ ಬೇರೆ ಯಾವದಾದರೊಂದು ಕಾರ್ಯವಿದ್ದೀತು," ಎಂದು ಯೋಚಿಸುತ್ತಾ ಬೀರಬಲನ ಸನ್ನಿಧಿಗೆ ಬಂದನು, ಬೀರಬಲನು ಆದರ ಸತ್ಕಾರಮಾಡಿ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡನು. ಆಮೇಲೆ ಮೋತೀಚಂದನ ವಿಷಯುವೇ ತನಗೆ ಗೊತ್ತುಯಿಲ್ಲವೆಂಬಂತೆ ನಟಿಸಿ, ಅನೇಕ ವಾರ್ತಾಲಾಪಗಳನ್ನು ಆಡುತ್ತಆಡುತ್ತ "ರಾಮುದಾಸ ? ನನ್ನ ನಿನ್ನ ನಡುವೆ ಎಷ್ಟೋಕಾಲದಿಂದ ಮೈತ್ರಿಯಿದ್ದರೂ ಕೂಡ ಇಷ್ಟುದಿವಸಗಳವರೆಗೆ ಆ ಮೈತ್ರಿಯನ್ನು ಪ್ರಕಟ ಮಾಡಲಿಕ್ಕೆ ಸಂಧಿಯೇ ದೊರಕಿದ್ದಿಲ್ಲ; ಈಗ ಪರಮೇಶ್ವರನ ದಯೆಯಿಂದ ಅಂಥ ಒಂದು ಪ್ರಸಂಗವು ಬಂದದೆ ಏನಂದರೆ- ಚಿಕ್ಕಚಿಕ್ಕ ಆಭಿಯೋಗಗಳ ನಿರ್ಣಯುವನ್ನು ಮಾಡುವದರಸಲುವಾಗಿ ಒಂದು ನ್ಯಾಯಾಲಯುವನ್ನು ಸ್ಥಾಪಿಸೆಂದು ಬಾದಶಹನು ಅಪ್ಪಣೆಮಾಡಿದ್ದಾನೆ ಆ ಕಾರ್ಯಕ್ಕೆ ನಿನ್ನಂನು ನಿಯಮಿಸಬೇಕೆಂದು ಯೋಚಿಸಿ, ನಿನ್ನ ಇಚ್ಛೆಯನ್ನು ಅರಿತುಕೊಳ್ಳಬೇಕೆಂದು ನಿನ್ನಂನು ಇಲ್ಲಿಗೆ ಕರೆಯಿಸಿಕೊಂಡೆನು ನಿನ್ನಿಂದ ಈ ಕಾರ್ಯ ನಿರ್ವಾಹವಾಗುವಂತಿದ್ದರೆ ವಿಚಾರಮಾಡಿಕೊಂಡು ನನಗೆತಿಳಿಸು!" ಎಂದನು. ಈಮಾತನ್ನು ಕೇಳಿದಕೂಡಲೆ ರಾಮುದಾಸನ ಹರುಷಕ್ಕೆ ಪಾರವೇ ಇಲ್ಲದಾಯಿತು ಮನಸ್ಸಿನಲ್ಲಿ ಆನಂದದ ಲಹರಿಗಳು ಬರಹತ್ತಿದವು, ಪ್ರಫುಲ್ಲವದನನಾಗಿ;- ಮಂತ್ರಿವರ್ಯನೇ! ನಾನು ಈ ಕಾರ್ಯವನ್ನು ಆನಂದದಿಂದ ಸ್ವೀಕರಿಸುತ್ತೇನೆ" ಎಂದನು. ಅದಕ್ಕೆ ಬೀರಬಲನು "ಒಳ್ಳೇದು, ನಾನು ಸಮಯುವನ್ನು ಸಾಧಿಸಿಕೊಂಡು ಈ ಸಂಗತಿಯನ್ನು ಬಾದಶಹನ ಕಿವಿಯಮೇಲೆಹಾಕುತ್ತೇನೆ" ಎಂದು ಹೇಳಲು. ರಾಮುದಾಸನು ಹರುಷಿತನಾಗಿ ಅಪ್ಪಣೆಯನ್ನು ತೆಗೆದುಕೊಂಡು ಹೊರಟು ಬಂದನು. ಮಾರ್ಗದಲ್ಲಿ ಅವನ ಮನಸ್ಸಿನಲ್ಲಿ ಅನೇಕಪ್ರಕಾರದ ತರಂಗಗಳು ಉಪ್ಪವಿಸಹತ್ತಿದವು, ಮನಸ್ಸಿನಲ್ಲಿ ಮಂಡಿಗೆಯನ್ನು ತಿನ್ನುತ್ತ ಮನೆಗೆಬಂದು ಮುಟ್ಟಿದನು.

ಇತ್ತ ರಾಮುದಾಸನು ಹೊರಟು ಹೋದಮೇಲೆ, ಬೀರಬಲನು ಮೋತೀಚಂದನನ್ನು ಕರೆಯಿಸಿ-"ನಾಳೆ ನೀನು ರಾಮುದಾಸನ ಬಳಿಗೆ ಹೋಗಿ "ನನ್ನ ಸ್ವತ್ತನ್ನೆಲ್ಲಿ ಕೊಡು!" ಎಂದು ಕೇಳು ಅವನು ಈ ಮಾತಿಗೆ ಒಪ್ಪಿಕೊಳ್ಳದಿದ್ದರೆ ಬೀರಬಲನಿಗೆ ಈ ಸಂಗತಿಯನ್ನು ತಿಳಿಸುತ್ತೇನೆಂದು ಬೆದರಿಕೆಹಾಕು!" ಎಂದು ಹೇಳಿದನು. ... ... *

ಈ ಪ್ರಕಾರದ ಮಾತಿನಿಂದ ಮೋತೀಚಂದನ ದುಃಖಿತ ಮನಸ್ಸಿಗೆ ಸ್ವಲ್ಪ ಶಾಂತಿಯುಂಟಾಯಿತು ಮರುದಿವಸ ಮೋತೀಚಂದನು ರಾಮುದಾಸ

ನ ಬಳಿಗೆಹೋಗಿ, "ತನ್ನ ಧನ ಕನಕ ವಸ್ತುಗಳನ್ನು ಕೊಡು" ಎಂದು ಕೇಳಲಾಗಿ, ಅವನು ಮೊಟ್ಟಮೊದಲು ಹೇಳಿದಂತೆ ನಿರಾಕರಿಸಿ ಬಿಟ್ಟನು ಆಗ ಮೋತೀಚಂದನು-"ಮಿತ್ರಾ! ನೀನು ಒಳ್ಳೇಮಾತಿನಿಂದ ಆಸ್ತಿಯನ್ನು ಕೊಡಲಿಕ್ಕೆ ಸಮ್ಮತಿಸುವದಿಲ್ಲ; ಅದರಿಂದ ನಾನು ನಿರ್ವಾಹವಿಲ್ಲದೆ ಈ ಸಂಗತಿಯನ್ನು ಬೀರಬಲನ ಕಿವಿಯಮೇಲ ಹಾಕಬೇಕಾಗಿ ಬಂತು." ಎಂದನು. ... ... *

ಬೀರಬಲನಿಗೆ ತಿಳಿಸುತ್ತೇನೆಂದು ಹೇಳುವ ಮಾತನ್ನು ಕೇಳಿದ ಕೂಡಲೆ ಮನಸ್ಸಿನಲ್ಲಿ ಗಾಬರಿಯಾದನು ಆಗ ಅವನು ಆಲೋಚಿಸಿದ್ದೇನಂದರೆ-"ನನಗೆ ನ್ಯಾಯಾಧೀಶನ ಕೆಲಸವನ್ನು ಕೊಡಿಸುತ್ತೇನೆಂದು ಬೀರಬಲನು ವಚನಕೊಟ್ಟಿದ್ದಾನೆ ಇಂಥ ಸಂಧಿಯಲ್ಲಿ ನನ್ನ ಮೋಸದ ಕೃತ್ಯವು ಅವನಿಗೆ ತಿಳಿಯಬಂದರೆ ನನ್ನ ಅವಮಾನ ವಾಗುವದಲ್ಲದೆ, ದೊರೆಯತಕ್ಕ ಕೆಲಸವನ್ನು ಸಹ ನಾನೇ ಅಪ್ರಗಲ್ಭತೆಯಿಂದ ಕಳಕೊಂಡಂತೆ ಆಗುತ್ತದೆ ನ್ಯಾಯಾಧೀಶನ ಸ್ಥಾನವು ದೊರೆತರೆ ಬೇಕಾದಷ್ಟು ಸಂಪಾದಿಸಬಹುದು." ಎಂದು ಯೋಚಿಸಿ ಮೋತೀಚಂದನನ್ನು ಕುರಿತು,-"ಪ್ರಿಯಮಿತ್ರನೇ! ನಾನು ಇಂದಿನ ತನಕ ನಿನಗೆ ಚೇಷ್ಟೆಯನ್ನು ಮಾಡಿದೆನು ಕೇವಲ ನಿನ್ನಲ್ಲಿ ಎಷ್ಟರಮಟ್ಟಿಗೆ ಧೈರ್ಯ ವಿರುವದೆಂಬದನ್ನು ಪರೀಕ್ಷಿಸಬೇಕೆಂದು ಯೋಚಿಸಿ ಈ ಪ್ರಕಾರವಾಗಿ ಮಾಡಿದನೇ ಹೊರತು ಅನ್ಯಥಾ ಇಲ್ಲ ನಿನ್ನ ಯಾವತ್ತು ಸ್ವತ್ತನ್ನು ನೀನು ತೆಗದುಕೊಂಡು ಹೋಗು! ಈ ದಿವಸ ನೀನು ಬಾರದಹೋಗಿದ್ದರೆ ನಾನೇ ನಿನ್ನ ಮನೆತನಕ ಬಂದು ಕೊಟ್ಟು ಬರಬೇಕೆಂದುಮಾಡಿದ್ದೇನು ಎಂದು ಹೇಳಿ ಅವನ ಯಾವತ್ತು ಸ್ವತ್ತನ್ನು ಅವನ ಸ್ವಾಧೀನ ಪಡಿಸಿದನು ಮೋತೀಚಂದನು ಅದನ್ನು ತಕ್ಕೊಂಡು ಸಂತೋಷದಿಂದ ಮನೆಗೆ ಹೋದನು ಸಾಯಂಕಾಲದಲ್ಲಿ ಬೀರಬಲನು ರಾಜಕಾರ್ಯಗಳಿಂದ ನಿವೃತ್ತನಾಗಿ ಮನೆಗೆಬಂದಮೇಲೆ, ಮೋತೀಚಂದನು ಬೆಟ್ಟಿಯಾಗಿ ಯಾವತ್ತು ಸಂಗತಿಯನ್ನು ವಿಶದಪಡಿಸಿದನು. ... ... *

ಇತ್ತ ರಾಮದಾಸನು ಬೀರಬಲನು ಯಾವಾಗ ಕರೆಯಿಸುವನೋ ಎಂದು ಮಾರ್ಗಪ್ರತೀಕ್ಷೆಮಾಡುತ್ತ ಕುಳಿತುಕೊಂಡನು ಮೋತೀಚಂದನು ರಾಮದಾಸನ ಮೈತ್ರಿಯನ್ನು ತ್ಯಜಿಸಿ ಬಿಟ್ಟನು ಕೆಲವು ದಿವಸಗಳಾದಮೇಲೆ ರಾಮದಾಸನು ಬೀರಬಲನ ದರುಶನಕ್ಕೆ ಹೋಗಲು, ಅವನು ನಿಷೇಧಿಸಿದನು ಆಗ ಅವನು ತಾನುಮಾಡಿದ ಮೋಸವು ತನಗೇಬಾಧಕವಾಯಿತೆಂದು ತಿಳಿದುಕೊಂಡು ಸ್ವಸ್ಥವಾಗಿ ಕುಳಿತುಕೊಂಡು ಬಿಟ್ಟನು.

—*(೧೪೮. ಅಪ್ರಾಮಾಣಿಕನಾದ ಕಾಜಿಯು.)*—

ದಿಲ್ಲಿಯಲ್ಲಿ ಫಾತಿಮಾ ಬೀಬೀ ನಾಮಕಳಾದ ಒರ್ವಮುಸಲ್ಮಾನ ಜಾತಿಯ ಸ್ತ್ರೀಯಳಿದ್ದಳು ಅವಳ ಪತಿಯು ಮರಣಹೊಂದಿದ್ದನು ಸಂತಾನವೂ ಇದ್ದಿಲ್ಲ ಅವಳು ಮಕ್ಕಾಯಾತ್ರೆಯನ್ನುಮಾಡಿ ಬರಬೇಕೆಂಬ ಕುತೂಹಲದಿಂದ ತನ್ನಲ್ಲಿದ್ದ ವಸ್ತು ಒಡವೆಗಳನ್ನೆಲ್ಲ ಮಾರಿ ಒಂದು ಸಾವಿರ ರೂಪಾಯಿಗಳನ್ನು ಕೂಡಿಸಿ ಹಾದಿಯಖರ್ಚಿಗೆ ಎರಡು ನೂರು ರೂಪಾಯಿಗಳನ್ನು ಇಟ್ಟುಕೊಂಡು ಉಳಿದ ಎಂಟುನೂರು ರೂಪಾಯಿಗಳನ್ನು ಒಂದು ಚೀಲದಲ್ಲಿ ಹಾಕಿ ಅದರ ಬಾಯಿಯನ್ನು ಹೊಲಿದು, ಮೇಲೆ ಅರಗಿನ ಮುದ್ರೆಯನ್ನು ಮಾಡಿ ತನ್ನ ನೆರೆಯವನಾದ ಒಬ್ಬ ಕಾಜಿಯ ವಶಕ್ಕೆ ಕೊಟ್ಟು "ಈ ನಗರದಲ್ಲಿ ನಿಮ್ಮಂಥ ಪ್ರಮಾಣಿಕರು ಇಲ್ಲ; ನಾನು ಮಕ್ಕಾಯಾತ್ರೆಯು ಸಲುವಾಗಿ ಹೊರಟಿದ್ದೇನೆ ನನ್ನ ಒಳಿಯಲ್ಲಿದ್ದ ಹಣವನ್ನು ಸಂಗಡ ತೆಗೆದುಕೊಂಡು ಹೋಬೇಕೆಂದರೆ ದಾರಿಯಲ್ಲಿ ಚೋರೋಪದ್ರವು ಬಹಳ ನಾನು ಬರುವವರೆಗೆ ಈ ಎಂಟುನೂರು ರೂಪಾಯಿಗಳುಳ್ಳ ಚೀಲವನ್ನು ನಿಮ್ಮ ಸ್ವಾಧೀನಕ್ಕೆ ಒಪ್ಪಿಸುತ್ತೇನೆ ನಾನು ಮರಳಿ ಬಂದರೆ ನನಗೆ ಕೊಡಿರಿ; ಇಲ್ಲವಾದರೆ ಈ ರೂಪಾಯಿಗಳನ್ನು ನಿಮ್ಮ ಮನಸ್ಸಿಗೆ ಸರಿದೋರಿದಹಾಗ ವ್ಯವಸ್ಥೆಯನ್ನು ಮಾಡಿರಿ!" ಎಂದು ಹೇಳಿದಳು ಅವಳ ಮಾತುಗಳನ್ನು ಶ್ರವಣ ಮಾಡಿ ಕಾಜಿಯು-"ಬೀಬಿಯೇ, ಒಳ್ಳೆದು ನನ್ನ ಸ್ವಾಧೀನಕ್ಕೆ ಕೊಟ್ಟು ಹೊರಟುಹೋಗು! ಏನೂ ಚಿಂತೆ ಮಾಡಬೇಡ!" ಎಂದು ಹೇಳಿದನು ಫಾತಿಮಾ ಬೀಬಿಯು ಹಣದ ಚೀಲವನ್ನು ಅವನ ಸ್ವಾಧೀನಪಡಿಸಿ ಯಾತ್ರೆಗೆ ಹೊಟುಹೋದಳು. ... ... *

ಆ ಸ್ತ್ರೀಯು ಚೀಲದಲ್ಲಿ ರೂಪಾಯಿಗಳನ್ನು ಹಾಕುವಸಮಯದಲ್ಲಿ ಪ್ರತಿಯೊಂದು ರೂಪಾಯಿಯಮೇಲೆ ಒಂದೊಂದು ಚಿಕ್ಕದಾಗಿರುವ ಚಿನ್ಹವನ್ನು ಮಾಡಿದ್ದಳು ಅದನ್ನು ಬಹಳ ಲಕ್ಷ್ಯಕೊಟ್ಟು ನೋಡಿದರೂ ಸಹ ಕಾಣುವಂತೆ ಇದ್ದಿಲ್ಲ. ... . *

ಆ ಸ್ತ್ರೀಯು ಐದು ವರುಷಗಳವರೆಗೆ ಬಾರದಿರಲು, ಕಾಜಿಯ ಬುದ್ಧಿಯು ಸ್ವಲ್ಪ ವ್ಯತ್ಯಸ್ತವಾಯಿತು ಆ ಹಣವನ್ನು ಗಿಳಂಕೃತ ಮಾಡಬೇಕೆಂದು ಯೋಚಿಸಿದನು ಕಿಂಚಿತ್ಕಾಲ ಯೋಚನೆ ಮಾಡಿನೋಡಲು, ಒಂದು ಹಂಚಿಕೆಯು ತೋಚಿತು ಅದರಂತೆ ವ್ಯವಸ್ಥೆಮಾಡಿ ಬಿಟ್ಟನು ಮರುವರುಷ ಆ ಸ್ತ್ರೀಯು ಯಾತ್ರೆಯಿಂದ ತಿರುಗಿಬಂದು ಹಣದ ಚೀಲವನ್ನು ಕೊಡಿರೆಂದು ಕೇಳಿದಳು ಆ ಕೂಡಲೆ ಆ ಚೀಲವನ್ನು ಅವಳ ಸ್ವಾಧೀನಕ್ಕೆ ಕೊಟ್ಟನು ಆ

ಸ್ತ್ರೀಯು ತನ್ನ ಚೀಲವು ಮೊದಲಿನಂತೆ ಇದ್ದದ್ದನ್ನು ಕಂಡು ಪ್ರಸನ್ನಳಾ ದಳು ಮನೆಗೆ ಹೋಗಿ ಚೀಲವನ್ನು ಬಿಚ್ಚಿ ನೋಡಲು ರೂಪಾಯಿಗಳು ಇದ್ದಿಲ್ಲ ತಾಮ್ರದ ನಾಣ್ಯಗಳೇ ಇದ್ದವು ಅದನ್ನು ನೋಡಿ ಅವಳು ಗಾಬರಿಯಾಗಿ ಕಾಜಿಯ ಬಳಿಗೆ ಬಂದು ಎಲ್ಲ ವೃತ್ತಾಂತವನ್ನು ತಿಳಸಿದಳು ಆಗ ಕಾಜಿಯು-" ನೀನು ಚೀಲದಲ್ಲಿ ರೂಪಾಯಿಗಳನ್ನು ಹಾಕಿದ್ದೀಯೋ ಅಥವಾ ತಾಮ್ರದ ನಾಣ್ಯಗಳನು ಹಾಕಿದ್ದೀಯೋ ಎಂಬದನ್ನು ನಾನು ಅರಿತವನಲ್ಲ ನೀನು ಇಟ್ಟ ಚೀಲವನ್ನು ಕೈಯಿಂದ ಸಹಾ ಮುಟ್ಟಿಲ್ಲ; ಅದು ಮೊದಲು ಹ್ಯಾಗೆ ಇತ್ತೋ ಹಾಗೆಯೇ ಅದನ್ನು ಜೋಪಾನಮಾಡಿ ಕೊಟ್ಟಿದ್ದೇನೆ ಹೆಚ್ಚಿನ ಸಂಗತಿಯನ್ನು ಅರಿತವನಲ್ಲ; " ಎಂದನು. ... ... *

ಕಾಜಿಯ ಮಾತುಗಳನ್ನು ಕೇಳಿ ಅವಳು ಬಹು ಚಿಂತಾಕ್ರಾಂತಳಾಗಿ " ಕಾಜೀ ಸಾಹೇಬ, ನಾನು ನನ್ನ ಕೈಯಿಂದಲೇ ಎಂಟು ನೂರು ರೂಪಾಯಿಗಳನ್ನು ಆ ಚೀಲದಲ್ಲಿ ಹಾಕಿದ್ದೆನು ನಾನು ಕೇವಲ ದರಿದ್ರಳು ನನ್ನ ಜೀವನವು ಆ ದ್ರವ್ಯದಿಂದಲೇ ಸಾಗುತ್ತಿತ್ತು ಇನ್ನು ನಾನು ಉಪಜೀವಿಸುವ ಬಗೆ ಹ್ಯಾಗೆ! ಎಲ್ಲಹಣವನ್ನು ಕೊಡದಿದ್ದರೂ ಚಿಂತೆ ಇಲ್ಲ ಅರ್ಧಹಣವನ್ನಾದರೂ ದಯಪಾಲಿಸಿರಿ ತಾವು ಕೇವಲ ಪ್ರಾಮಾಣಿಕರೆಂದುನಂಬಿ ನನ್ನ ಯಾವತ್ತು ಆ ಸ್ತ್ರೀಯನ್ನು ಮಾಡಿ ಎಂಟು ನೂರು ರೂಪಾಯಿಗಳನ್ನು ಈ ಚೀಲದಲ್ಲಿ ತುಂಬಿ, ಉಳಿದ ರೂಪಾಯಿಗಳನ್ನು ತೆಗೆದುಕೊಂಡು ಚೀಲವನ್ನು ನಿಮ್ಮ ವಶಕ್ಕೆಕೊಟ್ಟು ಯಾತ್ರೆಗೆ ಹೋಗಲಿಲ್ಲವೇ! ತಮ್ಮಂಥವರು ಈ ಪ್ರಕಾರ ವಿಶ್ವಾಸಘಾತಕ ತನವನ್ನು ಮಾಡಬಾರದು! " ಅವಳ ಮಾತುಗಳನ್ನು ಕೇಳಿ ಕಾಜಿಯು ಬಹಳೇ ಕುಪಿತನಾಗಿ " ಸುಮ್ಮನೆ ಆ ರೋಪವನ್ನು ಹೊರಿಸಬೇಡ ಹೊರಟು ಹೋಗು! ಇಲ್ಲದಿದ್ದರೆ ಸೇವಕರ ಕಡೆಯಿಂದ ದಬ್ಬಿಸಬೇಕಾದೀತು ? " ಎಂದು ಬೆದರಿಸಿದನು. ... *

ಆ ಸ್ತ್ರೀಯು ನಿರಾಸೆಯಿಂದ ಬಾದಶಹನ ಬಳಿಗೆ ಹೋಗಿ ತನ್ನ ಆ ದ್ಯೋಪಾಂತ ವೃತ್ತಾಂತವನ್ನು ಕಥನ ಮಾಡಿದಳು ಆಗ ಬಾದಶಹನು ಕಾಜಿಯನ್ನು ಕರೆಯಕಳುಹಿ ಅವನು ಬಂದಮೇಲೆ " ಈ ಸ್ತ್ರೀಯಳು ನಿನ್ನ ಬಳಿಯಲ್ಲಿಟ್ಟ ಹಣದ ಚೀಲದ ವೃತ್ತಾಂತವೇನೂ " ಎಂದು ಪ್ರಶ್ನೆಮಾಡಿದನು ಈ ಮಾತಿಗೆ ಕಾಜಿಯು " ಈಗ ಐದಾರು ವರುಷಗಳ ಹಿಂದೆ ಈ ಸ್ತ್ರೀಯು ನನ್ನ ಬಳಿಯಲ್ಲಿ ಒಂದು ಚೀಲವನ್ನು ಇಟ್ಟದ್ದು ನಿಜವು ಅವಳುಹ್ಯಾಗೆ ಇಟ್ಟಿದ್ದಳೋ ಹಾಗೆಯೇ ಅದನ್ನು ಅವಳು ಮರಳಿಬಂದ ಮೇಲೆ ಒಪ್ಪಿಸಿ ಬಿಟ್ಟಿದ್ದೇನೆ. ಅದರಲ್ಲಿ ಇವಳು ರೂಪಾಯಿಗಳನ್ನು ಇಟ್ಟಿದ್ದಳೋ, ಅಥವಾ

ತಾವು್ರಸ ನಾಣ್ಯಗಳನ್ನು ಹಾಕಿದ್ದಳೋ ಎಂಬ ಸಂಗತಿಯನ್ನು ನಾನು ಅರಿತವನಲ್ಲ ” ಎಂದು ಹೇಳಿದನು. ... ... *

ಕಾಜಿಯು ಹೇಳಿದ ಉತ್ತರದಿಂದ ಬಾದಶಹನ ಮನಸ್ಸಿನಲ್ಲಿ ಸ್ವಲ್ಪ ಸಂದೇಹ ವುಂಟಾಯಿತು ಆಗ ಕಾಜಿಯನ್ನು ಹಿಂದಕ್ಕೆ ಕಳುಹಿಸಿ ಆ ಸ್ತ್ರೀಯಳನ್ನು ಕುರಿತು, “ ಬಾಯಿ ನೀನು ಏನೂ ಚಿಂತೆಮಾಡಬೇಡ ನಿನ್ನ ಹಣ ಕಿಂಚಿತ್ಕಾಲದಲ್ಲಿ ಮರಳಿ ಬರುವ ಹಾಗೆ ಮಾಡುತ್ತೇನೆ ” ಎಂದು ಸಮಾಧಾನ ಪಡಿಸಿ ಕಳುಹಿ ಕೊಟ್ಟನು. ... ... *

ಈ ಸಂಗತಿಯು ವರ್ತಿಸಿದ ನಾಲ್ಕಾರು ದಿವಸಗಳ ಮೇಲೆ ಬಾದಶಹನು ಶಯನ ಮಾಡುವ ಪೂರ್ವದಲ್ಲಿ ತನ್ನ ಹಾಸಿಗೆಯನ್ನು ಕತ್ತರಿಯಿಂದ ಸ್ವಲ್ಪ ಕತ್ತರಿಸಿ ಸುಮ್ಮನೆ ಮಲಗಿಬಿಟ್ಟನು ಮರುದಿವಸ ಬಾದಶಹನು ಎದ್ದುಹೋದ ಮೇಲೆ ಪರಿಚಾರಕನು ಹಾಸಿಗೆಯನ್ನು ತೆಗೆಯುವದಕ್ಕೆ ಬಂದಾಗ ಚಾದರವು ಹರಿದದ್ದು ಅವನದೃಷ್ಟಿಗೆಬಿತ್ತು ಆ ಕೂಡಲೆ ಅವನು ಗಾಬರಿಯಾಗಿ, ಅನ್ಯ ಪರಿಚಾರಕರಿಗೆ ತೋರಿಸಿದನು. ಆಗ ಅವರು ಇದರ ನಿಜ ಸಂಗತಿಯೇನೆಂದು ವಿಚಾರಿಸಲು ತನಗೆಯಾವ ಸಂಗತಿಯೂ ಗೊತ್ತು ಇಲ್ಲವೆಂದು ಹೇಳಿದನು. ಆಗ ಅವರೆಲ್ಲರೂ “ ಈ ಸಂಗತಿಯು ಬಾದಶಹನಿಗೆ ವಿದಿತವಾದರೆ ಯಾವ ಶಿಕ್ಷೆಯನ್ನು ವಿಧಿಸುವನೋ ” ಎಂದು ಚಿಂತಾಕ್ರಾಂತರಾದರು. ಆಗ ಅವರಲ್ಲಿದ್ದ ಒಬ್ಬ ವೃದ್ಧನು “ ಹೆದರಬೇಡಿರಿ ಈ ನಗರದಲ್ಲಿ ಒಬ್ಬ ರಫುಗಾರ ನಿರುವನು ಅವನಿಗೆ ಈ ರಫುಮಾಡುವ ಕೆಲಸವು ಚೆನ್ನಾಗಿ ಗೊತ್ತಿದೆ ಅದರಿಂದ ಅವನನ್ನು ಕರೆಯಿಸಿ ಚಾದರವು ಕತ್ತರಿಸಿದಲ್ಲಿ ರಫುಮಾಡಿಸಿಬಿಡಿರಿ; ಅಂದರೆ ಮೊದಲಿನಂತೆಯೇ ಆಗುತ್ತದೆ ” ಎಂದು ಹೇಳಲು ಎಲ್ಲರೂ ಸಮಾಧಾನವನ್ನು ಹೊಂದಿ ರಫುಗಾರನಿಂದ ರಫುಮಾಡಿಸಿ ಬಿಟ್ಟರು. ಕತ್ತರಿಸಿದ ಸ್ಥಳವು ಇಂಥಲ್ಲೇ ಇರುವದೆಂದು ತಿಳಿಯದೆ ಹೋಯಿತು ಪರಿಚಾರಕರಿಗೆಲ್ಲರಿಗೂ ಅತ್ಯಾನಂದವಾಯಿತು; ರಾತ್ರಿಯಲ್ಲಿ ಬಾದಶಹನು ಮಲಗಿಕೊಳ್ಳುವದಕ್ಕೆ ಬಂದು ಮೇಲು ಹಾಸಿಗೆಯನ್ನು ನೋಡಲು ಅದು ಮೊದಲಿನಂತೆಯೇ ಇತ್ತು ಕತ್ತರಿಸಿದ ಸ್ಥಳವು ಸಹ ಗೊತ್ತಾಗದೆ ಹೋಯಿತು ಆಗ ಅವನು ಪರಿಚಾರಕರನ್ನು ಕರೆದು “ ನಿನ್ನೆ ಈ ಮೇಲು ಹಾಸಿಗೆಯು ಕತ್ತರಿಸಲ್ಪಟ್ಟಿತು. ಈಗ ಅದು ಕಾಣುವದಿಲ್ಲ ವಲ್ಲಾ? ” ಎಂದು ಕೇಳಿದನು ಆದಕ್ಕೆ ಏನೊಂದುತ್ತರವನ್ನು ಸಹಾಕೊಡದೆ ಗಾಬರಿಯಾಗಿ ನಿಂತುಕೊಂಡನು ಆಗ ಬಾದಶಹನು “ ಗಾಬರಿಯಾಗಬೇಡ! ನಿನ್ನ ಅಪರಾಧವನ್ನು ಕ್ಷಮಿಸುತ್ತೇನೆ. ಸತ್ಯವಾಗಿ ಹೇಳು ” ಎಂದನು ಪರಿಚಾರಕನು “ ಪೃಥ್ವೀ

ನಾಥ ? ನಿನ್ನೆ ಹಾಸಿಗೆಯನ್ನು ತೆಗೆಯಲಿಕ್ಕೆಬಂದಾಗ, ಕತ್ತರಿಸಲ್ಪಟ್ಟಭಾಗವು ನನ್ನ ದೃಷ್ಟಿಗೆ ಬಿತ್ತು ಅದನ್ನು ಉಳಿದ ಪರಿಚಾರಕರಿಗೆ ತೋರಿಸಿದೆನು ನಾನು ಗಾಬರಿಯಾಗಿರುವದನ್ನು ನೋಡಿ ಒಬ್ಬವೃದ್ಧಮನುಷ್ಯನು ರಫುಮಾಡಿಸಿ ಬಿಡೆಂದು ಹೇಳಿದ್ದರಿಂದ ನಾನು ರಫುಗಾರನನ್ನು ಕರೆಯಿಸಿ ಮೇಲು ಹಾಸಿಗೆಯನ್ನು ಮೊದಲಿನಂತೆ ಮಾಡಿಸಿ ಬಿಟ್ಟೆನು ” ಆಗ ಬಾದಶಹನು ರಫುಗಾರನನ್ನು ಕರೆಯಿಸಿ “ ನೀನು ಈಗ ಕೆಲವು ದಿವಸಗಳಹಿಂದೆ ಒಂದು ಹಣದ ಚೀಲವನ್ನು ರಫುಮಾಡಿದ್ದಿಯಾ ? ಸತ್ಯವಾದ ಸಂಗತಿಯನ್ನು ತಿಳಿಸು ? ... ... *

ರಫುಗಾರ—“ ಅಹುದು; ಈಗ ನಾಲ್ಕೈದು ತಿಂಗಳುಗಳಹಿಂದೆ ಒಬ್ಬ ಕಾಜಿಗೆ ಒಂದು ಚೀಲವನ್ನು ರಫುಮಾಡಿ ಕೊಟ್ಟಿದ್ದೆನು, *

ಬಾದಶಹ— “ ಆ ಚೀಲದಲ್ಲಿ ಏನು ಯಿತ್ತು ? ಎಂಬುದು ನಿನಗೆ ಗೊತ್ತು, ಅದೆಯೋ ? ” ... ... *

ರಫುಗಾರ— ಅದರಲ್ಲಿ ತಾಮ್ರದ ನಾಣ್ಯಗಳು ಇದ್ದವು. ... *

ಬಾದಶಹ—ಆಕಾರ್ಯಕ್ಕೆ ನಿನಗೆ ಕಾಜಿಯು ಏನು ಕೊಟ್ಟನು. *

ರಫುಗಾರ—ಎರಡು ರೂಪಾಯಿಗಳನ್ನೂ ಕೊಟ್ಟಿದ್ದನು. ... *

ಬಾದಶಹ—ಅವುಗಳನ್ನು ನೀನು ವ್ಯಯಮಾಡಬಿಟ್ಟಿರುವಿಯೋ ! ಅಥವಾ ಇಟ್ಟುಕೊಂಡಿರುವಿಯೋ ! ... ... *

ರಫುಗಾರ-ಒಂದು ರೂಪಾಯಿಯನ್ನು ವ್ಯಯಮಾಡಿದ್ದೇನೆ ಒಂದುಹಾಗೇಅದೆ.

ಬಾದಶಹ—ಹಾಗಾದರೆ ;- ಆ ರೂಪಾಯಿಯನ್ನು ಶೀಘ್ರವಾಗಿ ತೆಗೆದು ಕೊಂಡು ಬಾ ! ... ... *

ರಫುಗಾರನು ರೂಪಾಯಿಯನ್ನು ತರಲಿಕ್ಕೆ ಹೋಗಲು, ಕಾಜಿಯನ್ನೂ ಆ ಸ್ತ್ರೀಯಳನ್ನೂ ಕರೆಯಿಸಿ ಕೊಂಡನು ಸ್ವಲ್ಪ ಅವಧಿಯೊಳಗಾಗಿ ರಫುಗಾರನು ಬಂದನು ಅವನನ್ನು ನೋಡಿದ ಕೂಡಲೆ ಕಾಜಿಯ ಮೋರೆಯು ಇಳಿಯಿತು. ಅವನ ಬಾಡಿದ ಮುಖವು ದೃಷ್ಟಿಗೆ ಬಿದ್ದಕೂಡಲೆ ಬಾದಶಹನಿಗೆ ಕಾಜಿಯು ಅಪರಾಧಿಯಾಗಿರುವನೆಂದು ನಿಶ್ಚಯವಾಗಿ ಹೋಯಿತು ಬಾದಶಹನು ಆ ರೂಪಾಯಿಯನ್ನು ಆ ಸ್ತ್ರೀಯಳ ಕೈಯಲ್ಲಿ ಕೊಟ್ಟು “ ಇದರಮೇಲೆ ನೀನು ಮಾಡಿರುವ ಚಿನ್ಹವು ಅದೆಯೋ ಹ್ಯಾಗೆ ! ಎಂಬದನ್ನು ಪರಿಕಿಸಿ ಹೇಳು ;” ಎಂದು ಹೇಳಿದನು ಅವಳು ಒಳ್ಳೇತೀಕ್ಷ್ಣದೃಷ್ಟಿಯಿಂದ ನೋಡಿ ಆ ಚಿನ್ಹವನ್ನು ಬಾದಶಹನಿಗೆ ತೋರಿಸಿದಳು. ಆ ಮೇಲೆ ಆ ಚೀಲವನ್ನು ರಫುಗಾರನಿಗೆ ತೋರಿಸಿ,- “ನೀನು ರಫುಮಾಡಿದ ಚೀಲವುಇದೆಯೋ?

ರಫುಗಾರ—ಜೀಯಾ ? ಅಹುದು ಇದೇಚೀಲವು.

ಬಾದಶಹ—ನೀನು ಯಾವಸ್ಥಳದಲ್ಲಿ ರಫುಮಾಡಿರುವಿ ! ಎಂಬದನ್ನು ತೋರಿಸು. ... ... *

ರಫುಗಾರ—ಇಲ್ಲಿಯೇ ಮಾಡಿದ್ದೇನೆ ನೋಡಬೇಕು.

ಬಾದಶಹ—(ಕಾಜಿಯನ್ನು ಕುರಿತು) ಯಾಕೆ ಇದರಮೇಲ್ ನಿನ್ನಅಭಿಪ್ರಾಯವೇನು ! ... ... *

ಆಗ ಕಾಜಿಯು ಹಿಂದೆಮುಂದೆ ತಿಳಿಯದೆ ನಿಂತುಕೊಂಡನು, ಅಧೋವದನನಾಗಿ ನೆಲವನ್ನು ನೋಡಹತ್ತಿದನು. ಆ ಕೂಡಲೇ ಇವನನ್ನು ಬಂಧನಮಾಡಿರಿ ಎಂದು ಸೇವಕರಿಗೆ ಆಜ್ಞಾಪಿಸಿದನು ಆಮೇಲೆ ಆ ಕಾಜಿಯ ಗೃಹಕ್ಕೆಹೋಗಿ ಶೋಧಮಾಡಿಸಲು ಚೀಲದಲ್ಲಿ ತುಂಬಿದ ಎಲ್ಲ ರೂಪಾಯಿಗಳು ದೊರೆತವು ಆ ಸ್ತ್ರೀಯು ಪ್ರತಿಯೊಂದು ರೂಪಾಯಿಯಮೇಲೆ ತಾನು ಮಾಡಿದ ಚಿನ್ಹವನ್ನು ತೋರಿಸಿದಳು, ಬಾದಶಹನು ಕಾಜಿಯ ಸ್ವತ್ತನ್ನೆಲ್ಲ ಸರಕಾರಕ್ಕೆ ಸೇರಿಸಿಬಿಡಿರಿ ಎಂದು ಅಪ್ಪಣೆಮಾಡಿದನು, ಆ ಮೇಲೆ ಆ ಸ್ತ್ರೀಯಳಿಗೆ ಆ ರೂಪಾಯಿಗಳನ್ನೆಲ್ಲ ಕೊಟ್ಟು ಇನ್ನುಮೇಲೆ ಹಣವನ್ನು ಪರರಸ್ವಾಧೀನಕ್ಕೆ ಕೊಡಬೇಕಾದರೆ ವಿಚಾರಮಾಡಿಕೊಂಡು ಕೊಡು! ಎಂದು ಬುದ್ಧಿಗಲಿಸಿ ಕಳುಹಿಕೊಟ್ಟನು. ... ... *

—(೧೪೯. ದಿಲ್ಲಿಯಲ್ಲಿ ಕಾಕಪಕ್ಷಿಗಳು ಎಷ್ಟು ಅವೆ !)—

ಒಂದುದಿವಸ ಬಾದಶಹನು ಎಲ್ಲರಿಗಿಂತಲೂ ಮುಂಚಿತವಾಗಿಯೇ ಓಲಗದಲ್ಲಿಬಂದು ಕುಳಿತುಕೊಂಡು ಬಂದ ಬಂದವರಿಗೆಲ್ಲ "ದಿಲ್ಲಿಯಲ್ಲಿ ಕಾಕಪಕ್ಷಿಗಳು ಎಷ್ಟುಅವೆ ! " ಎಂದು ಪ್ರಶ್ನೆಮಾಡಹತ್ತಿದನು. ಕಾಗೆಗಳ ಸಂಖ್ಯೆಯನ್ನು ಎಣಿಸುವರಾರು ! ಈ ಪ್ರಶ್ನೆಗೆ ಯಾರೂ ಉತ್ತರವನ್ನುಕೊಡದೆ ಸ್ವಸ್ಥವಾಗಿ ಕುಳಿತುಕೊಂಡು ಬಿಟ್ಟರು. ಬೀರಬಲನು ನಿಯಮಿತವಾದ ಸಮಯಕ್ಕೆ ಬಂದನು. ಆವನಿಗೂ ಬಾದಶಹನು ಇದೇ ಪ್ರಶ್ನೆಯನ್ನುಮಾಡಿದನು ಕೂಡಲೇ ಬೀರಬಲನು ತತ್ಕಾಲಕ್ಕೆ- "ನರವರ ? ನಮ್ಮ ದಿಲ್ಲಿಯಲ್ಲಿ ಒಟ್ಟು ಹದಿನೈದುನೂರಾ ಐವತ್ತೈದು ಕಾಗೆಗಳು ಇರುವವು " ಎಂದು ಉತ್ತರಕೊಟ್ಟನು. ಈ ಉತ್ತರದಿಂದ ಸಭಾಸದರಿಗೂ ಬಾದಶಹನಿಗೂ ಅತ್ಯಾಶ್ಚರ್ಯವಾಯಿತು. ಆಗ ಬಾದಶಹನು- "ಈ ಸಮಯದಲ್ಲಿ ನೀನು ಲೆಕ್ಕಮಾಡಿದವನಂತೆಯೇ ಹೇಳಿಬಿಟ್ಟೆ ? ಈ ಲೆಕ್ಕವನ್ನು ಮಾಡಲಿಕ್ಕೆ ನಿನಗೆ ಸಂಧಿಯು ಯಾವಾಗಸಿಕ್ಕಿತು, ನೀನು ಹೇಳಿದಸಂಖ್ಯೆಯು ಮಿಥ್ಯವಾಗಿ ಕಾಣುತ್ತದೆ" ಎಂದನು. ... ... *

ಬೀರಬಲ—ಸರಕಾರ ? ನಾನು ಹೇಳಿದಸಂಖ್ಯೆಯು ಅಸತ್ಯವಾದದ್ದಲ್ಲ ನಿಜವಿರುತ್ತದೆ.

ಬಾದಶಹ—ನೀನು ಹೇಳಿದಸಂಖ್ಯೆಯಲ್ಲಿ ಒಂದು ನ್ಯೂನಾಧಿಕವಾಗಿ ಕಂಡುಬಂದರೆ ನಿನಗೆ ಹದಿನೈದುಸಾವಿರದಾ ಮುನ್ನೂರಾ ಅರವತ್ತು ರೂಪಾಯಿಗಳನ್ನು ದಂಡಮಾಡಲಾದೀತು ವಿಚಾರ ಮಾಡಿಕೊಂಡು ಹೇಳು ?

ಬೀರಬಲ—ನಾನು ಈಗ ಹೇಳಿದಗಣನೆಗೆ ಸರಿಯಾಗಿ ಕಾಗೆಗಳು ಇರುವದುನಿಜವು; ನಾನು ಮಿಥ್ಯಾವಾದಿಯಲ್ಲ ನೀವು ಒಂದುವೇಳೆ ಲೆಕ್ಕಮಾಡಿ ನೋಡಲಾಗಿ ಒಂದೆರಡು ನ್ಯೂನಾಧಿಕವಾಗಿ ಕಂಡುಬಂದರೆ ಅದಕ್ಕೆ ನಾನು ಅಪರಾಧಿಯಾಗುವದಿಲ್ಲ, ಯಾಕಂದರೆ ನಾನು ಹೇಳಿದಸಂಖ್ಯೆಗಿಂತ ಹೆಚ್ಚು ಕಂಡುಬಂದರೆ ಪರಸ್ಥಳದಿಂದ ಬಂದಿರಬಹುದು; ಕಡಿಮೆಯಾಗಿ ತೋರಿದರೆ ಪರಸ್ಥಳಕ್ಕೆ ಹೋಗಿರಬಹುದು; ಯಾಕಂದರೆ- ಪಕ್ಷಿಗಳು ಪ್ರತಿದಿವಸ ಹೊರಗೆಹೋಗುವವು ಎಷ್ಟೋ ಇರುವವು. ಬರುವಂಥವು ಎಷ್ಟೋಇರುವವು ಹೀಗೆ ಆದಲ್ಲಿ ನಾನೇನು ಮಾಡಬೇಕು ? " ಎಂದನು. ಬೀರಬಲನ ಸಮಯೋಚಿತ ಉತ್ತರವನ್ನು ಕೇಳಿ ಬಾದಶಹನು ಸಂಭ್ರಮವನ್ನು ಹೊಂದಿದನು.

—(೧೫೦. ಅಂಧಕಾರ.)—

ಒಂದುದಿವಸ ಬಾದಶಹನು- " ಬೀರಬಲ್ಲ ! ಈ ಜಗತ್ತಿನಲ್ಲಿ ಎಲ್ಲರದೃಷ್ಟಿಗೂ ಗೋಚರವಾಗುವ ಒಂದು ವಸ್ತುವದೆ; ಆದರೆ ಅದು ಚಂದ್ರಮನ ನೇತ್ರಗಳಿಗೆ ಗೋಚರಿಸುವದಿಲ್ಲ; ಅಂಥ ಪದಾರ್ಥವು ಯಾವದು ! " ಎಂದು ಪ್ರಶ್ನೆ ಮಾಡಿದನು. ಬೀರಬಲ- " ಅಂಧಕಾರ "

—[೧೫೧. ರೇಷೆಯು ಚಿಕ್ಕದಾಯಿತು.]—

ಒಂದುದಿವಸ ಬಾದಶಹನು ಒಂದುಕಾಗದದಮೇಲೆ ಮಸಿಯಿಂದ ಒಂದು ರೇಷೆಯನ್ನು ಎಳೆದು ಬೀರಬಲನನ್ನು ಕುರಿತು - " ಈ ಕಾಗದವನ್ನು ಹರಿಯಬಾರದು, ರೇಷೆಯನ್ನು ಕೆಡಿಸಬಾರದು, ಹೀಗೆಮಾಡಿ ತೋರಿಸು " ಎಂದನು. ಆಕೂಡಲೆ ಬೀರಬಲನು ಲೆಕ್ಕಣಿಕೆಯನ್ನು ತೆಗೆದುಕೊಂಡು ಮೊದಲಿನ ರೇಷೆಯ ಹತ್ತರವೇ ಮತ್ತೊಂದನ್ನು ಸ್ವಲ್ಪ ಅಧಿಕವಾಗಿ ಎಳೆದು, " ಭೂಪಾಲ ? ತಮ್ಮ ರೇಷೆಯು ಈಗ ಚಿಕ್ಕದಾಯಿತಲ್ಲವೇ " ಎಂದು ಕೇಳಿದನು ಬಾದಶಹನು ಪ್ರಸನ್ನನಾದನು.

—[೧೫೨ ಬಾದಶಹನು ನಗುವಂತೆ ಮಾಡಿದ್ದು.)—

ಒಂದು ದಿವಸ ಬಾದಶಹನು ಬೀರಬಲನನ್ನು ಕುರಿತು, " ಈ ದಿವಸ ನೀನು ನನ್ನನ್ನು ನಗಿಸಿದರೆ ನಿನಗೆ ಅಧಿಕವಾದ ಪಾರಿತೋಷಕವನ್ನು ಕೊಡುವೆನು " ಎಂದನು. ಬೀರಬಲನು ಹಾಸ್ಯರಸಯುಕ್ತವಾದ ಎಷ್ಟೋ ಪ್ರಬಂಧಗಳನ್ನು ಹೇಳಿದನು. ಆದರೆ ಬಾದಶಹನು ನಗಬಾರದೆಂದು ಸಂಕಲ್ಪಮಾಡಿಕೊಂಡು ಕುಳಿತಿದ್ದನು. ಅಂತ್ಯದಲ್ಲಿ ಬೀರಬಲನು ಪರಾಜಿತನಾಗಿ ಬಾದಶಹನ ಕಿವಿಯ ಹತ್ತರ ತನ್ನ ಮುಖವನ್ನು ಒಯ್ದು- " ಈ ದಿವಸ ನೀವು ನಗುವಿರೋ ಇಲ್ಲವೋ ಎಂಬದನ್ನು ಸತ್ಯವಾಗಿ ಹೇಳಬಿಡಿರಿ; ನೀವು ನಗದಿದ್ದರೆ ನಾನು ಗುದುಗುಲಿಯನ್ನು ಮಾಡುವೆನು " ಎಂದನು ಈ ಮಾತು ಕಿವಿಗೆ ಬಿದ್ದಕೂಡಲೆ ಬಾದಶಹನು ನಗುತ್ತ ಎದ್ದು ಅಧಿಕವಾದ ಉಚಿತವನ್ನಿತ್ತನು. ... ... *

—[೧೫೩. ಪ್ರಸಂಗಾವಧಾನವು ಅಧಿಕವಾದದ್ದು.]—

ಒಂದುದಿವಸ ಬೀರಬಲನು ಯಮುನಾ ನದಿಯಿಂದ ಸ್ನಾನಮಾಡಿಕೊಂಡು ಬರುತ್ತಿದ್ದನು ಆಗ ಬಾದಶಹನು ಅವನ ಪ್ರಸಂಗಾವಧಾನವನ್ನು ಪರೀಕ್ಷಿಸಬೇಕೆಂದು ಯೋಚಿಸಿ ಅವನ ಮೈಮೇಲೆ ಮತ್ತಗಜವನ್ನು ಬಿಡಿಸಿದನು, ಮಾರ್ಗವು ಬಹಳೇ ಇಕ್ಕಟ್ಟಾಗಿತ್ತು ಪಲಾಯನಮಾಡುವದಕ್ಕೂ ಸಹ ಸಂಧಿಯು ದೊರೆಯದೇ ಹೋಯಿತು, ಅದರಿಂದ ಆತ್ಮರಕ್ಷಣೆಯನ್ನು ಹ್ಯಾಗೆ ಮಾಡಿಕೊಳ್ಳಬೇಕೆಂದು ಸುತ್ತುಮುತ್ತು ನೋಡುವಷ್ಟರಲ್ಲಿ ಒಂದು ಮಲಗಿದ ಶುನಕವು ದೃಷ್ಟಿಗೆಬಿತ್ತು ಆ ಕೂಡಲೇ ಬೀರಬಲನು ಆ ಗ್ರಾಮಸಿಂಹದ ಎರಡು ಹಿಂಗಾಲುಗಳನ್ನು ಹಿಡಿದು ಗಜದ ಸೊಂಡಿಯಮೇಲೆ ಹೊಡೆದನು. ನಾಯಿಯು ಗಜದ ಗಂಡಸ್ಥಳದಲ್ಲಿ ಬಿದ್ದಕೂಡಲೇ ಬೊಗಳುತ್ತಾ ಉಗುರುಗಳಿಂದ ಗಾಯವನ್ನುಮಾಡಿತು, ಮದ್ದಾನೆಯು ಗಾಬರಿಯಾಗಿ ಹಿಂದಕ್ಕೆಸರಿಯಿತು, ಅವಸರವನ್ನು ನೋಡಿಕೊಂಡು ಬೀರಬಲನು ಪಲಾಯನಮಾಡಿದನು, ಬೀರಬಲನ ಪ್ರಸಂಗಾವಧಾನವು ಅಧಿಕವಾದದ್ದೆಂದು ಬಾದಶಹನು ಒಪ್ಪಿಕೊಂಡನು.

೧೫೪. ಯಾವಪುಷ್ಪವು ಶ್ರೇಷ್ಠವಾದದ್ದು ? ಯಾವದಂತವು ಶ್ರೇಷ್ಠವಾದದ್ದು? ಯಾವಪುತ್ರನು ಶ್ರೇಷ್ಠನು ! ರಾಜರಲ್ಲಿ ಶ್ರೇಷ್ಠತೆಯನ್ನು ಪಡೆದವನು ಯಾವನು ! ಯಾವಗುಣವು ಪ್ರಶಂಸಾರ್ಹವಾದದ್ದು !

ಒಂದುದಿವಸ ಬಾದಶಹನು ಎಲ್ಲಸಭಾಸದರಿಗಿಂತಲೂ ಮುಂಚಿತವಾಗಿ

ಬಂದು ಕುಳಿತುಕೊಂಡು ಎಲ್ಲ ಸಭಾಸದರು ಬಂದಮೇಲೆ ಅನವರಖಾ ಎಂಬವನನ್ನು ಕುರಿತು ಮೇಲೆಬರೆದ ಪ್ರಶ್ನೆಗಳನ್ನುಮಾಡಿದನು. ಆಗ ಅನವರ ಖಾನನು- ಜಹಾಪನಾ ? ನಾನು ಹೇಳಿದ ಉತ್ತರವು ತಮಗೆ ಸರಿಬಾರದಿದ್ದರೆ ನನಗೆ ಅವಮಾನವಾದೀತು ! ಅದರಿಂದ ಎಲ್ಲರ ಅಭಿಪ್ರಾಯವನ್ನು ಕೇಳಿಕೊಂಡು ಉತ್ತರಕೊಡುತ್ತೇನೆ ಎಂದು ಹೇಳಿದನು. ಈಮಾತಿಗೆ ಬಾದಶಹನು ಸಮ್ಮತಿಸಿದ್ದರಿಂದ ಅನವರಖಾನನು ಯಾವತ್ತುಸಭಾಸದರ ಅಭಿಪ್ರಾಯವನ್ನು ಕೇಳಿಕೊಂಡು "ಭೂವರ ? ಪುಷ್ಪಗಳಲ್ಲಿ ಮಲ್ಲಿಕಾಪುಷ್ಪವು ಶ್ರೇಷ್ಠವಾದದ್ದು, ದಂತಗಳಲ್ಲಿ ಗಜದಂತವು ಶ್ರೇಷ್ಠವಾದದ್ದು, ರಾಜಪುತ್ರನು ಎಲ್ಲರಿಗಿಂತಲೂ ಶ್ರೇಷ್ಠನು, ರಾಜರಲ್ಲಿ ಚಕ್ರವರ್ತಿಯಾದವನು ಮಿಗಿಲಾದವನು. ಗುಣಗಳಲ್ಲಿ ವಿದ್ಯೆಯು ಶ್ರೇಷ್ಠವಾದದ್ದು; " ಎಂದು ನಿವೇದಿಸಿದನು. ಈ ಉತ್ತರಗಳಿಂದ ಬಾದಶಹನ ಮನಸ್ಸು ತೃಪ್ತವಾಗಲಿಲ್ಲ, ಕಿಂಚಿತ್ಕಾಲದಮೇಲೆ ಬೀರಬಲನು ಬರಲು ಅವನಿಗೆ ಅದೇ ಪ್ರಶ್ನೆಗಳನ್ನು ಮಾಡಿದನು, ಆಕೂಡಲೇ ಬೀರಬಲನು ಸ್ವಲ್ಪಾದರೂ ಯೋಚಿಸದೆ - " ಸರಕಾರ ಹೂವುಗಳಲ್ಲಿ ಹತ್ತಿಯಹೂವು ಮೇಲಾದದ್ದು, ಯಾಕಂದರೆ ಅದರಿಂದ ವಸ್ತ್ರಗಳು ಉತ್ಪನ್ನವಾಗುತ್ತವೆ ಅದರಿಂದ ಯಾವತ್ತುಮನುಷ್ಯರ ಶರೀರಸಂರಕ್ಷಣೆಯಾಗುತ್ತದೆ. ದಂತದಲ್ಲಿ ನೇಗಿಲದ ದಂತವು ಶ್ರೇಷ್ಠವಾದದ್ದು; ಯಾಕಂದರೆ ಅದರಿಂದಲೇ ಭೂಮಿಯನ್ನು ಹಸನುಮಾಡಲಿಕ್ಕೆ ಬರುತ್ತದೆ. ಗೋಪುತ್ರನು ಎಲ್ಲರಕಿಂತಲೂ ಶ್ರೇಷ್ಠನು, ಯಾಕಂದರೆ ಅವನಿಂದ ಹಲವುಪ್ರಕಾರದ ಪ್ರಯೋಜನಗಳುಂಟಾಗುತ್ತವೆ. ರಾಜರಲ್ಲಿ ಇಂದ್ರನು ಮಿಗಿಲಾದವನು, ಯಾಕಂದರೆ ಅವನು ವೃಷ್ಟಿಯನ್ನುಂಟುಮಾಡಿ ಭೂಲೋಕದೊಳಗಿನ ಪ್ರಾಣಿಗಳನ್ನು ಸಂರಕ್ಷಿಸುತ್ತಾನೆ; ಸರ್ವಗುಣಗಳಲ್ಲಿ ಧೈರ್ಯವು ಮಿಗಿಲಾದದ್ದು, ಯಾಕಂದರೆ ಧೈರ್ಯವಿಲ್ಲದಿದ್ದರೆ ಉಳಿದಗುಣಗಳಿಂದ ಯಾವಪ್ರಯೋಜನವೂ ಆಗುವಂತೆ ಇಲ್ಲ; ಈ ಉತ್ತರಗಳಿಂದ ಬಾದಶಹನಮನಸ್ಸು ಪ್ರಸನ್ನವಾಯಿತು. ... ...

—*(೧೫೫. ಎಲ್ಲರ ಕಿಂತಲೂ ಹೆಚ್ಚಿನವನು ಯಾರು ?)*—

ಒಂದು ದಿವಸ ಬಾದಶಹನೂ ಬೀರಬಲನೂ ಉಪವನದಲ್ಲಿ ಕುಳಿತುಕೊಂಡು ವಾಯು ಸೇವನೆಯನ್ನು ಮಾಡುತ್ತಿದ್ದರು ಆಗಬಾದಶಹನು-"ಬೀರಬಲ್ಲ ! ಈ ಪ್ರಪಂಚದಲ್ಲಿ ಎಲ್ಲರಕಿಂತಲೂ ಹೆಚ್ಚಿನವನು ಯಾರು? " ಎಂದು ಕೇಳಿದನು ಆಗ ಬೀರಬಲನು ಆಲೋಚಿಸಿದ್ದೇನಂದರೆ, " ಇವನಿಗೆ ರಾಜ್ಯಮದವು ತಲೆಗೇರಿದೆ ತಾನೇ ಹೆಚ್ಚಿನವನೆಂದು ತಿಳಿದುಕೊಂಡು, ಈ ಪ್ರ

ಶ್ನೆಯನ್ನು ಮಾಡಿದ್ದಾನೆ ಇವನ ಮದವನ್ನು ಇಳಿಸಬೇಕು" ಎಂದು ನಿಶ್ಚಯಿಸಿ,-"ಭೂವರ! ಎಲ್ಲರಕಿಂತಲೂ ಚಿಕ್ಕಬಾಲಕನು ಹೆಚ್ಚಿನವನು ರಾಜನೇ ಆಗಲಿ ಬಲವಂತನೇ ಆಗಲಿ, ಧನವಂತನೇ ಆಗಲಿ, ಅವನು ಬಾಲಕನಕಿಂತಲೂ ಹೆಚ್ಚಿನವನು ಆಗಲಾರನೆಂದು ನಾನು ನಂಬಿದ್ದೇನೆ" ಎಂದನು ಈ ಮಾತುಗಳನ್ನು ಕೇಳಿ ಬಾದಶಹನು ನಗ ಹತ್ತಿದನು ಆಮೇಲೆ ಇದರಕಾರಣವನ್ನು ವಿವರಿಸಿ ಹೇಳೆಂದು ಅಪ್ಪಣೆ ಮಾಡಿದನು ಆಗ ಬೀರಬಲನು-"ಈ ಸಂಗತಿಯನ್ನು ಶಬ್ದಗಳಿಂದ ತಿಳಿಸಿ ಹೇಳಲಿಕ್ಕೆ ಬರುವದಿಲ್ಲ, ಅದನ್ನು ಪರೀಕ್ಷಿಸಿ ನೋಡಬೇಕು" ಎಂದನು. ... ... *

ಮುಂದೆ ಎಂಟು ದಿವಸಗಳಾದ ಮೇಲೆ ಬಾದಶಹನು ಒಂದೂವರೆ ಎರಡು ವರುಷಗಳಾಗಿದ್ದ ಒಬ್ಬ ಸುಂದರ ಬಾಲಕನನ್ನು ಕರೆದುಕೊಂಡು ಬಾದಶಹನ ಸನ್ನಿಧಿಗೆಬಂದನು ಆ ಬಾಲಕನು ಅತಿ ಚಪಲನಾಗಿದ್ದು ಸುಂದರನಾಗಿದ್ದನು ಬಾದಶಹನುಆ ಬಾಲಕನನ್ನು ನೋಡಿ ಪ್ರಸನ್ನ ಮನನಾಗಿ ಆ ಬಾಲಕನನ್ನು ಎತ್ತಿಕೊಂಡು ಮುದ್ದಾಡ ಹತ್ತಿದನು ಆ ಬಾಲಕನು ತನ್ನ ಬಾಲ ಭಾವಕ್ಕನುಗುಣವಾಗಿ ಬಾದಶಹನ ವದನ ಕೇಶಗಳನ್ನು ಜಗ್ಗಿದನು ಆಗ ಬಾದಶಹನು ಸ್ವಲ್ಪ ಕುಪಿನಾಗಿ "ಬೀರರಬಲ! ಇಂಥ ಬಾಲಕನು ನಿನಗೆ ಎಲ್ಲಿ ದೊರಕಿದನು ಬಳ್ಳೇ ನಿಭೀತನಾಗಿದ್ದಂತೆಕಂಡು ಬರುತ್ತದೆ" ಎಂದನು ಆಗ ಬೀರಬಲನು-"ಪೃಥ್ವೀಶ! ತಾವು ಬಾದಶಹ ರಾಗಿದ್ದರೇನು? ನಿಮ್ಮಕಿಂತಲೂ ಈ ಬಾಲಕನೇ ಹೆಚ್ಚಿನವನುಯಾಕಂದರೆ ಅವನು ಮನಸ್ಸಿಗೆ ಬಂದದ್ದನ್ನುಮಾಡಬಿಡುತ್ತಾನೆ ತಮ್ಮ ಶರೀರವನ್ನು ಸ್ಪರ್ಶ ಮಾಡುವಷ್ಟು ಸಾಮರ್ಥ್ಯವು ಯಾವನಲ್ಲಿರುವದು? ಹೀಗಿದ್ದರೂ ಈ ಬಾಲಕನು ನಿಮ್ಮ ವದನದ ಕೇಶಗಳಿಗೆ ಕೈಹಾಕಿದನು ಆದ್ದರಿಂದ ಎಲ್ಲರ ಕಿಂತಲೂ ಬಾಲಕನು ಹೆಚ್ಚಿನವನೆಂದು ಹೇಳಿದ್ದೆನು" ಅಂದನು ಇದನ್ನು ಕೇಳಿ ಬಾದಶಹನು ತುಷ್ಟನಾಗಿ ಆ ಬಾಲಕನನ್ನು ಬೀರಬಲನ ವಶಕ್ಕೆ ಕೊಟ್ಟನು. *

ಬೀರಬಲನು ಆ ಬಾಲಕನನ್ನು ತನ್ನಮನೆಗೆ ಕರೆದುಕೊಂಡುಹೋಗಿ ಉತ್ತಮವಾದ ವಸ್ತ್ರಾಭರಣಗಳನ್ನಿತ್ತು ಆ ಬಾಲಕನ ಮಾತಾ ಪಿತೃಗಳಿಗೆ ಒಪ್ಪಿಸಿದನು. ... . *

—(೧೫೬. ಬೀರಬಲ್ಲ "ರಾಂಧತಗಾಯ")—

ಬಾದಶಹನೂ ಬೀರಬಲನೂ ಯಾವಾಗಲಾದರೂ ಒಮ್ಮೊಮ್ಮೆ ವಿನೋದದ ಮಾತುಗಳನ್ನಾಡುತ್ತ ಕುಳಿತು ಕೊಳ್ಳುತ್ತಿದ್ದರು ಬೀರಬಲನು ವ್ಯಗಾರ್ಥವುಳ್ಳ ಶಬ್ದಗಳನ್ನು ಪ್ರಯೋಗಿಸಿದ ಕೂಡಲೆ, ಅದರ ನಿಜವಾದ ಅರ್ಥವು

ತಿಳಿಯದೆ. ಸಿಟ್ಟಿಗೇಳುತ್ತಿದ್ದನು ಆದರೆ ಬೀರಬಲನು ಎಂದೂ ಕ್ರುದ್ಧನಾಗುತ್ತಿದ್ದಿಲ್ಲ, ಒಂದು ದಿವಸ ಬೀರಬಲನಿಗೆ ಸಿಟ್ಟಿಗೆಬ್ಬಿಸಬೇಕೆಂದು ಬಾದಶಹನು ನಿಶ್ಚಯಿಸಿಕೊಂಡು ಮಾತು ಮಾತುಗಳನ್ನಾಡುತ್ತ "ಬೀರಬಲ್ಲ ರಾಂಧ ತಗಾಯು" ಅಂದರೆ (ಗೋವನ್ನು ಸೇವಿಸುವವನು) ಎಂದನು ಬಾದಶಹನಾಡಿದ ಗೂಢವಾಕ್ಯದ ಎರಡೂಬಗೆಯ ಅರ್ಥಗಳು ಬೀರಬಲನ ಮನಸ್ಸಿನಲ್ಲಿ ಹೊಳೆದವು ಅವನು ಕ್ರುದ್ಧನಾಗದೆ, "ಬಾದಶಹ ಶುಕರ ಖಾಯು" ಎಂದನು ಅದನ್ನು ಕೇಳಿದ ಕೂಡಲೆ ಬಾದಶಹನು ಅತಿ ಕ್ರುದ್ಧನಾಗಿ "ಬೀರಬಲ್ಲ! ನನಗೆ ಹಂದಿಯನ್ನು ತಿನ್ನಿಸುವಿಯಾ?" ಎಂದು ಕೇಳಿದನು ಅವಕ್ಕೆ ಬೀರಬಲನು ಪ್ರತ್ಯುತ್ತರವಾಗಿ "ಪೃಥ್ವೀಶ, ತಾವುಮಾತ್ರ ನನಗೆ ಗೋವನ್ನು ಸೇವಿಸುವವನು ಎಂದು ಅನ್ನಬಹುದೇ" ಎಂದು ಕೇಳಿದನು ಆಗ ಬಾದಶಹನು ತನ್ನಮಾತಿನ ಅರ್ಥವನ್ನು ಪಲ್ಲಟಮಾಡಿ, "ನಾನು ಹಾಗೆ ಅಂದಿರುವದಿಲ್ಲ, ಗೋವನ್ನು ಆರಾಧಿಸುವ ಕಾಲದಲ್ಲಿ ಗಾಯನ ಮಾಡುತ್ತೀ" ಎಂದು ಅಂದನು ಅದಕ್ಕೆ ನೀನೇಕೆ ಈಪರಿ ಕೋಪವನ್ನು ತಾಳಿದಿ!" ಎಂದು ಕೇಳಿದನು ಆಕೂಡಲೆ ಬೀರಬಲನು-"ಪೃಥ್ವೀನಾಥ ನಾನು ತಮಗೆ ಹಂದಿಯನ್ನು ತಿನ್ನುವವನು ಎಂದು ಯಾವಾಗ ನುಡಿದೆನು, ನಾನು ಹೀಗೆ ಅಂದೆನಲ್ಲಾ ಬಾದಶಹನು ಶುಕರ ಖಾಯು ಅಂದರೆ ಶುಕಗಳನ್ನು ರಕ್ಷಿಸಿದ್ದಾನೆ." ಎಂದು ನುಡಿದಿದ್ದೆನು ತಮಗೆ ನನ್ನ ಮಾತಿನ ಭಾವವು ತಿಳಿಯದೆ, ವೃಥಾ ಕೋಪವನ್ನು ತಾಳಿದಿರಿ!" ಎಂದು ಅಂದನು. ಈ ಪ್ರಕಾರ ಅವರಿಬ್ಬರು ತಮ್ಮ ತಮ್ಮ ಮನಸ್ಸಿನ ಸಮಾಧಾನ ಮಾಡಿಕೊಂಡರು.

—(೧೫೭. ಫಕೀರನು ನಿಸ್ಪೃಹತೆಯನ್ನು ತೋರಿಸಿದ್ದು.)—

ಒಬ್ಬ ಬ್ರಾಹ್ಮಣನು ತನ್ನ ಹೊಟ್ಟೆಗೆ ಸಹಾ ಪೂರ್ಣ ತಿನ್ನದೆ, ಒಂದು ಸಾವಿರ ರೂಪಾಯಿಗಳನ್ನು ಕೂಡ ಹಾಕಿದ್ದನು ಅವನ ಮನಸ್ಸಿನಲ್ಲಿ ಕಾಶೀ ವಿಶ್ವನಾಥನ ದರುಶನ ತಗೆದುಕೊಂಡು ಬರಬೇಕೆಂಬ ಸುಬುದ್ಧಿಯು ಹುಟ್ಟಿತು ಆಗ ತನ್ನ ಬಳಿಯಲ್ಲಿದ್ದ ರೂಪಾಯಿಗಳನ್ನು, ಯಾವನಾದರೊಬ್ಬ ವಿಶ್ವಾಸಿಕನಾದ ಮನುಷ್ಯನ ಬಳಿಯಲ್ಲಿ ಇಟ್ಟು ಹೋಗಬೇಕೆಂದು ಯೋಚಿಸಿ ಶೋಧ ನಡೆಯಿಸಿದನು. .... *

ಅದೇ ಊರಲ್ಲಿ ಒಬ್ಬ ಫಕೀರನು ಊರಹೊರಗೆ ಒಂದು ಗುಡಿಸಿಲವನ್ನು ಕಟ್ಟಿಕೊಂಡು ಸಾಯಂಕಾಲದ ತನಕ ಊರೊಳಗೆ ಬಂದು ಭಿಕ್ಷೆಯನ್ನೆತ್ತಿಕೊಂಡು ಪುನಃ ತನ್ನ ಪರ್ಣಕುಟೀರಕ್ಕೆ ಬರುತ್ತಿದ್ದನು ಹೀಗಿರಲು ಒಂದಾನೊಂದು ದಿವಸ ಆ ಬ್ರಾಹ್ಮಣನಿಗೆ ಈ ಫಕೀರನ ಸಂದರ್ಶನವಾಯಿ

ತು ಅವನನ್ನು ನೋಡಿದ ಕೂಡಲೆ ಆ ಬ್ರಾಹ್ಮಣನ ಮನಸ್ಸಿನಲ್ಲಿ "ಈ ಫಕೀರನ ಬಳಿಯಲ್ಲಿ ನನ್ನ ಹಣವನ್ನಿಟ್ಟರೆ, ಸುರಕ್ಷಿತವಾಗಿ ಇರಬಹುದು, ಎಂಬ ಆಲೋಚನೆಯು ಹುಟ್ಟಿತು ಮರುದಿವಸ ಆ ಬ್ರಾಹ್ಮಣನು ರೂಪಾಯಿಗಳನ್ನು ಕಟ್ಟಿಕೊಂಡು ಫಕೀರನ ಹತ್ತರಬಂದು "ಸಾಂ ಈ ಸಾಹೇಬ! ನಾನು ಕಾಶೀಯಾತ್ರೆಗೆ ಹೊರಡಬೇಕೆಂದು ಯೋಚಿಸಿದ್ದೇನೆ ನನ್ನಲ್ಲಿರುವ ಈ ಹಣವನ್ನು ಸಂಗಡ ತೆಗೆದುಕೊಂಡುಹೋದರೆ ಮಾರ್ಗದಲ್ಲಿ ಚೋರೋಪದ್ರದ ಭಯವುಂಟಾಗುವದು ಅದರಿಂದ ಈ ಹಣವನ್ನು ತಮ್ಮವಶಕ್ಕೆ ಕೊಟ್ಟುಹೋಗಬೇಕೆಂದು ಮಾಡಿದ್ದೇನೆ" ಎಂದು ವಿನಯಪೂರ್ವಕವಾಗಿ ಹೇಳಿಕೊಂಡನು. ಅದನ್ನು ಕೇಳಿ ಫಕೀರನು- "ಛೇ, ಛೇ ಈಕೆಲಸವು ನನ್ನಿಂದ ಅಸಾಧ್ಯವು. ನೀನು ಈ ಹಣವನ್ನು ಬೇರೆಯವರ ವಶಕ್ಕೆಕೊಟ್ಟು ಹೋಗು ಎಂದನು. ಈಪ್ರಕಾರ ನಿಸ್ಪೃಹತೆಯ ಮಾತುಗಳನ್ನು ಕೇಳಿ ಆ ಫಕೀರನ ಮೇಲೆ ಹೆಚ್ಚು ವಿಶ್ವಾಸವು ಹುಟ್ಟಿ, "ಶಾಹಸಾಹೇಬ? ತಾವೇ ಕೃಪೆಮಾಡಿ ಈ ಹಣವನ್ನು ಇಟ್ಟುಕೊಳ್ಳಬೇಕು" ಎಂದು ಹೇಳಿದನು. ಆಗ ಫಕೀರನು ಬ್ರಾಹ್ಮಣನ ಆಗ್ರಹದಿಂದ ಒಪ್ಪಿಕೊಂಡು ಅವನಕಡೆಯಿಂದಲೇ ಒಂದುಕಡೆಯಲ್ಲಿ ಭೂಗತಮಾಡಿಸಿದನು, ಫಕೀರನ ಹೇಳಿಕೆಯಂತೆ ವ್ಯವಸ್ಥೆಯನ್ನು ಮಾಡಿ ಬ್ರಾಹ್ಮಣನು ನಿಶ್ಚಿಂತನಾಗಿ ಯಾತ್ರೆಗೆ ಹೊರಟುಹೋದನು.

ಮುಂದೆ ಎರಡು ವರುಷಗಳ ಮೇಲೆ ಬ್ರಾಹ್ಮಣನು ಯಾತ್ರೆಯಿಂದ ಮರಳಿಬಂದು ತನ್ನ ಹಣವನ್ನು ತೆಗೆದುಕೊಳ್ಳಬೇಕೆಂದು ಫಕೀರನ ಬಳಿಗೆ ಹೋಗಿ ತನ್ನ ಹಣವನ್ನು ಕೊಡಿರೆಂದು ಕೇಳಿದನು. ಆಗ ಫಕೀರನು ನಾನು ನಿನ್ನ ಹಣವನ್ನು ಕಣ್ಣೆತ್ತಿ ಸಹಾ ನೋಡಿಲ್ಲ, ನೀನು ಎಲ್ಲಿ ಭೂಗತ ಮಾಡಿದ್ದಿಯೋ ಅಲ್ಲಿಯೇ ಇರಬಹುದು ತೆಗೆದುಕೊಂಡು ಹೋಗು? ಎಂದು ಹೇಳಿದನು ಬ್ರಾಹ್ಮಣನು ಆಸ್ಥಳವನ್ನು ಅಗಿದು ನೋಡಿದನು ಹಣವು ಇದ್ದಿಲ್ಲ; ಬಹಳ ದುಃಖಿತನಾಗಿ ಫಕೀರನ ಬಳಿಗೆಬಂದು ಹೇಳಿದನು ಅವನು ಆಮಾತನ್ನು ಕಿವಿಯ ಮೇಲೆಹಾಕಿಕೊಳ್ಳಲಿಲ್ಲ; ನಿರುಪಾಯನಾಗಿ ತನ್ನ ದಡ್ಡತನಕ್ಕೆ ತಾನೇ ನಿಂದಿಸಿಕೊಳ್ಳುತ್ತ ಪಶ್ಚಾತ್ತಾಪಯುಕ್ತನಾಗಿ ಮನೆಗೆ ಬರುತ್ತಿರಲು, ಈ ಸಂಗತಿಯನ್ನು ಬಾದಶಹನಿಗೆ ತಿಳಿಸಿ ನೋಡಬೇಕೆಂಬ ಯೋಚನೆಯು ಹುಟ್ಟಿತು ಆ ಕೂಡಲೆ ಬಾದಶಹನಸನ್ನಿಧಿಗೆಬಂದು ತನ್ನ ವೃತ್ತಾಂತವನ್ನೆಲ್ಲ ನಿವೇದಿಸಿದನು ಬಾದಶಹನಿಗೆ ದೊಡ್ಡ ಯೋಚನೆಯೇ ಬಿತ್ತು ಬೀರಬಲನು ಬಳಿಯಲ್ಲಿಯೇ ಇದ್ದನು. ಅವನು ಬಾದಶಹನನ್ನು ಕುರಿತು "ಪೃಥ್ವೀನಾಥ? ತಾವು ಚಿಂತೆ ಮಾಡಬಾರದು ನಾನು ಇವನ ಹಣವನ್ನು ಇವ

ನಿಗೆ ಕೊಡಿಸುತ್ತೇನೆ" ಎಂದನು ಬಾದಶಹನು ಪ್ರಸನ್ನನಾದನು ಬೀರಬಲನು ತನ್ನ ನಂಬಿಗೆಯ ಒಬ್ಬ ಮನುಷ್ಯನನ್ನು ಕರೆದು ಅವನ ಕೈಯಲ್ಲಿ ಆ ಭರಣಗಳ ಒಂದು ಗಂಟನ್ನು ಕೊಟ್ಟು, ಅವನ ಕಿವಿಯಲ್ಲಿ ಏನೋ ಹೇಳಿದನು ಅವನು ಆ ಗಂಟನ್ನು ತಕ್ಕೊಂಡು ಫಕೀರನ ಕಡೆಗೆ ಹೊರಟನು ಮುಂದೆ ಕಿಂಚಿತ್ಕಾಲದ ಮೇಲೆ ಆ ಬ್ರಾಹ್ಮಣನನ್ನು ಕರೆದು "ನಾನು ಈಗ ಕಳುಹಿಸಿಕೊಟ್ಟಿರುವ ಮನುಷ್ಯನು ಆ ಫಕೀರನಿದ್ದ ಸ್ಥಳಕ್ಕೆ ತಲುಪಿರಬಹುದು ನೀನು ಓಡುತ್ತ ಅಲ್ಲಿಗೆ ಹೋಗಿ ಆ ಮನುಷ್ಯನ ಸಮಕ್ಷಮ ನಿನ್ನ ಹಣವನ್ನು ಕೇಳು! ಅಂದರೆ ಆ ಕೂಡಲೆ ಕೊಟ್ಟು ಬಿಡುತ್ತಾನೆ; ಎಂದು ಹೇಳಿ ಕಳುಹಿಸಿದನು. ... ... *

ಬೀರಬಲನ ವಿಶ್ವಾಸಿಕ ನಾದ ಮನುಷ್ಯನು ಫಕೀರನ ಬಳಿಗೆ ಹೋಗಿ "ನನ್ನ ಸಹೋದರನು ಪ್ರವಾಸಕ್ಕೆ ಹೋಗಿದ್ದಾನೆ ಇನ್ನೂ ವರೆಗೂ ಬರಲಿಲ್ಲ ಅವನನ್ನು ಶೋಧಮಾಡಿ ಕರೆದುಕೊಂಡು ಬರಬೇಕೆಂದು ನನ್ನ ಮನಸ್ಸಿನಲ್ಲಿ ಕುತೂಹಲವು ಉತ್ಪನ್ನವಾಗಿದೆ ಅದರಿಂದ ಈ ಆಭರಣದ ಗಂಟನ್ನು ದಯಮಾಡಿ ತಮ್ಮ ಬಳಿಯಲ್ಲಿಟ್ಟುಕೊಂಡರೆ ಮಹದುಪಕಾರವಾಡಿದಂತೆ ಆಗುತ್ತದೆ" ಎಂದು ಹೇಳಿಕೊಳ್ಳ ಹತ್ತಿದ್ದನು. ಫಕೀರನು ನಿಸ್ಪೃಹತೆಯನ್ನು ಪ್ರಕಟೀಕರಿಸಬೇಕೆಂದು "ನಾನು ಪರರ ಸ್ವತ್ತನ್ನು ಮುಟ್ಟುವದಿಲ್ಲ; ಆದ್ದರಿಂದ ನಿನ್ನ ದ್ರವ್ಯವನ್ನು ಬೇರೆ ನಂಬಿಗಸ್ತರಾದವರ ಬಳಿಯಲ್ಲಿ ಇಟ್ಟು ಹೋಗು!" ಎಂದು ಹೇಳಿದನು ಅದಕ್ಕೆ ಆ ಮನುಷ್ಯನು "ಶಾಹುಸಾಬರೇ ಪ್ರಪಂಚಿಕರಾದವರೆಲ್ಲರು ಹಣದಾಶೆಯುಳ್ಳವರೇ, ತಮ್ಮಂಥವರ ಸ್ಥಿತಿಯು ಹಾಗಲ್ಲ ನೀವು "ಪರದ್ರವ್ಯಾಣಿ ಲೋಷ್ಟವತ್" ಎಂದು ತಿಳಿಯತಕ್ಕವರು ನನಗೆ ನಿಮ್ಮ ಹೊರತು ಬೇರೆಯವರ ವಿಶ್ವಾಸವಿಲ್ಲ, ಅದರಿಂದ ತಮ್ಮ ವಶದಲ್ಲಿಯೇ ಈ ಆಭರಣಗಳನ್ನು ಕೊಟ್ಟು ಹೋಗಬೇಕೆಂದು ಯೋಚಿಸಿದ್ದೇನೆ" ಎಂದು ಹೇಳಿ ಆ ಗಂಟನ್ನು ಬಿಚ್ಚಿ ತೋರಿಸಿದನು. ಆಗ ಫಕೀರನ ಮನಸಿನಲ್ಲಿ ಆ ಶಾಂಕುರವು ಉತ್ಪನ್ನವಾಯಿತು, ಅಷ್ಟರಲ್ಲಿ ಮೊದಲಿನ ಬ್ರಾಹಣನು ಬಂದು "ಸಾಂ ಇಸಾಹೇಬ! ನಾನು ಯಾತ್ರಾರ್ಥವಾಗಿ ಗಮನ ಮಾಡುವ ಕಾಲದಲ್ಲಿ ನಿಮ್ಮ ವಶಕ್ಕೆ ಕೊಟ್ಟು ಹೋದ ಧನವನ್ನು ಕೃಪಾಳುಗಳಾಗಿ ಕೊಟ್ಟು ಬಿಡಬೇಕು, ತಮ್ಮಂಥ ಸಾಧುಗಳು ಪರದ್ರವ್ಯಾಪಹಾರ ಮಾಡುವದು ಉಚಿತವಲ್ಲ" ಎಂದು ಹೇಳಲು ಫಕೀರನು ತನ್ನ ಮನದಲ್ಲಿಯೇ "ಈ ಬ್ರಾಹ್ಮಣನು ಹೆಚ್ಚು ಹೆಚ್ಚು ಮಾತಾಡಹತ್ತಿದರೆ ನನ್ನ ಅಪನಂಬಿಕೆಯ ಕೃತ್ಯವು ಬಯಲಿಗೆ ಬರುವದು ಹಾಗಾದರೆ "ಕೈಗೆ ಬಂದ

ತುತ್ತು ಬಾಯಿಗೆ ಬರಲಿಲ್ಲ ” ವೆಂಬ ಸಾಮತಿಯಂತೆ ಈ ಮನುಷ್ಯನು ತಂದಿರುವ ಬೆಲೆಯುಳ್ಳ ಆ ಭರಣಗಳೆಲ್ಲ ಕೈಬಿಟ್ಟು ಹೋದಾವು! ” ಎಂದು ಯೋಚಿಸಿಕೊಂಡು ಆ ಬ್ರಾಹ್ಮಣನನ್ನು ಕುರಿತು “ ಎಲೈ ತಿಳಿಗೇಡಿಯಾದ ಬ್ರಾಹ್ಮಣನೇ! ನೀನು ನಿನ್ನೆಯ ದಿವಸ ವ್ಯರ್ಥಶ್ರಮಮಾಡಿದಂತಾಯಿತು ಮೊದಲು ಇಟ್ಟ ಸ್ಥಳವನ್ನು ಬಿಟ್ಟು ಬೇರೆಕಡೆಗೆ ಶೋಧಮಾಡಿದರೆ ಹಣವು ಸಿಗುವ ಬಗೆಹೇಗೆ? ” ಎಂದುನುಡಿದು ಅಂಗುಲಿ ಸಂಕೇತದಿಂದ ಈ ಸ್ಥಳದಲ್ಲಿ ಅಗಿದು ನೋಡು! ಅಂದರೆ ಸಿಕ್ಕೀತು! ” ಎಂದು ಹೇಳಿದನು ಫಕೀರನು ನಿರ್ದೇಶಮಾಡಿ ತೋರಿಸಿದ ಸ್ಥಳದಲ್ಲಿ ಅಗಿದು ನೋಡಲು ಯಾವತ್ತು ದ್ರವ್ಯವು ಸಿಕ್ಕಿತು ಬ್ರಾಹ್ಮಣನು ದ್ರವ್ಯವನ್ನು ತಕ್ಕೊಂಡು ಬೀರಬಲನ ಬಳಿಗೆ ನ್ಯಾಯಾಲಯಕ್ಕೆ ಬಂದನು. ... ... *

ಆ ಮೇಲೆ ಬೀರಬಲನು ಪ್ರತಿಷ್ಠಿತನಾದ ಒಬ್ಬ ಸೇವಕನನ್ನು ಕರೆದು ಆವನ ಕಿವಿಯಲ್ಲಿ ಏನೋ ಹೇಳಿ ಆ ಭರಣದ ಗಂಟನ್ನು ತೆಗೆದು ಕೊಂಡು ಫಕೀರನ ಬಳಿಗೆ ಹೋಗಿದ್ದ ಮನುಷ್ಯನನ್ನು ಕರೆಯ ಕಳುಹಿದನು ಅವನು ಹೋಗಿ ಆ ಮನುಷ್ಯನನ್ನು ಕುರಿತು “ ಪರದೇಶಕ್ಕೆ ಹೋಗಿದ್ದ ನಿನ್ನ ಸಹೋದರನು ಇದೇ ಈಗ ಬಂದನು ಅದರಿಂದ ತಾವು ಬೇಗನೇ ಬರಬೇಕು ” ಎಂದು ವಿಜ್ಞಾಪನೆ ಮಾಡಿಕೊಂಡನು. ಆಗ ಮೊದಲಿನ ಮನುಷ್ಯನು ಆ ಫಕೀರನನನ್ನು ಕುರಿತು “ ಶಾಹಸಾಹೇಬ! ನಾನು ಯಾವನ ಸಲುವಾಗಿ ಪ್ರಯಾಣಕ್ಕೆಸಿದ್ಧನಾಗಿದ್ದೆನೋ ಅವನೇ ಇಲ್ಲಿಗೆ ಬಂದಮೇಲೆ ಆಭರಣಗಳನ್ನು ನಿಮ್ಮಬಳಿಯಲ್ಲಿ ಇಡುವ ಅವಶ್ಯಕತೆಯೇ ಉಳಿಯಲಿಲ್ಲ” ಎಂದು ಹೇಳಿ ಆಭರಣಗಳನ್ನೆಲ್ಲ ಕಟ್ಟಿಕೊಂಡು ಆ ಫಕೀರನಿಗೆ ಸಲಾಮು ಮಾಡಿ, ಹೊರಟುಬಂದು ಬೀರಬಲನಿಗೆ ಬೆಟ್ಟಿಯಾದನು. ... *

ಬೀರಬಲನ ಅನುರೋಧದಂತೆ ಆ ಬ್ರಾಹ್ಮಣನೂ ಆ ಈರ್ವರು ಮನುಷ್ಯರೂ ಸಮಗ್ರವೃತ್ತಾಂತವನ್ನು ಬಾದಶಹನಮುಂದೆ ಕಥನಮಾಡಿದರು, ಬಾದಶಹನು ಬೀರಬಲನ ಚಾತುರ್ಯವನ್ನು ಪ್ರಶಂಸೆಮಾಡಿ ಫಕೀರನನ್ನು ಕರೆಯಿಸಿ ಉಚಿತವಾದ ದಂಡನೆಯನ್ನು ವಿಧಿಸಿದನು. ... *

—(೧೫೮. ಕೃಪಣನ ಸಂಪಾದನೆ.)—

ದಿಲ್ಲಿಯಲ್ಲಿ ಒಬ್ಬ ಕೃಪಣನಿದ್ದನು. ಅವನು ಹೊಟ್ಟೆಗೆಸಹಾ ಪೂರಾತಿನ್ನದೆ ಬಹಳದ್ರವ್ಯವನ್ನು ಸಂಪಾದಿಸಿದ್ದನು. ಆ ದ್ರವ್ಯವನ್ನು ಮನೆಯಲ್ಲಿಟ್ಟರೆ ಚೋರೋಪದ್ರವವು ಆಗುವದೆಂಬ ಭಯದಿಂದ ಆ ದ್ರವ್ಯವನ್ನೆಲ್ಲ ತೆಗೆದುಕೊಂಡು ಹೋಗಿ ಅರಣ್ಯದಲ್ಲಿ ಒಂದುಬಿಲ್ವವೃಕ್ಷದ ಅಡಿಯಲ್ಲಿ ಹೂಳಿಟ್ಟ

ನು ಇದರಿಂದಲೂ ಅವನ ಮನಸ್ಸಿನ ಸಮಾಧಾನವಾಗದೆ ನಾಲ್ಕೈದುದಿವಸ ಕ್ಕೊಮ್ಮೆ ಹೋಗಿ ನೋಡಿಬರುತ್ತಿದ್ದನು; ಇದರಂತೆ ಐದಾರು ವರುಷಗಳು ಕಳೆದುಹೋದವು ಆಮೇಲೆ ಅವನು ತನ್ನ ನಿಯಮದಂತೆ ಹೋಗಿ ನೋಡಲು ದ್ರವ್ಯವಿದ್ದಿಲ್ಲ; ಆಗ ಅವನು ಅಲ್ಲಿ ಎದೆಎದೆ ಬಡಕೊಂಡು ಆಕ್ರೋಶಮಾಡಹ ತ್ತಿದನು. ಬಹಳಹೊತ್ತು ರೋದನಮಂಗೈದು ಆಮೇಲೆ ಬಾದಶಹನ ಕಿವಿಯ ಮೇಲೆ ಈ ಸಂಗತಿಯನ್ನು ಹಾಕಬೇಕೆಂದು ಯೋಚಿಸಿ ಒಲಗಕ್ಕೆ ಹೋಗಿ ಎಲ್ಲ ಸಂಗತಿಯನ್ನು ಅರಿಕೆಮಾಡಿ ದೊಡ್ಡಧ್ವನಿಯಿಂದ ರೋದನಮಾಡಹ ತ್ತಿದನು, ಅದರಿಂದ ನ್ಯಾಯಾಸನವೆಲ್ಲ ಪ್ರತಿಧ್ವನಿಗೊಂಡು ಹೋಯಿತು.

ಬಾದಶಹನು ತ್ರಸ್ತನಾಗಿ ಕೈಯೊಳಗಿನಕೆಲಸವನ್ನು ಅರ್ಧಕ್ಕೇಬಿಟ್ಟು ಅವನ ವೃತ್ತಾಂತವನ್ನು ಕೇಳಿಕೊಂಡನು. ಆಗ ಅವನು ತನ್ನ ಆದ್ಯೋ ಪಾಂತ ವೃತ್ತಾಂತವನ್ನೆಲ್ಲ ಕಥನಮಾಡಿ “ ದಯಾಪರ ಧೊರೆಗಳೇ ! ನನ್ನ ಹತ್ತಿರ ಇದ್ದದ್ರವ್ಯವೆಲ್ಲ ಈಪರಿಯಾಗಿ ಅನ್ಯರಪಾಲಾಗಿ ಹೋಯಿತು, ಈಗ ನನ್ನ ಹತ್ತಿರ ಒಂದು ಒಡಕ ಕವಡಿಯೂ ಇಲ್ಲದೆಹೋಯಿತು ಏನುಮಾಡಲಿ” ಎಂದು ಅಳಹತ್ತಿದನು. ಆ ವೃತ್ತಾಂತವನ್ನು ಕೇಳಿ ಬಾದಶಹನ ಮನಸ್ಸು ಕಳವಳಗೊಂಡಿತು, ಆಗ ಅವನು ರಾಜಭಂಡಾರದಿಂದ ಅವನ ನಿರ್ವಾಹವಾ ಗುವಂತೆ ಕಟ್ಟುಮಾಡಿ ಉಳಿದಕೆಲಸವನ್ನು ಪೂರ್ಣಮಾಡಿ ಬೀರಬಲ ಅಭಿ ಪ್ರಾಯವನ್ನು ಕೇಳಿದನು. ಬೀರಬಲನು ಅನ್ವೇಷಣಮಾಡುವೆನೆಂದು ವಚ ನಕೊಟ್ಟನು. ಇಬ್ಬರೂ ಏಕಾಂತಗೃಹದಲ್ಲಿ ಕುಳಿತುಕೊಂಡು ಏನುಮಾಡ ಬೇಕೆಂದು ಯೋಚಿಸಹತ್ತಿದರು, ಬೀರಬಲನು ಒಂದು ಹಂಚಿಕೆಯನ್ನು ಹೇ ಳಿದನು ಅದು ಬಾದಶಹನ ಮನಸ್ಸಿಗೆ ಬಂತು. ... *

ಮರುದಿವಸ ಪಟ್ಟಣದೊಳಗಿನ ಅನುಭವಿಕರಾದ ವೈದ್ಯರನ್ನು ಕರೆ ಯಿಸಿಕೊಂಡು “ ಬಿಲ್ವವೃಕ್ಷದ ಪರ್ಣ, ಮತ್ತು ಬೇರುಗಳು, ಯಾವಯಾವ ಔಷಧಕ್ಕೆ ಬರುತ್ತವೆ; ಎಂಬದನ್ನು ಶೋಧಮಾಡಿಕೊಂಡು ಬಂದು ಎಂಟು ದಿವಸಗಳೊಳಗಾಗಿ ನನಗೆ ತಿಳಿಸಿರಿ ? ” ಎಂದು ಆಜ್ಞಾಪಿಸಿದನು. ಬಾದಶ ಹನ ಆಜ್ಞಾನುಸಾರವಾಗಿ ಎಂಟುದಿವಸಗಳ ತನಕ ವೈದ್ಯಕಿಯ ಗ್ರಂಥಗ ಳನ್ನೆಲ್ಲ ಶೋಧಮಾಡಿ ತಮಗೆ ತಿಳಿದುಬಂದ ಸಂಗತಿಗಳನ್ನು ವರ್ಣನಮಾಡಿ ದರು ಅವರಲ್ಲಿ ಒಬ್ಬವೃದ್ಧನೂ ಅನುಭವಿಕನೂ ಆಗಿದ್ದ ಭಿಷಗ್ವರನು ಎದ್ದು ನಿಂತು “ ಭೂವರ ? ತಮ್ಮ ಆಜ್ಞಾನುಸಾರವಾಗಿ ಗ್ರಂಥಗಳನ್ನು ಶೋಧ ಮಾಡಿನೋಡಲು ಬಿಲ್ವವೃಕ್ಷದ ಪರ್ಣದಿಂದ ಚೂರ್ಣಮಾಡಿಕೊಟ್ಟರೆ “ ಅರಿ ಷಿಣಮುಂಡಿಗೆ ” ರೋಗವು ಕಡಿಮೆಯಾಗುವದೆಂದೂ ಅದರ ಮೂಲಿಕೆಯು

"ಜಲೋದರಕ್ಕೆ" ಉಪಶಮನವೆಂದೂ ತಿಳಿಯಬಂದಿದೆ ಎಂದು ಹೇಳಿದನು ಬಾದಶಹನು ಅವನ ವಚನಗಳನ್ನೆಲ್ಲ ಕೇಳಿಕೊಂಡು ಯಾವತ್ತು ಧನ್ವಂತರಿಗಳನ್ನು ಕುರಿತು "ಈಗ ಸದ್ಯಕ್ಕೆ ನಡೆಯುವ ತಿಂಗಳಲ್ಲಿ "ಜಲೋದರ" ರೋಗವು ಎಷ್ಟುಮಂದಿಗೆ ಉಂಟಾಗಿತ್ತು ? ಮತ್ತು ಅದು ಯಾವ ಉಪಾಯದಿಂದ ಕಡಿಮೆಯಾಯಿತು" ಎಂಬದನ್ನು ಅರಿತುಕೊಂಡುಬಂದು ಒಂದು ವಾರದೊಳಗಾಗಿ ನನಗೆ ತಿಳಿಸಿರಿ ? ಎಂದು ಆಜ್ಞೆಮಾಡಿದನು. ಧನ್ವಂತರಿಗಳು ಆ ನಗರವನ್ನೆಲ್ಲ ಶೋಧಮಾಡಿ ಎಂಟು ದಿವಸಗಳಾದಮೇಲೆ ಬಾದಶಹನ ಸನ್ನಿಧಿಗೆಬಂದು "ಈಮಾಸದಲ್ಲಿ ನಾಲ್ಕುಜನರಿಗೆ ಆ ರೋಗಬಾಧೆಯಾಗಿತ್ತು, ಅವರಲ್ಲಿ ಒಬ್ಬನಿಗೆ ಸ್ವಲ್ಪಗುಣವಾಗಿದೆ!" ಎಂದು ಹೇಳಿದರು. ಆಗ ಬಾದಶಹನು ಆ ರೋಗಿಗೆ ಔಷಧಕೊಟ್ಟ ವೈದ್ಯನನ್ನು ಕುರಿತು. "ನಿಜವಾದದ್ದನ್ನು ಹೇಳು ? ಆ ವೃಕ್ಷದಮೂಲವನ್ನು ನೀನು ಎಲ್ಲಿಂದ ತೆಗೆದುಕೊಂಡುಬಂದಿದ್ದಿ ! ಅಸತ್ಯವನ್ನು ಹೇಳಿದರೆ ಮರಣಕ್ಕೆ ಗುರಿಯಾಗಬೇಕಾದೀತು ಎಂದು ಹೇಳಿದನು. ಬಾದಶಹನ ಆಜ್ಞೆಯನ್ನು ಶ್ರವಣಮಾಡಿ ಆ ವೈದ್ಯನು ಕಂಪಿಸಹತ್ತಿದನು. ಆಗ ಅವನು ಉತ್ತರಕೊಟ್ಟದ್ದೇನಂದರೆ ಪೃಥ್ವೀನಾಥ! ನನ್ನಸೇವಕನು ಎಲ್ಲಿಂದ ತಂದಿದ್ದನೆಂಬ ಸಂಗತಿಯನ್ನು ನಾನರಿಯೆ ? ಇದರಲ್ಲಿ ನನ್ನಿಂದ ಏನಾದರೂ ಅಪರಾಧವು ಸಂಘಟಿಸಿದ್ದರೆ ಕ್ಷಮಿಸಬೇಕು!" ಎಂದು ಪ್ರಾರ್ಥನೆಮಾಡಿಕೊಂಡನು. ಬಾದಶಹನು ಆ ಸೇವಕನನ್ನು ಕರೆಯಕಳುಹಿದನು, ಅವನು ಬಂದಮೇಲೆ;-

ಬಾದಶಹ—ನಿನಗೆ ಬಿಲ್ವವೃಕ್ಷವು ಗೊತ್ತದೆಯೋ !

ಸೇವಕ—ಹುಜೂರ್ ! ಗೊತ್ತುಂಟು.

ಬಾದಶಹ—ನೀನು ನಿನ್ನ ಯಜಮಾನನ ಸಲುವಾಗಿ ಆ ವೃಕ್ಷದ ಬೇರುಗಳನ್ನು ಎಂದಾದರೂ ತಂದುಕೊಟ್ಟದ್ದಿಯೋ ?

ಸೇವಕ—ಮಾನ್ಯವರ ? ಈಗ ಒಂದುತಿಂಗಳಹಿಂದೆ ತಂದುಕೊಟ್ಟಿದ್ದೆನು.

ಬಾದಶಹ—(ಬೆದರಿಕೆಯನ್ನು ಹಾಕಿ) ನೀನು ಆ ವೃಕ್ಷದಡಿಯಲ್ಲಿದ್ದ ದ್ರವ್ಯವನ್ನು ತೆಗೆದುಕೊಂಡು ಹೋಗಿರುವಿ ! ಅದರಿಂದ ಅದನ್ನು ಒಳ್ಳೇ ಮಾತಿನಿಂದ ತಂದುಕೊಡು; ಇಲ್ಲದಿದ್ದರೆ ನಿನ್ನ ಮೈದೊಗಲನ್ನು ಸುಲಿಸಿಬಿಡುತ್ತೇನೆ.

ಸೇವಕ—[ಗಾಬರಿಯಾಗಿ] ನನಗೆ ಜೀವದಾನಕೊಡುವಂತೆ ಅಭಯವನ್ನು ಕೊಟ್ಟರೆ ಎಲ್ಲ ದ್ರವ್ಯವನ್ನೂ ತಂದುಕೊಡುವೆನು.

ಬಾದಶಹನು ಹಾಗೇ ಆಗಲಿ; ಎಂದನು. ಆ ಸೇವಕನು ಎಲ್ಲದ್ರವ್ಯವ ನ್ನು ತಂದು ಬಾದಶಹನಿಗೆ ಒಪ್ಪಿಸಿದನು. ಆ ಹಣವನ್ನು ಬಾದಶಹನು ಆ ಕೃಪಣನಿಗೊಪ್ಪಿಸಿದನು.

—(೧೫೫. ಬೀರಬಲನು ಯೋಗಿ ಯಾದದ್ದು.)—

ಒಂದು ಸಮಯದಲ್ಲಿ ಬಾದಶಹನು ಯಾವದೋ ಒಂದು ಕಾರಣಾಂತರದಿಂದ ಬೀರಬಲನಮೇಲೆ ಕೃದ್ಧನಾಗಿದ್ದನು ಅದರಿಂದ ಬೀರಬಲನು ಯಾರಿಗೂ ಅರಿಯದಂತೆ ವಿದೇಶಕ್ಕೆ ಹೊರಟು ಹೋದನು ಆರುತಿಂಗಳು ಗಳುಕಳೆದು ಹೋದವು ಬೀರಬಲನು ಇಲ್ಲದ್ದರಿಂದ ಬಾದಶಹನಿಗೆ ಒಂದು ಕ್ಷಣವು ಒಂದು ಯುಗದಂತೆ ಭಾಸವಾಗ ಹತ್ತಿತು ಬೀರಬಲನ ಶೋಧಾರ್ಥವಾಗಿ ಅನೇಕ ಜನ ಅನುಚರರನ್ನೂ ಗೂಢ ಚಾರರನ್ನೂ ದೇಶಾಂತರಗಳಲ್ಲಿ ಕಳುಹಿಸಿ ಬಿಟ್ಟನು ಅವರು ಹುಡುಕಿ ಬೇಸತ್ತು ಹೋದರೂ, ಬೀರಬಲನ ಶೋಧವಾಗಲಿಲ್ಲ ಬಾದಶಹನು ತನ್ನನ್ನು ಶೋಧಿಸುತ್ತಿರ ಬಹುದು ಯಾವದಾದರೊಂದು ಹಂಚಿಕೆಯಿಂದ ನಾನೇ ಬಾದಶಹನಿಗೆ ಭೇಟಿಯಾಗ ಬೇಕು ಎಂದು ಯೋಚಿಸಿ, ಸನ್ಯಾಸಿಯ ವೇಷವನ್ನು ಧರಿಸಿ ದಿಲ್ಲಿಗೆ ಬಂದು ಪ್ರತಿದಿನ ದೇವದರ್ಶನಕ್ಕೆ ಸಾವಿರಾರು ಜನಗಳು ಬರುತ್ತಿರುವ ಒಂದು ದೇವಾಲಯದಲ್ಲಿ ಆ ಸನಸ್ತನಾಗಿ ಕುಳಿತುಕೊಂಡನು ಆನೇಕ ಜನರು ದೇವತಾ ದರ್ಶನವನ್ನು ತೆಗೆದು ಕೊಂಡು ಸನ್ಯಾಸಿಯಾಗಿ ಕುಳಿತುಕೊಂಡಿದ್ದ ಬೀರಬಲನಿಗೆ ದಂಡವತಪ್ರಣಾಮವನ್ನು ಮಾಡುತ್ತಿದ್ದರು. ಬೀರಬಲನು ಅವರವರ ಹೆಸರ್ಗೊಂಡು ಆ ಶೀರ್ವಾದಮಾಡಿ ಫಲಮಂತ್ರಾಕ್ಷತೆಗಳನ್ನು ಕೊಡುತ್ತಿದ್ದನು ಅದನ್ನು ಕಂಡು ಸನ್ಯಾಸಿಯು ಅಂತರ್ಜ್ಞಾನಿಯಾಗಿರುವನೆಂದು ಜನರು ಪ್ರಶಂಸೆ ಮಾಡಹತ್ತಿದರು. ಅಸಂಖ್ಯಾತ ಜನಗಳು ದರುಶನಕ್ಕೆ ಬರಹತ್ತಿದರು ಈವಾರ್ತೆಯು ಬಾದಶಹನಿಗೆ ತಿಳಿಯುಬರಲು ಅವನು ಒಂದು ಮುಸಲ್ಮಾನ ಮುತ್ಸದ್ದಿಗಳನ್ನೊಡಗೊಂಡು ದರುಶನಕ್ಕೆಬಂದನು. ಆಗ ಬಾದಶಹನು ಪ್ರಚ್ಛನ್ನ ವೇಷಧಾರಿಯಾಗಿದ್ದನು, ಬಾದಶಹನು ಆ ಸನ್ಯಾಸಿಗೆ ಪ್ರಣಾಮವನ್ನುಮಾಡಿ- “ ಮಹಾರಾಜ ? ತಾವು ಪ್ರತಿಯೊಬ್ಬರ ಹೆಸರ್ಗೊಂಡುಕರೆದು ಫಲಮಂತ್ರಾಕ್ಷತೆಗಳನ್ನು ಕೊಟ್ಟು ಆಶೀರ್ವದಿಸುತ್ತಿರುವಿರಿ, ಹೀಗಿದ್ದು ನಾನೇನು ಅಪರಾಧವನ್ನು ಮಾಡಿದ್ದೇನೆ; ನನಗೂ ಆಶೀರ್ವಾದಮಾಡಿರಿ ಎಂದು ಪ್ರಾರ್ಥನೆಮಾಡಿಕೊಂಡನು. ಆಗ ಬೀರಬಲನು ಅವನನ್ನು ಒಳ್ಳೇ ದಿಟ್ಟಿಸಿ ನೋಡಿ ಬಾದಶಹನೆಂದು ಅರಿತುಕೊಂಡು “ ಈ ಜನಸಮ್ಮರ್ದವೆಲ್ಲ ಅಡಗಿದ ಬಳಿಕ ನಿನ್ನ ನಾಮಧೇಯವನ್ನು ಹೇಳುತ್ತೇನೆ. ” ಎಂದನು. ಕಿಂಚಿತ್ಕಾಲ

ವಾದಮೇಲೆ ಜನಸಮ್ಮರ್ದವು ಕಡಿಮೆಯಾಯಿತು ಆಮೇಲೆ ಯೋಗಿಯಾದ ಬೀರಬಲನು “ ನಿನ್ನಂಥ ಪಾಪಾತ್ಮನ ನಾಮಧೇಯವನ್ನು ನಾನು ಉಚ್ಚರಿಸಲಾರೆನು ” ಎಂದನು. ಆಗ ಬಾದಶಹನು ಆಶ್ಚರ್ಯಾನ್ವಿತನಾಗಿ ಅವನ ಮೋರೆಯ ಕಡೆಗೆ ದಿಟ್ಟಿಸಿ ನೋಡಹತ್ತಿದನು ಬೀರಬಲನು ಜಪಮಾಲೆಯನ್ನು ತಿರುವುತ್ತ ಕಣ್ಣುಮುಚ್ಚಿ ಧ್ಯಾನಸ್ಥನಂತೆ ಕುಳಿತು ಕೊಂಡನು ಕಿಂಚಿತ್ಕಾಲದ ಮೇಲೆ ಬಾದಶಹನು ಯೋಗಿಯನ್ನು ಗುರುತಿಸಿ-“ ಈಯೋಗಿರನು ಬೀರಬಲನಲ್ಲವೇ! ಎಂದನು ಅದಕ್ಕೆ ಬೀರಬಲನು ಎದ್ದುನಿಂತು “ ಹಾ, ಪೃಥ್ವೀನಾಥ! ತಮ್ಮ ಬೀರಬಲನು ” ಎಂದು ಉತ್ತರ ಕೊಟ್ಟನು ಸಾಯಂಕಾಲವಾಗಿ ಕತ್ತಲೆಯಾಗಿತ್ತು ಉಭಯತರೂ ತಮ್ಮ ತಮ್ಮ ಗೃಹಗಳನ್ನು ಕುರಿತು ತೆರಳಿದರು. ... ... *

ಪ್ರಾತಃಕಾಲದಲ್ಲಿ ನಿತ್ಯನಿಯಮಾನುಸಾರವಾಗಿ ನಗರ ನಿವಾಸಿಗಳು ಯೋಗಿರಾಜನ ದರುಶನಾರ್ಥವಾಗಿ ಬರಲು ಯೋಗಿ ರಾಜನೂ ಇದ್ದಿಲ್ಲ ಅವನ ಕುರುಹೂ ಇದ್ದಿಲ್ಲ; ಜನರು ಆಶ್ಚರ್ಯಾನ್ವಿತರಾಗಿ ಮಾತನಾಡುತ್ತ ನಿಂತುಕೊಂಡರು ಅಷ್ಟರಲ್ಲಿ ಬೀರಬಲನು ತುರುಗಾರೂಢನಾಗಿ ಓಲಗಕ್ಕೆ ಹೋಗುತ್ತಿರುವದನ್ನು ನೋಡಿ ಹರ್ಷ ನಿರ್ಭರರಾದರು.

—(೧೬೦. ಅಂಗುಲಿ ಸಂಕೇತ.)—

ಬಾದಶಹನ ಓಲಗದಲ್ಲಿ ಒಬ್ಬ ಉಚ್ಚ ಕುಲದ ಸರದಾರನಿದ್ದನು ಆದರೆ ಅವನು ದೈವ ದುರ್ವಿಲಾಸದಿಂದ ಅತಿಶಯ ಹೀನಾವಸ್ಥೆಯುಳ್ಳವನಾಗಿದ್ದನು ಆದರೂ ಓಲಗದಲ್ಲಿ ಒಂದು ಕುಳಿತುಕೊಳ್ಳುವ ಮರ್ಯಾದೆಯಿತ್ತು ಅವನು ಮಹಾಸಭೆಗೆ ಬರಬೇಕಾದರೆ ಉತ್ತಮವಾದ ವಸ್ತ್ರಗಳನ್ನು ಧಾರಣ ಮಾಡಿಕೊಂಡು ಬರುತ್ತಿದ್ದನು ಇಷ್ಟು ವಸ್ತ್ರಗಳ ಹೊರತು ಬೇರೆ ವಸ್ತ್ರಗಳೇ ಇದ್ದಿಲ್ಲ ಇದರ ಹೊಟ್ಟೆಯಸಲುವಾಗಿ ಒಂದು ಬೀಸುವಕಲ್ಲನ್ನು ಇಟ್ಟುಕೊಂಡು, ಕೂಲಿಯಿಂದ ಕಾಳುಗಳನ್ನು ಬೀಸುತ್ತಿದ್ದನು.

ಒಂದುದಿವಸ ಕಾಳುಗಳು ಬಹಳ ಬಂದಿದ್ದವು ಸಭೆಗೆ ಹೋಗಲಿಕ್ಕೆ ಅನುವು ದೊರೆಯಕಿಲ್ಲ; ಆ ದಿವಸ ಅಕಸ್ಮಾತ್ತಾಗಿ ಬಾದಶಹನ ಸವಾರಿಯು ಆ ಸರದಾರನ ಮನೆಯಮುಂದೆಯೇ ಬಂತು ಆ ಸರದಾರನ ಮನೆಯು ಚಿಕ್ಕದಿತ್ತು ಅವನು ಒಳಗೆ ಕುಳಿತುಕೊಂಡೇ ಸವಾರಿಯನ್ನು ನೋಡಹತ್ತಿದನು ಬಾದಶಹನ ದೃಷ್ಟಿಯೂ ಅವನ ಮೇಲೆ ಬಿತ್ತು.

ಮುಂದೆ ಕೆಲವುದಿವಸಗಳಾದಮೇಲೆ ಒಂದು ಸಮಾರಂಭದಲ್ಲಿ ಅನ್ಯಸರದಾರ ಉಮರಾವರೊಡನೆ ಆ ಉಚ್ಚಪ್ರತಿಯ ಸರದಾರನೂ ಬಂದು ಕುಳಿ

ತುಕೊಂಡಿಷ್ಟನು ಹಿಂದೂ ಮುಸಲ್ಮಾನ ಸರದಾರರು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ತಮ್ಮ ತಮ್ಮ ಆಸನಗಳಲ್ಲಿ ಮಂಡಿತರಾದರು. ಬಾದಶಹನು ಬಂದು ಸಿಹ್ಮಾಸನಾಧಿಷ್ಟಿತನಾಗಿ, ಯಾವತ್ತೂ ಸರದಾರರನ್ನು ಅವಲೋಕಿಸುತ್ತಿರಲು ಈ ಬಡಸರದಾರನ ಮೇಲೆ ದೃಷ್ಟಿಯುಬಿತ್ತು ಆಗ ಅವನ ಸ್ಥಿತಿಯನ್ನು ವಿಚಾರಿಸಬೇಕೆಂದು ಮನಸ್ಸಿನಲ್ಲಿ ಬಂತು, ಆದರೆ ಎಲ್ಲರಮುಂದೆ ಪ್ರಶ್ನೆಮಾಡುವದು ಯೋಗ್ಯವಲ್ಲವೆಂದು ತಿಳಿದು ಬಾದಶಹನು ಅಂಗುಲಿಗಳನ್ನು ಮಡಿಚಿ ಹಿಡಿದುಕೊಂಡು ಬೀಸುವವನಂತೆ ಸಂಕೇತ ಮಾಡಿದನೆಂದು ನಿಶ್ಚಯಿಸಿ ಆ ಸಂಕೇತಕ್ಕೆ ಪ್ರತಿಯಾಗಿ ತನ್ನ ಹೊಟ್ಟೆಯ ಕಡೆಗೆ ಬೆರಳುಮಾಡಿ ತೋರಿಸಿದನು ಈ ಉಭಯತರ ಸಂಕೇತವನ್ನು ಎಲ್ಲರೂ ನೋಡಿದರು ಕಳ್ಳನ ಕನಸಿನಲ್ಲಿ ಬೆಳದಿಂಗಳೆಂಬ ಸಾಮತಿಗನುಸಾರವಾಗಿ ಅನೇಕಜನರು ಅನೇಕಪ್ರಕಾರದ ತರ್ಕಗಳನು ಮಾಡಹತ್ತಿದರು ಸಭಾವಿಸರ್ಜನೆಯಾದ ಕೂಡಲೆ ಒಬ್ಬನು ಆ ಸರದಾರನ ಮನೆಯನುನೋಡಿಕೊಂಡು ಬಂದನು ಮರುದಿವಸ ಆ ಚಂಡಾಲ ಚೌಕಡಿಯು ಕೂಡಿಕೊಂಡು ಆ ಸರದಾರನ ಮನೆಗೆ ಬಂದರು ಅವನು ಅವರನ್ನು ಆದರ ಪೂರ್ವಕವಾಗಿ ಕುಳ್ಳಿರಿಸಿದನು ಆಗ ಅವರೊಳಗಿನವ ನೊಬ್ಬನು-“ ಕೃಪಾಳುವೇ, ನಿನ್ನೆಯದಿವಸ ಬಾದಶಹನು ನಿಮಗೆ ಸಂಕೇತಮಾಡಿ ಏನನ್ನು ತಿಳಿಸಿದನು? ” ಎಂದು ಕೇಳಿದನು ಆಗ ಆ ಸರದಾರನು ತನ್ನ ಮನಸ್ಸಿನಲ್ಲಿ “ ಇದರಲ್ಲಿ ಏನೋ ಒಂದು ಗೂಢವದೆ ಬಾದಶಹನು ಸಂಕೇತ ಮಾಡಿದ್ದರಿಂದ ಇವರ ಮನಸ್ಸಿನಲ್ಲಿ ಯಾವದೋ ಸಂದೇಹವು ಉತ್ಪನ್ನವಾಗಿದೆ ಅದರಿಂದ ನಾನು ಇದರಲ್ಲಿ ಏನಾದರೂ ಹಣವನ್ನು ಸಂಪಾದಿಸಬೇಕು? ” ಎಂದು ಆಲೋಚಿಸಿ, “ ಸದ್ಗೃಹಸ್ಥರೇ, ಆ ವಿಷಯವು ಗೌಪ್ಯವಾದದ್ದು ! ಪ್ರಕಟಮಾಡಲಿಕ್ಕೆ ಬರುವಂತೆ ಇಲ್ಲ ” ಎಂದನು ಆಗ ಅವರು ಅತ್ಯಾಗ್ರಹ ಮಾಡಹತ್ತಿದರು ಅದರಿಂದ ಸರದಾರನು-“ ನಿಮ್ಮ ಆಗ್ರಹವು ಬಹಳ ವಾದದ್ದರಿಂದ ಹೇಳುತ್ತೇನೆ ಈ ವಿಷಯದ ಚರ್ಚೆಯನ್ನು ಎರಡನೇಕಡೆಗೆ ಮಾಡಬೇಡಿರಿ ! “ ಬಾದಶಹನು ನಿಮ್ಮೆಲ್ಲರಕಡೆಗೆ ಅಂಗುಲಿಯನ್ನು ತೋರಿಸಿ ಇವರ ಸಂಬಂಧಿಯಾದ ವಿಷಯವು! ” ಎಂದು ಸಂಕೇತಮಾಡುವದರೊಳಗಾಗಿ ನಾನು ನನ್ನ ಹೊಟ್ಟೆಯನ್ನು ತೋರಿಸಿ, “ ಆ ವಿಷಯವು ನನ್ನ ಹೊಟ್ಟೆಯಲ್ಲಿಅದೆ ” ಎಂಬದಾಗಿ ತೋರಿಸಿದೆನು ಎಂಬದಾಗಿ ಹೇಳಿದನು ಆಗ ಅವರೆಲ್ಲರೂ ಗಾಬರಿಯಾಗಿ ತಮ್ಮ ಮೋಸದಕೃತಿಗಳು ಈ ಸರದಾರನಿಗೂ ಮತ್ತು ಬಾದಶಹನಿಗೂ ತಿಳಿದು ಬಂದಂತೆ ಕಾಣುತ್ತವೆ ಇದಕ್ಕೆ ಅವನು ಏನು ದಂಡನೆಯನ್ನು ವಿಧಿಸು

ವನೋ ಎಂಬದಾಗಿ ಬೆದರಿ ಆ ಸರದಾರನನ್ನು ಬಹುಪರಿಯಾಗಿ ಪ್ರಾರ್ಥಿಸ ಹತ್ತಿದರು ಮತ್ತು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಹಣವನ್ನು ಕೊಡ ಲೊಪ್ಪಿಕೊಂಡರು ಮರುದಿವಸ ಯಾವನು ನೂರು ಯಾವನು ಎರಡು ನೂರು ಯಾವನು ಐದುನೂರು ಹೀಗೆ ರೂಪಾಯಿಗಳನ್ನು ಚೀಲದಲ್ಲಿ ತುಂಬಿಕೊಂಡು ಬಂದು ಆ ಸರದಾರನಮುಂದೆ ಇಟ್ಟು "ನಮ್ಮ ಕೃತ್ಯವು ಏನೇ ಇರಲಿ; ಅದನ್ನು ನಿಮ್ಮ ಹೊಟ್ಟೆಯಲ್ಲಿಯೇ ಇಟ್ಟುಕೊಳ್ಳಬೇಕು ಪ್ರಕಟಪಡಿಸ ಬೇಡಿರಿ ಆಶ್ರಮದಸಲುವಾಗಿ ನಾವು ಕೊಟ್ಟ ಕಿಂಚಿತ್ ದ್ರವ್ಯವನ್ನು ಸ್ವೀಕರಿಸಬೇಕು" ಎಂದು ಹೇಳಿದರು ಅದಕ್ಕೆ ಪ್ರತ್ಯುತ್ತರವಾಗಿ ಸರದಾರನು-"ನೀವು ಅತ್ಯಾಗ್ರಹ ಪಡಿಸಿದ್ದರಿಂದ ನಿಮ್ಮ ಮಾತಿಗೆ ಒಪ್ಪಿಕೊಳ್ಳಬೇಕಾಯಿತು; ನೀವು ಒಳ್ಳೇ ದೈವಶಾಲಿಗಳು ಅಂತೆಯೇ ಬಾದಶಹನ ಸಂಕೇತವು ನಿಮ್ಮ ದೃಷ್ಟಿಗೆ ಬಿದ್ದು ಸುರಕ್ಷಿತವಾಗಿರುವ ಹಂಚಿಕೆಯನ್ನು ಹುಡುಕಿಕೊಂಡಿರಿ!" ಎಂದು ಹೇಳಿದನು ಆ ಜನರೆಲ್ಲ ಹೊರಟು ಹೋದರು.

ಸಾಯಂಕಾಲದಲ್ಲಿ ಎಲ್ಲ ರಾಜಕಾರ್ಯಗಳಿಂದ ನಿವೃತ್ತನಾಗಿ ಬಾದಶಹನು ಆ ದರಿದ್ರ ಸರದಾರನ ಮನೆಗೆ ಬಂದನು. ಆ ಸರದಾರನು ಆ ಜನರಿಂದ ಸಂಪಾದಿತವಾದ ದ್ರವ್ಯವನ್ನು ಬಾದಶಹನ ಮುಂದೆ ಇಟ್ಟು "ಪೃಥ್ವೀನಾಥ? ಇದನ್ನು ಸ್ವೀಕರಿಸಬೇಕು" ಎಂದನು ಆಗ ಬಾದಶಹನು ಆಶ್ಚರ್ಯಾನ್ವಿತನಾಗಿ- "ಸದ್ಗೃಹಸ್ಥನೇ ನೀನು ಕೂಲಿಯಿಂದ ಧಾನ್ಯವನ್ನು ಬೀಸಿ ಹೊಟ್ಟೆಹೊರಕೊಳ್ಳುತ್ತೀ! ಹೀಗಿದ್ದು ಇಷ್ಟುದ್ರವ್ಯವು ನಿನ್ನ ಬಳಿಯಲ್ಲಿ ಹ್ಯಾಗೆ ಬಂತು" ಎಂದು ಕೇಳಿದನು. ಆಗ ಅವನು ನಸುನಗುತ್ತ "ಖುದಾವಂದ! ನಿನ್ನೆ ನೀವು ಓಲಗದಲ್ಲಿ ಅಂಗುಲ ಸಂಕೇತವನ್ನು ಮಾಡಿದ್ದರ ಫಲವು! ಈ ದ್ರವ್ಯರೂಪದಿಂದ ಬಂದಿರುತ್ತದೆ." ಎಂದು ಹೇಳಿದನು ಸರದಾರನ ಬುದ್ಧಿ ಚಾತುರ್ಯವು ಬಾದಶಹನಿಗೆ ತಿಳಿಯ ಬಂದಿದ್ದರೂ ಸಹ ಅವನ ಬಾಯಿಂದಲೇ ಹೊರಡಿಸಬೇಕೆಂಬ ಉದ್ದೇಶದಿಂದ- "ವೃದ್ಧಸರದಾರನೇ ನಿನ್ನ ಅಭಿಪ್ರಾಯವು ನನಗೆ ತಿಳಿಯಲಿಲ್ಲ. ಎಂದನು ಆಗ ಅವನು ಸಮಗ್ರ ವೃತ್ತಾಂತವನ್ನು ಕಥನ ಮಾಡಿದನು. ಬಾದಶಹನು ಪ್ರಸನ್ನನಾಗಿ ಆ ಸಮಸ್ತ ದ್ರವ್ಯವನ್ನು ಅವನಿಗೇ ಕೊಟ್ಟು ನ್ಯಾಯಾಸನದಲ್ಲಿ ಒಂದು ಕಾರ್ಯಕ್ಕೆ ನಿಯಮಿಸಿ. "ನನಗೆ ಆ ಮೋಸಗಾರರ ಪರಿಚಯವು ಬೇಡ ಎಂದನು.

—(೧೬೧. ಸೌ ಸಯಾನೋಕ ಏಕಮತ.)—

ಒಂದು ದಿವಸ ಬೀರಬಲನೂ ಬಾದಶಹನೂ ಏಕಾಂತದಲ್ಲಿ ಕುಳಿತುಕೊಂಡು ವಿನೋದದಿಂದ ಮಾತುಗಳನ್ನಾಡುತ್ತಿದ್ದರು. ಆಗ ಬಾದಶಹನು-

" ಈ ಭೂಮಂಡಲದಲ್ಲಿಯ ಮನುಷ್ಯರ ಮನಸ್ಸೂ ಮತ್ತು ಬುದ್ಧಿಯೂ ಒಂದೇಪ್ರಕಾರವಾಗಿರುವದೋ ಅಥವಾ ಭಿನ್ನಭಿನ್ನ ವಾಗಿರುವದೋ!

ಬೀರಬಲ—ಪೃಥ್ವೀನಾಥ; ಮನಸ್ಸೂ ಮತ್ತು ಬುದ್ಧಿಯೂ ಭಿನ್ನಭಿನ್ನ ವಾಗಿರುವವು. ... ... *

ಬಾದಶಹ—ಬುದ್ಧಿಯು ಭಿನ್ನಭಿನ್ನವಾಗಿರುವಂತೆ ಅವರವರ ಅಭಿಪ್ರಾಯಗಳೂ ಭಿನ್ನವಾಗಿರ ಬೇಕಾಯಿತು. ... *

ಬೀರಬಲ—ಹಿಂದೀಭಾಷೆಯಲ್ಲಿ " ಔಸರ್ಯಾನೋಕಾ ಏಕಮತ ಎಂಬ ಒಂದು ಸಾಮತಿ ಯಿರುವದು ಯಾಕಂದರೆ ಸ್ವಾರ್ಥ-ಸಾಧನದ ವಿಷಯದಲ್ಲಿ ಮಾತ್ರ ಎಲ್ಲರ ಅಭಿಪ್ರಾಯವು ಒಂದೇ ಬಗೆಯಾಗಿ ವ್ಯಕ್ತವಾಗುವನು. ... ... *

ಬಾದಶಹ—ಬುದ್ಧಿಯು ಭಿನ್ನಭಿನ್ನ ವಾಗಿದ್ದ ಮೇಲೆ ಅವರ ಅಭಿಪ್ರಾಯಗಳಾದರೂ ಭಿನ್ನವೇಕೆ ಆಗ ಬಾರದು! ... *

ಬೀರಬಲ—ಈ ವಿಷಯವನ್ನು ತಾವು ಪ್ರಮಾಣಿಸಿ ನೋಡಬೇಕೆಂಬದಿದ್ದರೆ ನಾಳೆಯ ದಿವಸದಲ್ಲಿಯೇ ತೋರಿಸುವೆನು. ... *

ಬಾದಶಹ—ಒಳ್ಳೇದು, ತೋರಿಸು! ... ... *

ಬೀರಬಲನು ಸರಕಾರದ ಉಪವನದಲ್ಲಿದ್ದ ಒಂದು "ಹೌದನ್ನು" ನೀರಿಲ್ಲದಂತೆ ಮಾಡಿಸಿ, ಬಾದಶಹನ ಅಪ್ಪಣೆಯನ್ನು ಪಡೆದು " ನಾಳೆ ಪ್ರಾತಃಕಾಲದೊಳಗಾಗಿ ಈ ಪಟ್ಟಣದ ವಾಸಿಗಳಲ್ಲಿ ಪ್ರತಿಯೊಂದು ಕುಟುಂಬದವರು ಒಂದೊಂದು ಕೊಡ ಹಾಲನ್ನು ತಂದು, ಬಾದಶಹರವರ ಉಪವನದಲ್ಲಿದ್ದ ಹೌದಿನಲ್ಲಿ ತಂದು ಹಾಕಬೇಕು " ಎಂಬದಾಗಿ ಡಂಗುರವನ್ನು ಸಾರಿಸಿದನು. ಮತ್ತು ಆ ಹೌದಿನಮೇಲೆ ಒಂದು ಶುಭ್ರವಾದ ವಸ್ತ್ರವನ್ನು ಆಚ್ಛಾದನ ಮಾಡಿ ಬಾದಶಹನಿಗೆ ಈ ಸಂಗತಿಯನ್ನು ತಿಳಿಸಿದನು. *

ಆಗ ಪ್ರತಿಯೊಂದು ಕುಟುಂಬದವರು ಯೋಚಿಸಿದ್ದೇನೆಂದರೆ " ಬಾದಶಹರವರ ಉಪವನದಲ್ಲಿಯ ಹೌದಿನಲ್ಲಿ ಸಾವಿರಾರು ಕುಟುಂಬದವರು ಹಾಲನ್ನು ತಂದು ಹಾಕುತ್ತಾರೆ ನಾವ್ವೊಬ್ಬರು ಆದರಲ್ಲಿ ಒಂದು ಕೊಡ ನೀರನ್ನು ಸುರುವಿದರೆ ನಮ್ಮ ಅಪರಾಧವು ಯಾರಿಗೂ ಗೊತ್ತಾಗುವದಿಲ್ಲ; " ಈ ಪ್ರಕಾರ ಆ ಲೋಚನೆ ಮಾಡಿಕೊಂಡು ಪ್ರತಿಯೊಬ್ಬನು ಬಂದು ರಾತ್ರಿಯಲ್ಲಿ ಬಂದು ಒಂದೊಂದು ಕೊಡ ನೀರನ್ನು ತಂದು ಸುರುವಿ ಸುಮ್ಮನೆ ಹೋಗ ಹತ್ತಿದರು ಪ್ರತಿಯೊಬ್ಬನ ಮನಸ್ಸಿನಲ್ಲಿ ನನ್ನ ಹೊರತು ಎಲ್ಲರೂ ಹಾಲನ್ನೇತಂದು ಸುರುವಿದ್ದಾರೆ;- ಎಂದು ನಿಶ್ಚಯಿಸಿಕೊಂಡೇ ನೀರನ್ನು

ಹಾಕಿ ಹೋಗುತ್ತಿದ್ದನು, ಯಾವನಾದರೂ ಸೂಕ್ಷ್ಮಬುದ್ಧಿಯವನು ಹೌದಿ ನಹತ್ತರ ಬಂದು ಪರೀಕ್ಷಿಸಿನೋಡಿದರೂ ಸಹ ಮೇಲೆ ಹೊಂದಿಸಲ್ಪಟ್ಟ ಶುಭ್ರವಾದ ವಸ್ತ್ರದಿಂದ ನೀರುಸಹಾ ಹಾಲಿನಂತೆ ಶುಭ್ರವಾಗಿಯೇ ತೋರುತ್ತಿತ್ತು. ಮರುದಿವಸ ಪ್ರಾತಃಕಾಲದಲ್ಲಿ ಬೀರಬಲನು ಬಾದಶಹನನ್ನು ಕರಕೊಂಡು ಹೌದಿನಹತ್ತರ ಬಂದನು, ಹೌದಿನಮೇಲೆ ಆಚ್ಛಾದಿಸಲ್ಪಟ್ಟಿದ್ದ ವಸ್ತ್ರವನ್ನು ತೆಗೆದನು ಆ ಹೌದು ಹಾಲಿನಿಂದ ತುಂಬುವದರ ಬದಲು ನೀರಿನಿಂದಲೇ ತುಂಬಿಹೋಗಿತ್ತು, ಅದರಲ್ಲಿ ಹಾಲಿನಹೆಸರೇ ಇದ್ದಿಲ್ಲ ಅದನ್ನು ಕಂಡು ಬಾದಶಹನಿಗೆ ಬಹು ಸೋಜಿಗವಾಯಿತು ಯೋಚನೆಯಲ್ಲಿ ಬಿದ್ದನು.

ಅದನ್ನು ಕಂಡು ಬೀರಬಲನು- "ಪೃಥ್ವೀನಾಥ ? ಸೌಸಯಾನೋ ಕಾ ಏಕಮತ" ನಾನು ಹೇಳಿದಸಾಮತಿಯು ಸತ್ಯವಾಯಿತೋ ಇಲ್ಲವೋ ಎಂದು ಕೇಳಿದನು. ... ... *

ಬಾದಶಹ—ಪ್ರತ್ಯಕ್ಷವಾಗಿದ್ದ ಮಾತಿನಲ್ಲಿ ಸಂದೇಹವೇನು! ಆದರೂ ಈ ವಿಷಯವನ್ನು ಇನ್ನೂ ಸ್ವಲ್ಪಹೆಚ್ಚು ಪರೀಕ್ಷಿಸಿನೋಡಬೇಕೆಂದು ಅಭಿಲಾಷೆಯದೆ. ... ... *

ಬೀರಬಲ—ಒಳ್ಳೇದು ಹಾಗೇ ಆಗಲಿ.

ಆಗ ಬಾದಶಹನು ಪ್ರಚ್ಛನ್ನ ವೇಷಧಾರಿಯಾಗಿ ಸಾಯಂಕಾಲದಲ್ಲಿ ನಗರದ ಸಂಚಾರಾರ್ಥವಾಗಿ ಹೊರಟನು. ಸಂಚರಿಸುತ್ತಾ ಸಂಚರಿಸುತ್ತಾ ಕತ್ತಲೆಯಾಗಲು ಒಂದುಮನೆಯ ಸಮೀಪಕ್ಕೆ ಬಂದನು. ಆ ಗೃಹವು ಬಹಳ ಎತ್ತರವಾಗಿದ್ದರೂ ಸುಂದರವಾಗಿತ್ತು, ಈ ಮನೆಯಲ್ಲಿ ಪರೀಕ್ಷಿಸಿ ನೋಡಬೇಕೆಂದು ಯೋಚಿಸಿ ಮುಂದೆಮಾಡಿದ ಬಾಗಿಲವನ್ನು ಅಂಗುಲಿಯಿಂದ ಟಕಟಕ ಬಾರಿಸಿದನು. ಆಗ ಒಳಗಿನಿಂದ ಯಾರವರು ? ಎಂಬ ಧ್ವನಿಯು ಕೇಳಬಂತು; ಆಗ ಬಾದಶಹನು- "ಯಜಮಾನರೇ ! ನಾನು ಪ್ರವಾಸಿಯು ಈ ಪಟ್ಟಣಕ್ಕೆ ಬಂದು ಎರಡು ದಿವಸಗಳಾದವು ಈ ದಿವಸ ಸಾಯಂಕಾಲದ ಮುಂದೆ ನಗರವನ್ನು ನೋಡಬೇಕೆಂದು ಇಚ್ಛಿಸಿ ಸಂಚಾರಮಾಡುತ್ತ ಮಾಡುತ್ತ ಬರಲು ನಾನು ಇಳಿದುಕೊಂಡಿದ್ದ ಸ್ಥಳವು ಗೊತ್ತಾಗದೆ ಹೋಯಿತು ಮತ್ತು ನಡೆದುನಡೆದು ಬೇಸತ್ತುಹೋಗಿದ್ದೇನೆ, ಆದ್ದರಿಂದ ನನಗೆ ವಿಶ್ರಾಂತಿಗೋಸುಗ ಕಿಂಚಿತ್‌ಸ್ಥಳವನ್ನು ಕೊಟ್ಟರೆ ತಮಗೆ ಬಹಳೇಪುಣ್ಯವು ಬರುವದು" ಎಂದನು. ಆಗ ಮನೆಯ ಯಜಮಾನನು ಬಂದು ಬಾಗಿಲತೆರೆದು ಬಾದಶಹನನ್ನು ಒಳಗೆ ಕರೆದುಕೊಂಡು ಭೋಜನದ ವಿಷಯದಲ್ಲಿ ವಿಚಾರಿಸಿದನು, ಬಾದಶಹನು ಧನ್ಯವಾದಸಹಿತ ಅಸ್ವೀಕಾರಮಾಡಿದನು. ಮುಂದೆ

ಕಿಂಚಿತ್ಕಾಲದಮೇಲೆ ಗೃಹದ ಯಜಮಾನನು ಊಟ ಉಡಿಗೆಗಳನ್ನು ತೀರಿಸಿಕೊಂಡು ಬಾದಶಹನೊಡನೆ ಮಾತುಕಥೆಗಳನ್ನಾಡುತ್ತ ಕುಳಿತುಕೊಂಡನು. ಆಗ ಬಾದಶಹನು- “ ನಿನ್ನೆಯದಿವಸ ನಿಮ್ಮ ಈ ಪಟ್ಟಣದಲ್ಲಿ ಬಾದಶಹನು ಸಾರಿಸಿದ ಡಂಗುರದ ಅಭಿಪ್ರಾಯವನ್ನು ಕೇಳಿ ನನಗೆ ಪರಮ ಆಶ್ಚರ್ಯವಾಯಿತು, ಈಪ್ರಕಾರದ ರೂಢಿಯು ಪ್ರತಿಮಾಸದಲ್ಲಿ ಇರುವದೋ ಅಥವಾ ನಿನ್ನೆ ಒಂದೇ ದಿವಸವ್ರೋ ” ಎಂದು ಪ್ರಶ್ನೆಮಾಡಿದನು. ಆಗ ಗೃಹದೊಡೆಯನು “ ಇಲ್ಲ; ನಿನ್ನೆಯಾಕೆ ಈಪ್ರಕಾರ ಡಂಗುರವನ್ನು ಸಾರಿಸಿದನೋ ತಿಳಿಯಲಿಲ್ಲ ” ಎಂದನು. ಬಾದಶಹ- “ ನಿಮ್ಮ ಬಾದಶಹನು ಇಷ್ಟುಹಾಲನ್ನು ತೆಗೆದುಕೊಂಡು ಏನುಮಾಡುವನು ” ಎಂದು ಪುನಃ ಕೇಳಿದನು ಅದಕ್ಕೆ ಗೃಹದ ಯಜಮಾನನು “ ಅವನು ಏನಾದರೂ ಮಾಡಲೊಲ್ಲನೇಕೆ ! ಅದರ ಸಂಗತಿಯು ನನಗೆಬೇಡ, ನಾನಂತೂ ಸತ್ಯವಾಗಿ ಹೇಳುತ್ತೇನೆ. ಹಾಲುಹಾಕುವದಕ್ಕೆ ಪ್ರತಿಯಾಗಿ ನಾನು ಒಂದುಕೊಡ ನೀರನ್ನುಹಾಕಿ ಬಂದೆನು, ಸಾವಿರಾರುಕೊಡ ಹಾಲಿನಲ್ಲಿ ನಾನೊಬ್ಬನು ಒಂದುಕೊಡ ನೀರನ್ನು ಹಾಕಿದರೆ ಅದನ್ನುಯಾರು ಗೊತ್ತುಹಿಡಿಯುತ್ತಾರೆ ” ಎಂದನು. ಈಮಾತಿಗೆ ಬಾದಶಹನು- “ ವಾಹವ್ವಾ; ವಾಹವ್ವಾ; ಒಳ್ಳೇ ಶ್ರೇಷ್ಠವಾದ ಯುಕ್ತಿಯು. ಇರಲಿ; ಈ ಸಂಗತಿಯು ಬಾದಶಹನಿಗೆ ತಿಳಿದರೆ ನಿಮ್ಮಗತಿಯೇನಾಗುವದೆಂಬದನ್ನು ವಿಚಾರಿಸಿದಿರಾ ” ಎಂದು ಕೇಳಿದನು. ಆಗ ಗೃಹಸ್ವಾಮಿಯು ಈ ಸಂಗತಿಯು ಬಾದಶಹನಿಗೆ ತಿಳಿಯುವದು ಅಸಾಧ್ಯವು ಎಂದನು ಆ ಕೂಡಲೇ ಬಾದಶಹನು ತನ್ನ ಮೈಮೇಲೆ ಇದ್ದ ಬಟ್ಟೆಗಳನ್ನು ತೆಗೆದುಹಾಕಿ ತನ್ನ ನಿಜಸ್ವರೂಪವನ್ನು ತೋರಿಸಿದನು, ಆ ಕೂಡಲೆ ಗೃಹದಯಜಮಾನನು ಗಾಬರಿಯಾದನು ಮುಖವು ಕಳೆಗುಂದಿತು, ಮುಖದಿಂದ ಶಬ್ದಗಳು ಹೊರಡದಾದವು; ಅವನ್ನು ನೋಡಿ ಬಾದಶಹನು ನೀನು ಅಂಜಬೇಡ, ನಿನ್ನ ಕೂದಲು ಸಹ ಕೊಂಕಾಗಲಾರದು; - ಯಾಕಂದರೆ ನೀನು ಮಾಡಿದ ಅಪರಾಧವನ್ನು ನಿನ್ನ ಮುಖದಿಂದಲೇ ಸ್ವೀಕಾರಮಾಡಿದ್ದೀ ! ನಾನು ಪ್ರತ್ಯಕ್ಷವಾಗಿ ಬಂದು ಈ ವಿಷಯದಲ್ಲಿ ನಿನಗೆ ಪ್ರಶ್ನೆಮಾಡಿದ್ದರೆ ನೀನು ನಿಜಸಂಗತಿಯನ್ನು ಪ್ರಕಟಪಡಿಸುತ್ತಿದ್ದಿಯಾ ? ನನಗೆ ಕಾರ್ಯಾಂತರಕ್ಕಾಗಿ ಈ ವಿಷಯವನ್ನು ಪರೀಕ್ಷಿಸಿನೋಡಬೇಕಾಗಿ ಬಂದದರಿಂದ ನಾನು ಈಪ್ರಕಾರ ಪ್ರಚ್ಛನ್ನವೇಷದಿಂದ ಬಂದಿದ್ದೆನು ಎಂದುಹೇಳಿ, ಪುನಃ ಪ್ರವಾಸಿಗನಂತೆ ವೇಷಧಾರಣಮಾಡಿಕೊಂಡು ಅಲ್ಲಿಂದಹೊರಬಿದ್ದು ಮತ್ತೊಬ್ಬ ಧನಾಢ್ಯನಗೃಹಕ್ಕೆ ಹೋದನು ಆ ಪಟ್ಟಣದಲ್ಲಿ ಅವನು ಬಹಳೇ ದಾತೃವೆಂದು ಪ್ರಸಿದ್ಧಿಯನ್ನು ಹೊಂದಿ

ದ್ದನು. ಮೊದಲಿನಂತೆಯೇ ಅವನ ದ್ವಾರದಸಮೀಪಕ್ಕೆಹೋಗಿ ತಾನು ಬಹ ಳೇ ದಣಿದು ಬಂದಿರುವೆನೆಂದು ಹೇಳಿದನು. ಆಗ ಆ ಧನಾಢ್ಯನು "ನಿನಗೆಇಲ್ಲಿ ಎಷ್ಟುದಿವಸ ನಿಂತುಕೊಳ್ಳಬೇಕೆಂಬ ಅಪೇಕ್ಷೆಯಿರುವದೋ ಅಷ್ಟುದಿವಸಗಳ ತನಕ ನಿಶ್ಚಿಂತೆಯಿಂದ ನನ್ನ ಮನೆಯಲ್ಲಿ ವಾಸಮಾಡು, ಈ ಗೃಹವು ನಿನ್ನ ದಂತಲೇ ಭಾವಿಸಿಕೋ, ನಿನಗೆ ಯಾವಪ್ರಕಾರದ ತೊಂದರೆಯೂ ಉಂಟಾ ಗಲಾರದು" ಎಂದು ಮಾತನಾಡಿದನು. ಆಗ ಬಾದಶಹನು ಸ್ವಾಮಿ ನನಗೆ ಸ್ವಲ್ಪಹೊತ್ತು ವಿಶ್ರಾಂತಿಗೆ ಸ್ಥಳದೊರೆತರೆ ಸಾಕು ಎಂದನು. ಆಮೇಲೆ ಉ ಳಿದ ಮಾತುಕಥೆಗಳು ಸಾಗಿದವು, ಆಗ ಬಾದಶಹನು ಆ ಡಂಗುರದ ವಿಷಯ ವನ್ನೇ ತೆಗೆದನು ಆಗ ಧನಾಢ್ಯನು "ಸ್ವಾಮೀ! ಈ ಜಗತ್ತಿನಲ್ಲಿರುವ ಪ್ರತಿ ಯೊಬ್ಬ ಪ್ರಾಣಿಯು ತನ್ನ ಉಳಿತಾಯವಾಗಬೇಕೆಂದು ಅಪೇಕ್ಷಿಸುತ್ತಿರು ವನೇ ಹೊರತು ಹಾನಿಯನ್ನು ಅಪೇಕ್ಷಿಸುವದಿಲ್ಲ ಉಳಿದವರು ಹ್ಯಾಗೆ ಮಾ ಡಿರಲಿ, ಅದರಗೊಡವೆಯು ನನಗೆಬೇಡ! ನಾನಂತೂ ಹಾಲುಹಾಕುವದಕ್ಕೆ ಪ್ರತಿಯಾಗಿ ನೀರನ್ನೇಹಾಕಿ ಬಂದೆನು" ಎಂದು ಹೇಳಿದನು. ಆಗ ಬಾದಶ ಹನು "ಈ ನಿಮ್ಮ ಕಪಟಕೃತ್ಯವು ಬಾದಶಹನಿಗೆ ವಿದಿತವಾದರೆ ನಿಮ್ಮಗತಿ ಏನಾಗುವದೆಂಬದನ್ನು ವಿಚಾರಮಾಡಿಕೊಂಡು ತಿಳಿದಿದ್ದೀರಾ" ಎಂದು ಪ್ರ ಶ್ನೆಮಾಡಿದನು. ಈಮಾತಿಗೆ ಪ್ರತ್ಯುತ್ತರವಾಗಿ ಧನಾಢ್ಯನು ಈ ವಿಷಯವು ನಿನ್ನದ್ವಾರದಿಂದ ಬಾದಶಹನಿಗೆ ತಿಳಿಯಬೇಕೇ ಹೊರತು ಅನ್ಯರಿಂದ ತಿಳಿ ಯುವಂತಿಲ್ಲ ಎಂದನು. ಆ ಕೂಡಲೇ ಬಾದಶಹನು ತನ್ನ ನಿಜಸ್ವರೂಪವಂ ನು ವ್ಯಕ್ತಪಡಿಸಲು ಧನಾಢ್ಯನು ಬೆದರಿದನು. ಬಾದಶಹನು ಅವನಿಗೆ ಅಭ ಯವನ್ನಿತ್ತು ಭಯಪಡಬೇಡ, ನಿನ್ನಂತೆಯೇ ಯಾವತ್ತರೂ ಮಾಡಿದ್ದಾರೆ ಈ ಸಂಗತಿಯನ್ನು ಪರೀಕ್ಷಿಸಿ ನೋಡಬೇಕೆಂತಲೇ ಪ್ರಚ್ಛನ್ನ ವೇಷದಿಂದ ಸಂಚಾರಮಾಡಹತ್ತಿದ್ದೇನೆ ಎಂದು ಹೇಳಿ ಹೊರಟುಬಂದನು ಮತ್ತು ಬೀರ ಬಲನ ವಿಚಾರಶಕ್ತಿಯ ವಿಷಯದಲ್ಲಿ ಆನಂದಪಟ್ಟನು. ... *

—(೧೬೨. ಜಲಾಶಯದಲ್ಲಿ ಬ್ರಾಹ್ಮಣನು.)—

ಹೇಮಂತಕಾಲದಲ್ಲಿ ಬಾದಶಹನು ಒಂದುದಿವಸ ತನ್ನ ಅನುಯಾಯಿ ಗಳೊಡನೆ ಉಪವನದಲ್ಲಿ ಸಂಚಾರಾರ್ಥವಾಗಿ ಬಂದಿದ್ದನು ಜಲಾಶಯಗಳಲ್ಲಿ ಯ ಜಲವು ಅತಿಸೀತಕರವಾಗಿದ್ದವು, ಬಾದಶಹನು ಜಲದಲ್ಲಿ ತನ್ನ ಬೆರಳನ್ನು ಎದ್ದಿ ಆ ಕೂಡಲೆ ಹೊರಗೆ ತೆಗೆದುಕೊಂಡು ತನ್ನ ಅನುಯಾಯಿಗಳನ್ನು ಕುರಿತು "ಜಲವು ಬಹುಸೀತಲವಾಗಿದೆ; ಇದರಲ್ಲಿ ಕುಳಿತುಕೊಂಡು ಯಾವ ನಾದರೂ ಒಂದು ಸಂಪೂರ್ಣರಾತ್ರಿಯನ್ನು ಕಳೆಯಲು ಸಮರ್ಥನಾಗುವ

ನೇನು" ಎಂದು ಕೇಳಿದನು. ಯಾವತ್ತರೂ ಆಗಲಾರದೆಂದು ಹೇಳಿದರು ಆಗ ಬಾದಶಹನು "ಯಾವನಾದರೂ ಈ ಜಲಾಶಯದಲ್ಲಿ ಸಂಪೂರ್ಣರಾತ್ರಿಯನ್ನು ಕಳೆದರೆ ಅವನಿಗೆ ಐವತ್ತುಸಾವಿರ ರೂಪಾಯಿಗಳನ್ನು ಪಾರಿತೋಷಕವಾಗಿ ಕೊಡುತ್ತೇನೆ. ಯಾರಿಗಾದರೂ ಧೈರ್ಯವಿದ್ದರೆ ಮುಂದೆ ಬರ್ರಿ!" ಎಂದನು. ಬಾದಶಹನ ಆಜ್ಞೆಯು ಸರ್ವರಿಗೂ ಕೇಳಬಂತು, ಆದರೆ ಒಬ್ಬನಾದರೂ ಮುಂದುವರಿಯಲಿಲ್ಲ; ಆ ಜನಸಮೂಹದಲ್ಲಿ ಒಬ್ಬ ದರಿದ್ರಿಯಾದ ಬ್ರಾಹ್ಮಣನಿದ್ದನು, ಅವನು ಹೊದ್ದುಕೊಂಡ ಒಂದು ಬಟ್ಟೆಯಾದರೂ ಗಟ್ಟಿಯಾಗಿ ಇದ್ದಿಲ್ಲ; ಅವನು ಆಲೋಚಿಸಿದ್ದೇನಂದರೆ "ನಾನು ಕೇವಲದರಿದ್ರನಾದ್ದರಿಂದ ಉಪಜೀವನಕ್ಕೆ ಬಹಳೇ ತೊಂದರೆಯಾಗುತ್ತದೆ, ಒಂದು ನೀರಿನಲ್ಲಿ ಕುಳಿತುಕೊಂಡರೆ ಬಾಧೆಯೇನು, ಒಂದುವೇಳೆ ಇದರಲ್ಲಿಯೇ ಮರಣವುಬಂದೊದಗಿದರೆ ಈ ಕಷ್ಟದಿಂದಾದರೂ ಬಿಡುಗಡೆಯಾದೀತು, ಒಂದುವೇಳೆ ಬದುಕಿಕೊಂಡರೆ ಐವತ್ತುಸಾವಿರ ರೂಪಾಯಿಗಳು ಸಿಕ್ಕುತ್ತವೆ ದರಿದ್ರತನವು ಹಿಂಗುವದು" ಎಂದು ನಿಶ್ಚಯಿಸಿಕೊಂಡು ನಮ್ರತೆಯಿಂದ ಮುಂದೆ ಬಂದು "ಖುದಾವಂದ! ತಮ್ಮ ಅಪ್ಪಣೆಯಾದರೆ ಒಂದು ಸಂಪೂರ್ಣರಾತ್ರಿಯನ್ನು ಈ ಜಲದಲ್ಲಿ ಕಳೆಯುವದಕ್ಕೆ ಸಿದ್ಧನಿರುವೆನು" ಎಂದು ಬಿನ್ನಹಮಾಡಿದನು ಆಗ ಬಾದಶಹನು ಒಂದು ಸಂಪೂರ್ಣರಾತ್ರಿಯನ್ನು ಈ ಜಲದಲ್ಲಿ ನಿಂತುಕೊಂಡು ಕಳೆದರೆ ಐವತ್ತುಸಾವಿರ ರೂಪಾಯಿಗಳನ್ನು ಕೊಡುವದಲ್ಲದೇ ಮತ್ತೆ ವಸ್ತ್ರಾಭರಣಗಳನ್ನು ಉಚಿತವಾಗಿ ಕೊಡುವೆನು ಎಂದುಹೇಳಿದನು.

ಈ ಮಾತಿಗೆ ಬ್ರಾಹ್ಮಣನು ಒಪ್ಪಿಕೊಂಡನು ಬಾದಶನು ಆ ಜಲಾಶಯದ ಸುತ್ತುಮುತ್ತು ಕಾವಲಿಟ್ಟನು ದ್ರವ್ಯ ದಾಶೆಯಿಂದ ಬ್ರಾಹ್ಮಣನು ನೀರೊಳಗೆ ಆಕಂಠ ಪರಿಯಂತರ ತನ್ನದೇಹವನ್ನು ಮುಳುಗಿಸಿಕೊಂಡು ನಿಂತನು ಪ್ರಾತಃಕಾಲ ವಾಗುತ್ತಲೇ ಆ ಜಲಾಶಯದಿಂದ ಹೊರಬಿದ್ದು ಒದ್ದೆಬಟ್ಟೆಯಿಂದಲೇ ಅರಮನೆಗೆ ಬಂದನು ಅವನ ಸಂಗಡ ಕಾವಲುಗಾರರೂ ಬಂದರು ಬ್ರಾಹ್ಮಣನು ಬಾದಶಹನ ಬಳಿಗೆಹೋಗಿ, ದ್ರವ್ಯವನ್ನು ಬೇಡಿದನು ಕಾವಲುಗಾರರ ಮುಖದಿಂದ ವೃತ್ತಾಂತವನ್ನೆಲ್ಲ ಕೇಳಿಕೊಂಡು ಬಾದಶಹನು ರೂಪಾಯಿಗಳನ್ನು ಕೊಡುವದಕ್ಕೆ ಅಪ್ಪಣೆ ಮಾಡಿದನು ಆದರೆ ಹೊಟ್ಟೆಯುರಕರಾಗಿದ್ದ ಕೆಲವರು ಒಬ್ಬ ಕಾವಲುಗಾರನನ್ನು ತಮ್ಮಕಡೆಗೆ ಒಲಿಸಿಕೊಂಡು ಹಣವನ್ನು ಕೊಡುವದಕ್ಕೆ ಪ್ರತಿಬಂಧವನ್ನು ತಂದರು ಆಗ ಕಾವಲುಗಾರನು ಮುಂದೆಬಂದು, "ಪೃಥ್ವೀನಾಥ! ಈ ಬ್ರಾಹ್ಮಣನು ಜಲದಲ್ಲಿ ನಿಂತುಕೊಂಡು ಸಂಪೂರ್ಣರಾತ್ರಿಯನ್ನು ಕಳೆದದ್ದೇನೋನಿಜ

ಆದರೆ ಗುಡ್ಡಕ್ಕೆ ಬೇಗೆಯು ಹತ್ತಿದ್ದರಿಂದ, ಇವನು ಜಲದಲ್ಲಿ ನಿಲ್ಲಲು ಸಮರ್ಥನಾದನು; ಇಲ್ಲದಿದ್ದರೆ ಸತ್ತುಹೋಗುತ್ತಿದ್ದನು " ಎಂದು ಹೇಳಿದನು ಅದನ್ನು ಕೇಳಿ ಬಾದಶಹನು-" ನಿನ್ನ ದೃಷ್ಟಿಗೆ ಅಗ್ನಿಯು ಬಿದ್ದದರಿಂದ ನೀರಿನಲ್ಲಿ ನಿಂತುಕೊಳ್ಳಲು ಸಮರ್ಥನಾದಿ ! ಅದರಿಂದ ನಿನಗೆ ಪಾರಿತೋಷಕವು ದೊರೆಯಲಾರದು " ಎಂದು ಹೇಳಿದನು. ... ... *

ಬ್ರಾಹ್ಮಣನು ದುಃಖಿತನಾಗಿ ಬೀರಬಲನಮನೆಗೆ ಹೋದನು ಬೀರಬಲನು ಅವನಿಗೆ ಧೈರ್ಯಹೇಳಿ, ಕಳುಹಿಸಿ ಕೊಟ್ಟನು ಆಮೇಲೆ ಓಲಗಕ್ಕೆ ಹೋಗುವಸಮಯವು ಸಮೀಪಿಸಲು ಆದಿವಸ ಓಲಗಕ್ಕೆ ಹೋಗದೆ ನದಿಯದಂಡೆಗೆ ಹೋಗಿ, ಒಂದು ಉದ್ದವಾಗಿದ್ದ ಗಳವನ್ನು ತೆಗೆದುಕೊಂಡು ಹೋಗಿ, ಅದನ್ನು ಭೂಮಿಯಲ್ಲಿ ನಡಿಸಿ ಅದರ ಮೇಲ್ಭಾಗಕ್ಕೆ ಒಂದುಗಡಿಗೆಯನ್ನು ಕಟ್ಟಿ ಅದರಲ್ಲಿ ಅಕ್ಕಿಯನ್ನೂ ನೀರನ್ನೂ ಹಾಕಿ ಬುಡದಲ್ಲಿ ಹುಲ್ಲಿನಿಂದ ಉರಿಯನ್ನು ಮಾಡುತ್ತ ಕುಳಿತುಕೊಂಡನು. ... ... *

ಬಾದಶಹನು ನ್ಯಾಯಸ್ಥಾನದಲ್ಲಿ ಬಂದು ಕುಳಿತುಕೊಂಡು ನಿಯತ ಸಮಯವು ಮೀರಿಹೋದರೂ ಬೀರಬಲನು ಬಾರದಿರುವದನ್ನು ಕಂಡು ಒಬ್ಬ ಸೇವಕನನ್ನು ಕರೆಯಲಿಕ್ಕೆ ಕಳುಹಿಕೊಟ್ಟನು ಅವನು ಬೀರಬಲನಗೃಹಕ್ಕೆ ಹೋಗಿ ವಿಚಾರಿಸಲು ನದಿಯ ಕಡೆಗೆ ಹೋಗಿದ್ದಾರೆಂದು ತಿಳಿಯಬಂತು ಆ ಕೂಡಲೆ ಅವನು ಶೀಘ್ರವಾಗಿಹೋಗಿ ಬೀರಬಲನಿಗೆ ಬೆಟ್ಟಿಯಾಗಿ:-" ಬಾದಶಹರವರು ತಮ್ಮನ್ನು ಕರೆದುಕೊಂಡು ಬರುವದಕ್ಕೆ ಕಳಿಸಿದ್ದಾರೆ; ನಡೆಯಬೇಕು. " ಎಂದನು. ಬೀರಬಲ—ಬರುತ್ತೇನೆ. ... *

ಸೇವಕ—ಮಹಾಶಯ ! ಇದನ್ನೇನು ಆರಂಭಿಸಿರುವಿರಿ ?

ಬೀರಬಲ—ಅನ್ನವನ್ನು ಬೇಯಿಸಹತ್ತಿದ್ದೇನೆ.

ಈಮಾತು ಕಿವಿಗೆ ಬಿದ್ದಕೂಡಲೆ ಸೇವಕನು ನಗುತ್ತ ಬಾದಶಹನಬಳಿಗೆಬಂದು ಸಮಗ್ರವೃತ್ತಾಂತವನ್ನು ತಿಳಿಸಿದನು. ಆಮೇಲೆ ಕಿಂಚಿತ್ಕಾಲ ಮಾರ್ಗಪ್ರತೀಕ್ಷೆಮಾಡಿ, ಬಾರದಾಗಲು, ಪುನಃ ಮತ್ತೊಬ್ಬ ಸೇವಕನನ್ನು ಕಳುಹಿಸಿದನು ಅವನಿಗೂ ಅದೇ ಉತ್ತರವುಬಂತು ಪುನಃ ಮೂರನೆಯವನನ್ನು ಕಳಿಸಿದನು;ಅವನು ಹೋಗಿಬಂದು ಅದೇಸಂಗತಿಯನ್ನು ತಿಳಿಸಿ[illegible] ಹೀಗೆ ಬಾದಶಹನು ಎಷ್ಟೋಸಾರೆ ಕಳುಹಿಸಿದರೂ ಸಹ ಬೀರಬ[illegible] ದೆ ಕರೆಯಬಂದ ಬಂದವರಿಗೆಲ್ಲ, " ಅನ್ನವನ್ನು ಬೇಯಿಸಿ ಅಟು[illegible] ನೆಂದು ಹೇಳಿ ಕಳುಹಿಸಿದನೇ ಹೊರತು ಓಲಗಕ್ಕೆ ಬರಲಿ[illegible] ರ್ಜನೆವಾಯಿತು ಆಮೇಲೆ ಬಾದಶಹನು ಅತಿಸಂತಪ್ತ[illegible]

ಎಷ್ಟು ಅನ್ನವನ್ನು ಬೇಯಿಸುತ್ತಿದ್ದಾನಾದೀತು? ನೋಡಿಯಾದರೂ ಬರೋಣ" ಎಂದು ನದಿಯ ದಂಡೆಯ ಕಡೆಗೆ ಹೊರಟನು ಅಲ್ಲಿಹೋಗಿ ನೋಡಲು ಗಳದ ತುದಿಯಲ್ಲಿ ಗಡಿಗೆಯನ್ನು ಕಟ್ಟಿ ಹುಲ್ಲನ್ನು ಉರಿಹಚ್ಚುತ್ತ ಸ್ವಾರಿಯು ಕುಳಿತುಕೊಂಡಿತ್ತು. ಅದನ್ನು ನೋಡಿ, ... *

ಬಾದಶಹ—"ಬೀರಬಲ್ಲ! ಏನು ಆರಂಭಮಾಡಿರುವಿ?"

ಬೀರಬಲ್ಲ—ಮಾನ್ಯವರ! ಅನ್ನವನ್ನು ಬೇಯಿಸ ಹತ್ತಿದ್ದೇನೆ.

ಬಾದಶಹ—"ಈ ದಿವಸ ನೀನು ಮೂರ್ಖನಾದಂತೆ ತೋರುತ್ತದೆ ಆಕಾಶದಲ್ಲಿ ಬಡಿಗೆಯನ್ನಿಟ್ಟು ಭೂಮಿಯಮೇಲೆ ಉರಿಹಚ್ಚಿದರೆ ಅನ್ನವು ಎಂದಾದರೂ ಪಕ್ವವಾಗುವದುಂಟೇ? ... ... *

ಬೀರಬಲ—ಪ್ರಭುವರೆ! ಒಂದು ಹರದಾರಿ ದೂರದಲ್ಲಿದ್ದ ದೀಗೆಯ ಜಳದಿಂದ ಬ್ರಾಹ್ಮಣನು ಜಲದಲ್ಲಿ ಸಂಪೂರ್ಣ ರಾತ್ರಿಯನ್ನು ಕಳೆದನೋ, ತದ್ವತ್ ಈ ಅನ್ನವಾದರೂ ಪಕ್ವವಾಗ ಬಹುದು; ಇದರಲ್ಲಿ ನನ್ನ ಮೂರ್ಖತನವೇನು? ... ... *

ಬಾದಶಹ—"ನಿನ್ನ ಅಭಿಪ್ರಾಯವು ಸರಿಯಾದದ್ದು ಈಗ ಅರಮನೆಗೆ ನಡೆ ಆ ಬ್ರಾಹ್ಮಣನನ್ನು ಕರೆಯಿಸಿ ಪಾರಿತೋಷಕವನ್ನು ಕೊಡುತ್ತೇನೆ.

ಬಾದಶಹನೂ ಬೀರಬಲನೂ ಕೂಡಿಕೊಂಡು ಅರಮನೆಗೆ ಬಂದರು ಬಾದಶಹನು ಆ ಕೂಡಲೆ ಬ್ರಾಹ್ಮಣನನ್ನು ಕರೆಯಿಸಿಕೊಂಡು ಐವತ್ತು ಸಹಸ್ರ ರೂಪಾಯಿಗಳನ್ನು ಕೊಟ್ಟು ಕಳುಹಿದನು. ಬ್ರಾಹ್ಮಣನು ಪ್ರಸನ್ನನಾಗಿ ಬೀರಬಲನಿಗೂ ಬಾದಶಹನಿಗೂ ಆಶೀರ್ವಾದ ಮಾಡಿ ಹೊರಟು ಹೋದನು. ... ... *

೧೬೩. ಚಾತುರ್ಯಗರ್ಭಿತವಾದ ವ್ಯತ್ತಿಕೆಯ ಘಟ.

ವಸಂತ ಕಾಲದಲ್ಲಿ ಬಾದಶಹನು ಓಲಗವನ್ನು ಉಪವನದಲ್ಲಿ ನೆರಯಿಸಬೇಕೆಂದು ಅಪ್ಪಣೆಮಾಡಿದನು ಅದರಂತೆ ಸಭೆಯು ನೆರೆಯಿತು ಬೀರಬಲನು ನ್ಯಾಯ ವಿಚಾರಣೆಯನ್ನು ಮಾಡುತ್ತ ಸಮೀಪದಲ್ಲಿಯೇ ಕುಳಿತುಕೊಂಡಿದ್ದನು ಮುಂದೆ ನಾಲ್ಕಾರು ಗಳಿಗೆಯ ಮೇಲೆ ಆ ನ್ಯಾಯದ ನಿರ್ಣವನ್ನು ಹೇಳಿದನು ಆ ಮೇಲೆ ಒಬ್ಬ ವರ್ತಕನು ಬಂದು ಬಾದಶಹನ ಬದಲ್ಲಿ ಒಂದು ಲೇಖವನ್ನು ತಂದು ಇಟ್ಟನು. ಆ ಕಾಗದವನ್ನು ತೆಗೆನೋಡಲು ಅದರಲ್ಲಿ ಈ ಕೆಳಗಿನ ಅಭಿಪ್ರಾಯವಿತ್ತು.

ಅಜಮೀರ ನಿವಾಸಿಯು, ದೇಶದೇಶಗಳಲ್ಲಿ ಸಂಚಾರಮಾತ್ತ, ಪದಾರ್ಥಗಳ ಕ್ರಯ ವಿಕ್ರಯಮಾಡಿ ಉಪಜೀವನ,,

"ವನ್ನು ಸಾಗಿಸಿರುತ್ತೇನೆ ನಾನು ಬಂಗಾಲ ಪ್ರಾಂತದಲ್ಲಿಯ" ಡಾಕಾ" " ಗ್ರಾಮಕ ಪಟ್ಟಣಕ್ಕೆ ಹೋದಾಗ ಒಬ್ಬವರ್ತಕನ ಬಳಿಯಲ್ಲಿದ್ದ ಒಂದು ರಾಜ " " ಹಂಸವನ್ನು ಕಂಡೆನು. ಆ ಪಕ್ಷಿಯು ಅತಿ ಸುಂದರವಾದದ್ದಿತ್ತು, ಅದರ ಪಕ್ಷಗಳು " " ಸುವರ್ಣದ ವರ್ಣವನ್ನು ಹೀಯಾಳಿಸುತ್ತಿದ್ದವು ಅದರ ಶರೀರವು ಒಳ್ಳೆಕಾಂತಿ " " ಯುಕ್ತವಾಗಿ ಪುಷ್ಟವಾಗಿತ್ತು ಅಹಹಾ! ಅದನ್ನು ಬಣ್ಣಿಸುವದು ನನ್ನಿಂದಸಾ " ಧ್ಯವಲ್ಲ ಆ ಪಕ್ಷಿಯು ನಿಮ್ಮಂಥ ಚಕ್ರವರ್ತಿಗಳ ಬಳಿಯಲ್ಲಿ ಇರುವದಕ್ಕೆ " " ಯೋಗ್ಯವಾದದ್ದು ಅದನ್ನು ಕ್ರಯಕ್ಕೆ ತೆಗೆದುಕೊಂಡು, ಖಾವಂದರವರಿಗೆ ಕಾ " " ಣಿಕೆಯಾಗಿ ಸಮ ರ್ಪಿಸಬೇಕೆಂಬ ಸದಿಚ್ಛೆಯಿಂದ, ಆ ವರ್ತಕನು ಕೇಳಿದಷ್ಟು " " ಬೆಲೆಯನ್ನು ಕೊಟ್ಟು, ತೆಗೆದುಕೊಂಡು ಇಲ್ಲಿಗೆ ಬಂದೆನು. ಮತ್ತು ಆ ಪಕ್ಷಿಯ " " ಪಂಜರವನ್ನು ನಾನು ಮಲಗಿಕೊಳ್ಳುವ ಅಂತರ್ಗೃಹದಲ್ಲಿ ತೂಗಹಾಕಿದೆನು " ಆ ಮೇಲೆ ಪಟ್ಟಣದಲ್ಲಿ ಸಂಚಾರಮಾಡಿ, ತಿರುಗಿ ಬಂದು ನೋಡಲು, ಪಕ್ಷಿಯು " " ಮಾಯವಾಗಿತ್ತು ನನ್ನ ಸೇವಕರಲ್ಲಿಯೇ ಯಾವನೋ ಒಬ್ಬನು ಆ ಪಕ್ಷಿಯನ್ನು ಭಕ್ಷಿಸಿರಬೇಕೆಂಬ ಆಕ್ಷೇಪಣೆಯು ನನಗುಂಟಾಗಿದೆ; ಅದರಿಂದ ಕೃಪಾಳು " "ಗಳು, ಆ ಅಪರಾಧಿಯನ್ನು ಶೋಧಮಾಡಿ; ಅವನಿಗೆ ಯೋಗ್ಯದಂಡನೆಯನ್ನು " "ವಿಧಿಸುವಿರೆಂದು ನಂಬಿದ್ದೇನೆ."

ಎಂದು ಬರೆದಿದ್ದ ಲೇಖನಾಭಿಪ್ರಾಯವನ್ನು ಕೇಳಿ ಬಾದಶಹನು ಆ ವರ್ತಕನ ಮನೆಯ ಯಾವತ್ತು ಸೇವಕರನ್ನು ಕರೆದು ಕೊಂಡು ಬರ್ರಿ!" ಎಂದು ಆಜ್ಞಾಪಿಸಿದನು. ಕಿಂಚಿತ್ಕಾಲದೊಳಗಾಗಿ ಯಾವತ್ತು ಸೇವಕರು ಓಲಗದಲ್ಲಿ ತಂದು ನಿಲ್ಲಿಸಲ್ಪಟ್ಟರು ಬಾದಶಹನು ಎಲ್ಲರಿಗೂ ವಿಚಾರಮಾಡಿದನು ಅಪರಾಧಿಯು ಸಿಕ್ಕಲಿಲ್ಲ ಆಗ ಬಾದಶಹನು ಆವರ್ತಕನನ್ನು ಕುರಿತು " ನಾನು ಯಾವತ್ತು ಸೇವಕರನ್ನು ಕರೆಯಿಸಿ ವಿಚಾರಮಾಡಿದೆನು ಅದರಿಂದೇನೂ ಪ್ರಯೋಜನ ವಾಗಲಿಲ್ಲ ನಿಮ್ಮ ಸಂಶಯವು ಮತ್ತೆಯಾರ ಮೇಲಾದರೂ ಇದ್ದರೆ ತಿಳಿಸು " ಎಂದು ಹೇಳಿ ಆ ವರ್ತಕನ ಸೇವಕರಿಗೆ ಹೋಗಲಪ್ಪಣೆಕೊಟ್ಟನು ವರ್ತಕನು ಬಾಡಿದ ಮುಖವುಳ್ಳವನಾಗಿ ಬೀರಬಲನ ಕಡೆಗೆ ನೋಡುತ್ತ " ಈ ದಿವಸ ನನ್ನ ನ್ಯಾಯ ನಿರ್ಣಯವು ಆದಂತೆ ಅನ್ಯಾಯ ದಾದರೂ ಆಗುತ್ತಿರ ಬಹುದು, ಇನ್ನು ಈ ಜಗತ್ತಿನಲ್ಲಿ ನ್ಯಾಯವಿಮರ್ಶೆಯನ್ನು ಮಾಡುವವರೇ ಇಲ್ಲದಂತಾಯಿತು ಇಂಥ ಪ್ರಸಿದ್ಧವಾದ ಅಕಬರ ಬಾದಶಹನ ಓಲಗದ ಸ್ಥಿತಿಯೇ ಹೀಗಿದ್ದಮೇಲೆ ಅನ್ಯರ ಪಾಡೇನು? ಆಶ್ಚರ್ಯ ? ಮಹದಾಶ್ಚರ್ಯ!! " ಎಂದನು. ಆಗ ಬೀರಬಲನು ಆ ವರ್ತ

ಕನನ್ನು ಕುರಿತು- “ಸಮಾಧಾನವನ್ನು ತಾಳು! ನಾನು ನಿನ್ನ ನ್ಯಾಯನಿ
ರ್ಣಯವನ್ನು ಮಾಡುತ್ತೇನೆ.” ಎಂದುಹೇಳಿ ಪುನಃ ಆ ಸೇವಕರನ್ನು ಮಾ
ರ್ಗದಲ್ಲಿಯೇ ಇದ್ದಕ್ಕಿದ್ದಹಾಗೆ ಬಂಧನಮಾಡಿಕೊಂಡು ಬರ್ರಿ! ಎಂದು ಅಪ್ಪ
ಣೆಮಾಡಿ ನಿಯೋಗಿಗಳನ್ನು ಅಟ್ಟಿದನು ಅವರು ಓಡುತ್ತ ಹೋಗಿ, ಮುಂದೆ
ಮಾರ್ಗದಲ್ಲಿ ಹೋಗುತ್ತಿದ್ದ ಆ ಸೇವಕರನ್ನು ಚತುರ್ಭುಜರನ್ನಾಗಿ ಮಾಡಿ
ಓಲಗದಲ್ಲಿ ತಂದು ನಿಲ್ಲಿಸಿದರು ಆಗ ಬೀರಬಲನು ಕೆಲವು ಪ್ರಶ್ನೆಗಳನ್ನು ಮಾ
ಡಿ ಆ ಮೇಲೆ “ಎಲೈ ಚೋರಾಗ್ರಣಿಯೇ! ನಿನ್ನ ಮನಸ್ಸಿನಲ್ಲಾದರೂ ಇದ್ದ
ದ್ದೇನು! ಪಕ್ಷಿಯನ್ನು ಹೊಡೆದು ತಿಂದು ಬಿಟ್ಟಸಂಗತಿಯು ಹೋಗಲಿ!
ಆದರೆ ಅದರ ಗರಿಯನ್ನು ಮುಂಡಾಸದಲ್ಲಿ ಇಟ್ಟುಕೊಂಡು ಬರಬೇಕೇ! ಶಹ
ಬಾಸ! ನಿನ್ನ ಧೈರ್ಯಕ್ಕೆ ಬಣೆಯೇ ಇಲ್ಲ; ಇಷ್ಟು ಹೊತ್ತಿನ ವರೆಗೆ ನೀನು
ಒಪ್ಪಿಕೊಂಡಿದ್ದಿಲ್ಲ; ಈಗ ಏನು ಹೇಳು! ಎಂದು ನುಡಿದನು ಈ ಮಾತುಗ
ಳು ಪ್ರತಿಯೊಬ್ಬನಿಗೂ ಕೇಳಬಂದವು ಆ ಸೇವಕರಲ್ಲಿಯೇ ಒಬ್ಬನು ಪಕ್ಷಿ
ಯನ್ನು ಕೊಂದು ತಿಂದು ಬಿಟ್ಟಿದ್ದನು. ಆಗ ಅವನು ತನ್ನ ಮನಸ್ಸಿನಲ್ಲಿ
ನಾನೇನಾದರೂ ವಿಸ್ಮರಣೆಯಿಂದ ಗರಿಯನ್ನು ಮುಂಡಾಸದಲ್ಲಿ ಇಟ್ಟುಕೊಂ
ಡಿರಬಹುದೇನೋ! ಎಂಬ ಸಂದೇಹವು ಉತ್ಪನ್ನವಾಗಿ ಅವನು ಯಾರಿ
ಗೂ ತಿಳಿಯದಂತೆ ಸಾವಕಾಶವಾಗಿ ಮುಂಡಾಸದ ಮೇಲೆ ಕೈಯಾಡಿಸಿ
ಕೊಂಡನು ಸಭಾಸದರೆಲ್ಲರೂ ಆ ಸೇವಕರನ್ನೇ ನೋಡುತ್ತ ಕುಳಿತುಕೊಂ
ಡಿದ್ದರು ಆದರೆ ಮುಂಡಾಸದ ಮೇಲೆ ಕೈಯಾಡಿಸಿಕೊಂಡವನ ಮೇಲೆಯಾರ
ದೃಷ್ಟಿಯೂ ಬೀಳಲಿಲ್ಲ ಬೀರಬಲನು ಮಾತ್ರ ಕಂಡನು. ಆಗ ಅವನನ್ನು
ಹಿಡಿದುನಿಲ್ಲಿಸಿ ಉಳಿದವರಿಗೆ ಹೋಗಲಪ್ಪಣೆಕೊಟ್ಟನು ಆಮೇಲೆ ಅವನನ್ನು
ನಯಭಯಗಳಿಂದ ವಿಚಾರಿಸಿದನು ಆದರೂ ಅವನು ತನ್ನ ಅಪರಾಧವನ್ನು
ಒಪ್ಪಿಕೊಳ್ಳಲಿಲ್ಲ ಕಡೆಗೆ ಕರ್ಮಚಾರಿಗಳನ್ನು ಕರೆದು “ಇವನನ್ನು ಬಳಿತಾ
ಗಿ ದಂಡಿಸಿರಿ.” ಎಂದು ಅಪ್ಪಣೆಮಾಡಿದನು ಆ ಕೂಡಲೆ ತಾಡನದ ಭಯ
ದಿಂದ ಅವನು ಅಪರಾಧವನ್ನು ಒಪ್ಪಿಕೊಂಡು ಮುಂಡಾಸದಲ್ಲಿ ಬಚ್ಚಿಟ್ಟು
ಕೊಂಡಿದ್ದ ಹಂಸಪಕ್ಷಿಯ ಗರಿಯನ್ನು ತೋರಿಸಿದನು ಈ ಹಂಚಿಕೆಯಿಂದ
ತುಡುಗನನ್ನು ಬಯಲಿಗೆತಂದು ಅವನಿಗೆ ಉಚಿತವಾದ ದಂಡನೆಯನ್ನು ವಿಧಿ
ಸಿದನು ಸಭಾ ವಿಸರ್ಜನೆಯ ಸಮಯವು ಸಮೀಪಿಸಲು ಎಲ್ಲರೂ ತಾಂಬೂಲ
ಸುಗಂಧಾದಿದ್ರವ್ಯಗಳನ್ನು ಕೊಡಲಪ್ಪಣೆ ಮಾಡಿದನು ಆಗ ಬಾದಶಹನ ಕೈ
ಯೊಳಗಿದ್ದ ಸುವರ್ಣದ ತೈಲಪಾತ್ರೆಯೊಳಗಿಂದ ಒಂದು ತೈಲಬಿಂದುವು
ಕೆಳಗೆ ಹಾಸಿದ ರತ್ನಗಂಬಳಿಯ ಮೇಲೆ ಬಿತ್ತು ಅದನ್ನು ಪುನರಪಿ ಪಾತ್ರೆ

ಯೊಳಗೆ ಹಾಕಬೇಕೆಂದು ಬಾದಶಹನು ಬೊಗ್ಗಿದನು ಆದರೆ ತೈಲವು ಪಸರಿಸಿದ್ದರಿಂದ ಅವನಪ್ರಯತ್ನವು ಸಾಧ್ಯವಾಗಲಿಲ್ಲ, ಈ ಸಮಯದಲ್ಲಿ ಬೀರಬಲನ ದೃಷ್ಟಿಯು ಬಾದಶಹನಮೇಲೆ ಬಿತ್ತು ಆಗ ಬಾದಶಹನು ಮನಸ್ಸಿನಲ್ಲಿ ಬೀರಬಲನು ಈ ಸಂಗತಿಯ ವಿಷಯವಾಗಿ ಎಂದಾದರೂ ಹಂಗಿಸದೆ ಬಿಡಲಿಕ್ಕಿಲ್ಲ ಎಂದು ನಿಶ್ಚಯಿಸಿಕೊಂಡನು. ಸಭಾವಿಸರ್ಜನೆಯಾಯಿತು ಸರ್ವರೂ ತಮ್ಮತಮ್ಮ ಗೃಹಗಳನ್ನು ಕುರಿತು ಗಮನವಮಾಡಿದರು.

ಮರುದಿವಸ ತನ್ನ ದಾತೃತ್ವವನ್ನು ವ್ಯಕ್ತಪಡಿಸಬೇಕೆಂದು ಬಾದಶಹನು ಒಂದು ಹೌದನ್ನು ಸುಗಂಧತೈಲದಿಂದ ತುಂಬಿಸಿ, ಬೇಕಾದವರು ಬಂದು ತೈಲವನ್ನು ತೆಗೆದುಕೊಂಡು ಹೋಗಬಹುದೆಂದು ಡಂಗುರವನ್ನು ಸಾರಿಸಿದನು. ಆಮೇಲೆ ಈ ಸಮಾರಂಭವನ್ನು ನೋಡಬೇಕೆಂದು ಬೀರಬಲನನ್ನು ಕರೆದುಕೊಂಡು ಆ ಸ್ಥಳಕ್ಕೆ ಬಂದನು, ಬಾದಶಹನ ಆಶಯವು ಬೀರಬಲನಿಗೆ ವಿದಿತವಾಯಿತು ಆಗ ಬಾದಶಹನು- “ ಬೀರಬಲ್ಲ ! ಎಂಥ ಆನಂದದ ಸಮಯವು ನೋಡಿದಿಯಾ ” ಎಂದನು. ಆಗ ಬೀರಬಲನು ಮುಕುಳಿತಹಸ್ತನಾಗಿ “ ನರವರ ! ಅಪರಾಧವನ್ನು ಕ್ಷಮಿಸಬೇಕು; ಬಿಂದುವಿನಿಂದ ಆಗಿಹೋದ ಕೆಲಸವು ಹೌದಿನಿಂದಲೂ ಬರಲಾರದು, ಅಡಿಕೆಗೆಹೋದ ಮಾನವು ಆನೆಕೊಟ್ಟರೂ ಬರದು ” ಎಂಬ ಸಾಮತಿಯನ್ನು ಕೇಳಿಲ್ಲವೇ ಎಂದನು. ಈ ಮಾತನ್ನು ಕೇಳಿದಕೂಡಲೆ ಬಾದಶಹನಿಗೆ ಅತಿಶಯವಾದ ಕ್ರೋಧವು ಬಂತು, ಬೀರಬಲನ ಅಧಿಕ ಪ್ರಸಂಗತನದಿಂದ ತನಗೆ ಲಘುತ್ವವು ಬರುವದೆಂದು ನಿಶ್ಚಯಿಸಿದನು. ಆದರೆ ತನ್ನಿಂದಲೇ ಲಘುಕಾರ್ಯವು ಸಂಘಟ್ಟಿಸಿದ್ದರಿಂದ ಕ್ರೋಧವನ್ನು ಪ್ರಕಟೀಕರಿಸಲಿಲ್ಲ.

ಮರುದಿವಸವೇ ಬೀರಬಲನನ್ನು ಓಲಗಕ್ಕೆ ಬರಗೊಡಬೇಡಿರೆಂದು ದ್ವಾರ ರಕ್ಷಕರಿಗೆ ಆಜ್ಞಾಪಿಸಿದನು.

ಬಾದಶಹನ ಕ್ರೋಧವು ಇಳಿದಮೇಲೆ ತಾನೇ ಕರೆಯಕಳುಹುವನೆಂದು ತಿಳಿದು, ಬೀರಬಲನು ತನ್ನಮನೆಗೆ ಹೊರಟುಹೋದನು. ಎಂಟುದಿವಸಗಳಾಗಿ ಹೋದವು ಬಾದಶಹನಿಂದ ಆಹ್ವಾನವು ಬರಲಿಲ್ಲ ಅದರಿಂದ ಬೀರಬಲನಿಗೂ ಕೋಪವು ಬಂದಿತು. ತಾನುಹೋದ ಸಂಗತಿಯನ್ನು ಪ್ರಕಟೀಕರಿಸದೆ ಮಾಳವಪ್ರಾಂತಕ್ಕೆ ಹೊರಟುಹೋದನು, ಅಲ್ಲಿ ಒಂದು ಜನವಸತಿಯಲ್ಲಿ ಒಬ್ಬ ಸಧನ ಮನುಷ್ಯನ ಆಶ್ರಯವನ್ನು ಪಡೆದು, ತನ್ನ ಗುಣವನ್ನೂ ನಿಜವಾದ ನಾಮಧೇಯವನ್ನೂ ವ್ಯಕ್ತಪಡಿಸದೆ ಗುಪ್ತರೀತಿಯಿಂದ ಇರಹತ್ತಿದನು.

ಬೀರಬಲನು ಅಕಬರಶಹನ ದರ್ಬಾರದಿಂದ ಹೊರಟು ಹೋಗಿರುವ
ನೆಂಬ ವಾರ್ತೆಯು ದೇಶವಿದೇಶಗಳಲ್ಲಿ ಪಸರಿಸಿತು, ಆಗ ಬಾದಶಹನ ವೈರಿಗ
ಳು ಒಳಸಂಚನ್ನು ನಡೆಯಿಸಿದರು. ಏನಂದರೆ - “ಅಕಬರಶಹನ ಓಲಗದಲ್ಲಿ
ಚತುರನಾದ ಮಂತ್ರಿಯು ಇಷ್ಟುದಿವಸಗಳವರೆಗೆ ಇದ್ದದರಿಂದ ಅವನರಾಜ್ಯ
ಸೂತ್ರವಲ್ಲಿ ಕೈಹಾಕಲಿಕ್ಕೆ ಸಾಮರ್ಥ್ಯವಿದ್ದಿಲ್ಲ; ಇನ್ನು ರಾಜ್ಯಹರಣಮಾಡ
ಲಿಕ್ಕೆ ವಿಲಂಬವು ಹತ್ತುವಂತೆ ಇಲ್ಲ.”

ಈ ಸಂಗತಿಯು ಗುಪ್ತಚರರ ಮುಖದಿಂದ ಬಾದಶಹನಿಗೆ ತಿಳಿಯ
ಬಂತು, ಬೀರಬಲನನ್ನು ಕಾರ್ಯನಿವೃತ್ತಮಾಡಿದ್ದಕ್ಕೆ ಹಳಹಳಿಸ ಹತ್ತಿದನು
ಬೀರಬಲನ ಶೋಧಕ್ಕಾಗಿ ಅನುಚರರನ್ನು ಗ್ರಾಮ ಗ್ರಾಮಕ್ಕೆ ಕಳಿಸಿದನು
ಶೋಧಮಾಡಿಕೊಂಡು ಬಂದವರಿಗೆ ಪಾರಿತೋಷಕವನ್ನು ಕೊಡುವೆನೆಂದು
ಡಂಗುರವನ್ನು ಸಾರಿಸಿದನು. ಯಾವ ಉಪಾಯದಿಂದಲೂ ಬೀರಬಲನಶೋ
ಧವು ಹತ್ತದೆ ಹೋಯಿತು ಈ ವಾರ್ತೆಯು “ಬಲ್ಕ” ಪಟ್ಟಣದ ಬಾದಶಹ
ನಿಗೆ ವಿದಿತವಾಗಲು, ಅವನು ಹಿಂದುಸ್ಥಾನದಮೇಲೆ ದಂಡೆತ್ತಿಬರುವ ಸಿದ್ಧ
ತೆಯನ್ನು ನಡೆಸಿದನು. ಮತ್ತು ತತ್ಪೂರ್ವದಲ್ಲಿ ಅಕಬರನ ಓಲಗದಲ್ಲಿದ್ದ ಉ
ಳಿದ ಮುತ್ಸದ್ದಿಗಳ ಚಾತುರ್ಯವನ್ನು ಪರೀಕ್ಷಿಸಿ ನೋಡಬೇಕೆಂಬ ಉದ್ದೇಶ
ದಿಂದ “ಇನ್ನು ಮೂರುಮಾಸಗಳೊಳಗಾಗಿ ಒಂದು ಕೊಡದತುಂಬ ಬುದ್ಧಿ
ಯನ್ನು ಕೊಟ್ಟು ಕಳುಹಿಸಬೇಕು, ಇಲ್ಲದೆಹೋದರೆ ಯುದ್ಧಕ್ಕೆ ಸಿದ್ಧರಾಗ
ಬೇಕು” ಎಂಬ ಅಭಿಪ್ರಾಯಗರ್ಭಿತವಾದ ಒಂದು ಪತ್ರಿಕೆಯನ್ನು ಬರೆದು
ಕಳುಹಿಸಿದನು. ಆ ಪತ್ರವನ್ನು ಓದಿಕೊಂಡು ಅಕಬರಬಾದಶಹನು ಚಿಂತೆ
ಗೊಳಗಾದನು. ಈ ಪ್ರಸಂಗವು ಬೀರಬಲನ ಚಾತುರ್ಯದಿಂದ ದೂರಾಗಬೇ
ಕಲ್ಲದೆ ಅನ್ಯರಿಂದ ಸಾಧ್ಯವಲ್ಲ; ಏನಾದರೂ ಹಂಚಿಕೆಮಾಡಿ ಬೀರಬಲನನ್ನು
ಗೊತ್ತುಹಚ್ಚಲಿಕ್ಕೇಬೇಕೆಂದು ನಿರ್ಣಯಿಸಿದನು. “ಪರುಷಮಣಿಯ ಸ್ಪರ್ಶ
ದಿಂದ ಲೋಹವು ಸಹಾ ಭಂಗಾರವಾಗುವದೆಂಬ” ನಾಣ್ಣುಡಿಯಂತೆ ಬೀರ
ಬಲನ ಸಂಗತಿಯಿಂದ ಬಾದಶಹನು ಸಹಾ ಚತುರನಾಗಿದ್ದನು. ಬೀರಬಲನ
ನ್ನು ಶೋಧಮಾಡಲಿಕ್ಕೆ ಒಂದು ಹಂಚಿಕೆಯನ್ನು ಹುಡುಕಿದನು, ಅವನು
ಪ್ರತಿಯೊಂದು ಗ್ರಾಮಕ್ಕೆ ಒಂದೊಂದು ಕುರಿಯನ್ನು ಕೊಟ್ಟು ಕಳುಹಿಸಿದ
ನು, ಮತ್ತು ಅದರಸಂಗಡ “ಈ ಕುರಿಯನ್ನು ತೂಕಮಾಡಿ ಕಳಿಸಿದೆ ಇದರ
ಪಾಲನ ಪೋಷಣೆಯು ಸಲುವಾಗಿ ಸರಕಾರದಿಂದ ಖರ್ಚುಕೊಡಲ್ಪಡುತ್ತದೆ
ಒಂದು ಮಾಸಪರಿಯಂತರ ಇದನ್ನು ಚೆನ್ನಾಗಿ ಆರೈಕೆಮಾಡಿ, ಅವಧಿಯು
ಪೂರ್ಣವಾದ ಮರುದಿವಸವೇ ನಮ್ಮಕಡೆಗೆ ಕಳುಹಿಸಿಕೊಡಬೇಕು, ಆಗ

ನಾವು ಪುನಃ ತೂಕವಮಾಡಿ ನೋಡುತ್ತೇವೆ ಆಗ ಇದರ ತುಲನೆಯಲ್ಲಿ ಕಿಂಚಿತ್ ನ್ಯೂನಾಧಿಕ್ಯವು ಕಂಡುಬಂದಲ್ಲಿ ಸಂರಕ್ಷಣೆಯ ಕೆಲಸವನ್ನು ಕೈಕೊಂಡವನಿಗೆ ಮರಣದ ಶಿಕ್ಷೆಯನ್ನು ವಿಧಿಸಲಾದೀತು” ಎಂಬ ಆಶಯಗರ್ಭಿತವಾದ ಪತ್ರಿಕೆಯನ್ನು ಬರೆದು ಕಳುಹಿಸಿದನು. ಯಾವತ್ತು ಗ್ರಾಮಗಳಿಗೆ ಪತ್ರಿಕೆಯೂ ಕುರಿಯೂ ಹೋದಂತೆ ಬೀರಬಲನಿದ್ದ ಗ್ರಾಮಕ್ಕಾದರೂ ಬಂದಿತು, ಈ ಸಂಗತಿಯು ಬೀರಬಲನಿಗೆ ತಿಳಿದಕೂಡಲೆ ನನ್ನನ್ನು ಶೋಧಮಾಡುವದಕ್ಕಾಗಿಯೇ ಬಾದಶಹನು ಈ ಹಂಚಿಕೆಯನ್ನು ತೆಗೆದಿದ್ದಾನೆ ಇನ್ನು ಮೇಲೆ ನಾನು ಪ್ರಕಟನಾಗುವದಕ್ಕೆ ಯಾವ ಆತಂಕವೂ ಇಲ್ಲ ಎಂದುಯೋಚಿಸಿ, ಅವನು ಗ್ರಾಮಾಧಿಕಾರಿಯ ಬಳಿಗೆ ಹೋದನು. ಆ ಸಮಯದಲ್ಲಿ ಗ್ರಾಮಾಧಿಕಾರಿಯು ತನ್ನ ಗ್ರಾಮದೊಳಗಿನ ಬುದ್ಧಿವಂತರೂ ಅನುಭವಿಕರೂ ಆದ ವೃದ್ಧರೊಡನೆ ಈ ವಿಷಯವನ್ನೇ ಪ್ರಸ್ತಾಪಿಸುತ್ತ ಕುಳಿತಿದ್ದನು ಬೀರಬಲನು ಹೋಗಿ ನಮಸ್ಕಾರಮಾಡಿ- “ಗ್ರಾಮಾಧಿಕಾರಿಗಳೇ! ನಿಮ್ಮ ಆಶ್ರಯದಿಂದ ನಾನು ಇಲ್ಲಿಯವರೆಗೆ ಸುಖದಿಂದ ಕಾಲಹರಣ ಮಾಡಿದೆನು, ನಿಮ್ಮ ಉಪಕಾರವು ನನ್ನ ಮೇಲೆಬಹಳವಾಗಿದೆ ಈಗ ಸದ್ಯಕ್ಕೆ ನಿಮ್ಮಮೇಲೆ ಸಂಕಟವು ಬಂದಿರುವದಷ್ಟೇ? ಅದರೊಳಗಿಂದ ಪಾರಾಗುವ ಹಂಚಿಕೆಯನ್ನು ನಾನು ಹೇಳುತ್ತೇನೆ, ನನ್ನ ಹೇಳಿಕೆಯಂತೆ ವರ್ತಿಸಿದರೆ ನಿಮ್ಮ ಸಂಕಟವು ನಿಶ್ಚಯವಾಗಿ ದೂರಾಗುತ್ತದೆ” ಎಂದನು ಆಗ ಗ್ರಾಮಾಧಿಕಾರಿಯು ನೀವು ಅಂಥ ಉಪಾಯವನ್ನು ತೋರಿಸಿಕೊಟ್ಟದ್ದಾದರೆ ಆಜನ್ಮ ಪರಿಯಂತರ ನಿಮ್ಮ ಗುಣಗಾನವನ್ನು ಮಾಡುವೆನು ಎಂದನು. ಈ ಮಾತಿಗೆ ಬೀರಬಲನು “ನಿಮ್ಮ ಪಶು ಸಂಗ್ರಹಾಲಯದಲ್ಲಿ ಒಂದು ಸಿಂಹವಿರುವದಷ್ಟೇ ಅದರ ಪಂಜರದಮುಂದೆ ಈ ಕುರಿಯನ್ನು ಕಟ್ಟಿಸಿಬಿಡಿರಿ; ಅಂದರೆ ಇದು ಎಷ್ಟುತಿಂದರೂ ಪುಷ್ಟವಾಗದೆ ಮೊದಲಿನಂತೆಯೇ ಇರುವದು, ಆದರೆ ಈ ಹಂಚಿಕೆಯನ್ನು ನಾನು ಹೇಳಿದನೆಂದು ಬಾದಶಹನಿಗೆ ತಿಳಿಸಬೇಡಿರಿ ಎಂದು ಹೇಳಿದನು. ಗ್ರಾಮಾಧಿಕಾರಿಯು ಬೀರಬಲನ ಹೇಳಿಕೆಯಂತೆ ವ್ಯವಸ್ಥೆಮಾಡಿದನು ಅವಧಿಯು ಪೂರ್ಣವಾಗಲು, ತುಲನೆಯನ್ನು ಮಾಡಿ ನೋಡಿದನು ಮೊದಲಿನಷ್ಟೇ ಇತ್ತು ಅದನ್ನು ಆಕೂಡಲೆ ದಿಲ್ಲಿಗೆ ಕಳುಹಿಸಿಬಿಟ್ಟನು ಇದರಂತೆಯೇ ಪ್ರತಿಯೊಂದು ಗ್ರಾಮದಿಂದ ಕುರಿಗಳುಬಂದು ತಲ್ಪಿದವು ಅವುಗಳಲ್ಲಿ ಕೆಲವು ಆನಂದದಿಂದ ಇದ್ದಕುರಿಗಳ ತೂಕವು ಹೆಚ್ಚಾಯಿತು ಪರಿಶ್ರಮಮಾಡಿದ ಕುರಿಗಳತೂಕವು ಕಡಿಮೆಯಾಯಿತು. ಆದರೆ ಬೀರಬಲನಿದ್ದ ಗ್ರಾಮದಕುರಿಯತೂಕವು ಮೊದಲಿನಷ್ಟುಆಯಿತು ಅದನ್ನುಕಂಡು ಬಾದಶಹನು

ಈ ಗ್ರಾಮದಲ್ಲಿಯೇ ಬೀರಬಲನಿದ್ದಾನೆಂದು ನಿಶ್ಚಯಿಸಿ ಆ ಗ್ರಾಮದಧಿಕಾರಿಯನ್ನು ಕರೆಯಕಳುಹಿ ಕೇಳಿದನು, ಗ್ರಾಮಾಧಿಕಾರಿಯು ತಾನು ಮಾಡಿದ ಹಂಚಿಕೆಯನ್ನು ಹೇಳಿದನು. ಬಾದಶಹನು- " ಈ ಹಂಚಿಕೆಯನ್ನು ಹೇಳಿ ಕೊಟ್ಟವರಾರು ? " ಎಂದು ಕೇಳಿದನು, ಅವನು ತನ್ನ ಹೆಸರನ್ನೇ ಹೇಳಿದನು. ಆದರೆ ಅವನಮಾತು ಬಾದಶಹನಿಗೆ ನಂಬಿಗೆಯಾಗಲಿಲ್ಲ ಪಾರಿತೋಷಕದ ಆಶೆಯನ್ನು ಹಚ್ಚಿದನು ಆಗ ಗ್ರಾಮಾಧಿಕಾರಿಯು - " ಪೃಥ್ವೀನಾಥ ! ನನ್ನಿಂದ ಏನಾದರೂ ಅಪರಾಧವು ಘಟಿಸಿದ್ದರೆ ಕ್ಷಮಿಸಬೇಕು, ಕೆಲವು ಮಾಸಗಳಿಂದ ನಮ್ಮ ಗ್ರಾಮದಲ್ಲಿ ಒಬ್ಬಮನುಷ್ಯನು ಬಂದು ವಾಸವಾಗಿದ್ದಾನೆ ಅವನ ಬುದ್ಧಿಯ ಪರಿಣಾಮವಿದು " ಎಂದು ಹೇಳಿದನು. ಬಾದಶಹನಿಗೆ ಇಷ್ಟೇ ಬೇಕಾಗಿತ್ತು, ಗ್ರಾಮಾಧಿಕಾರಿಗೆ ಉಚಿತವನ್ನಿತ್ತು ಕಳುಹಿಸಿದನು. ಆಮೇಲೆ ಗಜ, ತುರಗ, ಪಲ್ಲಕ್ಕಿ ಮೊದಲಾದ ಪರಿವಾರವನ್ನು ಕಳುಹಿ ಕರೆಯಿಸಿಕೊಂಡನು. ಬೀರಬಲನು ಆ ಕೂಡಲೇ ಬಂದುಭೆಟ್ಟನು, ಬಾದಶಹನ, ಅತ್ಯಾನಂದದಿಂದ ಅವನನ್ನು ತಬ್ಬಿಕೊಂಡು ಪೂರ್ವಪದದಲ್ಲಿ ನಿಯಮಿಸಿ, ಬಲ್ಕ, ಪಟ್ಟಣದ ಬಾದಶಹನ ಪತ್ರಾಭಿಪ್ರಾಯವನ್ನು ತಿಳಿಸಿದನು ಬೀರಬಲನು ಬಾದಶಹನಿಗೆ ಧೈರ್ಯಹೇಳಿ ಯಥಾಶಕ್ತಿ ಪ್ರಯತ್ನಮಾಡುತ್ತೇನೆಂದು ವಚನಕೊಟ್ಟನು, ಆಮೇಲೆ ತನ್ನ ಉಪವನದಲ್ಲಿ ಒಂದು ಕೂಷ್ಮಾಂಡಲತೆಯನ್ನು ಹಚ್ಚಿಸಿದನು ಅದಕ್ಕೆ ಕಾಯಿಯಾಗುವ ಕಾಲವು ಸಮೀಪಿಸಲು. ಒಂದು ಹೀಚನ್ನು ಒಂದು ಮೃತ್ತಿಕಾ ಕುಂಭದಲ್ಲಿಡಿಸಿ ಜೋಪಾನಮಾಡಹತ್ತಿದನು, ಆ ಹೀಚು ಅಲ್ಲಿಯೇ ದೊಡ್ಡದಾಗಿ ಕೊಡದೊಳಗಿಂದ ಹೊರಗೆ ಬರದಹಾಗಾಯಿತು ಆಗ ಅದರತುಂಬನ್ನು ಕೊಯಿದು, ಆ ಕೊಡದ ಬಾಯಿಗೆ ಒಂದು ವಸ್ತ್ರವನ್ನು ಕಟ್ಟಿ ಬಾದಶಹನಮುಂದೆ ತರಿಸಿಯಿಟ್ಟು " ಖಾವಂದ ಈ ಕೊಡದತುಂಬ ಬುದ್ಧಿಯು ಇರುವದು, ಇದನ್ನು ಬಲ್ಕದ ಬಾದಶಹನಿಗೆ ಕಳುಹಿಸಿಕೊಡುತ್ತೇನೆ " ಎಂದನು. ಆಗ ಬಾದಶಹನು ಆ ಬುದ್ಧಿಯು ಹ್ಯಾಗದೆ? ನನಗೆ ಸ್ವಲ್ಪತೋರಿಸು ಎಂದು ಕೇಳಿದನು. ಅದಕ್ಕೆ ಬೀರಬಲನು- ಇದರಲ್ಲಿ ಬುದ್ಧಿಯನ್ನು ತುಂಬಿ ಮೇಲೆ ವಸ್ತ್ರವನ್ನು ಕಟ್ಟಿದ್ದೇನೆ ಈಗ ಇದನ್ನು ಬಿಚ್ಚಿ ತೋರಿಸಿದರೆ ಕೆಟ್ಟುಹೋಗುವದು ಹೀಗೆಯೇ ಇರಲಿ ಎಂದು ಹೇಳಿದನು, ಬಾದಶಹನು ಇವನ ವಚನಕ್ಕೆ ಮಾನ್ಯಮಾಡಿದನು. ಆಗ ಬಲ್ಕದ ಬಾದಶಹನ ಹೆಸರಿಗೆ " ಕೊಡವನ್ನು ತುಂಬಿ ಬುದ್ಧಿಯನ್ನು ಕಳಿಸಿಕೊಟ್ಟಿದ್ದೇನೆ ಅದು ನಿಮಗೆ ತಲ್ಪಿದಕೂಡಲೆ ಆ ಕೊಡದೊಳಗಿನ ಬುದ್ಧಿಯು ಚೂರ್ಣವಾಗದಂತೆಯೂ, ಕೊಡವು ಒಡೆಯದಂತೆಯೂ ಎಚ್ಚರಿಕೆಯಿಂದ ಹೊ

ರಗೆ ತೆಗೆದುಕೊಂಡು ಬರಿದಾದಕೊಡವನ್ನು ಪುನಃ ನಮಗೆ ಕಳುಹಿಸಬೇಕು ಒಂದುವೇಳೆ ಕೊಡವನ್ನು ಒಡೆಯದೆ ಬುದ್ಧಿಯನ್ನು ಹೊರಗೆತಕೊಳ್ಳುವದು ಅಸಾಧ್ಯವಾಗಿ ಕಂಡುಬಂದರೆ ನಾಲ್ವತ್ತುಸಹಸ್ರ ರೂಪಾಯಿಗಳನ್ನು ಕಳಹಿಸಬೇಕು. ಹಣವಾಗಲೀ ಕೊಡವಾಗಲೀ ಎಂಟು ದಿವಸಗಳೊಳಗಾಗಿ ನಮಗೆ ತಲ್ಪದಿದ್ದರೆ ನಿಮ್ಮಮೇಲೆ ದಂಡೆತ್ತಿಬರುತ್ತೇವೆ, ಯುದ್ಧದ ಸಿದ್ಧತೆಯುಳ್ಳಿರಿ" ಎಂಬ ಅಭಿಪ್ರಾಯವುಳ್ಳ ಪತ್ರವನ್ನು ಬರೆದು ಬಾದಶಹನ ಮುದ್ರೆಯನ್ನು ಒತ್ತಿ ಕಳುಹಿಸಿಕೊಟ್ಟನು. ಆ ಪತ್ರವನ್ನೂ, ಕೊಡವನ್ನೂ, ತೆಗೆದುಕೊಂಡು ಒಬ್ಬ ಒಂಟೆಯಸವಾರನು ಬಲ್ಕಶಹರಕ್ಕೆ ಪ್ರಯಾಣಮಾಡಿತಲುಪಿ ಅಲ್ಲಿಯ ಬಾದಶಹನಿಗೆ ಪತ್ರವನ್ನೂ ಕೊಡವನ್ನೂ ಒಪ್ಪಿಸಿದನು. ಆ ಕೂಡಲೇ ಬಾದಶಹನು ಆ ಪತ್ರವನ್ನು ಸ್ವತಃ ತಾನೇ ಓದಿಕೊಂಡನು, ಅಭಿಪ್ರಾಯವು ತಿಳಿದಕೂಡಲೇ ಮುಖವು ಕಳೆಗುಂದಿತು, ಕೈಯು ನಡುಗಹತ್ತಿತು, ಅನುಚರರನ್ನು ಕಳುಹಿ ತನ್ನ ಅನುಯಾಯಿಗಳನ್ನು ಕರೆಯಿಸಿಕೊಂಡನು ಅವರೆಲ್ಲರೂ ಬಂದು ಕುಳಿತುಕೊಂಡಮೇಲೆ ಅಕಬರಬಾದಶಹನ ಪತ್ರವನ್ನು ತೋರಿಸಿ ಕೊಡವು ಒಡೆಯದಂತೆಯೂ, ಬುದ್ಧಿಯು ಛಿನ್ನವಿಚ್ಛಿನ್ನವಾಗದಂತೆಯೂ ಹೊರಗೆ ತೆಗೆಯಿರಿ! ಎಂದು ಆಜ್ಞಾಪಿಸಿದನು. ಯಾವತ್ತರೂ ಅನೇಕ ಹಂಚಿಕೆಗಳನ್ನು ಹಾಕಿದರೂ ಸಾಧ್ಯವಾಗಲಿಲ್ಲ ಅಂತ್ಯದಲ್ಲಿ ಮುಖ್ಯಮಂತ್ರಿಯು ಎದ್ದುನಿಂತು "ಮಹಾರಾಜ! ಅಕಬರಬಾದಶಹನ ಒಲಗದಲ್ಲಿ ಚತುರರಾದ ಮಂತ್ರಿಗಳು ಅನೇಕಜನರಿದ್ದಾರೆ, ಅವನಿಗೆ ದೈವಸಹಾಯವು ಇನ್ನೂ ಬಲವತ್ತರವಾಗಿದೆ ಅವರನ್ನು ಯುದ್ಧದಲ್ಲಿ ಪರಾಜಿತರನ್ನಾಗಿ ಮಾಡುವದು ಅಸಾಧ್ಯವು. ಇದರಿಂದ ನಮ್ಮ ಪ್ರಜೆಗಳನ್ನು ಮರಣಕ್ಕೆ ಗುರಿಮಾಡದೆ ನಾಲ್ವತ್ತುಸಹಸ್ರ ರೂಪಾಯಿಗಳನ್ನು ಕೊಟ್ಟು ಕಳುಹಿಸುವದೇ ಮೇಲಾದ ಉಪಾಯವು" ಎಂದು ತನ್ನ ಅಭಿಪ್ರಾಯವನ್ನು ಕೊಟ್ಟನು. ಸರ್ವಸಭಾಸದರೂ ಮಂತ್ರಿಯ ಅಭಿಪ್ರಾಯವು ಸರಿಯಾದದ್ದೆಂದು ಮುಕ್ತಕಂಠರಾಗಿ ಹೇಳಿದರು, ಅವರೆಲ್ಲರ ಅಭಿಪ್ರಾಯದಂತೆ ಬಲ್ಕದ ಬಾದಶಹನು ನಾಲ್ವತ್ತುಸಾವಿರ ರೂಪಾಯಿಗಳನ್ನು ಕೊಟ್ಟು ಕಳುಹಿಸಿ ಅಕಬರನ ಸ್ನೇಹವನ್ನು ಸಂಪಾದಿಸಿದನು. ... ... *

—(೧೬೪. ಜೀವವು ಅತ್ಯಂತ ಪ್ರಿಯವಾದದ್ದು.)—

ಒಂದುದಿವಸ ಬಾದಶಹನು ಓಲಗದಲ್ಲಿ ಬಂದು ಕುಳಿತುಕೊಂಡಿದ್ದನು ಎರಡುವರುಷದ ಬಾಲಕನಾದ ಸೇಲೀಮನು ಅಲ್ಲಿಯೆ ಮಗ್ಗಲಲ್ಲಿ ಆಡುತ್ತಿದ್ದನು ಆ ಹುಡುಗನ ಬಾಲಲೀಲೆಗಳನ್ನು ನೋಡುವದರಲ್ಲಿ ಬಾದಶಹನಮನಸ್ಸು

ಮಗ್ನವಾಗಿತ್ತು, ಆಗ ಬಾದಶಹನ ಮನಸ್ಸಿನಲ್ಲಿ ಅಕಸ್ಮಾತ್ತಾಗಿ, ಒಂದು ಪ್ರಶ್ನೆಯು ಉತ್ಪನ್ನಿಸಿತು " ಈ ಸಂಸಾರದಲ್ಲಿ ಉತ್ಪನ್ನವಾಗಿರುವ ಮನುಷ್ಯ, ಪಶು, ಪಕ್ಷಿ, ಕೀಡಕಾದಿಗಳಿಗೆ, ಅತ್ಯಂತ ಪ್ರಿಯವಾದ ವಸ್ತುವು ಯಾವದು ? " ಎಂದು ಆಲೋಚಿಸುತ್ತಿರಲು, ಸೇಲೀಮನ ತೊದಲ್ನುಡಿಗಳು ಶ್ರವಣಪಥವನ್ನು ಸೇರಲು, ಅತಿ ಆನಂದವಾಯಿತು. ಆ ಆನಂದದ ಭರದಲ್ಲಿ ತನ್ನ ಸಭಾಸದರನ್ನು ಕುರಿತು-" ಈ ಸಂಸಾರದಲ್ಲಿ ಎಲ್ಲಕ್ಕಿಂತಲೂ ಅಧಿಕವಾಗಿ ಪ್ರಿಯವಾಗಿರುವ ವಸ್ತುವು ಯಾವದು? " ಎಂದು ಪ್ರಶ್ನೆ ಮಾಡಿದನು. ಆ ಸಮಯದಲ್ಲಿ ಅಲ್ಲಿ ಬೀರಬಲ ನಿದ್ದಿಲ್ಲ; ಅವನಿದ್ದರೆ ಆಕೂಡಲೆ ಪ್ರಶ್ನೆಗೆ ಉತ್ತರವು ಸಿಕ್ಕೀ ಹೋಗುತ್ತಿತ್ತು ಅವನು ಇಲ್ಲದ್ದರಿಂದ ತಮ್ಮ ಚಾತುರ್ಯವನ್ನು ಪ್ರಕಟೀಕರಿಸಲಿಕ್ಕೆ ಯೋಗ್ಯಸಮಯವು ದೊರಿಯಿತೆಂದು ಹಿಗ್ಗಿದರು ಯಾಕೆಂದರೆ ಬೀರಬಲನ ಉತ್ತರದ ಹೊರತು ಬಾದಶಹನಿಗೆ ಸಮಾಧಾನವೇ ಆಗುತ್ತಿದ್ದಿಲ್ಲ; ... ... *

ಆದರೆ " ಏನೆಂದು ಉತ್ತರವನ್ನು ಕೊಡಬೇಕು? " ಎಂಬಬಗ್ಗೆ ಸಹ ಸ್ತ್ರಾವಧಿ ತರ್ಕ ವಿತರ್ಕಗಳು ನಡೆದವು ಒಂದಾದರೂ ಸಮರ್ಪಕ ವಾದಂತೆ ತಮಗೇ ಕಂಡು ಬರಲಿಲ್ಲ, ಕಡೆಯಲ್ಲಿ ಬಾದಶಹನ ಮಗ್ಗುಲಲ್ಲಿ ಕುಳಿತಿದ್ದ ಸೇಲೀಮನ ಮೇಲೆ ದೃಷ್ಟಿಬಿದ್ದು, ಬರುಳವಾಡಿ ಬಾದಶಹನ ಮನಸ್ಸಿನಲ್ಲಿ ಪುತ್ರಪ್ರೇಮವೇ ಅಧಿಕ ವಾದದ್ದೆಂದು ಇರಬಹುದು, ಎಂದು ಕಲ್ಪನೆ ಮಾಡಿಕೊಂಡು ಅದೇರೀತಿಯಾಗಿ ಹೇಳಿಬಿಟ್ಟರು ಬಾದಶಹನು ಅದನ್ನು ಸ್ವೀಕರಿಸಿದನು. ... ... *

ಕಿಂಚಿತ್ಕಾಲದ ಮೇಲೆ ಬೀರಬಲನು ಸಭಾಸ್ಥಾನವನ್ನು ಪ್ರವೇಶಿಸಿದನು. ಬಾದಶಹನು ಅವನಿಗೂ ಅದೇ ಪ್ರಶ್ನೆಯನ್ನು ಮಾಡಿದನು ಕೂಡಲೆ ಬೀರಬಲನು-" ಪೃಥ್ವೀಶ ! ಎಲ್ಲ ವಸ್ತುಗಳಿಗಿಂತ ಸ್ವಂತ ಜೀವವು ಅತ್ಯಂತ ಪ್ರಿಯವಾದದ್ದು, ಇದಕ್ಕಿಂತಲೂ ಹೆಚ್ಚಾದ ಒಡವೆಯು ಬೇರೊಂದು ಇಲ್ಲ, " ಎಂದು ಉತ್ತರಕೊಟ್ಟನು ಈ ಮಾತಿಗೆ ಬಾದಶಹನು ಪುನಃ-" ವಾಹವ್ವಾ! ಅಧಿಕಪ್ರಿಯವಾದದ್ದು ಪುತ್ರಪ್ರೇಮವು ನೀನು ಜೀವವು ಪ್ರಿಯವಾದದ್ದೆಂದು ಹೇಳುತ್ತೀ? ಅದನ್ನು ಸಿದ್ಧಮಾಡಿ ತೋರಿಸು! " ಎಂದನು ಆ ಕೂಡಲೆ ಬೀರಬಲನು-" ಈ ಮಾತಿನ ಸತ್ಯತೆಯನ್ನು ಈಗಲೇ ತೋರಿಸುವೆನು, ತಮ್ಮ ಉಪವನದಲ್ಲಿಯೆ ನೀರುತುಂಬಿದ ಹೌಜನ್ನು ತೆರವು ಮಾಡಿಸಬೇಕು, ಮತ್ತು ಮರಿಯಿದ್ದ ಒಂದು ಕಪಿಯನ್ನು ತರುವಂತೆ ಸೇವಕರಿಗೆ ಆಜ್ಞಾಪಿಸಬೇಕು, " ಎಂದು ಹೇಳಿದನು ಬಾದಶಹನ ಆಜ್ಞೆಯಮೇರೆಗೆ ಎಲ್ಲ

ವ್ವೂ ಸಿದ್ಧವಾಯಿತು ಬಾದಶಹನು ಸಭಾಸದರೊಡನೆ ಉಪವನಕ್ಕೆ ಬಂದನು ಬೀರಬಲನು ಮರಿಯುಳ್ಳ ಕಪಿಯನ್ನು ಆ ಹೌದಿನಲ್ಲಿ ಕೂಡ್ರಿಸಿ ನೀರುತುಂಬುವಂತೆ ಪರಿಚಾರಕರಿಗೆ ಹೇಳಿದನು ಕ್ಷಣ ಕ್ಷಣಕ್ಕೆ ನೀರು ಹೌದಿನಲ್ಲಿ ಮೇಲಕ್ಕೇರಹತ್ತಿತು ಕಪಿಯು ತನ್ನ ಮರಿಯನ್ನು ಹೆಗಲಮೇಲೆ ಕುಳ್ಳರಿಸಿಕೊಂಡಿತು ನೀರು ಹೆಚ್ಚಾಗುತ್ತಾಗುತ್ತ ಕುತ್ತಿಗೆಯ ವರೆಗೆ ಬರಲು ಮರಿಯನ್ನು ತಲೆಯಮೇಲಿಟ್ಟುಕೊಂಡಿತು ಆಕೂಡಲೆ ಬಾದಶಹನು-“ ಬೀರಬಲ್ಲ, ನೋಡು ! ಕಪಿಯು ತನ್ನ ಜೀವದಾಸೆಯನ್ನುಳಿದು, ಮರಿಯನ್ನು ಹ್ಯಾಗೆ ರಕ್ಷಿಸುತ್ತದೆ? ಕಂಡಿಯಾ ! ಇದರ ಮೇಲಿಂದ ಅಪತ್ಯಪ್ರೇಮವು ಅಧಿಕವಾದದ್ದೆಂದು ಸಿದ್ಧವಾಗಲಿಲ್ಲವೇ? ಎಂದು ಕೇಳಿದನು ಅದಕ್ಕೆ ಬೀರಬಲನು-“ಭೂವರ ! ಸ್ವಲ್ಪ ಅವಕಾಶ ಮಾಡಿರಿ ತನ್ನ ಪ್ರಾಣಕ್ಕೆ ಬಂದಮೇಲೆ ನಿಜವಾದ ಪ್ರೇಮವು ಯಾವದೆಂದು ತಾನೇ ನಿರ್ಣಯವಾಗುವದು. ” ಎಂದು ಹೇಳುವದರೊಳಗಾಗಿ ಆ ಕಪಿಯ ಕಣ್ಣು ಮೂಗು, ಕಿವಿ, ಬಾಯಿಗಳಲ್ಲಿ ನೀರುಹೊಕ್ಕು ಪ್ರಾಣಹೋಗುವ ಸಮಯವು ಸಮೀಪಿಸಲು ಅಪತ್ಯ ಪ್ರೇಮವನ್ನು ಬಿಟ್ಟು, ಆ ಮರಿಯನ್ನು ತೆಳಕ್ಕೆಹಾಕಿ, ಮೇಲೆ ತಾನು ನಿಂತುಕೊಂಡಿತು ಆ ಕೂಡಲೆ ಬಾದಶಹನಿಗೆ ಅದನ್ನು ತೋರಿಸಿ ನೀರನ್ನು ಹೊರಗೆ ತೆಗೆಯಲಿಕ್ಕೆ ಅಪ್ಪಣೆ ಮಾಡಿದನು, ವತ್ಸ ಸಹಿತವಾಗಿ ಕಪಿಯು ಬದುಕಿಕೊಂಡಿತು ಆಮೇಲೆ ಬೀರಬಲನು-“ ಖಾವಂದ ! ಅವಲೋಕಿಸಿದಿರಾ ! ಅಪತ್ಯಪ್ರೇಮವು ಅಧಿಕವಾಯಿತೋ? ಸ್ವಂತಪ್ರಾಣವು ಅಧಿಕವಾಯಿತೋ? ಎಲ್ಲಿಯ ತನಕ ಪ್ರಾಣಸಂಕಟವು ಇರುವದಿಲ್ಲವ್ವೋ ಅಲ್ಲಿಯ ತನಕ ಅಪತ್ಯ ಪ್ರೇಮವಿರುವದು ಯಾವಾಗ ತನ್ನ ಪ್ರಾಣಕ್ಕೇ ಮುಳುವು ಬರುವದೋ ಆಗ ಎಲ್ಲ ಪ್ರೇಮಗಳು ಬಯಲಾಗಿ ಆತ್ಮ ಸಂರಕ್ಷಣೆಯೇ ಮುಂದೊರೆಯುವದು ? ಇದರ ಉದಾಹರಣೆಯನ್ನು ತಾವು ಪ್ರತ್ಯಕ್ಷಕಂಡದ್ದಾಯಿತು! ” ಎಂದು ಹೇಳಲು, ಬಾದಶಹನೂ ಮುತ್ಸದ್ದಿಗಳೂ ಬೀರಬಲನ ಚಾತುರ್ಯಕ್ಕೆ ಒಪ್ಪಿಕೊಂಡರು

—(೧೬೫. ಅತ್ಯದ್ಭುತ ಚಮತ್ಕಾರ.)—

ಬಾದಶಹ ಬೀರಬಲ್ಲರ ನಡುವೆಯಾವಾಗಲೂ ವಿನೋದವು ನಡೆದೇ ಇರುತ್ತಿತ್ತು ಒಂದು ದಿವಸ ಬಾದಶಹನು “ ಬೀರಬಲ್ಲ ? “ ನಭೂತೋನಭವಿಷ್ಯತಿ ” ಇಂಥ ಒಂದು ಅತ್ಯದ್ಭುತ ಚಮತ್ಕಾರವನ್ನು ಮಾಡಿತೋರಿಸು ಎಂದನು ಬೀರಬಲನು ಸರಕಾರ ! ಇದು ಯಾವದೊಡ್ಡಸಂಗತಿಯು ! ತಮ್ಮ ಆಜ್ಞೆಯಾದ ಕೂಡಲೆ ತೋರಿಸುವೆನು ; ಎಂದನು ಹಾಗಾದರೆ ನಾಳೆ ಪ್ರಾತಃ ಕಾಲದಲ್ಲಿಯೇ ತೋರಿಸು, ಎಂದು ಬಾದಶಹನು ಕೇಳಿದನು ಅದ

ಕ್ಕೆ ಬೀರಬನನು ಮಹಾರಾಜ! ನಾಳೆಗೇ ತೋರಿಸುವದು ಆಗಲಿಕ್ಕಿಲ್ಲ ಒಂದು ಸವಂತ್ಸರದ ವಧಿಯು ಬೇಕು, ಮತ್ತು ದ್ರವ್ಯಸಹಾಯವೂ ಬಹಳಬೇಕಾಗುವದು, ಎಂದನು “ ಏನೂ ಚಿಂತೆಯಿಲ್ಲ, ಒಂದು ಸಂವತ್ಸರದ ಅವಧಿಯನ್ನು ಕೊಟ್ಟಿದ್ದೇನೆ ದ್ರವ್ಯವು ಎಷ್ಟು ಬೇಕಾದೀತೆಂಬದನ್ನು ತಿಳಿಸು” ಎಂದು ಬಾದಶಹನು ಕೇಳಿದನು ಎರಡು ಲಕ್ಷರೂಪಾಯಿಗಳು ಬೇಕಾಗ ಬಹುದೆಂದು ಬೀರಬಲನು ಹೇಳಿದ ಕೂಡಲೆ ಹಣವನ್ನು ಅವನ ಸ್ವಾಧೀನಪಡಿಸಿದನು ಬೀರಬಲನು ಆ ದ್ರವ್ಯದಲ್ಲಿ ಅರ್ಧದ್ರವ್ಯವನ್ನು ಬ್ರಾಹ್ಮಣರಿಗೆ ದಾನವಮಾಡಿ, ಉಳಿದ ದ್ರವ್ಯವನ್ನು ಮನೆಯಲ್ಲಿಟ್ಟುಕೊಂಡು ಕುಳಿತು ಬಿಟ್ಟನು ಕೆಲವು ಕಾಲದ ತನಕ ಬಾದಶಹನ ಅರಮನೆಯ ಕಡೆಗೇ ಹಾಯಲಿಲ್ಲ ಅದನ್ನು ಕಂಡು ಬಾದಶಹನು ಅವನನ್ನು ಕರೆಯ ಕಳುಹಿದನು. ಆಗ ಬೀರಬಲನು “ ನನಗೆ ಈಗ ಸ್ವಲ್ಪದಿವಸಗಳಿಂದ ಜಾಡ್ಯವುತ್ಪನ್ನ ವಾಗಿದೆ ಅದರಿಂದ ಬಾದಶಹರ ದರುಶನಕ್ಕೆ ಬರಲಸಮರ್ಥನಾಗಿದ್ದೇನೆ, ” ಎಂದು ಹೇಳಿ ಕಳುಹಿಸಿದನು ಆಗ ಬಾದಶಹನು ಜಾಡ್ಯದ ಪರೀಕ್ಷೆಯನ್ನು ಮಾಡಲಿಕ್ಕೂ ಔಷಧೋಪಚಾರಮಾಡಲಿಕ್ಕೂ ಪ್ರಸಿದ್ಧರಾದ ಧನ್ವಂತರಿಗಳನ್ನು ಕಳುಹಿಸಿಕೊಟ್ಟನು ಅದರಿಂದ ಏನೂ ಪ್ರಯೋಜನ ವಾಗಲಿಲ್ಲ ಬಾದಶಹನು ಸ್ವತಃನೋಡಲಿಕ್ಕೆ ಬಂದನು. ಆಗ ಬೀರಬಲನು ಅತಿತ್ರಾಣಗುಂದಿದವನಂತೆ “ ಪೃಥ್ವೀನಾಥ! ನನ್ನ ಆಯುರ್ಮರ್ಯಾದೆಯ ಕಾಲವು ಸಮೀಪಿಸಿದಂತೆ ಕಾಣುತ್ತದೆ, ಇನ್ನು ನಾನು ಬಹಳ ದಿವಸ ಬದುಕುವದಿಲ್ಲ, ” ಎಂದು ಕ್ಷೀಣಸ್ವರದಿಂದ ಮಾತಾಡಿದನು ಬಾದಶಹನು ಧೈರ್ಯ ಹೇಳಿ “ ಛೀ; ನೀನು ಎದೆಯೊಡಕೊಳ್ಳಬೇಡ! ನಿನಗೆ ಬೇಗನೆ ರೋಗವು ವಾಸಿಯಾಗುವದು ನೀನಿಲ್ಲದಿದ್ದರೆ ನನ್ನ ಅವಸ್ಥೆಯು ಏನಾಗುತ್ತದೆಂಬದು ಪರಮೇಶ್ವರನು ಬಲ್ಲನು ” ಎಂದನು ಅದಕ್ಕೆ ಬೀರಬಲನು- ಮಾನ್ಯವರ! ಈಶ್ವರೇಚ್ಛೆಗೆ ಉಪಾಯವಿಲ್ಲ; ಅವನ ಅಪ್ಪಣೆಯನ್ನು ಮೀರಲಸಾಧ್ಯವು ನನ್ನಿಂದ ಏನಾದರೂ ಅಪರಾಧಗಳುಂಟಾಗಿದ್ದರೆ ಕ್ಷಮಿಸಬೇಕು; ಮತ್ತು ನಾನು ಮರಣ ಹೊಂದಿದಮೇಲೆ ನನ್ನ ಸತಿಸುತರ ಯೋಗಕ್ಷೇಮವನ್ನು ನಡೆಯಿಸಬೇಕು, ಎಂದು ಪ್ರಾರ್ಥನೆಮಾಡಿಕೊಂಡನು ಅದನ್ನು ಕೇಳಿ ಬಾದಶಹನು ದುಃಖಿತನಾಗಿನಿನ್ನ ಅಪೇಕ್ಷೆಯನ್ನು ಪೂರ್ಣಮಾಡುತ್ತೇನೆಂದು ಹೇಳಿ ಹೊರಟು ಬಂದನು ಅದೇದಿವಸ ರಾತ್ರಿಯಲ್ಲಿ ಬೀರಬಲನು ಮರಣ ಹೊಂದಿದನೆಂಬ ವಾರ್ತೆಯು ನಗರವನ್ನೆಲ್ಲ ವ್ಯಾಪಿಸಿತು ನೆರೆಹೊರೆಯವರು ಬಂದು ಕೂಡಿದರು ಬೀರಬಲನು ತನ್ನ ಆಕಾರದಷ್ಟು ಆಕಾರವುಳ್ಳ ಒಂದು ಪಿಷ್ಟಪ್ರತಿಮೆಯನ್ನು ಮಾಡಿಟ್ಟು,

ಅಂತರ್ಗೃಹದಲ್ಲಿ ಯಾರಿಗೂ ತಿಳಿಯದಂತೆ ಕುಳಿತುಬಿಟ್ಟನು ಆಪ್ತೇಷ್ಟರು ನೆರೆದರು ಸ್ಮಶಾನ ಯಾತ್ರೆಯನ್ನು ಪೂರೈಸಿ ಬಿಟ್ಟರು ಈಸಂಗತಿಯು ಅನ್ಯರಿಗೆತಿಳಿಯಗೊಡದಂತೆ ಜಾಗರೂಕತೆಯಿಂದ ವರ್ತಿಸಿರಿ ಎಂದು ತನ್ನ ಆಪ್ತೇಷ್ಟರಿಗೆಲ್ಲ ಕಟ್ಟಪ್ಪಣೆ ಮಾಡಿಬಿಟ್ಟನು ಬೀರಬಲನ ಮರಣದ ವಾರ್ತೆಯು ಬಾದಶಹನಿಗೆ ತಿಳಿದ ಕೂಡಲೆ ಅವನು ಅತಿದುಃಖಪಟ್ಟನು ಆದರೆ ಮುಸಲ್ಮಾನ ಜಾತಿಯ ಮಂತ್ರಿಗಳಿಗೂ ಮುತ್ಸದ್ದಿಗಳಿಗೂ ಈ ವಾರ್ತೆಯನ್ನು ಕೇಳಿ ಸಂತೋಷಿತರಾದರು. ಅವರು ಸಕ್ಕರೆಯನ್ನು ಹಂಚಿದರು ಹಿಂದುಗಳಾದವರು ದುಃಖಿಸಿದರು ಎರಡು ದಿವಸ ಅನ್ನೋದಕಗಳನ್ನು ಸಹಸ್ವೀಕರಿಸಲಿಲ್ಲ; ಬಾದಶಹನು ಬೀರಬಲನ ಉತ್ತರ ಕ್ರಿಯಾದಿಗಳನ್ನು ಯಥಾಸಾಂಗವಾಗಿ ನಡೆಯಿಸುವಂತೆ ಅವನ ಮಗನಿಗೆ ಹೇಳಿ ಬಹಳದ್ರವ್ಯವನ್ನು ಕೊಟ್ಟನು ದಿವಸಗಳು ಹೆಚ್ಚು ಹೆಚ್ಚು ಹೋದಹಾಗೆ ಪ್ರಜೆಗಳಿಗೆ ವಿಸ್ಮರಣೆಯಾಗುತ್ತ ಬಂತು ಅವನ ಸ್ಥಾನದಲ್ಲಿ ಒಬ್ಬ ಯವನ ಮಂತ್ರಿಯು ನಿಯಮಿಸಲ್ಪಟ್ಟನು ಅವನ ಕಾರಭಾರಕ್ಕೆ ಪ್ರಜೆಗಳು ತ್ರಸ್ತರಾಗಿ ಬಿಟ್ಟರು ಪ್ರಜೆಗಳಸುಖದುಃಖಗಳನ್ನು ಕೇಳುವವರೇ ಇಲ್ಲವಾಗಿ ಹೋದರು ಈ ಪ್ರಕಾರ ಅಂತೂ ಇಂತೂ ದಶಮಾಸಗಳು ಕಳೆದು ಹೋದವು ಆಮೇಲೆ ಬೀರಬಲನು ತನ್ನ ಪುತ್ರನನ್ನು ಕರೆದು, ಸುಕುಮಾರನೇ ಸುತ್ತುಮುತ್ತು ಒಂದು ಹರದಾರಿಯವರೆಗೆ ಪ್ರಕಾಶಮಾನವಾಗಿ ಕಾಣುವಂಥ ಏಳು ಅಂತಸ್ತುಗಳುಳ್ಳ ಒಂದು ಮನೆಯನ್ನು ಇಲ್ಲಿಗೆ ಸಮೀಪವಾಗಿರುವ ಗುಡ್ಡದ ಮೇಲೆ ಒಂದೇ ರಾತ್ರಿಯಲ್ಲಿ ಸಿದ್ಧ ಪಡಿಸು" ಎಂದು ಹೇಳಿ ಒಂದು ಲಕ್ಷ ರೂಪಾಯಿಗಳನ್ನು ಅವನ ವಶಕ್ಕೆ ಕೊಟ್ಟನು. ಪುತ್ರನಾದರೂ ತಂದೆಯಂತೆ ಚತುರನಿದ್ದನು. ಅವನು ಎರಡು ದಿವಸಗಳ ವರೆಗೆ ಎಲ್ಲಪದಾರ್ಥಗಳನ್ನು ಗುಪ್ತರೀತಿಯಿಂದ ಸಂಗ್ರಹಿಸಿ ಇಟ್ಟುಕೊಂಡು ಒಬ್ಬ ಚತುರನಾದ ಶಿಲ್ಪಿಗನನ್ನು ಕರೆದು ಒಂದು ರಾತ್ರಿಯೊಳಗಾಗಿ ಏಳು ಉಪ್ಪರಿಗೆಗಳುಳ್ಳ ಒಂದು ಮನೆಯನ್ನು ಸಿದ್ಧಪಡಿಸಬೇಕೆಂದು ಹೇಳಿದನು ಅವನ ಅಪ್ಪಣೆಯ ಮೇರೆಗೆ ಕಾಷ್ಟನಿರ್ಮಿತ ಗೃಹವು ಸಿದ್ಧವಾಯಿತು ಅದರ ಪ್ರಕಾಶವು ದೂರದ ವರೆಗೆ ಪಸರಿಸುವಂತೆ ಹೊರಮಗ್ಗುಲಿಗೆ ದೊಡ್ಡದೊಡ್ಡ ಕನ್ನಡಿಗಳು ಹಚ್ಚಲ್ಪಟ್ಟವು ಒಳಮಗ್ಗುಲಲ್ಲಿ ಅಂದವಾದ ಬಣ್ಣವನ್ನು ಹಚ್ಚಿಸಿ ಬಿಟ್ಟಿದ್ದನು. ಈ ಪ್ರಕಾರ ಗೃಹಸಿದ್ಧತೆಯಾದ ಕೂಡಲೆ ಅದೇ ದಿವಸ ರಾತ್ರಿಯಲ್ಲಿ ಬೀರಬಲನು ಅತ್ಯುತ್ಕೃಷ್ಟವಾದ ವಸ್ತ್ರಾಲಂಕಾರಗಳಿಂದ ಮಂಡಿತನಾಗಿ ಆಮಹಲಿನಲ್ಲಿ ಹೋಗಿ ಕುಳಿತುಕೊಂಡನು ಮರುದಿವಸ ಓಲಗವು ನೆರೆಯುವ ನಿಯತ ಸಮಯ

ಕ್ಕೆ ಬೀರಬಲನು, ನೂತನ ಗೃಹದಿಂದ ಹೊರಬಿದ್ದು ಪಟ್ಟಣವನ್ನು ಪ್ರವೇಶಿಸಿದನು ಅವನ ಪರಿಚಯವು ಹತ್ತದೇ ಹೋಯಿತು ನೆರೆವ ಸಭೆಯು ನಡುವೆ ಬಾದಶಹನ ಸಮ್ಮುಖದಲ್ಲಿ ಹೋಗಿ ನಿಂತುಕೊಂಡು ಬಿಟ್ಟನು ನಿಯೋಗಿಗಳೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಅವನ ಕಡೆಗೆ ನೋಡುತ್ತಕುಳಿತುಕೊಂಡು ಬಿಟ್ಟರು ಯಾರಿಂದಲೂ ಅವನಿಗೆ ಪ್ರಶ್ನೆ ಮಾಡುವ ಸಾಹಸವಾಗಲಿಲ್ಲ ಕಡೆಗೆ ಬಾದಶಹನೇ ಸಾಹಸ ಮಾಡಿ "ತಾವು ಯಾರು! ಇಲ್ಲಿಗೆ ಯಾಕೆ ಆಗಮಿಸಿದಿರಿ? ಬಂದ ಉದ್ದೇಶವೇನು" ಎಂದು ಪ್ರಶ್ನೆ ಮಾಡಿದನು ಬಾದಶಹನು ಈ ಪ್ರಕಾರ ಪ್ರಶ್ನೆಗಳನ್ನು ಮಾಡಿದ್ದನ್ನು ಕೇಳಿ, ಬೀರಬಲನು- ಪೃಥ್ವೀನಾಥ! ನಾನು ತಮ್ಮ ಆಶ್ರಯದಲ್ಲಿದ್ದ ಬೀರಬಲನೆಂಬವನು, ಎಂದು ಉತ್ತರಕೊಟ್ಟನು ಅದನ್ನು ಕೇಳಿ ಬಾದಶಹನು ಅತ್ಯಾಶ್ಚರ್ಯಾವಿಷ್ಟವನಾಗಿ, ನೀನು ನನ್ನ ಮಂತ್ರಿಯಾಗಿದ್ದ ಬೀರಬಲನೇ! ನೀನು ಮರಣ ಹೊಂದಿದ್ದಿಲ್ಲವೇ: ಹೀಗಿದ್ದು ಪುನರಪಿ ಜೀವಂತನಾಗಿ ಬಂದದ್ದು ಹ್ಯಾಗೆ? ಎಂದು ಕೇಳಿದನು ಅದಕ್ಕೆ ಬೀರಬಲನು, ಭೂಮೀಶ! ನಾನು ಮರಣಹೊಂದಿದ್ದು ನಿಜವು ಸ್ವರ್ಗಲೋಕಕ್ಕೆ ಹೋಗಲು ದೇವೇಂದ್ರನು ನನ್ನನ್ನು ತನ್ನ ಅಮಾತ್ಯಪದವಿಯಲ್ಲಿರಿಸಿಕೊಂಡನು ನನಗೆ ಅದಕ್ಕೂ ಹೆಚ್ಚಿಗೇನು ಬೇಕಾಗಿದೆ? ನನಗೆ ಅಲ್ಲಿ ಊಟ ಉಡಿಗೆಗಳಿಗೆ ಕೊರತೆಯಿಲ್ಲ, ನೂರಾರುಜನ ಸುರಸುಂದರಿಯರು ನನ್ನ ಸೇವೆಯಲ್ಲಿ ತತ್ಪರರಾಗಿರುವರು ಅಮೃತ ಪ್ರಾಶನ ಮಾಡಲಿಕ್ಕೆ ಸಿಗುತ್ತದೆ ನನಗೆ ಆ ಲೋಕದಲ್ಲಿ ಉಂಟಾಗಿದ್ದ ಸುಖಸಂಪತ್ತಿಗಳನ್ನು ವರ್ಣಿಸುವದಸಾಧ್ಯವು ಎಂದನು ಬಾದಶಹನು ಹೀಗಿದ್ದರೆ ಅಂಥಾ ಸುಖವನ್ನು ಬಿಟ್ಟು ಇಲ್ಲಿಗೆ ಯಾಕೆಬಂದಿ? ಎಂದು ಕೇಳಿದನು ಬೀರಬಲ- ತಾವು ನನ್ನ ಪುರಾತನದ ಸ್ವಾಮಿಗಳು, ಆದ್ದರಿಂದ ನಿಮ್ಮ ಅಪ್ಪಣೆಯನ್ನು ಪಡೆದುಕೊಂಡು ಹೋಗಬೇಕೆಂದು ಬಂದಿದ್ದೇನೆ. ಮತ್ತು ತಮ್ಮ ಸಲುವಾಗಿ ಒಬ್ಬ ಅಪ್ಸರೆಯನ್ನು ಕರೆತಂದಿದ್ದೇನೆ. ಅವಳು ತನ್ನ ಅಂದವಾದ ಗೃಹದೊಡನೆ ಇಲ್ಲಿಗೆ ಸಮೀಪವಾಗಿರುವ ಗುಡ್ಡದ ಮೇಲೆ ವಾಸಮಾಡಿರುವಳು ಈಗ ತಾವು ನನ್ನೊಡನೆ ದಯಮಾಡಿಸಿದರೆ ತೋರಿಸುವೆನು ಎಂದನು.

ಬಾದಶಹನು ಇವನವಚನಗಳಿಗೆ ಮಾನ್ಯಮಾಡಿದನು. ಮತ್ತು ಆಲೋಚಿಸಿದ್ದೇನಂದರೆ ಇವನು ಮೃತಪಟ್ಟು ಸ್ವಲ್ಪಹೆಚ್ಚುಕಡಿಮೆ ಒಂದು ವರುಷವಾಗುತ್ತಬಂತು ನನ್ನ ಆಪ್ಪಣೆಯನ್ನು ಪಡೆದುಕೊಳ್ಳುವದಕ್ಕೆ ಬಂದಿರಬಹುದು ಅದರಸಲುವಾಗಿ ಅಪ್ಸರೆಯ ರೂಪದ ಕಾಣಿಕೆಯನ್ನು ಸಮರ್ಪಿಸಲು ತಂದಿರಬಹುದು ಎಂದು ನಿಶ್ಚಯಿಸಿಕೊಂಡು ಅವನವಚನದ ಸತ್ಯಾಸತ್ಯತೆಯು ನಿ

ರ್ಣಯ ಮಾಡುವದರಸಲುವಾಗಿ ನೂತನಮಂತ್ರಿಯನ್ನೂ ಅನ್ಯ ನಿಯೋಗಿಗಳನ್ನೂ ಕೊಟ್ಟುಕಳುಹಿಸಿದನು, ಬೀರಬಲನು ತುರಗಾರೂಢನಾಗಿ ಆ ಜನರಹಿಂದೆ ಹಿಂದೆ ಹೊರಟನು ಗುಡ್ಡವು ಸಮೀಪಿಸಿದಕೂಡಲೆ ಅದರ ಅಡಿಯಲ್ಲಿ ನಿಂತುಕೊಂಡು ಮಹಲಿನಕಡೆಗೆ ತೋರಿಸಿ, "ನೋಡಿರಿ; ಆ ಗೃಹದ ಏಳನೇ ಅಂತಸ್ತಿನಲ್ಲಿ ಅಪ್ಸರೆಯು ಕುಳಿತುಕೊಂಡಿದ್ದಾಳೆ ನಾವು ಇಷ್ಟುಜನಗಳು ಏಕತ್ರರಾಗಿ ಬಂದದ್ದರಿಂದ ನಮ್ಮಕಡೆಗೇ ನೋಡಹತ್ತಿದ್ದಾಳೆ, ಅವಳ ಮುಖವು ಚಂದ್ರಬಿಂಬವನ್ನು ಹೀಯಾಳಿಸುತ್ತಿರುವದು ನೋಡಿದಿರಾ ಅವಳು ನಿಮ್ಮನೇತ್ರಗಳಿಗೆ ಗೋಚರಿಸಿದಳಲ್ಲವೇ! ಒಂದುವೇಳೆ ಗೋಚರಿಸದಿದ್ದರೆ ಚನ್ನಾಗಿ ಲಕ್ಷ್ಯವಿಟ್ಟುನೋಡಿರಿ, ಯಾಕಂದರೆ ಬಾದಶಹನಿಗೆ ನಿಜಸಂಗತಿಯನ್ನು ನೀವು ಹೇಳಬೇಕಾಗುತ್ತದೆ" ಎಂದನು. ಆ ಜನಸಮೂಹದಲ್ಲಿ ಪ್ರತಿಷ್ಠಿತರಾದ ಅನೇಕಜನ ಗೃಹಸ್ಥರಿದ್ದರು ಅವರು ಮನಸ್ಸಿನಲ್ಲಿ- ಬೀರಬಲನು ಭ್ರಾಂತನಾಗಿ ಬಂದಿರಬಹುದೇನು! ಇವನ ವರ್ಣನಾನುಸಾರವಾಗಿ ಸುಂದರವೂ ಮನೋಹರವೂ ಆಗಿದ್ದ ಗೃಹವೊಂದು ದೃಗ್ಗೋಚರಿಸಹತ್ತಿದೆಯೇ ಹೊರತು ಅಪ್ಸರೆಯೆಂಬುವಳು ತೋರಲೊಲ್ಲಳು ಎಂದು ಬೀರಬಲನನ್ನು ಕುರಿತು ತಾವು ಹೇಳಿದಸಂಗತಿಯಲ್ಲಿ ಗೃಹವೊಂದೇ ಕಾಣಬರುತ್ತದೆಯೆ ಹೊರತು ಅಪ್ಸರೆಯು ಕಾಣಿಸುವದಿಲ್ಲವಲ್ಲಾ ಎಂದು ಕೇಳಿದರು. ಆಗ ಬೀರಬಲನು ಅಹುದಹುದು; ನಾನು ಹೇಳುವಾಗ ಕೆಲವು ಸಂಗತಿಗಳನ್ನು ಮರೆತುಬಿಟ್ಟೆನು. ಏನಂದರೆ ಅವಳು ಸ್ವರ್ಗಲೋಕದದೇವಳಾದ್ದರಿಂದ ಈ ಭೂಲೋಕದ ಪಾಪಿಗಳಿಗೂ, ವರ್ಣಸಂಕಲಿತವಾಗಿ ಹುಟ್ಟಿದಮನುಷ್ಯರಿಗೂ ದೃಗ್ಗೋಚರಿಸಲಾರಳು; ಆದ್ದರಿಂದ ಸತ್ವಶುದ್ಧಿಯುಳ್ಳವರು ಮುಂದಬಂದು ಚನ್ನಾಗಿ ಅವಲೋಕಿಸಿರಿ ಎಂದು ಹೇಳಿದನು. ಅವನ ಕಥನಾನುಸಾರವಾಗಿ ಅವರು ಒಳ್ಳೇ ಸೂಕ್ಷ್ಮದೃಷ್ಟಿಯಿಂದ ಅವಲೋಕಿಸಹತ್ತಿದರು ಯಾರಿಗೂ ಕಂಡುಬರಲಿಲ್ಲ; ಆದರೆ ತಮ್ಮಗೌರವಕ್ಕೆ ಕುಂದುಬರುವದೆಂಬ ಆಶಂಕೆಯಿಂದ ವಾಹವ್ವಾ; ವಾಹವ್ವಾ! ಎಂಥ ಸುಂದರಮುಖವಿರುವದು ಇಂಥ ಸುಂದರಮುಖವು ಈ ಭೂಲೋಕದಲ್ಲಿ ಗೋಚರಿಸುವದು ಅಸಂಭವವು ಎಂದು ಆಶ್ಚರ್ಯಪಡಹತ್ತಿದರು. ಬೀರಬಲನು ಆ ಜನರ ಮೂರ್ಖತೆಯನ್ನು ಕಂಡು ಮನಸ್ಸಿನಲ್ಲಿಯೇ ಹಾಸ್ಯಮಾಡುತ್ತ ಆ ಜನರನ್ನು ಕುರಿತು, ತಾವು ಅವಲೋಕಿಸಿದ ಸಂಗತಿಯನ್ನು ಬಾದಶಹನ ಸಮ್ಮುಖದಲ್ಲಿ ಹೇಳಲಿಕ್ಕೆ ಯಾವಪ್ರಕಾರದ ಆತಂಕವೂ ಇರುವದಿಲ್ಲವಲ್ಲಾ ಎಂದು ಕೇಳಿದನು. ಅದಕ್ಕೆ ಅವರು ಏನೂ ಆತಂಕವಿಲ್ಲ; ನಾವು ಪ್ರತ್ಯಕ್ಷಕಂಡದ್ದನ್ನು ಕಥನಮಾಡಲಿಕ್ಕೆ ಭಯವೇನು

ಎಂದು ಉತ್ತರಕೊಟ್ಟರು. ಬೀರಬಲನು ಅವರೆಲ್ಲರನ್ನೂ ಕರಕೊಂಡು ಮರಳಿ ರಾಜಸಭೆಗೆ ಬಂದನು ಇಷ್ಟುಸಮಯದ ತನಕ ಒಂಟಿಗನಾಗಿ ಕುಳಿತಿದ್ದ ಬಾದಶಹನು ಆ ಜನರೆಲ್ಲರೂ ಮರಳಿಬಂದದ್ದನ್ನು ಕಂಡು ನೀವೆಲ್ಲರೂ ಅಪ್ಸರೆಯನ್ನೂ ಆ ದಿವ್ಯಗೃಹವನ್ನೂ ಅವಲೋಕಿಸಿ ಬಂದಿರಷ್ಟೇ ಎಂದು ಕೇಳಿದನು ಆಗ ನೂತನಮಂತ್ರಿಯು ಖುದಾವಂದ ! ಬೀರಬಲನು ಹೇಳಿದ್ದರಕಿಂತಲೂ ಕಿಂಚಿತ್ ಅಧಿಕವೇ ಹೊರತು ನ್ಯೂನತೆಯಿಲ್ಲ ಅಹಹಾ ! ಅವಳಂಥ ಸುಂದರವದನವು ಈಭೂಲೋಕದಲ್ಲಿ ಕಾಣುವದುದುಸ್ತರವು ಎಂದು ಉತ್ತರಕೊಟ್ಟನು. ಮಂತ್ರಿಯು ಮಾಡಿದ ಪ್ರಶಂಸೆಯನ್ನು ಕೇಳಿದಮೇಲಂತೂ ಬಾದಶಹನ ಆನಂದಕ್ಕೆ ಪಾರಾವಾರವೇ ಇಲ್ಲದೆಹೋಗಿ ಬೀರಬಲ್ಲ ! ಅವಳನ್ನು ಇಲ್ಲಿಗೆ ಕರೆದುಕೊಂಡು ಬಾ ! ಎಂದು ಹೇಳಿದನು. ಅದಕ್ಕೆ ಬೀರಬಲನು ಅವಳು ಸ್ವರ್ಗಲೋಕದ ಶ್ರೇಷ್ಠಸುರ ಸುಂದರಿಯು ನನ್ನಂಥ ಪಾಮರನ ಆಜ್ಞೆಗೆ ಅವಳು ಎಂದೂ ಬರಲಾರಳು ಆದ್ದರಿಂದ ಪ್ರಭುಗಳು ತಾವೇಬಂದು ಕರೆದರೆ ಬಂದುವೇಳೆ ಬಂದರೂ ಬರಬಹುದು; ಎಂದನು. ಬಾದಶಹನು ಪ್ರೇಮಾಂಧನಾದ್ದರಿಂದ ಯಾವದನ್ನೂ ವಿಚಾರಿಸಲಿಲ್ಲ, ಅಮೌಲ್ಯಗಳಾದವಸ್ತ್ರಾಭರಣಗಳಿಂದ ಭೂಷಿತನಾದನು, ಮತ್ತು ತನ್ನ ವೈಭವವನ್ನು ತೋರಿಸಬೇಕೆಂದು ತನ್ನ ಅನುಯಾಯಿಗಳಿಗೂ ಸಿದ್ಧರಾಗಿ ಬರಬೇಕೆಂದು ಅಪ್ಪಣೆಮಾಡಿದನು, ಅರ್ಧತಾಸಿನಲ್ಲಿ ಯಾವತ್ತರೂ ಸಿದ್ಧರಾಗಿಬಂದರು ಎಲ್ಲರೂ ಆನಂದದಿಂದ ಅಪ್ಸರೆಯನ್ನು ಕರೆತರುವದಕ್ಕೆ ಹೊರಟರು. ಆ ಸಮಯದಲ್ಲಿ ದಿನಮಣಿಯು ತನ್ನ ಪ್ರಖರ ಕಿರಣಗಳಿಂದ ಯಾವತ್ತೂ ಧರಣಿಯನ್ನು ತಪಿಸುತ್ತಿದ್ದನು ಅವನ ಕಿರಣಗಳು ಆ ಕನ್ನಡಿಯಮೇಲೆ ಬಿದ್ದದ್ದರಿಂದ ಅದನ್ನು ಕಣ್ಣೆತ್ತಿ ನೋಡಲಿಕ್ಕೆಸಹಾ ಸಾಧ್ಯವಾಗಲಿಲ್ಲ, ಬಾದಶಹನು ಅತ್ಯಾಶ್ಚರ್ಯವ್ಯಪ್ತನಾದನು ಈ ಚಮತ್ಕಾರವನ್ನು ನೋಡಲಿಕ್ಕೆ ನಗರವಾಸಿಗಳೆಲ್ಲರೂ ಏಕತ್ರರಾಗಿ ಕೂಡಿ ಅಲ್ಲಿಗೆಬಂದಿದ್ದರು ಯಾವತ್ತೂ ಜನಸಮುದಾಯದೊಡನೆ ಗಿರ್ಯಾರೋಹಣಮಾಡಿ ಆ ಸ್ವರ್ಗಭುವನದ ನಿಕಟವನ್ನು ಹೊಂದಲು ಬೀರಬಲನು ಪೃಥ್ವೀನಾಥ ! ಮೇಲೆನೋಡಿರಿ ಈ ಭುವನದ ಏಳನೇ ಭಾಗದ ಮೇಲೆ 7 ವಾಕ್ಷದಲ್ಲ ಆಸುರ ರಮಣಿಯು ಮಂಡಿತಳಾಗಿದ್ದಾಳೆ ಅವಳ ಹಿಂದೆ ತಾಂಬೂಲವನ್ನು ಸಿದ್ಧಪಡಿಸಿಕೊಂಡು ಒಡತಿಯ ಮುಖವನ್ನೀಕ್ಷಿಸುತ್ತಾ ನಿಂತುಕೊಂಡವಳೇ ದಾಸಿಯು, ಅಹಹಾ ! ಆ ದಾಸಿಯ ಸೌಂದರ್ಯವನ್ನೇ ಬಣ್ಣಿಸಲಸಾಧ್ಯವು. ತಮ್ಮ ಅಂತಃಪುರದಲ್ಲಿ ಆ ದಾಸಿಯಷ್ಟು ಸುಂದರರಾಗಿದ್ದ ಒಬ್ಬ ಬೇಗಮ್ಮಳಾದರೂ ಇಲ್ಲ ಅಂದಮೇಲೆ ಆ ಅಪ್ಸರೆಯ ರೂಪಸಾದೃ

ವೃಕ್ಷವರು ದೊರೆಯುವದಂತೂ ದುರ್ಲಭವೇ ಸರಿ, ಚೆನ್ನಾಗಿ ಪರಿಕಿಸಬೇಕು ಎಂದನು. ಆಗ ಬಾದಶಹನು ಬೀರಬಲ್ಲ ? ಅವಳು ಎಲ್ಲಿದ್ದಾಳೆ ನನಗೆ ಕಾಣಿಸುವದೇ ಇಲ್ಲವಲ್ಲಾ ಎಂದನು. ಈ ಮಾತಿಗೆ ಬೀರಬಲನು ಯಾವಂದಾ ? ತಮಗೆ ಕಾಣಿಸಲೊಲ್ಲದೇ ? ಬೇಕಾದರೆ ಈ ನೂತನ ಮಂತ್ರಿಯನ್ನೂ ಅನ್ಯ ನಿಯೋಗಿಗಳನ್ನೂ ಈ ವಿಷಯದಲ್ಲಿ ವಿಚಾರಮಾಡಬೇಕು ಅವರು ಪ್ರತ್ಯಕ್ಷವಾಗಿ ಕಂಡಿದ್ದಾರೆ ಎಂದು ಹೇಳಿದನು. ಆ ಜನರಂತೂ ಈಮೊದಲೇ ಮೂರ್ಖರಾಗಿ ಹೋಗಿದ್ದರು ಆ ಕೂಡಲೇ ಅವರು ಮುಂದೆಬಂದು- ಹುಜೂರ ? ಅವಳು ಮುಂದೆಕಾಣಿಸುವ ಗವಾಕ್ಷದಲ್ಲಿಯೇ ಕುಳಿತುಕೊಂಡಿದ್ದಾಳೆ ತಮ್ಮ ನಯನಗಳಿಗೆ ಇನ್ನೂ ಗೋಚರಿಸಲಿಲ್ಲವೇ ಎಂದರು. ಬಾದಶಹನು ಪುನಹ ಮೇಲೆಕೆಳಗೆ ನೋಡಿದನು ಕಾಣಿಸಲಿಲ್ಲ; ಬಾದಶಹನು ಕಿಂಚಿತ್ ವಿಚಾರಮಗ್ನನಾದನು. ಅಷ್ಟರಲ್ಲಿ ಬೀರಬಲನು- ಪೃಥ್ವೀನಾಥ ? ನಾನು ಒಂದು ಸಂಗತಿಯನ್ನು ಹೇಳುವದಕ್ಕೆ ಮರತಿದ್ದೆನು ಅದೇನಂದರೆ:- ಸ್ವರ್ಗಲೋಕದ ವಸ್ತ್ರಾಭರಣಗಳು ಮೃತ್ಯುಲೋಕದಜನರಿಗೆ ಪೂರ್ವಜನ್ಮದ ಪುಣ್ಯದಿಂದಲೇ ದೃಗ್ಗೋಚರಿಸುವವು. ಯಾಕಂದರೆ ಈ ಮರ್ತ್ಯಲೋಕದಲ್ಲಿ ವರ್ಣಸಂಕಲಿತರಾಗಿ ಜನ್ಮತಾಳಿದವರೇ ಬಹುಜನರು, ಇಂಥಜನರಿಗೆ ಸ್ವರ್ಗೀಯ ಪದಾರ್ಥಗಳು ದೃಗ್ಗೋಚರಿಸಲಾರವು, ತಾವು ಚೆನ್ನಾಗಿಲಕ್ಷ್ಯವಿಟ್ಟು ಪರಿಶೀಲಿಸಿ ನೋಡಬೇಕು ಎಂದು ಪ್ರಾರ್ಥನೆಮಾಡಿದನು. ಆಗ ಬಾದಶಹನು ಮನಸ್ಸಿನಲ್ಲಿ ಎಲ್ಲ ಜನರಿಗೆ ಸುರಸುಂದರಿಯೂ, ಅವಳ ಪರಿಚಾರಿಕೆಯೂ ಕಾಣಿಸುತ್ತಿರಲು ನನಗೆ ಯಾಕೆ ಕಾಣಿಸಲೊಲ್ಲಳು; ನಾನೂ ವರ್ಣಸಾಂಕರ್ಯದಿಂದ ಜನಿಸಿರಬಹುದೇ ನನ್ನ ಜನ್ಮಕ್ಕೆ ಧಿಕ್ಕಾರವಿರಲಿ; ಇಷ್ಟುಕಾಲ ಈ ಸಂಗತಿಯು ಗುಪ್ತವಾಗಿತ್ತು ಈ ಅಪ್ಸರೆಯನಿಮಿತ್ಯದಿಂದ ಅದು ಬಯಲಿಗೆ ಬರುವ ಹಾಗೆ ಕಾಣುತ್ತದೆ. ಈಗ ನಾನು ಈ ಸಂಗತಿಯನ್ನು ಪ್ರಕಟೀಕರಿಸಿದರೆ ನನಗೆ ಲಘುತ್ವವುಂಟಾಗುವದು ಆದ್ದರಿಂದ ನಾನೂ ಈ ಎಲ್ಲಜನರಂತೆ ಒಪ್ಪಿಕೊಳ್ಳುವದೇ ಮೇಲು ಎಂದು ಯೋಚಿಸಹತ್ತಿದನು. ಅದನ್ನು ಕಂಡು ಬೀರಬಲನು, ನೋಡಬೇಕು ಆ ಗವಾಕ್ಷದಲ್ಲಿಯೇ ಮಂಡಿಸಿದ್ದಾಳೆ ಪರಿಶೀಲಿಸಬೇಕು ಎಂದು ಪುನಃ ನುಡಿದನು. ಆಗ ಬಾದಶಹನು ನಿರ್ವಾಹವಿಲ್ಲದೆ ಆಹುದಹುದು; ಎಂದನು. ಆಗ ಬೀರಬಲನು ಬಾದಶಹನನ್ನೂ ಅವನ ಸಂಗಡಿಗರನ್ನೂ ಆ ಮಣಿಮಯ ಭುವನದೊಳಗೆ ನಾಲ್ಕನೇ ಅಂತಸ್ತಿನಲ್ಲಿ ಕರೆದುಕೊಂಡು ಹೋಗಿ ಯೋಗ್ಯತಾನುಸಾರವಾಗಿ ಕುಳ್ಳಿರಿಸಿ, ತ್ರಯೋದಶಗುಣ ತಾಂಬೂಲವನ್ನಿತ್ತು ಸತ್ಕರಿಸಿದನು. ಎಲ್ಲ ಜನರಿಗೂ ಪೂಮಾಲೆಯನ್ನು ಹಾಕಿದನು

ಬಾದಶಹನು ಅಪ್ಸರೆಯನ್ನು ಕಂಡು ಮಾತನಾಡಿ ಬರಬೇಕೆಂದು ಆತುರಪಡ ಹತ್ತಿದನು, ದೂರದರ್ಶಿಯಾಗಿದ್ದ ಬೀರಬಲನು ಅವನ ಮನದಾತುರವನ್ನು ಕಂಡು:- "ಪೃಥ್ವೀನಾಥ! ತಾವೂ ತಮ್ಮ ಅನುಯಾಯಿಗಳೂ ಭೂಲೋಕದ ಅಸ್ಥಿರವಾದ ವಸ್ತ್ರಾಭೂಷಣಗಳಿಂದ ಮಂಡಿತರಾಗಿರುವಿರಿ, ಆದ್ದರಿಂದ ಅವುಗಳನ್ನು ತೆಗೆದಿಟ್ಟು ಸ್ವರ್ಗಲೋಕದ ವಸ್ತ್ರಾಭರಣಗಳನ್ನು ಧರಿಸಬೇಕು ನಾನು ಅವುಗಳನ್ನು ನನ್ನ ಸಂಗಡ ತೆಗೆದುಕೊಂಡು ಬಂದಿದ್ದೇನೆ ಸ್ವರ್ಗೀಯ ವಸ್ತ್ರಾಭೂಷಣಗಳು ನಾಶಹೊಂದತಕ್ಕವಲ್ಲ;" ಎಂದು ಹೇಳಿ ಬಾದಶಹನ ವಸ್ತ್ರ ಆಭರಣಗಳನ್ನು ತೆಗೆಯಿಸಿ ಇಟ್ಟು ಹೊಸಬಟ್ಟೆಗಳನ್ನು ಕೊಟ್ಟನು ಅದರಿಂದ ಬಾದಶಹನ ಲಜ್ಜಾಭಂಗವಾಗುವಂತೆ ಇದ್ದಿಲ್ಲ, ಆಮೇಲೆ ನೂತನಮಂತ್ರಿಯನ್ನು ದ್ದೇಶಿಸಿ- ಮಾನ್ಯವರ? ತಾವೂ ತಮ್ಮ ಬಟ್ಟೆಗಳನ್ನು ತೆಗೆದಿಟ್ಟು ಸ್ವರ್ಗೀಯ ಬಟ್ಟೆಗಳನ್ನು ಧಾರಣಮಾಡಿಕೊಳ್ಳಬೇಕು ಎಂದು ವಿನಯದಿಂದ ಹೇಳಿದನು ಅದನ್ನು ಕೇಳಿ ಮಂತ್ರಿಯು ತನ್ನ ಮನಸ್ಸಿನಲ್ಲಿ ಈ ಸ್ವರ್ಗೀಯ ಬಟ್ಟೆಗಳನ್ನು ಧಾರಣಮಾಡಿಕೊಳ್ಳುವದೆಂದರೆ ನಗ್ನರಾಗಬೇಕೆಂದಹಾಗಾಯಿತು ಯಾಕಂದರೆ ಬಟ್ಟೆಗಳೇ ಕಂಡುಬರುವದಿಲ್ಲ ಬಟ್ಟೆಗಳು ಎಲ್ಲಿಅವೆ ಎಂದು ಪ್ರಶ್ನೆ ಮಾಡಿದರೆನನಗೆವರ್ಣಸಂಕಲ್ಪಪ್ರಬರುತ್ತದೆ ಈಪ್ರಕಾರವಮಾನಗೇಡಿಯಾಗುವದಕ್ಕಿಂತಲೂ ನಗ್ನವಾಗುವದೆ ಮೇಲೆಂದು ಯೋಚಿಸಿ ತನ್ನ ಯಾವತ್ತು ಬಟ್ಟೆಗಳನ್ನು ತೆಗೆದು ಚೆಲ್ಲಿ ಸ್ವರ್ಗೀಯ ಬಟ್ಟೆಗಳನ್ನು ಧರಿಸಿಕೊಳ್ಳುವವನಂತೆ ನಟಿಸಿ ದಿಗಂಬರನಾಗಿ ಕುಳಿತುಕೊಂಡನು ಅವನು ಒಂದು ಕೌಪೀನವನ್ನು ಮಾತ್ರ ಧಾರಣಮಾಡಿದ್ದನು. ಮಂತ್ರಿಯು ದಿಗಂಬರನಾದದ್ದನ್ನು ಕಂಡು, ಎಲ್ಲರೂ ಹಾಸ್ಯಮಾಡಹತ್ತಿದರು ಆದರೆ ತಾವುಬಹಳನಕ್ಕರೆ ತಮ್ಮ ಪಾಲಿಗು ವರ್ಣಸಂಕರದೋಷವು ಬರುವದೆಂಬ ಭಯದಿಂದ "ತೇರಿಭೀಚುಪ, ಔರ ಮೇರಿಭೀಚುಪ" ಎಂಬ ಸಾಮತಿಯಂತೆ ಮೌನವನ್ನು ಧಾರಣಮಾಡಿದರು ನೂತನ ಮಂತ್ರಿಯು ತನ್ನ ಸ್ಥಾನದಲ್ಲಿ ಮಂಡಿತನಾದಮೇಲೆ ಉಳಿದ ಯಾವತ್ತರಿಗೂ ಸ್ವರ್ಗೀಯ ಬಟ್ಟೆಗಳನ್ನು ಕೊಟ್ಟು, ಕೌಪೀನಾ ವಶಿಷ್ಟರನ್ನಾಗಿ ಮಾಡಿ ತಾರ ತಮ್ಯಾನುಸಾರವಾಗಿ ಕುಳ್ಳಿರಿಸಿದನು ಬಾದಶಹನು ದಿಗಂಬರರಾಗಿದ್ದ ತನ್ನ ಅನುಯಾಯಿಗಳನ್ನು ಅವಲೋಕಿಸಿ, ಮನಸ್ಸಿನಲ್ಲಿ "ಸ್ವರ್ಗದ ಚರಿತ್ರವು ಅತ್ಯದ್ಭುತವಾದದ್ದು" ಎಂದು ನಿಶ್ಚಯಿಸಿಕೊಂಡು, ಬೀರಬಲನನ್ನು ಕುರಿತು-ಬೀರಬಲ್ಲ! ಯಾವತ್ತರೂ ಸ್ವರ್ಗೀಯ ಬಟ್ಟೆಗಳನ್ನು ಧಾರಣಮಾಡಿಕೊಂಡರೇ!" ಎಂದು ಕೇಳಿದನು ಅದಕ್ಕೆ ಬೀರಬಲನು - ಜೀಹಾ! ಎಲ್ಲರೂ ಸಿದ್ಧರಾಗಿದ್ದಾರೆ" ಎಂದಕೂಡಲೆ, ಅಪ್ಸರೆಯು ಸಾನ್ನಿಧ್ಯದ

ಲ್ಲಿ ಕರೆದುಕೊಂಡು ಹೋಗು! ಎಂದು ಅಪ್ಪಣೆ ಮಾಡಿದನು ಆಗ ಬೀರಬಲನು-"ಪೃಥ್ವೀನಾಥ! ಈ ಎಲ್ಲ ಜನರನ್ನು ಕರೆದುಕೊಂಡು ಹೋಗುವವಕ್ಕೆ ಅವಳಸಮ್ಮತಿಯನ್ನು ಪಡೆಯ ಬೇಕಾಗುತ್ತದೆ ತಾವು ಸ್ವಲ್ಪಹೊತ್ತು ವಿಶ್ರಮಿಸಿರಿ," ಎಂದು ಹೇಳಿ ಆ ಗೃಹದ ಮತ್ತೊಂದುಭಾಗದಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿ, ಆಮೇಲೆ ಹೊರಗೆಬಂದು, "ನರವರ! ಈಗ ತಾವೆಲ್ಲರೂ ಹೋಗಿ, ರಾತ್ರಿಯಲ್ಲಿ ದರ್ಶನಕ್ಕೆ ಬರಬೇಕೆಂದು ಅಪ್ಪಣೆ ಮಾಡಿದ್ದಾಳೆ, ಈ ಭೂಪ್ರದೇಶವು ಅವಳಿಗೆ ರಮಣೀಯವಾಗಿ ಕಂಡು ಬಂದದ್ದರಿಂದ ಕಿಂಚಿತ್ಕಾಲ ಇಲ್ಲಿಯೇ ವಾಸಮಾಡಬೇಕೆಂಬ ಆಕಾಂಕ್ಷೆ ಯುಳ್ಳವಳಾಗಿದ್ದಾಳೆ, ಇದಲ್ಲದೆ ತಮ್ಮ ಆಶ್ರಯದಲ್ಲಿಯೇ ಇರಬೇಕೆಂಬ ಅಪೇಕ್ಷೆಯನ್ನೂ ತೋರಿಸಿದಳು ಇಷ್ಟು ಪರಿವಾರದವರೊಡನೆ ಅವಳ ದರುಶನ ತೆಗೆದುಕೊಳ್ಳುವದೂ ಅನುಚಿತವು ಅವಳ ಆಜ್ಞಾ ಭಂಗಮಾಡಿದರೆ ಅವಳಿಗೆ ಕೋಪವು ಬಂದರೂ ಬರಬಹುದು ಆದ್ದರಿಂದ ಈಗ ಹೋಗುವದೇ ಯೋಗ್ಯವು!" ಎಂದು ಹೇಳಿದನು ಕಲ್ಪಿತ ಅಪ್ಸರೆಯ ದರುಶನೋತ್ಸುಕನಾಗಿ ರಾತ್ರಿಯ ಆ ಮಂತ್ರಣವನ್ನು ಸ್ವೀಕರಿಸಿ, ಎಲ್ಲರೂ ಹೊರಡಲನುವಾದರು. ಆ ಪರಿವಾರದ ಮುಂದೆ ವಸ್ತ್ರವುಳ್ಳ ಬಾದಶಹನೂ ಬೀರಬಲನೂ ಸಾಗಲು, ಕೌಪೀನಧಾರಿಗಳಾಗಿದ್ದ ಉಳಿದವರೆಲ್ಲರೂ ಬೆನ್ನುಹತ್ತಿದರು ಬೀರಬಲನು ಅವರೆಲ್ಲರನ್ನೂ ಪಟ್ಟಣದ ಯಾವತ್ತು ಭಾಗಗಳಲ್ಲಿ ತಿರುಗಿಸಿಕೊಂಡು ಸಭಾಸ್ಥಾನಕ್ಕೆ ಬಂದನು ಈ ಅತ್ಯದ್ಭುತ ಚಮತ್ಕಾರವನ್ನು ಕಂಡು ನಗರವಾಸಿಗಳೆಲ್ಲರೂ ನಗಹತ್ತಿದರು ಆಗ ಈವಸ್ತ್ರಹೀನರಾದ ಪರಿವಾರದವರು ನಗರವಾಸಿಗಳನ್ನು ಕುರಿತು-"ನೀವು ನಮ್ಮನ್ನು ನೋಡಿ ಹಾಸ್ಯಮಾಡುವಿರಾ ನೀವು ಮೂರ್ಖರು! ವರ್ಣಸಂಕಲಿತರಾಗಿರುವಿರಿ! ಬೀರಬಲನು ನಮಗೆ ಸ್ವರ್ಗೀಯ ಬಟ್ಟೆಗಳನ್ನು ಧಾರಣಮಾಡಿಸಿದ್ದಾನೆ, ಈ ವಸ್ತ್ರಗಳು ನಿಮ್ಮಂಥ ವರ್ಣಸಂಕರರಿಗೆ ಕಾಣಿಸುವದಿಲ್ಲ, ಎಂದು ಹೇಳಹತ್ತಿದರು ಈ ಉತ್ಸವವನ್ನು ನೋಡಲಿಕ್ಕೆ ಬಂದವರಲ್ಲೊಬ್ಬನು; ನಾವು ಬೀರಬಲನು ಸ್ವರ್ಗಸ್ಥನಾಗಿರುವನೆಂದು ತಿಳಿದಿದ್ದೆವು ಆ ವಾರ್ತೆಯು ಅಸತ್ಯವು ಅವನು ಸತ್ಯವಾಗಿಯೂ ಜೀವದಿಂದಿರುವನು ಇದರಲ್ಲಿ ಏನೋ ಕವಡಗಂಟಕತನವದೆ, ಎಂದನು ಆಗ ಮತ್ತೊಬ್ಬನು ಹಾ, ಹಾ! ಸ್ಮರಣೆಗೆ ಬಂತು ಈಗದಶಮಾಸಗಳ ಪೂರ್ವದಲ್ಲಿ ಬಾದಶಹನು ಒಂದು ಅತ್ಯದ್ಭುತ ಚಮತ್ಕಾರವನ್ನು ಮಾಡಿ ತೋರಿಸು; ಎಂದು ಬೀರಬಲನಿಗೆ ಆಜ್ಞಾಪಿಸಿದ್ದನು. ಇದು ಅವನಕೃತಿಯೇ ಇರಬಹುದು ಎಂದನು ಈ ಎಲ್ಲಸಂಭಾಷಣೆಗಳು ಕೌಪೀನದಾರಿಗಳ ಕಿವಿಗಳಿಗೆ ಕೇಳಿಸಿದವು ಆದರೆ ಅವರಿಗೆ ಬೀ

ರಬಲನು ಇಂಥ ವಿಶ್ವಾಸ ಘಾತಕ ನಲ್ಲವೆಂಬ ನಂಬುಗೆಯಿದ್ದುದರಿಂದ ತಮ ಗೆ ಸ್ವರ್ಗೀಯ ಬಟ್ಟೆಗಳನ್ನೇ ಕೊಟ್ಟಿದ್ದಾನೆ, ಎಂದು ತಿಳಿದುಕೊಂಡು ಸುಮ್ಮನಾದರು. ಸಭಾಸ್ಥಾನದಲ್ಲಿ ಎಲ್ಲರೂ ತಮ್ಮ ತಮ್ಮ ಆಸನಗಳನ್ನು ಸ್ವೀಕರಿಸಿದ ಮೇಲೆ ಬೀರಬಲನು ಮುಂದೆ ಬಂದು, ಅಪರಾಧವನ್ನು ಕ್ಷಮಿಸುವೆನೆಂದು ಭಾಷೆ ಕೊಟ್ಟರೆ, ಎಲ್ಲ ವೃತ್ತಾಂತವನ್ನು ಕಥನ ಮಾಡುವೆನು ಎಂದನು. ಬಾದಶಹನು "ಬೀರಬಲ್ಲ; ಹೇಳು ಹೇಳು !! ಏನು ಕಥನ ಮಾಡತಕ್ಕದ್ದದೆ ! ಎಂದು ಕೇಳಿದನು. ಬೀರಬಲನು ಪೃಥ್ವೀನಾಥ ; ಈಗ ದಶಮಾಸಗಳ ಪೂರ್ವದಲ್ಲಿ ತಾವು ನನಗೆ ಆಜ್ಞಾಪಿಸಿದ್ದನ್ನು ಸ್ಮರಣೆಗೆತಂದುಕೊಳ್ಳಬೇಕು. ಆ ಆಜ್ಞಾನುಸಾರವಾಗಿ ಈ ಚಮತ್ಕಾರವನ್ನು ತೋರಿಸಿದ್ದೇನೆ ತಾವು ಇಂಥ ನಗ್ನಸಭೆಯನ್ನು ಎಂದಾದರೂ ಅವಲೋಕನ ಮಾಡಿದ್ದೀರಾ ! ಇಂಥ ನಗ್ನಸಭೆಯು ಹಿಂದೆ ಎಂದೂ ಆಗಿರಲಿಕ್ಕಿಲ್ಲ ಮುಂದೆ ಆಗುವ ಹಾಗೆ ಇಲ್ಲ ಪೃಥ್ವೀನಾಥ ! ಮರಣಹೊಂದಿದವನು ಎಂದಾದರೂ ಮರಳಿ ಬರುವದುಂಟೇ ಸ್ವರ್ಗದಪ್ಸರೆಯು ಭೂಲೋಕಕ್ಕೆ ಬರುವ ನಿಮಿತ್ಯವೇನು : ಭೂವರ ! ತಮ್ಮ ಹೊರತು ಇಂಥ ನಗ್ನಸಭೆಯನ್ನು ಯಾರೂ ಅವಲೋಕ ಮಾಡಿರುವದಿಲ್ಲ ; ಎಂದು ಪ್ರಾರ್ಥಿಸಿದನು. ಬೀರಬಲನು ಹೇಳಿದ ವಾಕ್ಯಗಳನ್ನು ಶ್ರವಣಮಾಡಿ ಬಾದಶಹನು ಸಭಾಸದರನ್ನು ಕುರಿತು,- ಈಗ ದಶಮಾಸಗಳ ಹಿಂದೆ, ನಾನು ಬೀರಬಲನಿಗೆ ಒಂದು ಅತ್ಯದ್ಭುತ ಚಮತ್ಕಾರವನ್ನು ತೋರಿಸೆಂದು ಆಜ್ಞಾಪಿಸಿದ್ದು ನಿಜವು ! ನನ್ನ ಅಪ್ಪಣೆಯ ಮೇರೆಗೆ ಇವನು ಕಾರ್ಯವನ್ನು ಮಾಡಿ ತೋರಿಸಿದನು. ಆದ್ದರಿಂದ ಯಾರೂ ಬೀರಬಲನ ಮೇಲೆ ಕೋಪಿಸಬಾರದು ; ಆದರೆ ಇಷ್ಟುದಿನ ಈ ಪ್ರಸಂಗವನ್ನು ತರಬಾರದಾಗಿತ್ತು ! ಉಪಾಯವಿಲ್ಲ ; ಆದ್ದರಿಂದ ಯಾರೂ ಅವನಮೇಲೆ ದೋಷವನ್ನಿಡಬಾರದು ಮತ್ತು ಪೂರ್ವದಂತೆ ಸಲಿಗೆಯಿಂದ ವರ್ತನ ಮಾಡಬೇಕು" ಎಂದು ಆಜ್ಞೆಮಾಡಿದನು. ಬಾದಶಹನ ಅಪ್ಪಣೆಯಿಂದ ಹಿಂದೂ ಸಭಾಸದರೆಲ್ಲರೂ ಪ್ರಸನ್ನರಾದರು, ಆದರೆ ಮುಸಲ್ಮಾನರ ಮನಸ್ಸಿನಲ್ಲಿ ಸಮಾಧಾನವಾಗಲಿಲ್ಲ; ಅವರು ಮನಸ್ಸಿನಲ್ಲಿಯೆ ಬೀರಬಲನಮೇಲೆ ಹಲ್ಲುಕಡಿಯುತ್ತಿದ್ದರು, ಬೀರಬಲನು ಆ ಸಭಾಸದರ ವಸ್ತ್ರಗಳೆಲ್ಲವನ್ನೂ ಪೂರ್ವದಲ್ಲಿಯೇ ತರಿಸಿ ಇಟ್ಟಿದ್ದನು. ಅವರವರಿಗೆ ಅವರವರ ವಸ್ತ್ರಗಳನ್ನು ಪರಿಧಾನಮಾಡಿಕೊಳ್ಳುವದಕ್ಕೆ ಇತ್ತನು ಅವರು ತಮ್ಮತಮ್ಮ ಬಟ್ಟೆಗಳನ್ನು ಧಾರಣಮಾಡಿಕೊಂಡು ತಮ್ಮತಮ್ಮ ಗೃಹಗಳನ್ನು ಕುರಿತು ತೆರಳಿದರು.

—(೧೬೬. ಅಕಬರ ಭಾರತ.)—

ಅಕಬರ ಬಾದಶಹನು ಗ್ರಂಥಗಳನ್ನು ರಚನೆಮಾಡುವದರಲ್ಲಿಯೂ ಮಾಡಿಸುವದರಲ್ಲಿಯೂ ವಿಶೇಷ ಅನುರಾಗವುಳ್ಳವನಾಗಿದ್ದನು. ಅವನು ಅನೇಕಪ್ರಕಾರದ ಪುರಾಣೇತಿಹಾಸಗಳನ್ನು ಓದಿದ್ದನು. ಮಹಾ ಭಾರತದಲ್ಲಿಯ ಕೌರವ ಪಾಂಡವರ ಯುದ್ಧದವರ್ಣನೆಯನ್ನು ಎಷ್ಟೋ ಸಾರೆ ಓದಿದ್ದನು, ಹೀಗಿರಲು ಒಂದುದಿವಸ ಪಾಂಡವರ ಶೌರ್ಯದಪ್ರಶಂಸೆಯ ಭಾಗವು ಬರಲು ಅವನ ಮನಸ್ಸಿನಲ್ಲಿ ತನ್ನ ಪರಾಕ್ರಮದ ವರ್ಣನೆಯುಳ್ಳ “ಅಕಬರಭಾರತ” ವೆಂಬ ಗ್ರಂಥವನ್ನು ರಚನೆಮಾಡಿಸಬೇಕೆಂಬ ಅಭಿಲಾಷೆಯು ಉತ್ಪನ್ನವಾಯಿತು ಅದನ್ನು ಬೀರಬಲನಮುಂದೆ ತಿಳಿಸಿದನು. ಮತ್ತು “ಬೀರಬಲ್ಲ ಪುರಾತನಕಾಲದಲ್ಲಿ ಆಗಿಹೋದ ರಾಜರುಗಳ ಶೌರ್ಯೋದಾರ್ಯ ಗುಣಗಳಪ್ರಶಂಸಾಪರವಾದ ಎಷ್ಟೋ ಗ್ರಂಥಗಳಿರುವವು ರಾಮಚಂದ್ರನ ರಾಮಾಯಣವು ಕೃಷ್ಣನ ಮಹಿಮೆಯನ್ನು ವರ್ಣಿಸಿದ ಮಹಾಭಾಗವತವೂ, ಪಾಂಡವರ ವರ್ಣನಾಪರವಾದ ಮಹಾಭಾರತವೂ ಇರುವಂತೆ ನನ್ನ ಕೀರ್ತಿಯ ವರ್ಣನೆಯುಳ್ಳ “ಅಕಬರಭಾರತ” ವೆಂಬ ಗ್ರಂಥವನ್ನು ಮಾಡಿಸಬೇಕಾಗಿದೆ; ಈ ಭಾರತವರ್ಷದಲ್ಲಿ ಪಾಂಡವರು ರಾಜ್ಯಭಾರಮಾಡಿದಂತೆ ನಾನಾದರೂ ಅದೇ ಭಾರತವರ್ಷದ ಚಕ್ರವರ್ತಿಯಾಗಿದ್ದೇನೆ ನನ್ನ ಹೆಸರೂ ಈ ಭೂಮಂಡಲದಲ್ಲಿ ಪ್ರಖ್ಯಾತವಾಗಿದೆ” ಎಂದನು. ಆಗ ಬೀರಬಲನು ಮನಸ್ಸಿನಲ್ಲಿ ಇವನು ತನ್ನ ವರ್ಣನಾಪರವಾದ ಒಂದು ಗ್ರಂಥವನ್ನು ರಚನೆಮಾಡು ಎಂದು ಹೇಳಿದ್ದರೆ ಅದೊಂದುವಿಧವಾಗಿ ಸಯುಕ್ತಿಕವಾದದ್ದೆ ಎಂದು ಎಣಿಸಬಹುದಾಗಿತ್ತು, ಹಾಗೆಹೇಳದೆ “ಅಕಬರಭಾರತ” ಎಂಬ ಹೆಸರಿನಗ್ರಂಥವನ್ನು ರಚನೆಮಾಡಿಸಬೇಕಾಗಿಯದೆ ಎಂದು ಹೇಳುತ್ತಾನೆ; ಈ ಅಪೇಕ್ಷೆಯನ್ನು ಅವನ ಮನಸಿನೊಳಗಿಂದ ದೂರಮಾಡಬೇಕು,” ಎಂದು ನಿಶ್ಚಯಮಾಡಿಕೊಂಡು ಪೃಥ್ವೀನಾಥ! ಅಕಬರ ಭಾರತವನ್ನು ರಚಿಸುವದರಲ್ಲಿ ಅಂಥಪ್ರಯಾಸವಿಲ್ಲ ಭಾರತದಲ್ಲಿ ಒಂದೂಕಾಲು ಲಕ್ಷಶ್ಲೋಕಗಳಿದ್ದಂತೆ ಅಕಬರಭಾರತದಲ್ಲಿಸಹ ರಚಿಸಲಿಕ್ಕೆ ಅಂದೇಶವೇನೂ ಇಲ್ಲ, ಆದರೆ ಪ್ರತಿಯೊಂದು ಶ್ಲೋಕಕ್ಕೆ ಒಂದುರೂಪಾಯಿಯಂತೆ ಖರ್ಚುಬೇಕಾಗುತ್ತದೆ ಅದರಿಂದ ಅಷ್ಟು ರೂಪಾಯಿಗಳನ್ನು ನನ್ನವಶಕ್ಕೆ ಕೊಡಿಸಿದರೆ ನಾನು ಅದನ್ನು ರಚಿಸಲುದ್ಯುಕ್ತನಾಗುತ್ತೇನೆ ಅದು ಪೂರ್ತಿಯಾಗಬೇಕಾದರೆ ಷಣ್ಮಾಸಗಳು ಬೇಕಾಗಬಹುದು” ಎಂದು ಹೇಳಿದನು. ಈ ವಾಕ್ಯವನ್ನು ಕೇಳಿ ಬಾದಶಹನು ಬಹಳ ಪ್ರಸನ್ನನಾದನು ಆ ಕೂಡಲೆ ಕೋಶಾಧ್ಯಕ್ಷನನ್ನು ಕರೆಯಿಸಿ ಒಂದೂ ಕಾಲು ಲಕ್ಷ

ರೂಪಾಯಿಗಳನ್ನು ಬೀರಬಲನ ಸ್ವಾಧೀನಕ್ಕೆ ಕೊಡಬೇಕೆಂದು ಅಪ್ಪಣೆ ಮಾಡಿದನು ಆ ದ್ರವ್ಯದಿಂದ ಜಲಾಭಾವವಿದ್ದ ಸ್ಥಳಗಳಲ್ಲಿ ವಾಪೀಕೂಪತಟಾಕಾದಿಗಳನ್ನು ನಿರ್ಮಿಸಿದನು, ಅನ್ನಸತ್ರವನ್ನಿಡಿಸಿದನು ಅಕಬರಭಾರತ ಗ್ರಂಥವು ಮೂಲಿಗೆಬಿತ್ತು ಅವಧಿಯು ಪೂರ್ಣವಾಗಲಿಕ್ಕೆ ಸ್ವಲ್ಪೇ ದಿವಸಗಳು ಇರಲು, ಬೀರಬಲನು ಬಾದಶಹನ ಬಳಿಗೆಬಂದು ಭಾರಥ ಗ್ರಂಥವು, ಸಮಾಪ್ತಿಯಾಗುತ್ತ ಬಂದದೆ ಎಂದು ಹೇಳಿ, ಕಿಂಚಿತ್ಕಾಲ ಮಾತನಾಡುತ್ತ ಕುಳಿತುಕೊಂಡು ಆಮೇಲೆ ಮನೆಗೆ ಹೊರಟುಬಂದನು. ಆಮೇಲೆ ಕೆಲವುಬರಿಯುದೆ ಇದ್ದಕಾಗದಗಳನ್ನು ಗ್ರಂಥಗಳಂತೆ ಆಕಾರಮಾಡಿ ಮೇಲೊಂದು ಕೆಳಗೊಂದು ಸಣ್ಣಸಣ್ಣ ಹಲಿಗೆಗಳನ್ನಿಟ್ಟು, ಅದರಮೇಲೆ ರೇಶಿಮೆಯ ವಸ್ತ್ರವನ್ನು ಸುತ್ತಿ ರೇಶಿಮೆಯುದಾರದಿಂದ ಬಿಗಿದು ಬಾದಶಹನ ಬಳಿಗೆ ತೆಗೆದುಕೊಂಡು ಬಂದನು. ಅವನ ಕಂಕುಳಲ್ಲಿದ್ದ ಪುಸ್ತಕವನ್ನು ಕಂಡು ಬಾದಶಹನು " ಬೀರಬಲ್ಲ ಗ್ರಂಥವು ಪರಿಸಮಾಪ್ತಿಯಾಯಿತೋ " ಎಂದನು ಬೀರಬಲನು ಪೃಥ್ವೀನಾಥ ? ಸಮಾಪ್ತಿಯಾಗಿದೆ ಎಂದು ಉತ್ತರಕೊಟ್ಟು ಗಂಟನ್ನು ಬಿಚ್ಚುತ್ತ ಮತ್ತೆ " ನರವರ ? ಗ್ರಂಥವೇನೋ ಸಮಾಪ್ತವಾಗುತ್ತಬಂದದೆ ಆದರೆ ಅದರಲ್ಲಿ ಒಂದುಮಾತಿನ ವಿಷಯವಾಗಿ ಸ್ವಲ್ಪ ಅಂದೇಶ ವುಂಟಾಗಿದೆ; ಆ ಅಂದೇಶವು ಬೇಗಮ್ಮ ಸಾಹೇಬರಿಂದ ದೂರವಾಗುವದು, ಅಪ್ಪಣೆಯಾದರೆ ಅಂತಃಪುರಕ್ಕೆಹೋಗಿ ವಿಚಾರಮಾಡಿಕೊಂಡು ಬರುತ್ತೇನೆ " ಎಂದನು. ಬೀರಬಲನು ದಾರವನ್ನು ಬಿಚ್ಚಹತ್ತಿರಲು, ಬಾದಶಹನ ಮನಸ್ಸಿನಲ್ಲಿ ಸಿದ್ಧವಾಗಿದೆಯೋ ಇಲ್ಲವೋ ನೋಡಬೇಕೆಂಬ ಅಂದೇಶವೇ ಉಂಟಾಗಲಿಲ್ಲ; ಕೂಡಲೇ ಅವನು ಬೀರಬಲನನ್ನು ಕುರಿತು " ಪ್ರಥಮದಲ್ಲಿ ಹೋಗಿ ನಿನ್ನ ಅಂದೇಶನಿವೃತ್ತಿಯನ್ನು ಮಾಡಿಕೊಂಡೇ ಬಂದು ಆಮೇಲೆ ನನಗೆ ಗ್ರಂಥವನ್ನು ತೋರಿಸು " ಎಂದು ಅಪ್ಪಣೆಮಾಡಲು, ಪುನಃ ಆ ದಾರವನ್ನುಸುತ್ತಿ ಇಟ್ಟು ಅಂತಃಪುರಕ್ಕೆಹೋಗಿ " ಅಕಬರಭಾರತ " ಗ್ರಂಥದ ಆದ್ಯೋಪಾಂತ ವೃತ್ತಾಂತವನ್ನೆಲ್ಲ ಕಥನಮಾಡಿ, " ಈ ಗ್ರಂಥವು ಪೂರ್ಣವಾಗಲಿಕ್ಕೆಬಂದದೆ ಇನ್ನು ಕಿಂಚಿತ್ ಶೇಷವಿರುವದು ಅದು ನಿಮ್ಮ ಉತ್ತರದಿಂದ ಪೂರ್ಣವಾಗತಕ್ಕದ್ದದೆ, ಬಾದಶಹನ ಅಪ್ಪಣೆಯಪ್ರಕಾರವಾಗಿ ತಮ್ಮಸನ್ನಿಧಿಗೆ ಬಂದಿದ್ದೇನೆ ತಾವು ಕೃದ್ಧರಾಗುವದಿಲ್ಲವೆಂದು ಅಭಯವನ್ನಿತ್ತರೆ ಕಥನಮಾಡುವೆನು, " ಎಂದನು. ಆ ಮಾತನ್ನು ಕೇಳಿ ಬೇಗಮ್ಮಳು- " ನೀನು ಕೇಳತಕ್ಕದ್ದನ್ನು ಸಂತೋಷದಿಂದ ಕೇಳು ನಾನು ಕೋಪಗೊಳ್ಳುವದಿಲ್ಲ " ಎಂದಳು. ಅದಕ್ಕೆ ಬೀರಬಲನು " ಪಾಂಡವರ ಭಾರತದಲ್ಲಿ ಪಾಂಚಾಲಿಗೆ ಐದುಜನ ಪತಿಗಳದ್ದಂತೆ

ತಮ್ಮ ಐದುಜನ ಪತಿಗಳು ಯಾರು! ಎಂಬ ಸಂಗತಿಯನ್ನು ಅರುಹಿದರೆ, ಗ್ರಂಥವು ಪೂರ್ಣವಾಗುತ್ತದೆ" ಎಂದನು. ಆ ಕೂಡಲೇ ಬೇಗಮ್ಮಳ ನೇತ್ರಗಳು ಆರಕ್ತವರ್ಣವನ್ನು ಧರಿಸಿದವು, ನಖಶಿಖಾಂತವಾಗಿ ಉರಿದೆದ್ದು ಇಂಥ ನಿಕೃಷ್ಟ ಗ್ರಂಥವನ್ನು ರಚಿಸೆಂದು ಹೇಳಲಿಕ್ಕೆ ಬಾದಶಹನಿಗೂ ಬುದ್ಧಿ ಇಲ್ಲ ರಚಿಸುವದಕ್ಕೆ ನಿನಗೂ ಬುದ್ಧಿಯಿಲ್ಲ, ಈ ಗ್ರಂಥವನ್ನು ಅಗ್ನಿಗಾಹುತಿಕೊಟ್ಟುಬಿಡು ಎಂದು ಗರ್ಜಿಸಿ, ಒಬ್ಬ ಪರಿಚಾರಿಕೆಯನ್ನು ಕರೆದು ಈ ಗ್ರಂಥವನ್ನು ಸುಟ್ಟು ಬೂದಿಮಾಡಿಬಿಡು ಎಂದು ಹೇಳಲು, ಅವಳು ಅಪ್ಪಣೆಯಂತೇ ದಹನಮಾಡಿ ಬಿಟ್ಟಳು. ಅದನ್ನು ಕಂಡು ಬೀರಬಲನು ಮನಸ್ಸಿನಲ್ಲಿ ಹರುಷಿತನಾಗಿ ಮೇಲೆಮೇಲೆ ದುಃಖಿತನೂ ನಿರಾಶೆಯುಳ್ಳವನೂ ಆದವನಂತೆ ನಟಿಸಿ, ಬಾದಶಹನ ಬಳಿಯಲ್ಲಿ ಬಂದನು. ಬೀರಬಲನ ನಿರುತ್ಸಾಹಯುಕ್ತವಾದ ಮುಖವನ್ನು ಅವಲೋಕಿಸಿ, ಬೀರಬಲ್ಲ ಏನಾಯಿತು? ಎಂದು ಕೇಳಿದನು. ಆಗ ಬೀರಬಲನು- ಪೃಥ್ವೀನಾಥ; ಬೇಗಮ್ಮ ಸಾಹೇಬಿಯವರು ಒಳ್ಳೇಪತಿವ್ರತೆಯರಿರುವದರಿಂದ ನಾನು ಕೇಳಿದ ಪ್ರಶ್ನೆಗೆ ಕೋಪವುಳ್ಳವರಾಗಿ ಆ ಗ್ರಂಥವನ್ನು ಅಗ್ನಿಯಪಾಲು ಮಾಡಿಬಿಟ್ಟರು, ಒಂದೂ ಕಾಲು ಲಕ್ಷರೂಪಾಯಿಗಳು ನೀರಿನಲ್ಲಿ ಹೋದಂತಾದವು ಏನುಮಾಡಲಿ, ನನ್ನ ಕಡೆಗೆ ಯಾವದೋಷವೂ ಇಲ್ಲ; ದ್ರೌಪದಿಗೆ ಐದುಜನ ಪತಿಗಳಿದ್ದಂತೆ, ತಮ್ಮ ಬೇಗಮ್ಮಸಾಹೇಬಿಯವರಿಗಾದರೂ ಐದುಜನ ಪತಿಗಳನ್ನು ತೋರಿಸಿಕೊಟ್ಟು ಪುನಃ ಒಂದೂಕಾಲು ಲಕ್ಷರೂಪಾಯಿಗಳನ್ನು ಕೊಟ್ಟರೆ ಪುನರಪಿ ರಚನೆಮಾಡಲುದ್ಯುಕ್ತನಾಗುತ್ತೇನೆ ಎಂದನು. ಆಗ ಬಾದಶಹನು ಸ್ವಲ್ಪಹೊತ್ತು ಯೋಚಿಸಿ, "ಬೀರಬಲ್ಲ ಗ್ರಂಥಸಮಾಪ್ತಿಯ ಕಾಲಕ್ಕೆ ಈಪ್ರಕಾರ ವಿಘ್ನವು ಬಂದೊದಗಿದರಿಂದ ನನ್ನ ಉತ್ಸಾಹವೆಲ್ಲ ಕುಗ್ಗಿಹೋಯಿತು, ಇನ್ನು ಎರಡನೇಸಾರೆ ಬರೆಯುವ ಅವಶ್ಯಕತೆಯು ಇಲ್ಲ" ಎಂದನು. ... ... *

—(೧೬೭. ಬೀರಬಲನು ಸ್ವಧರ್ಮವನ್ನು ರಕ್ಷಿಸಿಕೊಂಡದ್ದು.)—

ಮುಸಲ್ಮಾನ ಬಾದಶಹನ ಆಳಿಕೆಯಲ್ಲಿ, ಶ್ರೇಷ್ಠವಾದ ಅಮಾತ್ಯಪದವಿಯಲ್ಲಿ ಹಿಂದೂ ಮನುಷ್ಯನಿರುವದು, ತಮಗೆ ಅವಮಾನಕರ ವಾದದ್ದೆಂದು ಬಗೆದು, ಬೀರಬಲನ ಪ್ರತಿಷ್ಠೆಯನ್ನು ಕಡಿಮೆಮಾಡಿ ಬಿಡಬೇಕೆಂದು ಮುಸಲ್ಮಾನ ಮುತ್ಸದ್ದಿಗಳೆಲ್ಲರೂ, ಅನೇಕಸಾರೆ ಪ್ರಯತ್ನಗಳನ್ನು ಮಾಡಿದ್ದರು ಮತ್ತು ಮಾಡುತ್ತಿದ್ದರು ಈ ಸಂಗತಿಯು ಬಾದಶಹನಿಗೂ ವಿದಿತವಾಗಿತ್ತು ಅದರಿಂದ ಅವನು ಯಾವಾಗಲೂ, ಬೀರಬಲನು ಹಿಂದು ವಾದ್ದರಿಂದ. ಮುಸಲ್ಮಾನರು ಅವನನ್ನು ಪರಿಪರಿಯಿಂದ ಪೀಡಿಸುವರು. ಅದರಿಂದ ಅವನಿಗೆ

ಅತಿಶಯ ಕಷ್ಟವಾಗುವದು, ಅವನ ಕಷ್ಟವನ್ನು ನನಗೆ ನೋಡಲಿಕ್ಕೆ ಅಸದಳವಾಗಿ, ಅವನನ್ನು ಬೇರೆ ಕೆಲಸಕ್ಕೆ ನಿಯಮಿಸಬೇಕೆಂದರೆ, ಆಪದವನ್ನು ಸುಯಂತ್ರವಾಗಿ ಸಾಗಿಸಿಕೊಂಡು ಹೋಗುವಂಥ ಚತುರನು, ಮುಸಲ್ಮಾನರಲ್ಲಿ ದೊರೆಯುವದು ದುಸ್ತರವು, ಈ ಬಗ್ಗೆ ನಾನು ಎಷ್ಟುಸಾರೆ ಪ್ರಯತ್ನಮಾಡಿಯೂ ನೋಡಿದ್ದೇನೆ ಅಮಾತ್ಯ ಪದವಿಯಲ್ಲಿ ಮುಸಲ್ಮಾನನನ್ನು ನಿಯಮಿಸಿಕೊಂಡರೆ, ಅವನಿಂದ ರಾಜ್ಯದಾಡಳಿತವು ಚನ್ನಾಗಿಸಾಗದೆ, ಪ್ರಜೆಗಳಿಗೆ ಅನೇಕ ದುಃಖಗಳು ಉಂಟಾಗುತ್ತವೆ, ಎಂಬದನ್ನೂ ಪರೀಕ್ಷಿಸಿನೋಡಿದ್ದೇನೆ ಇದರಿಂದ ಬೀರಬಲನನ್ನೇ ಮುಸಲ್ಮಾನ ಧರ್ಮಕ್ಕೆ ಸೇರಿಸಿಕೊಂಡುಬಿಟ್ಟರೆ, ನಾನು ಉಭಯಸಂಕಟಗಳಿಂದಲೂ ನಿವೃತ್ತನಾಗುವೆನು. ಎಂದು ಯೋಚಿಸಿಕೊಂಡು, ಪ್ರತಿದಿನ ಓಲಗದಿಂದ ಎದ್ದು ಹೋಗುವಾಗ, ಬೀರಬಲನಿಗೆ, 'ಭೋಜನಕ್ಕೆ ನಡೆ, ಎಂದು ಆಗ್ರಹ ಮಾಡಿ ಹೋಗುತ್ತಿತ್ತಿದ್ದನು. ಬೀರಬಲನು ತನ್ನ ಸಮಸೂಚಕತೆಯ ಬುದ್ಧಿಚಾತುರ್ಯದಿಂದ ಯಾವದಾದರೊಂದು ಹಂಚಿಕೆಯಿಂದ ಆ ಪ್ರಸಂಗದೊಳಗಿಂದ ಪಾರಾಗಿ ಹೋಗುತ್ತಿದ್ದನು. ಹೀಗೆ ಎಷ್ಟೋದಿವಸಗಳು ಕಳೆದುಹೋದವು ಹೀಗಿರಲು ಒಂದಾನೊಂದುದಿವಸ ಬೀರಬಲನು ಅತ್ಯವಶ್ಯಕವಾಗಿದ್ದ ಕಾರ್ಯದಲ್ಲಿ ತೊಡಗಿರಲು, ಬಾದಶಹನು-"ಬೀರಬಲ್ಲ! ನಾಳೆ ಪ್ರಾತಃಕಾಲದಲ್ಲಿ ಇಲ್ಲಿಯೇ ಭೋಜನಕ್ಕೆ ಬರಬೇಕು" ಎಂದನು ಆಗ ಬೀರಬಲನು ಕಾರ್ಯಮಗ್ನನಾಗಿದ್ದದರಿಂದ, ಬಾದಶಹನ ಮಾತಿನಕಡೆಗೆ ಲಕ್ಷ್ಯವು ಹೋಗದೆ, "ಒಳ್ಳೇದು" ಎಂದು ಉತ್ತರ ಕೊಟ್ಟುಬಿಟ್ಟನು. ಬೀರಬಲನು ಏಕವಚನಿಯಾಗಿರುವನೆಂಬ ನಂಬಿಗೆಯು, ಬಾದಶಹನಿಗೆ ಪೂರ್ಣವಾಗಿದ್ದದರಿಂದ ಆನಂದಿತನಾಗಿ ಯಾವತ್ತು ಪ್ರತಿಷ್ಠಿತ ಮುಸಲ್ಮಾನರಿಗೆ, ಈ ಸಮಾಚಾರವನ್ನು ತಿಳಿಸಿ, ನಾಳೆ ಪ್ರಾತಃಕಾಲದಲ್ಲಿ ಭೋಜನಕ್ಕೆ ಬರಬೇಕೆಂದು ಆಮಂತ್ರಣಕೊಟ್ಟುಬಿಟ್ಟನು ಬೀರಬಲನಂಥ ಉಚ್ಚಕುಲದ ಹಿಂದುವು ಮುಸಲ್ಮಾನ ಧರ್ಮವನ್ನು ಸ್ವೀಕರಿಸುವನೆಂದು, ಎಲ್ಲರೂ ಅತ್ಯಾನಂದಿತರಾದರು ಇತ್ತ ಬೀರಬಲನು ತನ್ನ ಯಾವತ್ತು ಕಾರ್ಯಗಳಿಂದ ನಿವೃತ್ತನಾಗಿ ಕುಳಿತುಕೊಂಡಮೇಲೆ, ಒಬ್ಬ ಹಿಂದೂಮನುಷ್ಯನು ಬಂದು - "ನೀವು ಬಾದಶಹನ ಆಮಂತ್ರಣವನ್ನು ಸ್ವೀಕರಿಸಿದ್ದನ್ನು ಕಂಡು ನನಗೆ ಅತಿವಿಷಾದವಾಗಿದೆ" ಎಂದು ನುಡಿದನು. ಆ ನುಡಿಯು ಕಿವಿಗೆಬಿದ್ದಕೂಡಲೇ ಬೀರಬಲನು ದಿಂಗುಬಡೆದು ಕುಳಿತುಕೊಂಡನು. ನಾಳೆಗೆ ಮುಸಲ್ಮಾನನಾಗುವ ಹೊತ್ತುಬಂತು ಏನುಮಾಡಬೇಕು ನನ್ನ ಕೀರ್ತಿಯೆಲ್ಲ ಮಣ್ಣುಪಾಲಾಗುವ ಸಮಯವು ಬಂ

ದೊರಗಿತು, ಬಾದಶಹನ ಪಂಕ್ತಿಯಲ್ಲಿ ಭೋಜನಮಾಡಿದರೆ ಜಾತಿಭ್ರಷ್ಟತೆಯುಂಟಾಗಿ ಜನರಲ್ಲಿ ಹ್ಯಾಗೆ ಮೋರೆತೋರಿಸಲಿ ಎಂಬ ಅನೇಕ ಪ್ರಕಾರದ ಚಿಂತಾತರಂಗಗಳು ಉದ್ಭವಿಸಹತ್ತಿದ್ದರಿಂದ ಬುದ್ಧಿಯು ನಷ್ಟವಾಗಿಹೋಯಿತು ಉಳಿದ ಕೆಲಸಗಳಕಡೆಗೆ ಮನವು ಹೋಗದಾಯಿತು ಮನೆಗೆಹೊರಟು ಬಂದನು, ಚಿತ್ತವು ಶಾಂತವಾಗಲಿಲ್ಲ ಊಟ ಉಡಿಗೆಗಳಕಡೆಗೆ ಲಕ್ಷ್ಯವೇ ಹೋಗಲಿಲ್ಲ, ರಾತ್ರಿಯಲ್ಲಿ ನಿದ್ರೆಯುಬರಲಿಲ್ಲ ಹೀಗಾಗಿ ಆ ದಿವಸವನ್ನೆಲ್ಲಾ ಚಿಂತೆಯಲ್ಲಿಯೇ ಕಳೆದನು.

ಮರುದಿವಸ ಬಾದಶಹನು ಅನೇಕಪ್ರಕಾರದ ಭೋಜನ ಪದಾರ್ಥಗಳನ್ನು ಸಿದ್ಧಪಡಿಸಿದನು ಆಮಂತ್ರಿತ ಜನರೆಲ್ಲರೂ ಬಂದುಕೂಡಿದರು ಆಮೇಲೆ ಬೀರಬಲನನ್ನು ಕರೆಯಕಳುಹಿದನು, ಸೇವಕನು ಬೀರಬಲನನ್ನು ಕರೆಯಲು ಆ ಕೂಡಲೆ ಬಟ್ಟೆಗಳನ್ನು ಧರಿಸಿಕೊಂಡು ಸೇವಕನ ಬೆನ್ನುಹತ್ತಿದನು, ಇನ್ನು ತನ್ನವಚನವನ್ನು ಹ್ಯಾಗೆ ಕಾಯ್ದುಕೊಳ್ಳಬೇಕೆಂಬ ಚಿಂತೆಯಲ್ಲಿ ಮಗ್ನನಾಗಿ ಒಂದೊಂದೇ ಹೆಜ್ಜೆಯನ್ನಿಕ್ಕುತ್ತ ನಾಲ್ಕೂಕಡೆಗೆ ನೋಡುತ್ತ ನಡೆದಿರಲು, ಈಶ್ವರನ ಪ್ರೇರಣೆಯಿಂದ ಒಂದು ಹಂಚಿಕೆಯು ತೋರಿತು. ಒಬ್ಬ ಸ್ವರ್ಣಕಾರನು ವರಾಹಕೇಶದ ಕುಂಚ [ಬ್ರಶ್] ದಿಂದ ಬೆಳ್ಳಿಭಂಗಾರದ ಆಭೂಷಣಗಳನ್ನು ತೊಳೆಯಹತ್ತಿದ್ದನು ಅವನಮೇಲೆ ಬೀರಬಲನ ದೃಷ್ಟಿಯು ಹೋಯಿತು, ಕೂಡಲೆ ಅವನಬಳಿಯಲ್ಲಿ ಹೋಗಿ ಆ ಕುಂಚವನ್ನು ಸ್ವೀಕರಿಸಿಕೊಂಡು ಮಾರ್ಗವನ್ನು ಹಿಡಿದನು ಬಾದಶಹನ ಅರಮನೆಯು ಸಮೀಪಿಸಿತು. ಆಮಂತ್ರಿತ ಜನರೆಲ್ಲರೂ ಇವನ ಮಾರ್ಗಪ್ರತೀಕ್ಷೆಯನ್ನು ಮಾಡುತ್ತ ಕುಳಿತುಕೊಂಡಿದ್ದರು ಬೀರಬಲನನ್ನು ಕಂಡಕೂಡಲೆ ಎಲ್ಲರೂ ಆನಂದಿತರಾದರು ಬಾದಶಹನು ಪ್ರತಿದಿವಸಕ್ಕಿಂತಲೂ, ಅಧಿಕವಾಗಿ ಉಪಚಾರಮಾಡಿ, ತನ್ನಸಮೀಪದಲ್ಲಿಯೇ ಕುಳಿತುಕೊಳ್ಳಬೇಕೆಂದು ಆಜ್ಞೆಮಾಡಿದನು ಆಗ ಬೀರಬಲನು - ‹ ಪೃಥ್ವೀನಾಥ ! ನಾನು ಭೋಜನಕ್ಕೇ ಬಂದಿರುವೆನು ಆದರೆ ನಾನು ಪ್ರತಿದಿವಸದಲ್ಲಿ ಆಚರಿಸತಕ್ಕ ಕೆಲವು ನಿಯಮಗಳುಂಟು ಅವುಗಳನ್ನು ತೀರಿಸಿಕೊಳ್ಳುವದಕ್ಕೆ ಆಜ್ಞೆಯಾಗಬೇಕು ! ” ಎಂದನು ಅದಕ್ಕೆ ಬಾದಶಹನು - “ ಏನೂಚಿಂತೆಯಿಲ್ಲ ! ನಿನ್ನ ಇಚ್ಛೆಯಂತೆಯೇ ಆಗಲಿ! , ಎಂದನು ಅದಕ್ಕೆ ಬೀರಬಲನು ಪ್ರಾರ್ಥಿಸಿಕೊಂಡದ್ದೇನಂದರೆ, - “ ಈ ಎಲ್ಲ ಭೋಜನ ಪಾತ್ರಗಳಮೇಲೆ ನಾನು ಜಲವನ್ನು ಪ್ರೋಕ್ಷಿಸುತ್ತೇನೆ ಅದರಿಂದ ಯಾರೂ ಅಪ್ರಸನ್ನರಾಗಕೂಡದು ಯಾಕೆಂದರೆ ನನ್ನನಿಯಮವೇ ಈ ಪ್ರಕಾರವಿರುವದು ,, ಎಂದನು ಈ ಮಾತಿಗೆ ಬಾದಶಹನು - ನಿನ್ನಸಾಂ

ಪ್ರದಾಯಾನುಸಾರವಾಗಿ ನಡಿಸಲಿಕ್ಕೆ ನಮದೇನೂ ಆತಂಕವಿಲ್ಲ, ಮತ್ತು ಯಾರೂ ಅಪ್ರಸನ್ನತೆಯನ್ನು ತೋರಿಸಲಾರರು, ಎಂದು ಹೇಳಿ ಎಲ್ಲರ ಮುಖವನ್ನು ನೋಡಿದನು ಅವರೆಲ್ಲರೂ ಸಮ್ಮತಿ ದರ್ಶಕವಾಗಿ ತಲೆಯನ್ನು ಅಲುಗಾಡಿಸಿದರು ಈ ಪ್ರಕಾರ ಯಾವತ್ತರನ್ನೂ ವಚನಬದ್ಧರನ್ನಾಗಿಮಾಡಿಕೊಂಡು ಒಂದು ಕೈಯಲ್ಲಿ ಜಲಪಾತ್ರೆಯನ್ನೂ ಮತ್ತೊಂದು ಕೈಯಲ್ಲಿ ವರಾಹಕೇಶದ ಗುಚ್ಛವನ್ನೂ ಹಿಡಿದುಕೊಂಡು, ಆಗುಚ್ಛವನ್ನು ಜಲದಲ್ಲಿ ಅದ್ದಿ ಅದ್ದಿ, ಪ್ರತಿಯೊಂದು ಭೋಜನಪಾತ್ರೆಯ ಮೇಲೆ ಚಿಮುಕಿಸಹತ್ತಿದನು ಹೀಗೆ ಯಾವತ್ತು ಪಾತ್ರೆಗಳು ಶುದ್ಧವಾದ ಮೇಲೆ ಬಾದಶಹನ ಪಾತ್ರೆಯ ಮೇಲೆ ಚಿಮುಕಿಸುವದಕ್ಕೆ ಬರಲು ಒಬ್ಬ ಅಮೀರನು-ಯಾ ಅಲ್ಲಾ ! ಯಾ ಖುದಾ ! ಧರ್ಮಭ್ರಷ್ಟತೆಯುಂಟಾಯಿತು. ಬೀರಬಲನು ಕೈಯಲ್ಲಿ ಹಿಡಿದದ್ದು, ಕೇಶದ ಗುಚ್ಛವು! ಎಂದು ಕೂಗಿದನು ಕೂಡಲೆ ಎಲ್ಲರೂ ಎದ್ದು ನಿಂತುಕೊಂಡರು. ಬೀರಬಲನ ಮೇಲೆ ಗಾಲಿಪ್ರದಾನದ ವರ್ಷಣವು ಆರಂಭವಾಯಿತು ಎಲ್ಲರೂ ಕೂಡಿ ಬೀರಬಲನನ್ನು ಭೋಜನಶಾಲೆಯಿಂದ ದಬ್ಬಿಬಿಟ್ಟರು ಬಾದಶಹನು ವಚನಬದ್ಧನಾದ್ದರಿಂದ ಏನನ್ನೂ ಮಾತಾಡದೆ ಸ್ವಸ್ಥ ಕುಳಿತುಕೊಂಡು ಬಿಟ್ಟನು. ಧರ್ಮತ್ಯಾಗಕ್ಕಿಂತಲೂ ಪ್ರಾಣತ್ಯಾಗವೇ, ಮೇಲಾದದ್ದೆಂಬ ಶಾಸ್ತ್ರೋಕ್ತಿಯ ಪ್ರಕಾರವಾಗಿ ತನ್ನಧರ್ಮವನ್ನುರಕ್ಷಿಸಿಕೊಂಡದ್ದರಿಂದ ಬೀರಬಲನಿಗೆ ಅತ್ಯಾನಂದವಾಯಿತು ಬೀರಬಲನು ಕ್ಷಿಪ್ರದಲ್ಲಿಯೇ ತಿರುಗಿ ಬಂದದ್ದನ್ನು ಕಂಡು ಹಿಂದೂಮತಾನುಯಾಯಿಗಳಿಗೆಲ್ಲ ಪರಮಾನಂದವಾಯಿತು ಅವನು ಮನೆಗೆಹೋಗಿ ಆನಂದದಿಂದ ಭೋಜನತೀರಿಸಿಕೊಂಡನು ಬಾದಶಹನು ಆ ಮಂತ್ರಿತ ಜನರೆಲ್ಲ ಸಮಾಧಾನಮಾಡಿ ಬೇರೆ ಪಾಕವನ್ನು ಮಾಡಿಸಿ ಭೋಜನ ಮಾಡಿಸಿದನು. ಆದಿನ ಮೊದಲ್ಗೊಂಡು ಬಾದಶಹನು ಬೀರಬಲನನ್ನು ಎಂದೂ ಊಟಕ್ಕೆ ಆಮಂತ್ರಣವನ್ನು ಕೊಡಲಿಲ್ಲ. ... ... *

—(೧೬೮. ನದಿಯು ಯಾಕೆ ರೋದಿಸುತ್ತಿರುವದು.)—

ಒಂದು ಸಾರೆ ವರ್ಷಾಕಾಲದಲ್ಲಿ ಪರ್ಜನ್ಯವು ಅತ್ಯಧಿಕವಾದ್ದರಿಂದ ಯಮುನಾಪ್ರವಾಹವು ಮೀರಿದಷ್ಟು ಪ್ರವಹಿಸ ತೊಡಗಿತು ರಾಜಪ್ರಸಾದವು ಆ ನದಿಯ ದಂಡೆಯಮೇಲೆಯೇ ಇದ್ದದ್ದರಿಂದ ಪ್ರವಾಹದ ರಭಸವು ಅತಿಶಯವಾಗಿ ಕೇಳ ಬರಹತ್ತಿತ್ತು ಅರ್ಧರಾತ್ರಿಯ ಸಮಯದಲ್ಲಿ ಆರಭಸದಿಂದ ಬಾದಶಹನಿಗೆ ನಿದ್ರೆಯು ತಿಳಿಯಿತು ಎದ್ದು ಕುಳಿತುಕೊಂಡನು ಯಮುನಾನದಿಯು ಈ ಪರಿರೋದಿಸುತ್ತಿರುವ ಕಾರಣವೇನಿದ್ದೀತು! ಎಂಬ ಪ್ರಶ್ನೆಯು

ಬಾದಶಹನ ಮನಸ್ಸಿನಲ್ಲಿ ಉತ್ಪನ್ನವಾಯಿತು ಆದರೆ ಆಪ್ರಶ್ನೆಗೆ ಉತ್ತರವನ್ನು ಕೊಡುವವರು ಯಾರು? ಬೀರಬಲನಾಗಲೀ, ಅನ್ಯಮುತ್ಸದ್ದಿಗಳಾಗಲೀ ಯಾರೂ ಇದ್ದಿಲ್ಲ ಯಾರಿಗೆ ಕೇಳಬೇಕು! ಆ ಕಾಂಕ್ಷೆಯು ಬಲವತ್ತರವಾಗ ಹತ್ತಿತು ಆಗ ಒಬ್ಬ ಗೃಹರಕ್ಷಕನನ್ನು ಕರೆದು "ಅಯ್ಯಾ! ನಾನಿರುದ್ದೀನ ನದಿಯು ಯಾಕೆ ರೋದನ ಮಾಡುತ್ತಿರುವದು! ಎಂದು ಕೇಳಿದನು ಅಪ್ರಗಲ್ಭನಾದ ನಾಸಿರುದ್ದೀನನು ಏನೆಂದು ಉತ್ತರವನ್ನು ಕೊಡಬೇಕು? ಸುಮ್ಮನೆ ನಿಂತುಕೊಂಡುಬಿಟ್ಟನು ಆಗ ಬಾದಶಹನು ಅನೇಕ ಜನಗಳಿಗೆ ಇದೇಪ್ರಶ್ನೆಯನ್ನು ಮಾಡಿದನು ಒಬ್ಬನಾದರೂ ಒಂದು ತುಟಿಯನ್ನು ಎರಡು ಮಾಡಲಿಲ್ಲ ಕಡೆಗೆ ಬಾದಶಹನು ಬೀರಬಲನನ್ನು ಕರೆದುಕೊಂಡು ಬರ್ರಿ! ಎಂದು ಆಜ್ಞಾಪಿಸಿದನು. ಆ ಸಮಯದಲ್ಲಿ ಬೀರಬಲನು ನಿದ್ರಾವಶನಾಗಿದ್ದನು. ಸೇವಕನು ಹೋಗಿ ದಾರದಲ್ಲಿ ನಿಂತುಕೊಂಡು ಕೂಗ ಹತ್ತಿದ್ದನು ಅದನ್ನು ಕೇಳಿ ಬೀರಬಲನ ಪತ್ನಿಯು ಎಚ್ಚತ್ತು ಪತಿಯನ್ನು ಎಬ್ಬಿಸಿದಳು. ಆ ಸಮಯದಲ್ಲಿ ಪರ್ಜನ್ಯವು ಮುಸಲಧಾರೆಯಾಗಿ ಸುರಿಯುತ್ತಿತ್ತು. ಹೊರಗೆ ಕಾಲಿಡಲು ಸಾಧ್ಯವಿದ್ದಿಲ್ಲ; ಸ್ವಾಮಿಯ ಆಜ್ಞಾನುವರ್ತಿಯಾಗಿ ಉಪಾಯವಿಲ್ಲದೆ ಹೊರಬಿದ್ದನು. ಮೈಮೇಲಿನ ಬಟ್ಟೆಗಳೆಲ್ಲ ನೆನೆದು ಹೋದವು ಮಾರ್ಗಪ್ರತೀಕ್ಷಿಸುತ್ತ ಕುಳಿತಿದ್ದ ಬಾದಶಹನ ಸಮ್ಮುಖದಲ್ಲಿ ಹೋಗಿ ನಿಂತುಕೊಂಡನು. ಆ ಕೂಡಲೆ ಬಾದಶಹನು- "ಬೀರಬಲ್ಲ; ಈ ದಿವಸ ನಾನು ಗಾಢವಾದ ನಿದ್ರಾಸಕ್ತನಾಗಿರಲು, ಒಮ್ಮಿಂದೊಮ್ಮೆ ಎಚ್ಚರವಾಯಿತು, ನದಿಯು ರೋದಿಸುತ್ತಿರುವ ಶಬ್ದವು ಕಿವಿಗೆ ಬಿತ್ತು ಇನ್ನೂ ಆ ಶಬ್ದವು ಕೇಳಿಸುತ್ತಿರುವದು ನೋಡು! ಈ ವಿಷಯವಾಗಿ ನಾನು ಅನೇಕರನ್ನು ಪ್ರಶ್ನೆ ಮಾಡಿದನು. ಒಬ್ಬನಿಂದಲೂ ಸಮಾಧಾನಕರವಾದ ಉತ್ತರವು ದೊರೆಯಲಿಲ್ಲ; ನಿರುಪಾಯವಾಗಿ ನಿನ್ನನ್ನು ಕರೆಯಿಸುವ ಪ್ರಸಂಗವು ಬಂತು ಒಳ್ಳೇದು: "ನದಿಯು ಈ ಪರಿಶೋಕಿಸುವದಕ್ಕೆ ಕಾರಣ ವೇನು! ,, ಎಂದು ಕೇಳಿದನು. ಆಗ ಬೀರಬಲನು ಮನಸ್ಸಿನಲ್ಲಿ "ನದಿಯ ಪ್ರವಾಹದ ರಭಸವು ಕೇಳಿಬಂದದ್ದರಿಂದ ಒಮ್ಮಿಂದೊಮ್ಮೆ ಎಚ್ಚತ್ತು ಈ ಪ್ರಶ್ನೆಯನ್ನು ಹುಡುಕಿ ತೆಗೆದಿರಬಹುದು! ಇದಕ್ಕೆ ಸರಿಯಾಗಿ ಪ್ರತ್ಯುತ್ತರವನಿತ್ತರೇ ಮನಸ್ಸು ಶಾಂತವಾಗುತ್ತದೆ; " ಎಂದು ಯೋಚಿಸಿ, ಆ ಮೇಲೆ ಮಾನ್ಯವರ? ಯಮುನೆಯು ತನ್ನ ಪಿತನಾದ ಹಿಮಾಚಲನನ್ನು ತ್ಯಾಗಮಾಡಿ, ಪತಿಯಾದ ಸಮುದ್ರ ರಾಜನೆಡೆಗೆ ಹೋಗ ಹತ್ತಿದ್ದಾಳೆ. ಅದರಿಂದ ಪಿತನ ವಿಯೋಗ ದುಃಖವನ್ನು ಸಹಿಸಲಾರದೆ ರೋದನ ಮಾಡಹತ್ತಿದ್ದಾಳೆ ಎಂದು ಉತ್ತರ

ಕೊಟ್ಟನು ಅದನ್ನು ಕೇಳಿ ಬಾದಶಹನು ಹಾಁ, ಹಾಁ! ತಿಳಿಯಿತು, ತಿಳಿಯಿತು, ಎಂದು ತಲೆದೂಗಿದನು. .. ... *

—(೧೬೯. ಏನು ನಡೆಯುತ್ತಿರುವದು !)—

ಒಂದು ದಿವಸ ಬಾದಶಹನು ರಾಜಕಾರ್ಯಗಳಿಂದ ನಿವೃತ್ತನಾಗಿ, ಆ ಮೇಲೆ " ಬೀರಬಲ್ಲ ! ಈ ಸಮಯದಲ್ಲಿ ಏನು ನಡೆಯುತ್ತಿರುವದು ! " ಎಂದು ಕೇಳಿದನು. ಆ ಕೂಡಲೆ ಬೀರಬಲನು,-ಮಹಾರಾಜ! ಸಾವುಕಾರರ ಚೌಂಗಡಿಯು ನಡೆಯುತ್ತಿರುವದು. ಯಾಕಂದರೆ ಅದಕ್ಕೆ ಅಹರ್ನಿಶ ನಿದ್ರೆಯೇ ಇಲ್ಲ. ಎಂದು ಉತ್ತರಕೊಟ್ಟನು. ಈ ಉತ್ತರದಿಂದ ಬಾದಶಹನ ಮನಸ್ಸು ಪ್ರಸನ್ನವಾಯಿತು. ... ... *

—(೧೭೦. ಕಲ್ಲು ಸಕ್ಕರೆಯು ಹರಳಿನ ರತ್ನ.)—

ಒಂದು ದಿವಸ ರಾತ್ರಿಯಲ್ಲಿ ಬೀರಬಲನು ನಗರ ಸಂಚಾರಾರ್ಥವಾಗಿ ಹೊರಟಿದ್ದನು. ಮಾರ್ಗದಲ್ಲಿ ಅವನಿಗೆ ರೋದನ ಧ್ವನಿಯು ಕೇಳಬಂತು ಬೀರಬಲನು ಆ ಗೃಹದದ್ವಾರದಲ್ಲಿ ಹೋಗಿ ನಿಂತುಕೊಂಡನು. ಶಬ್ದವು ನಿಂತು ಹೋಯಿತು ಬೀರಬಲನು ದ್ವಾರವನ್ನು ಹಸ್ತಾಂಗುಲಿಯಿಂದ ಬಾರಿಸಿದನು. ಆಗ ಅರವತ್ತು ವರುಷದ ಒಬ್ಬವೃದ್ಧನು ಬಂದು ಬಾಗಿಲವನ್ನು ತೆರೆದನು. ಗೃಹವೆಲ್ಲ ಅಂಧಕಾರಮಯವಾಗಿತ್ತು ಆ ವೃದ್ಧನಿಗೆ ಬೀರಬಲನ ಪರಿಚಯವು ಹತ್ತಲಿಲ್ಲ ಆಗ ಬೀರಬಲನು " ಇಲ್ಲಿ ಇದೇ ಈಗ ಯಾರು ರೋದಿಸುತ್ತಿದ್ದರು ! " ಎಂದು ಕೇಳಿದನು. ಈ ಮಾತಿಗೆ ವೃದ್ಧನು- ಅಯ್ಯಾ ! ಶೋಕಿಸುತ್ತಿದ್ದವನು ನಾನೇ ಆ ಸಂಗತಿಯನ್ನು ನಿನ್ನ ಮುಂದೆ ಪ್ರಕಟೀಕರಿಸುವದರಿಂದ ಪ್ರಯೋಜನವೇನು ದಯಮಾಡಿ ಆ ವಿಷಯದಲ್ಲಿ ನನಗೆ ಪ್ರಶ್ನೆ ಮಾಡಬೇಡ. ನನ್ನ ದುಃಖವೇ ನನಗೆ ಅಧಿಕವಾಗಿದೆ ? " ಎಂದನು. ಆಗ ಪುನಃ ಬೀರಬಲನು ವೃದ್ಧನೇ ! ನನ್ನಮುಂದೆ ತಿಳಿಸು ! ತಕ್ಕ ಸಹಾಯವನ್ನು ಮಾಡುತ್ತೇನೆ, ಎಂದು ಹೇಳಿದನು. ಆಗ ಆ ವೃದ್ಧನು- ಅಯ್ಯಾ ? ರಾತ್ರಿಯು ಅಂಧಕಾರವಾಗಿದೆ ಇದರಿಂದ ನಿನ್ನ ಪರಿಚಯವು ನನಗೆ ಹತ್ತಲೊಲ್ಲದು ಮನೆಯಲ್ಲಿ ತೈಲಾಭಾವವಾದ್ದರಿಂದ ದೀಪವನ್ನು ಸಹ ಹಚ್ಚಲಿಕ್ಕೆ ಬರುವ ಹಾಗಿಲ್ಲ ಆದ್ದರಿಂದ ನಿನ್ನ ನಾಮಧೇಯವನ್ನಾದರೂ ಹೇಳಿದರೆ, ನೆಟ್ಟಗಾಗುವದು ಎಂದನು ಆಗ ಬೀರಬಲನು ರಾತ್ರಿಯು ಅರ್ಧ ಕಳೆದು ಹೋಗಿದೆ ನಿದ್ರೆಯು ನನ್ನನ್ನು ಬಹಳವಾಗಿ ಪೀಡಿಸಹತ್ತಿದೆ ಆದ್ದರಿಂದ ಪ್ರಾತಃಕಾಲದಲ್ಲಿ ಈ ವೃದ್ಧನನ್ನು ಕರೆಯಿಸಿಕೊಂಡು ವಿಚಾರಮಾಡಿದರಾಯಿತು ! ಎಂದು ಯೋಚಿಸಿ " ವೃದ್ಧನೇ ! ಈಗ ರಾತ್ರಿಯು ಬಹಳವಾಗಿದೆ ನೀನುಶೋ

ಕಿಸುವದನ್ನು ಬಿಟ್ಟು ಸ್ವಸ್ಥವಾಗಿ ನಿದ್ರೆಮಾಡು! ನಾಳೆ ದುದಯುದಲ್ಲಿ ಮಂತ್ರಿ ಪ್ರಸಾದದ ಹತ್ತರಬಂದು ನನ್ನನ್ನು ವಿಚಾರಿಸು ನನ್ನ ಹೆಸರು ಬೀರಬಲನು ಎಂದುಹೇಳಿ ಹೊರಟುಬಂದನುವೃದ್ಧನು ಆ ಮಾತುಗಳನ್ನು ಕೇಳಿ ದಿಂಗುಬಡೆಸುನಿಂತನು ಮರುದಿವಸ ವೃದ್ಧನು ಬೀರಬಲನಗೃಹಕ್ಕೆಬಂದನು ಆಗ ಬೀರಬಲನು ಅವನನ್ನು ಕರೆದುಕೊಂಡು ಹೋಗಿ, ನಿನ್ನೆ ರಾತ್ರಿ ಶೋಕಿಸುತ್ತಿದ್ದ ಕಾರಣವೇನೆಂದು ಕೇಳಿದನು. ಆಗ ಆ ವೃದ್ಧನು ಮಂತ್ರಿವರನೇ! ನಿನ್ನೆ ರಾತ್ರಿಯಲ್ಲಿ ತಮ್ಮ ಪರಿಚಯುವು ನನಗೆ ಹತ್ತದೆ ಹೋಯಿತು ಆ ಕಾಲವಲ್ಲಿ ನನ್ನ ಮುಖದಿಂದ ಏನಾದರೂ ಅನುಚಿತ ಭಾಷಣಗಳು ಹೊರಟದ್ದರೆ ಕ್ಷಮಿಸಬೇಕು ಎಂದನು. ಅದಕ್ಕೆ ಬೀರಬಲನು,- "ಅಯ್ಯಾ! ಇದರಲ್ಲಿ ಕ್ಷಮೆಯನ್ನು ಯೋಚಿಸುವ ಕಾರಣವೇ ಇಲ್ಲ ಅಂಧಕಾರವಿದ್ದದರಿಂದ ನನ್ನ ಪರಿಚಯುವು ಸಿಗದೇ ಹೋದದ್ದು, ನಿನ್ನ ಅಪರಾಧವಲ್ಲ; ಒಳ್ಳೇದು, ನೀನು ಶೋಕಿಸುತ್ತಿದ್ದ ಕಾರಣವೇನು! ಎಂದು ಕೇಳಿದನು ಈ ಮಾತಿಗೆ ಆ ವೃದ್ಧನು "ದಿವಾನ ಸಾಹೇಬ! ನಾನೊಬ್ಬ ಕೈಕೆಲಸದವನು ನನ್ನನ್ನು ಪಾಲನ ಪೋಷಣ ಮಾಡುವಂಥ ಒಬ್ಬ ಮಗನು ಮೃತ್ಯುವಿನ ಬಾಯಿಗೆ ತುತ್ತಾಗಿ ಈಗ ಒಂದೆರಡು ತಿಂಗಳಾಗುತ್ತ ಬಂತು. ವೃದ್ಧನಾದ ನನ್ನಿಂದ ಪರಿಶ್ರಮ ಮಾಡುವದು ಅಸಾಧ್ಯವಾದ್ದರಿಂದ ಹೊಟ್ಟೆಗಿಲ್ಲದೆ ಬಳಲ ಹತ್ತಿದ್ದೇನೆ. ಈಗ ನಾಲ್ಕಾರು ದಿವಸಗಳಿಂದಂತೂ ಅರಹೊಟ್ಟೆಯಿಂದ ಕಾಲಹರಣಮಾಡಿದ್ದೇನೆ. ಈ ಎರಡು ದಿವಸಗಳಿಂದಂತೂ ಆಹಾರದ ಮುಖವನ್ನೇ ನೋಡಿಲ್ಲ ನಾಳೆಗೆ ಮೂರನೇ ಉಪವಾಸವು. ಈ ಪ್ರಕಾರನನ್ನದು ಸ್ಥಿತಿಯಿರು ದು. ನಿನ್ನಿನ ದಿವಸ ಕ್ಷುದ್ಬಾಧೆಯು ಅತಿಶಯುವಾದ್ದರಿಂದ ಸಹನ ಮಾಡಲಸಮರ್ಥನಾಗಿ ರೋದಿಸಹತ್ತಿದ್ದೆನು" ಎಂದು ಹೇಳಲು ಬೀರಬಲನು ದಯಾರ್ದ್ರಹೃದಯನಾಗಿ ಅವನಿಗೆ ಆಹಾರಸಾಮಗ್ರಿಯನ್ನು ತಂದುಕೊಟ್ಟನು ಆಮೇಲೆ ವೃದ್ಧನೇ? ನಿನಗೆ ಇನ್ನು ಹದಿನೈದು ದಿವಸ ಸಾಕಾಗುವಷ್ಟು ದ್ರವ್ಯವನ್ನು ಕೊಡುತ್ತೇನೆ ಆ ಅವಧಿಯೊಳಗಾಗಿ ನೀನು ಒಂದು ಕಲ್ಲುಸಕ್ಕರೆಯಹರಳನ್ನು ತೆಗೆದುಕೊಂಡು ನಿನ್ನ ಕುಶಲತನದಿಂದ ಅದನ್ನು ರತ್ನದಂತೆಮಾಡು ಚನ್ನಾಗಿ ಪರೀಕ್ಷೆಮಾಡದ ಹೊರತು, ಯಾರಿಗೂ ತಿಳಿಯಬಾರದು? ಹೀಗೆ ಸಿದ್ಧಮಾಡಿಕೊಂಡು ಹದಿನಾಲ್ಕನೇ ದಿವಸ ನನ್ನ ಬಳಿಗೆ ಬಾ" ಎಂದುಹೇಳಿ ಕಳುಹಿಕೊಟ್ಟನು. ಆ ವೃದ್ಧನು ಬಹು ಸಂತೋಷಿತನಾಗಿ ಮನೆಗೆ ಬಂದು ತನ್ನ ಕುಶಲತನದಿಂದ ಒಂದು ರತ್ನವನ್ನು ಸಿದ್ಧಪಡಿಸಿಕೊಂಡು ಹದಿನಾಲ್ಕನೇದಿವಸ ಬೀರಬಲನ ಬಳಿಗೆಬಂದನು. ಅದನ್ನು ನೋಡಿ ಬೀರಬಲನು ಅವನ ಜಾಣತನಕ್ಕೆ ತಲೆದೂಗಿದನು. ಮರುದಿವಸ ಆ ಹರಳನ್ನು ತೆಗೆದುಕೊಂಡು

ಬಾದಶಹನ ಸನ್ನಿಧಿಗೆಬಂದನು, ಆಗ ಬಾದಶಹನು ಓಹೋ ಹೋ! ಬೀರ ಬಲ್ಲ ಈ ದಿವಸ ನೀನು ಶೀಘ್ರವಾಗಿ ಸಭೆಗೆ ಬಂದಿರುವಿಯಲ್ಲಾ ಎಂದು ಕೇಳಿದನು, ಆ ಕೂಡಲೆ ಬೀರಬಲನು "ಸರಕಾರ? ಈ ಮನುಷ್ಯನು ಒಂದು ಅತ್ಯುತ್ತಮವಾದ ರತ್ನವನ್ನು ತಂದುಕೊಟ್ಟಿದ್ದಾನೆ, ಅದು ತಮ್ಮಬಳಿಯಲ್ಲಿರುವದಕ್ಕೆ ಯೋಗ್ಯವಾಗಿದೆ" ಎಂದನು. ಬಾದಶಹನು ಅದನ್ನು ತನ್ನ ಕಡೆಗೆ ತೆಗೆದುಕೊಂಡು ಚನ್ನಾಗಿಪರೀಕ್ಷಿಸಿ, ರತ್ನವಂತೂ ಅತ್ಯುತ್ತಮವದೆ ಇನ್ನು ಎರಡು ತಾಸಾದಬಳಿಕ ಬೆಟ್ಟಿಯಾಗೆಂದು ಆ ಶಿಲ್ಪಕಾರನಿಗೆ ಹೇಳು ಎಂದನು ಅದನ್ನು ಕೇಳಿ ಆ ವೃದ್ಧನು ಹೊರಟುಹೋದನು. ಆಮೇಲೆ ಈ ರತ್ನವನ್ನು ಜಾಣರಿಂದ ಪರೀಕ್ಷಿಸಿ ನೋಡಬೇಕು? ಅಲ್ಲಿಯವರೆಗೆ ಇದು ನನ್ನ ಬಳಿಯಲ್ಲಿಯೇ ಇರಲಿ ಎಂದು ಬೀರಬಲನಿಗೆ ಹೇಳಿ, ಉಳಿದ ರಾಜಕರಣಗಳಲ್ಲಿ ಮನವನ್ನು ಹಾಕಿದನು. ಮುಂದೆ ಎರಡುತಾಸು ಆದಮೇಲೆ ಆ ಶಿಲ್ಪಿಯುಬರಲು ಬೀರಬಲನು- ಪೃಥ್ವೀನಾಥ? ಆ ರತ್ನದವನು ಬಂದಿದ್ದಾನೆ ಎಂದು ಹೇಳಿದನು. ಆ ಕೂಡಲೆ ಬಾದಶಹನು ರತ್ನವನ್ನು ಶೋಧಮಾಡಹತ್ತಿದನು, ಯೆಲ್ಲಿಯೂ ಸಿಕ್ಕಲಿಲ್ಲ. ಆಗ ಬೀರಬಲನಿಗೆ- ಬೀರಬಲ! ಆ ರತ್ನವನ್ನು ನಿನ್ನಸ್ವಾಧೀನ ಪಡಿಸಲಿಲ್ಲವೇ ಎಂದು ಕೇಳಿದನು. ಸರಕಾರ! ನನ್ನ ಕಡೆಗೆ ಕೊಡಲಿಲ್ಲ ಅದನ್ನು ಚನ್ನಾಗಿ ಪರೀಕ್ಷಿಸಬೇಕೆಂದು ತಾವೇ ಇಟ್ಟುಕೊಳ್ಳಲಿಲ್ಲವೇ, ಎಂದು ಬೀರಬಲನು ನುಡಿದನು. (ಈ ಪೂರ್ವದಲ್ಲಿಯೇ ಆ ರತ್ನವನ್ನು ಬೀರಬಲನು ನುಂಗಿಬಿಟ್ಟಿದ್ದನು) ಎಷ್ಟು ಹುಡುಕಿದರೂ ಶೋಧವಾಗದಿರಲು ಬಾದಶಹನು- ರತ್ನದ ಯಜಮಾನನು ಎಷ್ಟುಬೆಲೆಯನ್ನು ಹೇಳುವನೋ ಅಷ್ಟು ದ್ರವ್ಯವನ್ನು ಕೊಟ್ಟುಬಿಡು, ವ್ಯರ್ಥ ಚರ್ಚೆಮಾಡುತ್ತ ಕುಳಿತುಕೊಳ್ಳಬೇಡ ಎಂದು ಅಪ್ಪಣೆಮಾಡಲು ಬೀರಬಲನು ಆ ವೃದ್ಧನನ್ನು ಕುರಿತು ರತ್ನದಬೆಲೆಯನ್ನು ಹೇಳು ಎಂದನು, ಆ ವೃದ್ಧನು ಎರಡುಸಾವಿರ ರೂಪಾಯಿಗಳನ್ನು ಕೊಡಬೇಕು ಮತ್ತು ಶ್ರಮದಫಲವೆಂದು ಐವತ್ತು ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿದನು ಆಗ ಬೀರಬಲನು ಛೀ, ಛೀ, ಅಷ್ಟುಬೆಲೆ ಬಾಳತಕ್ಕ ರತ್ನವಲ್ಲ; ಒಂದುನೂರು ರೂಪಾಯಿಗಳನ್ನು ತೆಗೆದುಕೋ ಎಂದು ಅವನೊಡನೆ ಚರ್ಚನಡಿಸಿದನು, ಅದನ್ನು ಕಂಡು ಬಾದಶಹನು- ವೃದ್ಧನು ಏನನ್ನುತ್ತಾನೆ ಎಂದು ಕೇಳಿದನು. ಅದಕ್ಕೆ ಪ್ರತ್ಯುತ್ತರವಾಗಿ ಬೀರಬಲನು ಖಾವಂದ? ಈ ವೃದ್ಧನು ಎರಡುಸಾವಿರ ರೂಪಾಯಿಗಳನ್ನು ಬೆಲೆಯಾಗಿ ಕೊಡಬೇಕೆಂದೂ, ಶ್ರಮದಫಲವೆಂದು ಎರಡು ನೂರು ರೂಪಾಯಿಗಳನ್ನೂ ಕೇಳುತ್ತಾನೆ, ನಾನು ಶ್ರಮದಫಲವನ್ನು ಒಂದುನೂರು ರೂಪಾಯಿಗಳನ್ನು

ತೆಗೆದುಕೋ ಎಂದು ಹೇಳಿದೆನು ಅದಕ್ಕೆ ಅವನು ಸಮ್ಮತಿಸದೆ ನನ್ನ ರತ್ನವನ್ನು ನನಗೆ ಕೊಡಿಸಿಬಿಡಿರಿ ಎಂದು ಹಟಹಿಡಿದು ಕುಳಿತಿದ್ದಾನೆ ಎಂದುಹೇಳಿದನು. ಆಗ ಬಾದಶಹನು ಉದಾರಮನಸ್ಸಿನಿಂದ ಅವನು ಹೇಳಿದಷ್ಟು ಹಣವನ್ನು ಕೊಟ್ಟುಬಿಡು ಎಂದು ಕೋಶಾಧ್ಯಕ್ಷನಿಗೆ ಅಪ್ಪಣೆಮಾಡಿದನು ಆ ವೃದ್ಧನು ಬಹಳ ಪ್ರಸನ್ನನಾಗಿ ಬೀರಬಲನಿಗೆ ಆಶೀರ್ವಾದಗಳನ್ನು ಮಾಡುತ್ತ ಮನೆಗೆ ಹೊರಟುಹೋದನು. ಸಭಾವಿಸರ್ಜನೆಯಾದ ಬಳಿಕ ಬೀರಬಲನು ಗೃಹಕ್ಕೆ ಹೋಗುವ ಮಾರ್ಗದಲ್ಲಿ ಆ ವೃದ್ಧನು ಬೆಟ್ಟಿಯಾಗಿ "ಮಂತ್ರಿವರ್ಯನೇ! ನಿನ್ನ ಬುದ್ಧಿಗೆ ಬೆಲೆಯಿಲ್ಲ, ತಾವು ಈ ಪ್ರಕಾರ ಅನಾಥರಿಗೆ ಸಹಾಯ ಮಾಡುತ್ತಿರುವದರಿಂದ ದೇವರು ನಿಮಗೆ ಅಕ್ಷಯ ಸುಖವನ್ನೀಯುತ್ತಾನೆ; ಇದರಲ್ಲಿ ಏನೂ ಸಂದೇಹವಿಲ್ಲ" ಎಂದನು. ಈ ಮಾತಿಗೆ ಪ್ರತ್ಯುತ್ತರವಾಗಿ ಬೀರಬಲನು "ಪೂಜ್ಯನೇ! ನಾನು ಇದರಲ್ಲಿ ಮಾಡಿದ ಕರ್ತೃತ್ವವೇನು? ಇದು ನಿನ್ನ ಚಾತುರ್ಯದ ಪರಿಣಾಮವು" ಎಂದು ಹೇಳಿ ಆವನಿಂದ ಆಶೀರ್ವಚನವನ್ನು ಸ್ವೀಕರಿಸಿ ಮನೆಗೆ ಹೊರಟುಬಂದನು.

—(೧೭೧ ಬೀರಬಲನೂ ಮತ್ತು ಕ್ಷೌರಿಕನು,)—

ಒಂದುದಿವಸ ಒಬ್ಬ ಅಮೀರನು, ಒಬ್ಬ ಹಿಂದೂ ಸ್ತ್ರೀಯುಳಮೇಲೆ ಬಲಾತ್ಕಾರ ನಡೆಯಿಸಿದ್ದನು. ಆಗ ದೈವಯೋಗದಿಂದ ಪ್ರಚ್ಛನ್ನ ವೇಷಧಾರಿಯಾಗಿದ್ದ ಬೀರಬಲನು ಆ ಸ್ಥಳಕ್ಕೆ ಹೋದನು, ಆ ತರುಣ ಸರದಾರನು ಬೀರಬಲನನ್ನು ಗುರುತಿಸದೆ "ಅಯ್ಯಾ! ನಿನ್ನ ಉಡಿಗೆ ತೊಡಿಗೆಗಳ ಮೇಲಿಂದ ಮುಸಲ್ಮಾನ ಜಾತಿಯವನಿದ್ದಂತೆ ಕಂಡುಬರುತ್ತದೆ ನೀನು ನಿಜವಾದ ಮುಸಲ್ಮಾನನಾಗಿದ್ದರೆ ಈ ಸಮಯದಲ್ಲಿ ನನಗೆ ಸ್ವಲ್ಪಸಹಾಯವನ್ನು ಮಾಡು; ಇವಳು ನನ್ನ ಹೆಂಡತಿಯು, ಒಬ್ಬ ಹಿಂದೂ ಮನುಷ್ಯನೊಡನೆ ಪಲಾಯನಮಾಡಬೇಕೆಂದು ಮಾರ್ಗಹಿಡಿದಿದ್ದಳು ಈ ಸಂಗತಿಯು ನನಗೆ ಬೇಗನೇ ತಿಳಿದುಬಂದದ್ದರಿಂದ ನಾನು ಇವಳಿಗೆ ನಿರ್ಬಂಧ ಪಡಿಸಿಕೊಂಡು ನಿಂತಿದ್ದೇನೆ, ಈಗ ಇವಳು ತಾನು ಹಿಂದೂ ಜಾತಿಯವಳೆಂದು ಹೇಳಹತ್ತಿದ್ದಾಳೆ ನೀನು ನನಗೆ ಸ್ವಲ್ಪ ಸಹಾಯಮಾಡಿದರೆ ಸಮೀಪದಲ್ಲಿರುವ ನನ್ನ ಗೃಹಕ್ಕೆ ಕರೆದುಕೊಂಡು ಹೋಗುವೆನು" ಎಂದು ಹೇಳಿದನು. ಅದಕ್ಕೆ ಪ್ರತಿಯಾಗಿ ಬೀರಬಲನು, ಹೀಗಿರುವದೇ? ಒಳ್ಳೇದು, ನಾನು ನಿನಗೆ ಸಹಾಯಮಾಡಿದರೆ ಆ ಶ್ರಮದಸಲುವಾಗಿ ನೀನು ನನಗೆ ಏನುಕೊಡುತ್ತೀ? ಎಂದುಕೇಳಿದನು. ಆ ತರುಣ ಸರದಾರನು, ಅಯ್ಯಾ? ನಾನು ಸರದಾರಖಾ ನಾಮಕನಾದ ಅಮೀರನು ನನ್ನ ಖ್ಯಾತಿಯನ್ನು ನೀನು ಕೇಳಿರಬಹುದು, ಈ ನನ್ನ ಕೆಲಸ

ದಲ್ಲಿ ನೀನು ಪೂರ್ಣಸಹಾಯ ಮಾಡಿದರೆ ನಿನ್ನ ಮನಸ್ಸು ತೃಪ್ತವಾಗುವಂತೆ ಪಾರಿತೋಷಕವನ್ನು ಕೊಡುತ್ತೇನೆ, " ಎಂದನು.

ಬೀರಬಲ—ಒಳ್ಳೇದು; ನಾನು ಮೊದಲು ಈ ಸ್ತ್ರೀಯಳಿಗೆ ಕೆಲವು ಉಪದೇಶದ ಮಾತುಗಳನ್ನು ಹೇಳುತ್ತೇನೆ ಅಷ್ಟರಿಂದಲೇ ಕಾರ್ಯಸಾಧ್ಯವಾದರೆ ಉತ್ತಮ, ಇಲ್ಲದೆಹೋದರೆ ಹಿಂದಿನಿಂದ ನಾವುಮಾಡತಕ್ಕದ್ದನ್ನು ಮಾಡಿಬಿಡೋಣ, ನೀನು ಕಿಂಚಿತ್ ದೂರಹೋಗಿ ನಿಂತುಕೋ.

ಆ ಕಾಮಾಂಧನಾದ ಅಮೀರನು ಇವನಮಾತಿಗೆ ಸಮ್ಮತಿಸಿ. ಕಿಂಚಿತ್ ದೂರದಲ್ಲಿ ಹೋಗಿ ನಿಂತುಕೊಂಡನು. ಆಗ ಬೀರಬಲನು ಆ ಸ್ತ್ರೀಯಳನ್ನು ದ್ದೇಶಿಸಿ, " ತಙ್ಗಿಯೇ ? ನೀನುಯಾರು, ನಿನ್ನ ಮಾತಾಪಿತೃಗಳುಯಾರು, ಎಂಬ ವೃತ್ತಾಂತವನ್ನು ಸತ್ಯಸತ್ಯವಾಗಿ ಹೇಳಿದರೆ ಈ ದುಷ್ಟನಬಂಧನದಿಂದ ನಿನ್ನನ್ನು ದಾಟಿಸುತ್ತೇನೆ, ನಾನು ಬೀರಬಲನು, ನಗರ ಸಂಚಾರಾರ್ಥವಾಗಿ ಪ್ರಚ್ಛನ್ನವೇಷದಿಂದ ಸಂಚರಿಸುತ್ತಿದ್ದೆನು " ಎಂದನು. ಬೀರಬಲನ ಹೆಸರು ಕಿವಿಗೆ ಬಿದ್ದಕೂಡಲೇ ಅವಳಲ್ಲಿ ಅವಸಾನವು ಬಂತು.

ಆಗ ಅವಳು—" ನಾನು ಒಬ್ಬ ಬ್ರಾಹ್ಮಣನ ಕನ್ಯೆಯು ಅವಿವಾಹಿತಳಾಗಿದ್ದೇನೆ ಈ ದುಷ್ಟನು ಎಷ್ಟೋದಿವಸಗಳಿಂದ ನನ್ನ ಸತೀತ್ವವನ್ನು ಭ್ರಷ್ಟಗೊಳಿಸಬೇಕೆಂದು ಹೊಂಚುಹಾಕಿ ಕುಳಿತುಕೊಂಡಿದ್ದನು ನನ್ನ ದುರದೃಷ್ಟದಿಂದ ಈ ದಿವಸ ಈ ದುಷ್ಟನ ಬಲೆಯೊಳಗೆ ಸಿಕ್ಕುಬಿದ್ದಿದ್ದೇನೆ ನನ್ನಗೆ ಮಹಾಲಕ್ಷ್ಮಿ ಎಂದು ಕರೆಯುವರು ತಾವು ಕರುಣಾಳುಗಳಾಗಿ, ನನ್ನ ಮರ್ಯಾದೆಯನ್ನುಳಿಸಿದರೆ, ಜಗನ್ನಿಯಂತನು ನಿಮಗೆ ಅಖಂಡವಾದ ಸೌಖ್ಯವನ್ನೀಯುತ್ತಾನೆ " ಎಂದು ಪ್ರಾರ್ಥಿಸಿಕೊಂಡಳು ಆಗ ಬೀರಬಲನು ಅವಳಿಗೆ ಧೈರ್ಯಹೇಳಿ, ಆ ಸರದಾರನನ್ನು ಕರೆದು-" ಸರದಾರಖಾನ ! ನೀನು ಪ್ರಜೆಗಳ ಪ್ರಾಣ, ಮತ್ತು ಧನಗಳನ್ನು ರಕ್ಷಿಸುವ ಕರ್ಮಚಾರಿಯಾಗಿದ್ದು ನಿರ್ದೋಷಿಯಾಗಿರುವ ಬ್ರಾಹ್ಮಣಕನ್ಯೆಯ ಮೇಲೆ ಬಲಾತ್ಕಾರವನ್ನು ಮಾಡ ಉದ್ಯುಕ್ತನಾಗಿರುವದು ಸರಿಯಲ್ಲ; ... ... *

ಸರದಾರಖಾ—ಇವಳು ಅಸತ್ಯ ವಾದವನ್ನು ಮಾಡುತ್ತಾಳೆ.

ಬೀರಬಲ—ನೀನೇ ಅಸತ್ಯವಾದಿಯಾಗಿರುವಿ ಇವಳು ರಾಮಶಂಕರ ಶಾಸ್ತ್ರಿಯ ಕನ್ಯೆಯು ನನ್ನ ಎದುರಿಗೆ ನೀನು ಇವಳ ಅಂಗಸ್ಪರ್ಶ ಮಾಡಲಾರಿ! " ಪರಸ್ತ್ರೀಯರಮೇಲೆ ಬಲಾತ್ಕಾರ ನಡೆಯಿಸಿದವನು, ಕಠಿಣತರವಾದ ಶಿಕ್ಷೆಗೆ ಗುರಿಯಾಗುವನು " ಎಂಬ ಬಾದಶಹನ ಆಜ್ಞೆ

ಯು ನಿನ್ನ ಲಕ್ಷ್ಯದಲ್ಲಿ ಇದ್ದಂತೆ ಕಂಡುಬರುವದಿಲ್ಲ ಅದು ನಿನ್ನ ಸ್ಮರಣೆಯಲ್ಲಿ ಇರದಿದ್ದರೆ; ನಾನು ಸ್ಮರಣೆಗೆ ತಂದು ಕೊಡುತ್ತೇನೆ ಸುಮ್ಮನೆ ಇಲ್ಲಿಂದ ಹೊರಟು ಹೋಗು ! ಇಲ್ಲವಾದರೆ ನಿನ್ನ ಗತಿಯು ನೆಟ್ಟಗಾಗಲಿಕ್ಕಿಲ್ಲ. ... ... *

ಬೀರಬಲನು ಹೇಳಿದ ಈ ಬುದ್ಧಿವಾದದಿಂದ ಆ ಮದಾಂಧನಿಗೆ ಕೋಪವು ತಲೆಗೇರಿತು ಆ ಕೂಡಲೆ ಅವನು-" ನೀನು ಬಹಳೇ ಮೋಸಗಾರನು ನನ್ನನ್ನು ದೂರದಲ್ಲಿನಿಲ್ಲಿಸಿ, ಇವಳಿಗೆ ಉಪದೇಶಮಾಡಿ ಇವಳನ್ನು ಹರಣಮಾಡಿಕೊಂಡು ಹೋಗಬೇಕೆಂಬ ಕಾರ್ಯ ಸಾಧನೆಯಲ್ಲಿದ್ದಂತೆ ಕಂಡು ಬರುತ್ತದೆ ಇದರ ಪ್ರತಿಫಲವನ್ನು ಅನುಭವಿಸಲಿಕ್ಕೆ ಸಿದ್ಧನಾಗು ! ಇವಳನ್ನು ನಿನ್ನಸ್ವಾಧೀನಕ್ಕೆ ಎಂದಿಗೂ ಕೊಡಲಾರೆನು " ಎಂದು ನುಡಿದು ಒರೆಯಿಂದ ಖಡ್ಗವನ್ನು ಹಿರಿದನು ಆಕೂಡಲೆ ಬೀರಬಲನು ತನ್ನ ಪ್ರಚ್ಛನ್ನವೇಷವನ್ನು ತೆಗೆದು ಚಲ್ಲಿ, ಎದುರಿಗೆ ನಿಂತುಕೊಂಡನು ಆಗ ಸರದಾರಖಾನನ ಕೈಕಾಲುಗಳು ತಣ್ಣಗಾದವು ನಾಲಿಗೆಯು ತೊದಲಿಸ ಹತ್ತಿತು ಆಗ ಬೀರಬಲನು " ಸರದಾರಖಾ ! ಈಗ ನೀನು ನನ್ನ ಸೆರೆಯಾಳಾದಿ ! ನನ್ನ ಸಂಗಡ ಸುಮ್ಮನೆ ಬಾ ! ಪ್ರಜೆಗಳ ಧನಮಾನಗಳನ್ನು ರಕ್ಷಿಸುವ ಕೆಲಸವನ್ನು ಬಿಟ್ಟುಕೊಟ್ಟು ಇಂಥ ಕುಕರ್ಮ ಪ್ರವೃತ್ತನಾಗುವಿಯಾ? ಧಿಕ್ಕಾರ ! ಧಿಕ್ಕಾರ!! " ಎಂದನು ಆಗ ಸರದಾರಖಾನನು ಏನೊಂದು ಪ್ರತ್ಯುತ್ತರವನ್ನು ಕೊಡದೆ ಬೀರಬಲನ ಬೆನ್ನುಹತ್ತಿದನು ಬೀರಬಲನು ಆ ಕುಮಾರಿಕೆಯನ್ನು ಕುರಿತು - ನೀನೂ ನನ್ನೊಡನೆ ಬಾ ! ನಾಳೆ ಪ್ರಾತಃಕಾಲದಲ್ಲಿ ನಿನ್ನ ಪಿತನನ್ನು ಕರೆಯಿಸಿ, ಯಾವತ್ತೂ ಸಮಾಚಾರವನ್ನು ತಿಳುಹಿ ನಿನ್ನನ್ನು ಅವನ ಸ್ವಾಧೀನ ಪಡಿಸುತ್ತೇನೆ " ಎಂದು ಹೇಳಲು ಆ ಕುಮಾರಿಕೆಯು ಪ್ರಸನ್ನ ಹೃದಯದಿಂದ ಬೀರಬಲನೊಡನೆ ಸಾಗಿದಳು. ಅವರೀರ್ವರನ್ನೂ ಕರೆದುಕೊಂಡು ಮನೆಗೆಬಂದು ಆ ಸರದಾರನನ್ನು ಅಂತರ್ಗೃಹದಲ್ಲಿ ಬಂದಿಯಾಗಿಟ್ಟು ಆಕುಮಾರಿಕೆಯನ್ನು ತನ್ನ ಪತ್ನಿಯ ವಶಕ್ಕೆಕೊಟ್ಟು ನಿದ್ರಾವಶನಾದನು ಮರುದಿವಸ ಪ್ರಾತಃಕಾಲದಲ್ಲಿ ಎದ್ದು ಆ ಸರದಾರನನ್ನು ಕರೆದುಕೊಂಡು ಬಾದಶಹನ ಬಳಿಗೆ ಬಂದನು ಮ್ಲಾನ ಮುಖದಿಂದ ಬೀರಬಲನಹಿಂದೆ ಔತುಕೊಂಡು ನಿಂತಿರುವ ಸರದಾರಖಾನ ನನ್ನು ಕಂಡು ಬಾದಶಹನಿಗೂ ಅನ್ಯಸಭಾಸದರಿಗೂ ಪರಮಾಶ್ಚರ್ಯವಾಯಿತು ಬಾದಶಹನು ಈ ವಿಷಯವೇನೆಂದು ಪ್ರಸ್ತಾಪಿಸಲು, ಬೀರಬಲನು ಆದ್ಯೋಪಾಂತ ವೃತ್ತಾಂತವನೆಲ್ಲ ಕಥನಮಾಡಿದನು ಅದನ್ನು ಕೇಳಿ ಬಾದಶಹನಿಗೆ ಮಿತಿಮೀರಿ ಕೋಪವುಬಂ

ತು ಆಗ ಬಾದಶಹನು ಆ ಸರದಾರನನ್ನು ಕುರಿತು-“ ಎಲೈ ! ಮೋಸಗಾರ ನಾದ ಸರದಾರಖಾನನೇ ! ನಾನು ನಿನ್ನ ಹೋಗ್ಯತೆಯನ್ನು ಮೀರಿದ ಪದ ವಿಯನ್ನಿತ್ತು, ಸನ್ಮಾನಿಸಿದ್ದದ್ದಕ್ಕೆ, ಈಪರಿಯಾಗಿ ಪ್ರತಿಫಲವನ್ನಿತ್ತಿಯಾ ? ಧಿಕ್ಕಾರವಿರಲಿ, ನಿನ್ನ ಜನ್ಮಕ್ಕೆ ನೀನು ಇನ್ನು ಮುಂದೆ ನನಗೆ ಮುಖವನ್ನು ತೋರಿಸಬೇಡ ಬೀರಬಲ್ಲ ! ಇವನನ್ನು ಬಲವಾದ ಸಂಕೋಲೆಗಳಿಂದ ಬಿಗಿ ದು. ಕಠಿಣವಾದ ಕಾರಾಗೃಹದಲ್ಲಿರಿಸು ” ಎಂದು ಅಪ್ಪಣೆ ಮಾಡಿದನು. ಕೂ ಡಲೆ ಬೀರಬಲನು ಬಾದಶಹನ ಅಪ್ಪಣೆಯಮೇರೆಗೆ ಸರದಾರಖಾನ ನನ್ನು ಕಾರಾಗೃಹಕ್ಕೆ ಕಳಿಸಿಕೊಟ್ಟನು. ... ... *

ಈ ಪ್ರಕಾರವನ್ನು ನೋಡಿ ಮುಸಲ್ಮಾನ ಸರದಾರರೆಲ್ಲರಿಗೂ ಬೀರ ಬಲನಮೇಲೆ ಅತ್ಯಂತವಾದ ಕೋಪವುಂಟಾಯಿತು. ಆದರೆ ಅವರಲ್ಲಿ ಏನು ಸಾಮರ್ಥ್ಯವಿತ್ತು ! ಬಾದಶಹನ ಒಲುಮೆಯು ಬೀರಬಲನ ಮೇಲೆ ಸಂಪೂ ರ್ಣವಿತ್ತು. ಬೀರಬಲನನ್ನು ಹ್ಯಾಗಾದರೂ ಮಾಡಿ, ಕಿತ್ತುಹಾಕಬೇಕೆಂಬಬು ಗ್ಗೆ, ಒಳಸಂಚನ್ನು ಮಾಡಹತ್ತಿದರು ಅನೇಕರು ಅನೇಕ ಉಪಾಯಗಳ ನ್ನು ಹುಡುಕಿತೆಗೆದರು ಒಂದೂ ಸಾಧ್ಯವಾಗುವಂತ ಕಂಡುಬರಲಿಲ್ಲ. ಕಡೆಗೆ ಬಾದಶಹನ ಆಯುಷ್ಕರ್ಮವನ್ನು ಮಾಡುತ್ತಿರುವ ಒಬ್ಬ ಕ್ಷೌರಕನನ್ನು ತ ಮ್ಮ ಒಳಸಂಚಿನಲ್ಲಿ ತೆಗೆದುಕೊಂಡು, ಅವನನ್ನು ಹುರಿದುಂಬಿಸಿದರು.

ಆ ನಾವಲಿಗನು ಒಂದು ದಿವಸ ಬಾದಶಹನ ಆಯುಷ್ಕರ್ಮವನ್ನು ಮಾಡುತ್ತಿರುವಾಗ- “ ಹುಜೂರ್ ; ನಿಮ್ಮ ಮಾತಾಪಿತೃಗಳು ಸ್ವರ್ಗವಾಸಿ ಗಳಾಗಿ ಎಷ್ಟೋ ವರುಷಗಳು ಆಗಿ ಹೋದವು. ಅವರ ಸಮಾಚಾರವೇನೆಂ ಬದನ್ನು ಕಿಂಚಿತ್ತಾದರೂ ತಿಳಿದುಕೊಂಡಿದ್ದೀರಾ ? ಅವರ ಪುಣ್ಯಬಲದಿಂದ ಲೇ ನಿಮಗೆ ಈ ರಾಜ್ಯವೂ, ಈ ಲಕ್ಷ್ಮಿಯೂ ಕೈವಶವಾಗಿಲ್ಲವೇ ! ಹೀಗಿದ್ದು ಅವರನ್ನೇ ಮರೆತು ಬಿಡುವದೆಂದರೆ ಎಂಥ ಅನ್ಯಾಯ ವಿದು ; ಹೀಗೆ ನೀವು ಅನ್ಯಾಯ ಮಾಡಹತ್ತಿದರೆ ಅವರು ಕೋಪಗೊಳ್ಳದಿರರೇ ? ಎಂದನು.

ಬಾದಶಹ—ನೀನು ಹೇಳಿದ್ದು ನಿಜವು, ಅವರ ಸಮಾಚಾರವನ್ನು ನಾನು ಹೇಗೆ ತಿಳಿದುಕೊಳ್ಳಲಿ ? ಯಾರನ್ನು ಕಳುಹಿಕೊಡಲಿ ? ಕದಾಚಿ ತ್ ಯಾವನಾದರೂ ಈ ಕೆಲಸವನ್ನು ಸ್ವೀಕರಿಸಿದ್ದಾದರೆ ಅವನಿ ಗೆ ಸ್ವರ್ಗದ ಮಾರ್ಗವು ಸಿಗುವಬಗೆ ಹೇಗೆ ?

ಕ್ಷೌರಕ—“ ನರವರ ; ಯಾರನ್ನು ಕಳುಹಿಸಿ ಕೊಡಬೇಕೆಂಬದನ್ನು ನೀ ವೇ ವಿಚಾರಮಾಡಿಕೊಂಡು ನೋಡಿರಿ ! ನೀವು ಯಾವನನ್ನು ಕಳು ಹಿಸಿಕೊಡುವಿರೋ, ಅವನಿಗೆ ನಾನು ಸ್ವರ್ಗದ ಮಾರ್ಗವನ್ನು

ಹೇಳಿ ಕೊಡುತ್ತೇನೆ.

ಬಾದಶಹ—ಆ ಮಾರ್ಗವು ಎಲ್ಲಿಯದೆ, ಎಂಬದನ್ನು ಹೇಳು.

ಕ್ಷೌರಕ—ಯಾವ ಮನುಷ್ಯನನ್ನು ನೀವು ಕಳುಹಿಸಬೇಕೆಂದು ನಿಶ್ಚಯಿಸುವಿರೋ, ಅವನನ್ನು ಕರೆದುಕೊಂಡು ಹೋಗಿ ಸ್ಮಶಾನದಲ್ಲಿ ಕೂಡ್ರಿಸಿ, ಅವನ ಸುತ್ತುಮುತ್ತು ಗೋಪುರಾಕಾರವಾಗಿ ಉರುವಲಗಳನ್ನು ಒಟ್ಟಿ, ಅದಕ್ಕೆ ಬೆಂಕಿಯನ್ನು ತಗುಲಿಸಬೇಕು. ಅಂದರೆ ಅವನು ಧೂಮ ಮಾರ್ಗವಾಗಿ ಸ್ವರ್ಗವನ್ನು ನಿರಾಯಾಸವಾಗಿ ಸೇರುವನು.

ಬಾದಶಹ—ನೀನು ಹೇಳಿದ ಮಾರ್ಗವು ಒಳ್ಳೆಯದಾಗಿ ಕಾಣುತ್ತದೆ ಆದರೆ ಯಾರನ್ನು ಕಳುಹಿಸಬೇಕು?

ಕ್ಷೌರಕ—ಖುದಾವಂದ! ನಿಮ್ಮ ಆಶ್ರಯದಲ್ಲಿ ಸಾವಿರಾರು ಜನಗಳು ಇರುವರಲ್ಲಾ! ಯಾವನೊಬ್ಬನನ್ನು ಕಳುಹಿಕೊಟ್ಟರಾಯಿತು. ಆದರೆ ಆ ಕೆಲಸವು ಸಾಮಾನ್ಯ ಮನುಷ್ಯನಿಂದ ಆಗ ತಕ್ಕದ್ದಿಲ್ಲ ಅವನು ಅಸಾಧಾರಣ ಚತುರನಾಗಿರಬೇಕು.

ಬಾದಶಹ—ನೀನೇ ಹೇಳು; ಅಂಥ ಚತುರನಾದವನು ನನ್ನ ಅನುಯಾಯಿಗಳಲ್ಲಿ ಯಾವನಿರುವನು?

ಕ್ಷೌರಕ—(ತಡವರಿಸುತ್ತ) ಸರಕಾರ: ನನ್ನ ದೃಷ್ಟಿಯಿಂದ ನೋಡಿದರೆ, ಬೀ, ಬೀ, ಬೀ. ಬೀರಬಲನೇ ಯೋಗ್ಯನೆಂದು ಕಂಡು ಬರುತ್ತದೆ ಅವನ ಹೊರತು ಅನ್ಯರಾರೂ ಕಾಣುವದಿಲ್ಲ ಇದರ ಮೇಲೆ ತಮ್ಮ ಮನಸ್ಸು.

ಬಾದಶಹ—ಅಹುದು; ಅವನು ಹೋದಮೇಲೆ ಈ ರಾಜ್ಯಕಾರಭಾರವನ್ನು ನಿರ್ವಹಿಸುವವರು ಯಾರು?

ಕ್ಷೌರಕ—ಅವನ ಪದವಿಯಲ್ಲಿ ಬೇರೊಬ್ಬನನ್ನು ಸ್ವಲ್ಪ ದಿವಸಗಳ ಮಟ್ಟಿಗೆ ನಿಯಮಿಸಿಕೊಂಡರಾಯಿತು, ಬೇಕಾದರೆ ನಾನೇ ಆ ಕೆಲಸವನ್ನು ಮಾಡಲಿಕ್ಕೆ ಸಿದ್ಧನಿದ್ದೇನೆ.

ಬಾದಶಹ—ಛೀ, ಹುಚ್ಚನೇ; ನನ್ನ ಮಂತ್ರಿಯಾಗಬೇಕೆಂದು ಅಪೇಕ್ಷಿಸುವಿಯಾ?

ಕ್ಷೌರಕ—ಮಹಾರಾಜ; ಹಾಗಲ್ಲ ನಾನೇ ಹೋಗುತ್ತೇನೆಂದು ಹೇಳಿದೆ. ಆದರೆ ನಾನು ಒಬ್ಬ ಕ್ಷುದ್ರ ಜೀವಿಯಾದ್ದರಿಂದ ತಮ್ಮ ಪಿತೃಗಳಬಳಿಗೆ ಹೋಗಲು, ಯೋಗ್ಯನಲ್ಲ; ಅವರ ಪ್ರತಿಷ್ಠೆಗೆ ಸರಿಯಾಗಿರು ಮನುಷ್ಯನು ಹೋಗಬೇಕಲ್ಲವೇ! ನನ್ನನ್ನು ನೀವು ಕಳುಹಿಸಿಕೊಟ್ಟರೆ

ಅವರ ಅಪಮಾನಮಾಡಿದಂತಾಗಲಿಕ್ಕಿಲ್ಲವೇ? ಬೀರಬಲನನ್ನು ಕಳು ಹಿಸಿಕೊಟ್ಟರೆ ನಿಮ್ಮ ಪ್ರತಿಷ್ಟೆಗೂ ನಿಮ್ಮ ಹಿರಿಯರ ಮರ್ಯಾದೆಗೂ ಕುಂದು ಬರಲಿಕ್ಕಿಲ್ಲ ಇವರಮೇಲೆ ಖಾವಂದರವರ ಚಿತ್ತ.

ಬಾದಶಹ—ಒಳ್ಳೇದು ಬೀರಬಲನನ್ನೇ ಕಳುಹಿಕೊಡುತ್ತೇನೆ.

ಈ ಪ್ರಕಾರ ಮಾತುಕಥೆ ನಡೆಯುವದರೊಳಗೆ ಬಾದಶಹನ ಆ ಯು ಷ್ಕರ್ಮವು ಸಂಪೂರ್ಣವಾಯಿತು ನಾವಲಿಗನು ಹೊರಟು ಹೋದನು ಬಾ ದಶಹನು ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ಸಭಾಸ್ಥಾನಕ್ಕೆ ಬಂದ ನು ಮುತ್ಸದ್ದಿಗಳೆಲ್ಲರೂ ಮಿಲಿತರಾಗಿದ್ದರು. ಬಾದಶಹನು ಬಂದು ಸಿಂಹಾಸ ನದಮೇಲೆ ಕುಳಿತುಕೊಂಡು ಯಾವತ್ತು ವೃತ್ತಾಂತವನ್ನು ಹೇಳಿ ಆ ಮೇಲೆ ಬೀರಬಲನನ್ನು ಕುರಿತು,-" ಬೀರಬಲ್ಲ : ನನ್ನ ಮಾತಾಪಿತೃಗಳು ಮರಣ ಹೊಂದಿ ಎಷ್ಟೋವರುಷಗಳು ಕಳೆದು ಹೋದವು ಅವರ ಕ್ಷೇಮಸಮಾಚಾರ ವೇ ತಿಳಿದಿಲ್ಲ ಆದರಿಂದ ನೀನು ಸ್ವತಃ ಹೋಗಿ ಅವರ ಕುಶಲವಾರ್ತೆಯನ್ನು ತಿಳಿದು ಕೊಂಡು ಬಾ! ಎಂದು ಅಪ್ಪಣೆ ಮಾಡಿದನು. ಆಗ ಬೀರಬಲನು ತನ್ನ ಮನಸ್ಸಿನಲ್ಲಿ " ಯಾವನೋ ಬಾದಶಹನ ಕಿವಿಯನ್ನು ಪುನಃ ತುಂಬಿ ದಂತೆ ಕಾಣುತ್ತದೆ, ಏನುಚಿಂತೆ ಇಲ್ಲ ;" ಎಂದು ಯೋಚಿಸಿ ಬಾದಶಹನ ನ್ನು ಕುರಿತು- " ಪೃಥ್ವೀನಾಥ ? ನಾನು ಹೋಗಲಿಕ್ಕೆ ಸಿದ್ಧನಿದ್ದೇನೆ ಆದರೆ ಆ ಲೋಕಕ್ಕೆ ಹೋಗುವ ಮಾರ್ಗವು ನನಗೆ ವಿದಿತ ವಿಲ್ಲವಲ್ಲಾ ! ಆ ಮಾರ್ಗ ವನ್ನು ಗೊತ್ತು ಹಚ್ಚಿಸಿ ಕೊಟ್ಟರೆ ಪ್ರಸನ್ನಚಿತ್ತನಾಗಿ ಹೋಗಿಬರುತ್ತೇನೆ ಎಂದನು.

ಬಾದಶಹ—" ಸ್ವರ್ಗಕ್ಕೆ ಹೋಗಿಬರುವ ಮಾರ್ಗವು ಈ ಕ್ಷೌರಕನಿಗೆ ಚ ನ್ನಾಗಿ ತಿಳಿದದೆ. ಅವನು ನನ್ನ ಮುಂದೆ ತಿಳಿಸಿದ್ದಾನೆ ! ಅದು ಹ್ಯಾ ಗಂದರೆ, ಸ್ವರ್ಗಕ್ಕೆ ಹೋಗಲು, ಸಿದ್ಧನಾಗಿದ್ದ ಮನುಷ್ಯನನ್ನು ಸ್ಮ ಶಾನ ಭೂಮಿಯಲ್ಲಿ ಕುಳ್ಳಿರಿಸಿ, ಅವನ ಸುತ್ತು ಮುತ್ತು ಉರುವಲಗ ಳನ್ನು ಗೋಪುರಾಕೃತಿಯಾಗಿ ರಚನೆ ಮಾಡಬೇಕು. ಆ ಮೇಲೆ ಅದ ಕ್ಕೆ ಅಗ್ನಿಸ್ಪರ್ಶ ಮಾಡಬೇಕು ಅದರಿಂದ ಹೊರಡುವ ಧೂಮವು ಆಕಾಶಕ್ಕೆ ಮುಟ್ಟಲು ಅದರ ಸಂಗಡ ಮನುಷ್ಯನಿಗೆ ನಿರಾಯಾಸ ವಾಗಿ ಹೋಗಲಿಕ್ಕೆ ಬರುತ್ತದೆಂದು ಹೇಳಿದ್ದಾನೆ. ಆದ್ದರಿಂದ ನೀನು ಬೇಗನೇ ಸಿದ್ಧನಾಗು ?

ಈ ವೃತ್ತಾಂತವನ್ನು ಶ್ರವಣಮಾಡಿ, ಬೀರಬಲನು ತನ್ನ ಮನಸ್ಸಿನಲ್ಲಿ " ಈ ಕಪಟ ಪ್ರಬಂಧದ ಸೂತ್ರಧಾರನು ಈ ಕ್ಷೌರಕನೇ ಆಗಿರುವನು.

ಒಳ್ಳೇದು, ಏನಾದರೂ ಹಂಚಿಕೆಯನ್ನು ಮಾಡಿ, ಮುಯ್ಯಕ್ಕೆ ಮುಯ್ಯತೀ ರಿಸಿದರಾಯಿತು" ಎಂದು ನಿಶ್ಚಯಿಸಿಕೊಂಡು "ಮಹಾರಾಜ ! ನಾನು ಹೋಗುವದಕ್ಕೆ ಸಿದ್ಧನಿದ್ದೇನೆ, ನಾನು ಅಲ್ಲಿಗೆ ಹೋದಮೇಲೆ ನಿಮ್ಮ ಪಿತನು ನನ್ನನ್ನು ಅಲ್ಲಿ ಕೆಲವುದಿವಸ ಇಟ್ಟುಕೊಂಡರೆ ಇಲ್ಲಿ ನನ್ನ ಸತಿಸುತರ ಪರಾ ಮರ್ಶವನ್ನು ತೆಗೆದುಕೊಳ್ಳುವರಾರು ! ನಾನುಬರುವವರೆಗೆ ಅವರ ಉಪಜೀ ವನಾರ್ಥವಾಗಿ ತಮ್ಮಿಂದ ಒಂದು ಲಕ್ಷರೂಪಾಯಿಗಳು ದೊರೆತರೇ ನಾನು ಸ್ವಸ್ಥಚಿತ್ತನಾಗಿ ಹೋಗಿಬರುತ್ತೇನೆ, ಈ ದಿವಸವೇ ತಮ್ಮಿಂದ ಹಣದೊರೆ ದರೆ ಯಾವತ್ತು ವ್ಯವಸ್ಥೆಯನ್ನು ಮಾಡಬೇಕಾದರೆ ಒಂದು ಮಾಸದವಧಿ ಯು ಬೇಕಾಗುವದು ಆಮೇಲೆ ಹೊರಡಲು ಸಿದ್ಧನಾಗುತ್ತೇನೆ" ಎಂದನು. ಬೀರಬಲನು ನಿವೇದಿಸಿದ ಸಂಗತಿಗೆ ಬಾದಶಹನು ಸಮ್ಮತಿಸಿದನು ಆಮೇ ಲೆ ಬೀರಬಲನು ತನ್ನ ಮನೆಗೆ ಬಂದು ಸ್ಮಶಾನದಿಂದ ತನ್ನ ಗೃಹದವರೆಗೆ ಒಂ ದು ವಿವರವನ್ನು ಗುಪ್ತವಾಗಿ ರಚಿಸುವದಕ್ಕೆ ಆರಂಭಮಾಡಿದನು. ಆ ಕಾರ್ಯ ವು ಒಂದು ತಿಂಗಳಲ್ಲಿ ಸಂಪೂರ್ಣವಾಯಿತು, ಆಮೇಲೆ ಬಾದಶಹನ ಬಳಿಗೆ ಬಂದು "ಖಾವಿಂದ ? ನನ್ನ ಗೃಹಕೃತ್ಯದ ಯಾವತ್ತೂ ತೊಂದರೆಗಳಿಂದ ನಿವೃತ್ತನಾಗಿದ್ದೇನೆ" ಎಂದು ಹೇಳಿದನು. ಬಾದಶಹನು ತನ್ನ ಅನುಯಾ ಯಿಗಳನ್ನೆಲ್ಲ ಒಡಗೊಂಡು ಸ್ಮಶಾನಕ್ಕೆ ಹೊರಟನು. ಅದನ್ನು ಕಂಡು ಆ ನಾವಲಿಗನಿಗೆ ಹಿಡಿಸಲಾರದಷ್ಟು ಆನಂದವಾಯಿತು ಬೀರಬಲನು ವಿವರವಿಷ್ಟ ಸ್ಥಳದ ಮೇಲ್ಭಾಗದಲ್ಲಿ ಕುಳಿತುಕೊಂಡನು ಗೋಪುರಾಕೃತಿಯಾಗಿ ಉರುವ ಲಗಳನ್ನು ರಚಿಸಲು ಉದ್ಯುಕ್ತರಾಗಿ ಅರ್ಧಮರ್ಧ ರಚನೆಮಾಡುವದರೊಳ ಗಾಗಿ ಆ ವಿವರದೊಳಗಿಂದ ಪಾರಾಗಿ ತನ್ನ ಗೃಹಕ್ಕೆಬಂದು ಪ್ರಚ್ಛನ್ನವೇಷ ಧಾರಿಯಾಗಿ ಸ್ಮಶಾನಕ್ಕೆಬಂದು ಅಲ್ಲಿಯ ವರ್ತಮಾನವನ್ನು ನೋಡಹತ್ತಿ ದನು. ಉರುವಲ ರಚನೆಯು ಸಮಾಪ್ತವಾದ ಕೂಡಲೆ ಬೆಂಕಿಯನ್ನು ಹೊ ತ್ತಿಸಿದರು, ಬುದ್ಧಿವಂತರಾದ ಹಿಂದುಗಳು ಬಾದಶಹನ ವಿವೇಕತನಕ್ಕೆ ದೂ ಷಿಸಲಾರಂಭಿಸಿದರು, ಬೀರಬಲನು ಮುಸಲ್ಮಾನರು ನೆರೆದಲ್ಲಿಗೆ ಹೋಗಿ, ಬಹಳೇ ನೆಟ್ಟಗಾಯಿತು ನಮ್ಮ ಧರ್ಮದ ವೈರಿಯೊಬ್ಬನು ನಾಶವಾದನು ಆ ಮಂತ್ರಿಪದವಿಯು ನಮ್ಮ ಮುಸಲ್ಮಾನಜಾತಿಯ ಮನುಷ್ಯನಿಗೇ ದೊರೆದರೆ ನಮ್ಮ ಆನಂದಕ್ಕೆ ಪಾರಾವಾರವೇ ಇಲ್ಲ ಎಂದುಹೇಳಿ, ಕಿಂಚಿತ್‌ಮುಂದಕ್ಕೆ ಸಾಗಿದನು. ಅಲ್ಲಿ ಮತ್ತೊಂದು ಜನಸಮೂಹವು ಕೂಡಿತ್ತು ಆ ಸಮೂಹದ ಮಧ್ಯದಲ್ಲಿ ಕ್ಷೌರಕನು ನಿಂತುಕೊಂಡು ನನ್ನ ಬುದ್ಧಿಚಾತುರ್ಯದಿಂದಲೇ ಬೀ ರಬಲನು ಇಹಲೋಕವನ್ನು ಬಿಟ್ಟು ತೆರಳಬೇಕಾಯಿತು, ಅಮೀರಖಾನ

ಸಾಹೇಬರೇ ! ನನ್ನ ಕೆಲಸವನ್ನಂತೂ ನಾನು ಪೂರಯಿಸಿದೆನು ಇನ್ನು ತ ವ್ಮಕಡೆಗೆ ಉಳಿಯಿತು ನನ್ನ ಪಾರಿತೋಷಕವನ್ನು ಕೊಟ್ಟು ನಿಮ್ಮ ವಚನ ದಿಂದ ಮುಕ್ತರಾಗಿರಿ ಆ ಅಪ್ರಬುದ್ಧಿಯ ಬೀರಬಲನು ಇಷ್ಟು ಹೊತ್ತಿಗೆ ಭ ಸ್ಮೀಭೂತವಾಗಿ ಹೋಗಿ ಬಿಟ್ಟಿರಬಹುದು ಎಂದು ಆತ್ಮಸ್ತುತಿಯನ್ನು ಮಾ ಡಿಕೊಳ್ಳಹತ್ತಿದನು. ಅದನ್ನು ಕೇಳಿ ಬೀರಬಲನು ಮನಸಿನೊಳಗೇ ಹಲ್ಲುಕ ಡಿಯುತ್ತ ಅಪ್ರಬುದ್ಧನೇ ! ಇನ್ನು ನಿನ್ನ ಸರತಿಯು ಬಂತು ಜಾಗ್ರತೆಯಿಂದ ಇರು ಎಂದು ಮನಸ್ಸಿನಲ್ಲಿ ನುಡಿದು, ತನ್ನ ಮನೆಗೆ ಬಂದು ಗುಪ್ತವಾಗಿ ಇರ ಹತ್ತಿದನು. ಪ್ರತಿದಿವಸ ರಾತ್ರಿಯಲ್ಲಿ ಪ್ರಚ್ಛನ್ನ ವೇಷದಿಂದ ಸಂಚರಿಸಹತ್ತಿ ದನು, ಈ ಪ್ರಕಾರ ಷಣ್ಮಾಸಗಳು ಕಳೆದು ಹೋದಮೇಲೆ ಪ್ರಕಟನಾದನು ಆ ಆರುತಿಂಗಳಲ್ಲಿ ಆಯುಷ್ಯಕರ್ಮವನ್ನೇ ಮಾಡಿಸದೆ ಇದ್ದದರಿಂದ ಗಡ್ಡಮೀಸೆ ಗಳು ಬೆಳೆದು ಹೋದದ್ದರಿಂದ ಅವನ ಪರಿಚಯವು ಬೇಗನೆಹತ್ತದಂತೆ ಆಗಿ ತ್ತು, ಒಂದುದಿವಸ ಸಭೆಗೆ ಉಚಿತವಾದ ಉಡಿಗೆ ತೊಡಿಗೆಗಳನ್ನು ಧರಿಸಿ ಕೊಂಡು ಅರಮನೆಗೆ ಹೋಗಿ ಬಾದಶಹನ ಎದುರಿಗೆ ನಿಂತುಕೊಂಡನು ಬಾ ದಶಹನಿಗೂ ಅವನ ಪರಿಚಯವು ಹತ್ತದೆ ಹೋಯಿತು.

ಬೀರಬಲ—ಪ್ರಭುವರ ! ನಾನು ನಿಮ್ಮ ಅಮಾತ್ಯನಾದ ಬೀರಬಲನು ನಿಮ್ಮ ಮಾತಾಪಿತೃಗಳ ದರುಶನ ತೆಗೆದುಕೊಂಡು ಈ ದಿವಸ ಹಿಂದಿರುಗಿ ಬಂದಿದ್ದೇನೆ.

ಬಾದಶಹ—(ಅವನ ಧ್ವನಿಯುಮೇಲಿಂದ ಗುರುತಿಸಿ) ಓಹೋ ! ಬೀರಬಲನು ಮರಳಿಬಂದನು, ಬೀರಬಲನೇ ! ನನ್ನ ಮಾತಾಪಿತೃಗಳು ಸುಖವಾ ಗಿರುವರೇ.

ಬೀರಬಲ—ಅವರು ಆ ಲೋಕದಲ್ಲಿ ಇಷ್ಟು ಸುಖಸಂಪತ್ತಿಗಳನ್ನು ಅನುಭ ವಿಸುತ್ತಿರುವರಲ್ಲಾ ! ಅದನ್ನು ಬಣ್ಣಿಸುವದು ನನ್ನಿಂದ ಅಸಾಧ್ಯವು ನಾನು ಅವರಿಗೆ ನಿಮ್ಮ ಕುಶಲವಾರ್ತೆಯನ್ನೆಲ್ಲ ತಿಳಿಸಿದೆನು, ಅವರು ಬಹಳ ಸಂತೋಷಪಟ್ಟರು, ನಾನು ನಿಮ್ಮ ಅಮಾತ್ಯನಿರುವೆನೆಂಬ ಸಂಗತಿಯು ಅವರಿಗೆ ತಿಳಿದಕೂಡಲೆ ನನ್ನನ್ನೂ ಬಹುಪರಿಯಾಗಿ ಸ ತ್ಕರಿಸಿದರು ಅವರ ವೈಭವವು ದೇವೇಂದ್ರನಿಗಿಂತಲೂ ಅಧಿಕವಾಗಿದೆ ಇಂದ್ರನಂತೆ ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಾರೆ, ಇಷ್ಟೆಲ್ಲ ಸುಖಗಳಿದ್ದರೂ ಸಹ ಅಲ್ಲಿ ಒಂದುಕೊರತೆಯು ಅದೆ; ಅದು ಯಾವ ದೆಂದರೆ ಅಲ್ಲಿ ಚತುರನಾದ ನಾವಲಿಗನೊಬ್ಬನು ಇಲ್ಲ ಈ ಕಾರಣದಿಂ ದ ಅವರ ಗಡ್ಡಮೀಸೆಯ ಕೂದಲುಗಳು ಭೂಮಿಯನ್ನು ಸ್ಪರ್ಶಮಾ

ಡಹತ್ತಿವೆ. ಆರೇ ತಿಂಗಳಲ್ಲಿ ನನ್ನ ಗಡ್ಡಮೀಸೆಗಳು ಎಷ್ಟು ಬೆಳೆದಿರು ವವು ನೋಡಿದಿರಾ! ನಾನು ಅಲ್ಲಿಂದ ಹೊರಟುಬರುವಕಾಲದಲ್ಲಿ ಅವ ರು ಒಳ್ಳೇ ನಮ್ರತೆಯಿಂದ ಒಬ್ಬ ನಾವಲಿಗನನ್ನು ಹ್ಯಾಗಾದರೂ ಮಾಡಿ ಕಳುಹಿಸು; ಎಂದು ನಮ್ರತೆಯಿಂದ ನನಗೆ ವಿಜ್ಞಾಪನೆಮಾ ಡಿಕೊಂಡಿದ್ದಾರೆ, ನಾನಂತೂ ನಿಜಸಂಗತಿಯನ್ನು ಸನ್ನಿಧಿಯಲ್ಲಿ ಅರಿ ಕೆಮಾಡಿಕೊಂಡಿದ್ದೇನೆ, ಇದರಮೇಲೆ ತಮ್ಮ ಚಿತ್ತಕ್ಕೆ ಬಂದಹಾಗೆ ಮಾಡಬೇಕು.

ಬಾದಶಹ—ನೀನು ಹೇಳಿದ್ದೆಲ್ಲಾ ಸತ್ಯವು ನಾನು ಅಲ್ಲಿಗೆ ಯಾರನ್ನು ಕಳು ಹಿಸಲಿ !

ಬೀರಬಲ—ಪೃಥ್ವೀನಾಥ! ನಿಮ್ಮ ಈ ನಾವಲಿಗನು ತನ್ನ ಕಸಬಿನಲ್ಲಿ ಒಳ್ಳೇ ಪ್ರಶಂಸೆಯನ್ನು ಪಡೆದಿದ್ದಾನೆ, ಅವನನ್ನೇ ಕಳುಹಿಸಿಕೊಟ್ಟರೆ ನೆಟ್ಟ ಗಾಗುವದು.

ಆ ಕೂಡಲೇ ಬಾದಶಹನು ನಾವಲಿಗನನ್ನು ಕರೆಯಿಸಿ ಸಮಗ್ರವೃತ್ತಾಂ ತವನ್ನು ಕಥನಮಾಡಿದನು. ಬೀರಬಲನು ಮರಳಿ ಬಂದದ್ದನ್ನು ಕಂಡು, ಆ ನಾವಲಿಗನಿಗೆ ಅತ್ಯಾಶ್ಚರ್ಯವಾಯಿತು ಇನ್ನು ತನ್ನ ಸರತಿಯು ಬಂದಿತೆಂದು ತಿಳಿದುಬಿಟ್ಟನು. ಆಗ ಬೀರಬಲನಂತೆ ಒಂದುಮಾಸದ ಅವಧಿಯನ್ನು ಪಡೆ ದುಕೊಂಡು ಎಲ್ಲಿಗಾದರೂ ಹೊರಟು ಹೋಗಬೇಕೆಂದು ಯೋಚಿಸಿದನು. ಮತ್ತು ಅದರಂತೆ ಬಿನ್ನಹಮಾಡಿಕೊಂಡನು. ಅದಕ್ಕೆ ಬಾದಶಹನು "ನೀನು ಹೇಳುವದೆಲ್ಲಾ ನಿಜವು; ಆದರೆ ಅಲ್ಲಿ ಅವರು ಆಯುಷ್ಕರ್ಮವಿಲ್ಲದೆ ಬಹಳೇ ಪೇಚಾಡಹತ್ತಿದ್ದಾರಂತೆ! ನೀನು ಬರುವವರೆಗೆ ನಿನ್ನ ಕುಟುಂಬ ಪೋಷಣೆ ಯ ಭಾರವನ್ನು ನಾನು ಸ್ವೀಕರಿಸುತ್ತೇನೆ ನೀನು ಬೇಗನೇ ಹೊರಡುವ ಸಿ ದ್ಧತೆಯನ್ನು ಮಾಡು" ಎಂದು ಅಪ್ಪಣೆಮಾಡಿದನು. ಆಗ ನಾವಲಿಗನು ತನ್ನ ಮನಸ್ಸಿನಲ್ಲಿ, ಎಂಟು ದಿವಸಗಳ ಅವಧಿಯನ್ನು ಕೊಟ್ಟರೆಸಾಕು ಹ್ಯಾಗಾದ ರೂ ಮಾಡಿ ಪಾರಾಗಿ ಹೋಗುತ್ತೇನೆ ಎಂದು ಯೋಚಿಸಿ, ಬಹುಪರಿಯಿಂದ ಪ್ರಾರ್ಥನೆಮಾಡಿಕೊಂಡು ಎಂಟು ದಿವಸಗಳ ಅವಧಿಯನ್ನು ಪಡೆದುಕೊಂ ಡನು, ಬಾದಶಹನಿಗೆ ಸಲಾಮುಮಾಡಿ ಹೊರಟುಹೋದನು; ಆದರೆ ಬೀರಬ ಲನಿಗೆ ಅವನು ಮನಸ್ಸಿನಲ್ಲಿ ಯೋಚಿಸಿಕೊಂಡಿದ್ದ ಕಪಟ ಪ್ರಬಂಧವೆಲ್ಲ ಅವ ನ ಮುಖಲಕ್ಷಣದ ಮೇಲಿಂದಲೇ ವಿದಿತವಾಯಿತು, ಆ ನಾವಲಿಗನ ಮೇಲೆ ಒಬ್ಬ ಚಾಣಾಕ್ಷನಾದ ಗೂಢಚಾರನನ್ನು ನಿಯಮಿಸಿ ಬಿಟ್ಟನು, ಅವನು ಆ ನಾವಲಿಗನ ಬೆನ್ನ ಹಿಂದಿನಿಂದಲೇ ಹೋಗಿ ಅವನ ಮನೆಯಮುಂದೆ ಕುಳಿತು

ಬಿಟ್ಟನು. ಆ ನಾವಲಿಗನು ಮನೆಗೆಹೋಗಿ ತನ್ನ ಆಪ್ತೇಷ್ಟರಮುಂದೆ ಯಾವತ್ತು ವೃತ್ತಾಂತವನ್ನು ಕಥನಮಾಡಿ ಪಲಾಯನಮಾಡಬೇಕೆಂಬ ತನ್ನಮನಸಿನ ಬಯಕೆಯನ್ನೂ ತಿಳಿಸಹತ್ತಿದ್ದನು. ಅಷ್ಟರಲ್ಲಿ ಆ ನಾವಲಿಗನ ಮಗನೊಬ್ಬನು ಹೊರಗಿನಿಂದ ಬಂದು, ಪಿತನೇ! ನಮ್ಮ ಬಾಗಿಲಮುಂದೆ ಒಬ್ಬ ಕರ್ಮಚಾರಿಯು ಕುಳಿತುಕೊಂಡಿದ್ದಾನೆ ಎಂದು ಹೇಳಿದನು, ಈ ಮಾತು ಕಿವಿಗೆ ಬಿದ್ದಕೂಡಲೇ ಅವನ ಎದೆಯೊಡೆದು ನೀರಾಯಿತು. ಕೆಟ್ಟೆನು ಆ ಕರ್ಮಚಾರಿಯನ್ನು ಬೀರಬಲನೇ ಕಳುಹಿಸಿಕೊಟ್ಟಿದ್ದಾನೆ, ಇನ್ನುಮಾತ್ರ ನನ್ನ ಜೀವವು ಉಳಿಯುವದಿಲ್ಲ ಎಂದು ಗಟ್ಟಿಯಾಗಿ ಕೂಗಿಬಿಟ್ಟನು, ಆಗ ಅವನ ಸ್ತ್ರೀಯು ಅಂಜಬೇಡಿರಿ, ಬೀರಬಲನುಹೋಗಿ ತಿರುಗಿಬರಲಿಲ್ಲವೇ, ಅದರಂತೇ ನೀವಾದರೂ ಬಂದೇಬರುತ್ತೀರಿ, ಧೈರ್ಯಹಿಡಿಯಿರಿ; ಎಂದು ಹೇಳಿದಳು. ಅದಕ್ಕೆ ನಾವಲಿಗನು ಆವನಮೇಲೆ ಜಗನ್ನಿಯಂತನ ಕೃಪಾಛತ್ರವದೆ ಅದರಿಂದಲೇ ಅವನು ಮರಳಿಬಂದನು, ನಾನು ನಿಶ್ಚಯವಾಗಿ ಮೃತ್ಯುವಿನಬಾಯಿಗೆ ತುತ್ತಾದೆನು, “ ಮಾಡಿದ್ದು ಉಣ್ಣೋ ಮಹಾರಾಯಾ ,, ಎಂಬ ಸಾಮತಿಯಂತೆ ನನಗೇ ಆಮಾತು ನಿದರ್ಶನಕ್ಕೆಬಂತು. ನಾನುತೋಡಿದ ತಗ್ಗಿನಲ್ಲಿ ನಾನೇಬಿದ್ದೆನು ಉಪಾಯವಿಲ್ಲ! ಎಂದು ಹಳಹಳಿಸಹತ್ತಿದನು, ಎಂಟು ದಿವಸಗಳ ಅವಧಿಯು ಪೂರ್ಣವಾಯಿತು ಬಾದಶಹನಕಡೆಯಿಂದ ಒಬ್ಬ ಕರ್ಮಚಾರಿಯು ಕರೆಯಲಿಕ್ಕೆ ಬಂದನು, ನಾವಲಿಗನು ತನ್ನಸಾಮಗ್ರಿಗಳನ್ನೆಲ್ಲಾ ತೆಗೆದುಕೊಂಡು ಬಾದಶಹನ ಎದುರಿಗೆ ಬಂದು ನಿಂತುಕೊಂಡನು ಬಾದಶಹನು ಆ ಕೂಡಲೆ ಬೀರಬಲನಿಗೆ ಅಪ್ಪಣೆಮಾಡಲು, ಅವನು ನಾವಲಿಗನನ್ನು ಸ್ಮಶಾನಕ್ಕೆ ಕರೆದುಕೊಂಡುಹೋಗಿ ಅವನನ್ನು ಕುಳ್ಳಿರಿಸಿ ಅವನಸುತ್ತಲೂ ಉರುವಲಗಳಿಂದ ಚಿತೆಯನ್ನು ರಚನೆಮಾಡಿಸಿ ಅಗ್ನಿಯನ್ನು ಹಚ್ಚಿಸಿಬಿಟ್ಟನು, ನೋಡನೋಡುವದರೊಳಗೆ ನಾವಲಿಗನ ದೇಹವು ಭಸ್ಮೀಭೂತವಾಗಿ ಹೋಗಿಬಿಟ್ಟಿತು,

ಈ ಪ್ರಕಾರ ಬೀರಬಲನು ತನ್ನ ಚಾತುರ್ಯದಿಂದಲೇ ತನ್ನಶತ್ರುವನ್ನು ನಿರ್ನಾಮಮಾಡಿ ಸುಖದಿಂದ ಇರಹತ್ತಿದನು ಒಂದು ಕೈಯಿಂದ ಕರ್ಮಮಾಡಬೇಕು ಮತ್ತೊಂದು ಕೈಯಿಂದ ಅದರ ಫಲವನ್ನು ಭಕ್ಷಿಸಬೇಕು ಎಂಬ ನೀತಿ ವಚನದ ಕಡೆಗೆ ಎಳ್ಳಷ್ಟಾದರೂ ಲಕ್ಷ್ಯಕೊಡದೆ, ಎಷ್ಟೋಜನರು ತಾವೇ ಶ್ರೇಷ್ಠರೆಂದು ಹೆಮ್ಮೆ ಕೊಚ್ಚಿ ಕೊಳ್ಳುತ್ತಾರೆ ಇದುಸರಿಯಲ್ಲ ಸೇರಿಗೆ ಸವ್ವಾಸೇರು ಇದ್ದೇ ಇರುವದು. ... ... *

೧೭೨. ಮೂರ್ಖನೊಡನೆ ಕೆಲಸವು ಉಂಟಾದರೆ ಏನು ಮಾಡಬೇಕು? ಸುಮ್ಮ ನಿರಬೇಕು.

ಅಕಬರ ಬೀರಬಲ್ಲರ ನಡುವೆ ದಿವಸ ದಿವಸಕ್ಕೆ ಪ್ರೀತಿಯು ಹೆಚ್ಚುತ್ತ ನಡೆದಿತ್ತು ಪರಸ್ಪರರಲ್ಲಿ ಯಾವಾಗಲೂ ವಿನೋದಗಳು ನಡೆದೇ ಇರುತ್ತಿದ್ದವು, ಹೀಗಿರಲು ಒಂದಾನೊಂದು ದಿವಸ ಮಕ್ಕಾಯಾತ್ರೆಗೆ ಹೋಗಿದ್ದ ಬಾದಶಹನ ಗುರುವು ಇಲ್ಲಿಗೆ ಬಂದನು ಬಾದಶಹನು ಅವನ ಆದರ ಸತ್ಕಾರವನ್ನು ಮಾಡಿ, ಅಪ್ಪಣೆಕೊಡುವ ಸಮಯದಲ್ಲಿ ಗುರುವಿಗೆ ಅನೇಕ ವಿಧವಾದ ವಸ್ತ್ರಗಳನ್ನು ಧನ, ಕನಕ, ವಸ್ತು ವಾಹನಗಳನ್ನೂ ಇತ್ತು, ಸನ್ಮಾನ ಮಾಡಿದನು ಗುರುವು ಹೋಗಿ ಕೆಲವುದಿವಸಗಳಾದ ಮೇಲೆ ಬಾದಶಹನು-ಬೀರಬಲ್ಲ ! ನಮ್ಮ ಗುರುಗಳು ಬಂದಿದ್ದರಲ್ಲಾ ! ಅದರಂತೆ ನಿನ್ನ ಗುರುಗಳು ಬಂದದ್ದನ್ನು ನಾನು ಕಂಡಿಯೇ ಇಲ್ಲವಲ್ಲಾ ! ನಿನಗೆ ಗುರುಗಳು ಇರುವರೇನು? ಇದ್ದರೆ ಅವರ ವಾಸಸ್ಥಳವು ಎಲ್ಲಿ ? ಎಂದು ಪ್ರಶ್ನೆಮಾಡಿದನು.

ಬೀರಬಲ—ಪೃಥ್ವೀನಾಥ ನನಗೆ ಅನೇಕಮಂದಿ ಗುರುಗಳಿರುವರು ಆದರೆ ಅವರ ವಾಸಸ್ಥಳಗಳು ಈ ನಮ್ಮ ದಿಲ್ಲಿಯಿಂದ ಬಹು ದೂರದಲ್ಲಿರುವವು ಆದರಿಂದ ಅವರು ನಿಮ್ಮ ದೃಷ್ಟಿಗೆ ಬಿದ್ದಿಲ್ಲ; ಇನ್ನು ಕಿಂಚಿತ್ ಕಾಲದೊಳಗಾಗಿ, ಒಬ್ಬ ಗುರುಗಳು ಬರತಕ್ಕವರಿದ್ದಾರೆಂದು ಕೇಳಿದ್ದೇನೆ ಅವರು ಈಗ ಸದ್ಯಕ್ಕೆ ಎಲ್ಲಿರುವರೋ ವಿದಿತವಿಲ್ಲ; ಅವರು ಒಳ್ಳೇ ನಿಸ್ಪೃಹರಾಗಿರುವರೆಂಬ ವಾರ್ತೆಯೂ ಇರುವದು ಬಡವನಾದ ನನ್ನ ಮನೆಗೆ ದಯಮಾಡಿಸುವರೋ ಇಲ್ಲವೋ, ಯಾರಿಗೆ ಗೊತ್ತು ! ಒಂದುವೇಳೆ ಬಂದರೆ, ತಮಗೆ ಅವರ ದರ್ಶನ ಮಾಡಿಸುತ್ತೇನೆ.

ಬಾದಶಹ—ಹೀಗಿದ್ದಮೇಲೆ ಅವರ ದರ್ಶನವನ್ನು ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕು. ಆದಷ್ಟು ತೀವ್ರವಾಗಿ ಅವರು ಇಲ್ಲಿಗೆ ಬರುವಂತೆ ಮಾಡು. ... ... *

ಬೀರಬಲ—ನಿಮ್ಮ ಮನಸಿನಲ್ಲಿ ಅಷ್ಟು ಆತುರವಿದ್ದರೆ, ಶೋಧಮಾಡಿ ಕರೆಕಳುಹುತ್ತೇನೆ. ... ... *

ಬಾದಶಹ—ನಿನ್ನಿಂದ ಸಾಧ್ಯವಾದಷ್ಟು ತ್ವರೆ ಮಾಡು.

ಬಾದಶಹನ ಆಜ್ಞೆಯನ್ನು ಶಿರಸಾವಹಿಸಿ, ಬೀರಬಲನು ತನ್ನ ಗೃಹಕ್ಕೆ ನಡೆದನು. ಮಾರ್ಗದಲ್ಲಿ ಒಬ್ಬ ಕಾಷ್ಟವಿಕ್ರಯಿಯು ಅವನಿಗೆ ಬೆಟ್ಟಿಯಾದನು. ಅವನತಲೆಯಮೇಲೆ ಕಾಷ್ಟಭಾರವಿತ್ತು ಯಾರೂ ತೆಗೆದುಕೊಂಡಿದ್ದಿಲ್ಲ ತಿರುಗಿ ತಿರುಗಿ ಬೇಸತ್ತು ಹೋಗಿದ್ದನು ಬೀರಬಲನು ಅವನ

ಹತ್ತಿರಹೋಗಿ, ಅವನು ಹೇಳಿದಷ್ಟು ಬೆಲೆಯನ್ನು ಕೊಡುವದಕ್ಕೆ ಒಪ್ಪಿಕೊಂಡು, ಅವನನ್ನು ತನ್ನ ಮನೆಗೆ ಕರೆದುಕೊಂಡ ಬಂದನು ಆಮೇಲೆ ಅವನಿಗೆ ಮೂಲ್ಯವನ್ನಿತ್ತು- ಎಲೈ ಕಾಷ್ಟವಾಹಕನೇ! ನಿನ್ನ ಮುಖಚರ್ಯೆಯನ್ನು ನೋಡಿದರೆ ಪ್ರತಿಷ್ಟಿತ ಮನುಷ್ಯನಹಾಗೆ ಕಾಣಿಸುತ್ತೀ ಇರಲಿ ನಿನ್ನ ಕಡೆಯಿಂದ ನನ್ನದೊಂದು ಕಾರ್ಯವಾಗಬೇಕಾಗಿದೆ ನೀನು ಆ ಕಾರ್ಯವನ್ನು ನಿರ್ವಹಿಸಿಕೊಟ್ಟರೆ ನಿನಗೆ ಐವತ್ತು ರೂಪಾಯಿಗಳನ್ನು ಕೊಡುವೆನು, ಎಂದನು ಆಗ ಕಾಷ್ಟವಿಕ್ರಯಿಯು ಮನಸ್ಸಿನಲ್ಲಿ ಯೋಚಿಸಿದ್ದೇನಂದರೆ- " ಇವನು ಈ ನಮ್ಮ ಪಟ್ಟಣದಲ್ಲಿ ಪ್ರತಿಷ್ಟಿತವಾದ ಅಮಾತ್ಯನಾಗಿದ್ದಾನೆ ಇವನು ಹೇಳಿದ ಮಾತನ್ನು ನಾನು ಕೇಳದಿದ್ದರೆ, ಕೋಪಗೊಂಡಾನು! ಇದು ಸರಿಯಲ್ಲ ಇದಲ್ಲದೆ ಐವತ್ತು ರೂಪಾಯಿಗಳನ್ನು ಕೊಡುತ್ತೇನೆಂದು ಹೇಳುತ್ತಾನೆ ಅಂದಮೇಲೆ ಇವನು ಹೇಳಿದ ಕಾರ್ಯವನ್ನು ನಿರ್ವಹಿಸಲಿಕ್ಕೆ ಆತಂಕವೇನು? ಎಂದು ನಿಶ್ಚಯಿಸಿಕೊಂಡು ಬೀರಬಲನನ್ನು ಕುರಿತು - ತಮ್ಮ ಅಪ್ಪಣೆಯ ಮೇರೆಗೆ ನಡೆದುಕೊಳ್ಳಲು ಸಿದ್ಧನಿದ್ದೇನೆ, ಎಂದು ಹೇಳಿದನು ಆಗ ಬೀರಬಲನು - ಈಗ ನಾನು ಕೊಡುವ ಬಟ್ಟೆಗಳನ್ನು ಧಾರಣ ಮಾಡಿಕೊಂಡು ಹನುಮಂತ ದೇವರ ದೇವಾಲಯದಲ್ಲಿ ಹೋಗಿ ಕುಳಿತುಕೋ ಆಮೇಲೆ ಜಪಮಾಲೆಯನ್ನು ಹಸ್ತದಲ್ಲಿ ಧಾರಣ ಮಾಡಿಕೊಂಡು, ಧ್ಯಾನಸ್ಥನಂತೆ ಮೌನವಾಗಿ ಕುಳಿತುಕೊ ಯಾರು ಮಾತಾಡಿಸಿದರೂ ಮಾತಾಡಬೇಡ ಪ್ರತ್ಯಕ್ಷ ಬಾದಶಹನು ಬಂದು ಮಾತನಾಡಿಸಿದರೂ ಸಹ ಮಾತನಾಡಕೂಡದು ಅವನು ಏನಾದರೂ ಧನ ಕನಕಗಳನ್ನು ಕಾಣಿಕೆಯಾಗಿ ಸಮರ್ಪಿಸಿದರೂ ಕಣ್ಣೆತ್ತಿ ನೋಡಬಾರದು ನೀನು ಕೇವಲ ಧ್ಯಾನದಲ್ಲಿಯೇ ಮಗ್ನನಾಗಿರಬೇಕು ನಾನು ನಿನ್ನ ಕೃತ್ಯಗಳೆಲ್ಲವನ್ನೂ ನೋಡುತ್ತಿರುತ್ತೇನೆ ಅದರಲ್ಲಿ ಕಿಂಚಿತ್ ನ್ಯೂನಾಧಿಕ್ಯವು ಕಂಡು ಬಂದರೆ ನಿನ್ನ ತಲೆಯು ಉಳಿಯಲಾರದು ಎಂದು ಹೇಳಿ, ಅವನ ಸರ್ವಾಂಗಕ್ಕೆಲ್ಲ ವಿಭೂತಿಯನ್ನು ಬೊಳಿದು, ಕೌಪೀನವನ್ನು ಧಾರಣಮಾಡಿಸಿ, ಶಿರಸ್ಸಿನ ಮೇಲೆ ಕೃತ್ರಿಮ ಜಡೆಯನ್ನು ನಿರ್ಮಾಣಮಾಡಿ, ಒಂದು ಜಪಮಾಲೆಯನ್ನೂ, ಒಂದು ಮೃಗಚರ್ಮವನ್ನೂ ಕೊಟ್ಟು, ಶ್ರೀ ಮಾರುತಿಯ ದೇವಾಲಯದಲ್ಲಿ ಕುಳ್ಳಿರಿಸಿ, ಬಹಳ ಜಾಗ್ರತೆಯಿಂದ ವರ್ತನಮಾಡು! ಎಂದು ಸಾರಿ ಸಾರಿ ಹೇಳಿ ಬಾದಶಹನ ಬಳಿಗೆ ಬಂದನು. ಆಗ ಸಭೆಯಲ್ಲಿ ಸರದಾರರೂ, ಮಾನಕರಿಗಳೂ ಮಂಡಲೀಕರೂ, ಮೊದಲಾದವರು ಅನೇಕ ಜನರು ಕೂಡಿದ್ದರು ಬೀರಬಲನು ಸಭಾಸ್ಥಾನವನ್ನು ಪ್ರವೇಶಿಸಿ - ಪೃಥ್ವೀನಾಥ! ನಮ್ಮ ಗುರುಗಳು ಈ ದಿವ

ಸ ಪ್ರಾತಃಕಾಲದಲ್ಲಿ ಅಕಸ್ಮಾತ್ತಾಗಿ ಬಂದುಬಿಟ್ಟಿದ್ದಾರೆ ನನಗೆ ಅವರ ದರುಶನವಾಯಿತು ನಾನು ನಿಮ್ಮ ಸಂಗತಿಯನ್ನು ಅರುಹಲು, ಅವರು ಸಂತೋಷದಿಂದ ಒಪ್ಪಿಕೊಂಡಿದ್ದಾರೆ ಬೇಕಾದಾಗ ತಾವು ದರುಶನಕ್ಕೆ ಹೋಗಬಹುದು ಆದರೆ ನಿಮ್ಮ ಸಂಗಡ ನನಗೆಮಾತ್ರ ಬರಬೇಡವೆಂದು ಅಪ್ಪಣೆಮಾಡಿದ್ದಾರೆ ನಾನು ಅವರ ಆಜ್ಞೋಲ್ಲಂಘನಮಾಡಿ ಒಂದುವೇಳೆ ನಿಮ್ಮೊಡನೆಬಂದರೆ ಶಾಪವನ್ನು ಕೊಟ್ಟಾರು! ಎಂದು ನಿವೇದನ ಮಾಡಿದನು. ಅದಕ್ಕೆ ಬಾದಶಹನು - ಒಳ್ಳೇದು; ಹಾಗೇ ಆಗಲಿ! ಅವರು ಎಲ್ಲಿ ವಾಸಮಾಡಿದ್ದಾರೆ? ಎಂದು ಕೇಳಿದನು ಆಕೂಡಲೆ ಬೀರಬಲನು ಪ್ರತ್ಯುತ್ತರವಾಗಿ - ಗುರುಗಳು ನನ್ನ ಗೃಹದಿಂದ ಕಿಂಚಿತ್ ಅಂತರದಮೇಲೆ ಇರುವ ಮಾರುತಿಯ ದೇವಾಲಯದಲ್ಲಿ ಇಳಿದು ಕೊಂಡಿದ್ದಾರೆ ಬೇಕಾದರೆ ತಾವು ಹೋಗಿ ದರುಶನ ತೆಗೆದುಕೊಂಡು ಬರಬೇಕು. ಎಂದು ವಿಜ್ಞಾಪನೆ ಮಾಡಿಕೊಂಡನು.

ಆ ಮೇಲೆ ಬಾದಶಹನು ತನ್ನ ಸಂಗಡ ಅನೇಕಜನ ಪ್ರತಿಷ್ಠಿತ ಸರದಾರರನ್ನು ಕರೆದುಕೊಂಡು, ಮಾರುತಿಯ ದೇವಾಲಯಕ್ಕೆ ಹೋದನು. ಅಲ್ಲಿ ಭಸ್ಮೋದ್ಧೂಳಿತ ಗಾತ್ರನಾದ ಒಬ್ಬ ಬೈರಾಗಿಯು ಕಣ್ಣುಮುಚ್ಚಿಕೊಂಡು ಜಪಮಾಲಿಯನ್ನು ತಿರುಗಿಸುತ್ತ ಧ್ಯಾನಸ್ಥನಾಗಿ ಕುಳಿತು ಕೊಂಡಿದ್ದನು. ಬಾದಶಹನು ತನ್ನ ಅನುಯಾಯಿಗಳೊಡನೆ ಪ್ರಣಾಮ ಮಾಡಿದನು. ಕಣ್ದೆರೆದು ನೋಡಲಿಲ್ಲ ಬಾದಶಹನು ಅವನ ಮುಂದೆ ಕುಳಿತುಕೊಂಡು ಸ್ತುತಿಸ ಹತ್ತಿದನು. ಆದರೂ ಮಾತನಾಡಲಿಲ್ಲ ಕಡೆಗೆ ಬಾದಶಹನು- " ಮಹಾರಾಜ ! ಗುರುವರ್ಯರೇ ತಾವು ವಾಸಮಾಡುತ್ತಿರುವ ಸ್ಥಳವ್ಯಾವದು ? ತಮ್ಮ ನಾಮಧೇಯವೇನು ! ಕೃಪೆಮಾಡಿ ತಿಳಿಸಿದರೆ ದಾಸನಮೇಲೆ ಕರುಣಿಸಿದಂತಾಗುತ್ತದೆ. ಎಂದು ಬಿನ್ನಹ ಮಾಡಿಕೊಂಡನು. ಆದರೆ ಸ್ವಾಮಿಯು ತನ್ನ ಜಪಮಾಲೆಯನ್ನು ತಿರುಗಿಸುವದನ್ನು ಬಿಡಲಿಲ್ಲ, ಮುಂದೆ ಕಿಂಚಿತ್ ಹೊತ್ತಾದಮೇಲೆ ಬಾದಶಹನು ಪುನಃ- " ಮಹಾರಾಜ ! ನಾನು ಈಸಮಗ್ರಭರತ ಖಂಡದ ರಾಜಾಧಿರಾಜನಿದ್ದೇನೆ. ನನ್ನೊಡನೆ ಎರಡು ಶಬ್ದಗಳನ್ನಾದರೂ ಮಾತಾಡಿರಿ. ನಿಮ್ಮ ಮನೋಬಯಕೆಯನ್ನು ಪೂರ್ಣಮಾಡಲು ಸಮರ್ಥನಿದ್ದೇನೆ. ಎಂದು ಹೇಳಿದನು. ಸ್ವಾಮಿಯು ಮೌನವನ್ನು ಬಿಡಲಿಲ್ಲ ಆಮೇಲೆ ಬಾದಶಹನು ಒಂದು ಲಕ್ಷರೂಪಾಯಿಗಳ ರಾಸಿಯನ್ನು ಅವನ ಮುಂದೆ ಹಾಕಿಸಿ ಮಹಾರಾಜ ! ತಾವು ಮಾತಾಡದಿದ್ದರೂ ಚಿಂತೆ ಇಲ್ಲ ಈ ಒಂದು ಲಕ್ಷರೂಪಾಯಿಗಳನ್ನು ತಮ್ಮ ಪಾದಕ್ಕೆ ಸಮರ್ಪಿಸಿದ್ದೇನೆ. ಸ್ವೀಕರಿಸಿ ನನಗೆ ಶುಭಾಶೀರ್ವಾದವನ್ನು ಮಾಡಬೇಕು, ಎಂದನು. ಗುರುವು ಕಣ್ದೆ

ರೆದು ನಹನೋಡಲಿಲ್ಲ ಇಷ್ಟೆಲ್ಲ ಆದಮೇಲೆ ಬಾದಶಹನಿಗೆ ಕೋಪವು ಉಂಟಾಯಿತು ಕೂಡಲೆ ಅಲ್ಲಿಂದ ಎದ್ದು, " ಇವನು ಕೇವಲ ಮೂರ್ಖನಿದ್ದಂತೆ. ಕಂಡು ಬರುತ್ತದೆ ಇವನೊಡನೆ ತಲೆಯೊಡಕೊಂಡರೆ ಏನೂ ಪ್ರಯೋಜನವಿಲ್ಲ " ಎಂದು ತಿಳಿದುಕೊಂಡು ಆ ರೂಪಾಯಿಗಳನ್ನು ಬೀರಬಲನ ಮನೆಗೆ ಕಳುಹಿಸಿ, ತನ್ನರಮನೆಗೆ ಹೊರಟು ಬಂದನು ಮರುದಿವಸ ರಾಜಕಾರ್ಯಗಳೆಲ್ಲ ನಿವೃತ್ತಿಯಾದಮೇಲೆ ಬೀರಬಲನೊಡನೆ ಏಕಾಂತದಲ್ಲಿ ಕುಳಿತುಕೊಂಡು ಮಾತು ಕಥೆಗಳನ್ನಾಡುತ್ತ ಬಾದಶಹನು ಬೀರಬಲ್ಲನನ್ನು ಕುರಿತು,- ಬೀರಬಲ್ಲ ! ಪ್ರಸಂಗವಶಾತ್ ಮೂರ್ಖನೊಡನೆಕೆಲಸವು ಉಂಟಾದರೆ ಯೇನು ಮಾಡಬೇಕು ? ಎಂದು ಪ್ರಶ್ನೆಮಾಡಿದನು. ಆಕ್ಷಣದಲ್ಲಿಯೇ ಬೀರಬಲನು ಸುಮ್ಮನಿರಬೇಕು, ಎಂದು ಉತ್ತರಕೊಟ್ಟನು. ಅದನ್ನು ಕೇಳಿ ಬಾದಶಹನಿಗೆ ಪರಮಾಶ್ಚರ್ಯವಾಯಿತು ತನ್ನ ಮನಸ್ಸಿನಲ್ಲಿ ತಾನೇ ಸುಮ್ಮನಿರಬೇಕು ಎಂದು ಉತ್ತರಕೊಟ್ಟನು. ಅದನ್ನು ಕೇಳಿ ಬಾದಶಹನಿಗೆ ಪರಮಾಶ್ಚರ್ಯವಾಯಿತು, ತನ್ನ ಮನಸ್ಸಿನಲ್ಲಿ ತಾನೇ " ನಾನು ಈ ಪ್ರಶ್ನೆಯನ್ನು ಮಾಡಿ, ಬೀರಬಲನೇ ನಿನ್ನ ಗುರುವು ಶುದ್ಧಮೂರ್ಖನಿರುವನೆಂದು ಹೇಳಬೇಕೆಂದು ಮಾಡಿದ್ದೆನು ಆದರೆ ಬೀರಬಲನು ನನ್ನನ್ನೆ ಮೂರ್ಖನನ್ನಾಗಿ ಮಾಡಿ ಬಿಟ್ಟನು ನಾನು ಆ ಗುರುವನ್ನು ಮಾತಾಡಿಸಬೇಕೆಂದು ಅತಿಸಾಹಸಪಟ್ಟನು. ಕಡೆಗೆ ದ್ರವ್ಯದಾಶೆಯನ್ನೂ ತೋರಿಸಿದನು. ಆದರೆ ಅವನು ಧನವನ್ನು ವ್ಯತ್ತಿಕಾಸ ಮಾನವೆಂದು ತಿಳಿದು ಲಕ್ಷ್ಯಕ್ಕೇ ತಂದುಕೊಳ್ಳಲಿಲ್ಲ ನನ್ನನ್ನೇ ಮೂರ್ಖನನ್ನಾಗಿ ಮಾಡಿಕುಳ್ಳಿರಿಸಿ ಬಿಟ್ಟನು. ಇನ್ನು ಮೇಲೆ ಎಂದಾದರೂ ಮಹಾತ್ಮರ ದರುಶನಕ್ಕೆ ಹೋದರೆ ನಮ್ರತೆಯಿಂದ ಆಚರಿಸುವೆನು. ಎಂದು ನಿಶ್ಚಯಿಸಿಕೊಂಡು ಬೀರಬಲನನ್ನು, ಗುರುವಿನ ಹತ್ತರ ಕ್ಷಮಾಯಾಚನೆಯನ್ನು ನನ್ನ ಸಲುವಾಗಿ ಕೇಳಿಕೊಂಡು ಬಾ ; ಎಂದು ಹೇಳಿ ಕಳುಹಿಸಿಕೊಟ್ಟನು. ಆ ಕೂಡಲೆ ಬೀರಬಲನು ಮಾರುತಿಯ ದೇವಾಲಯಕ್ಕೆಬಂದು ಅಂಧಕಾರ ವ್ಯಾಪ್ತವಾಗಿ. ಜನಸಮ್ಮರ್ದವು ಕಡಿಮೆಯಾಗುವ ತನಕ ಕುಳಿತುಕೊಂಡು ಆ ಮೇಲೆ ಗುರುವನ್ನು ಕರೆದುಕೊಂಡು ತನ್ನ ಗೃಹಕ್ಕೆಹೋಗಿ ಒಂದು ಶಾಲನ್ನೂ ಒಂದು ನೂರುರೂಪಾಯಿಗಳನ್ನೂ ಕೃತ್ರಿಮಗುರುವಿಗೆ ಕೊಟ್ಟು ಕಳುಹಿಸಿಕೊಟ್ಟನು ಈ ಸಂಗತಿಯನ್ನು ಎಂದೂ ಪ್ರಕಟಿಸಕೂಡದೆಂದು ಅಪ್ಪಣೆ ಮಾಡಿದನು ಆ ಕಾಷ್ಟವಿಕ್ರಯಿಯು ಅಷ್ಟು ರೂಪಾಯಿಗಳನ್ನು ಎಂದೂ ನೋಡಿದ್ದಿಲ್ಲ. ಅದರಿಂದ ಹರುಷಿತನಾಗಿ ಬೀರಬಲನ ಪಾದಗಳಿಗೆ ನಮಸ್ಕರಿಸಿ ಹೊರಟು ಹೋದನು.

—(೧೭೩, ತಾನಸೇನ ಮತ್ತು ಬೀರಬಲರ ಪರೀಕ್ಷೆ,)—

ದಿಲ್ಲಿಯಲ್ಲಿ ತಾನಸೇನ ನೆಂಬ ಒಬ್ಬ ಪ್ರಖ್ಯಾತನಾದ ಗಾಯನ ಪಂಡಿತನು ಇದ್ದನು. ಆ ಕಾಲದಲ್ಲಿ ಅವನನ್ನು ಎದುರಿಸುವವರು ಯಾರೂ ಇದ್ದಿಲ್ಲ ದೂರದೂರಿಂದ ಗಾಯಕರೂ ರಾಜರೂ ಶ್ರೀಮಂತರೂ ಮೊದಲಾದವರು ದಿಲ್ಲಿಗೆ ಬಂದು ತಾನಸೇನನ ಗಾಯನಾಮೃತವನ್ನು ಪಾನಮಾಡಿ ಸಂತುಷ್ಟರಾಗಿ ಹೋಗುತ್ತಿದ್ದರು. ಅವನು ಮುಸಲ್ಮಾನ ಧರ್ಮದವನಾದ್ದರಿಂದ ಮುಸಲ್ಮಾನರಲ್ಲೆಲ್ಲ ಅವನ ಪ್ರತಿಷ್ಟೆಯು ಬೆಳೆದು ಹೋಗಿತ್ತು ಮುಲ್ಮಾನ ಸರದಾರರೂ ಮುತ್ಸದ್ದಿಗಳೂ ಪ್ರತಿಯೊಂದು ಪ್ರಸಂಗದಲ್ಲಿ ಅವನ ಹೆಸರನ್ನೇ ಮುಂದಕ್ಕೆ ತರುತ್ತಿದ್ದನು ತಾನಸೇನನಿಗಿಂತ ಬೀರಬಲನ ಹೆಚ್ಚಳವು ಬಾದಶಹನ ಬಳಿಯಲ್ಲಿ ಅಧಿಕವಾಗಿರುವದನ್ನು ನೋಡಿ, ಮುಸಲ್ಮಾನರಿಗೆ ಸಹನವಾಗುತ್ತಿದ್ದಿಲ್ಲ. ಈತರದಸ್ಥಿತಿಯಿರಲು ಒಂದು ದಿವಸ ಯಾವದೋ ಒಂದು ಕಾರ್ಯಾಂತರದಿಂದ, ಮುಸಲ್ಮಾನರು, ತಾನಸೇನನನ್ನು ಬಹುಪರಿಯಾಗಿ, ಬಾದಶಹನ ಮುಂದೆ ಶ್ಲಾಘನೆ ಮಾಡಿದರು. ಅದು ಬಾದಶಹನಿಗೆ ಸಹನವಾಗಲಿಲ್ಲ ಕಡೆಗೆ ಅವರೆಲ್ಲರನ್ನು ಕುರಿತು ನೀನು ತಾನಸೇನನನ್ನು ಬಹುಪರಿಯಾಗಿ ವರ್ಣಿಸುವಿರಿ ಅವನು ತನ್ನ ವಿದ್ಯೆಯಲ್ಲಿ ಅದ್ವಿತೀಯ ಪಂಡಿತನಿರುವನು ಇದುನಿಜ, ಆದರೆ ಅವನಿಂದ ಬೀರಬಲನನ್ನು ಸರಿಗಟ್ಟುವದಸಾಧ್ಯವು, ಅವನು ಬೀರಬಲನ ಪಾಸಂಗಕ್ಕೆಸಹ ಹತ್ತಲಾರನು.

ಬಾದಶಹನ ಈ ವಾಕ್ಯವನ್ನು ಕೇಳಿ, ಆ ಜನರೆಲ್ಲರೂ ಆ ಕಾಲಕ್ಕೆ ಸುಮ್ಮನಾದರು. ಆಮೇಲೆ ಓಲಗವು ವಿಸರ್ಜನೆಯಾದ ಬಳಿಕ ಎಲ್ಲರೂ ಒಬ್ಬ ಸರದಾರನ ಗೃಹದಲ್ಲಿ ಏಕತ್ರರಾಗಿ ಆಸ್ಥಾನವನ್ನು ಬಹುರಮಣೀಯವಾಗಿ ತೋರುವಂತೆ ಸಿಂಗರಿಸಿ ಬಾದಶಹನ ಸಲುವಾಗಿ ಒಂದು ಉಚ್ಚಸ್ಥಾನವಂನು ಸಿದ್ಧಮಾಡಿ ಇಟ್ಟು ತಾನಸೇನ ನನ್ನು ಕರೆಯಿಸಿಕೊಂಡರು, ಅವನು ಬಂದಮೇಲೆ ಬಾದಶಹನನ್ನು ಕರೆಯಹೋದರು, ಬಾದಶಹನು ಆಸ್ಥಾನಕ್ಕೆ ಬರುವದರೊಳಗಾಗಿ ಅಂಧಕಾರವಾಗಿ ಹೋಯಿತು ಅವನು ಆ ಸಭಾಮಂದಿರವನ್ನು ಪ್ರವೇಶಿಸಲು ತಾನಸೇನನು ದೀಪರಾಗವನ್ನು ಮಾಡಹತ್ತಿದನು. ಆ ಕೂಡಲೆ ಅಲ್ಲಿದ್ದ ದೀಪಸ್ತಂಭಗಳಲ್ಲಿ ತಮ್ಮಷ್ಟಕ್ಕೆತಾವೇ ದೀಪಗಳುಹತ್ತಿ ಗೃಹವೆಲ್ಲ ಪ್ರಕಾಶಮಯವಾಯಿತು, ಉಷ್ಣಕಾಲವಿದ್ದದರಿಂದ ಎಲ್ಲರ ಮೈಮೇಲೆ ಬೆವರೊಡೆಯ ಹತ್ತಿತು ಜನರು ಉಪವಸ್ತ್ರಗಳಿಂದ ಗಾಳಿಯನ್ನು ಹಾಕಿಕೊಳ್ಳ ಹತ್ತಿದರು. ಅದನ್ನು ಕಂಡು ತಾನಸೇನನು "ಮಲ್ಹಾರ" ವೆಂಬ ರಾಗವನ್ನುಮಾಡಿ ವೃಷ್ಟಿಯನ್ನುಂಟು ಮಾಡಿದನು ಈ ಅತ್ಯದ್ಭುತದ ಕೆಲ

ನಗಳನ್ನು ಬಾದಶಹನು ಆಶ್ಚರ್ಯಾನ್ವಿತನಾದನು. ಆ ಸಮಯದಲ್ಲಿ ಮ ಮತಾಜುದ್ದೀನ ನೆಂಬ ಪ್ರತಿಷ್ಟಿತ ಸರದಾರನು ಬದ್ಧಾಂಜಲಿಯುಕ್ತನಾಗಿ ಎದ್ದುನಿಂತು "ಜಹಾಂಪನಾಯೆ ? ಬೀರಬಲನಿಗಿಂತಲೂ ತಾನಸೇನನು ಅಧಿಕ ವಿದ್ವತ್ತೆಯುಳ್ಳವನೆಂದು ತಮಗೆ ಈಗ ತಿಳಿಯಬಂದೇ ಇದೆ, ಅದರಿಂದ ಬೀರಬಲನ ಕೆಲಸವನ್ನು ಇವನಿಗೆ ಕೊಡುವಿರೆಂದು ನಾವೆಲ್ಲರೂ ನಂಬಿದ್ದೇವೆ " ಎಂದನು. ಈ ಮಾತನ್ನು ಎಲ್ಲರೂ ಪುಷ್ಟೀಕರಿಸಿದರು, ಆಗ ಬಾದಶಹನು " ತಾನಸೇನನು ಬೀರಬಲನಿಗಿಂತಲೂ ಹೆಚ್ಚು ಯೋಗ್ಯತೆಯವನಿರುವನೆಂದು ನನ್ನ ಮನವರಿಕೆಯಾಗಿದೆ ಆದರೆ ಬೀರಬಲನ ಚಾತುರ್ಯವು ಅವನಿಗೆಬರಲಾರದು ಇದು ನಿಮ್ಮ ಮನಸ್ಸಿಗೆ ಸರಿದೋರದಿದ್ದರೆ ಕಿಂಚಿತ್ ದಿವಸಗಳಲ್ಲಿ ನಿಮಗೆ ಪ್ರತ್ಯಕ್ಷಮಾಡಿ ತೋರಿಸುತ್ತೇನೆ" ಎಂದು ಹೇಳಿದನು, ಮುಂದೆ ನಾಲ್ಕಾರುಮಾಸಗಳ ಅವಧಿಯನ್ನು ಬಿಟ್ಟು, ಬ್ರಹ್ಮದೇಶದ ರಾಜನಿಗೆ " ಈ ಪತ್ರವನ್ನು ತೆಗೆದುಕೊಂಡು ಬಂದವರಿರ್ವರಿಗೂ ಕ್ಷಣಸಹ ವಿಲಂಬಮಾಡದೆ ದೇಹಾಂತ ಶಿಕ್ಷೆಯನ್ನು ವಿಧಿಸಬೇಕು. " ಎಂಬ ಆಶಯಗರ್ಭಿತವಾದ ಒಂದು ಲೇಖನವನ್ನು ಬರೆದು ಒಂದುಚೀಲದಲ್ಲಿ ಹಾಕಿ, ಮೇಲೆ ಅರಗಿನಿಂದ ರಾಜಮುದ್ರೆಯನ್ನು ಒತ್ತಿ ಬೀರಬಲನನ್ನೂ ತಾನಸೇನನನ್ನೂ ಕರೆದು "ಬ್ರಹ್ಮದೇಶದ ರಾಜನಿಂದ ಒಂದು ಅತ್ಯಾವಶ್ಯಕವಾದ ಕಾರ್ಯವಾಗಬೇಕಾಗಿದೆ ನಿಮ್ಮಿಬ್ಬರ ಹೊರತು ಅನ್ಯರಿಂದ ಅದು ಸಾಧ್ಯವಾಗುವಂತೆ ಇಲ್ಲ, ನೀವು ಬೇಗನೇ ಹೊರಡುವ ಸಿದ್ಧತೆಯನ್ನು ಮಾಡಿರಿ, ನಾನು ಒಂದು ಪತ್ರವನ್ನು ಕೊಡುತ್ತೇನೆ ವಿಲಂಬಮಾಡಬೇಡಿರಿ" ಎಂದು ಅಪ್ಪಣೆಮಾಡಿ ತಾನು ಬರೆದಿಟ್ಟಪತ್ರವನ್ನು ಅವರವಶಕ್ಕೆ ಕೊಟ್ಟನು. ಆಗ ಅವರಿಬ್ಬರು ಒಳ್ಳೇದು ಎಂದು ಹೇಳಿ ಮನೆಗೆಬಂದರು. ಮನೆಗೆ ಬಂದಮೇಲೆ ಬೀರಬಲನು ತನ್ನ ಮನಸ್ಸಿನಲ್ಲಿ ಬ್ರಹ್ಮದೇಶದ ರಾಜನಬಳಿಯಲ್ಲಿ ಅತ್ಯಾವಶ್ಯಕವಾದ ಕೆಲಸವೇನಿದ್ದೀತು ಇದರಲ್ಲಿ ಏನೋ ಒಂದು ಮಹತ್ವದ ಕಾರ್ಯಭಾಗವಿರಬೇಕು. ಇಲ್ಲದಿದ್ದರೆ ಏನೋ ಒಂದು ಕಪಟ ಪ್ರಬಂಧವಿರಬೇಕು, ಇರಲಿ ಸಮಯವು ಬಂದೊದಗಿದಾಗ ನೋಡಿಕೊಂಡರೆ ತೀರಿತು ಎಂದು ನಿಶ್ಚಯಿಸಿ; ಪಯಣದ ಸನ್ನಾಹದಲ್ಲಿ ತೊಡಗಿದನು. ತಾನಸೇನನು ತನ್ನ ಮನದಲ್ಲಿ ಏನೋ ಒಂದು ಮಹತ್ವದರಾಜಕರಣ ಉಂಟಾದ್ದರಿಂದಲೇ ಬಾದಶಹನು ನಮ್ಮನ್ನು ಈ ಕೆಲಸಕ್ಕೆ ಕಳುಹುತ್ತಾನೆ ಈ ಕಾರಣದಿಂದಲಾದರೂ ದೇಶಸಂಚಾರದ ಸುಖವು ದೊರಕಿದಂತಾಯಿತು ಮತ್ತು ನನ್ನ ಗಾನವಿದ್ಯೆಯ ಬಲದಿಂದ ಆ ರಾಜನನ್ನು ಒಲಿಸಿಕೊಂಡು ಪಾರಿತೋಷಕವನ್ನು ಪಡೆಯಬಹುದು " ಎಂದು ಯೋಚಿಸಿ, ಮನೆಗೆ ಬಂದು

ಊಟ ಉಡಿಗೆಗಳನ್ನು ತೀರಿಸಿಕೊಂಡು ಶಯನಮಾಡಿದನು. ಮರು ದಿವಸ ಬೀರಬಲನ ಸೇವಕನೊಬ್ಬನು ತಾನಸೇನನ ಬಳಿಗೆಬಂದು "ಅಮಾತ್ಯರವರು ಪ್ರಯಾಣದ ಸನ್ನಾಹಗಳನ್ನೆಲ್ಲ ಮಾಡಿಕೊಂಡು ತಮ್ಮ ಮಾರ್ಗವನ್ನೇ ಪ್ರತೀಕ್ಷಿಸುತ್ತ ಕುಳಿತುಕೊಂಡಿದ್ದಾರೆ ನಡೆಯಬೇಕು" ಎಂದು ವಿಜ್ಞಾಪನೆಯನ್ನು ಮಾಡಿಕೊಂಡನು. ಕೂಡಲೆ ತಾನಸೇನನು ಬೀರಬಲನೆಡೆಗೆ ಬಂದನು. ಈರ್ವರೂ ವೇಗಶಾಲಿಗಳಾದ ಅಶ್ವಾರೋಹಣ ಮಾಡಿಕೊಂಡು, ಮಾರ್ಗವನ್ನು ಹಿಡಿದರು. ಪಯಣದ ಮೇಲೆ ಪಯಣ ಮಾಡುತ್ತ ಎಷ್ಟೋ ದಿವಸಗಳಾದಮೇಲೆ ಬ್ರಹ್ಮದೇಶದ ರಾಜಧಾನಿಯಸಾನ್ನಿಧ್ಯವನ್ನು ಸೇರಿದರು ಇವರು ರಾಜಧಾನಿಗೆ ತಲುಪಿದ ಕಾಲದಲ್ಲಿ ರಾತ್ರಿಯಾಗಿತ್ತು, ನಗರದಮಹಾದ್ವಾರವು ಮುಚ್ಚಲ್ಪಟ್ಟಿತ್ತು, ಅಲ್ಲಿ ಅವರಿಗೆ ಯಾರ ಪರಿಚಯವೂ ಇದ್ದಿಲ್ಲ, ರಾತ್ರಿಯಾದರೋ ಗಾಢಾಂಧಕಾರ ಕೋಟೆಯ ಹೊರಗೆ ಜನಸಂಚಾರವಿಲ್ಲ ಹೀಗಾಗಿ ಅವರಿಗೆ ಆಶ್ರಯಕ್ಕೆ ನಿರ್ಭಯವಾದ ಸ್ಥಳವು ಸಿಕ್ಕದೇಹೋಯಿತು ಅವರಿಬ್ಬರೂ ಪಗಡಿಯಪ್ರಕಾರ ಜಾಗರೂಕರಾಗಿದ್ದು ರಾತ್ರಿಯನ್ನು ಕಳೆಯಬೇಕೆಂದು ಯೋಚಿಸಿದರು. ಅಷ್ಟರಲ್ಲಿ ಕೋಟೆಯ ರಕ್ಷಕನೊಬ್ಬನು ಇವರನ್ನು ಕಂಡು "ನಿಮ್ಮ ಸ್ಥಿತಿಗತಿಯಮೇಲಿಂದ ನೋಡಿದರೆ ನೀವು ಪ್ರಯಾಣಸ್ಥರಂತೆ ತೋರುವಿರಿ, ಇಲ್ಲಿ ಸಿಂಹದಭಯವು ಬಹಳ ನನ್ನ ಕುಟೀರಕ್ಕೆಬಂದು ಇಳಿದುಕೊಳ್ಳಬೇಕು;" ಎಂದು ವಿಜ್ಞಾಪನೆ ಮಾಡಿಕೊಂಡನು. ಬೀರಬಲನು ಹಿಂದೆಮುಂದೆ ನೋಡಹತ್ತಿದನು, ಆದರೆ ಅವನು ಅತ್ಯಾಗ್ರಹ ಮಾಡಹತ್ತಿದ್ದರಿಂದ ತಮ್ಮ ತಮ್ಮ ಕುದುರೆಗಳನ್ನು ಹಿಡಿಕೊಂಡು ಅವನ ಬೆನ್ನ ಹಿಂದೆ ಹೊರಟರು ಅವನು ತನ್ನ ಮನೆಗೆ ಇವರನ್ನು ಕರೆದುಕೊಂಡು ಹೋಗಿ ಅಶ್ವಗಳನ್ನು ತನ್ನ ದನದಕೊಟ್ಟಿಗೆಯಲ್ಲಿ ಕಟ್ಟಿಸಿ ಪೃಥಕ್‌ಪೃಥಕ್ ಸ್ಥಾನಗಳನ್ನು ಮಲಗಲಿಕ್ಕೆ ತೋರಿಸಿದನು, ಇಬ್ಬರೂ ನಿಶ್ಚಿಂತೆಯಿಂದ ರಾತ್ರಿಯನ್ನು ಕಳೆದರು. ಪ್ರಾತಃಕಾಲವಾಗುತ್ತಲೇ ಸ್ನಾನ ಉಪಹಾರಾದಿಗಳನ್ನು ತೀರಿಸಿಕೊಂಡು ರಾಜಧಾನಿಯನ್ನು ಪ್ರವೇಶಿಸಿದರು. ಆ ನಗರವು ಒಳ್ಳೇ ಅಚ್ಚುಕಟ್ಟಾಗಿದ್ದು, ಇಂದ್ರನ ಅಮರಾವತಿಯಂತೆ ಕಂಗೊಳಿಸುತ್ತಿತ್ತು, ರಾಜನು ದಯಾಳುವಾಗಿದ್ದದರಿಂದ ಪ್ರಜೆಗಳೆಲ್ಲರೂ ಸುಖದಿಂದ ಕಾಲಹರಣ ಮಾಡುತ್ತಿದ್ದರು. ಇದನ್ನೆಲ್ಲಾ ಕಂಡು ಇವರಿಬ್ಬರೂ ಹರುಷಿತರಾಗಿಪಟ್ಟಣದ ಸೌಂದರ್ಯವನ್ನವಲೋಕಿಸುತ್ತಾ ರಾಜಪ್ರಾಸಾದದ ಹತ್ತರಬಂದರು. ಆಗ ಒಬ್ಬಪ್ರತಿಹಾರಿಯು ಮುಂದೆಬಂದು ಇವರಹೆಸರನ್ನು ವಾಸಸ್ಥಳವನ್ನು ಅಲ್ಲಿಗೆಬಂದಿರುವ ಉದ್ದೇಶವೇನೆಂಬದನ್ನು ತಿಳಿದುಕೊಂಡು

ವ್ನ ಅರಸನಿಗೆ ತಿಳಸಿದನು ಆಮೇಲೆ ರಾಜಾಜ್ಞೆಯಿಂದ ಇವರನ್ನು ಕರೆದುತ ಕೊಂಡುಹೋಗಿ ರಾಜನಸಮ್ಮುಖದಲ್ಲಿ ನಿಲ್ಲಿಸಿದನು ಅವನು ಇವರ ಮುಖವ ನ್ನೀಕ್ಷಿಸಿ ಕುಳಿತುಕೊಳ್ಳುವಂತ ಅಪ್ಪಣೆಮಾಡಿ ಆಗಮನದಕಾರಣವೇನೆಂದು ಪ್ರಶ್ನೆಮಾಡಿದನು ಬೀರಬಲನು ಬಾದಶಹನುಕೊಟ್ಟದ್ದ ಲೇಖನವನ್ನು ಮುಂ ದಯಿಟ್ಟನು. ರಾಜನು ಅದನ್ನು ಬಿಚ್ಚಿನೋಡಲು ಅದರಲ್ಲಿ "ನನ್ನ ಸಭಾಸದ ರಲ್ಲಿ ಈರ್ವರು ತಮ್ಮ ಹತ್ತರ ನನ್ನ ಪತ್ರವನ್ನು ತೆಗೆದುಕೊಂಡು ಬಂದಿದ್ದಾರೆ ಅವರು ನನ್ನಲ್ಲಿ ಮಹಾಪರಾಧವನ್ನು ಮಾಡಿದ್ದಾರೆ ಅದರಿಂದ ಅವರಿಗೆ ದೇ ಹಾಂತ ಶಿಕ್ಷೆಯನ್ನೇ ಕೊಡಬೇಕಾಗಿರುವದು. ಇವರು ನನ್ನ ಪಟ್ಟಣದಲ್ಲಿ ಪ್ರತಿಷ್ಟಿತರಾಗಿರುವದರಿಂದ ಬಹಿರಂಗವಾಗಿ ಇವರಿಗೆ ದೇಹಾಂತಶಿಕ್ಷೆಯ ನ್ನು ನನ್ನ ರಾಜಧಾನಿಯಲ್ಲೇ ಕೊಟ್ಟರೆ, ಪ್ರಜೆಗಳಲ್ಲಿ ಅಸಂತೋಷ ಉತ್ಪ ನ್ನವಾಗುವಂತೆ ಅದೆ ಅದರಿಂದ ತಮ್ಮ ಬಳಿಯಲ್ಲಿ ಕಳುಹಿಕೊಟ್ಟದ್ದೇನೆ ನ ನ್ನ ಮಿತ್ರತ್ವದ ದಶೆಯಿಂದ ಈ ಕಾರ್ಯವನ್ನು ತಾವು ಅವಶ್ಯವಾಗಿ ನಡೆ ಯಿಸಬೇಕು." ಎಂಬ ಅಭಿಪ್ರಾಯವಿತ್ತು ಅದನ್ನು ಚನ್ನಾಗಿ ಮನನ ಮಾ ಡಿಕೊಂಡು ತನ್ನ ಅಮಾತ್ಯನ ಕೈಯಲ್ಲಿ ಇತ್ತನು ಅವನು ಆ ಪತ್ರಾಭಿಪ್ರಾ ಯವನ್ನು ನೋಡಿಕೊಂಡು ಆಶ್ಚರ್ಯಾನ್ವಿತನಾದನು ಆಗ ಆ ರಾಜನು "ಏ ನು ವ್ಯವಸ್ಥೆಯನ್ನು ಮಾಡಬೇಕು?" ಎಂದು ಕೇಳಿದನು ಚತುರನಾದ ಆ ಅಮಾತ್ಯನು-"ಮಹಾರಾಜ! ಇದರಲ್ಲಿ ಏನೋ ಗೂಢವಿದ್ದಂತೆ ಕಾಣುತ್ತ ದೆ ಆದ್ದರಿಂದ ಇವರನ್ನು ಏಳು ದಿವಸಗಳವರೆಗೆ ಕಾರಾಗೃಹದಲ್ಲಿಟ್ಟು ಆ ಮೇಲೆ ಏನು ಮಾಡತಕ್ಕದ್ದನ್ನು ಮಾಡಬಹುದಾಯಿತು." ಎಂದು ಹೇಳಿದನು ಆರಾಜನಿಗೂ ಇದು ಸರಿಯಾಗಿ ತೋರಿತು ಕೂಡಲೆ ಕರ್ಮಚಾರಿಗಳಿಂದಇ ವರ ಕೈಯಲ್ಲಿ ಸಂಕೋಲೆಗಳನ್ನು ಹಾಕಿಸಿ, ಕಾರಾಗೃಹಕ್ಕೆ ತೆಗೆದುಕೊಂ ಡುಹೋಗಿರಿ. ಎಂದು ಅಪ್ಪಣೆ ಮಾಡಿದನು ಇದನ್ನು ಕಂಡು ತಾನಸೇನನ ಬುದ್ಧಿಯು ಮಂಕಾಗಿ ಹೋಯಿತು ಈರ್ವರನ್ನೂ, ಒಂದು ಸೆರೆಮನೆಯಲ್ಲಿ ಇಟ್ಟುಬಿಟ್ಟರು ಕರ್ಮಚಾರಿಗಳು ಹೊರಟುಹೋದಮೇಲೆ ತಾನಸೇನನು "ಮಿತ್ರಾ! ಬೀರಬಲ್ಲ! ಇದು ಏನಾಯಿತು? ನಾವು ಇಲ್ಲಿಗೆಬಂದು ಮೋಸ ಹೋದೆವು ಪ್ರಾಣದ ಮೇಲೆಯೇ ಬಂದಂತೆಕಾಣುತ್ತದೆ ಜೀವವು ಉಳಿಯು ವಹಾಗೆ ಯಾವದಾದರೊಂದು ಹಂಚಿಕೆಯನ್ನು ಮಾಡು! ನಿನ್ನ ಬುದ್ಧಿ ಸಾಮರ್ಥ್ಯದಿಂದಲೇ ಪಾರಾಗಬೇಕೇ ಹೊರತು ಅನ್ಯಉಪಾಯವೇ ಇಲ್ಲ ನನ್ನ ಬುದ್ಧಿಯಂತೂ ಭ್ರಂಶವಾಗಿ ಹೋಗಿದೆ." ಎಂದನು ಆಗ ಬೀರಬಲ ನು ತನ್ನ ಮನಸ್ಸಿನಲ್ಲಿ "ಬಾದಶಹನು ನಮ್ಮಿಬ್ಬರ ಬುದ್ಧಿ ಚಾತುರ್ಯವ

ನ್ನು ಪರೀಕ್ಷಿಸುವದಕ್ಕೋಸುಗವೇ, ಈ ಹಂಚಿಕೆಯನ್ನು ತೆಗೆದಂತೆ ಕಾಣುತ್ತದೆ" ಎಂದು ನಿಶ್ಚಯಿಸಿಕೊಂಡು, ಪ್ರಾಣದಾಶೆಯನ್ನು ತೊರದಿದ್ದ ತಾನಸೇನನನ್ನು ಕುರಿತು "ಪ್ರಿಯಮಿತ್ರಾ! ನಾವಿಬ್ಬರೂ ಜೀವದಿಂದ ಉಳಿದು ಕೊಳ್ಳಬೇಕಾದರೆ ಒಂದು ಹಂಚಿಕೆಯದೆ ಅದು ಯಾವದೆಂದರೇ-ಯಾವ ಸಮಯದಲ್ಲಿ ನಮ್ಮನ್ನು ವಧಸ್ಥಳಕ್ಕೆ ಕರೆದುಕೊಂಡು ಹೋಗುವರೋ ಆಗ ಪರಸ್ಪರರು ನಾಮುಂದೆ, ನಾಮುಂದೆ, ಎಂದು ಬಡದಾಡ ಹತ್ತಬೇಕು, ಇದರಿಂದ ಏನಾದರೂ ಜೀವ ಉಳಿಯುವದೇ ಹೊರತು, ಅನ್ಯ ಉಪಾಯವಿಲ್ಲ, ಎಂದು ಹೇಳಿದನು. ಅಂತೂ ಇಂತೂ ಏಳು ದಿವಸಗಳು ಕಳೆದು ಹೋದವು. ಎಂಟನೇದಿವಸ ಪ್ರಾತಃಕಾಲದಲ್ಲಿ, ಕರ್ಮಚಾರಿಗಳು ಬಂದು, ಇವರಿಬ್ಬರನ್ನೂ ವಧಸ್ಥಾನಕ್ಕೆ ಕರೆದುಕೊಂಡು ಹೋದರು. ತಾನಸೇನನು ಬಹಿರಂಗದಲ್ಲಿ ಪ್ರಸನ್ನತೆಯನ್ನು ವ್ಯಕ್ತಪಡಿಸುತ್ತಿದ್ದರೂ ಸಹ ಅಂತರಂಗದಲ್ಲಿ ಸ್ವಸ್ಥತೆಯಿದ್ದಿಲ್ಲ ವಧ ಸ್ಥಾನದಲ್ಲಿ ಒಯ್ದು ನಿಲ್ಲಿಸಿದ ಕೂಡಲೆ ಬೀರಬಲನು ಮುಂದೆ ಬಂದು "ಪ್ರಥಮದಲ್ಲಿ ನನ್ನ ತಲೆಯನ್ನು ಹೊಡಿಯಿರಿ!" ಎಂದು ಹೇಳಿದನು. ಆಕೂಡಲೆ ತಾನಸೇನನು ಬೀರಬಲನನ್ನು ಹಿಂದಕ್ಕೆದಬ್ಬಿ, ತಾನು ಮುಂದೆಬಂದು ಮೊದಲು ನನ್ನ ತಲೆಯನ್ನು ಹೊಡಿಯಿರಿ, ಎಂದು ವಿಜ್ಞಾಪ್ತಿಯನ್ನು ಮಾಡಿಕೊಂಡನು ಈ ಪ್ರಕಾರ ಒಬ್ಬರಿಗೊಬ್ಬರು ನಾಮುಂದ, ನಾ ಮುಂದ, ಎಂದು ಬಡಿದಾಡ ಹತ್ತಿದರು ಅದನ್ನು ಕಂಡು ಆ ಕರ್ಮಚಾರಿಗಳಿಗೆ ಬಹಳ ನಗೆಯು ಬಂತು ಅವರಲ್ಲೊಬ್ಬನು ಓಡುತ್ತಹೋಗಿ ರಾಜನಮುಂದೆ ಈ ಸಂಗತಿಯನ್ನು ಅರಿಕೆ ಮಾಡಿದನು ಆಗ ಆ ಅಮಾತ್ಯನು "ಪೃಥ್ವೀನಾಥ! ಇವರಲ್ಲಿ ಏನೋ ಒಂದು ಸಂದೇಹವಿದೆಯೆಂದು ಮೊದಲೇ ಹೇಳಿರಲಿಲ್ಲವೇ? ಇಲ್ಲವಿದ್ದರೆ ಮೃತ್ಯುಮುಖದಲ್ಲಿ ಬೀಳಲಿಕ್ಕೆ ಯಾವ ಅಜ್ಞಾನು ಸಂತೋಷದಿಂದ ಸಮ್ಮತಿಸುವನು? ಅವರಿಬ್ಬರನ್ನೂ ಕರೆಯಿಸಿ ಕೇಳಬೇಕು, ಎಂದು ಬಿನ್ನಹ ಮಾಡಿಕೊಂಡನು ಆಕೂಡಲೆ ಅವರನ್ನು ಇಲ್ಲಿಗೆ ಕರೆದುಕೊಂಡು ಬರ್ರಿ! ಎಂದು ಅಪ್ಪಣೆ ಮಾಡಿದನು ಅವರು ಬಂದಕೂಡಲೆ ಬ್ರಹ್ಮದೇಶದ ಧೊರೆಯು ನಿವಿಬ್ಬರೂ ಮೃತ್ಯುಮುಖದಲ್ಲಿ ಬೀಳಲಿಕ್ಕೆ ನಾಮುಂದ ನಾ ಮುಂದೆ ಎಂದು ಹಾತೊರೆಯುತ್ತಿರುವದೇಕೆ? ಎಂದು ಕೇಳಿದನು ಅದಕ್ಕೆ ಬೀರಬಲನು ನೀವು ಕೇಳಿದ ಪ್ರಶ್ನೆಗೆ ನಾವು ಉತ್ತರವನ್ನುಹೇಳಿದರೆ ನಮಗೇ ಅಧಿಕವಾದ ಹಾನಿಯು ತಟ್ಟುವ ಸಂಭವವುಂಟು ಅದರಿಂದ ನಾವು ಹೇಳುವದಿಲ್ಲ, ಎಂದನು ಬೀರಬಲನ ಈ ಉತ್ತರದಿಂದ ಅವರಲ್ಲಿದ್ದ ಸಂದೇಹವು ಮತ್ತಿಷ್ಟು ಬಲವತ್ತರವಾಯಿತು ಆಗ ಅಮಾತ್ಯನು ನೀವು ಇದ

ರಕಾರಣವನ್ನು ಪ್ರಕಟೀಕರಿಸದಿದ್ದ ಪಕ್ಷದಲ್ಲಿ ಆ ಜನ್ಮ ಪರಿಯಂತರವಾಗಿ ಕಾರಾಗೃಹದಲ್ಲಿ ಇರಿಸಿ ಬಿಡುತ್ತೇವೆ, ಎಂದನು ಅದನ್ನು ಕೇಳಿ ಬೀರಬಲನು ಅಂತರಂಗದಲ್ಲಿ ಆನಂದಿತನಾಗಿ ಬಹಿರಂಗದಲ್ಲಿ ದುಃಖಪ್ರದರ್ಶನ ಮಾಡುತ್ತ- ಮಹಾರಾಜ ! ನೀವು ಅದರಕಾರಣವನ್ನು ಕೇಳಿ ಕೊಳ್ಳಲಿಕ್ಕೆ ಈಪರಿ ಅತ್ಯಾಗ್ರಹ ಮಾಡಹತ್ತಿದ್ದರಿಂದ ಉಪಾಯಾಂತರವಿಲ್ಲದೆ ಹೇಳಬೇಕಾಗಿದೆ ಆದರೆ ಅದರ ಕಾರಣವನ್ನು ನಾವು ಬಹಿರಂಗಪಡಿಸಿದರೆ ನಮ್ಮ ಹಾನಿಯು ಎಷ್ಟಾಗುವದೆಂಬದು ಪರಮೇಶ್ವರನಿಗೇ ಗೊತ್ತು ಅಸ್ತು ನಮ್ಮ ದೈವದಲ್ಲಿಯೇ ಆ ಸುಖವನ್ನನುಭವಿಸಬೇಕೆಂದು ಸೃಷ್ಟಿಕರ್ತನು ಲೇಖಿಸಿದಂತೆ ತೋರುವದಿಲ್ಲ ಕೇಳಬೇಕು ! ನಮ್ಮ ಅಕಬರ ಬಾದಶಹನು ನಿಮ್ಮ ಈ ರಾಜ್ಯವನ್ನು ಕೈವಶ ಮಾಡಿಕೊಳ್ಳಬೇಕೆಂದು ಬಹು ದಿವಸದಿಂದ ಹೊಂಚು ಹಾಕಿಕೊಂಡು ಕುಳಿತಿದ್ದಾನೆ ಆದರೆ ನೀವು ಅವನಿಗಿಂತಲೂ ಬಲಾಢ್ಯರಾಗಿರುವದರಿಂದ ನಿಮ್ಮನ್ನು ಸಂಗ್ರಾಮದಲ್ಲಿ ಪರಾಜಿತರನ್ನಾಗಿ ಮಾಡಿ ರಾಜ್ಯವನ್ನು ಕೈವಶಮಾಡಿಕೊಳ್ಳುವದು ಅಸಂಭವವೆಂದು ತಿಳಿದು ಸುಮ್ಮನೇ ಕುಳಿತುಕೊಂಡಿದ್ದಾನೆ ಒಂದು ದಿವಸ ನಮ್ಮ ಆ ದಿಲ್ಲಿಯಲ್ಲಿ ಮಹಾಸಭೆಯು ನೆರೆದಿರಲು ಕಾಶ್ಮೀರ ದೇಶ ನಿವಾಸಿಯಾದ ಒಬ್ಬ ಪ್ರಸಿದ್ಧ ಜ್ಯೋತಿರ್ವಿದನು ಬಂದು ಬಾದಶಹನಿಗೆ ಈ ಸಂಗತಿಯನ್ನು ಅರಿಕೆಮಾಡಿದನು ಏನಂದರೆ “ ದಿಲ್ಲಿಯ, ಸಭಾಸದರಲ್ಲಿ ಇಬ್ಬರನ್ನು ಬ್ರಹ್ಮದೇಶದ ರಾಜನು ಕೊಲ್ಲಿಸಿದರೆ ಪ್ರಥಮದಲ್ಲಿ ಮರಣ ಹೊಂದಿದವನು ಈ ದೇಶಾಧಿಪನಾಗುವನೆಂತಲೂ, ಹಿಂದುಗಡೆಯಲ್ಲಿ ಮರಣಹೊಂದಿದವನು ಅವನ ಅಮಾತ್ಯನಾಗುವನೆಂತಲೂ ಅವರನ್ನು ಕೊಲ್ಲಿಸಿದ ಭೂಪಾಲನು ಅವರಿಬ್ಬರ ಸೇವಕನಾಗುವನೆಂತಲೂ ಭವಿಷ್ಯವನ್ನು ಹೇಳಿದನು. ಈ ನೆವದಿಂದಲಾದರೂ ನಿಮ್ಮ ರಾಜ್ಯವು ತನ್ನ ಹಸ್ತಗತವಾಗಲೆಂದು ತಿಳಿದು ಅಕಬರ ಬಾದಶಹನು ನಮ್ಮನ್ನು ಇಲ್ಲಿಗೆ ಕಳುಹಿಸಿಕೊಟ್ಟನು. ಆದರಿಂದ ಬೇಗನೇ ನಮ್ಮ ತಲೆಹೊಡೆಯುವಂತೆ ಅಪ್ಪಣೆಮಾಡಿರಿ ! ” ಎಂದು ಅಂಗಲಾಜಿ ಪ್ರಾರ್ಥಿಸಿಕೊಂಡನು. ಬೀರಬಲನ ಮಾತು ಕಿವಿಗೆ ಬಿದ್ದಕೂಡಲೆ, ಬ್ರಹ್ಮದೇಶದ ಅರಸನು ಅತ್ಯಾಶ್ಚರ್ಯಪೂರ್ಣವನಾಗಿ, ತನ್ನ ಅಮಾತ್ಯನನ್ನು ಈ ವಿಷಯದಲ್ಲಿ ವಿಚಾರಿಸಿದನು ಅಮಾತ್ಯನು ಬುದ್ಧಿವಂತನಾಗಿ ಇದ್ದದರಿಂದ ಈ ಸಂಗತಿಯು ಬೀರಬಲನ ಕ್ಲೃಪ್ತಿಯೆಂದು ತಿಳಿದುಕೊಂಡು; “ ಪೃಥ್ವೀನಾಥ ! ಈ ಉಭಯತರವಾದ ವಿವಾದದ ಮೇಲಿಂದ ಕಂಡುಬರುವದೇನೆಂದರೆ, ಈ ಸಂಗತಿಯು ಅಸಂಭವವೆಂಬದಾಗಿ ಕಂಡು ಬರುವದಿಲ್ಲ. ಇವರ ಅಭಿಪ್ರಾಯದಂತೆ ಇವರ

ನ್ನು ವಧಮಾಡಿದರೆ ನಮಗೇ ಹಾನಿಯುಂಟಾಗುವದು ಆದ್ದರಿಂದ ಇವರು ಹ್ಯಾಗೆ ಬಂದಿರುವರೋ ಹಾಗೆಯೇ ಬಿಟ್ಟು ಪತ್ರಕ್ಕೆ ಉತ್ತರವನ್ನು ಹೇಳಿ ಕಳುಹಿಸಿದ ರಾಯಿತು" ಎಂದು ಹೇಳಿದನು. ಆ ರಾಜನಿಗೆ ಅಮಾತ್ಯನ ಮಾತು ಸರಿದೋರಿತು. ಆ ಮೇಲೆ ಬೀರಬಲನನ್ನು ಕುರಿತು,- "ನಾನು ಅಕಬರ ಬಾದಶಹನ ಮಾಂಡಲೀಕನೂ ಅಲ್ಲ, ಆಶ್ರಿತನೂ ಅಲ್ಲ, ಅದರಿಂದ ನಾನು ಅಪ್ಪಣೆಯನ್ನು ಮಾನ್ಯಮಾಡಲಾರೆನು. ನೀವು ನಿಮ್ಮ ಜನ್ಮ ಭೂಮಿಗೆ ಹೊರಟು ಹೋಗಿರಿ ನಿಮ್ಮ ಬಾದಶಹನಿಗೆ ಹೀಗೆ ಹೇಳಬೇಕಲ್ಲಾ "ಬ್ರಹ್ಮದೇಶದ ಮಹಾರಾಜಾಧಿ ರಾಜನು ನಿಮ್ಮ ಸೇವಕನಲ್ಲ ವಾದ್ದರಿಂದ ನಿಮ್ಮ ಅಪ್ಪಣೆಯನ್ನು ಮಾನ್ಯಮಾಡದೆ ನಮ್ಮನ್ನು ಹಿಂದಕ್ಕೆ ಕಳುಹಿಕೊಟ್ಟನು ನಿರ್ದೋಷಿಗಳಾದ ನಮ್ಮನ್ನು ಕೊಂದು ಪಾಪಕ್ಕೆ ಗುರಿಯಾಗುವದಿಲ್ಲ ವೆಂದು" ಹೇಳಿದನು ಎಂಬದಾಗಿ ತಿಳಿಸಿರಿ! ಎಂದು ಅಪ್ಪಣೆಮಾಡಿದನು. ತಾನ ಸೇನನಿಗೆ ತನ್ನ ಜೀವಿತ ವಿಷಯದಲ್ಲಿ ನಿರಾಶೆಯುಳ್ಳವನಾಗಿದ್ದನು. ಬ್ರಹ್ಮದೇಶದ ಅರಸನ ವಚನವು ಕರ್ಣೇಂದ್ರಿಯವನ್ನು ಪ್ರವೇಶಿಸಿದ ಕೂಡಲೆ ಅತ್ಯಾನಂದವುಳ್ಳವನಾಗಿ ಬೇಗನೇ ಇಲ್ಲಿಂದ ಹೊರಟು ಹೋಗೋಣ ನಡೆ, ಎಂದು ಬೀರಬಲನಿಗೆ ದುಂಬಾಲ ಬಿದ್ದನು. ಬೀರಬಲನು ಅವನನ್ನು ಸಮಾಧಾನ ಮಾಡಿ ಬ್ರಹ್ಮದೇಶದ ಮಹಾರಾಜನನ್ನು ಕುರಿತು-" ಮಹಾರಾಜ: ಬಡವರಾದ ನಮ್ಮ ಮೇಲೆ ದಯತೋರಿಸಿರಿ! ಮೊದಲು ನಮ್ಮ ವಧೆಗೆ ಅಪ್ಪಣೆಕೊಟ್ಟು ಈಗ ಹಿಂದೆಗೆಯುವದು ಯಾಕೆ? ಈ ಮಾತು ತಮ್ಮಂಥವರಿಂದ ಆಗಬಾರದು ನಮ್ಮ ಬಾದಶಹನ ಈ ಅಲ್ಪಕಾರ್ಯವನ್ನಾದರೂ ಮಾಡಿರಿ, ಈ ಸಂಗತಿಯನ್ನು ಬಹಿರಂಗ ಪಡಿಸಿದರೆ ನಮಗೆ ಹಾನಿಯುಂಟಾಗುವದೆಂಬ ಸಂಗತಿಯನ್ನು ನಾನು ಪ್ರಥಮದಲ್ಲಿಯೇ ಅರಿಕೆ ಮಾಡಿಕೊಂಡಿದ್ದೆನಲ್ಲವೇ! ಅದರಂತೆಯೇ ಆಯಿತು ಆಗಲಿ ಉಪಾಯವಿಲ್ಲ ಈಗಾದರೂ ಕೃಪಾಳುಗಳಾಗಿ ವಧೆಗೆ ಅಪ್ಪಣೆಕೊಡಿರಿ! ಎಂದು ಬಿನ್ನಹ ಮಾಡಿಕೊಂಡನು. ಬೀರಬಲನ ಮಾತುಗಳನ್ನು ಕೇಳಿ, ನೀನು ಎಷ್ಟುಪ್ರಾರ್ಥಿಸಿದರೂ ಪ್ರಯೋಜನವಾಗಲರಿಯದು ತಿಳಿದೂತಿಳಿದು ಯಾವನಾದರೂ ವಿಷಪ್ರಾಶನಮಾಡುವನೇ ಅಕಬರಬಾದಶಹನ ಯೋಗ್ಯತೆಯು ನಮ್ಮಲ್ಲಿಯ್ದ ಕನಿಷ್ಟಪರಿಚಾರಕನಯೋಗ್ಯತೆಯಕಿಂತಲೂ ಹೀನವಾಗಿದೆ ಈಗ ನೀವು ಇಲ್ಲಿಂದ ಸುಮ್ಮನೆ ಹೊರಟು ಹೋಗಿರಿ ಇಲ್ಲವಾದರೆ ಪರಿಚಾರಕರ ಕಡೆಯಿಂದ ದಬ್ಬಿಸಿಕೊಳ್ಳುವ ಪ್ರಸಂಗವು ಬಂದೀತು? ತಿಳಿಯಿತೇ? ಎಂದು ಕೇಳಿದನು. ಆಮಾತಿಗೆ ಬೀರಬಲನು ಹೀಗೆ ತಮ್ಮ ಅಪ್ಪಣೆಯಾದರೆ ಉಪಾಯವಿಲ್ಲ ದಿಲ್ಲಿಗೆ, ಪ್ರಯಾಣ ಮಾಡು

ತ್ತೀವೆ, ಬಾದಶಹನು ನಮ್ಮ ಮೇಲೆ ಕೃದ್ಧನಾಗುವದು ನಿಜ? ಎಂದು ಅತಿ ಶಯ ಹಾನಿಯಾದವನಂತೆ ಚಡಪಡಿಸುತ್ತ ಮಹಾರಾಜನ ಅಪ್ಪಣೆಯನ್ನು ಪಡೆದು ಪ್ರಯಾಣ ಸನ್ನದ್ಧರಾದರು. ಈ ಪ್ರಕಾರ ಅವರಿಬ್ಬರು ಪಯಣಗತಿ ಯಿಂದ ದಿಲ್ಲಿಗೆಬಂದು ತಲುಪಿದರು.

ಮರುದಿವಸ ರಾಜಾಜ್ಞೆಯನ್ನು ಪಡೆದು ಇಬ್ಬರೂ ಸಭಾಸ್ಥಾನವ ನ್ನು ಪ್ರವೇಶಿಸಿದರು ಅಕಬರ ಬಾದಶಹನು ಇವರ ಸಮಾಚಾರವನ್ನು ಕೇ ಳಿದನು ಆಗ ತಾನಸೇನನು "ಹುಜೂರ್ ಬೀರಬಲನು ನನ್ನ ಜೊತೆಯಲ್ಲಿ ಇಲ್ಲದಿದ್ದರೆ, ನಿಮ್ಮ ದರುಶನವು ನನಗೆ ಈ ಜನ್ಮದಲ್ಲಿ ಯಂತೂ ಆಗುತ್ತಿದ್ದಿ ಲ್ಲ. ಬೀರಬಲನ ಚಾತುರ್ಯದಿಂದಲೇ ಈ ಸುದಿನವು ಪ್ರಾಪ್ತವಾಯಿತು ಎಂ ದು ಹೇಳಿ ಬ್ರಹ್ಮದೇಶದಲ್ಲಿ ನಡೆದ ಯಾವತ್ತು ಸಮಾಚಾರವನ್ನು ಕಥನ ಮಾಡಿದನು. ಆಗ ಬಾದಶಹನುಯಾವತ್ತೂ ಮುಸಲ್ಮಾನ ಮುತ್ಸದ್ದಿಗಳ ನ್ನುದ್ದೇಶಿಸಿ "ನಾನು ಹಿಂದಕ್ಕೆ ತಾನಸೇನ ಮತ್ತು ಬೀರಬಲ್ಲ ಈ ಉಭ ಯತರಲ್ಲಿ ಯಾರು ಚತುರರೆಂಬದನ್ನು ಪ್ರತ್ಯಕ್ಷಮಾಡಿ ತೋರಿಸುತ್ತೇನೆಂ ದು ಹೇಳಿದ್ದಿಲ್ಲವೇ? ನೀವು ಯಾವನಿಗೆ ಬೀರಬಲನ ಪದವಿಯನ್ನು ಕೊಡಿಸ ಬೇಕೆಂದು ನೀವೆಲ್ಲರೂ ಬಯಸುತ್ತಿದ್ದಿರೋ! ಆ ತಾನಸೇನನು ಯಾವನಸ ಹಾಯದಿಂದ ಪ್ರಾಣದಿಂದ ಉಳಿದುಕೊಂಡು ಬಂದಿರುವನೆಂಬ ಸಂಗತಿಯು ಅವನ ಮುಖದಿಂದಲೇ ನಿಮಗೆ ವಿದಿತವಾಯಿತಷ್ಟೇ? ಈಗ ಲಾದರೂ ನಿ ಮ್ಮ ಕುರುಕುರಿಯು ತೀರಿತೇ? ಇನ್ನು ಮೇಲೆ ನಿಮ್ಮಲ್ಲಿ ಯಾರಾದರೂ, ಹಿಂದೂಜನರಮೇಲೆ ದ್ರೋಹವನ್ನೆಸಗಿದ ಪಕ್ಷದಲ್ಲಿ ಅವರಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಲಾದೀತು? ನನ್ನ ರಾಜ್ಯದಲ್ಲಿ ಹಿಂದೂ ಮುಸಲ್ಮಾನರ ನಡುವೆ ಎಂದೂ ಕಲಹವಿರಲಿಕ್ಕಾಗದು ಹಿಂದೂ ಜನರೂ ನನ್ನ ಪ್ರಜೆಗಳು ಮುಸಲ್ಮಾನರೂ ನನ್ನ ಪ್ರಜೆಗಳು ಇನ್ನು ಮೇಲೆ ಈ ಪ್ರಕಾರ ಭೇದ ಬು ದ್ಧಿಯನ್ನು ಮನಸ್ಸಿನಲ್ಲಿ ಹಿಡಿಯ ಬೇಡಿರಿ" ಎಂದು ಅಪ್ಪಣೆಮಾಡಿದನು ಈ ಮಾತುಗಳನ್ನು ಶ್ರವಣಮಾಡಿ ಅಮೀರ ಖಾನನು ಜಹಾಂಪನಾದ! ಈಗ ನಮಗೆ ಮನವರಿಕೆ ಯಾಯಿತು ಅವರವರ ಯೋಗ್ಯತೆಯ ಪ್ರಕಾರ ಅವರ ವರಿಗೆ ಕೆಲಸಗಳನ್ನು ನಿಯಮಿಸಬೇಕು ಹಿಂದೂ ಜನರೂ ಮತ್ತು ನಾವು ಒಂದೇ ಎಂಬು ಹೇಳಲೋಣವಾಯಿತು! ಅವರು ಅನೇಕ ಮೂರ್ತಿಗಳನ್ನು ಪೂಜಿಸುತ್ತಾರೆ ನಮ್ಮ ಕುರಾನ ಶರೀಫದಲ್ಲಿ "ಜಗನ್ನಿಯಂತನು ಓರ್ವನೇ ಇರುವನೆಂದೂ ಅನೇಕ ದೇವತೆಗಳನ್ನು ಪೂಜಿಸುವವರು ಕೇವಲ ಕಾಫರು ಷರೆಂದೂ ಹೇಳಲ್ಪಟ್ಟದೆ ಹೀಗಿದ್ದು ಅವರು ನಮ್ಮ ಸಮಾನತ್ವವನ್ನು ಹೊಂ

ದುವದು ಹ್ಯಾಗೆ ? ಎಂಬದನ್ನು ವಿಶದ ಪಡಿಸಿ ತೋರಿಸಬೇಕು ಅಂದರೆ ಅವ ರೂನಾವ್ರೂ ಸಮಾನರೆಂದು ತಿಳಿದುಕೊಳ್ಳುವೆವು ಎಂದನು ಈ ಮಾತಿಗೆ ಬಾದಶಹನು- " ಅವರವರ ಧರ್ಮವು ಅವರವರಿಗೆ ಶ್ರೇಷ್ಟವಾದದ್ದೇ ಯಾವಧರ್ಮವನ್ನೂ ನಿಂದಿಸ ಕೂಡದು ತಮ್ಮ ತಮ್ಮ ಧರ್ಮಗಳಲ್ಲಿ ದೃಢವಿಶ್ವಾಸವನ್ನಿಡಬೇಕು ಧರ್ಮದ ವಿಷಯವನ್ನು ಮುಂದೆ ಮಾಡಿ ಇತರರಿಗೆ ಹಾನಿಯನ್ನುಂಟು ಮಾಡುವದು ಉಚಿತವಾದದ್ದಲ್ಲ ನನ್ನ ಪ್ರಜೆಗಳಾದ ಹಿಂದೂ ಜನರಿಗೆ ಯಾವನಿಂದಾದರೂ ಉಪಟಳವು ಉಂಟಾದರೆ, ಅವನು ಸರದಾರನಾಗಿರಲಿ, ಅಥವಾ ಕನಿಷ್ಠಪ್ರತಿಯ ಸೇವಕನಾಗಿರಲಿ ಅವನಿಗೆ ಕಠಿಣತರವಾದ ಶೀಕ್ಷೆಯನ್ನು ವಿಧಿಸುವೆನು ಈ ಸಂಗತಿಯನ್ನು ಯಾವತ್ತರೂ ಸ್ಮರಣೆಯಲ್ಲಿಟ್ಟು ಕೊಳ್ಳಿರಿ ! ಎಂದು ಆಜ್ಞೆಮಾಡಿದನು ಅದರಿಂದ ಯಾವತ್ತರೂ ಶಾಂತತೆಯಿಂದ ವರ್ತಿಸಹತ್ತಿದರು.

—(೧೭೪. ಚಿಕ್ಕಮಗುವು ಅಳುತ್ತಿತ್ತು.)—

ಒಂದು ದಿವಸ ಬಾದಶಹನ ಸಭಾಸ್ಥಾನದಲ್ಲಿ ಬೀರಬಲನ ಹೊರತು ಅನ್ಯಸರದಾರರೂ ಮಾನಕರಿಗಳೂ ಕೂಡಿದ್ದರು, ಬಾದಶಹನು ಬೀರಬಲನ ಮಾರ್ಗವನ್ನು ಬಹಳಹೊತ್ತು ನೋಡಿದನು. ಆದರೂ ಬೀರಬಲನು ಬರಲಿಲ್ಲ ಅದನ್ನು ಕಂಡು ಒಬ್ಬ ಪರಿಚಾರಕನನ್ನು ಕೊಟ್ಟು ಕಳುಹಿದನು. ಆ ಪರಿಚಾರಕನು ಬೀರಬಲನ ಮನೆಗೆ ಹೋಗಿ, ಬಾದಶಹನ ಆಜ್ಞೆಯನ್ನು ಶ್ರುತಪಡಿಸಿದನು ಆಗ ಬೀರಬಲನು " ಹೂ ! ಬರುತ್ತೇನೆ " ಎಂದು ಹೇಳಿಕಳುಹಿಸಿದನು ಪರಿಚಾರಕನು ಬಂದು ಹಾಗೆಯೇ ಹೇಳಿದನು ಮುಂದೆ ಅರ್ಧತಾಸಾದರೂ ಬರಲಿಲ್ಲ ಪುನಃ ಮತ್ತೊಬ್ಬ ಪರಿಚಾರಕನನ್ನು ಅಟ್ಟಿದನು. ಅವನಿಗೂ ಅದೇ ಉತ್ತರವನ್ನು ಹೇಳುವ ಪ್ರಸಂಗವು ಬಂತು ಅದನ್ನು ಕೇಳಿಬಾದಶಹನಿಗೆ ಅತಿಶಯ ಕೋಪವು ಬಂತು ಮೂರನೆಯವನನ್ನು ಕಳುಹಿಸಿದರೂ ಕೂಡಬರಲಿಲ್ಲ ಆಗ ಬಾದಶಹನು " ಬೀರಬಲನನ್ನು ಕಟ್ಟಿಹಿಡಿದುಕೊಂಡು " ಬರುವಂತೆ ಆಜ್ಞಾಪಿಸಿದನು. ಆ ಸೇವಕನು ಬೀರಬಲನ ಸನ್ನಿಧಿಗೆ ಬಂದು ರಾಜಾಜ್ಞೆಯನ್ನು ತಿಳಿಸಿದನು ಆಗ ಬೀರಬಲನು ಇನ್ನು ವಿಲಂಬ ಮಾಡಿ ಪ್ರಯೋಜನವಿಲ್ಲವೆಂದು ತಿಳಿದು ಬಟ್ಟೆಗಳನ್ನು ಧಾರಣಮಾಡಿಕೊಂಡು ಸೇವಕನ ಬೆನ್ನು ಹತ್ತಿ ಸಭಾಸ್ಥಾನವನ್ನು ಪ್ರವೇಶಿಸಿ, ನಿತ್ಯನಿಯಮಾನುಸಾರವಾಗಿ ಬಾದಶಹನಿಗೆ ನಮಸ್ಕಾರಮಾಡಿ ತನ್ನಸ್ಥಳದಲ್ಲಿ ಕುಳಿತುಕೊಂಡನು. ಆಗ ಬಾದಶಹನು- ಬೀರಬಲ್ಲ ! ಈ ದಿವಸ ನಿನ್ನನ್ನು ಕರೆಯ ಕಳುಹಿ ಕಳುಹಿ, ಬೇಸತ್ತುಹೋದೆನು ಆದರೆ ನಿನ್ನ " ಹೂ ಬರುತ್ತೇನೆ "

ಎಂಬ ಸೊಲ್ಲೇ ತಪ್ಪಲಿಲ್ಲ ಇದಕ್ಕೆ ಕಾರಣವೇನು! ನಿನ್ನ ಮನೆಯಲ್ಲಿ ಇದ್ದ ಕೆಲಸವಾದರೂ ಯಾವದು.

ಬೀರಬಲ—ಖುದಾವಂದ? ಚಿಕ್ಕಮಗುವು ಅಳುತ್ತಿತ್ತು, ಅವನನ್ನು ಸಮಾಧಾನ ಪಡಿಸಿ ಬರಬೇಕಾದರೆ ಇಷ್ಟು ವಿಳಂಬವಾಯಿತು.

ಬಾದಶಹ—ಛೀ? ನೀನು ಸುಳ್ಳಾಡುತ್ತೀ, ಬಾಲಕರು ಇಚ್ಛಿತವಸ್ತುವು ಸಿಕ್ಕಕೂಡಲೇ ಸುಮ್ಮನಾಗಿ ಹೋಗುವರು. ಹೀಗಿದ್ದು ಇಷ್ಟು ವಿಲಂಬವನ್ನೇಕೆ ಮಾಡಿದಿ.

ಬೀರಬಲ—ಖುದಾವಂದ? ಬಾಲಕರನ್ನು ಸಮಾಧಾನಪಡಿಸುವದಕ್ಕೆ ಏನು ಉಪಾಯವನ್ನು ಮಾಡಬೇಕೆಂಬದು ನನಗೆ ತಿಳಿದಿಲ್ಲ.

ಬಾದಶಹ—ನಾನು ನಿನ್ನ ಸ್ಥಳದಲ್ಲಿದ್ದರೆ ಆಕೂಡಲೆ ಆ ಬಾಲಕನನ್ನು ಸಮಾಧಾನ ಪಡಿಸುತ್ತಿದ್ದೆನು.

ಬೀರಬಲ—ಪೃಥ್ವೀನಾಥ! ದೇಶದ ಪ್ರಜೆಗಳೆಲ್ಲರಿಗೂ ರಾಜನು ತಾಯಿತಂದೆಯಾಗಿರುವನು, ನಾನು ಬಾಲಕನಾಗುತ್ತೇನೆ ನೀವು ನನ್ನನ್ನು ಸಮಾಧಾನ ಪಡಿಸಿರಿ.

ಈ ಮಾತಿಗೆ ಬಾದಶಹನು ಒಪ್ಪಿಕೊಂಡನು, ಬೀರಬಲನು ಬಾಲಕನಂತೆ ಬಟ್ಟೆಗಳನ್ನು ಧಾರಣಮಾಡಿಕೊಂಡು ನೆಲದಮೇಲೆ ಕುಳಿತುಕೊಂಡು ರೋದಿಸಹತ್ತಿದನು. ಬಾದಶಹನು ಸಿಂಹಾಸನದಿಂದ ಇಳಿದು ಬಾಲಕನಾದ ಬೀರಬಲನ ಹತ್ತರಬಂದನು.

ಬಾದಶಹ—(ಬಾಲಕನಾಗಿದ್ದ ಬೀರಬಲನ ಬೆನ್ನಮೇಲೆ ಕೈಯಾಡಿಸಿ,) ಮಗೂ? ಯಾಕೆ ರೋದಿಸುತ್ತೀ.

ಬೀರಬಲನು ದೀರ್ಘವಾಗಿ ಉಸಿರನ್ನು ಬಿಡುತ್ತ ಹೆಚ್ಚುಹೆಚ್ಚು ಅಳುತ್ತ ಏನೊಂದು ಉತ್ತರವನ್ನೂ ಕೊಡದೆ ಬಾದಶಹನ ಕೊರಳಿಗೆ ಅಪ್ಪೀ ಮಿಟ್ಟೀ ಹಾಕಿದನು.

ಬಾದಶಹ- (ಅವನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು) ಮಗೂ ಯಾಕೆ ಅಳುತ್ತೀ! ನಿನಗೆ ಬೇಕಾದದ್ದೇನು ಹೇಳು, ಅದನ್ನು ತರಿಸಿ ಕೊಡುತ್ತೇನೆ.

ಬೀರಬಲ—[ಬಹಳ ಹೊತ್ತು ಗಟ್ಟಿಯಾಗಿ ರೋದಿಸಿ,] ನನಗೆ ಕಬ್ಬನ್ನು ಕೊಡಿಸು.

ಬಾದಶಹ—(ಆ ಕೂಡಲೆ ಒಂದು ಕಬ್ಬಿನ ಹೊರೆಯನ್ನು ಆ ಬಾಲಕನಮುಂದೆ ಚೆಲ್ಲಿಸಿ) ನಿನ್ನ ಮನಸ್ಸಿಗೆ ಬಂದದ್ದನ್ನು ತೆಗೆದುಕೋ.

ಬೀರಬಲ—ನೀನೇ ನಿನ್ನ ಕೈಯಿಂದ ತೆಗೆದುಕೊಡು.

ಬಾದಶಹನು ಆ ಹೊರೆಯೊಳಗಿಂದ ಒಂದು ಉತ್ತಮವಾದ ಕಬ್ಬನ್ನು ಆರಿಸಿ ತೆಗೆದುಕೊಟ್ಟನು. "ಇದು ನೆಟ್ಟಗಿಲ್ಲ?" ವೆಂದು ಒಗೆದು ಬಿಟ್ಟನು. ಹೀಗೆ ಎಷ್ಟೋಸಾರೆ ಆದಮೇಲೆ ಒಂದುಕಬ್ಬು ಮನಸಿಗೆ ಬಂತು, ಅದನ್ನು ಕೈಯಲ್ಲಿ ಹಿಡಿದುಕೊಂಡು ಪುನಃ ಅಳಹತ್ತಿದನು.

ಬಾದಶಹ—ಮಗು ? ಮಗೂ ? ಮತ್ತೆಯಾಕೆ ರೋದನವನ್ನು ಆರಂಭಿಸಿದಿ ಏನುಬೇಕು.

ಬೀರಬಲ—(ಸ್ವಲ್ಪಹೊತ್ತು ಅತ್ತು) ಇದನ್ನು ಸುಲಿದುಕೊಡು.

ಬಾದಶಹನು ಕಬ್ಬನ್ನು ಸುಲಿದುಕೊಟ್ಟನು, ಅದನ್ನು ಹಿಡಿದುಕೊಂಡು ಪುನಃ ಅಳಹತ್ತಿದನು.

ಬಾದಶಹ—ಮತ್ತೆ ಯಾಕೆ ಅಳುತ್ತೀ !

ಬೀರಬಲ—ಇದರ ತುಂಡುಗಳನ್ನು ಮಾಡಿಕೊಡು.

ಬಾದಶಹನು ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಕೊಟ್ಟನು ಆಮೇಲೆ ಅವುಗಳನ್ನು "ನನ್ನ ಟೊಪ್ಪಿಗೆಯಲ್ಲಿ ಹಾಕಿಕೊಡು," ಎಂದು ಅಳಲಾರಂಭಿಸಿದನು. ಬಾದಶಹನು ಅದರಂತೆಯೇ ಮಾಡಿದನು ಅದರಿಂದಲೂ ಅವನು ಶಾಂತನಾಗದೆ ಟೊಪ್ಪಿಗೆಯನ್ನು ಬಿಸಾಟಕೊಟ್ಟನು. ಬಾದಶಹನು ಅವನನ್ನು ಹತ್ತರ ಕರೆದುಕೊಂಡು- "ಮಗೂ ! ನೀನು ಹೇಳಿದಹಾಗೆ ನಾನು ಮಾಡಿಕೊಡಲಿಲ್ಲವೇ, ಹೀಗಿದ್ದು ನೀನು ಯಾಕೆ ಸುಮ್ಮನಾಗಲೊಲ್ಲಿ" ಎಂದು ಕೇಳಿದನು. ಬೀರಬಲನು ಕಿಂಚಿತ್ಕಾಲ ರೋದಿಸಿ, ಆ ಮೇಲೆ- "ಈ ಎಲ್ಲ ತುಂಡುಗಳನ್ನು ಜೋಡಿಸಿ ಮೊದಲು ಇದ್ದಂತೆ ಮಾಡಿಕೊಡು" ಎಂದು ಪುನಃ ರೋದಿಸಲಾರಂಭಿಸಿದನು. ಆಗ ಬಾದಶಹನು "ಮಗೂ ? ನಿನಗೆ ಬೇಕಾದಷ್ಟು ತುಂಡುಗಳನ್ನು ತೆಗೆದುಕೋ ! ಆದರೆ ಅವುಗಳನ್ನು ಜೋಡಿಸಿ ಮೊದಲಿನಹಾಗೆ ಹ್ಯಾಗೆಮಾಡಲಿಕ್ಕೆ ಬಂದೀತು" ಎಂದನು. ಆಕೂಡಲೆ ಬೀರಬಲನು- "ಹಾಗೆ ನಾನು ಅಳುವದನ್ನು ಹ್ಯಾಗೆ ಬಿಡಲಿ !" ಎಂದು ಕೇಳಿದನು. ಆಗ ಬಾದಶಹನು ಶಹಬಾಸ ! ಶಹಬಾಸ ! ನೀನು ಹೇಳಿದ್ದು ಸತ್ಯವು. ಬಾಲಕರನ್ನು ಸಮಾಧಾನಗೊಳಿಸುವದು ಬಹುಶ್ರಮ ಸಾಧ್ಯವಾದದ್ದು, ಎಂದು ಒಪ್ಪಿಕೊಂಡು ತನ್ನ ಕೋಪವನ್ನು ಅಡಗಿಸಿಕೊಂಡನು. ಆಮೇಲೆ ಬೀರಬಲನು ಬಾಲಕನವೇಷವನ್ನು ಚೆಲ್ಲಿಕೊಟ್ಟು, ತನ್ನ ಸ್ಥಾನದಲ್ಲಿಬಂದು ಕುಳಿತುಕೊಂಡನು ... ... *

—(೧೭೫. ಗಾಣಿಗನೂ, ಮತ್ತು ಕಟುಕನು.)—

ಒಂದುದಿವಸ ಬಾದಶಹನು ಸಭಾಸ್ಥಾನದಲ್ಲಿ ವಿರಾಜಮಾನನಾಗಿದ್ದನು, ಆ ಸಮಯದಲ್ಲಿ ಒಬ್ಬ ಗಾಣಿಗ [ತೈಲವಿಕ್ರಯಿ] ನೂ, ಒಬ್ಬ ಕಟುಕ (ಮಾಂಸವಿಕ್ರಯಿ) ನೂ, ತಮ್ಮತಮ್ಮೊಳಗೆ ಜಗಡಾಡುತ್ತ ಸಭಾಸ್ಥಾನವಂನು ಪ್ರವೇಶಿಸಿದರು. ಆಗ ಬೀರಬಲನು "ನಿಮ್ಮಿಬ್ಬರಲ್ಲಿ ವಾದಿಯು ಯಾರು ಎಂದು ಕೇಳಿದನು.

ಗಾಣಿಗ—ನಾನು ವಾದಿಯು.

ಕಟುಕ—ನಾನು.

ಆಗ ಅವರಿಬ್ಬರಿಗೂ ನಿಜವಾದ ಸಮಾಚಾರವನ್ನು ಹೇಳಿರಿ ! ಎಂದು ಆಜ್ಞಾಪಿಸಿದನು.

ಗಾಣಿಗ—ಮಹಾರಾಜ ! ನಾನು ನನ್ನ ಅಂಗಡಿಯಮೇಲೆ ಲೆಕ್ಕವನ್ನು ಬರಿಯುತ್ತ ಕುಳಿತುಕೊಂಡಿದ್ದೆನು. ಆಗ ಈ ಕಟುಕನು ಬಂದು ಎಂಣೆಯನ್ನು ಕೊಡು ! ಎಂದು ಕೇಳಿದನು. ನಾನು ನನ್ನ ಕೆಲಸವನ್ನು ಬಿಟ್ಟು ಇವನಿಗೆ ತೈಲವನ್ನು ಕೊಟ್ಟೆನು ಪುನಃ ನನ್ನ ಕೆಲಸದಲ್ಲಿ ತೊಡಗಿದೆನು, ಮುಂದೆ ಕಿಂಚಿತ್ ಹೊತ್ತಾದಮೇಲೆ ನೋಡಲು ನನ್ನ ಹಣದ ಚೀಲವೇ ಇದ್ದಿಲ್ಲ. ಆ ಕೂಡಲೇ ಇವನವಿಷಯದಲ್ಲಿ ಸಂದೇಹವು ಉತ್ಪನ್ನವಾಗಿ ಓಡುತ್ತ ಇವನ ಅಂಗಡಿಗೆ ಹೋದೆನು, ನಾನುಹೋದಾಗ ಚೀಲವು ಇವನಕೈಯಲ್ಲಿಯೇ ಇತ್ತು. ಅದು ನನ್ನ ಚೀಲವೆಂದು ಹೇಳಿ ಬೇಡಿದೆನು ಇವನುಕೊಡದೆ ತನ್ನ ಚೀಲವೆಂದು ವಾದಿಸಹತ್ತಿದನು ನಾನು ಸತ್ಯಸಂಗತಿಯನ್ನು ವಿಜ್ಞಾಪಿಸಿಕೊಂಡಿದ್ದೇನೆ, ನನ್ನ ಹಣದ ಚೀಲವನ್ನು ನನಗೆ ಕೊಡಿಸಬೇಕು ಎಂದು ಬೇಡಿಕೊಂಡನು.

ಆಮೇಲೆ ಕಟುಕನು ಮುಂದಬಂದು- " ನಾನು ನನ್ನ ಅಂಗಡಿಯಮೇಲೆ ಕುಳಿತುಕೊಂಡು ವಿಕ್ರಯಿಸಿದ ಹಣವನ್ನು ಎಣಿಸುತ್ತಿದ್ದೆನು, ಆಗ ಇವನು ತೈಲವಿಕ್ರಯಿ ಮಾಡುವದಕ್ಕೆ ಪ್ರತಿದಿನದಲ್ಲಿ ಬರುವಂತೆ ಈ ದಿವಸವೂ ಬಂದನು, ಇವನ ಅಂಗಡಿಯು ನನ್ನ ಅಂಗಡಿಗೆ ಕಿಂಚಿತ್‌ದೂರದಲ್ಲಿ ಅದೆ ಇವನು ಬಂದಕಾಲಕ್ಕೆ ಹಣದಚೀಲವು ನನ್ನ ಹತ್ತರದಲ್ಲಿಯೇ ಇತ್ತು, ಇವನು ಹೊರಟುಹೋದ ಮೇಲೆ ನೋಡಲು ಚೀಲವು ಮಾಯವಾಗಿತ್ತು. ಆಗ ನಾನು ಗಾಬರಿಯಾಗಿ ಓಡುತ್ತಹೋಗಿ ಇವನನ್ನು ಮಾರ್ಗದಲ್ಲಿಯೇ ಹಿಡಿದೆನು ಮತ್ತು ಚೀಲವನ್ನು ಕಸಿದುಕೊಂಡೆನು. ನಾನು ಈ ಸಂಗತಿಯನ್ನು ಜಗನ್ನಿಯಂತನನ್ನು ಸ್ಮರಿಸಿ, ಸತ್ಯವಾಗಿ ಹೇಳುತ್ತೇನೆ, ಇದರಲ್ಲಿ ಎಳ್ಳಷ್ಟಾದರೂ

ಅಸತ್ಯವಿಲ್ಲ ಎಂದು ಹೇಳಿದನು.

ಬೀರಬಲನು ಅವರ ಸಮಗ್ರ ವೃತ್ತಾಂತವನ್ನು ಕೇಳಿಕೊಂಡು ಮರುದಿನ ಬರುವಂತೆ ಆಜ್ಞಾಪಿಸಿದನು ಮತ್ತು ಹಣದಚೀಲವನ್ನು ತನ್ನ ಬಳಿಯಲ್ಲಿಯೇ ಇರಿಸಿಕೊಂಡನು ಅವರೀರ್ವರು ಹೊರಟುಹೋದಮೇಲೆ ಆ ಚೀಲದೊಳಗಿಂದ ಕೆಲವು ರೂಪಾಯಿಗಳನ್ನೂ ಚಿಲ್ಲರೆ ಹಣವನ್ನೂ ತೆಗೆದು ನೀರಿನಲ್ಲಿ ತೊಳೆಯಿಸಿದನು ಕಿಂಚಿತ್ತಾದರೂ ತೈಲಾಂಶವು ಹೊರಡಲಿಲ್ಲ ಆದರೆದುರ್ಗಂಧವು ಹೊರಹೊರಟಿತು ಇದರಿಂದ ಈ ಹಣವು ಕಟುಕರವನದೇ ಎಂದು ನಿಶ್ಚಯಿಸಿಕೊಂಡನು.

ಮರುದಿವಸ ನಿಯತವಾದ ಸಮಯಕ್ಕೆ ವಾದಿಯೂ, ಪ್ರತಿವಾದಿಯೂ ಬಂದರು ಬೀರಬಲನು ಅವರಿಬ್ಬರ ಕೈಯಲ್ಲಿಯೂ, ಧರ್ಮಗ್ರಂಥವನ್ನು ಕೊಟ್ಟು ಶಪಥಮಾಡು ಎಂದು ಹೇಳಿದನು. ಇಬ್ಬರೂ ಶಪಥಮಾಡಿದರು ಬೀರಬರನು ಕಟುಕನವಶಕ್ಕೆ ಯಾವತ್ತೂ ಹಣವನ್ನು ಕೊಟ್ಟು ತೈಲ ವಿಕ್ರಯಿಯಿಗೆ ಉಚಿತ ದಂಡನೆಯನ್ನು ವಿಧಿಸಿದನು.

೧೭೬. ಮಣಿಪುರದ ದೊರೆಯು ಬಿರಬಲನ ನ್ಯಾಯ ಚಾತುರ್ಯವನ್ನು ಪರೀಕ್ಷಿಸಿದ್ದು.

ಮಣಿಪುರದ ದೊರೆಯಾದ ಚಂದ್ರಕಾಂತನೆಂಬವನು, ಬೀರಬಲನ ಪ್ರಖ್ಯಾತಿಯನ್ನು ಕೇಳಿ, ಅವನ ಜಾಣತನವನ್ನು ಪರೀಕ್ಷಿಸಬೇಕೆಂಬ ಉದ್ದೇಶದಿಂದ ಪ್ರಚ್ಛನ್ನ ವೇಷಧಾರಿಯಾಗಿ ದಿಲ್ಲಿಗೆ ಬಂದನು. ಆ ಪಟ್ಟಣದ ಬೀದಿಯಲ್ಲಿ ಕುಂಟನಾದ ಒಬ್ಬ ಬಿಕ್ಷುಕನು ಬೆಟ್ಟಿಯಾದನು ಅವನಿಗೆ, ಇವನು ಮಣಿಪುರದ ದೊರೆಯೆಂದು ಆವನಿಗೆ ಬೋಧೆಯಾಗಲಿಲ್ಲ ಆದರಿಂದ ಅವನು-ಮಹಾರಾಜ ! ನಾನು ಒಂದು ಅತ್ಯವಶ್ಯಕವಾದ ಕಾರ್ಯಸಾಧನೆ ಗೋಸುಗ ಪಟ್ಟಣವನ್ನು ಶೀಘ್ರವಾಗಿ ಪ್ರವೇಶ ಮಾಡಬೇಕಾಗಿತ್ತು; ಆದರೆ ನನ್ನ ಪಾದಗಳಲ್ಲಿ ವಿಲಕ್ಷಣವಾದ ಒಂದು ಶೂಲಿಯು ಅಕಸ್ಮಾತ್ತಾಗಿ ಉತ್ಪನ್ನವಾದ್ದರಿಂದ ಹೋಗ ಲಸಮರ್ಥನಾಗಿ, ಇಲ್ಲಿ ಕುಳಿತುಕೊಂಡಿದ್ದೇನೆ ಅದರಿಂದ ಕೃಪಾಳುಗಳಾದ ತಾವು ನನ್ನನ್ನು ತಮ್ಮ ಬೆನ್ನಿನಹಿಂದೆ ಕೂಡ್ರಿಸಿಕೊಂಡು ಕರೆದುಕೊಂಡು ಹೋದರೆ, ಬಹಳೇ ಉಪಕಾರವಾಗುವದು, ಎಂದು ಬೇಡಿಕೊಂಡನು ಆಗ ಚಂದ್ರಕಾಂತನು ಅವನ ದುರ್ದಶೆಯನ್ನು ನೋಡಿ, ಕನಿಕರಪಟ್ಟು ಹಿಂದೆ ಕುಳ್ಳಿರಿಸಿಕೊಂಡು ಹೊರಟನು ಕುಂಟನು ತನ್ನ ಇಚ್ಛಿತಸ್ಥಾನವು ಪ್ರಾಪ್ತವಾದ ಕೂಡಲೆ, ರಾಜನಿಗೆ ಇಳಿಯಿರಿ ! ಎಂದು ಹೇಳಿದನು ಆಗ ಚಂದ್ರಕಾಂತನು - ಎಲೋ ನಾನು ನಿನ್ನನ್ನು ಕೂಡ್ರಿಸಿ

ಕೊಂಡು ಇಲ್ಲಿಯವರೆಗೆ ಬಂದದ್ದಕ್ಕೆ ಈ ಪ್ರಕಾರವಾಗಿ ಉಪಕಾರವನ್ನು ತೀರಿಸುವಿಯೊ? ಎಂದು ಕೇಳಿದನು ಈ ಮಾತಿಗೆ ಆ ಭಿಕ್ಷುವು - ಕುದುರೆಬಿಟ್ಟು ಇಳಿಯೆಂದು, ನನಗೆ ಅಪ್ಪಣೆ ಮಾಡುತ್ತೀಯೊ? ಇದು ನನ್ನ ಕುದುರೆಯು ಹೀಗಿದ್ದು ನನ್ನ ಮೇಲೆಯೇ ಅಪರಾಧವನ್ನು ಹೊರಿಸುತ್ತಾನೆ ನೋಡಿದಿರಾ ! ಎಂಥ ಧರ್ಮಲೋಪ ದಿವಸಗಳು ಪ್ರಾಪ್ತವಾದವು ನೋಡಿರಿ, ಎಂದು ಅನ್ನಹತ್ತಿದನು.

ಈ ಪ್ರಕಾರ ಉಭಯತರು ಪಟ್ಟಣದ ಮಧ್ಯಬೀದಿಯಲ್ಲಿ ವಾದ ವಿವಾದ ಮಾಡುತ್ತ ನಿಂತುಕೊಂಡರು. ನೆರೆಹೊರೆಯವರು ನೆರೆದರು ಈ ವ್ಯಾಜ್ಯದ ವರ್ತಮಾನವು ಬೀರಬಲನ ಕಿವಿಯವರೆಗೆ ಹೋಯಿತು ಆಗ ಅವನು ಅವರಿಬ್ಬರನ್ನು ಕರೆಯಿಸಿಕೊಂಡು ಸತ್ಯವಾದ ಸಂಗತಿ ಯೇನೆಂದು ವಿಚಾರಿಸಿದನು ಆಗ ಮಣಿಪುರದ ದೊರೆಯು ವ್ಯಾಜ್ಯದ ಆದ್ಯೋಪಾಂತ ಸಂಗತಿಯನ್ನು ವಿವರಿಸಿದನು ಆಮೇಲೆ ಬಿಕ್ಷುಕನು ಮುಂದೆಬಂದು - ಮಹಾರಾಜ! ನಾನು ನನ್ನ ಕುದುರೆಯಮೇಲೆ ಕುಳಿತುಕೊಂಡು, ಈ ಪಟ್ಟಣಕ್ಕೆ ಬರಹತ್ತಿದೆನು ಮಾರ್ಗದಲ್ಲಿ ಇವನುಬಂದು ಇದು ನನ್ನ ಕುದುರೆ; ಕೆಳಗೆ ಇಳಿ; ಎಂದು ನಿರ್ಭಂದಿಸಹತ್ತಿದ್ದಾನೆ ಸತ್ಯವಾದ ಸಂಗತಿಯನ್ನು ವಿಜ್ಞಾಪನೆ ಮಾಡಿಕೊಂಡಿದ್ದೇನೆ ಯೋಗ್ಯವಾದ ನಿರ್ಣಯದಿಂದ, ನನ್ನ ಕುದುರೆಯು ನನ್ನ ಕೈವಶವಾಗುವಹಾಗೆ ಮಾಡರಿ ಎಂದು ವಿಜ್ಞಾಪನೆ ಮಾಡಿಕೊಂಡನು ಅದಕ್ಕೆ ಬೀರಬಲನು - ಈ ದಿವಸ ಈ ಕುದುರೆಯು ನನ್ನ ಹತ್ತಿರದಲ್ಲಿಯೇ ಇರಲಿ ಪ್ರಾತಃಕಾಲದಲ್ಲಿ ಇದರ ನಿರ್ಣಯ ಮಾಡುವೆನು; ಎಂದು ಹೇಳಿ ಅವರಿಬ್ಬರನ್ನೂ ಕಳುಹಿಸಿಕೊಟ್ಟನು.

ಮರುದಿವಸ ಮಣಿಪುರದ ದೊರೆಯೂ ಬಿಕ್ಷುಕನೂ ನಿಯತವಾದ ಸಮಯಕ್ಕೆ ನ್ಯಾಯಾಸ್ಥಾನಕ್ಕೆ ಬಂದರು ಉಭಯತರ ಕಡೆಯಿಂದಲೂ, ಪ್ರಮಾಣವನ್ನು ಮಾಡಿಸಿದನು. ಆಮೇಲೆ ಕುಂಟ ಬಿಕ್ಷುಕನನ್ನು ಕುರಿತು- ನಿನ್ನ ಅಶ್ವವು, ಬಾದಶಹರ ಅಶ್ವಶಾಲೆಯಲ್ಲಿ ಅದೆ ಅದನ್ನು ತೆಗದುಕೊಂಡು ಬಾ, ಎಂದು ಹೇಳಿದನು ಆ ಅಶ್ವಶಾಲೆಯಲ್ಲಿ ಅಸಂಖ್ಯಾತವಾದ ಅಶ್ವಗಳು ಇದ್ದವು ಅದರಲ್ಲಿ ತನ್ನ ಅಶ್ವವು ಯಾವದೆಂಬದು ತಿಳಿಯದೆ ಹೋಯಿತು. ಆಮೇಲೆ ಚಂದ್ರಕಾಂತನನ್ನು ಕಳುಹಿ ಕೊಟ್ಟನು ಅವನು ಅಶ್ವಶಾಲೆಯಲ್ಲಿ ಕಾಲಿಟ್ಟಕೂಡಲೆ ಅಶ್ವವು ತನ್ನ ಯಜಮಾನನನ್ನು ಗುರುತಿಸಿ ಹೇಷಾರವವನ್ನು ಮಾಡಿತು ಈ ಸಂಗತಿಯನ್ನು ಅಶ್ವಶಾಲೆಯ ಅಧ್ಯಕ್ಷನು ಬೀರಬಲನಿಗೆ ತಿಳಿಸಿದನು ಆಗ ಬೀರಬಲನು ಆ ತುರಗವನ್ನು ಚಂದ್ರಕಾಂತನಿಗೆಕೊ

ಡಿಸಿ, ಭಿಕ್ಷುಕನಿಗೆ, ಐವತ್ತು ಪೆಟ್ಟುಗಳನ್ನು ಬಲವಾಗಿ ಹೊಡಿಯಿರಿ! ಎಂದು ಅಪ್ಪಣೆ ಮಾಡಿದನು.

ಆಮೇಲೆ ಚಂದ್ರಕಾಂತನು - ತಾವು ಈ ನ್ಯಾಯ ವಿಮರ್ಶೆಯನ್ನು ಯಾವ ಆಧಾರದಮೇಲಿಂದ ಮಾಡಿದಿರಿ? ಎಂದು ಕೇಳಿದನು ಅದಕ್ಕೆ ಬೀರಬಲನು - ಈ ಹೆಳವನು ಅಶ್ವಶಾಲೆಗೆ ಹೋಗಿನೋಡಲು, ಇವನಿಗೆ ಕುದುರೆಯ ಗುರುತಪ್ರಾ ಸಹ ಹತ್ತಲಿಲ್ಲ ನೀವು ಹೋದಕೂಡಲೆ, ಕುದುರೆಯು ಆನಂದದಿಂದ ಹೇಷಾರವವನ್ನು ಮಾಡಹತ್ತಿತು ಇಷ್ಟೇ ಆಧಾರದ ಮೇಲಿಂದ ಇದು ನಿಮ್ಮ ಕುದುರೆಯೆಂದು ನಿರ್ಣಯಿಸಿ, ನಿಮ್ಮ ವಶಕ್ಕೆ ಕೊಡಿಸಿದೆನು, ಎಂದು ಹೇಳಿದನು ಆಗ ಚಂದ್ರಕಾಂತನು ತನ್ನ ನಿಜಸ್ಥಿತಿಯನ್ನು ಮರೆಮಾಚಿಕೊಂಡು, ತನ್ನ ದೇಶಕ್ಕೆ ಹೊಟುಹೋದನು. ಆ ತನ್ನ ದೇಶದಲ್ಲಿ ಬೀರಬಲನ ಚಾತುರ್ಯವನ್ನು ಬಹುಪರಿಯಾಗಿ ಹೊಗಳಿದನು.

೧೭೭. ಕಮ್ ಅಸಲಕಾ ಅಸಲ, ಅಸಲಕಾ ಕಮ್ ಅಸಲ.
ಗದ್ದೀಕಾ ಗಧಾ, ಔರಬಾಜಾರಕಾ ಕುತ್ತಾ

ಮಲಿಯಾಳ ದೇಶದಧಿಪತಿಯಾದ ರೋಹಸೇನನು "ಕಮ್ ಅಸಲಕಾ ಅಸಲ, ಅಸಲಕಾಕಮ್ ಅಸಲ, ಗದ್ದೀಕಾ ಗಧಾ ಔರ ಬಾಜಾರಕಾಕುತ್ತಾ" ಈ ನಾಲ್ಕು ವಸ್ತುಗಳನ್ನು ಶೀಘ್ರವಾಗಿ ಕಳಿಸಿ ಕೊಡಿರಿ; ಇಲ್ಲವಾದರೆ ಯುದ್ಧಸಿದ್ಧತೆಯನ್ನು ಮಾಡಿರಿ! ಎಂಬ ಅಭಿಪ್ರಾಯ ಗರ್ಭಿತವಾದ ಒಂದು ಲೇಖನವನ್ನು ಬರೆದು, ದೂತ, ಮುಖಾಂತರವಾಗಿ ಅಕಬರ ಬಾದಶಹನಿಗೆ ಕಳುಹಿಸಿ ಕೊಟ್ಟನು ಬಾದಶಹನು ಆ ಪತ್ರಿಕೆಯನ್ನೋದಿಕೊಂಡಕೂಡಲೆ ಮ್ಲಾನವದನನಾಗಿ ಕುಳಿತುಕೊಂಡನು. ಅಷ್ಟರಲ್ಲಿ ಬೀರಬಲನು ಬಂದು ಮುಖವು ಮ್ಲಾನವಾದ ಕಾರಣವೇನೆಂದು ಕೇಳಿದನು. ಬಾದಶಹನು ಆ ಲೇಖನವನ್ನು ಬೀರಬಲನ ಕೈಯಲ್ಲಿತ್ತು "ಇದರಲ್ಲಿ ಲೇಖಿಸಿರುವ ಪದಾರ್ಥಗಳು ದೊರೆಯುವದು ಅಸಂಭವವು ವ್ಯರ್ಥವಾಗಿ ಪ್ರಾಣಹಾನಿ ಯಾಗುವದಲ್ಲಾ! ಎಂದು ಚಿಂತಿಸುತ್ತೇನೆ" ಎಂದು ಹೇಳಿದನು. ಆಗ ಬೀರಬಲನು "ಈ ಪದಾರ್ಥಗಳು ದೊರೆಯುವದು ಅಸಂಭವವಲ್ಲ ಸ್ವಲ್ಪ ಶ್ರಮಸಾಧ್ಯದಿಂದ ದೊರೆಯುವವು ಅದಕ್ಕೋಸುಗ ಮಲೆಯಾಳದಧಿಪನಿಗೆ ಒಂದು ವರುಷದವಧಿ ಯೊಳಗಾಗಿ ಕಳುಹಿಸಿಕೊಡುತ್ತೇನೆ" ಎಂಬದಾಗಿ ಪ್ರತ್ಯುತ್ತರವನ್ನು ಬರೆದು ಕಳುಹಿಸಿರಿ ನಾನು ಈ ಪದಾರ್ಥಗಳನ್ನು ಒದಗಿಸಿಕೊಡುತ್ತೇನೆ, ಎಂದು ಹೇಳಿದನು. ಬೀರಬಲನ ಸಮ್ಮತಿಯಿಂದ ಬಾದಶಹನು, ಮಲಿಯಾಳದ ಅರಸನಿಗೆ ಪ್ರತ್ಯುತ್ತರವನ್ನು ಬರೆದು ಕಳುಹಿಸಿದನು ಬೀರಬ

ಲನು ಈ ಪದಾರ್ಥಗಳ ಶೋಧಾರ್ಥವಾಗಿ ಒಂದು ಲಕ್ಷರೂಪಾಯಿಗಳನ್ನು ಬೊಕ್ಕಸದೊಳಗಿಂದ ತೆಗೆದುಕೊಂಡು ವರ್ತಕನ ವೇಷದಿಂದ ರೋಹಸೇನನ ರಾಜಧಾನಿಯನ್ನು ಕುರಿತು ತೆರಳಿದನು. ಅಲ್ಲಿ ಹೋಗಿ ತಲುಪಿದ ಮೇಲೆ ಕೊತವಾಲನ ಮನೆಯ ಹತ್ತರ ಒಂದು ಗೃಹವನ್ನು ಕ್ರಯಕ್ಕೆ ತೆಗೆದುಕೊಂಡು ಅದರಲ್ಲಿ ತನ್ನ ಪ್ರಸ್ಥಾನವನ್ನಿಟ್ಟು ವ್ಯವಹಾರವನ್ನು ಆರಂಭಿಸಿದನು ಆಮೇಲೆ ಆ ನಗರದ ಕೊತವಾಲನೊಡನೆ ಸ್ನೇಹವನ್ನು ಇಟ್ಟು ದಿನಾಲು ಅವನನ್ನು ತನ್ನ ಮನೆಗೆ ಊಟಕ್ಕೆ ಕರೆಯೋಣ, ದಾನ, ಪಾನಾದಿಗಳಿಂದ ಸತ್ಕರಿಸೋಣ ಮೋದಲಾದ ಸಾಧನಗಳಿಂದ ಆಸ್ನೇಹವನ್ನು ವೃದ್ಧಿಪಡಿಸಿದನು. ಆಗ ಕೊತವಾಲನು ನಗರದಲ್ಲಿ ಹೊಸದಾಗಿಬಂದ ಕಲಾವಂತಿನಿಯರನ್ನು ಕರೆದುಕೊಂಡು ಬಂದು, ಗಾಯನ ವಾದನಗಳನ್ನು ಮಾಡಿಸಿ ಈ ಸಾವುಕಾರನ ಕಡೆಯಿಂದ ಉಚಿತವನ್ನು ಕೊಡಿಸಿ ಕಳುಹುವ ಸಾಂಪ್ರದಾಯವನ್ನಿಟ್ಟನು. ಹೀಗಿರಲು ಆ ಪಟ್ಟಣಕ್ಕೆ ಷೋಡಶ ವರುಷ ಪ್ರಾಯದ ಒಬ್ಬ ವೇಶ್ಯೆಯು ಬಂದಳು. ಈ ವರ್ತಮಾನವು ಕೊತವಾಲನ ಕಿವಿಗೆ ಬಿದ್ದಕೂಡಲೆ ಅವನು ತನ್ನ ನೂತನ ಮಿತ್ರನ ಬಳಿಗೆ ಬಂದು ನಿನ್ನೆಯ ದಿವಸ ಈ ಪಟ್ಟಣಕ್ಕೆ ಒಬ್ಬ ವೇಶ್ಯೆಯು ಬಂದಿದ್ದಾಳೆ. ಅವಳು ಗಾಯನವಾದನಗಳಲ್ಲಿ ಅತಿಪ್ರಖ್ಯಾತಿಯನ್ನು ಪಡೆದಿರುವಳಂತೆ ಅದು ಹ್ಯಾಗೆ ಇರಲಿ! ಅವಳ ರೂಪವನ್ನಂತೂ ವರ್ಣಿಸುವದ ಸಾಧ್ಯವು ಅಪ್ಸರೆಯರಲ್ಲಿ ಅಂಥ ರೂಪವತಿಯು ದೊರಕುವಳೋ ಇಲ್ಲವೋ ? ನಾನಂತೂ ನೋಡಿ ಭ್ರಾಂತನಾದೆನು ಆದರೆ ನಾನು ಭ್ರಾಂತನಾಗಿ ಉಪಯೋಗವೇನು ! ಹೆಸರು ಶ್ರೀರಸಾಗರ ಭಟ್ಟ ಮನೆಯಲ್ಲಿ ಹುಳಿಮಜ್ಜಿಗೆ ಇಲ್ಲ, ಎಂಬ ಸಾಮತಿಯಂತೆ ನನ್ನ ಅವಸ್ಥೆಯದೆ ಆದರೆ ನಿನ್ನಂಥ ಲಕ್ಷ್ಮೀಪುತ್ರರಿಗೆ ಅವಳು ಯೋಗ್ಯಳಾಗಿದ್ದಾಳೆ ಇದರಲ್ಲಿ ಏನೂ ಸಂದೇಹವಿಲ್ಲ ನಿನಗೆ ಇಚ್ಛೆಯಿದ್ದರೆ ನಾಳೆಪ್ರಾತಃ ಕಾಲದಲ್ಲಿ ಅವಳನ್ನು ಇಲ್ಲಿಗೆ ಕರೆಸೋಣ ಎಂದು ಪ್ರಶಂಸೆಮಾಡಹತ್ತಲು ಧನಾಢ್ಯನಾದ ಬೀರಬಲನು (ವೇಷಧಾರಿಯಾದ ವರ್ತಕನು) ಸಮ್ಮತಿಸಿದನು. ಮರುದಿವಸ ಆ ವೇಶ್ಯೆಯು ಸಾವುಕಾರನ ಮನೆಗೆ ಬಂದು ತನ್ನಲ್ಲಿದ್ದ ಗಾನ ವಿದ್ಯೆಯನ್ನೂ ನರ್ತನ ಚಮತ್ಕಾರವನ್ನೂ ವಿಶದ ಪಡಿಸಿದಳು ಬೀರಬಲನು ಅವಳ ವಿದ್ವತ್ತಿಗೆ ಆನಂದಪಟ್ಟು ಕೊತವಾಲನನ್ನು ಕುರಿತು, ಇವಳಿಗೆ ಏನು ಕೊಡಬೇಕು ! ಎಂದು ಪ್ರಶ್ನೆಮಾಡಿದನು ಆ ಕೂಡಲೆ ಕೊತವಾಲನು ಇವಳಯೋಗ್ಯತೆಗೆ ಸರಿಯಾಗಿ ಕೊಡಬೇಕಾದರೆ ಏನಿಲ್ಲೆಂದರೂ ಎರಡು ನೂರು ರೂಪಾಯಿಗಳನ್ನು ಕೊಡಬಹುದು ಎಂದು ಹೇಳಿದನು ತತ್‌ಕ್ಷ

ಣಕ್ಕೇ ಪೆಟ್ಟಿಗೆ ಯೊಳಗಿಂದ ಎರಡುನೂರು ರೂಪಾಯಿಗಳನ್ನು ತೆ... ವೇಶ್ಯೆಯ ಮುಂದೆ ಸುರುವಿದನು. ಅವನ್ನು ಕಂಡು ಅವಳು ವರ್ತಕ ಮಹಾಶ್ರೇಷ್ಠಿಯು ನಾನು ನಿಮ್ಮಂಥ ದಾನ ಶೂರರನ್ನು ಇಂದಿನವರೆಗೂ ನೋಡಿದ್ದಿಲ್ಲವು ನಾನು ನಿಮ್ಮ ಪಾಪಗಳನ್ನು ಬಿಟ್ಟು ಎಲ್ಲಿಯೂ ಚಲಿಸುವದಿಲ್ಲ ಕೃಪಾಳುಗಳಾಗಿ ನನ್ನ ವಾಂಛಿತವನ್ನು ಪೂರ್ಣಮಾಡಬೇಕು ಎಂದು ವಿಜ್ಞಾಪನೆಮಾಡಿಕೊಂಡಳು ಧನಾಢ್ಯನು ಅವಳ ಮಾತಿಗೆ ಒಪ್ಪಿಕೊಂಡು ಅವಳ ಗೃಹಕ್ಕೆ ತೆರಳಿ ಅನೇಕ ಪ್ರಕಾರದ ಸುಖವಿಲಾಸಗಳಲ್ಲಿ ರಾತ್ರಿಯನ್ನು ಒಂದು ಕ್ಷಣದಂತೆ ಕಳೆದು ಪ್ರಾತಃಕಾಲದಲ್ಲಿ ತನ್ನ ಮನೆಗೆ ಬಂದನು.

ಮುಂದೆ ಕಿಂಚಿತ್ಕಾಲದ ಮೇಲೆ ಕೊತವಾಲನು ಈ ಸಾವುಕಾರನಿಗೆ ವಿವಾಹ ಮಾಡಿಕೊಳ್ಳುವದು ಯುಕ್ತವೆಂದುಬೋಧಿಸಹತ್ತಿದನು ಆಗ ಸಾವುಕಾರನು ನನಗೆ ಯಾವದಾದರೊಂದು ಕುಲೀನ ಮನೆತನದ ಕನ್ಯೆಯು ದೊರೆತರೆ, ವಿವಾಹ ಮಾಡಿಕೊಳ್ಳುತ್ತೇನೆಂದು ಹೇಳಿದನು ಅದಕ್ಕೆ ಕೊತವಾಲನು ನಿನ್ನ ಸಲುವಾಗಿ ನಾನು ಕನ್ಯೆಯನ್ನು ಶೋಧಿಸುವ ಪ್ರಯತ್ನ ಮಾಡುತ್ತೇನೆ.

ಸಾವುಕಾರ — ಒಳ್ಳೇದು, ಅಂಥಕನ್ಯೆಯು ದೊರೆತರೆ, ಬಹಳೇ ಉತ್ತಮವು.

ಕೊತವಾಲನು ಕನ್ಯಾಶೋಧನವನ್ನು ನಡೆಯಿಸಿದನು ದೈವವಶಾತ್ ಕುಲೀನ ಮನೆತನದ ರೂಪವತಿಯಾದ ಒಬ್ಬ ಕನ್ಯೆಯು ದೊರೆತಳು ಅವಳನ್ನು ಕರೆತಂದು ಸಾವುಕಾರನಿಗೆ ತೋರಿಸಿದನು. ಅವನು ಒಪ್ಪಿಕೊಂಡನು ಯಥಾವಿಧಿಯಾಗಿ ವಿವಾಹ ಸಮಾರಂಭವು ಜರಗಿತು. ವಧುವು ಮನೆಗೆ ಬಂದಳು. ... ... *

ಯಾವಾಗ ಹೆಂಡತಿಯು ಗೃಹದಲ್ಲಿ ಬಂದು ವಾಸಮಾಡಿದಳೋ ಆದಿನ ಮೊದಲ್ಗೊಂಡು ಪ್ರತಿದಿವಸದಲ್ಲಿ ಬಲವಾದ ಒಂದು ಪೆಟ್ಟನ್ನು ಕೊಟ್ಟು ಹೊರಗೆ ಹೋಗುವ ಪರಿಪಾಠವಿಟ್ಟನು. ಮುಂದೆ ಒಂದುದಿವಸ ಆ ಸಾವುಕಾರನು ಪೇಟೆಯೊಳಗಿಂದ ಒಂದು ಪಕ್ವವಾಗಿದ್ದ ಕರಬೂಜೀ ಹಣ್ಣನ್ನು ತಂದು ಸಮನಾದ ಎರಡು ಭಾಗಗಳನ್ನು ಮಾಡಿ ಅವುಗಳಮೇಲೆ ಶುಭ್ರವಾದ ಒಂದು ಬಟ್ಟೆಯನ್ನು ಪರಿವೇಷ್ಟನಮಾಡಿ ಕೆಲವುಹೊತ್ತು ಇಟ್ಟನು. ಆಮೇಲೆ ಅದರೊಳಗಿಂದ ರಕ್ತವರ್ಣದ ನೀರು ಸ್ರವಿಸಹತ್ತಲು ಅದನ್ನು ತೆಗೆದುಕೊಂಡು ಧಾವಿಸಿ ಮನೆಗೆಬಂದು ಒಂದು ಪೆಟ್ಟಿಗೆಯಲ್ಲಿಟ್ಟು, ಬೀಗವನ್ನು ಹಾಕಿ ಆ ಪೆಟ್ಟಿಗೆಯನ್ನು ತನ್ನ ಹೆಂಡತಿಯ ಸ್ವಾಧೀನಕ್ಕೆಕೊಟ್ಟು ಒಂದು ಬಲವಾದ ಪೆಟ್ಟನ್ನು ಕೊಟ್ಟು- " ರಾಜತನಯನ ಶಿರವನ್ನು ಕೊಯ್ದುಕೊಂಡುಬಂದು ಈ ಪೆಟ್ಟಿಗೆಯಲ್ಲಿಟ್ಟಿದ್ದೇನೆ ಅನ್ಯರಿಗೆ ಈ ವರ್ತಮಾನವು ತಿಳಿಯ

ಬಹಳಜೋಕೆ ! ಒಂದುವೇಳೆ ಈ ವರ್ತಮಾನವು ಬಯಲಿಗೆ ಬಂ ನಿನ್ನನ್ನು ಕಡಿದು ತುಂಡುಮಾಡಿ ಬಿಟ್ಟೇನು! ” ಎಂದು ಆಜ್ಞೆಮಾಡಿ ಹೊರಬಿದ್ದು ಹೋದನು. ಆ ಸ್ತ್ರೀಯು ರೋದನ ಮಾಡಲಾರಂಭಿಸಿದಳು, ಅವಳಧ್ವನಿಯು ಕೊತವಾಲನಿಗೆಕೇಳಬರಲು ಅವನು ನಾಲ್ಕೆಂಟುಜನ ಸಿಪಾಯಿಗಳನ್ನು ಕರೆದುಕೊಂಡು ಓಡುತ್ತ ಸಾವುಕಾರನ ಮನೆಗೆಬಂದನು ಮತ್ತು ರೋದನಕ್ಕೆ ನಿಮಿತ್ತವೇನೆಂದು ಕೇಳಿದನು. ಆಗ ಆ ಸಾವುಕಾರನ ಮಡದಿಯು- “ ನನ್ನ ಪತಿಯು ಈ ಪಟ್ಟಣದ ರಾಜತನಯನ ಶಿರವನ್ನು ಕೊಯ್ದುಕೊಂಡು ಬಂದು ಈ ಪೆಟ್ಟಿಗೆಯಲ್ಲಿಟ್ಟು ಬೀಗವನ್ನು ಹಾಕಿಕೊಂಡು ಹೊರಗೆಹೋಗಿದ್ದಾನೆ ಈ ಸಂಗತಿಯನ್ನು ಗುಪ್ತವಾಗಿ ಇಡು! ಎಂದು ನನಗೆ ಅಪ್ಪಣೆಮಾಡಿ ಬಲವಾಗಿ ಪ್ರಹಾರಮಾಡಿ ಹೋಗಿದ್ದಾನೆ, ಆ ಪೆಟ್ಟಿನ ನೋವಿನಿಂದ ನಾನು ರೋದಿಸಹತ್ತಿದ್ದೇನೆ ” ಎಂದು ಹೇಳಿದಳು. ಅವಳಬೆನ್ನ ಮೇಲಿನ ಬಾಸಳಿಕೆಗಳನ್ನು ನೋಡಿದಕೂಡಲೇ ಸಾವುಕಾರನನ್ನು ಹಿಡಿದುಕೊಂಡುಬರ್ರಿ! ಎಂದು ತನ್ನ ಸಿಪಾಯಿಗಳಿಗೆ ಹೇಳಿದನು. ಅವರು ಕೂಡಲೆ ಧಾವಿಸಿ ಹೋಗಿ ಮಾರ್ಗದಲ್ಲಿ ಹೋಗುತ್ತಿದ್ದ ಬೀರಬಲನನ್ನು ಹಿಡಿದು, ಚತುರ್ಭುಜಮಾಡಿ ನಿಂದಿಸುತ್ತ ಹೊಡೆಯುತ್ತ ದಬ್ಬುತ್ತ ಕೊತವಾಲನೆಡೆಗೆ ಎಳೆತಂದರು. ಆಗ ಆ ಸಾವುಕಾರನು ಕೊತವಾಲಸಾಹೇಬ ನೀವು ನನ್ನ ಪರಮ ಮಿತ್ರರಾಗಿದ್ದು ನನ್ನನ್ನು ಹೊಡೆದುಬಡೆದು ಯಾಕೆ ಪೀಡಿಸುತ್ತೀರಿ.

ಕೊತವಾಲ- “ ಈ ಸಮಯದಲ್ಲಿ ನೀನು ನನ್ನ ಮಿತ್ರನಲ್ಲ, ನಿನ್ನಿಂದ ಮಹತ್ತರವಾದ ಒಂದು ಅಪರಾಧವು ಸಂಘಟಿಸಿದೆ ” ಎಂದು ಹೇಳಿ, ಅವನನ್ನು ರಾಜಸಭೆಗೆ ತೆಗೆದುಕೊಂಡು ಹೋಗಿ- “ ಪೃಥ್ವೀನಾಥ! ಇವನು ಒಂದು ಮಹತ್ತಾದ ಅಪರಾಧವನ್ನು ಮಾಡಿದ್ದಾನೆ. ಏನಂದರೆ- “ ಯುವರಾಜನ ಶಿರವನ್ನು ಕಡಿದುಕೊಂಡು ಹೋಗಿ ಪೆಟ್ಟಿಗೆಯಲ್ಲಿಟ್ಟು ಬೀಗಹಾಕಿ, ಈ ಸುದ್ದಿಯು ಅನ್ಯರಿಗೆ ವಿದಿತವಾಗದಂತೆ ಜಾಗ್ರತೆಯಿಂದ ಇರು! ಎಂದು ಅಪ್ಪಣೆಮಾಡಿ ನಿರಪರಾಧಿಯಾದ ತನ್ನ ಸ್ತ್ರೀಯನ್ನು ಚೆನ್ನಾಗಿ ಪ್ರಹರಿಸಿ ಹೊರಟು ಹೋಗಿದ್ದಾನೆ ಅವಳು ರೋದಿಸುವ ಸ್ವರವು ಸಮೀಪದಲ್ಲಿದ್ದ ನನ್ನ ಕಿವಿಗೆ ಕೇಳಿಸಲು, ನಾನು ಹೋಗಿ ಸಮಾಚಾರವೆಲ್ಲವನ್ನು ತಿಳಿದುಕೊಂಡು ಇವನನ್ನು ಹಿಡತರಿಸಿ, ಸನ್ನಿಧಿಯಲ್ಲಿ ಒಪ್ಪಿಸಿದ್ದೇನೆ ” ಎಂದು ಅರಿಕೆಮಾಡಿಕೊಂಡನು. ಆಗ ರಾಜನು ಯಾವದನ್ನೂ ವಿಚಾರಿಸದೆ;- “ ವಧಸ್ಥಾನಕ್ಕೆ ಕರೆದುಕೊಂಡು ಹೋಗಿ ತಲೆಹೊಡೆದು ಬಿಡರಿ, ” ಎಂದು ಆಜ್ಞಾಪಿಸಿದನು. ಕೊತವಾಲನು ಸಾವುಕಾರನನ್ನು ಕರೆದುಕೊಂಡು ವಧಸ್ಥಾನಕ್ಕೆ ನಡೆದನು

ಇದನ್ನು ಕಂಡು ಸಾವುಕಾರನ ಸೇವಕರು ಈ ವರ್ತಮಾನವನ್ನು ತಮ್ಮ ಒಡೆಯನ ಆಜ್ಞೆಯಪ್ರಕಾರ ಒಡತಿಗೆ ತಿಳಿಸಿದರು. ಅದನ್ನು ಕೇಳಿ ಕ್ರೋಧಾವಿಷ್ಟಳಾಗಿದ್ದ ಆ ಸಾವುಕಾರನ ಸ್ತ್ರೀಯು- "ಅರಿಷ್ಟವು ಕಳೆದುಹೋಯಿತು ನಾನು ಪರಿಪರಿಯಿಂದ ಅವನಸೇವೆಯನ್ನು ಮಾಡುತ್ತಿದ್ದರೂ ಸಹ ದಿನಾಲು ನನಗೆ ಪೆಟ್ಟುಗಳೇನು ತಪ್ಪುತ್ತಿದ್ದಿಲ್ಲ ಆದದ್ದು ಒಳಿತೇ ಆಯಿತು" ಎಂದು ಗುಣುಗುಟ್ಟಿದಳು. ಸೇವಕರು ಈ ಮಾತನ್ನು ತಮ್ಮ ಯಜಮಾನನಿಗೆ ತಿಳಿಸಿದರು. ಆಗ ಸಾವುಕಾರನು ವೇಶ್ಯಾಸ್ತ್ರೀಯಬಳಿಗೆ ಹೇಳಿ ಕಳುಹಿಸಿದನು, ಮತ್ತು ಕೊತವಾಲನನ್ನು ಕುರಿತು "ಕೊತವಾಲಸಾಹೇಬ! ನನ್ನನ್ನು ಆ ವೇಶ್ಯೆಯ ಗೃಹದಮಾರ್ಗವಾಗಿ ಕರೆದುಕೊಂಡು ಹೋಗಿರಿ" ಎಂದು ಬಿನ್ನಹ ಮಾಡಿಕೊಂಡನು. ಈ ಮಾತಿಗೆ ಕೊತವಾಲನು ಸಮ್ಮತಿಸಿ ಆ ಮಾರ್ಗದಿಂದಲೇ ಸಾಗಿದನು, ಆ ವೇಶ್ಯೆಯ ಗೃಹವು ಸಮೀಪಿಸಿದ ಕೂಡಲೆ ಸಾವುಕಾರನು ಗಟ್ಟಿಯಾಗಿ ಕೂಗಿಕೊಂಡನು ಆ ಧ್ವನಿಯನ್ನು ಗುರುತಿಸಿ, ಆ ವೇಶ್ಯೆಯು ಗೃಹದ ಮುಂಬಾಗಿಲ ಹತ್ತರಬಂದು ಸಾವುಕಾರನ ದುರವಸ್ಥೆಯನ್ನು ಕಂಡು ಶೋಕಾಕುಲ ಹೃದಯಳಾಗಿ, ಆ ಕೊತವಾಲನಹತ್ತರ ಬಂದು- "ಜಮಾದಾರಸಾಹೇಬ! ಈ ಸಾವುಕಾರನಿಗೆ ಇನ್ನು ಎರಡುಘಳಿಗೆ ಅವಧಿಯನ್ನು ಕೊಡಿರಿ ನಾನು ಮಹಾರಾಜರ ಬಳಿಗೆಹೋಗಿ ಇವನಪ್ರಾಣರಕ್ಷಣೆಯ ಬಗ್ಗೆ ಸಾಹಸಮಾಡಿ ನೋಡುತ್ತೇನೆ ತಮ್ಮ ಶ್ರಮದಬಗ್ಗೆ ಕಿಂಚಿತ್ ಈ ದ್ರವ್ಯದಾನವನ್ನು ಸ್ವೀಕರಿಸಬೇಕು" ಎಂದು ವಿಜ್ಞಾಪನೆಮಾಡಿಕೊಂಡು ಎರಡುನೂರು ರೂಪಾಯಿಗಳನ್ನು ಕೊತವಾಲನ ಪದರಿನಲ್ಲಿ ಸುರುವಿದಳು. ಕೊತವಾಲನು ಆ ದ್ರವ್ಯವನ್ನು ಸ್ವೀಕರಿಸಿ ನಿನ್ನ ಮಾರ್ಗಪ್ರತೀಕ್ಷೆಯನ್ನು ಎರಡು ಘಳಿಗೆಯವರೆಗೆ ಮಾಡುತ್ತೇನೆಂದು ಹೇಳಿದನು.

ಆಗ ಆ ಕಲಾವಂತಿನಿಯು ರಾಜಸಭೆಯನ್ನು ಪ್ರವೇಶಿಸಿ, ತನ್ನನೃತ್ಯಗಾಯನಗಳಿಂದ ರಾಜರ ಮನಸ್ಸನ್ನು ಪ್ರಸನ್ನೀಕರಿಸಿ ಕೊಂಡಳು.

ರಾಜ—ನಾನು ನಿನ್ನವಿದ್ವತ್ತೆಯನ್ನು ಕಂಡು ಪ್ರಸನ್ನನಾಗಿದ್ದೇನೆ, ನಿನ್ನ ಇಚ್ಛೆಯೇನಿರುವದು ಕಥನಮಾಡು.

ವೇಶ್ಯಾ—ಪೃಥ್ವೀಶ! ತಾವು ನನ್ನಮೇಲೆ ಪ್ರಸನ್ನರಾಗಿದ್ದರೆ ಆ ಸಾವುಕಾರನಿಗೆ ಪ್ರಾಣದಾನವನ್ನೀಯಬೇಕು.

ರಾಜಾ-ಅವನು ಇಷ್ಟರಹೊತ್ತಿಗೆ ಮೃತ್ಯುಮುಖವನ್ನು ಪ್ರವೇಶಿಸಿರಬಹುದು

ವೇಶ್ಯಾ—ಹೀಗೆ ನಡಿಯದೆ ಇದ್ದಪಕ್ಷದಲ್ಲ ಅವನಿಗೆ ಪ್ರಾಣದಾನವನ್ನೀಯಬೇಕು. ... ... *

ರಾಜಾ—“ ಒಳ್ಳೇದು ” ಎಂದು ಹೇಳಿ, ಸೇವಕರನ್ನು ಕರೆದು- “ ಆ
ಸಾವುಕಾರನನ್ನು ಬಿಟ್ಟುಬಿಡುವಂತೆ ” ರಾಜನ ಅಪ್ಪಣೆಯಾಗಿರುವದೆಂದು
ಕೊತವಾಲನಿಗೆ ತಿಳಿಸಿರಿ, ಶೀಘ್ರವಾಗಿ ಗಮನಮಾಡಿರಿ ಎಂದು ಹೇಳಿದನು.
ಕರ್ಮಚಾರಿಗಳು ಧಾವಿಸುತ್ತ ಹೋಗಿ ಕೊತವಾಲನಿಗೆ ರಾಜಾಜ್ಞೆಯನ್ನು
ತಿಳಿಸಿದರು, ಆ ಕೂಡಲೇ ಅವನು ಬೀರಬಲನನ್ನು ಬಿಟ್ಟುಬಿಟ್ಟನು. ಸಾವು
ಕಾರನು ಹಿಂದಿರುಗಿ ಬರುವಾಗ, ವೇಶ್ಯೆಯು ಮಾರ್ಗದಲ್ಲಿ ಬೆಟ್ಟಿಯಾಗಿ ಅವ
ನನ್ನು ಕರೆದುಕೊಂಡು ಹೋಗಿ ಖೇದವನ್ನು ಪ್ರದರ್ಶನ ಮಾಡಿದಳು. ಆಗ
ಆ ಸಾವುಕಾರನು ಇವಳನ್ನು ಸಮಾಧಾನಪಡಿಸಿ, ಧೈರ್ಯಬಿಡಬೇಡ ? ನಾನು
ಈ ಕೆಲಸವನ್ನು ಮಹತ್ವವಾದ ಒಂದು ಕಾರ್ಯದುದ್ದೇಶ್ಯವಾಗಿ ಮಾಡಿದ್ದೇನೆ,
ಅದು ಹಿಂದಿನಿಂದ ನಿನಗೆ ವಿದಿತವಾದೀತು ಈಗನಾನು ಸದ್ಯಕ್ಕೆ ನನ್ನ ಪಟ್ಟ
ಣವನ್ನು ಕುರಿತು ತೆರಳುತ್ತೇನೆ ಇನ್ನು ನಾಲ್ಕುದಿವಸಗಳೊಳಗೇ ಇಲ್ಲಿಗೆ ಮ
ರಳಿ ಬರುತ್ತೇನೆ, ಆಗ ನಿನ್ನನ್ನು ಕರೆದುಕೊಂಡು ಹೋಗುವೆನು ” ಎಂದು
ಧೈರ್ಯಹೇಳಿದನು.

ಆಮೇಲೆ ಆ ಪಟ್ಟಣದಲ್ಲಿದ್ದ ತನ್ನ ಯಾವತ್ತು ವ್ಯವಹಾರವನ್ನು ನಿರ್ಬಂ
ಧನೆ ಮಾಡಿಟ್ಟು ದಿಲ್ಲಿಗೆಬಂದು ಅಕಬರ ಬಾದಶಹನಿಗೆ ಬೆಟ್ಟಿಯಾಗಿ “ ಮಲಿ
ಯಾಳದ ಅರಸನುಕೇಳಿದ ಯಾವತ್ತು ಪದಾರ್ಥಗಳನ್ನು ಸಂಪಾದಿಸಿಕೊಂ
ಡು ಬಂದಿದ್ದೇನೆ ” ಎಂದು ಬಿನ್ನವಿಸಿದನು, ಅದನ್ನು ಕೇಳಿ ಬಾದಶಹನು
ಸಂತುಷ್ಟಾಂತರಂಗನಾಗಿ ಶಹಬಾಸ! ಆ ವಸ್ತುಗಳು ಎಲ್ಲಿ ಅವೆ, ಅವುಗಳಂ
ನು ತೋರಿಸು ಎಂದು ಕೇಳಿದನು. ಅದಕ್ಕೆಬೀರಬಲನು- ನರವರ ! ಆ ಪದಾ
ರ್ಥಗಳನ್ನು ಇಲ್ಲಿಗೆ ತರುವದು ಅಸಾಧ್ಯವಾಗಿ ತೋರಿದ್ದರಿಂದ ಅಲ್ಲಿಯೇ
ಬಿಟ್ಟುಬಂದಿದ್ದೇನೆ ತಾವು ಒಂದು ಪತ್ರವನ್ನು ಬರೆದುಕೊಡಿರಿ, ನಾನು ಮಲಿ
ಯಾಳಕ್ಕೆ ಹೋಗಿ ಆ ವಸ್ತುಗಳನ್ನು ಆ ರಾಜನ ಸ್ವಾಧೀನಪಡಿಸಿ, ತಮಗೆ
ಪ್ರತ್ಯುತ್ತರವನ್ನು ತಂದುಕೊಡುತ್ತೇನೆ ಎಂದು ವಿಜ್ಞಾಪಿಸಲು, ಬಾದಶಹ
ನು ಬೀರಬಲನ ಅನುಮತಿಯಪ್ರಕಾರ ಲೇಖನವನ್ನಿತ್ತು ತನ್ನ ಮುದ್ರೆಯ
ಉಂಗುರವನ್ನೊತ್ತಿ ಕೊಟ್ಟನು.

ಬೀರಬಲನು ತನ್ನ ಯೋಗ್ಯತೆಗೆ ಸರಿಯಾಗಿ ಗಜ, ತುರಗ, ಸೇನಾ,
ಮೊದಲಾದ ಪರಿವಾರದೊಂದಿಗೆ ಮಲಿಯಾಳಕ್ಕೆ ಪ್ರಯಾಣ ಬೆಳೆಸಿದನು. ಪ
ಯಣ ಗತಿಯಿಂದ ಮಲಿಯಾಳದ ರಾಜಧಾನಿಯನ್ನು ಪ್ರವೇಶಿಸಿ, ತಾನು
ಬಂದ ವರ್ತಮಾನವನ್ನು ರಾಜನಿಗೆ ಹೇಳಿ ಕಳುಹಿಸಿ ಕೊಟ್ಟನು ಆಕೂಡ
ಲೆ ಆ ರಾಜನು ಸನ್ಮಾನದಿಂದ ಬೀರಬಲನನ್ನು ತನ್ನೆಡೆಗೆ ಬರಮಾಡಿಕೊಂ

ಡು, ಯೋಗ್ಯಾಸನದಲ್ಲಿ ವಿಶ್ರಮಿಸುವಂತೆ ಹೇಳಿ, ಬಂದ ಸಮಾಚಾರವೇನೆಂದು ಪ್ರಶ್ನೆಮಾಡಿದನು. ಆಗ ಬೀರಬಲನು ಅಕಬರ ಬಾದಶಹನ ಪತ್ರಿಕೆಯನ್ನು ಅವನ ಮುಂದೆ ಇಟ್ಟನು ರಾಜನು ಆ ಪತ್ರಾಭಿಪ್ರಾಯವನ್ನು ತಿಳಿದುಕೊಂಡು, ಆ ವಸ್ತುಗಳು ಎಲ್ಲಿ ಅವೆ ? ಎಂದು ಕೇಳಿದನು ಆಗ ಬೀರಬಲನು ಕೊತವಾಲ ಸಾಹೇಬರಂತೂ ಇಲ್ಲಿಯೇ ಇರುವರು ಇನ್ನು ಒಬ್ಬ ಸ್ತ್ರೀಯನ್ನೂ, ಒಬ್ಬ ವೇಶ್ಯೆಯನ್ನೂ ಕರೆತರಿಸಬೇಕು ಎಂದು ಹೇಳಿ, ಆ ಸ್ತ್ರೀಯಳ ಮತ್ತು ವೇಶ್ಯೆಯ ಹೆಸರನ್ನೂ ಹೇಳಿ, ಅವರು ವಾಸಿಸುವ ಗೃಹವು ಯಾವ ಬೀದಿಯಲ್ಲಿ ಇರುವದೆಂಬದನ್ನೂ ತಿಳಿಸಿದನು ಕರ್ಮಚಾರಿಗಳು ರಾಜಾಜ್ಞೆಯ ಪ್ರಕಾರ ಅವರೀರ್ವರನ್ನೂ ರಾಜಸಭೆಗೆ ಕರೆತಂದರು ಆಗ ಬೀರಬಲನು ಮಹಾರಾಜ ! ನಾನು ಈ ಪೂರ್ವದಲ್ಲಿ ಸಾವುಕಾರನ ವೇಷದಿಂದ ಈ ಪಟ್ಟಣಕ್ಕೆ ಬಂದಿದ್ದೆನು. ಆಗ ನಾನು (ತನ್ನ ಪತ್ನಿಯನ್ನು ತೋರಿಸಿ) ಈ ಸ್ತ್ರೀಯಳನ್ನು ನಾನು ವಿವಾಹ ಮಾಡಿಕೊಂಡಿದ್ದೆನು ಪ್ರತಿದಿನ ನಾನು ಹೊರಬೀಳುವಾಗ ಇವಳಿಗೆ ಬೆತ್ತಾಯುಧದಿಂದ ಒಂದು ಬಲವಾದ ಪೆಟ್ಟನ್ನುಕೊಟ್ಟು ಹೋಗುವ ನಿಯಮವನ್ನಿಟ್ಟಿದ್ದೆನು ಒಂದುದಿವಸ ನನಗೆ ಪಕ್ವವಾದ ಒಂದು ಕರಬೂಜಿಯ ಹಣ್ಣು ದೃಷ್ಟಿಗೆಬೀಳಲು. ಅದನ್ನು ಕ್ರಯಕ್ಕೆ ತೆಗೆದುಕೊಂಡು, ಎರಡು ಭಾಗಮಾಡಿ, ಒಂದು ಶುಭ್ರವಾದ ವಸ್ತ್ರವನ್ನು ಪರಿವೇಷ್ಟನ ಮಾಡಿ, ಒಂದು ಪೆಟ್ಟಿಗೆಯಲ್ಲಿಟ್ಟು ಬೀಗಹಾಕಿ; ಇವಳನ್ನು ಕುರಿತು ನಾನು ರಾಜತನಯನ ಶಿರಸ್ಸನ್ನು ಕೊಯ್ದುಕೊಂಡು ಬಂದಿದ್ದೇನೆ ಈ ಸಂಗತಿಯನ್ನು ಯಾರಮುಂದೆಯೂ ಪ್ರಕಟಮಾಡಬೇಡ, ಎಂದು ಕಟ್ಟಪ್ಪಣೆ ಮಾಡಿ. ಬೆತ್ತಾಯುಧದಿಂದ ಹೊಡೆದು ಹೊರಬಿದ್ದು ಹೋದನು ಆಮೇಲೆ ಇವಳು ಮನಸ್ವಿಯಾಗಿ ರೋದಿಸಿ, ನನ್ನ ಬಂಧನಕ್ಕೆ ಕಾರಣಳಾದಳು. ಮತ್ತು ವಧಸ್ಥಾನಕ್ಕೆ ಕರದೊಯ್ಯುವಾಗ ಈ ಸಂಗತಿಯನ್ನು ಇವಳಿಗೆ ಹೇಳಿ ಕಳುಹಿಸಲು, ನನ್ನನ್ನು ರಕ್ಷಿಸುವದಕ್ಕೆ ಕಿಂಚಿತ್ತಾದರೂ ಪ್ರಯತ್ನಪಡದೆ ಸ್ವಸ್ಥವಾಗಿ ಕುಳಿತುಕೊಂಡು ಬಿಟ್ಟಳು ಇವಳ ಜಾತಿಯಲ್ಲಿ ಕುಲಿನಳಾಗಿದ್ದರೂ, ಇಂಥ ನಿಕೃಷ್ಟತೆಯನ್ನು ತೋರಿಸಿದಳು ಆದ್ದರಿಂದ ತಾವು ಬಯಸಿದ ಪ್ರಥಮವಸ್ತುವು, “ ಅನಲಮ್ ಕಮ್ ಅಸಲ ” ವೆಂಬದು; ಇವಳೇ ಇನ್ನು ದ್ವಿತೀಯ ವಸ್ತುವಾದ “ ಕಮ್ ಅಸಲಕಾ ಅಸಲ ” ಎಂಬ ವಸ್ತುವು ಈ ವೇಶ್ಯೆಯು. ಹ್ಯಾಗಂದರೆ ಇವಳು ಕನಿಷ್ಟಜಾತಿಯವಳಾದರೂ, ನನ್ನ ಪ್ರಾಣ ರಕ್ಷಣೆಯನ್ನು ಮಾಡುವದಕ್ಕೆ ಯಾವ ಯಾವ ಉಪಾಯಗಳನ್ನು ಮಾಡಿದಳೆಂಬ ಸಂಗತಿಯು ತಮಗೆ ವಿದಿತವದೆ. ಇನ್ನು ಮೂರನೇ ವಸ್ತುವಾದ

"ಬಾಜಾರಕಾಕುತ್ತಾ" ಎಂಬುದು, ಈ ಕೊತವಾಲನು ಹ್ಯಾಗಂದರೆ, "ಯಜಮಾನನು ತನಗೆ ಆಹಾರವನ್ನು ಹಾಕುತ್ತ ಜೋಪಾಸನೆ ಮಾಡುತ್ತಿರುವಾಗ ಮಾತ್ರ ಶುನಕವು ಒಡೆಯನ ಸುತ್ತಮುತ್ತ ಚೆಲ್ಲಾಟವಾಡಿ ಅವನ ಮನಾನಂದವನ್ನು ಮಾಡುತ್ತಿರುವಂತೆ ಈ ಕೊತವಾಲನು ನನ್ನೊಡನೆ ಕೆಲವು ದಿವಸ ಸ್ನೇಹಿತನಂತೆ ನಟಿಸಿ, ಈ ನನ್ನ ಹೆಂಡತಿಯು ರಾಜಪುತ್ರನ ಕೊಲೆಯ ಸಂಗತಿಯನ್ನು ತಿಳಿಸಿದಕೂಡಲೆ, ಹಿಂದಿನ ಉಪಕಾರವನ್ನೆಲ್ಲ ಮರೆತು ಬಿಟ್ಟು, ಅವಳುಹೇಳಿದ ಸಂಗತಿಯು ಸತ್ಯವಾದದ್ದೋ, ಅಥವಾ ಮಿಥ್ಯವಾದದ್ದೋ ಎಂಬುದನ್ನು ಸಹಾ ವಿಚಾರಿಸದೆ, ನನ್ನನ್ನು ಚತುರ್ಭುಜನನ್ನಾಗಿ ಮಾಡಿ, ತಮ್ಮ ಸನ್ನಿಧಿಗೆ ತಂದು ನಿಲ್ಲಿಸಿದನು. ಇನ್ನು ನಾಲ್ಕನೇ ವಸ್ತುವಾದ "ಗದ್ದೀಕಾ ಗಧಾ" ಎಂಬುದು ಆವಸ್ತುವು ತಾವೇ ಆಗಿರುವಿರಿ! ಯಾಕಂದರೆ, ಕೊತವಾಲನು ನನ್ನನ್ನು ತಮ್ಮ ಸನ್ನಿಧಿಯಲ್ಲಿ ತಂದು ನಿಲ್ಲಿಸಿ ನಾನು ಮಾಡಿದ ಅಪರಾಧವನ್ನು ಅರುಹಲು, ತಾವು ಯಾವಸಂಗತಿಯನ್ನೂ ಅನ್ವೇಷಣ ಮಾಡದೆ ನನ್ನತಲೆ ಹೊಡೆಯುವಂತೆ ಅಪ್ಪಣೆ ಮಾಡಿಬಿಟ್ಟಿರಿ! ಇಷ್ಟೇಅಲ್ಲ. ಈ ಕಾಲದ ವರೆಗೂ, ರಾಜ ಪುತ್ರನು ಜೀವದಿಂದ ಇರುವನೋ, ಅಥವಾ ಮೃತನಾಗಿರುವನೋ ಎಂಬುದರ ಕಡೆಗೆ ಲಕ್ಷ್ಯವನ್ನೇಕೊಡಲಿಲ್ಲ. ಇನ್ನೂ ಆ ಕರಬೂಜಿ ಹಣ್ಣಿನ ತುಂಡುಕಳು ಹಾಗೇ ಪೆಟ್ಟಿಗೆಯಲ್ಲಿವೆ ಬೇಕಾದರೆ ತರಿಸಿಕೊಂಡು ನೋಡಬೇಕು ನಿಮ್ಮನಾಲ್ಕುವಸ್ತುಗಳು ನಿಮಗೆ ಮುಟ್ಟಿದವು ಈ ಬಗ್ಗೆ ಪ್ರತ್ಯುತ್ತರವನ್ನು ದಯಪಾಲಿಸಬೇಕು" ಎಂದು ಬಿನ್ನವಿಸಿದನು.

ಈ ಪ್ರಕಾರ ಬೀರಬಲನ ಕಥನವನ್ನು ಕೇಳಿ, ಮಲಿಯಾಳದರಸನು ಬಹಳ ಸಂತೋಷಹೊಂದಿ, ಅವನ ಚಾತುರ್ಯವನ್ನು ಬಹು ಪರಿಯಾಗಿ ಪ್ರಶಂಸೆ ಮಾಡಿದನು. ನಾಲ್ಕು ವಸ್ತುಗಳು ತಲುಪಿದವೆಂದು, ಪ್ರತಿ ಲೇಖವನ್ನು ಕೊಟ್ಟು ವಸ್ತ್ರಾಭೂಷಣಗಳಿಂದ ಸನ್ಮಾನಿಸಿ ಅಪ್ಪಣೆ ಕೊಟ್ಟನು ಬೀರಬಲನು ತನ್ನಸತಿಯನ್ನೂ, ಆ ವೇಶ್ಯೆಯನ್ನೂ ಕರೆದುಕೊಂಡು ದಿಲ್ಲಿಗೆ ಹೊರಟು ಬಂದನು.

ಆಮೇಲೆ ಬಾದಶಹನಿಗೆ ಬೆಟ್ಟಿಯಾಗಿ ಯಾವತ್ತು ವೃತ್ತಾಂತವನ್ನು ಕಥನಮಾಡಿದನು ಅದನ್ನು ಕೇಳಿಬಾದಶಹನು ಸಂತುಷ್ಟನಾಗಿ, ಬಹಳೇ ಸನ್ಮಾನಿಸಿದನು. ... ... *

೧೭೮. "ಟೊಪಿ, ಘಾಟಿ, ಸಡೇಕೊ, ಕೈಸೀ ವಿಧಿ ಸರಾಹಿಯೇ!"

ಒಂದುಸಾರೆ ಬಾದಶಹನು, ಈ ಮೇಲೇಳಿದ ಸಮಸ್ಯೆಯನ್ನು ಕೊ

ಟ್ಟು ಪೂರ್ಣಮಾಡು! ಎಂದು ಹೇಳಿದನು ಬೀರಬಲನು ಆ ಕೂಡಲೆ ಈ ಕೆಳಗಿನ ಪದ್ಯವನ್ನು ರಚಿಸಿ ಹೇಳಿದನು ... ... *

" ಟೂಟೇಪರ ಈಖ ತಾಕೀ ವಿಃಶ್ರೀ ಗುಡ ಕಂದಕರೀ
ತಾಕೋ ಲೈಪ್ರಸಾದ ದೇವ ದೇವಿನ ಚಢಾಯಿಂಯೇ।
ಫೂಟಿಕೆ ಕಪಾಸ ಪತೆ ರಾಖತ ಹ್ಯೆ ಆ ಲಮುಕೀ,
ತಾಕೇ ಹೋತೆ ವಸ್ತ್ರ ಕಹಾಂ ಕಹಾಂ ಲಾಂಗಿನಾಇಯೇ।
ಸಡೇಜ ಬಸನ ತಾಕೇಶ್ವೇತ ವರ್ಣ ಕಾಗಜ್ ಕರೀ।
ತಾಪರ ಕುರಾನ ಔರ ಪುರಾನಹೂ ಲಿಖಾಇಯೇ।
ಕಹ್ಯೆ ಬೀರಬಲ ಸುನೋಅಕಬರ ಬಾದಶಾಹ।
ಟೂಟಿ ಫೂಟಿ ಸಡೇಕೋ ಐಸೀ ವಿಧಿ ಸರಾಹಿಯೇ।

ಇದರ ಅರ್ಥವು ಕೆಳಗೆ ಬರೆದಂತೆ ಅದೆ " ಟೂಟೇ " ಅಂದರೆ ಮುರಿದದ್ದು, ಯಾವದು? ಕಬ್ಬು ಅಂದರೆ ಇಕ್ಷುದಂಡವು ಕಬ್ಬನ್ನು ಮುರಿದುತಂದು, ಗಾಣಕ್ಕೆ ಹಾಕಿ, ರಸವನ್ನು ತೆಗೆದು, ಕೊಪ್ಪರಿಗೆಯಲ್ಲಿ ಸುರುವಿ, ಕಾಯಿಸಿ, ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಮೊದಲಾದ ಪದಾರ್ಥಗಳನ್ನು ಸಿದ್ಧಪಡಿಸಿ, ಪರಮೇಶ್ವರನಿಗೆ ಅರ್ಪಿಸಬೇಕು. ... ... *

" ಫೂಟೇ " ಅಂದರೆ ಒಡೆದದ್ದು. ಅದು ಯಾವದೆಂದರೆ ಹತ್ತಿಯು (ಕಾರ್ಪಾಸ) ಹೊಲದಲ್ಲಿ ಬಿತ್ತಿದ ಹತ್ತಿಯು ಕಾಯಾಗಿ ಒಡೆದಮೇಲೆ ಅದನ್ನು ಬಿಡಿಸಿ ತಂದು, ರಾಟಿಗೆ ಹಾಕಿ ನೂಲು ಮಾಡಿ, ವಸ್ತ್ರಗಳನ್ನು ನೆಯಿದು, ಅನೇಕಪ್ರಕಾರದ ಬಟ್ಟೆಗಳನ್ನು ಮಾಡಿಕೊಳ್ಳಬೇಕು.

" ಸಡೇಸೋ " ಅಂದರೆ ಕೊಳೆತದ್ದು ಅದು ಯಾವದು? ಕಾಗದವು ಅನೇಕ ಪ್ರಕಾರದ ಹರಕು ಬಟ್ಟೆಗಳನ್ನು ತಂದು, ಕೊಳೆಹಾಕಿ, ಅವುಕೊಳೆತಮೇಲೆ ಅದರೊಳಗಿನ ಮಲವನ್ನೆಲ್ಲ ತೆಗೆದು ಸ್ವಚ್ಛಮಾಡಿ ಕಾಗದವನ್ನು ಸಿದ್ಧಪಡಿಸಬೇಕು. ಆಮೇಲೆ ಅದರಮೇಲೆ ಪುರಾಣ, ಇತಿಹಾಸ ಮೊದಲಾದ ಅನೇಕ ಧರ್ಮಗ್ರಂಥಗಳನ್ನು ಬರೆದು ಇಡಬೇಕು ಎಂದು ಸಮಸ್ಯೆಯನ್ನು ಪೂರ್ಣ ಮಾಡಿದನು. ಅದನ್ನು ಕೇಳಿ ಬಾದಶಹನು ಬಹಳಸಂತೋಷವನ್ನು ಹೊಂದಿದನು.

—(೧೭೯. ಕೇಹಿ ಕಾರಣ ಪ್ರಾತ ಬಘಾತ ಹ್ಯೆ ಪಾನೀ.)—

ಹಿಮಂತ ಋತುವು ಆರಂಭವಾಗಿತ್ತು, ಒಂದು ದಿವಸ ಬಾದಶಹನು ತನ್ನ ಪ್ರಾಸಾದದ ಅಗ್ರಭಾಗದಲ್ಲಿ ಕುಳಿತುಕೊಂಡು ಬಿಸಿಲನ್ನು ಕಾಯಿಸಿಕೊಳ್ಳುತ್ತಿದ್ದನು. ಆಗ ಅವನ ದೃಷ್ಟಿಯು ಯಮುನಾಜಲದಲ್ಲಿ ಹೊರಡುವ

ಬಾಷ್ಪವಮೇಲೆಬಿತ್ತು ಅದು ಧೂಮ (ಹೊಗೆ)ಯಂತೆ ಕಂಡುಬಂದದ್ದರಿಂದ ಕೇಹಿ ಕಾರಣ ಪ್ರಾತ ಬಘಾತ ಹೈ ಪಾನೀ! ಎಂಬ ಸಮಸ್ಯೆಯನ್ನು ರಚನೆಮಾಡಿಕೊಂಡು ಬಂದು ಬೀರಬಲನನ್ನು ಕುರಿತು, “ ಬೀರಬಲ್ಲ ? ಈಗ ಶೀತಕಾಲವಿದ್ದು ನೀರು ಗಡ್ಡೆಗಟ್ಟಿ ಭರ್ಫದಂತೆ ಆಗಬೇಕು, ಹೀಗಿದ್ದು. ಪ್ರಾತಃಕಾಲದಲ್ಲಿ ನೀರಮೇಲೆ ಹೋಗೆಯು ಕಾಣುವದಲ್ಲಾ: ಇದರ ಕಾರಣವೇನು! ಎಂದು ಪ್ರಶ್ನೆ ಮಾಡಿದನು. ಆಕೂಡಲೆ ಬೀರಬಲನು.

ಏಕ ಸಮ್ಯೆ ಲಂಕಾಪತಿ ರಾವನ, ಆನಿ ಹರೀಸಿಯ ರಾಮಕೀ ರಾನೀ।
ಕೋಪಿಚಢೇ ದಶರತ್ಥಕೆ ನಂದನ, ಅಂಜನಿಪೂತ ಭಯೋ ಅಗವಾ
ನೀ। ಬಾಂಧಿ ಲಂಗೋಟ ಕಂಗೂರ ಚಢೇಕ್ಯೆ, ಅರು ಲಂಕಜರೀ ಧರತೀ
ಅಕುಲಾನೀ। ಜಾಯ ಸಮುದ್ರಮೆ ಪೂಂಛ ಬುಝಾಯೀ ಇಹಿಕಾರಣ
ಪ್ರಾತ ಬಘಾತ ಹೈ ಪಾನೀ ॥

ಅಂದರೆ “ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ಅರಣ್ಯವಾಸಕ್ಕೆ ಹೋದಾಗ ಲಂಕಾಧಿಪತಿಯಾದ ದಶಮುಖನು, ಸೀತಾದೇವಿಯ ಸೌಂದರ್ಯದ ಮಹಿಮಾತಿಶಯವನ್ನು ಕೇಳಿ ಮೋಹಿತನಾಗಿ ಸನ್ಯಾಸಿಯ ವೇಷವನ್ನು ಧಾರಣ ಮಾಡಿಕೊಂಡು ರಾಮಚಂದ್ರ ಮತ್ತು ಲಕ್ಷ್ಮಣರಿಲ್ಲದ ಸಂಧಿಯನ್ನು ಸಾಧಿಸಿ, ಸೀತಾದೇವಿಯನ್ನು ಹರಣಮಾಡಿಕೊಂಡು ಹೋದನು ಅದರಿಂದ ಶ್ರೀರಾಮನು ಸುಗ್ರೀವನ ಸ್ನೇಹವನ್ನು ಸಂಪಾದಿಸಿ, ಆವನ ಮಂತ್ರಿಯಾದ ಅಂಜನಾಸುತನನ್ನು ಸೀತಾದೇವಿಯ ಶೋಧಕ್ಕಾಗಿ ಕಳಿಸಿದನು. ಆಂಜನೇಯನು ಸೀತಾದೇವಿಯಿದ್ದ ಲಂಕಾನಗರವನ್ನು ಪ್ರವೇಶಿಸಿ ಅವಳಸ್ಥಿತಿಯನ್ನು ಕಣ್ಣಿನಿಂದ ನೋಡಿ ಆಮೇಲೆ ದಶಮುಖನಿಗೆ ಹಿತವಾಕ್ಯಗಳನ್ನು ಬೋಧಮಾಡುವದಕ್ಕೆ ರಾವಣನ ಸಭೆಯನ್ನು ಪ್ರವೇಶಿಸಿ ರಾಮಚಂದ್ರನ ಶೌರ್ಯೋದಾರ್ಯಗುಣಗಳನ್ನು ವರ್ಣಿಸಿ ಸೀತಾದೇವಿಯನ್ನು ರಾಮಚಂದ್ರನಿಗೆ ಒಪ್ಪಿಸಿಬಿಡು ಎಂದು ಬೋಧೆಮಾಡಲು ರಾವಣನು ಸಿಟ್ಟಿಗೆದ್ದು, ಹನುಮಂತನ ಪುಚ್ಛಕ್ಕೆ ಬಟ್ಟೆಗಳನ್ನು ಸುತ್ತಿಸಿ ತೈಲಾವಗಾಹನ ಮಾಡಿಸಿ ಬೆಂಕೀ ಹಚ್ಚಿದನು ಆ ಹನುಮಂತನು ತನ್ನ ಪುಚ್ಛದುರಿಯಿಂದ ಲಂಕಾಪಟ್ಟಣವನ್ನು ದಹನಮಾಡಿ ಆ ಬಾಲವನ್ನು ಸಮುದ್ರದಲ್ಲಿ ಅದ್ದಿದನು. ಆ ಉಷ್ಣತೆಯಿಂದ ಶೀತಕಾಲದಲ್ಲಿ ಸಹ ಜಲದಮೇಲೆ ಹೊಗೆ ತೋರುತ್ತದೆ ಎಂದು ಹೇಳಿ ಅವನಸಮಸ್ಯೆಯನ್ನು ಪೂರ್ಣಮಾಡಿದನು.

—(೧೮೦ ಶೌಚ ಕೂಪದಲ್ಲಿಯ ಚಿತ್ರ.)—

ಮಿಶರ ಪಟ್ಟಣದ ಬಾದಶಹನು ಯಾವದೋ ಒಂದು ಕಾರ್ಯದುದ್ದಿ

ಶ್ಯವಾಗಿ ಬೀರಬಲನನ್ನು ತನ್ನೆಡೆಗೆ ಬರವಾಡಿಕೊಂಡಿದ್ದನು. ತನ್ನ ಕಾರ್ಯ್ಯವು ಪೂರ್ಣವಾದ ಮೇಲೆ ಇವನನ್ನು ಅವಮಾನ ಗೊಳಿಸಬೇಕೆಂದು ಅಕಬರ ಬಾದಶಹನ ಭಾವಪಟವನ್ನು ಕೌಚಕೂಪದ ಗೃಹದಗೋಡೆಗೆ ತೂಗಹಾಕಿದ್ದನು. ಬೀರಬಲನು ಬಹಿರ್ದಿಶೆಗೆ ಹೋದಾಗ ಆ ಭಾವಪಟವು ಕಣ್ಣಿಗೆ ಬಿತ್ತು ಆಕೂಡಲೆ ಹಿಂದುರುಗಿ ಬಾದಶಹನ ಬಳಿಗೆಬಂದು, ಖಾವಂದತಮಗೆ ಮಲಬದ್ಧತೆಯ ರೋಗವು ಅಂಟಿಕೊಂಡಿರುವದೇನು ? ಎಂದು ಪ್ರಶ್ನೆಮಾಡಿದನು ಆಗ ಆವನು ಅದ್ಯಾಕೆ ! ಎಂದು ಕೇಳಿದನು. ಅದಕ್ಕೆ ಬೀರಬಲನು, ಕೌಚಕೂಪದಲ್ಲಿ ತೂಗು ಹಾಕಿರುವ ನಮ್ಮ ಬಾದಶಹನ ಭಾವಪಟದ ಮೇಲೆ ತಮ್ಮ ದೃಷ್ಟಿಯು ಬಿದ್ದಕೂಡಲೆ ಭಯವು ಹುಟ್ಟಿ ತಾವು ಬೇಗನೆ ಮಲವಿಸರ್ಜನೆಯನ್ನು ಮಾಡಿಕೊಂಡು ಬರುತ್ತಿರಬಹುದೆಂಬಂತೆ ಕಾಣುತ್ತದೆ ಇದರಲ್ಲಿ ಏನೂ ಸಂದೇಹವಿಲ್ಲ, ಎಂದನು.

ಈ ಮಾತು ಕಿವಿಗೆ ಬಿದ್ದಕೂಡಲೆ, ಮಶದದ ಬಾದಶಹನು ಲಜ್ಜಿತನಾಗಿ ಮುಖವನ್ನು ತಗ್ಗಿಸಿದನು.

೧೮೧. ಇಹದಲ್ಲಿ ಸುಖವುಂಟು, ಪರದಲ್ಲಿ ಇಲ್ಲ. ಪರದಲ್ಲಿ ಸುಖವುಂಟು ಇಹದಲ್ಲಿ ಇಲ್ಲ ಇಹಪರಗಳೆರಡರಲ್ಲಿಯೂ ಸುಖವಿಲ್ಲ. ಮತ್ತು ಇಹಪರಗಳೆರಡರಲ್ಲಿಯೂ ಸುಖವುಂಟು. ಇಂಥ ಮನುಷ್ಯರು ಯಾರು ?

ಒಂದು ದಿವಸ ಅಕಬರ ಬಾದಶಹನು ಸಿಂಹಾಸನಾಧಿಷ್ಟಿತನಾಗಿ ಬೀರಬಲನನ್ನು ಕುರಿತು, ಮೇಲೆ ಬರೆದ ನಾಲ್ಕುವಿಧದ ಮನುಷ್ಯರನ್ನು ತಂದು ತೋರಿಸು ಎಂದು ಅಪ್ಪಣೆಮಾಡಿದನು ಆಕೂಡಲೆ ಬೀರಬಲನು ಅರಮನೆಯಿಂದ ಹೊರಬಿದ್ದು ಒಬ್ಬ ವೇಶ್ಯೆಯನ್ನೂ ಒಬ್ಬ ಸನ್ಯಾಸಿಯನ್ನೂ ಒಬ್ಬ ಭಿಕ್ಷುಕನನ್ನೂ ಒಬ್ಬ ಧರ್ಮಾತ್ಮನಾದ ಧನಾಢ್ಯಗೃಹಸ್ಥನನ್ನೂ ಕರೆದುಕೊಂಡು ರಾಜಸಭೆಯನ್ನು ಪ್ರವೇಶಿಸಿದನು, ಮತ್ತು ತಮ್ಮ ಆಜ್ಞಾನುಸಾರವಾಗಿ, ನಾಲ್ಕುವಿಧದ ಮನುಷ್ಯರನ್ನು ಕರೆದುಕೊಂಡು ಬಂದಿದ್ದೇನೆ, ಎಂದು ವಿಜ್ಞಾಪನೆಯನ್ನು ಮಾಡಿಕೊಂಡನು ಆಗ ಬಾದಶಹನು ಅದನ್ನು ವಿಸ್ತರಿಸಿ ಹೇಳು ? ಎಂದು ಅಪ್ಪಣೆಮಾಡಿದನು ಆಗ ಬೀರಬಲನು ಭೂವರ ! ಈ ವೇಶ್ಯೆಗೆ ಇಹದಲ್ಲಿ ಸುಖವಿರುವದೇ ಹೊರತು, ಪರಲೋಕದಲ್ಲಿ ಇವಳಿಗೆ ಸ್ವರ್ಗಾದಿ ಭೋಗಗಳು ದೊರೆಯಲಾರವು ಇನ್ನು ಈ ಸನ್ಯಾಸಿಯು ಎರಡನೇ ಪ್ರಕಾರದವನು ಹ್ಯಾಗೆಂದರೆ, ಇವನು ಈ ಲೋಕದಲ್ಲಿ ಭಿಕ್ಷೆಯಿಂದ ಕಾಲಹರಣಮಾಡಿ ತನ್ನ ಉಪಜೀವನವನ್ನು ಸಾಗಿಸಿಕೊಂಡು ಜಗನ್ನಿಯಂತನ

ಪಾದಾರವಿಂದವನ್ನು ನೆನೆಯುತ್ತಿರುವನು. ಇವನಿಗೆ ಒಂದು ದಿವಸ ಹೊಟ್ಟೆಗೆ ಸಾಕಾಗುವಷ್ಟು ಆ ಹಾರ ಸಾಮುಗ್ರಿಯು ದೊರೆದರೆ ದೊರೆಯಿತು, ಇಲ್ಲವಾದರೆ ಇಲ್ಲ ಈ ಪ್ರಕಾರ ವಿರುವದರಿಂದ ಇಹಲೋಕದಲ್ಲಿ ಇವನಿಗೆ ಸೌಖ್ಯವು ದೊರಿಯುವದಿಲ್ಲ. ಪರಲೋಕದಲ್ಲಿ ಯಥೇಚ್ಛವಾದ ಸುಖವು ಲಭಿಸುವದು ಆದರಿಂದ ಇವನಿಗೆ ಇಹದಲ್ಲಿ ಸುಖವಿಲ್ಲ ಪರದಲ್ಲಿ ಸುಖವುಂಟು ಇನ್ನು ಈ ಭಿಕ್ಷುಕನು ಇವನು ತನ್ನ ಉದರ ಪೋಷಣೆಯು ಸಲುವಾಗಿ ದಿನಾಲು ಭಿಕ್ಷೆಬೇಡುವದಕ್ಕೆ ಹೋಗಿ ಅನೇಕ ಪ್ರಕಾರದ ಅಸತ್ಯಭಾಷಣಗಳನ್ನಾಡುತ್ತಾನೆ. ಇವನು ಅಹರ್ನಿಶ ಕಷ್ಟಪಡುವದರಿಂದ ಜಗನ್ನಿಯಂತನನ್ನು ಸ್ತುತಿಸಲಿಕ್ಕೆ ಒಂದರಕ್ಷಣನಾದರೂ ಕಾಲವು ದೊರೆಯುವದಿಲ್ಲ ಅದರಿಂದ ಇವನಿಗೆ ಇಹಪರಗಳೆರಡಲ್ಲಿಯೂ ಸುಖವು ದೊರೆಯಲಾರದು ಇನ್ನು ಈ ಧರ್ಮಾತ್ಮನಾದ ಧನಾಢ್ಯನು ನಾಲ್ಕನೇ ಪ್ರಕಾರದ ಮನುಷ್ಯನು ಹ್ಯಾಗೆಂದರೆ. ಇವನ ಹತ್ತರ ಅಸಂಖ್ಯಾಕವಾದ ಸಂಪತ್ತಿಯಿರುವದು ಆ ಸಂಪತ್ತಿನ ಬಲದಿಂದ ಅನೇಕ ಪ್ರಕಾರದ ಪುಣ್ಯಸಾಧನೆಗಳನ್ನು ಮಾಡಿಕೊಂಡು ತಾನು ಉಂಡುಟ್ಟು ಪರರಿಗೂ ಸುಖಕೊಡುತ್ತಾನೆ. ಇದರಿಂದ ಇವನಿಗೆ ಇಹಪರಗಳೆರಡರಲ್ಲಿಯೂ ಸುಖವುಂಟು. ಎಂದು ವಿಸ್ತರಿಸಿ ಹೇಳಿದನು.

ಬೀರಬಲನ ಈ ಪ್ರಕಾರದ ಚಾತುರ್ಯಯುಕ್ತವಾದ ಬಾಷಣಗಳನ್ನು ಕೇಳಿ ಬಾದಶಹನಿಗೂ ತದಿತರ ಸಭಾಸದರಿಗೂ ಹರುಷವೂ ಆಶ್ಚರ್ಯವೂ ಉಂಟಾಯಿತು. ಆಗ ಬಾದಶಹನು ಬೀರಬಲನು ಕರೆತಂದ ಆನಾಲ್ಕು ಜನರಿಗೆ ಅವರವರ ಯೋಗ್ಯತೆಯು ಪ್ರಕಾರ ಬಹುಮಾನ ವನ್ನಿತ್ತು ಕಳಿಸಿಕೊಟ್ಟನು ಮತ್ತು ಆ ಧನಾಢ್ಯನಿಗೆ ಪ್ರತಿದಿವಸ ರಾಜಸಭೆಯಲ್ಲಿ ಬಂದುಕುಳಿತು ಕೊಳ್ಳುವ ಬಹುಮಾನವನ್ನಿತ್ತನು.

—(೧೮೨. ಚಂಚಲ ನೈನ ಛಿಪ್ಪೈನ ಛಿಪಾಯೇ)—

ಒಂದು ದಿವಸ ಅಕಬರ ಬಾದಶಹನು ಸಾಯಂಕಾಲದಲ್ಲಿ ವಾಯುಸೇವನಾರ್ಥವಾಗಿ ಹೊರಟಿದ್ದನು ಆಗ ಅವನ ದೃಷ್ಟಿಯು ಒಬ್ಬ ತನ್ವಂಗಿಯ ಮೇಲೆಬಿತ್ತು ಬಾದಶಹನು ಬಂದದ್ದನ್ನು ಕಂಡು ಆ ಪ್ರಮದೆಯು ದ್ವಾರದ ಮರೆಗೆನಿಂತುಕೊಂಡಳು ಆ ಕೂಡಲೆ ಹಿಂದಿರುಗಿಬಂದು ಬೀರಬಲನನ್ನು ಕರೆಯಿಸಿ. ಚೆಂಚಲ ನೈನ ಛಿಪ್ಪೈನ ಛಿಪಾಯೆ ಈ ಸಮಸ್ಯೆಯನ್ನು ಪೂರ್ತಿಗೊಳಿಸು ! ಎಂದು ಹೇಳಿದನು. ಆಗ ಬೀರಬಲನು.

ಸೂರ್ಯ-ಛಿಪ್ಪೈ ಅದರೀ ಬದರೀ ಅರು ಚಂದ ಛಿಪ್ಪೈ ಹೈ ಅಮಾವಸ

ಆಯೇ । ಪಾನೀಕೀ ಬೂಂದ ಪತಂಗ ಛಿಪ್ಪೈ ಅರು ಮೀನ ಛಿಪ್ಪೈ ಇ

ಚಕ್ಕಿ ಜಲಪಾಯೇ ಭೋರಹುಯೇ ಪರಚೋರ ಛಿಪ್ಯೆ ಅರು ಮೋರ ಛಿಪ್ಯೆ ಋತು ಫಾಗುನ ಆಯೇ । ಓಟಕರೋ ಶತ ಘಾಂಘಟಕೀ ಪರ ಚಂಚಲ ನೈನ ಛಿಪ್ಯೆನ ಛಿಪಾಯೇ ॥

ಖಾವಂದ ಇದರ ಅಭಿಪ್ರಾಯವೇಂತೆಂದರೆ ಸೂರ್ಯನು ಪ್ರತಿ ದಿವಸ ದಲ್ಲಿ ಪಶ್ಚಿಮಾಂಬುಧಿಯಲ್ಲಿ ಅದೃಶ್ಯನಾಗುತ್ತಾನೆ, ಚಂದ್ರನು ಅಮಾವಾಸ್ಯೆ ಯಲ್ಲಿ ಅದೃಶ್ಯನಾಗುತ್ತಾನೆ ಜಲವು ವಾಯುದೋಷಣೆಯಿಂದ ಅದೃಶ್ಯವಾಗು ತ್ತದೆ ಮತ್ಸ್ಯವು ಜಲದಲ್ಲಿ ಅಡಗಿಕೊಳ್ಳುತ್ತದೆ ಗದ್ದಲವಾದ ಕೂಡಲೆ ಕಳ್ಳನು ಮರೆಯಾಗಿ ಹೋಗಿ ಕುಳಿತು ಕೊಳ್ಳುತ್ತಾನೆ ಫಾಲ್ಗುಣ ಮಾಸದಲ್ಲಿ ನವಿಲು ಗಳು ಕಾಣದಾಗುತ್ತವೆ. ಆದರೆ ತರುಣಿಯರ ಚಲಚಲವಾದ ನಯನಗಳು, ದ್ವಾರವನ್ನು ಮರೆ ಮಾಡಿದರೂ ಸಹ, ಅದೃಶ್ಯವಾಗಲಿಲ್ಲ ಎಂದು ಹೇಳಿ ಸ ಮಸ್ಯೆಯನ್ನು ಪೂರ್ಣಮಾಡಿದನು.

ಈ ಕವಿತ್ವವನ್ನು ಕೇಳಿ ಬಾದಶಹನು ಹೃಷ್ಟಮಾನಸನಾದನು.

—(೧೮೩. ಬಾದಶಹನ ನಖ)—

ಬಲಕ್ ಪಟ್ಟಣದ ಬಾದಶಹನ ಅಂಗುಲಿಯ ನಖವು ಒಂದು ಕಾಳಗ ದಲ್ಲಿ ಘಾಯವಾಗಿ ಹೋಗಿತ್ತು, ಅವನ ಆಶ್ರಯದಲ್ಲಿದ್ದ ವೈದ್ಯರಿಂದಲೂ, ಧ ನ್ವಂತರಿಗಳಿಂದಲೂ ಅನೇಕ ಉಪಾಯಗಳನ್ನು ಮಾಡಿಸಿದನು. ಅದರಿಂದ ಏನೂ ಪ್ರಯೋಜನವಾಗಲಿಲ್ಲ ಅದರಿಂದ ಅವನು ಕುಪಿತನಾಗಿ ಯಾವತ್ತೂ ವೈದ್ಯರನ್ನು ಪ್ರತಿಬಂಧನದಲ್ಲಿ ಇಡಿಸಿಬಿಟ್ಟನು. ಮತ್ತು ಪರದೇಶದಿಂದ ಪ್ರ ಸಿದ್ಧರಾದ ಧನ್ವಂತರಿಗಳನ್ನು ಕರೆಯಿಸಿ ಔಷಧೋಪಚಾರ ನಡೆಯಿಸಿದನು ಅವರಿಂದಲೂ ಹೊಸ ಉಗುರು ಬರಲಿಲ್ಲ, ಆಗ ಅವರನ್ನು ಸಹ ಪ್ರತಿಬಂಧದ ಲ್ಲಿಟ್ಟು “ ನನ್ನ ಅಂಗುಲಿಯಲ್ಲಿ ನೂತನವಾದ ನಖವು ಪ್ರಾಪ್ತವಾದರೆ ನಿಮ್ಮ ನ್ನು ಈ ಬಂಧನದಿಂದ ತಪ್ಪಿಸುತ್ತೇನೆ, ಇಲ್ಲವಾದರೆ ಆಜನ್ಮ ಪರಿಯಂತರ ನಿಮ್ಮನ್ನು ಬಂಧನದಿಂದ ಬಿಡಲಾರೆನು ” ಎಂದು ಅಪ್ಪಣೆ ಮಾಡಿದನು. ಈ ಭಯದಿಂದ ಆ ದೇಶದಲ್ಲಿ ವೈದ್ಯರೆಂಬ ಹೆಸರೇ ಮುಳುಗಿ ಹೋಯಿತು.

ಈ ವರ್ತಮಾನವು ಕಿಂಚಿತ್ ಕಾಲವಾದಮೇಲೆ ಈ ಭರತವರ್ಷದಲ್ಲಿ ಪಸರಿಸಿತು, ಇಷ್ಟೇ ಅಲ್ಲ; ಅದು ಅಕಬರಬಾದಶಹನಿಗೂ ವಿದಿತವಾಯಿತು, ಆಗ ಅವನು “ಬಲ್ಕ” ಪಟ್ಟಣದ ಬಾದಶಹನು ಬಹಳೇ ಅತ್ಯಾಚಾರಿಯಾಗಿ ದ್ದಾನೆ ಅವನ ರಾಜ್ಯದಲ್ಲಿಯ ಪ್ರಜೆಗಳೆಲ್ಲರೂ ತ್ರಸ್ತರಾಗಿದ್ದಾರೆ, ಆ ಜನರ ದುಃಖನಿವಾರಣೆಯ ಬಗ್ಗೆ ಯಾವ ಉಪಾಯವನ್ನು ಮಾಡಬೇಕು ! ಎಂದು ತನ್ನ ಸಭಾಸದರಲ್ಲಿ ಪ್ರಶ್ನೆಯನ್ನು ತೆಗೆದನು, ಆಗ ಬೀರಬಲನು- ಭೂವರ

ನನಗೆ ಆ ಪಟ್ಟಣಕ್ಕೆ ಹೋಗುವದಕ್ಕೆ ತಮ್ಮಿಂದ ಅನುಮತಿಯು ದೊರೆತರೆ ನಾನು ಅಲ್ಲಿಗೆಹೋಗಿ ಆ ಜನರ ದುಃಖಗಳನ್ನು ಯಾವದಾದರೊಂದುಪಾಯದಿಂದ ದೂರೀಕರಿಸಿ ಬರುತ್ತೇನೆ ಎಂದು ಬಿನ್ನಹಮಾಡಿಕೊಂಡನು. ಬಾದಶಹನು ಪ್ರಸನ್ನತೆಯಿಂದ ಅಪ್ಪಣೆಕೊಟ್ಟನು.

ಬೀರಬಲನು ವೈದ್ಯನ ವೇಷವನ್ನು ಪರಿಧಾನ ಮಾಡಿಕೊಂಡು ತನ್ನ ಉದ್ಯೋಗಕ್ಕೆ ಬೇಕಾಗುವ ಪರಿಕರಗಳನ್ನೆಲ್ಲ ಸಿದ್ಧಪಡಿಸಿಕೊಂಡು ಬಲಕ್ ಪಟ್ಟಣಕ್ಕೆ ಪ್ರಯಾಣಮಾಡಿ ಕೆಲವುದಿವಸಗಳಲ್ಲಿ ತಲುಪಿದನು ಮತ್ತು ತನ್ನ ಉದ್ಯೋಗವನ್ನು ಆರಂಭಿಸಿದನು. ಆ ದೇಶದಲ್ಲಿ ಇವನ ಹೊರತು ಅನ್ಯವೈದ್ಯರು ಇಲ್ಲದ್ದರಿಂದ ಇವನ ಪ್ರಶಂಸೆಯು ಬಹುಬೇಗ ನಾಲ್ಕು ಕಡೆಗೆ ಪಸರಿಸಿತು, ಆ ಪಟ್ಟಣದೊಳಗಿನ ಪ್ರತಿಷ್ಟಿತರಾದ ನಾಲ್ಕುಜನರು ಈ ವೈದ್ಯಕಿಯ ಉದ್ಯೋಗವನ್ನು ಬಿಟ್ಟುಬಿಡು, ಇಲ್ಲವಾದರೆ ಇಲ್ಲಿಯ ಬಾದಶಹನಕೋಪಕ್ಕೆ ಪಾತ್ರನಾದೀ ಎಂದು ಬೋಧಿಸಿ ತಮ್ಮಲ್ಲಿನಡೆದ ಅನಾಹುತವನ್ನೆಲ್ಲಾ ವಿಶದವಾಗಿ ಬಣ್ಣಿಸಿದರು, ಆದರೂ ಬೀರಬಲನು ಅವರಮಾತಿಗೆ ಎಳ್ಳಷ್ಟಾದರೂ ಭೀತನಾಗಲಿಲ್ಲ ತನ್ನ ಉದ್ಯೋಗವನ್ನು ಸಾಗಿಸಹತ್ತಿದನು, ಈವರ್ತಮಾನವು ಬಲ್ಕದ ಬಾದಶಹನಿಗೂ ತಲುಪಿತು,

ಮರುದಿವಸವೇ ಬೀರಬಲನನ್ನು ಓಲಗಕ್ಕೆ ಕರೆಯಿಸಿ, ಹಕೀಮಸಾಹೇಬ ನಿಮ್ಮ ಪ್ರಶಂಸೆಯು ನನ್ನ ಕಿವಿಯವರೆಗೂ ಬಂದು ತಲುಪಿದೆ, ನೀವು ನಿಮ್ಮಚಾತುರ್ಯದ ಬಲದಿಂದ ನನ್ನ ಅಂಗುಲಿಯ ನಖವನ್ನು ಪೂರ್ವವತ್ ಮಾಡಿ ಕೊಟ್ಟರೆ ನಾನು ನಿಮ್ಮ ಗುಣಾನುವಾದವನ್ನು ಆಜನ್ಮಪರಿಯಂತರ ಮರೆಯಲಿಕ್ಕಿಲ್ಲ ಎಂದನು. ಅದಕ್ಕೆಪ್ರತ್ಯುತ್ತರವಾಗಿ ಬೀರಬಲನು "ಜೀಹಾ ನನಗೆ ಈ ರೋಗದಮೇಲೆ ರಾಮಬಾಣದಂತಿರುವ ಒಂದು ಔಷಧವು ವಿದಿತವದೆ ಅದನ್ನು ಹಚ್ಚಿದ ಐದು ದಿವಸಗಳಲ್ಲಿಯೇ ಪೂರ್ವದಂತೆ ಉಗುರು ಬರುತ್ತದೆ ಈ ಔಷಧದಿಂದ ಗುಣವಾಗದೆ ಇರದು ಎಂದು ನಮ್ಮಗುರುಗಳು ಸಹ ಪ್ರತಿಜ್ಞೆಯಮೇಲಿಂದ ಹೇಳಿದ್ದಾರೆ, ಆದರೆ ನಾನು ಔಷಧಕ್ಕೆ ಹೇಳುವ ಪದಾರ್ಥಗಳನ್ನು ಮಾತ್ರ ತರಿಸಿಕೊಡಬೇಕು, ಅದರಮೇಲೆ ನಿಮ್ಮ ಉಗುರು ಪೂರ್ವದಂತಾಗದಿದ್ದರೆ ನನ್ನ ಶಿರಸ್ಸನ್ನು ಖಂಡಿಸಿಬಿಡಬೇಕು ಎಂದನು ಆಗ ಪುನಃ ಬಾದಶಹನು ಇಂಥ ದೃಢಪ್ರತಿಜ್ಞೆಯಿಂದ ಹೇಳುವ ಒಬ್ಬ ವೈದ್ಯನಾದರೂ ಬೆಟ್ಟಿಯಾಗಿದ್ದಿಲ್ಲ ಎಂದನು. ಈ ಮಾತಿಗೆ ಬೀರಬಲನು ಪರಮೇಶನು ಬೆಂಬಲವಿದ್ದರೆ ಯಾವಕಾರ್ಯವೂ ಅಸಾಧ್ಯವಲ್ಲ ಆದರೆ ಔಷಧದಜಿನಸುಗಳು ದೊರೆಯುವದೇ ಪರಮಪ್ರಯಾಸವು ಎಂದು ಉತ್ತರಕೊಟ್ಟನು.

ಬಾದಶಹ—ಅದರಲ್ಲಿ ಪ್ರಯಾಸವೇನು! ನಾನು ಇಂಥ ಬಲಾಢ್ಯ ಬಾದಶಹ ನಿಮ್ಮ ಔಷಧದ ಪದಾರ್ಥಗಳನ್ನು ಸಿದ್ಧಪಡಿಸಿಕೊಡಲಾರೆನೇ.

ಬೀರಬಲ—ಪರಮೇಶ್ವರನ ಕೃಪೆಯಿಂದಲೇ ಯಾವತ್ತೂ ಸಿದ್ಧವಾಗುತ್ತದೆ ಆದರೆ ನಾನು ಹೇಳುವ ಪದಾರ್ಥಗಳನ್ನು ತರಿಸಿಕೊಡುವದು ಕಿಂಚಿತ್ ಪ್ರಯಾಸವೇ ಸರಿ; ಇರಲಿ ಆದರೆ ನೀವು ಪ್ರತಿಜ್ಞಾ ಪೂರ್ವಕವಾಗಿ ಹೀಗೆ ಲೇಖವನ್ನು ಬರೆದುಕೊಡಬೇಕಲ್ಲಾ "ಒಂದುತಿಂಗಳೊಳಗಾಗಿ ನಾನು ನೀವುಹೇಳುವ ಔಷಧೀ ಪದಾರ್ಥಗಳನ್ನು ತರಿಸಿಕೊಡದಿದ್ದ ಪಕ್ಷದಲ್ಲಿ ಬಂದಿಯಲ್ಲಿ ಇಟ್ಟಿರುವ ಯಾವತ್ತು ವೈದ್ಯರನ್ನು ಬಿಟ್ಟುಬಿಡುತ್ತೇನೆ, ಮತ್ತು ನಿಮ್ಮಮೇಲೆ ಯಾವಪ್ರಕಾರದ ದೋಷವನ್ನೂ ಕೊಡುವದಿಲ್ಲ;" ಎಂಬದಾಗಿ ಒಂದು ತಮ್ಮ ಹಸ್ತಲಿಖಿತವಾದ ಪ್ರತಿಜ್ಞಾಪತ್ರವನ್ನು ಬರೆದುಕೊಡಬೇಕು, ನೀವು ಯಾವಕಾಲಕ್ಕೆ ಆ ಪದಾರ್ಥಗಳನ್ನು ಒದಗಿಸಿ ಕೊಡುವಿರೋ ಆ ಕಾಲಕ್ಕೆ ನಾನು ಬಂದು ಔಷಧವನ್ನು ಸಿದ್ಧಪಡಿಸಿ ಪೂರ್ವವತ್ ನಖವು ಉತ್ಪನ್ನವಾಗುವಂತೆ ಮಾಡುತ್ತೇನೆ.

ಈಪ್ರಕಾರದ ಭಾಷಣಗಳನ್ನು ಕೇಳಿ ಬಾದಶಹನು ಮನಸ್ಸಿನಲ್ಲಿ- "ಈ ವೈದ್ಯನಿಗೆ ನನ್ನ ಪ್ರಭಾವವೂ, ಸಂಪತ್ತಿನ ಬಲವೂ ವಿದಿತವಿದ್ದಂತೆ ಕಂಡುಬರುವದಿಲ್ಲ, ಅಂಥ ಪದಾರ್ಥಗಳಾದರೂ ಯಾವವಿರಬಹುದು" ಎಂದು ಯೋಚಿಸಿ, ಬೀರಬಲನ ಕಥನಾನುಸಾರವಾಗಿ ಪ್ರತಿಜ್ಞಾ ಪತ್ರವನ್ನು ಬರೆದು ಕೊಟ್ಟನು.

ಆಮೇಲೆ ಬೀರಬಲನು ತನ್ನ ಇಚ್ಛಾನುಸಾರವಾಗಿ ಕೆಲಸವು ಪೂರ್ಣವಾದಮೇಲೆ, ಬಾದಶಹನನ್ನು ಕುರಿತು,-"ಖಾವಂದ,

"ಕ್ಯಾ ಅಜಬ ಆನಾಹೈ ಉಸ ನಾಖೂನಕಾ।
ಘಾಲಗರ ಗೂಲರಕಾಹೋವ ಪೇಶಾಬ ಮಛಲೀಕಾ॥"

ಅಂದರೆ, ಹೂವಾಡಿಗನ ಅಂಗಡಿಯೊಳಗಿನ ಪುಷ್ಪಗಳ ಸುವಾಸನೆಯನ್ನೂ ಮತ್ಸ್ಯ ಮೂತ್ರವನ್ನೂ ಸಂಪಾದಿಸಿದರೆ, ನಷ್ಟವಾದಂಥ ನಖವು ಬರುವದು, ಏನು ಆಶ್ಚರ್ಯವು!" ಎಂದು ವೈದ್ಯಶಾಸ್ತ್ರದಲ್ಲಿ ಉಲ್ಲೇಖಿಸಲ್ಪಟ್ಟದೆ ಹೂಜೂರ್ ತಾವು ಈಎರಡು ಪದಾರ್ಥಗಳನ್ನು ತರಿಸಿಕೊಟ್ಟರೆ ನಿಮ್ಮ ರೋಗವನ್ನು ದೂರಮಾಡುತ್ತೇನೆ. ... ... *

ಬಾದಶಹನು ಈ ವಾಕ್ಯವನ್ನು ಕೇಳಿ, ತನ್ನ ಅಮಾತ್ಯನಿಗೆ ವೈದ್ಯನು ಹೇಳಿದ ಜೀನಸುಗಳನ್ನು ಬಹು ತೀವ್ರವಾಗಿ ತರಿಸಿಕೊಡು! ಎಂಬದಾಗಿ

ಅಪ್ಪಣೆ ಮಾಡಿದನು. ಆ ಅಮಾತ್ಯನು ಬಹುಪರಿಯಿಂದ ಶೋಧಮಾಡಿಸಿದನು ಆ ಪದಾರ್ಥಗಳ ಹೆಸರನ್ನು ಕೇಳಿದವರು ಸಹಾ ಸಿಕ್ಕಲಿಲ್ಲ ಒಂದು ಮಾಸದ ಅವಧಿಯು ಸಮಾಪ್ತವಾಗಿ ಹೋಯಿತು. ಉಪಾಯಾಂತರವಿಲ್ಲದೆ, ಬಂದಿಯಲ್ಲಿದ್ದ ಯಾವತ್ತು ವೈದ್ಯರನ್ನು ಬಿಟ್ಟುಕೊಡ ಬೇಕಾಯಿತು ಬಾದಶಹನು ಅವರೆಲ್ಲರನ್ನೂ ಪ್ರತಿಬಂಧದಿಂದ ಬಿಡಿಸಿ, ಓಲಗಕ್ಕೆ ಕರೆಯಿಸಿಕೊಂಡು ಈ ವೈದ್ಯನು ಹೇಳಿದ ಔಷಧವು ವೈದ್ಯಶಾಸ್ತ್ರದಲ್ಲಿ ಇರುವದೋ ? ಎಂದು ಕೇಳಲು, ಅವರು ಬೀರಬಲನಿಂದ ಶಿಕ್ಷಣ ಹೊಂದಿದಂತೆ, “ ಅಹುದು ” ಎಂದು ಉತ್ತರ ಕೊಟ್ಟರು. ... ... *

ವೈದ್ಯರೆಲ್ಲರೂ ಕೃತಜ್ಞತೆಯಿಂದ ಬೀರಬಲನನ್ನು ಸ್ತೋತ್ರಮಾಡಿ, ಒಂದು ಲಕ್ಷ ರೂಪಾಯಿಗಳನ್ನು ಬಹುಮಾನವನ್ನಾಗಿ ಕೊಟ್ಟರು.

ಆಮೇಲೆ ಬೀರಬಲನು ದಿಲ್ಲಿಗೆ ಬಂದು, ಆದ್ಯೋಪಾಂತವನ್ನೆಲ್ಲ ಅಕಬರ ಬಾದಶಹನಿಗೆ ತಿಳಿಸಿದನು ಅವನ ಚಾತುರ್ಯವನ್ನು ಬಹುಪರಿಯಿಂದ ಪ್ರಶಂಸೆ ಮಾಡಿದನು.

೧೮೪. “ ಹಾಥನಕೆ ಛುಎ ಕೋಊ ಬೇರಹೂ ನಖಾಯಗೋ ”

ಒಂದುದಿವಸ ಅಕಬರನು, ಒಬ್ಬ ಸ್ತ್ರೀಯಳಿಗೆ ಕಿಂಚಿತ್ ಚೇಷ್ಟೆ ಮಾಡಿದನು ಆ ಸ್ತ್ರೀಯು ಪರಮ ಸುಶೀಲೆಯಾಗಿದ್ದಳು ಅದರಿಂದ ಅವಳಲ್ಲ ಸ್ವಲ್ಪರೋಷ ವುಂಟಾಯಿತು ಕೋಪದಿಂದ ಬಾದಶಹನನ್ನು ದುರದುರನೆ ನೋಡಹತ್ತಿದಳು ಆಗ ಬಾದಶಹನು ಅವಳನ್ನು ಕುರಿತು - ಈಗ ನೀನು ಒಳ್ಳೇ ಪ್ರಾಯಸ್ಥಳಾಗಿರುವಿ ! ಆದರಿಂದ ನನ್ನಂಥವ ನೊಡನೆ, ವಿನೋದದ ಮಾತುಗಳನ್ನಾಡಿ, ನನ್ನ ಮನಸ್ಸನ್ನು ತೃಪ್ತಿ ಪಡಿಸು ! ಅಂದರೆ ಆ ಜನ್ಮ ಪರಿಯಂತರ ನಿನಗೆ ಸುಖವುಂಟಾಗುವಂತೆ ಮಾಡುತ್ತೇನೆ; ಇವಕ್ಕೆ ನೀನು ಒಪ್ಪಿಕೊಳ್ಳದಿದ್ದರೆ ಮುಪ್ಪಿನಕಾಲದಲ್ಲಿ ನಿನ್ನನ್ನು ನಾಯಿಯು ಸಹಾಮೂಸಿ ನೋಡಲಿಕ್ಕಿಲ್ಲ; ಎಂದು ಅವಳಿಗೆ ಬೆದರಿಸಿ, ಸಭಾಸ್ಥಾನಕ್ಕೆಬಂದು, ಬೀರಬಲನನ್ನು ಕುರಿತು, “ ಹಾಥನಕೆ ಛುಎ ಕೋಊ ಬೇರಹೂ ನಖಾಯಗೋ” ಎಂಬ ಸಮಸ್ಯೆಯನ್ನು ಹೇಳಿ, ಇದನ್ನು ಪೂರ್ಣಮಾಡೆಂದು ಆಜ್ಞಾಪಿಸಿದನು ಆ ಕೂಡಲೆ ಬೀರಬಲನು.

“ ಮಾನುಷಕೋ ಜನ್ಮಪಾಯೋ ಸುಂದ ರಂಗ ರೂಪಪಾಯೋ,
ಕೇರ ರಸ ರಂಗ ಜಾನೋ ಜೀವ ಹುಲಸಾಯಗೋ ।
ಜ್ವಾನೀಕಿ ತರಂಗಮೆ ಕರೆ ಕ್ಯೋನ ಉಮಂಗ ಆಲಿ,
ವಿನಥಲಜಾಯ ದಿನೆ ಯಾಹೂ ಥಲಜಾಕ ಗೋ ।

ಕರ್ಕೈಕ್ಯೋ ಗುಮಾನ ಐಸಿ ತೇಜ ತರುನಾಈಪಾಯೆ,
ಫಿರಲಂಚಾಯೆ ಚಿತ್ತ ಪಾಛೆ ವಛತಾಯೆ ಗೋ।
ಜೋಬನಕೆ ಚಾರದಿನಾ ಬೀತಗಯೆ ಪೀಛೇನಷೇ,
ಹಾಥನಕೆ ಛುವೆ ಕೋಊ ಬೇರಹೂ ನಖಾಯೆಗೋ "।

ಖಾವಂತ, ಒಬ್ಬ ಕಾಮುಕನು ಸುಂದರ ಸ್ತ್ರೀಯನ್ನು ನೋಡಿ, ಮೋಹಿತನಾಗಿ, ಅಂದದ್ದೇನಂದರೆ, " ಎಲೈ ಮೃದ್ವಂಗಿಯೇ, ಪೂರ್ವಾರ್ಜಿತ ಸುಕೃತಫಲದಿಂದ, ಮನುಷ್ಯಪ್ರಾಣಿಗೆ ಸುಂದರ ರೂಪವೂ ಮನೋಹರವಾದ ವರ್ಣವೂ ಪ್ರಾಪ್ತವಾಗುತ್ತದೆ ಅದರಿಂದ ಇಹಜನ್ಮದಲ್ಲಿ ಅಂಥಪ್ರಾಣಿಯು, ಅನೇಕಪ್ರಕಾರದ ಸುಖ ವಿಲಾಸಾದಿಗಳನ್ನು ಅನುಭವಿಸಬೇಕು; ಮತ್ತು ಅನ್ಯರಿಗೂ ಅದರಲಾಭವು ಸಿಗುವಹಾಗೆ ಮಾಡಬೇಕು. ಪ್ರಾಯವೆಂಬದು, ಮಧ್ಯಾಹ್ನದ ಬಿಸಿಲಿನಂತೆ ಕ್ಷಣಿಕವಾದದ್ದು. ಇಂಥ ಸಮಯದಲ್ಲಿ ಸುಖ ವಿಲಾಸಗಳನ್ನು ಅನುಭವಿಸದೆಯೂ, ಪರರಿಗೆ ಸುಖವನ್ನೀಯದೆಯೂ ವ್ಯರ್ಥವಾಗಿ ಕಳೆದರೆ, ಅದರಿಂದ ಪ್ರಯೋಜನವೇನು? ಪ್ರಾಯದ ಕಾಲದಲ್ಲಿ ತನ್ನಿಂದ ಸಾಧ್ಯವಾದಷ್ಟು ಸುಖವನ್ನು ಅನುಭವಿಸದಿದ್ದ ಮೇಲೆ, ಎಲೈ ಸುಂದರಿಯೇ, ವೃದ್ಧಾಪ್ಯಕಾಲದಲ್ಲಿ ಅಂಥ ಯುವತಿಯನ್ನು ಯಾರಾದರೂ ಕಣ್ಣೆತ್ತಿ ನೋಡಲಿಕ್ಕಿಲ್ಲ; ಮತ್ತು ನಿನ್ನನ್ನು ನಾಯಿಗಿಂತ ಹೀನವೆಂದು ತಿಳಿದು ಕೊಳ್ಳುವರು; ಎಂಬದಾಗಿ ಆ ಕಾಮುಕನು ಆ ಸಾಧ್ವಿಯಾದ ಸ್ತ್ರೀಯಳಿಗೆ ಉಪದೇಶ ಮಾಡಿದನು.

ಬಾದಶಹನು ಈ ಪದ್ಯವನ್ನು ಶ್ರವಣಮಾಡಿ ಹೃಷ್ಟಮಾನಸನಾಗಿ, ಬೀರಬಲನಿಗೆ ಪಾರಿತೋಷಕವನ್ನು ಕೊಟ್ಟನು.

—(೧೮೫. ಮಾರ್ಗವು ಎಲ್ಲಿಗೆ ಹೋಗುತ್ತದೆ.)—

ಒಂದು ದಿವಸ ಅಕಬರನೂ ಬೀರಬಲನೂ ಕೂಡಿಕೊಂಡು ಮೃಗಯಾ ವಿಹಾರಕ್ಕೆ ಹೊರಟಿದ್ದರು. ಆಗ ಮಾರ್ಗದಲ್ಲಿ ಬೆಟ್ಟಿಯಾದ ಒಬ್ಬ ಕುರು ಬನನ್ನು ಕುರಿತು " ಈ ಮಾರ್ಗವು ಎಲ್ಲಿಗೆ ಹೋಗುತ್ತದೆ " ಎಂದು ಪ್ರಶ್ನೆ ಮಾಡಿದರು ಆಗ ಆ ಕುರುಬನು ನೀವು ಕೇವಲ ಅಜ್ಞಾನಿಗಳಿದ್ದಂತೆ ಕಂಡು ಬರುತ್ತದೆ, ಮಾರ್ಗವು ಎಂದಾದರೂ ಹೋಗುವದುಂಟೇ? ಇದು ನಿರ್ಜೀವವಾದದ್ದು ಪ್ರಯಾಣಿಕರು ಮಾತ್ರ ಹೋಗುತ್ತಿರುತ್ತಾರೆ, ಬರುತ್ತಿರುತ್ತಾರೆ," ಎಂದು ಉತ್ತರ ಕೊಟ್ಟನು,

ಅವನ ಉತ್ತರವನ್ನು ಕೇಳಿ ಉಭಯತರೂ ಲಜ್ಜಿತರಾದರು ಆ ಕುರುಬನಿಗೆ ಉಚಿತವನ್ನು ಕೊಟ್ಟು ಕಳುಹಿಸಿದರು.

—(೧೮೬. ಸೂರ್ಯನು ಪಶ್ಚಿಮದಲ್ಲಿ ಯಾಕೆ ಮುಳುಗುತ್ತಾನೆ.)—

ಒಂದು ದಿವಸ ಅಕಬರನೂ ಬೀರಬಲನೂ ಏಕಾಂತದಲ್ಲಿ ವಿನೋದ ಮಾಡುತ್ತ ಕುಳಿತು ಕೊಂಡಿದ್ದರು ಆಗ ಬೀರಬಲನು “ ನರವರ ! ಸೂರ್ಯನು ಪಶ್ಚಿಮದಲ್ಲಿ ಯಾಕೆ ಮುಳುಗುತ್ತಾನೆ ! ಎಂದು ಪ್ರಶ್ನೆಮಾಡಿದನು ಅದಕ್ಕೆ ಬಾದಶಹನು ಈ ಪ್ರಶ್ನೆಯನ್ನು ಯಾವನಾದರೊಬ್ಬ ಮೂರ್ಖನಿಗೆ ಮಾಡತಕ್ಕದ್ದು ಎಂದು ಉತ್ತರಕೊಟ್ಟನು ಆಗ ಬೀರಬಲನು ಖಾವಂದ ? ಅದಕ್ಕಂತಲೇ ತಮಗೆ ಪ್ರಶ್ನೆಮಾಡಿದೆನು ಎಂದನು. ಈ ಮಾತನ್ನು ಕೇಳಿ ಬಾದಶಹನು ಕಿಲಕಿಲ ನಕ್ಕನು.

—(೧೮೭. ಹುಜೂರ್ ಗಧೆ ಆತೇ ಹೈ.)—

ಒಂದು ದಿವಸ ಬಾದಶಹನು ಬೀರಬಲನಿಗೆ “ನೀನು ಈ ದಿವಸ ಬಹುರೂಪಿಯಾಗು ?” ಎಂದು ಅಪ್ಪಣೆಮಾಡಿದನು ಆ ಕೂಡಲೆ ಬೀರಬಲನು ಕುಂಬಾರನ ವೇಷವನ್ನು ಧಾರಣಮಾಡಿಕೊಂಡು ಕತ್ತೆಯನ್ನು ಹೊಡಕೊಂಡು ಬಾದಶಹನಿಗೆ ಎದುರಾಗಿ ಮಾರ್ಗದಲ್ಲಿ ಬರಹತ್ತಿದನು. ಆಗ ಬಾದಶಹನು ಎಲೋ ಕತ್ತೆಕಾಯುವವನೇ ಓರೆಯಾಗು ! ಎಂದು ಅಪ್ಪಣೆ ಮಾಡಿದನು ಆಗ ಬೀರಬಲನು ನಗುತ್ತ ನಾನುದೂರದಿಂದಲೇ ಸರಕಾರ ಕತ್ತೆಬರುತ್ತದೆ ಓರೆಯಾಗಿರಿ ಎಂದು ಕೂಗಿಕೊಳ್ಳುತ್ತಿರುವೆನಲ್ಲಾ ! ಎಂದನು ಇದನ್ನು ಕೇಳಿ ಬಾದಶಹನು ಲಜ್ಜಿತನಾದನು.

—(೧೮೮. ಒಂಟೆಯು ಡೊಂಕ ಕುತ್ತಿಗೆಯು,)—

ಒಂದುಸಮಯದಲ್ಲಿ ಅಕಬರ ಬಾದಶಹನು, ಬೀರಬಲನಿಗೆಕೆಲವುದೇಶವನ್ನು ಬಕ್ಷೀಸಾಗಿ ಕೊಡುತ್ತೇನೆಂದು ಹೇಳಿದ್ದನುಯಾವಾಗ ಕೊಡುವ ಪ್ರಸಂಗವು ಸಮೀಪಿಸಿತೋ ಆಗ ಮೋರೆಯನ್ನು ಡೊಂಕ ಮಾಡಿದನು ಮುಂದೆ ಕೆಲವು ದಿವಸಗಳಾದಮೇಲೆ ಮಾರ್ಗದಲ್ಲಿ ಹೋಗುತ್ತಿದ್ದ ಒಂದು ಉಷ್ಟ್ರವನ್ನು ಕಂಡು ಬೀರಬಲನನ್ನು ಕುರಿತು “ ಬೀರಬಲ್ಲ? ಈ ಒಂಟೆಯು ಕುತ್ತಿಗೆಯು ಯಾಕೆ ಡೊಂಕಾಗಿರುವದು ? ” ಎಂದು ಕೇಳಿದನು ಅದಕ್ಕೆ ಬೀರಬಲನು ಇದುಹಿಂದಕ್ಕೆ ಯಾವನಿಗಾದರೂ ಉಂಬಳಿಗ್ರಾಮವನ್ನು ಕೊಡುತ್ತೇನೆಂದು ಹೇಳಿರಬಹುದು ! ಎಂದನು.

ಆಗ ಬಾದಶಹನಿಗೆ ತಾನು ಕೊಟ್ಟ ವಚನವು ಸ್ಮರಣೆಗೆ ಬಂತು ಆ ಕೂಡಲೆ ಒಂದು ಪ್ರಾಂತವನ್ನು ಬಕ್ಷೀಸಾಗಿ ಕೊಟ್ಟು ಬಿಟ್ಟನು.

—(೧೮೯. ಜೋ ಸೋಯಾ ಸೋ ಚುಕಾ.)—

ಒಂದು ದಿವಸ ಬಾದಶಹನು ಬೀರಬಲ್ಲ ! ಈ ದಿವಸ ನೀನು ನನ್ನನ್ನು

ಮೋಸೆ ಗೊಳಿಸುವಂತೆ ಒಂದುವೇಷವನ್ನು ಧಾರಣ ಮಾಡಿಕೊಂಡು ಬಾ ! ಎಂದು ಅಪ್ಪಣೆಮಾಡಿದನು. ಬಾದಶಹನ ಅಪ್ಪಣೆಯ ಮೇರೆಗೆ ಬೀರಬಲನು ಕಾವಲುಗಾರನ ವೇಷವನ್ನು ಹಾಕಿಕೊಂಡು ಬಾದಶಹನ ಪ್ರಾಸಾದದ ಮುಂಭಾಗದಲ್ಲಿ ಅತ್ತ ಇತ್ತ ಸಂಚರಿಸಹತ್ತಿದನು. ಅರ್ಧರಾತ್ರಿಯಲ್ಲಿ ಅಕಸ್ಮಾತ್ತಾಗಿ ಎಚ್ಚರತ್ತು ಬಾದಶಹನು ಹೊರಗೆಬಂದು ಸಂಚರಿಸಹತ್ತಿರುವವನು ಕಾವಲುಗಾರನೇ ಎಂದು ತಿಳಿದು “ ಎಲೋ ಕಾವಲು ಗಾರನೇ ! ನಿದ್ರೆಯನ್ನು ಹ್ಯಾಗೆ ಕೊಡುತ್ತೀ ? ” ಎಂದು ಕೇಳಿದನು. ಅದಕ್ಕೆ ಪ್ರಚ್ಛನ್ನವೇಷಧಾರಿಯಾದ ಬೀರಬಲನು ಬಿಲ್ಲಿಗೆಬಂದು ಕೇರು ? ಎಂದು ಹೇಳಿದನು. ಆಮೇಲೆ ಪುನಃ ಬಾದಶಹನು ಎಚ್ಚರಿಕೆಯನ್ನು ಹ್ಯಾಗೆ ಕೊಡುವಿ ! ಎಂದನು ಅದಕ್ಕೆ ಬೀರಬಲನು ಹುಜೂರ್ ಜೋ ಸೋಯಾ ಸೋ ಚೊಕಾ ಅಂದರೆ ನಿದ್ರೆಯನ್ನು ಯಾವ ಬೆಲೆಗೆ ಕೊಡುತ್ತೇನೆಂದು ಹೇಳಿದೆನೋ ಅದರಂತೆಯೇ ಎಚ್ಚರಿಕೆಯನ್ನಾದರೂ ಕೊಡುತ್ತೇನೆ. ಎಂದು ಹೇಳಿದನು. ಈ ಪ್ರಕಾರ ಭಾವಗರ್ಭಿತವಾಕ್ಯವನ್ನು ಹೇಳಿದವನು ಬೀರಬಲನೇ ಇರಬಹುದೆಂದು ತಿಳಿದು ಅನರ್ಘ್ಯವಾದ ಪಾರಿತೋಷಕವನ್ನಿತ್ತನು.

ಟೀಪು—ಸೋಯಾ, ಅಂದರೆ ನಿದ್ರೆ, ಚೊಕಾ, ಅಂದರೆ ಎಚ್ಚರಿಕೆ ಎಂತಲೂ ತಪ್ಪು ಎಂತಲೂ ಅರ್ಥವಾಗುವದರಿಂದ “ ಜೋ ಸೋಯಾ ಸೋ ಚೊಕಾ” ಎಂಬವಾಕ್ಯಕ್ಕೆ ಹ್ಯಾಗೆ ನನಗೆ ನಿದ್ರೆ ಇರುವದೋ ಹಾಗೆಯೇ ಎಚ್ಚರಿಕೆಯು ಇರುವದೆಂತಲೂ, ಅಥವಾ ನಿದ್ರೆಮಾಡುವವನಿಂದ ತಪ್ಪಾಗುತ್ತದೆಂತಲೂ ಹೇಳಿದಂತಾಯಿತು,

—(೧೯೦, ಸಹಸ್ರ ಪಾದರಕ್ಷೆ.)—

ಒಂದು ಸಾರೆ ಬಾದಶಹನು ವಿನೋದ ಮಾಡಬೇಕೆಂದು ಬೀರಬಲನ ಪಾದರಕ್ಷೆಗಳನ್ನು ಬಚ್ಚಿಟ್ಟನು ರಾಜಕರಣವು ಸಮಾಪ್ತಿಯಾದ ಮೇಲೆ, ಬೀರಬಲನು ಮನೆಗೆ ಹೋಗಬೇಕೆಂದು ಹೊರಗೆ ಬಂದು ಪಾದರಕ್ಷೆಗಳನ್ನು ಹುಡುಕ ಹತ್ತಿದನು ಎಲ್ಲಿಯೂ ಕಾಣಿಸಲಿಲ್ಲ ಆಗ ಬಾದಶಹನು ಪಾದರಕ್ಷೆಗಳು ಸಿಗಲಿಲ್ಲವೇ ? ಒಳ್ಳೇದು ಎಲೋ ಪರಿಚಾರಕನೇ ನನ್ನ ಪಾದರಕ್ಷೆಗಳನ್ನು ಕೊಡು ? ಎಂದು ಹೇಳಿದನು. ಅದರಂತೆ ಸೇವಕನು ಹೊಸಪಾದರಕ್ಷೆಗಳನ್ನು ಕೊಡಲು, ಅವುಗಳನ್ನು ಕಾಲೊಳಗೆ ಹಾಕಿಕೊಂಡು, ದೇವರು ತಮಗೆ ಪರಲೋಕದಲ್ಲಿ ಇಂಥ ಸಹಸ್ರ ಸಹಸ್ರ ಪಾದರಕ್ಷೆಗಳನ್ನು ಕೊಡಲಿ ಎಂದು ಆಶೀರ್ವದಿಸಿದನು ಈ ಮಾತು ಕಿವಿಗೆ ಬಿದ್ದಕೂಡಲೆ ಬಾದಶಹನು, ಬಿದ್ದುಬಿದ್ದು ನಕ್ಕನು.

—(೧೯೧. ಬೀರಬಲನು ಪರುಷಮಣಿಯಾಗಿದ್ದಾನೆ.)—

ಅಕಬರ ಬಾದಶಹನಿಗೂ, ಇರಾಣದ ಬಾದಶಹನಿಗೂ, ಒಂದುಸಾರೆ ಯಾವದೋ ಒಂದುಕಾರ್ಯದನಿಮಿತ್ತದಿಂದ ಸಮಾಗಮವಾಗಿತ್ತು ಆಗ ಇರಾಣದ ಬಾದಶಹನು ಅಕಬರನನ್ನು ಕುರಿತು- "ನಿಮ್ಮ ಸಂಗ್ರಹದಲ್ಲಿ ಪರುಷಮಣಿಯುಂಟೋ ! " ಎಂದು ಪ್ರಶ್ನೆಮಾಡಿದನು. ಆಗ ಅಕಬರನು ಬೀರಬಲನ ಕೈಹಿಡಿದು ಇವನೇ ನನ್ನ ಸಂಗ್ರಹದಲ್ಲಿದ್ದ ಪರುಷಮಣಿಯು, ಎಂದು ಹೇಳಿ ಈ ಕೆಳಗಿನ ಪದ್ಯವನ್ನು ಹೇಳಿದನು.

ಉದ್ಯಮುಸೆ ಲಕ್ಷ್ಮೀಮಿಲ್ಹೈ, ಮಿಲ್ಹೈದ್ರವ್ಯಸೇ ಮಾನ ।
ದುರ್ಲಭ ಪಾರಸ ಜಗತಮೆ, ಮಿಲನೋ ಮಿತಸುಜಾನ ॥

ಅಂದರೆ ಉದ್ಯೋಗದಿಂದ ಲಕ್ಷ್ಮೀಪ್ರಾಪ್ತವು, ದ್ರವ್ಯದಿಂದ ಮಾನವು ಸಿಗುತ್ತದೆ. ಸುಜನರು ಮಿತಿಯಿಂದ ದೊರೆಯುತ್ತಾರೆ, ಆದರೆ ಪರುಷಮಣಿಯು ದುರ್ಲಭವು. ಈಮಾತಿಗೆ ಇರಾಣದ ಬಾದಶಹನು ಒಪ್ಪಿಕೊಂಡನು.

—(೧೯೨. ದೌಲತ ಹಾಜೀರಹೈ.)—

ಒಂದುದಿವಸ ಅಕಬರ ಬಾದಶಹನು ತನ್ನ ದೌಲತ ಎಂಬ ಪರಿಚಾರಕನನ್ನು ಕೆಲಸದಿಂದ ದೂರಮಾಡಿದನು, ಇದಕ್ಕೆ ಏನು ಉಪಾಯ ಮಾಡಬೇಕೆಂದು ದೌಲತನು ಬೀರಬಲನಿಗೆ ಹೋಗಿ ಕೇಳಿದನು. ಆಗ ಬೀರಬಲನು ನೀನು ಒಂದುದಿವಸ ಅರಮನೆಯ ಮಹಾದ್ವಾರದ ಹತ್ತರಬಂದು "ದೌಲತ ಹಾಜೀರಹೈ ಇರಬೇಕೋ ? ಹೋಗಬೇಕೋ ! ", ಎಂದು ಗಟ್ಟಿಯಾಗಿಕೂಗು ಎಂದು ಹೇಳಿ ಕಳುಹಿಸಿದನು. ಅವನು ಬೀರಬಲನ ಹೇಳಿಕೆಯಂತೆ ಮಾಡಿದನು. ಆಗ ಬಾದಶಹನು ದೌಲತನನು ಹಿಂದಕ್ಕೆ ಕರಯಿಸಿ ಕೊಂಡು- "ದೌಲತ ಹಮಾರೆಯಹಾ ಸದಾ ಬನೀರಹೈ" ಅಂದರೆ ದೌಲತನು ನಮ್ಮಲ್ಲಿ ಯಾವಾಗಲೂ ಇರಲಿಕ್ಕೇಬೇಕು ಎಂದನು. ಇಂಥ ಭಾವಗರ್ಭಿತ ವಾಕ್ಯವನ್ನು ಕೇಳಿ ಸಭಾಸದರು ನಕ್ಕುನಕ್ಕು ಬಿದ್ದರು.

—(೧೯೩. ನಹಿರಾಂಚೆ ರಹಮಾನ.)—

ಒಂದುದಿವಸ ಅಕಬರ ಬಾದಶಹನು ಮೃಗಯಾವಿಹಾರಕ್ಕೆ ಹೋಗಿದ್ದನು, ಎರಡುಪ್ರಹರ ಸಮಯವಾಯಿತು ಆಗ ಅವನು [ನಮಾಜ] ಅಂದರೆ ದೇವರಧ್ಯಾನಕ್ಕೆ ಕುಳಿತುಕೊಂಡನು. ಆಗ ವಿರಹಿಣಿಯು ತನ್ನ ಪ್ರಿಯನನ್ನು ಹುಡುಕುತ್ತ ಅಕಬರನು ಕುಳಿತಿದ್ದ ಸ್ಥಳಕ್ಕೆ ಬಂದು, ಬಾದಶಹನು ಕಳೆದು ಇಟ್ಟ ವಸ್ತ್ರಗಳನ್ನು ತುಳಿಯುತ್ತಹೋದಳು. ಆಗ ಅವನು ಎಲೈ ಸುಂದರಿಯೇ ! ನೀನುಬಹಳೇ ಅಸಾವಧಳೂ ಧಿಟ್ಟಳೂ ಇದ್ದಂತೆಕಾಣುತ್ತದೆ ನನ್ನ

ಬಟ್ಟೆಗಳನ್ನು ನೀನುತುಳಿದಕಾರಣವೇನುಎಂದುಕೇಳಿದನು ಆಗಆಸ್ತ್ರೀಯು

ನರರಾಚೀ ಸೂರ್ಥೀನಹೀ ತುಮುಕಸಲಖ್ಯೋ ಸುಜಾನ ।
ಪಢೆ ಕುರಾನ ಚಾರೇಭಯೇ ನಹಿರಾಂಚೇ ರಹಿಮಾನ ॥

ಖಾವಂದ ? ನಾನಂತೂ ಬುದ್ಧಿಯಿಲ್ಲದವಳು, ಆದರೆ ನೀನು ಕುರಾನವನ್ನು ಓದಿದವನೂ, ಸದ್ಯಕ್ಕೆ ನಮಾಜ ಮಾಡುತ್ತ ಕುಳಿತ ಸುಜನನೂ, ಆಗಿದ್ದು ನನ್ನಮೇಲೆ ನಿನ್ನದೃಷ್ಟಿಯು ಯಾಕೆಬಿತ್ತು, ನೀನು ಮಾಡುತ್ತಿರುವ ಭಕ್ತಿಯು ಕೇವಲ ಬಹಿರಂಗವಾಗಿದ್ದಂತೆ ಕಾಣುತ್ತದೆ ಎಂದಳು.

ಈ ಮಾತುಗಳನ್ನು ಕೇಳಿದಕೂಡಲೇ ಬಾದಶಹನು ಲಜ್ಜಿತನಾಗಿ ಆ ಸ್ತ್ರೀಯಳಿಗೆ ಪಾರಿತೋಷಕವನ್ನು ಕೊಟ್ಟು ಕಳುಹಿಸಿದನು ಮತ್ತು ಅಂತಃಪುರಕ್ಕೆ ಬಂದು ಬೀರಬಲನನ್ನು ಕರೆಯಿಸಿ ಈ ಸಂಗತಿಯನ್ನು ತಿಳಿಸಿದನು ಬೀರಬಲನು ಆ ಸ್ತ್ರೀಯಳನ್ನು ಪ್ರಶಂಸೆಮಾಡಿದನು.

—(೧೯೪. ಬದನೀಕಾಯಿ ಪಲ್ಲೆ.)—

ಒಂದುದಿನ ಬಾದಶಹನು ಬೀರಬಲನ ಮುಂದೆ ಬದನೀಕಾಯಿಯು ಬಹಳ ಉತ್ತಮ ಪದಾರ್ಥವೆಂದು ಪ್ರಶಂಸೆ ಮಾಡಹತ್ತಿದನು, ಆಗ ಬೀರಬಲನು- "ಹೌದು; ಮಹಾರಾಜ ! ಅಂತೇ ಜನರು ಅದನ್ನು ತಿನ್ನುತ್ತಾರೆ, ಎಂದು ಹೇಳಿದನು. ಮುಂದೆ ಕೆಲವು ದಿವಸಗಳಾದಮೇಲೆ ಅಕಬರನು ಬದನೇಕಾಯಿಯನ್ನು ಬಹಳ ನಿಂದಿಸಿದನು. ಆಗ ಬೀರಬಲನು "ಖಾವಂದ ! ಇದರಿಂದ ರೋಗೋತ್ಪತ್ತಿಯಾಗುತ್ತದೆ, ಮತ್ತುಬಹಳೇ ವಾತವಾಗುವದು;" ಎಂದನು. ಈ ಮಾತನ್ನು ಕೇಳಿದಕೂಡಲೇ ಬಾದಶಹನಿಗೆ ಕೋಪವುಂಟಾಯಿತು ಆಗ ಬೀರಬಲನನ್ನು ಕುರಿತು- ಬೀರಬಲ್ಲ ! ನೀನು ಬಹಳೇ ಅಸತ್ಯವಾದವನ್ನು ಮಾಡುತ್ತಿರುವಿ, ಹ್ಯಾಗಂದರೆ ಬದನೇಕಾಯಿಯು ಶ್ರೇಷ್ಠವಾದದ್ದೆಂದು ಹೇಳಿದವನೂ ನೀನೇ. ಈಗ ಹಳಿಯುವವನೂ ನೀನೇ; ಹೀಗೇಕೆ ಎಂದು ಕೇಳಿದನು. ಆಗ ಬೀರಬಲನು ನಮ್ರತೆಯಿಂದ ಪೃಥ್ವೀನಾಥ ನಾನು ನಿಮ್ಮ ಆಜ್ಞಾಧಾರಕನೋ, ಅಥವಾ ಬದನೇಕಾಯಿಯ ಆಜ್ಞಾಧಾರಕನೋ ಎಂದನು, ಈ ಮಾತನ್ನು ಕೇಳಿದಕೂಡಲೆ ಬಾದಶಹನಿಗೆ ನಗೆಯು ಬಂತು.

—(೧೯೫ ಅಪ್ಸರೆಯೂ ಮತ್ತು ಡಾಕಿನಿಯೂ.)—

ಒಂದುದಿವಸ ಬಾದಶಹನು- "ಬೀರಬಲ್ಲ ! ನನಗೆ ಒಬ್ಬ ಅಪ್ಸರೆಯನ್ನೂ ಒಬ್ಬ ಡಾಕಿನಿಯನ್ನೂ ತೋರಿಸು" ಎಂದು ಹೇಳಿದನು. ಮರುದಿವಸ ಬೀರಬಲನು ತನ್ನ ಪತ್ನಿಯನ್ನೂ, ಒಬ್ಬ ವೇಶ್ಯಾಂಗನೆಯನ್ನೂ ಕರೆತಂದು ಭೂವರ ! ಈ ನನ್ನ ಪತ್ನಿಯು ಅಪ್ಸರೆಯಕಿಂತಲೂ ಶ್ರೇಷ್ಠಳಾಗಿರುವಳು,

ನನ್ನ ಸೇವೆಯನ್ನು ಚೆನ್ನಾಗಿ ಮಾಡುತ್ತಾಳೆ ಎಂದನು. ಆಗ ಬಾದಶಹನು ಇವಳು ಕೇವಲ ಕೃಷ್ಣವರ್ಣವುಳ್ಳವಳು ಅಪ್ಸರೆಯರು ತ್ರಿಲೋಕಸುಂದರಿ ಇರುವರೆಂದು ಕೇಳಿದ್ದೇನೆ ಎಂದನು. ಆಗ ಬೀರಬಲನು ಧರ್ಮಾವತಾರ ಸುಂದರತ್ವವು ಗುಣಗಳಿಂದ ಉಂಟಾಗುತ್ತದೆಯೇ ಹೊರತು ರೂಪ, ವರ್ಣದಿಂದ ಬರತಕ್ಕದ್ದಲ್ಲ, ಇವಳಿಂದ ನನಗೆ ಸ್ವರ್ಗಸುಖವು ಲಭಿಸುತ್ತದೆ ಎಂದು ಪ್ರತಿಯಾಗಿ ನುಡಿದನು. ಆಮೇಲೆ ಬಾದಶಹನು ಒಳ್ಳೇದು; ಡಾಕಿನಿಯು ಎಲ್ಲಿರುವಳು ಎಂದು ಕೇಳಿದನು. ಆಗ ಬೀರಬಲನು ಆ ವೇಶ್ಯೆಯನ್ನು ಮುಂದಕ್ಕೆಕರೆದು- ಸರಕಾರ ? ಇವಳು ಡಾಕಿನಿಯು, ಇವಳು ಯಾರನ್ನು ಆಶ್ರಯಿಸುವಳೋ ಅವರ ಸರ್ವಸ್ವವನ್ನು ಹರಣಮಾಡಿ ಅವನನ್ನು ಮಣ್ಣುಪಾಲು ಮಾಡಿ ಹೋಗುತ್ತಾಳೆ ಎಂದು ಹೇಳಿದನು. ಈ ಯುಕ್ತಿಯಿಂದ ಬಾದಶಹನು ಪ್ರಸನ್ನನಾದನು.

[೧೯೬ ಯಾವ ನದಿಯ ಜಲವು ಉತ್ತಮವಾದದ್ದು.]—

ಒಂದುದಿವಸ ಬಾದಶಹನು ತನ್ನ ಪ್ರಾಸಾದದ ಮುಂಭಾಗದಲ್ಲಿ ನಿಂತುಕೊಂಡು ಯಮುನಾ ಪ್ರವಾಹವನ್ನು ನೋಡಹತ್ತಿದ್ದನು, ಆಗ ಬೀರಬಲನು ಅಲ್ಲಿಗೆ ಬಂದನು ಅವನನ್ನು ನೋಡಿ- ಬೀರಬಲ್ಲ ! ಯಾವ ನದಿಯ ಜಲವು ಉತ್ತಮವಾದದ್ದು ಎಂದು ಕೇಳಿದನು. ಅದಕ್ಕೆ ಬೀರಬಲನು ಯಮುನಾ ನದಿಯ ಜಲವು ಶ್ರೇಷ್ಠವಾದದ್ದು; ಎಂದು ಉತ್ತರಕೊಟ್ಟನು. ಆಗ ಪುನಃ ಬಾದಶಹನು ನಿಮ್ಮ ಹಿಂದೂ ಧರ್ಮಶಾಸ್ತ್ರಗಳಲ್ಲಿ ಗಂಗಾನದಿಯು ಮಹತ್ವವಾದದ್ದೆಂದು ಹೇಳಿರಲು, ನೀನು ಯಮುನಾಜಲವು ಶ್ರೇಷ್ಠವಾದದ್ದೆಂದು ಹೇಳುವಿಯಲ್ಲಾ ಹೀಗೇಕೆ, ಎಂದು ಕೇಳಿದನು. ಅದಕ್ಕೆ ಬೀರಬಲನು- ಪೃಥ್ವೀನಾಥ ! ಗಂಗೆಯಲ್ಲಿ ಇದ್ದದ್ದು ಜಲವಲ್ಲ ! ಅಮೃತವು; ಎಂದು ಹೇಳಿದನು. ಈ ಉತ್ತರದಿಂದ ಬಾದಶಹನು ತುಷ್ಟನಾದನು.

—(೧೯೭ ದಾದಃ ಹುಜೂರಸ್ತ.)—

ಒಂದುದಿವಸ ಬೀರಬಲನೂ ಬಾದಶಹನೂ ಕೂಡಿಕೊಂಡು ತುರಗಾರೂಢರಾಗಿ ವಾಯು ಸೇವನಾರ್ಥವಾಗಿ ಹೊರಟಿದ್ದರು, ಆಗ ಬಾದಶಹನು ವಿನೋದಕ್ಕಾಗಿ- " ಬೀರಬಲ್ಲ ? ಈ ಅಸ್ಪಪಿದರ ಶುಮಾಸ್ತ ! " ಎಂದನು [ಈ ವಾಕ್ಯಕ್ಕೆ ಎರಡು ಅರ್ಥಗಳಾಗುತ್ತವೆ. ಮೊದಲನೇದು, ಈ ಕುದುರೆಯು ನಿಮ್ಮ ತಂದೆಯದೋ ! ಎಂದೂ ಎರಡನೇದು ಈಕುದುರೆಯೇ ನಿಮ್ಮ ತಂದೆಯೋ !] ಅದಕ್ಕೆ ಬೀರಬಲನು " ದಾದಃ ಹುಜೂರಸ್ತ " ಎಂದು ಉತ್ತರ ಕೊಟ್ಟನು [ಈ ವಾಕ್ಯಕ್ಕೂ ಎರಡು ಅರ್ಥಗಳಾಗುತ್ತವೆ. ಮೊದಲ

ನೇದು ತಾವು ಕೊಟ್ಟದ್ದೋ; ಎಂದೂ ಎರಡನೇದು ಈ ಕುಸುರೆಯು ನಿಮ್ಮ ಅಜ್ಜ ಎಂದು ಹೇಳಿದಂತೆ ಆಯಿತು.] ಬಾದಶಹನು ನಿರುತ್ತರನಾದನು

೧೯೮. ಕಲಪು (ಮೀಸಿಗೆ ಹಚ್ಚಿಕೊಳ್ಳುವ ಬಣ್ಣ) ಹಚ್ಚಿ ಕೊಳ್ಳುವದರಿಂದ ಸುಂದರತ್ವವು ಬರುವದಿಲ್ಲ.

ಅಕಬರ ಬಾದಶಹನು ವೃದ್ಧನಾಗಲು, ಅವನ ಕೂದಲುಗಳೆಲ್ಲ ಬಿಳು ಪಾಗಿಹೋದವು. ಅದರಿಂದ ಅವುಗಳಿಗೆ ಕಲಫು ಹಚ್ಚಿಕೊಳ್ಳುತ್ತಿದ್ದನು ಆ ಸ ಮುದಲ್ಲಿ ಬೀರಬಲನು ಅಲ್ಲಿಗೆ ಬಂದನು ಆಗ ಬಾದಶಹನು ಅವನನ್ನು ನೋಡಿ ಬೀರಬಲ್ಲ ! ಕಲಪನ್ನು ಹಚ್ಚಿಕೊಳ್ಳುವದರಿಂದ ಸುಂದರತ್ವವು ಉಂಟಾಗುವ ದಿಲ್ಲ ! ಎಂದನು ಅದಕ್ಕೆ ಬೀರಬಲನು ಧೈರ್ಯದಿಂದ - “ ಹೀಗೆ ತಿಳಿದಿದ್ದ ರು ಕಲಪನ್ನು ಹಚ್ಚಿಕೊಳ್ಳುತ್ತಿರುವರಲ್ಲಾ ! ಅವರು ಕಲಪು ಹಚ್ಚಿಕೊಂಡರೆ ವೃದ್ಧತ್ವವುಹೋಗಿ, ತರುಣತ್ವವು ಪ್ರಾಪ್ತವಾಗುವದೆಂದು ತಿಳಿದು ಕೊಂಡಂ ತೆ ಕಾಣುತ್ತದೆ ” ಎಂದನು.

ಆ ದಿವಸದಿಂದ ಬಾದಶಹನು ಕಲಪು ಹಚ್ಚಿಕೊಳ್ಳುವದನ್ನು ಬಿಟ್ಟು ಬಿಟ್ಟನು.

— (೧೯೯. ಉದ್ಯಾನದ ವೃಕ್ಷವೂ ಮತ್ತು ಅರಣ್ಯದ ವೃಕ್ಷವೂ.) —

ಒಂದು ದಿವಸ ಬಾದಶಹನು ಅರಣ್ಯದ ಮಾರ್ಗವನ್ನು ಹಿಡಿದು ಹೊ ರಟಿದ್ದನು ಆಗ ಒಂದು ಎಳೆಕೂಸನ್ನು ಬುಟ್ಟಿಯೊಳಗೆ ಇಟ್ಟುಕೊಂಡು, ಹೋಗುತ್ತಿರುವ ಕಾಡಿನ ಸ್ತ್ರೀಯನ್ನು ನೋಡಿದನು ಅದನ್ನು ನೋಡಿ ಅ ವನಿಗೆ ಬಹುಳ ಆಶ್ಚರ್ಯವಾಯಿತು ಆಗ ಅವನ ಮನಸ್ಸಿನಲ್ಲಿ “ ಸ್ತ್ರೀಯರೆಂದರೆ ಎಲ್ಲರೂ ಒಂದೇತರ ಹೀಗಿದ್ದು ನಮ್ಮ ಅಂತಃಪುರದ ಸ್ತ್ರೀಯರು ಸುಮ್ಮ ಸುಮ್ಮನೆ ಒಣ ಜಂಭವನ್ನು ಮಾಡುತ್ತಿರುವರು. ಹೀಗ್ಯಾಕೆ ಇರಬಹುದು; ಇದನ್ನು ಪರೀಕ್ಷಿಸಿ ನೋಡಬೇಕೆಂದು ” ಕಲ್ಪನೆಯು ಹುಟ್ಟಿತು ಅವನು ಹಾಗೆಯೇ ತಿರುಗಿ, ಅಂತಃಪುರಕ್ಕೆ ಬಂದನು. ಒಬ್ಬ ಬೇಗಮ್ಮಳನ್ನು ಸಹಾ ಮಾತಾಡಿಸಲಿಲ್ಲ. ಆಗ ಅವರು ಗಾಬರಿಯಾಗಿ ಬೀರಬಲನನ್ನು ಕರೆಯಿಸಿ ಕೊಂಡು, ಇದಕ್ಕೆ ಏನು ಉಪಾಯ ಮಾಡಬೇಕೆಂದು ಪ್ರಶ್ನೆಮಾಡಿದರು. ಅದಕ್ಕೆ ಬೀರಬಲನು-“ ನಾಳೆಯ ದಿವಸದಿಂದ ಉದ್ಯಾನದೊಳಗಿನ ಯಾವ ವೃಕ್ಷಗಳಿಗೂ ನೀರು ಹಾಕಬೇಡಿರೆಂದು, ತೋಟಗರಿಗೆ ಅಪ್ಪಣೆ ಮಾಡಿರಿ ” ಎಂದು ಹೇಳಿ ಕಳುಹಿಸಿ ಕೊಟ್ಟನು ಅವರು ಅದರಂತೆಯೇ ಅಪ್ಪಣೇ ಮಾಡಿ ದರು. ನಾಲ್ಕಾರು ದಿವಸಗಳೊಳಗಾಗಿ ಲತೆ; ವೃಕ್ಷಗಳೆಲ್ಲ ಶುಷ್ಕವಾಗಿ ಹೋ ದವು, ಅದನ್ನು ನೋಡಿ ಬಾದಶಹನು ಕುಪಿತನಾದನು ಆಗ ಒಬ್ಬ ಬೇಗಮ್ಮ

ಳು ಮುಂದೆಬಂದು-“ಸ್ವಾಮೀ! ನಿರಪರಾಧಿಯುವನ ಮೇಲೆ ಕೋಪಿಸಕೂಡದು ನಾವೇ ಈ ಗಿಡಗಳಿಗೆ ನೀರು ಹಾಕಬೇಡಿರೆಂದು ಅಪ್ಪಣೆ ಮಾಡಿದ್ದೇವೆ” ಎಂದಳು ಆಗ ಬಾದಶಹನು ಹೀಗೇಕೆ ಮಾಡಿದಿರಿ? ಎಂದು ಪ್ರಶ್ನೆ ಮಾಡಿದನು ಆ ಕೂಡಲೆ ಬೇಗಮ್ಮಳು-“ಅರಣ್ಯದೊಳಗೆ ಬೆಳೆದಿರುವ ವೃಕ್ಷಗಳಿಗೆ ಯಾರು ನೀರನ್ನು ಹಾಕುತ್ತಾರೆ? ಹಾಕದಿದ್ದರೂ ಸಹ ಅವು ಹೆಚ್ಚಾಗಿ ಹಸರು ಮುರಿಯುತ್ತಿರುವದಿಲ್ಲವೇ?” ಎಂದು ಕೇಳಿದಳು ಆಗ ಬಾದಶಹನ ಮನಸ್ಸಿನ ಸಂಶಯವು ನಿವೃತ್ತಿಯಾಯಿತು.

—(೨೦೦. ಅಂತ್ಯಜನು ಮುಸಲ್ಮಾನ ನಾಗಲಿಲ್ಲ.)—

ಒಂದು ದಿವಸ ಬಾದಶಹನು ಬೀರಬಲನನ್ನು ಕುರಿತು-“ನೀನು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದರೆ, ನಿನಗೆ ಅರ್ಧರಾಜ್ಯವನ್ನು ಕೊಡುತ್ತೇನೆ” ಎಂದನು ಅದಕ್ಕೆ ಬೀರಬಲನು-“ನಾಳೆಯ ದಿನದಲ್ಲಿ ವಿಚಾರಮಾಡಿಕೊಂಡು ಉತ್ತರವನ್ನು ಹೇಳುವೆನು.” ಎಂದು ಹೇಳಿ, ಓಲಗದಿಂದ ಹೊರಬಿದ್ದು, ಅಂತ್ಯಜರ ಕೇರಿಯನ್ನು ಹೊಕ್ಕು “ಬಹಳೇ ಜಾಗ್ರತೆಯಿಂದ ಇರಿ! ಯಾಕಂದರೆ ಬಾದಶಹನು ನಿಮ್ಮನ್ನು ಮುಸಲ್ಮಾನ ಧರ್ಮಕ್ಕೆ ಸೇರಿಸಿಕೊಳ್ಳಬೇಕೆಂದು ಯತ್ನಪಡಿಸಿದ್ದಾನೆ” ಎಂದು ಹೇಳಿ ಹೊರಟುಬಂದನು ಮರುದಿವಸ ಆ ಅಂತ್ಯಜರೆಲ್ಲ ಕೂಡಿಕೊಂಡು ಬಾದಶಹನ ಸನ್ಮುಖದಲ್ಲಿ ಬಂದು ನಿಂತುಕೊಂಡು-“ಖಾವಂದ; ನಾವು ಮರಣವನ್ನಾದರೂ ಆನಂದದಿಂದ ಸ್ವೀಕರಿಸುವದೇ ಹೊರತು, ಮುಸಲ್ಮಾನ ಧರ್ಮವನ್ನು ಸ್ವೀಕರಿಸಲಾರೆವು” ಎಂದು ಪ್ರಾರ್ಥನೆ ಮಾಡಿಕೊಂಡರು ಆಗ ಅಲ್ಲಿಇದ್ದ ಬೀರಬಲನು-“ಪೃಥ್ವೀನಾಥ! ಈ ಅಂತ್ಯಜರೇ, ತಮ್ಮ ಧರ್ಮವನ್ನು ಬಿಡ ಲೊಪ್ಪಿಕೊಳ್ಳದಮೇಲೆ, ಇತರರು ಹ್ಯಾಗೆ ಧರ್ಮಚ್ಯುತ ರಾದಾರು!” ಎಂದು ಕೇಳಿದನು ಬಾದಶಹನು ಬಹಳೇ ನಕ್ಕನು.

—(೨೦೧. ವನಸ್ಪತಿಯ ಬೀಜ.)—

ಒಂದು ದಿವಸ ಬಾದಶಹನು ಓಲಗದಲ್ಲಿ ಕುಳಿತಿದ್ದನು ರಾಜಕರಣಗಳೆಲ್ಲ ಸಮಾಪ್ತಿಯಾಗುತ್ತ ಬಂದಿದ್ದವು ಆಗ ಯಾವತ್ತು ಸಭಾಸದರು ಬಾದಶಹನನ್ನು ಕುರಿತು -ಖಾವಂದ! ತಾವು ಬೀರಬಲನ ಹೊರತು ಅನ್ಯರಿಗೆಯಾವ ವಿಷಯದಲ್ಲಿಯೂ ಪ್ರಶ್ನೆ ಮಾಡುವದಿಲ್ಲ; ಇದರ ಕಾರಣವೇನು? ಎಂದು ಕೇಳಿದರು. ಆ ಮಾತಿಗೆ ಬಾದಶಹನು- ಅವನು ನಾನು ಕೇಳಿದ ಪ್ರತಿಯೊಂದು ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡುವ ಸಾಮರ್ಥ್ಯವುಳ್ಳವನಿದ್ದಾನೆ. ನಿಮ್ಮಲ್ಲಿ ಅಂಥ ಸಾಮರ್ಥ್ಯವು ಇಲ್ಲ; ಇದ್ದ ಪಕ್ಷದಲ್ಲಿ ವನಸ್ಪತಿ

ಯ ಬೀಜವಾವುದು ? ಹೇಳಿರಿ ! ಎಂದು ಅಪ್ಪಣೆ ಮಾಡಿದನು ಅವರು ಒಂದು ಮಾಸ ಪರಿಯಂತರ ಶೋಧನಮಾಡಿದರೂ ಸದು ಗೊತ್ತಾಗಲಿಲ್ಲ ಆಗ ಬಾದಶಹನು ಬೀರಬಲನಿಗೆ ಅದೇ ಪ್ರಶ್ನೆಯನ್ನು ಮಾಡಿದನು ಕೂಡಲೆ ಬೀರಬಲನು ಗಂಗಾಜಲವನ್ನು ತೆಗೆದುಕೊಂಡು ಭೂಮಿಯಮೇಲೆಹಾಕಿ ಖಾವಂದ ! ಇದೇ ವನಸ್ಪತಿಗಳ ಬೀಜವು ! ಎಂದು ಉತ್ತರ ಕೊಟ್ಟನು ಅದನ್ನು ಕೇಳಿ, ಅವರೆಲ್ಲರೂ ಲಜ್ಜೆಯಿಂದ ಅಧೋವದನರಾದರು.

೨೨೨. ಪ್ರಜೆಗಳಲ್ಲಿ ಕೆಲವರು ರಾಜರು ಕೆಲವರು
ದರಿದ್ರರು ಯಾಕೆ ಇರುವರು ?

ಒಂದು ಸಾರೆ ಬಾದಶಹನು ಬೀರಬಲನೊಡನೆ ಗೃಹಕೃತ್ಯದ ಸಂಬಂಧನ ಮಾತು ಕಥೆಗಳನ್ನಾಡುತ್ತ ಕುಳಿತು ಕೊಂಡಿದ್ದನು ಒಮ್ಮಿಂದೊಮ್ಮೆ ಬಾದಶಹನ ಮನಸ್ಸಿನಲ್ಲಿ ಈ ಮೇಲೆ ಬರೆದ ಪ್ರಶ್ನೆಯು ಉತ್ಪನ್ನಿಸಿತು ಆಕೂಡಲೆ ಬೀರಬಲ್ಲ ಜಗತ್ತಿನಲ್ಲಿ ಕೆಲವು ಜನರು ರಾಜರು ಯಾಕೆ ಆಗುವರು ? ಕೆಲವರು ದರಿದ್ರರು ಆಗುವ ಕಾರಣವೇನು ? ಎಂದು ಪ್ರಶ್ನೆಮಾಡಿದನು ಆಗ ಬೀರಬಲನು ಕಿಂಚಿತ್ತಾದರೂ ಯೋಚಿಸದೆ.

" ರಾಮು ಝುರೋಖೆ ಬೈಠಕರ ಸಬಕಾಮುಜರಾಲೇತ !
ಜಾಕೀಜೈಸೀ ಚಾಕರೀ ವಾಕೋ ವೈ ಸೋದೇತ ॥

ಎಂಬ ಪದ್ಯವನ್ನು ಹೇಳಿದನು ಇದರ ಅಭಿಪ್ರಾಯವೇನಂದರೆ " ಸೃಷ್ಟಿಕರ್ತನು ಎಲ್ಲ ಮನುಷ್ಯಪ್ರಾಣಿಗಳನ್ನು ನಿರ್ಮಿಸಿ ತನ್ನ ಪ್ರಾಸಾದದ ಅಗ್ರಭಾಗದಲ್ಲಿ ಕುಳಿತುಕೊಂಡು ಎಲ್ಲರಕಡೆಯಿಂದ ಮುಜರೆಯನ್ನು ತಕ್ಕೊಳ್ಳುತ್ತಿದ್ದನು ಯಾರು ಉದ್ಧತ ತನದಿಂದ ಮುಜರೆ ಮಾಡಿದರು ಕೆಲವರು ಅತಿನಮ್ರತೆಯಿಂದ ಮಾಡಿದರು ಅದರಿಂದ ಅವರವರ ಕರ್ಮಾನುಸಾರವಾಗಿ ಅವರವರಸ್ಥಿತಿಯನ್ನುಂಟು ಮಾಡಿದನು.

—(೨೨೩. ಬೀರಬಲನು ಶುನಕನ ವೈದ್ಯನು.)—

ಒಂದು ದಿವಸ ಬಾದಶಹನು ತನ್ನ ಮುಖ್ಯ ಮುಖ್ಯಸಭಾಸದರೊಡನೆ ಕುಳಿತುಕೊಂಡು ವಿನೋದದಿಂದ ಮಾತು ಕಥೆಗಳನ್ನು ಆಡುತ್ತಿದ್ದನು. ಆಗ ಅಬುಲ್ ಫಜಲನು ಬೀರಬಲನಿಗೆ ವಿನೋದಮಾಡಬೇಕೆಂದು ಯೋಚಿಸಿ " ಬೀರಬಲ್ಲ ? ಈಹೊತ್ತಿನಿಂದ ತಮ್ಮನ್ನು ಶುನಕಗಳ ರೋಗ ನಿವಾರಣೆಯಗೃಹಗಳಮೇಲೆ ಮುಖ್ಯಸ್ಥರನ್ನಾಗಿ ನಿಯಮಿಸಿದೆ!" ಎಂದನು ಆ ಕೂಡಲೆ ಬೀರಬಲನು ಹಾಗಾದರೆ ನೀವೆಲ್ಲರೂ ನನ್ನ ಆಜ್ಞೆಯನ್ನು ಪಾಲಿಸಬೇಕಾಯಿತು? ಎಂದನು ಅಬುಲಫಜಲನು ಬೀರಬಲನ ಮಾತನ್ನು ಕೇಳಿ ಲಜ್ಜಿ

ತನಾದನು. ... ...

—(೨೦೪. ಕಳ್ಳನ ಗಡ್ಡದಲ್ಲಿ ಎಳ್ಳಿನಕಾಳು ಅದೆ.)—

ಬಾದಶಹನ ಅಂತಃಪುರದಲ್ಲಿ ಒಂದು ರತ್ನದ ಅಲಂಕಾರವು ಕಳವಾಗಿ ಹೋಯಿತು. ಕಳ್ಳನನ್ನು ಗೊತ್ತುಹಚ್ಚಿ ಕೊಡು? ಎಂದು ಬಾದಶಹನು ಬೀರಬಲನಿಗೆ ಆಜ್ಞೆಮಾಡಿದನು, ಆಗ ಬೀರಬಲನು ಆ ಅಲಂಕಾರವನ್ನಿಟ್ಟಿದ್ದ ಪೆಟ್ಟಿಗೆಗೆ ಕಿವಿಯನ್ನು ಹಚ್ಚಿ ಸ್ವಲ್ಪಹೊತ್ತು ಕುಳಿತುಕೊಂಡು ಆ ಮೇಲೆ ಪೃಥ್ವೀನಾಥ! ಈ ಪೆಟ್ಟಿಗೆಯು ಹೇಳಿದ್ದೇನಂದರೆ ಕಳ್ಳನಗಡ್ಡದಲ್ಲಿ ಒಂದು ಎಳ್ಳುಕಾಳು ಅದೆ, ಎಂದು ಹೇಳಿತು ಎಂದನು ಆಗ ಪರಿಚಾರಕನೊಬ್ಬನು ತನ್ನ ಗಡ್ಡವನ್ನು ಹಿಡಿದುಕೊಂಡು ನೋಡಿದನು, ತೀಕ್ಷ್ಣದೃಷ್ಟಿಯುಳ್ಳ ಬೀರಬಲನು ಅವನನ್ನು ಆ ಕೂಡಲೆ ಹಿಡಿದು ಕಿಂಚಿತ್ ಬೆದರಿಕೆ ಹಾಕಲು ಅವನು ತನ್ನ ಅಪರಾಧವನ್ನು ಸ್ವೀಕರಿಸಿದನು.

—(೨೦೫. ಅತ್ಯದ್ಭುತ ಪ್ರಹೇಲಿಕಾ,)—

ಅಕಬರ ಬಾದಶಹನು ಒಂದು ಸಾರೆ ಬೀರಬಲನಿಗೆ ಈ ಪ್ರಹೇಲಿಕೆಯನ್ನು ಹೇಳಿದನು.

" ಊಪರ ಢಕ್ಕನ ನೀಚೇಢಕ್ಕನ ಬೀಚಮೆ ಖರಬೂಜಾ ।
ಮೋಮ ಘರಿಸೋ ಆಪಹಿ ಕಾಟತಾಸು ಅರ್ಥನಹಿ ದೂಜಾ ॥

ಈ ಪ್ರಹೇಲಿಕೆಯನ್ನು ಕೇಳಿ ಬೀರಬಲನು ಚಕಿತನಾದನು. ಅರ್ಥವನ್ನು ಹೇಳಲಿಕ್ಕೆ ತಿಳಿಯಲಿಲ್ಲ ಕಿಂಚಿತ್ ಅವಕಾಶವನ್ನು ಕೊಡಿರಿ! ಎಂದು ಕೇಳಿಕೊಳ್ಳಲು ಬಾದಶಹನು ಅಪ್ಪಣೆಕೊಟ್ಟನು. ಬೀರಬಲನು ದಿಲ್ಲಿಯನ್ನು ಬಿಟ್ಟು ಒಂದು ಸಮೀಪದ ಜನವಸತಿಗೆ ಹೋದನು. ಬಿಸಿಲಿನಿಂದ ಬಾಯಾರಿತ ಳಮಳಿಸಹತ್ತಿದನು ಆಗ ಆಜನವಸತಿಯಲ್ಲಿದ್ದ ಒಂದು ಚಿಕ್ಕಮನೆಯನ್ನು ಪ್ರವೇಸಿಸಿದನು ಆಗ ಅಲ್ಲಿ ಒಬ್ಬತರುಣಿಯು ಅಡಿಗೆಯನ್ನು ಮಾಡುತ್ತ ಕುಳಿತು ಕೊಂಡಿದ್ದಳು ಅವಳನ್ನು ಕುರಿತು, ಬಾಲಕಿಯೇ! ಏನನ್ನು ಮಾಡುತ್ತಿರುವಿ!

ಬಾಲಕಿ—ಮಗಳನ್ನು ಬೇಯಿಸುತ್ತೇನೆ, ತಾಯಿಯನ್ನು ಸುಡಹತ್ತಿದ್ದೇನೆ.

ಬೀರಬಲ—ನಿನ್ನ ತಂದೆಯು ಏನು ಮಾಡುತ್ತಿರುವನು?

ಬಾಲಕಿ—ಮಣ್ಣಿನಲ್ಲಿ ಮಣ್ಣು ಕೂಡಿಸಲಿಕ್ಕೆ ಹೋಗಿದ್ದಾನೆ

ಬೀರಬಲ—ನಿನ್ನ ತಾಯಿಯು ಎಲ್ಲಿ ಹೋಗಿದ್ದಾಳೆ.

ಬಾಲಕಿ—ಒಂದೊಂದನ್ನು ಎರಡೆರಡು ಮಾಡಲಿಕ್ಕೆ ಹೋಗಿದ್ದಾಳೆ.

ಈ ಉತ್ತರಗಳನ್ನು ಕೇಳಿ ಬೀರಬಲನು ದಿಗ್ಭ್ರಮೆಗೊಂಡನು ಅಷ್ಟ

ರಲ್ಲಿ ಆ ಬಾಲಕಿಯು ಮಾತಾಪಿತೃಗಳು ಬಂದರು ಬೀರಬಲನು ಯಾವತ್ತು ವೃತ್ತಾಂತವನ್ನು ಹೇಳಿದನು. ಆಗ ಆ ಬಾಲಕಿಯ ತಂದೆಯು ಮಹಾಶಯರು! ನನ್ನ ಮಗಳು ತೊಗರೀ ಬೇಳೆಯನ್ನು ಬೀಯಿಸಹತ್ತಿರುವಳು ಅದಕ್ಕೆ ತೊಗರೀ ಕಟ್ಟಿಗೆಯನ್ನೇ ಉರಿ ಹಚ್ಚಿದ್ದಾಳೆ ನಾನು ನಮ್ಮ ಜಾತಿಯ ಒಬ್ಬ ಮನುಷ್ಯನ ಸ್ಮಶಾನಯಾತ್ರೆಗೆ ಹೋಗಿದ್ದೆನು ನನ್ನ ಸ್ತ್ರೀಯು ಉಪ್ಪಿನಕಾಳುಗಳಿಂದ ಬೇಳೆಯನ್ನು ಮಾಡಲಿಕ್ಕೆ ಹೋಗಿದ್ದಾಳು; ಎಂದು ಹೇಳಿದನು ಆಗ ಬೀರಬಲನು ಆ ಮನುಷ್ಯನಿಗೆ, ಬಾದಶಹನು ಹೇಳಿದ ಪ್ರಹೇಲಿಕೆಯ ಅರ್ಥವನ್ನು ಹೇಳೆಂದು ಕೇಳಿದನು ಆಗ ಆ ಮನುಷ್ಯನು - ಎರಡು ಆಚ್ಛಾದನಗಳೆಂದರೆ ಕೆಳಗೆ ಧರಣಿ ಮೇಲೆ ಆಕಾಶ ಕರಬೂಜಿಯ ಹಣ್ಣಿನಂತೆ ಇದ್ದವನು ಮನುಷ್ಯಪ್ರಾಣಿಯು ಎರಡೂ ಕಡೆಯಲ್ಲಿ ತೃಣಾಚ್ಛಾದಿತ ವಾಗಿದ್ದ ಚೊತ ಫಲವು ಅಪತ್ಯಣದ ಶಕೆಯಿಂದ ಹಣ್ಣಾಗಿ ಹೋಗುವಂತೆ ಮನುಷ್ಯ ಪ್ರಾಣಿಯು ಭೂವ್ಯಾಕಾಶಗಳೆಂಬ ಆಚ್ಛಾದನಗಳನಡುವೆ ಸಿಲುಕಿದ್ದು, ಮೃತ್ಯುವಶನಾಗುತ್ತಾನೆ, ಎಂದು ಹೇಳಿದನು.

ಆಗ ಬೀರಬಲನು ಆ ಮನುಷ್ಯನಿಗೆ ಉಚಿತವನ್ನಿತ್ತು ವಿಲ್ಲಿಗೆ ಬಂದನು ಮರುದಿವಸ ಸಭಾಸ್ಥಾನಕ್ಕೆ ಹೋಗಿ ಬಾದಶಹನಿಗೆ ಪ್ರಹೇಲಿಕೆಯ ಅರ್ಥವನ್ನು ಹೇಳಿದನು ಅದನ್ನು ಕೇಳಿ ಬಾದಶಹನು ಅತಿಪ್ರಸನ್ನನಾದನು.

—(೨೦೬. ಡೋಣಿಯನ್ನು ಗೊತ್ತುಮಾಡಿಕೊಂಡು ಬರುತ್ತೇನೆ.)—

ಒಂದುದಿವಸ ಬಾದಶಹನೂ ಬೀರಬಲನೂ ಸಂಚರಿಸುತ್ತ ಸಂಚರಿಸುತ್ತ ಯಾವದೋಒಂದು ಜನವಸತಿಗೆ ಹೋದರು ಅಕಬರನು ಒಬ್ಬ ಮನುಷ್ಯನನ್ನು ಕರೆದು ನಿನ್ನ ಹೆಸರೇನು? ಎಂದು ಕೇಳಿದನು ಅದಕ್ಕೆ ಆ ಮನುಷ್ಯನು “ ಗಂಗಾ ” ಎಂದು ಉತ್ತರ ಕೊಟ್ಟನು ಪುನಃ ಬಾದಶಹನು ನಿನ್ನ ತಂದೆಯ ಹೆಸರೇನು? ಎಂದು ಕೇಳಲು, ಅವನು “ ಯಮುನಾ ” ಎಂದು ಉತ್ತರಕೊಟ್ಟನು ಆಮೇಲೆ ಬೀರಬಲನ ಪ್ರಶ್ನೆಯಿಂದ “ ಅವನ ಅಕ್ಕನಹೆಸರು ನರ್ಮದೆಯೆಂದೂ, ತಾಯಿಯ ಹೆಸರು” “ ಸರಸ್ವತೀ ” ಎಂದೂ ತಿಳಿಯಬಂತು ಆಗ ಬೀರಬಲನು ಆ ಮನುಷ್ಯನಿಗೆ ಸಾಕು, ಸಾಕು, ಸ್ವಲ್ಪತಡೆ ನಾನು ನಾವನ್ನೊಂದನ್ನು ಗೊತ್ತುಮಾಡಿಕೊಂಡು ಬರುತ್ತೇನೆ ಇಲ್ಲದಿದ್ದರೆ ಈ ನದಿಗಳ ಪ್ರವಾಹದಲ್ಲಿ ತೇಲಿ ಹೋಗಬೇಕಾದೀತು.

—(೨೦೭. ಜೊತೇಕೇ ಮಾರೆ ಖಡೇಹೈ.)—

ಬಾದಶಹನು ತನ್ನ ಮಂತ್ರಿ ಜನಗಳೊಡನೆ ಜುಮ್ಮಾ ಮಶೀದಿಗೆ ನಮಾಜಿ (ದೇವರಪ್ರಾರ್ಥನಿಗೆ) ಹೋಗಿದ್ದನು ಆಗ ಅಕಸ್ಮಾತ್ತಾಗಿ ಪೈಜಿ

ಎಂಬವನ ಪಾದರಕ್ಷೆಗಳನ್ನು ಯಾರೋ ಕದ್ದು ಒಯ್ದಿದ್ದರು ಆಗ ಅವನು ಅಲ್ಲಿ ಇಲ್ಲಿ ಪಾದರಕ್ಷೆಗಳ ಶೋಧ ನಡೆಯಿಸಿದನು ಅಷ್ಟರಲ್ಲಿ ಬಾದಶಹನು ತನ್ನ ನಿಯಮವನ್ನು ತೀರಿಸಿಕೊಂಡು, ಹೊರಗೆಬಂದು ಅರಮನೆಗೆ ಹೊರಡಲುನುವಾಗಿ ನಿಂತುಕೊಂಡು ಪೈಜಿಯನ್ನು ಕುರಿತು - ಯಾಕೆ? ಬರುವದಿಲ್ಲವೇನು ? ಎಂದು ಕೇಳಿದನು ಆಗ ಬೀರಬಲನು - ಜೂತೋಕೆ ವಾಸ್ತೆ ಖಡೇ ಹೈ" ಎಂದು ಹೇಳಿದನು ಇದನ್ನು ಕೇಳಿ ಬಾದಶಹನು ಕಿಲಕಿಲ ನಕ್ಕನು.

ಟೀಪು—"ಜೂತೋಕೆ ವಾಸ್ತೆ ಎಂದರೆ ಪಾದರಕ್ಷೆಗಳ ಸಲುವಾಗಿ ಎಂದೂ ಪಾದರಕ್ಷೆಗಳ ಪೆಟ್ಟಿನ ಸಲುವಾಗಿ ಎಂದೂ ಎರಡು ಅರ್ಥವಾಗುತ್ತವೆ.

—(೨೦೮. ಮೂರ್ಖರ ಪತ್ರಿಕೆ.)—

ಒಂದಾನೊಂದು ಸಮಯದಲ್ಲಿ ಒಬ್ಬ ಅರಬನು ಕೆಲವು ಉತ್ತಮಾಶ್ವಗಳನ್ನು ತೆಗೆದುಕೊಂಡು ದಿಲ್ಲಿಗೆ ಬಂದು, ಬಾದಶಹನಿಗೆ ಬೆಟ್ಟಿಯಾದನು ಅಕಬರನು ಕೆಲವು ಅಶ್ವಗಳನ್ನು ಕ್ರಯಕ್ಕೆ ತೆಗೆದುಕೊಂಡನು ಆ ಅಶ್ವಗಳ ಸುಲಕ್ಷಣ ಲಕ್ಷಿತವಾದ ವೈಕಾಂತಿಯನ್ನು ನೋಡಿ, ಮೋಹವುಳ್ಳವನಾಗಿ, ಇನ್ನೊಂದುಸಾರೆ ಇಂಥ ಉತ್ತಮಾಶ್ವಗಳನ್ನು ತಂದು ಕೊಡು! ಎಂದು, ಆ ಅರಬನಿಗೆ ಒಂದು ಲಕ್ಷ ರೂಪಾಯಿಗಳನ್ನು ಮುಂಚಿತವಾಗಿಯೇ ಕೊಟ್ಟು ಬಿಟ್ಟನು ಆ ವರ್ತಕನು ರೂಪಾಯಿಗಳನ್ನು ಕಟ್ಟಿಕೊಂಡು ಹೊರಟು ಹೋದನು ಅವನ ಹೆಸರೇನು? ಅವನು ಎಲ್ಲಿಂದ ಬಂದನು? ಎಲ್ಲಿಗೆ ಹೋದನು? ಎಂಬ ಸಂಗತಿಯನ್ನು ಯಾರೂ ವಿಚಾರಿಸಿ ತಿಳಿದುಕೊಳ್ಳಲಿಲ್ಲ.

ಮುಂದೆ ಕೆಲವು ದಿವಸಗಳಾದಮೇಲೆ ಬಾದಶಹನು ಪಟ್ಟಣದಲ್ಲಿದ್ದ ಮೂರ್ಖರ ಪತ್ರಿಕೆ ಯೊಂದನ್ನು ಸಿದ್ಧ ಮಾಡು! ಎಂದು ಬೀರಬಲನಿಗೆ ಅಪ್ಪಣೆ ಮಾಡಿದನು. ಬೀರಬಲನು ಆ ಪತ್ರಿಕೆಯ ಆರಂಭದಲ್ಲಿಯೇ ಅಕಬರ ಬಾದಶಹನ ಹೆಸರನ್ನು ಬರೆದು, ಅದರಕೆಳಗೆ ನೂರಾರು ಜನಗಳ ಹೆಸರನ್ನು ಬರೆದು ಬಾದಶಹನಮುಂದೆ ಇಟ್ಟನು ಅದನ್ನು ನೋಡಿದಕೂಡಲೆ ಬಾದಶಹನಿಗೆ ಅತಿಕೋಪವು ಬಂತು ಆಗ ಬೀರಬಲನನ್ನು ಕುರಿತು - ನೀನು ನನ್ನನ್ನು ಈಪರಿ ಅವಮಾನ ಮಾಡಿದ್ದು ಯಾಕೆ? ಎಂದು ಕೇಳಿದನು ಅದಕ್ಕೆ ಬೀರಬಲನು - ಆ ಅರಬನ ಹೆಸರು ಗ್ರಾಮ, ಮೊದಲಾದ ಯಾವಸಂಗತಿಗಳನ್ನು ತಿಳಿದು ಕೊಳ್ಳದೆ, ಅವನಿಗೆ ರೂಪಾಯಿಗಳನ್ನು ಕೊಟ್ಟು ಬಿಟ್ಟಮೇಲೆ ನಿಮ್ಮ ಹೆಸರನ್ನು ಈ ಪತ್ರಿಕೆಯಲ್ಲಿ ಆರಂಭದಲ್ಲಿಯಾಕೆ ಬರೆಯಕೂಡದು? ಎಂದು ಕೇಳಿದನು ಅದಕ್ಕೆ ಬಾದಶಹನು - ಒಂದು ವೇಳೆ ಆ ಅರಬನ

ಅಶ್ವಗಳನ್ನು ತೆಗೆದುಕೊಂಡು ಬಂದರೆ, ಎಂದು ಕೇಳಿದನು. ಆ ಕೂಡಲೆ ಬೀರಬಲನು - " ನಿಮ್ಮ ಹೆಸರನ್ನು ಕಿತ್ತುಹಾಕಿ, ಆ ಸ್ಥಳದಲ್ಲಿ ಅವನ ಹೆಸರನ್ನು ಬರೆದಿಡ ವೆನು " ಎಂದು ಉತ್ತರ ಕೊಟ್ಟನು ಈ ಉತ್ತರವನ್ನು ಕೇಳಿ ಬಾದಶಹನು ಅಧೋವದನ ನಾದನು.

—(೨೦೯. ಕೃತಜ್ಞ ಮತ್ತು ಕೃತಘ್ನ.)—

ಒಂದು ದಿವಸ ಬಾದಶಹನು - ಬೀರಬಲ ! ಈ ದಿವಸ ಕೃತಜ್ಞ ಮತ್ತು ಕೃತಘ್ನರನ್ನು ತಂದು ತೋರಿಸು ! ಎಂದು ಅಪ್ಪಣೆ ಮಾಡಿದನು ಬೀರಬಲನ, ಬಹುಪರಿಯಿಂದ ಯೋಚಿಸಿ ನೋಡಿದನು ಗೊತ್ತಾಗಲಿಲ್ಲ. ನಿರುಪಾಯನಾಗಿ ಮನೆಗೆಬಂದು ಕುಳಿತುಕೊಂಡನು ಉದಾಸೀನ ವೃತ್ತಿಯನ್ನು ಸ್ವೀಕರಿಸಿಕೊಂಡು ಕುಳಿತಿರುವ ತನ್ನ ಪಿತನನ್ನು ಕಂಡು ಅವನ ತನುಜೆಯು ಕಾರಣವನ್ನು ಕೇಳಿದಳು ಬೀರಬಲನು ಸಮಗ್ರ ವೃತ್ತಾಂತವನ್ನು ಹೇಳಿದನು ಆಗ ಅವಳು " ಏನೂಚಿಂತೆ ಮಾಡಬೇಡ ! ಪ್ರಾತಃಕಾಲದಲ್ಲಿ ಅವರನ್ನು ತೋರಿಸುವೆನು,, ಎಂದಳು ಪಾತಃಕಾಲ ವಾಗುತ್ತಲೆ ಸುತೆಯನ್ನು ಕರೆಯಲು ಅವಳು ಪಿತನೇ, ಒಂದು ಶುನಕವನ್ನೂ, ಒಬ್ಬ ಜಾಮಾತನನ್ನೂ ಕರೆದುಕೊಂಡು ಹೋಗು ! ಎಂದು ಹೇಳಿದಳು ಆಕೂಡಲೆ ಬೀರಬಲನು ಪ್ರಸನ್ನಚಿತ್ತನಾಗಿ, ಬಾದಶಹನ ಸಮ್ಮುಖದಲ್ಲಿ ಒಯ್ದು ನಿಲ್ಲಿಸಿದನು ಆಗ ಬಾದಶಹನು ನಾನು ಹೇಳಿದ ವಸ್ತುಗಳು ಎಲ್ಲಿ ಅವೆ? ಎಂದು ಕೇಳಿದನು ಆಗ ಬೀರಬಲನು - ಹುಜೂರ್ ! ಈ ಶುನಕವು ಕೃತಜ್ಞ ಪ್ರಾಣಿಯು ಇದು ಯಾವಾಗಲೂ ಒಡೆಯನನ್ನು ಅನುಸರಿಸಿಯೇ ಇರುತ್ತದೆ. ಇದು ಯಜಮಾನನಿಗೆ ಎಂಥ ಸಂಕಟದಲ್ಲಿಯಾದರೂ ಸಹಾಯ ಮಾಡುತ್ತದೆ ಇವನು ಜಾಮಾತನು ಬಹು ಕೃತಘ್ನನು ಯಾಕಂದರೆ ಅತ್ತೆ ಮಾವಂದಿರು ಅವನಮನಸ್ಸನ್ನು ತೃಪ್ತಿಬಡಿಸುವದಕ್ಕೆ ದ್ರವ್ಯವನ್ನು ಕೊಟ್ಟು ಮಗಳನ್ನು ಸ್ವಾಧೀನಪಡಿಸಿದರೂ ಸಹ ಇವನು ಯಾವಗಡಿಗೆಯಲ್ಲಿ ಭೋಜನ ಮಾಡುವನೋ ಆಗಡಿಗೆಯ ತಳಕ್ಕೆ ಛಿದ್ರವನ್ನು ಮಾಡದೆ ಬಿಡುವದಿಲ್ಲ ಎಂದು ಹೇಳಿದನು ಆಗ ಬಾದಶಹನು - ಹೀಗೆ ಇದ್ದ ಪಕ್ಷದಲ್ಲಿ ಇವನ ತಲೆ ಹೊಡಿಸಿಬಿಡು ! ಎಂದು ಅಪ್ಪಣೆ ಮಾಡಿದನು ಆಕೂಡಲೆ ಬೀರಬಲನು ಖಾವಂದ ! ತಾವಾದರೂ ಒಬ್ಬಶ್ವಶುರನಿಗೆ ಜಾಮಾತ ರಾಗಿರುವಿರಿ? ಎಂದು ಉತ್ತರ ಕೊಟ್ಟನು ಬಾದಶಹನು ಲಜ್ಜಿತನಾದನು.

—(೨೧೦. ಪರ್‍ಮಾಚೆ ಢಗಯಾ.)—

ಒಂದುಸಾರೆ ಒಬ್ಬ ಬೇಗಮ್ಮಳ ಶರೀರದಲ್ಲಿ ಪೀಡೆ ಯುಂಟಾಗ ಹಸಿ

ತು ಅದಕ್ಕೆ ಬಾದಶಹನು ಬೀರಬಲನಿಗೆ ಹೀಗೆ ಯಾಕೆ ಆಗಿರಬಹುದು? ಎಂದು ಕೇಳಿದನು ಅದಕ್ಕೆ ಬೀರಬಲನು ಮಹಾರಾಜ! ಯಾವದಾದರೊಂದು ಪತ್ರಾಚೆಥಗಯಾ ಹೋಗಾ, ಅಂದರೆ ಯಾವದಾದರೊಂದು ಲೇಪವನ್ನು ಹಚ್ಚಿರಿ! ಎಂದು ಹೇಳಿದನು ಬಾದಶಹನಿಗೆ ಅವನ ವ್ಯಂಗಾರ್ಥವು ತಿಳಿದದ್ದರಿಂದ ಬಿದ್ದು ಬಿದ್ದು ನಕ್ಕನು.

—(೨೧೧. ಬ್ರಾಹ್ಮಣನನ್ನು ಮರಣದಂಡನೆಯಿಂದ ತಪ್ಪಿಸಿದ್ದು.)—

ಅಕಬರ ಬಾದಶಹನು ಒಬ್ಬ ವೃದ್ಧ ಬ್ರಾಹ್ಮಣನ ಮೇಲೆ ರುಷ್ಟನಾಗಿ ಮರಣ ದಂಡನೆಯನ್ನು ವಿಧಿಸಿದನು ಆ ಸಮಯದಲ್ಲಿ ಬೀರಬಲನು ಬರಲು, ಬಾದಶಹನು ಅವನನ್ನು ಕುರಿತು ಈ ದುಷ್ಟನ ವಿಷಯದಲ್ಲಿ ನೀನು ನನಗೆ ಏನೂ ಹೇಳಬೇಡ ನಾನು ಈ ವಿಷಯದಲ್ಲಿ ನಿನ್ನ ಮಾತನ್ನು ಕೇಳಲಿಕ್ಕಿಲ್ಲವೆಂದು ಪ್ರತಿಜ್ಞಾ ಮಾಡಿದ್ದೇನೆ ಎಂದನು. ಆಗ ಬೀರಬಲನು ಹುಜೂರ್! ನನ್ನ ಅಭಿಪ್ರಾಯವನ್ನು ಕೇಳಬೇಡಿರಿ! ಅವಶ್ಯವಾಗಿ ಈ ದುಷ್ಟನಿಗೆ ಶಿಕ್ಷಿಸಲಿಕ್ಕೇಬೇಕು ಎಂದನು ಬಾದಶಹನು ವಚನ ಬದ್ಧನಾದ್ದರಿಂದ ಬ್ರಾಹ್ಮಣನನ್ನು ಬಿಟ್ಟುಬಿಟ್ಟನು.

—(೨೧೨. ಬಂದು ಬಿದ್ದದೆ)—

ಅಕಬರ ಬಾದಶಹನು ಒಳ್ಳೇವಿನೋದಿಯಾಗಿದ್ದನು. ಒಂದು ದಿವಸ ಅವನು ದಿಲ್ಲಿಯೊಳಗಿನ "ಬನಿಯಾ" ಅಂದರೆ ವರ್ತಕರನ್ನು ಕರೆಯಿಸಿ ನೀವು ನಗರ ಕ್ಷಣೆಯ ಕೆಲಸವನ್ನು ಮಾಡಬೇಕು. ಎಂದು ಆಜ್ಞಾಪಿಸಿದನು ಅಂಜುಗುಳಿಗಳಾದ ಆ ವರ್ತಕರು ತಮ್ಮ ಮೈಮೇಲಿನ ವಸ್ತ್ರಗಳ ಪರಿವೆಯಿಲ್ಲದೆ ಬೀರಬಲನ ಬಳಿಗೆ ಬಂದು ತಮ್ಮದುರವಸ್ಥೆಯನ್ನು ದೂರ ಮಾಡು! ಎಂದು ಹೇಳಿಕೊಂಡರು ಆಗ ಬೀರಬಲನು ಅವರಿಗೆ ತೊಟ್ಟುಕೊಂಡ ಚಲ್ಲಣವನ್ನು ತಲೆಗೆ ಸುತ್ತಿಕೊಂಡು ತಲೆಯ ಮೇಲಿನ ರುಮಾಲವನ್ನು ಉಟ್ಟುಕೊಂಡು ರಾತ್ರಿಯಲ್ಲಿ ಬಂದು ಬಿದ್ದದೆ, ಬಂದು ಬಿದ್ದದೆ, ಎಂದು ಕೂಗುತ್ತ ಪಟ್ಟಣದಲ್ಲಿ ಸಂಚಾರಮಾಡಿರಿ; ಎಂದು ಹೇಳಿದನು ಅದೇ ದಿವಸ ರಾತ್ರಿಯಲ್ಲಿ ಅವರು ಬೀರಬಲನ ಹೇಳಿಕೆಯಂತೆ ಆಚರಿಸುತ್ತಿರಲು ಅಕಸ್ಮಾತ್ತಾಗಿ ಬಾದಶಹನು ಪ್ರಚ್ಛನ್ನ ವೇಷದಿಂದ ನಗರಸಂಚಾರಾರ್ಥವಾಗಿ ಹೊರಟಿರಲು, ವಿಚಿತ್ರ ವೇಷಧಾರಿಗಳಾದ ಆ ವರ್ತಕರನ್ನು ನೋಡಿ ನೀವು ನುಡಿಯುತ್ತಿರುವ ಶಬ್ದಗಳ ಅರ್ಥವೇನು ಎಂದು ಕೇಳಿದನು ಅದಕ್ಕೆ ಆ ವರ್ತಕರು "ಹುಜೂರ್ ನಾವು ವರ್ತಕರು ನಗರರಕ್ಷಣೆಯ ಕಾರ್ಯದಲ್ಲಿ ಅನಭಿಜ್ಞರು ನಮಗೆ ನಗರರಕ್ಷಣೆಯ ಕೆಲಸದಲ್ಲಿ ಕಿಂಚಿತ್ತಾದರೂ ಜ್ಞಾನವಿದ್ದರೆ ನಾವು

ವರ್ತಕರೆಂದು ಹೇಳಿಕೊಳ್ಳುತ್ತಿದ್ದಿಲ್ಲ ಎಂದು ವಿಜ್ಞಾಪನೆ ಮಾಡಿಕೊಂಡರು ಮರುದಿವಸವೇ ಅವರಿಗೆ ಆಕೆಲಸವನ್ನು ತಪ್ಪಿಸಿದನು.

—(೨೧೩, ಹಾವಿನಲ್ಲಿಯ ತತ್ತಿ.)—

ಒಂದುದಿವಸ ಬಾದಶಹನು ಬೀರಬಲನಿಗಿಂತ ಮುಂಚಿತವಾಗಿ ಸಭೆಗೆ ಬಂದು ಬೀರಬಲನಿಗೆ ವಿನೋದ ಮಾಡಬೇಕೆಂದು ಯೋಚಿಸಿ ಪ್ರತಿಯೊಬ್ಬ ಸಭಾಸದನ ಕೈಯಲ್ಲಿ ಒಂದೊಂದು ಕೋಳಿಯ ತತ್ತಿಯನ್ನು ಕೊಟ್ಟನು. ಬೀರಬಲನು ಬಂದ ಕೂಡಲೆ ಬಾದಶಹನು "ಬೀರಬಲ್ಲ? ನಿನ್ನೆ ರಾತ್ರಿಯಲ್ಲಿ ಸ್ವಪ್ನದಲ್ಲಿ ಒಬ್ಬ ದೇವದೂತನು ಬಂದು ನಿನ್ನ ದರಬಾರದಲ್ಲಿರುವ ಮುತ್ಸದ್ದಿಗಳಲ್ಲಿ ಓರ್ವಜನಕನ ವೀರ್ಯದಿಂದಲೇ ಜನಿಸಿದವರಾರೆಂಬದನ್ನು ಗೊತ್ತು ಮಾಡಿಕೋ ಎಂದನು ಅದಕ್ಕೆ ಯಾವಯುಕ್ತಿಯನ್ನು ಮಾಡಬೇಕು! ಎಂದು ನಾನು ಕೇಳಿದೆನು ಅದಕ್ಕೆ ಅವನು "ನಿನ್ನ ಉದ್ಯಾನದಲ್ಲಿರುವ ಜಲಪೂರಿತ ಹಾವಿನೊಳಗಿಂದ ಒಬ್ಬೊಬ್ಬನು ಒಂದೊಂದು ತತ್ತಿಯನ್ನು ತಂದು ತೋರಿಸಬೇಕು; ಯಾವನಿಗೆ ತತ್ತಿಯು ಸಿಗುವದಿಲ್ಲವೋ ಆವನು ಶುದ್ಧವೀರ್ಯದಿಂದ ಜನಿಸಿದವನಲ್ಲ, ಎಂದು ತಿಳಿದುಕೋ ಎಂದು ಹೇಳಿ ಅದೃಶ್ಯನಾಗಿ ಹೋದನು. ಆದರಿಂದ ಈ ದಿವಸ ಪರೀಕ್ಷೆಯಾಗಿ ಹೋಗಲಿ! ಎಂದು ನುಡಿದನು ಆಗ ಬಾದಶಹನ ಆಜ್ಞಾನುಸಾರವಾಗಿ ಯಾವತ್ತು ಸಭಾಸದರು ಪುಷ್ಕರಣಿಯಲ್ಲಿ ಮುಳುಗಿ ಒಂದೊಂದು ತತ್ತಿಯನ್ನು ತಂದು ತೋರಿಸಿದರು ಎಲ್ಲರಂತೆ ಬೀರಬಲನೂ ಮುಳುಗಿದನು. ಅವನಿಗೆ ತತ್ತಿಯು ಸಿಕ್ಕಲಿಲ್ಲ ಆಗ ಮೇಲೆ ಬಂದು ಕು ಕು ಕೂ ಕೂ " ಎಂದು ಕೂಗಹತ್ತಿದನು. ಆಗ ಬಾದಶಹನು "ನಿನ್ನ ತತ್ತಿಯು ಎಲ್ಲಿ ಅದೆ!" ಎಂದು ಪ್ರಶ್ನೆ ಮಾಡಿದನು ಆ ಕೂಡಲೆ ಬೀರಬಲನು "ಪೃಥ್ವೀನಾಥ! ಈ ಯಾವತ್ತೂ ತತ್ತಿಗಳು ಗಂಡುಕೋಳಿಯಾಗಿದ್ದ ನನ್ನಿಂದಲೇ ಉತ್ಪನ್ನವಾಗಿವೆ" ಎಂದು ಹೇಳಿದನು ಮುತ್ಸದ್ದಿಗಳೆಲ್ಲರೂ ಲಜ್ಜಿತರಾದರು ಬಾದಶಹನು ಕಿಲಕಿಲನಕ್ಕನು.

—(೨೧೪. ಕಾಳಗದಲ್ಲಿ ಜಯವೋ! ಪರಾಜಯವೋ!)—

ಬಾದಶಹನು ಯಾವದೋ ಒಂದುಕಾಳಗಕ್ಕೆ ಹೊರಡೇನವಾಗಿ ಬೀರಬಲನನ್ನು ಕುರಿತು "ಬೀರಬಲ್ಲ! ಈ ಕಾಳಗದಲ್ಲಿ ನನಗೆ ಜಯವಾಗುವದೋ ಪರಾಜಯವಾಗುವದೋ;" ಎಂದು ಪ್ರಶ್ನೆ ಮಾಡಿದನು ಅದಕ್ಕೆ ಬೀರಬಲನು ರಣಭೂಮಿಯಲ್ಲಿ ಈ ಪ್ರಶ್ನೆಗೆ ಉತ್ತರವನ್ನು ಹೇಳುವೆನು ಅಂದನು ಬಾದಶಹನು ರಣಭೂಮಿಗೆ ತಲುಪಿದಕೂಡಲೆ ಪುನಃ ಪ್ರಶ್ನೆಮಾಡಿದನು ಆಗ ಬೀರಬಲನು ನಿಮಗೇ ಜಯವಾಗುವದು ಎಂದು ಹೇಳಿದನು ಅದು ಯಾ

ತರವೇಲಿಂದ? ಎಂದು ಕೇಳಿದನು ಆ ಕೂಡಲೆ ಬೀರಬಲನು "ಸರಕಾರ! ಶತ್ರುಗಳು ಮದ್ದಾನೆಗಳನ್ನು ಹತ್ತಿಕೊಂಡು ಬಂದಿರುವರು ಅವು ತಮ್ಮ ಸೊಂಡಿಯಿಂದ ತಮ್ಮ ತಲೆಯಮೇಲೆ ಮಣ್ಣು ತೂರಿಕೊಳ್ಳುತ್ತವೆ ತಾವು ತುರಗಾರೂಢರಾಗಿರುವಿರಿ. ತುರಗಗಳು ತಮ್ಮ ಖುರಪುಟಗಳಿಂದ ಭೂಮಿಯನ್ನು ಕೆದರುತ್ತವೆ ಇದರಿಂದ ಶತ್ರುಗಳು ಮಣ್ಣುಪಾಲಾಗುವರು ಎಂದು ಸೂಚಿತವಾಗುವದು ಎಂದು ಉತ್ತರಕೊಟ್ಟನು ಬೀರಬಲನ ಹೇಳಿಕೆಯಂತೆ ಬಾದಶಹನಿಗೆ ಜಯವಾಗಲು ಅವನು ಬೀರಬಲನಿಗೆ ಅತಿಶಯ ಪಾರಿತೋಷಕವನ್ನು ಕೊಟ್ಟನು.

(೨೧೫ ದೇವರು ಪಾಕನಿಷ್ಪತ್ತಿಮಾಡುವವ ಜಲವಾಹಕ ಭಾರವಾಹಕ,)

ಒಂದು ಸಾರೆ ಬಾದಶಹನು ಬೀರಬಲನನ್ನು ಕುರಿತು- "ದೇವರಂತೆ ಪೂಜಿಸಗೊಳ್ಳುವವನೂ ಪಾಕನಿಷ್ಪತ್ತಿ ಮಾಡಬಲ್ಲವನೂ ಜಲವಾಹಕನೂ. ಭಾರವಾಹಕನೂ ಆಗಿರುವ ಒಬ್ಬ ಮನುಷ್ಯನನ್ನು ನಾಳೆಪ್ರಾತಃಕಾಲದಲ್ಲಿ ತಂದುಕೊಡು! ಎಂದು ಅಪ್ಪಣೆ ಮಾಡಿದನು ಆಗ ಬೀರಬಲನು ಒಬ್ಬ ಬ್ರಾಹ್ಮಣನನ್ನು ತಂದು ನಿಲ್ಲಿಸಿದನು. ಆಗೆ ಅವನಲ್ಲಿದ್ದ ಗುಣಗಳನ್ನು ವಿಸ್ತರಿಸಿ ಹೇಳು! ಎಂದನು. ಅದಕ್ಕೆ ಬೀರಬಲನು ಚಾತುರ್ವರ್ಣಗಳಲ್ಲಿ ಶ್ರೇಷ್ಠವಾದ ಬ್ರಹ್ಮಕುಲದಲ್ಲಿ ಇವನು ಜನಿಸಿದ್ದರಿಂದ ದೇವರಂತೆ ಪೂಜೆಗೊಳ್ಳುತ್ತಾನೆ. ಯಾವತ್ತೂ ಜನರುಬ್ರಾಹ್ಮಣನ ಹಸ್ತದಿಂದ ಭೋಜನ ಕೈಕೊಳ್ಳುವದರಿಂದ ಪಾಕ ನಿಷ್ಪತ್ತಿಕಾರನಾಗಿರುವನು ಎಲ್ಲರಿಗೂ ತೀರ್ಥದಿಂದ ಪ್ರೋಕ್ಷಿಸಿ ಶುದ್ಧಮಾಡುತ್ತಿರುವದರಿಂದ ಜಲವಾಹಕನೂ ಆಗಿರುವನು ಮತ್ತು ತಲೆಯಮೇಲೆ ಒಜ್ಜೆಯನ್ನು ಹೊತ್ತುಕೊಂಡು ತೀರ್ಥಾಟನ ಮಾಡುತ್ತಿರುವದರಿಂದ ಭಾರವಾಹಕನೂ ಆಗಿರುವನು ಆದ್ದರಿಂದ ಸಮಯಬಂದಾಗ ಬ್ರಾಹ್ಮಣನನ್ನೇ ಕೆಲಸಕ್ಕೆ ನಿಯಮಿಸಿಕೊಳ್ಳಬೇಕು. ಅಂದರೆ ನಾಲ್ಕು ಕೆಲಸಗಳೂನಡೆಯುವವು ಎಂದು ಹೇಳಿದನು.

—[೨೧೬. ನಾನು ಅವಳನ್ನು ಮರೆತು ಬಿಟ್ಟೇನು.]—

ಒಂದು ದಿವಸ ಬಾದಶಹನು ಬೀರಬಲ್ಲ! ನಿನ್ನ ಪತ್ನಿಯು ಒಳ್ಳೇ ಸುಸ್ವರೂಪಿ ಯಾಗಿದ್ದಾಳೆ ಎಂದನು. ಆ ಕೂಡಲೆ ಬೀರಬಲನು ಖಾವಂದ? ನಾನು ಪ್ರಥಮದಲ್ಲಿ ಹಾಗೆಯೇ ತಿಳಿದುಕೊಂಡಿದ್ದೆನು ಆದರೆ ಯಾವಾಗ ನಿಮ್ಮ ಅರ್ಧಾಂಗಿಯರನ್ನು ನೋಡಿದೆನೋ ಆಗ ನಾನು ಅವಳನ್ನು ಮರತು ಬಿಟ್ಟೆನು, ಎಂದು ಉತ್ತರಕೊಟ್ಟನು. ಬಾದಶಹನು ನಿರುತ್ತರನಾದನು.

—(೨೧೭ ಶ್ರೇಷ್ಟ ವರ್ಣವು ಯಾವದು !)—

ಒಂದು ದಿವಸ ಬಾದಶಹನು ವರ್ಣಗಳಲ್ಲಿ ಶ್ರೇಷ್ಟವಾದ ವರ್ಣವು ಯಾವದು ! ಎಂದು ತನ್ನ ಸಭಾಸದರನ್ನು ಕೇಳಿದರು ಕೆಲವರು ಕಮಲದ ಎಲೆಯು ಶ್ರೇಷ್ಟವಾದದ್ದೆಂದೂ ಕೆಲವರು ಬಾಳೇ ಎಲೆಯು ಶ್ರೇಷ್ಟವಾದ ದ್ದೆಂದೂ ಹೇಳಿದರು, ಬೀರಬಲನ ಪಗದಿಯು ಬಂದಕೂಡಲೆ ಅವನು ಸಲಾಮು ಮಾಡಿ ಧರ್ಮಾವತಾರ? ಯಾವತ್ತು ಪರ್ಣಗಳಿಗಿಂತ ನಾಗವಲ್ಲೀ ಪರ್ಣವು ಶ್ರೇಷ್ಟವಾದದ್ದು ಯಾಕೆಂದರೆ ಅದು ಬಾದಶಹರವರ ಮುಖದಲ್ಲಿ ಬಂದು ಬೀಳುತ್ತದೆ ಎಂದನು ಈ ಉತ್ತರದಿಂದ ಯಾವತ್ತೂ ಸಭಾಸದರು ಚಕಿತರಾದರು.

—[೨೧೮, ಯುವರಾಜನಾದ ಸೇಲೀಮನ ಪ್ರತಿಸ್ಪರ್ಧಿ.]—

ಯುವರಾಜನಾದ ಸೇಲೀಮನು ಬಹಳೇ ಮದ್ಯಪಿಯಾಗಿದ್ದನು ಅವನನ್ನು ಆ ವ್ಯಸನದಿಂದ ದೂರ ಮಾಡಬೇಕೆಂದು ಬಾದಶಹನು ಅನೇಕ ಪ್ರಯತ್ನಗಳನ್ನು ಮಾಡಿದನು ಏನೂ ಲಾಭವಾಗಲಿಲ್ಲ ಅಂತ್ಯದಲ್ಲಿ ಬೀರಬಲನ ಸಮ್ಮತಿಯಿಂದ ನಗರದಲ್ಲಿ ದಂಗುರವನ್ನು ಸಾರಿಸಿದನು ಅದರ ಆಶಯವೇನಂದರೆ “ ಸೇಲೀಮನು ಅತಿದುರ್ವ್ಯಸನಿ ಯಾದ್ದರಿಂದ ಅವನನ್ನು ಯುವರಾಜಪದವಿಯಿಂದ ದೂರೀಕರಿಸಿದ್ದೇವೆ ಮತ್ತು ಯಾವನಾದರೊಬ್ಬ ಚಾಣಾಕ್ಷತರುಣನನ್ನು ಆ ಪದವಿಯಲ್ಲಿ ನಿಯಮಿಸಬೇಕೆಂದು ಮಾಡಿದ್ದೇವೆ ಅದ್ದರಿಂದ ಶ್ರೀಮಂತ ದರಿದ್ರ ಸರದಾರ ಮಾನಕರಿಗಳ ಪುತ್ರರಲ್ಲಿ ಯಾವನಾದರೂ ಆ ಪದವಿಯನ್ನು ಹೊಂದಬೇಕೆಂಬ ಅಪೇಕ್ಷೆಯಿದ್ದರೆ ಅವರು ನಾಳೆಯದಿನದಲ್ಲಿ ಓಲಗಕ್ಕೆ ಬಂದು ಬಾದಶಹನಿಗೆ ಬೆಟ್ಟಿಯಾಗಬೇಕು ಆಗ ಸಭಾಸದರು ಮಾಡುವ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟವನಿಗೆ ಸದ್ಯಕ್ಕೆ ಯುವರಾಜ ಪದವಿಯನ್ನು ಕೊಟ್ಟು ಹಿಂದುಗಡೆಯಲ್ಲಿ ರಾಜ್ಯಾಧಿಕಾರಿಯನ್ನಾಗಿ ಮಾಡುತ್ತೇವೆ.

ಈ ಡಂಗುರದ ವಾರ್ತೆಯು ಚರ್ಚೆಯೇ ಪಟ್ಟಣದಲ್ಲಿ ಎಲ್ಲಿ ನೋಡಿದರೂ ಅಲ್ಲಿ ನಡೆಯುತ್ತಿತ್ತು ಸೇಲೀಮನ ಸ್ವತ್ವವು ಅನ್ಯರಿಗೆ ಪ್ರಾಪ್ತವಾಗುತ್ತದೆಂದಮೇಲೆ ಬಹು ಜನರ ಮನಸ್ಸಿಗೆ ವಿಷಾದವಾಯಿತು ಸೇಲೀಮನು ಗಾಬರಿಯಾದನು ಡಂಗುರವನ್ನು ಸಾರಿಸಿದ್ದರಿಂದ ಯಾರ ಉಪಾಯವೂ ಸಾಗದಂತಾಯಿತು ದೈವವನ್ನು ನಂಬಿ ಸೇಲೀಮನು ಸ್ವಸ್ಥ ಕುಳಿತುಕೊಂಡನು ಮಹಾಸಭೆಯು ನೆರೆಯುವದಿವಸವೂ ಸಮೀಪಿಸಿತು ಬಾದಶಹನ ಪ್ರಮೋದವನದಲ್ಲಿ ಮುಂಟಪವು ಹಾಕಲ್ಪಟ್ಟಿತು ಮುಂಟಪದ ಮಧ್ಯಭಾಗದಲ್ಲಿ

ಯುವರಾಜ ಪದಾಪೇಕ್ಷೆಯುಳ್ಳವರ ಸಲುವಾಗಿ ಸ್ಥಳವನ್ನು ಕಾದಿಟ್ಟು ಆಸ ಮಂತಾದಪ್ಪಿಗವಲ್ಲಿ ಪ್ರಜೆಗಳು ಕುಳಿತುಕೊಳ್ಳುವದಕ್ಕೆ ತಕ್ಕಸ್ಥಳವನ್ನು ಮಾ ಡಿದ್ದರು ಅಂತಃ ಪುರದ ಸ್ತ್ರೀಯರ ಸಲುವಾಗಿ ಬೇರೆಸ್ಥಳವು ಏರ್ಪಡಿಸಲ್ಪಟ್ಟಿ ತ್ತು ಮಹಾ ಸಭೆಯು ನೆರೆಯುವ ದಿವಸವು ಬಂದಕೂಡಲೆ ಅನೇಕ ಜನರ ತಂಡವುಬಂದು ಆ ಮಂಟಪದಲ್ಲಿ ತಮ ತಮಗೆ ಅನುಕೂಲವಾದ ಸ್ಥಳಗಳಲ್ಲಿ ಬಂದು ಕುಳಿತುಕೊಂಡರು ಬಾದಶಹನು ಸಿಂಹಾಸನಾಧಿಷ್ಟಿತನಾದನು ಆ ಮೇಲೆ ಒಬ್ಬಚೋಪದಾರನು ಎದ್ದು ನಿಂತು ಎಲ್ಲರಿಗೂ ಕೇಳಿಸುವಂತೆ ಯು ವರಾಜ ಪದವಿಯನ್ನು ಸಂಪಾದಿಸಬೇಕೆಂಬ ಕುತೂಹಲವುಳ್ಳ ತರುಣರು ಮುಂದೆ ಬರಬೇಕು ಎಂದು ಗಟ್ಟಿಯಾಗಿ ಕೂಗಿದನು. ಆಗ ನಾಲ್ಕೂಕಡೆ ಯಿಂದ ತರುಣಮಂಡಳಿಯು ಮುಂದೆಬಂದು ಮಧ್ಯಭಾಗದಲ್ಲಿ ಕುಳಿತುಕೊಂ ಡರು ಅವರಲ್ಲಿ ಚಿಕ್ಕನೆತ್ತಿಯ ಒಬ್ಬ ತರುಣನೂ ಅವರಲ್ಲಿ ಬಂದು ಕುಳಿತ ನು ಪ್ರಶ್ನೆಗಳನ್ನು ಮಾಡುವದಕ್ಕೆ ಜಗನ್ನಾಥ ಪಂಡಿತರಾಜ ಬೀರಬಲ್ಲ, ತೋಡರಮಲ್ಲ! ಅಬುಲ್‌ಫಜಲ್ಲ ಕವಿಗಂಗ, ಖಾನಖಾನಾ ಫೈಜಿ ಖ್ವಾಜಾ ಜಂಗ ತಾನಸೇನ ತಾನತರಂಗ ಬೈಜೂ ಬಾವರಾ ರಾಜಾಮಾನಸಿಂಹಎಂಬ ಹನ್ನೆರಡು ಜನರನ್ನು ನಿಯಮಿಸಿದ್ದರು ಅವರು ಪ್ರತಿಯೊಬ್ಬ ಪದಾಭಿಲಾಷಿ ಯಾದ ತರುಣರಿಗೆ ಪಗಡಿಯ ಪ್ರಕಾರ ಪಶ್ನೆಗಳನ್ನು ಮಾಡಹತ್ತಿದರು.

ಜಗನ್ನಾಥ ಪಂಡಿತರಾಯನು ಪ್ರಥಮದಲ್ಲಿ ಜಗತ್ತಿನಲ್ಲಿ ಎಲ್ಲರಿಕಿಂತ ಲೂ ಶ್ರೇಷ್ಠನಾದ ಖಾನನು ಯಾರು ಎಂದು ಪ್ರಶ್ನೆಮಾಡಿದನು ಕೆಲವರು ಗೋವಳಕೊಂಡದವನೆಂತಲೂ ಕೆಲವರು ಪಾಂಯಿಮಖಾನನು ಶ್ರೇಷ್ಠನೆಂ ತಲೂ ತಮತಮಗೆ ಗೊತ್ತು ಇದ್ದ ಖಾನರ ಹೆಸರನ್ನು ಹೇಳಿದರು ಕಟ್ಟಕ ಡೆಯಲ್ಲಿ ಒಬ್ಬತರುಣನು ಎಲ್ಲರಿಗೂಕೇಳಿಸುವಂತೆ ಎಲ್ಲಕ್ಕಿಂತಲೂ ಓಲಖಾನ ವೆಂಬದು ಶ್ರೇಷ್ಠವಾದದ್ದು ಓಲಖಾನ ಅಂದರೆ ಗುರುತು ಅಥವಾ ಪರಿಚಯ ಎಂದು ಉತ್ತರಕೊಟ್ಟನು.

ಎಲ್ಲತರುಣರ ಮುಖಗಳು ಕೆಳಗೆ ಆದವು ಬೀರಬಲನು ಆ ಬಾಲಕನ ನ್ನು ಮುಂದೆ ಕರೆದು- “ ಬಾಲಕನೇ ಈ ಕ್ಷಣ ಭಂಗುರವಾದ ಜಗತ್ತಿನಲ್ಲಿ ಎಲ್ಲಕ್ಕೂ ಶ್ರೇಷ್ಠವಾದದ್ದು ಯಾವದು ” ಎಂದು ಕೇಳಿದನು ಅದಕ್ಕೆ ಆ ಬಾಲಕನು ಸ್ವಲ್ಪಾದರೂ ಯೋಚಿಸದೆ, ಧರ್ಮ ಎಂದು ಉತ್ತರ ಕೊಟ್ಟ ನು. ಬೀರಬಲನು ಹಿಂದಕ್ಕೆ ಸರಿದನು.

ಕವಿಗಂಗ—ತರುಣನೇ ಎಲ್ಲಕ್ಕಿಂತಲೂ ಸವಿಯಾದದ್ದು ಯಾವದು

ಬಾಲಕ—“ಗರಜ”

ಖ್ವಾಜಾಜಂಗ—ವಾಯುವೇಗಕ್ಕಿಂತಲೂ, ಶೀಘ್ರಗಮನವು ಯಾವದಕ್ಕೆ (ಇರುವದು)
ಬಾಲಕ—ಮನೋವೇಗ.
ಫೈಜಿ—ರಾಜರಲ್ಲಿ ಇರತಕ್ಕ ಅವಶ್ಯವಾದ ಅಮೂಲ್ಯವಾದ ವಸ್ತುವು ಯಾವದು? ... ...
ಬಾಲಕ—ರಾಜನೀತಿ.

ಎಂದು ಹೇಳಿ, ಆಮೇಲೆ "ಇಂಥ ಪ್ರಸಿದ್ಧರಾದ ಪಂಡಿತರು ಇಂಥ ಸರಳವಾದ ಪ್ರಶ್ನೆಗಳನ್ನು ಮಾಡಲಾರರೆಂದು ನಾನು ನಂಬಿದ್ದೆನು" ಎಂದು ಅಂದನು ಆಗ ಎಲ್ಲ ಪಂಡಿತರ ಮುಖಗಳು ಅವನತವಾದವು ಆಗ ಪುನಃ-

ಜ. ಪಂಡಿತ—ನಿಜವಾದ ಸಾಕ್ಷಿಯು ಯಾವನು?
ಬಾಲಕ—ತನ್ನ ಮನಸ್ಸು.
ಬೀರಬಲ—ಸಂಸಾರದ ಅಸ್ತಿತ್ವವು ಎಲ್ಲಿಯು ವರೆಗೆ?
ಬಾಲಕ—ತನ್ನ ಮರಣದ ವರೆಗೆ.
ಬಾದಶಹ—ಮೃತ್ಯುವಿಗೂ ಸಂಸಾರಕ್ಕೂ ಸಂಬಂಧವೇನು?
ಬಾಲಕ—ಪೃಥ್ವೀನಾಥ! ಎಲ್ಲಿಯುವರೆಗೆ ದೇಹದಲ್ಲಿ ಪ್ರಾಣವಿರುವದೋ, ಅಲ್ಲಿಯುವರೆಗೆ ಸಂಸಾರದ ಸಂಬಂಧವು ಇದ್ದೇ ಇರುವದು.

ಬಾದಶಹನು ಆ ಬಾಲಕನ ಚಾತುರ್ಯಕ್ಕೆ ತಲೆದೂಗಿದನು.

ಗಂಗಕವಿ—ಮೂರ್ಖನೆಂದು ಯಾತರ ಮೇಲಿಂದ ತಿಳಿದು ಕೊಳ್ಳಬೇಕು?
ಬಾಲಕ—ಅವನ ಮಾತಿನ ಮೇಲೆ.
ತಾನಸೇನ—ಶರೀರದ ಪ್ರಥಮ ಸುಖವು ಯಾವದು?
ಬಾಲಕ—ಆರೋಗ್ಯತೆಯು.

ಸಭಾಸದರೆಲ್ಲರು ಆ ಬಾಲಕನ ಚಾತುರ್ಯಕ್ಕೂ, ದಿಟ್ಟತನಕ್ಕೂ ಬೆರಗಾದರು ಯಾವತ್ತರಿಗೂ ನೇಲಿಮನು ದುರದೃಷ್ಟನೆಂದು ತಿಳಿದುಹೋಯಿತು. ಅಷ್ಟರಲ್ಲಿ ಫೈಜಿಯು ಮುಂದೆಬಂದು - ಬಾದಶಹನ ಕ್ರೋಧದ ಸ್ವರೂಪವೇನು?

ಬಾಲಕ—ಪ್ರಜ್ವಲಿತ ವಾದ ಅಗ್ನಿಯಂತೆ.
ಅಬುಲ್‌ಫಜಲ್—ಯಾವ ಫಲವು ರುಚಿಕರವಾದದ್ದು?
ಬಾಲಕ—ಧೈರ್ಯದಿಂದ ದೊರೆತ ಫಲವು.
ಬೈಜುಬಾವರ—ಮಗೂ ಸಮುದ್ರದಲ್ಲಿ ಮಳಳಿನ ಕಥಗಳು ಎಷ್ಟಿರುವವು?
ಬಾಲಕ—ಈ ಜಗತ್ತಿನಲ್ಲಿ ಜೀವಂತರಾಗಿರುವ ಮನುಷ್ಯರ ಅಂಗಾಂಗಗಳಲ್ಲಿರುವ ರೋಮಗಳಷ್ಟು.

ಖಾನಖಾನ—ಬಲಕ್ಕೆ ಸಹಾಯಕಾರಿಯೊದದ್ದು ಯಾವದು ?
ಬಾಲಕ—ಸಾಹಸ.
ತೋಡರಮಲ್ಲ—ಎಲ್ಲಕ್ಕಿಂತಲೂ ಹೀನ ಸ್ಥಿತಿಯು ಯಾವದು ?
ಬಾಲಕ—ದಾಸತ್ವವು.
ಮಾನಸಿಂಹ—ಈ ಸಂಸಾರದಲ್ಲಿ ನೀಚತರ ತಮವಾದ ಉದ್ಯೋಗವಾವುದು.
ಬಾಲಕ—ಭಿಕ್ಷಾವೃತ್ತಿಯು.
ತೋಡರಮಲ್ಲ—ಹೋದಂಥ ಯಾವವಸ್ತುವು ಪುನರಪಿ ಬರಲಾರದು ?
ಬಾಲಕ—ಸಮಯ.

ಆ ಚತುರನಾದ ಬಾಲಕನನ್ನು ಪ್ರಶ್ನೆಗಳಿಂದ ಪರಾಜಿತನನ್ನಾಗಿ ಮಾಡುವದು ಯಾರಿಂದಲೂ ಸಾಧ್ಯವಾಗಲಿಲ್ಲ ಬಾದಶಹನು ಪ್ರಸನ್ನನಾದನು.

ಬಾದಶಹ—ಬಾಲಕನೇ, ನಿನ್ನ ಅಪೇಕ್ಷೆ ಯೇನಿರುವದು? ಅದನ್ನು ಕೇಳು?
ಬಾಲಕ—"ಭೂಮಿಶ ! ನಾನು ಎಲ್ಲರಂತೆ ಸಮಯವನ್ನು ಕಳೆದು ಕೊಳ್ಳಲಾರೆನು ನಾನು ಅಸ್ವತಂತ್ರನು ಆದರೂ ನಾನು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರವು ದೊರೆತಲ್ಲಿ ಪ್ರಸನ್ನಚಿತ್ತನಾಗಿ ಹೊರಟು ಹೋಗುವೆನು. .. .. *
ಬಾದಶಹ—ಒಳ್ಳೇದು! ಅದನ್ನು ಹೇಳು.
ಬಾಲಕ—"ಪೃಥ್ವೀಶ ! ನನಗೆ ಯುವರಾಜ ಪದವಿಯು ಬೇಕಾಗಿಲ್ಲ ಅದರಿಂದ ನನ್ನಬುದ್ಧಿಗೆ ಮಾಂದ್ಯ ವುಂಟಾದೀತು ! ಈ ಇಕ್ಷುದಂಡದಲ್ಲಿ ನನಗೊಂದು ಮುರಲ (ಕೊಳಲು)ಯನ್ನು ಮಾಡಿಸಿಕೊಡಬೇಕು. ಆದರೆ ಅಂಥ ಶ್ರೇಷ್ಟಮಾತೆಯ ಸುಪುತ್ರನು ಒಬ್ಬನಾದರೂ ತಮ್ಮ ಓಲಗದಲ್ಲಿ ಇದ್ದಂತೆ ಕಂಡುಬರುವದಿಲ್ಲ ಅಂದಮೇಲೆ ನಾನು ಇಲ್ಲಿ ವ್ಯರ್ಥವಾಗಿ ಕಾಲಹರಣ ಮಾಡುವದರಿಂಧ ಪ್ರಯೋಜನವಿಲ್ಲ

ಎಂದು ಕಬ್ಬಿನ ಗಣಿಕೆಯನ್ನು ಚೆಲ್ಲಿ ಹೊರಟು ಹೋದನು ಬಾದಶಹನು ಅವನ ಶೋದದ ಸಲುವಾಗಿ ಅತಿ ಪ್ರಯಾಸಪಟ್ಟನು ಪುನರಪಿ ದರ್ಶನವಾಗಲಿಲ್ಲ. ... ... *

—(೨೧೯. ತಾವು ಜಗತ್ಪಿತೃಗಳಾಗಿರುವಿರಿ.)—

ಒಂದು ದಿವಸ ಒಬ್ಬ ವೇಶ್ಯಾಸ್ತ್ರೀಯು ಮಗನುಮಾಡಿದ ಅಪರಾಧದ ವಿಚಾರಣೆಯು ನಡೆದಿತ್ತು ಆಗ ಬಾದಶಹನು ವಿನೋದಕ್ಕಾಗಿ ಆ ವೇಶ್ಯೆಯನ್ನು ಕುರಿತು - ಇವನ ತಂದೆಯು ಹೆಸರೇನು ? ಎಂದು ಕೇಳಿದನು ಆವೇಶ್ಯೆ

ಯು ಲಜ್ಜಿತಳಾಗಿ ಅವನತ ಮುಖಿಯಾದಳು ಅದನ್ನು ಕಂಡು ಬೀರಬಲನು ಹುಜೂರ! ತಾವು ಜಗತ್ಪಿತೃಗಳಾಗಿರುವಿರಿ; ತಮ್ಮ ಪುತ್ರನೆಂತಲೇ ಭಾವಿಸಿಕೊಳ್ಳಬೇಕು ಎಂದನು ಬಾದಶಹನು ಲಜ್ಜಿತನಾಗಿ ಮುಖತಗ್ಗಿಸಿದನು.

೨೨೦. ಬೀರಬಲನು ನಕ್ಕರೆ ಅವನು ನಿಂತುಕೊಂಡ ಸ್ಥಲವು ಜಲಮಯ ವಾಗುವದು.

ಒಂದಾನೊಂದು ಸಮಯದಲ್ಲಿ ಒಬ್ಬ ಜ್ಯೋತಿಷಿಯು ಅಕಬರನ ಸಭಾಸ್ಥಾನಕ್ಕೆ ಬಂದು ಬೀರಬಲನು ಒಂದು ವೇಳೆ ನಕ್ಕರೆ ಪೃಥ್ವಿಯೆಲ್ಲ ಜಲಮಯುವಾಗುವದು ಎಂದು ಭವಿಷ್ಯವನ್ನು ಹೇಳಿದನು ಆದರೆ ಬೀರಬಲನು ಕ್ರೋಧಯುಕ್ತನಾಗಿ ಕುಳಿತಿದ್ದನು ಬಾದಶಹನು ಅನೇಕ ಯುಕ್ತಿಪ್ರಯುಕ್ತಿಗಳನ್ನೆಲ್ಲ ಮಾಡಿ ನೋಡಿದನು ಅದರಿಂದ ಪ್ರಯೋಜನವಾಗಲಿಲ್ಲ ಅಂತ್ಯದಲ್ಲಿ ಬಾದಶಹನಿಗೂ ಕೋಪವು ಬಂತು ಆ ಕೂಡಲೆ ಅವನು ನೀನು ಈಗಿಂದೀಗ ನನ್ನ ಪಟ್ಟಣವನ್ನು ಬಿಟ್ಟುಹೋಗು! ಎಂದು ಅಪ್ಪಣೆ ಮಾಡಿದನು ಬಾದಶಹನ ಆಜ್ಞೆಯು ಕಿವಿಗೆ ಬಿದ್ದಕೂಡಲೆ, ಬೀರಬಲನು ಅರಣ್ಯದ ಮಾರ್ಗವನ್ನು ಹಿಡಿದನು ಕಿಂಚಿತ್‌ದೂರ ಹೋಗುವದರೊಳಗೆ ಹೊತ್ತು ಮುಳುಗಿತು ಕತ್ತಲೆ ಯಾರಿಸಿತು ಕಣ್ಣೊಳಗೆ ಬೆರಳು ಚುಚ್ಚಿದರೂ ಸಹ ಕಾಣದಷ್ಟು ಕತ್ತಲೆಯು ಆಯಿತು ಆಗ ಅವನು ಒಂದು ಹಾಳುದೇಗುಲವನ್ನು ಕಂಡು, ಅದರೊಳಗೆ ಪ್ರವೇಶಮಾಡಿದನು ಅಷ್ಟರಲ್ಲಿ ಒಬ್ಬನು ಒಂದು ಕಬ್ಬಿನ ಕೋಲನ್ನು ಹಿಡಿದುಕೊಂಡು, ಅದೇ ದೇಗುಲವನ್ನು ಹೊಕ್ಕು ಒಂದು ಮೂಲೆಯಲ್ಲಿ ಅವಿತುಕೊಂಡನು ಆಮೇಲೆ ಒಬ್ಬನು ತನ್ನ ಗಾರ್ದಭವನ್ನು ಶೋಧಮಾಡುತ್ತ ಅಲ್ಲಿಗೆಬಂದು, ಕತ್ತಲೆ ಯಾದ್ದರಿಂದ ಅವನೂ ಒಂದುಮುಗ್ಗುಲಲ್ಲಿ ಕುಳಿತುಕೊಂಡನು ಆಷ್ಟರಲ್ಲಿ ಮೂರನೆಯವ ನೊಬ್ಬನು ತನ್ನ ನೂತನ ಪ್ರಾಯದ ಹೆಂಡತಿಯನ್ನೊಡಗೊಂಡು ಆಸ್ಥಳಕ್ಕೆಬಂದು ಮನೆಯೆಂದು ತಿಳಿದು ತನ್ನ ಪತ್ನಿಯೊಡನೆ ವಿಲಾಸ ಮಗ್ನನಾದನು ಕಿಂಚಿತ್ ಕಾಲದಮೇಲೆ ಅವನು ತನ್ನ ಪತ್ನಿಯನ್ನುದ್ದೇಶಿಸಿ, ಎನಾದರೂ ಸ್ವಲ್ಪ ಸುಖವಾಯಿತೋ? ಎಂದು ಕೇಳಿದನು ಅದಕ್ಕೆ ಅವಳು ಸುಖವೆಲ್ಲಿಯದು? ಗಾರ್ದಭದೊಡನೆ ಕ್ರೀಡಿಸಿದಂತಾಯಿತು ಎಂದಳು ಆಕೂಡಲೆ ಆ ಕತ್ತೆಯವನು ನನ್ನ ಕತ್ತೆಯು ಎಲ್ಲಿಅದೆ? ಎಂದು ಕೇಳಿದನು ಆ ಸ್ತ್ರೀಯು ಲಜ್ಜಿತಳಾಗಿ ತನ್ನ ಪತಿಯನ್ನು ಕುರಿತು ಹೊರಗೆ ತೆಗೆದುಕೋ? ಎಂದಳು ಆಗ ಕಬ್ಬಿನ ಹೊರೆಯುವನು ಜೋಕೆ! ಹೊರಗೆ ತೆಗೆಯಕೂಡದು! ಸರಕಾರದ ಬಡುಕು ಅದೆ; ಎಂದನು ಈ ಮಾತುಗಳನ್ನು ಕೇಳುತ್ತ ಕುಳಿತಿದ್ದ ಬೀರಬಲನಿಗೆ ಹೊಟ್ಟೆ

ಹಿಡಿಸಲಾರದಷ್ಟು ನಗೆಯು ಬಂತು ಘಕ್ಕನೆ ನಕ್ಕನು ಮಳೆಯು ಬರಹತ್ತಿತು ಆ ಮರುದಿವಸವೇ ಬಾದಶಹನು ಬೀರಬಲನನ್ನು ಶೋಧಮಾಡಿ, ನಿನ್ನೆ ಮಳೆ ಯಾಗಲಿಕ್ಕೆ ಕಾರಣವೇನೆಂದು ಕೇಳಿದನು ಆಗ ಬೀರಬಲನು ಆದ್ಯೋಪಾಂತ ಸಂಗತಿಯನ್ನೆಲ್ಲ ತಿಳಿಸಲು, ನಕ್ಕು ನಕ್ಕು ಬಾದಶಹನ ಹೊಟ್ಟೆಯುಬ್ಬಿತು.

—(೨೨೧. ಕಿಸಕಾರಣ ಯಹ ನಾಚ್ಯೆಗದಹಾ.)—

ಒಂದು ದಿವಸ ಬಾದಶಹನು ಬೀರಬಲನಿಗೆ-
ಕಿಸಕಾರಣ ಯಹ ನಾಚ್ಯೆ ಗದಹಾ।

ಯಾವ ಕಾರಣದಿಂದ ಕತ್ತೆಯು ಈ ಪರಿ ಕುಣಿದಾಡುತ್ತದೆ? ಎಂದು ಕೇಳಿದನು. ಬೀರಬಲನು ತತ್‌ಕ್ಷಣದಲ್ಲಿಯೇ,

"ಆಗೇನಾಥನ ಪೀಛೇ ಪಗಹಾ। ಇಸಕಾರಣ ಯಹನಾಚ್ಯೆ ಗದಹಾ॥

ಮುಂದೆ ಕಟ್ಟುವವರಿಲ್ಲ ಹಿಂದೆ ಕಾಯುವವರಿಲ್ಲ; ಎಂಬ ಸಂತೋಷದಿಂದ ಕುಣಿದಾಡುತ್ತದೆ. ಎಂದು ಉತ್ತರ ಕೊಟ್ಟನು.

ಅಕಬರನು ನಗಹತ್ತಿದನು.

—(೨೨೨. ಕತ್ತೆಯ ಭಾರ.)—

ಒಂದು ದಿವಸ ಅಕಬರ ಬೀರಬಲ ರಿಬ್ಬರೂ ಕೂಡಿಕೊಂಡು ಮೃಗಯಾವಿಹಾರಕ್ಕೆ ಹೋಗಿದ್ದರು ಉಷ್ಣಕಾಲವಾದ್ದರಿಂದ ಮೈಯಲ್ಲಿ ಬೆವರೊಡೆಯಿತು ಆಗ ಬಾದಶಹನು ತನ್ನ ಮೈಮೇಲಿನ ಅರಿವೆಗಳನ್ನು ತೆಗೆದು ಬೀರಬಲನ ಭುಜದಮೇಲೆ ಹಾಕಿದನು ಆಗ ಬೀರಬಲನು ಕೃಪಾಳುವೇ? ನಾನು ಒಂದು ಕತ್ತೆಯ, ಭಾರವನ್ನು ಹೇಗೆ ಸಹಿಸಲಿ! ಎಂದು ಗಟ್ಟಿಯಾಗಿ ಕೂಗಿದನು. ... ...

—(೨೨೩. ಅವರು ಮೂವರೂ ಅಳುತ್ತಿದ್ದರು.)—

ಬಾದಶಹನು ಪ್ರತಿದಿವಸ ರಾತ್ರೀ ಸಮಯದಲ್ಲಿ ಪ್ರಚ್ಛನ್ನನು ವೇಷವನ್ನು ಧಾರಣ ಮಾಡಿಕೊಂಡು ನಗರದಲ್ಲಿ ಸಂಚಾರಾರ್ಥವಾಗಿ ಹೊರಹೊರಡುತ್ತಿದ್ದನು ಆ ಸಮಯದಲ್ಲಿ ದುಃಖಿಗಳು ಕಂಡು ಬಂದರೆ ಮರುದಿವಸ ಅವರನ್ನು ಕರೆಯಿಸಿಕೊಂಡು ಅವರ ದುಃಖವನ್ನು ದೂರಮಾಡುತ್ತಿದ್ದನು. ಹೀಗಿರಲು ಒಂದು ದಿವಸ ಅವನು ಭಿಕ್ಷುಕನ ವೇಷವನ್ನು ಧಾರಣಮಾಡಿಕೊಂಡು ರಾತ್ರಿಯಲ್ಲಿ ಹೊರಬಿದ್ದನು ಆ ಸಮಯದಲ್ಲಿ ಒಬ್ಬವರ್ತಕನ ಹೆಂಡತಿಯು ತನ್ನ ಮನೆಯ ಬಾಗಿಲಮುಂದೆ ಕುಳಿತು ಕೊಂಡು ರೋದನ ಮಾಡುತ್ತಿದ್ದಳು ಅಲ್ಲಿಗೆ ಬಾದಶಹನು ಹೋಗಿ ತಾಯಿ ಒಂದು ತುಣಿಕುರೊಟ್ಟಿ

ಯನ್ನು ಹಾಕು ? ಎಂದನು ಅವಳು ಒಳಗೆಹೋಗಿ ರೊಟ್ಟಿಯನ್ನು ತಂದು ಹಾಕಲಿಕ್ಕೆ ಬರಲು ಬಾದಶಹನು ತಾಯಿ! ನೀನು ಯಾಕೆ ದುಃಖಿಸುತ್ತಿದ್ದಿ ಎಂದು ಕೇಳಿದನು ಅದಕ್ಕೆ ಆ ಸ್ತ್ರೀಯು ನನ್ನ ಪತಿಯು ಹಡಗವನ್ನೇರಿ ಪರ ದೇಶಕ್ಕೆ ವ್ಯಾಪಾರದ ಸಲುವಾಗಿ ಹೋಗಿ ಹನ್ನೆರಡು ವರುಷಗಳಾದವು ಇ ನ್ನೂ ವರೆಗೆ ಬರಲಿಲ್ಲವೆಂದು ಶೋಕಿಸಹತ್ತಿದ್ದೇನೆ ಎಂದುಉತ್ತರಕೊಟ್ಟಳು, ಅದನ್ನು ಕೇಳಿಕೊಂಡು ಕಿಂಚಿತ್ ಮುಂದೆಬರಲು ಮತ್ತೊಬ್ಬ ಸ್ತ್ರೀಯು, ಬೀಸುವ ಕಲ್ಲನ್ನು ತಿರುಗಿಸುತ್ತ ಅಳುತ್ತ ಕುಳಿತಿದ್ದಳು ಆಮನೆಗೆ ಹೋಗಿ. ನೀನು ಯಾಕೆ ಅಳುತ್ತಿರುವಿ! ಎಂದು ಪ್ರಶ್ನೆಮಾಡಿದನು ಅದಕ್ಕೆ ಅವಳು, ನನ್ನ ಪತಿಯು ಕಳವು ಮಾಡಲಿಕ್ಕೆ ಹೋಗಿ ಮೂರು ದಿವಸಗಳಾದವು ಜೀ ವದಿಂದ ಇರುವನೋ ಅಥವಾ ಮರಣ ಹೊಂದಿದನೋ ಎಂಬ ಸಂಗತಿಯು ತಿಳಿಯದಾದ್ದರಿಂದ ಅಳುತ್ತೇನೆಂದು ಹೇಳಿದಳು ಕಿಂಚಿತ್ ಮುಂದಕ್ಕೆ ಬರ ಲು ಮತ್ತೊಬ್ಬ ಸ್ತ್ರೀಯು ಹಾಡಾಡಿಕೊಂಡು ಅಳುವಸ್ವರವು ಕೇಳಬಂತು, ಆ ಮನೆಗೆ ಹೋಗಿ ತಾಯಿ ನೀನೇಕೆ ಅಳುತ್ತಿರುವಿ? ಎಂದು ಕೇಳಿದನು, ಆ ಮಾತಿಗೆ ಅವಳು ನನ್ನ ಪತಿಯು ಪುತ್ರಹೀನ ನಾಗಿದ್ದಾನೆ ಎಂದು ಹೇ ಳಿದಳು.

ಈ ಸಂಗತಿಗಳಿಂದ ಬಾದಶಹನ ಮನಸ್ಸಿಗೆ ವಿಷಾದವಾಗಿ ಮನೆಗೆ ಬಂದುಬಿಟ್ಟನು ಮರುದಿವಸ ಓಲಗವಲ್ಲಿ ಬೀರಬಲನನ್ನು ಕುರಿತು ಆ ಮೂ ವರು ಸ್ತ್ರೀಯರು ಯಾರುಯಾಕೆ ಅಳುತ್ತಿದ್ದರು ಎಂದು ಪ್ರಶ್ನೆಮಾಡಿದನು

ಅದಕ್ಕೆ ಬೀರಬಲನು—

ಪಿಕಸಮುಂದರ ವಾಣಿಜ ಕರ್ಯೆ ನಿತ ಉಠಚೋರೀಜಾಯ।
ಬಾಲಕ ಹೀನೆ ನೇಹ ಗಾಯಾ ಯೋ ತೀನೋ ಬಿಲಖಾಯ॥

ಬೀರಬಲನು ಹಿಂದು ಮುಂದಿನ ಸಂಗತಿಯನ್ನು ತಿಳಿದುಕೊಳ್ಳದೆ ಯಥಾ ರ್ಥವಾಗಿದ್ದ ಸಂಗತಿಗಳನ್ನು ಹೇಳಿದ್ದರಿಂದ ಬಾದಶಹನಿಗೆ ಪರಮಾನಂದ ವಾಯಿತು.

—(೨೨೪. ಕಾಜಿಗೆ ಮದ್ಯವನ್ನು ಕುಡಿಸು.)—

ಹೋಲಿಕಾ ಮಹೋತ್ಸವದಲ್ಲಿ ಬಾದಶಹನು ಬೀರಬಲನನ್ನು ಕುರಿತು ಏನಾದರೂ ಹಂಚಿಕೆಮಾಡಿ ಕಾಜಿಗೆ ಮದ್ಯವನ್ನು ಕುಡಿಸು ? ಎಂದು ಅಪ್ಪ ಣೆಮಾಡಿದನು ಅದಕ್ಕೆ ಬೀರಬಲನು ಇದುಯಾವ ಆಶ್ಚರ್ಯದ ಮಾತು, ಈ ದಿವಸವೇ ಅವನನ್ನು ಅಧಿಕಾರದಿಂದ ದೂರ ಮಾಡಿರಿ! ಅಂದರೆ ಅವನು ಆ ಕ್ಷಣದಲ್ಲಿಯೇ ತಮ್ಮ ಬಳಿಗೆ ವಿನಂತೀ ಮಾಡಿ ಕೊಳ್ಳಲಿಕ್ಕೆ ಬರುವನು ಆಗ

ನೀವುಬೇಕಾದದ್ದನ್ನು ಹೇಳಿದರೂ ಕೇಳುತ್ತಾನೆ; ಎಂದು ಹೇಳಿದನು ಬೀರಬಲನ ಹೇಳಿಕೆಯಂತೆ ಮಾಡಿದನು ಆಗ ಬೀರಬಲನ ಹೇಳಿಕೆಯು ಯಥಾರ್ಥವಾದದ್ದೆಂದು ಎಲ್ಲರಿಗೂ ಮನವರಿಕೆ ಯಾಯಿತು.

(೨೨೫. ನೀನು ಹಲಾಲಖೋರನೋ ಅಥವಾ ಹರಾಮ ಖೋರನೋ)

ಒಂದು ದಿವಸ ನೆರೆದ ಸಭೆಯ ಮಧ್ಯದಲ್ಲಿ ಅಕಬರನು ಬೀರಬಲ್ಲ ನೀನು ಹಲಾಲಖೋರನೋ ಅಥವಾ ಹರಾಮ ಖೋರನೋ ? ಎಂದು ಪ್ರಶ್ನೆ ಮಾಡಿದನು ಆಗ ಬೀರಬಲನು " ಹುಜೂರ್ ಎರಡೂ ? " ಎಂದು ಉತ್ತರ ಕೊಟ್ಟನು.

—(೨೨೬, ವೈಕುಂಠ ದರ್ಶನ.)—

ಒಂದು ದಿವಸ ಅಕಬರ ಬಾದಶಹನು ಬೀರಬಲನನ್ನು ಕುರಿತು ನೀನು ನನಗೆ ಒಂದು ದಿವಸ ನನಗೆ ವೈಕುಂಠ ದರುಶನವನ್ನು ಮಾಡಿಸು ಎಂದು ಹೇಳಿದನು ಅದಕ್ಕೆ ಬೀರಬಲನು ಎರಡು ತಿಂಗಳುಗಳ ಅವಧಿಯನ್ನು ಕೊಡಬೇಕು ಎಂದು ಪ್ರಾರ್ಥನೆಮಾಡಿಕೊಳ್ಳಲು ಬಾದಶಹನು ಒಪ್ಪಿಕೊಂಡನು, ಆ ಕೂಡಲೆ ಮನೆಗೆಬಂದು ಮರುದಿವಸ ಬೀರಬಲನಿಗೆ ಅತಿಶಯ ಜಾಡ್ಯವಾಗಿದೆಯೆಂದು ವಾರ್ತೆಯನ್ನು ಪಸರಿಸಿ ಬಿಟ್ಟನು ಮುಂದೆ ಹದಿನೈದು ದಿವಸಗಳಾದ ಪರಲೋಕವನ್ನು ಕುರಿತು, ಗಮನ ಮಾಡಿದನೆಂದು ವಾರ್ತೆಯನ್ನು ಹುಟ್ಟಿಸಿ ಬಿಟ್ಟನು ಬಾದಶಹನಿಗೆ ಅತಿಶಯ ದುಃಖವಾಯಿತು ಬಹಳವಾಡಿ ವೈಕುಂಠ ದರ್ಶನವನ್ನು ಮಾಡಿಸುವದು ಅಸಾಧ್ಯವಾದದ್ದೆಂದು ತಿಳಿದುಕೊಂಡು ಅದರ ಚಿಂತೆಯಿಂದಲೇ ಮರಣಹೊಂದಿರಬಹುದೆಂದು ನಿಶ್ಚಯಿಸಿಕೊಂಡನು ನಾನೇ ಅವನ ಮರಣಕ್ಕೆ ಕಾರಣನಾದೆನೆಂತಲೂ ಇನ್ನು ತನಗೆ ಅಂಥ ಮನುಷ್ಯನು ದೊರೆಯುವದು ದುರ್ಲಭವೆಂತಲೂ ತಳಮಳಿಸ ಹತ್ತಿದನು.

ಇತ್ತ ಬೀರಬಲನು ತನ್ನ ಗೃಹದೊಳಗಿಂದ ಕೋಟೆಯವರೆಗೆ ಒಂದು ವಿವರವನ್ನು ಸಿದ್ಧಪಡಿಸಿಕೊಂಡು ಒಂದು ರಾಸಭಕ್ಕೆ ಆ ವಿವರದೊಳಗಿಂದ ಹಾಯ್ದು ಹೋಗುವದಕ್ಕೂ ಅಲ್ಲಿಂದ ಮರಳಿ ಬರುವದಕ್ಕೂ ಕಲಿಸಿದನು. ಆ ಮೇಲೆ ಒಂದು ದಿವಸ ರಾತ್ರೀ ಸಮಯದಲ್ಲಿ ಆ ವಿವರದೊಳಗಿಂದ ಆ ಕೋಟೆಯನ್ನು ಹೊಕ್ಕು ವೀಳ್ಯದೆಲಿಯನ್ನು ಮಾರುತ್ತಿರುವವಳ ಅಂಗಡಿಯಲ್ಲಿ ಹೋಗಿ ವೀಳ್ಯವನ್ನು ಹಾಕಿಕೊಂಡು ಒಂದು ರೂಪಾಯಿಯನ್ನು ಅವಳ ಕೈಗೆ ಇತ್ತು ಹೊರಡಲಸುವಾದನು ಅದನ್ನು ಕಂಡು ಅವಳು ಆಶ್ಚರ್ಯಾನ್ವಿತಳಾಗಿ ಇವನು ಒಬ್ಬ ಧನಾಢ್ಯನಿರಬಹುದೆಂದು ತಿಳಿದು ಕೊಂಡು ತಾವು

ಯೊರು ತವ್ಮ ಪರಿಚಯುವು ಹತ್ತಿದಂತೆ ಆಗುತ್ತದೆ ಆದರೆ ಎಲ್ಲಿ ಎಂಬದು ಗೊತ್ತಾಗಲೊಲ್ಲದು ಎಂದಳು ಆಗ ಬೀರಬಲನು ನಾನು ಬೀರಬಲನು ವೈಕುಂಠದಲ್ಲಿ ಇರುತ್ತೇನೆ ಆದರೆ ಈ ಸಂಗತಿಯನ್ನು ಅನ್ಯರಕಿವಿಗೆ ಹಾಕಬೇಡ ಎಂದು ಹೇಳಿ ಹೋರಟುಹೋದನು ಮರುದಿವಸಬಂದು ಅವಳ ಕೈಯಲ್ಲಿ ಎರಡು ರೂಪಾಯಿಗಳನ್ನು ಕೊಟ್ಟನು ಹೀಗೆ ಎರಡು ಮೂರು ದಿವಸ ನಡೆಯಲು ಅವಳು ಈ ಸಂಗತಿಯನ್ನು ಬಾದಶಹನ ಕಿವಿಯಮೇಲೆ ಹಾಕಿದಳು ಆಗ ಬಾದಶಹನು ಪ್ರಸನ್ನನಾಗಿ ಆವಳನ್ನು ಕುರಿತು ಅವನು ನಿನ್ನ ಬಳಿಯಲ್ಲಿ ಬಂದಾಗ ಅವನನ್ನು ನನ್ನೆಡೆಗೆ ಕರೆದುಕೊಂಡು ಬಾ ಎಂದು ಹೇಳಿದನು ನಾಲ್ಕನೇ ದಿವಸ ಪುನಃ ಬೀರಬಲನು ಬರಲು ಕಿಂಚಿತ್ ಅವಕಾಶಮಾಡಿರಿ ? ಬಾದಶಹನು ನಿಮ್ಮನ್ನು ಕರೆದಿದ್ದಾನೆ ಎಂದು ಹೇಳಿದಳು ಆಗ ಬೀರಬಲನು ಈ ದಿವಸ ಬರುವದಕ್ಕೆ ಆಗುವದಿಲ್ಲ ನಾಳೆಯು ದಿವಸ ಬರುತ್ತೇನೆ. ಎಂದು ಹೇಳಿದನು ವಚನಕೊಟ್ಟಂತೆ ಐದನೇ ದಿವಸಬರಲು ಅವಳು ಬೀರಬಲನನ್ನು ಬಾದಶಹ ನೆಡೆಗೆ ಕರದೊಯ್ದಳು ಆಗ ಬಾದಶಹನು ಅತಿತುಷ್ಟನಾಗಿ ನೀನು ಈಗ ವೈಕುಂಠದಲ್ಲಿಯೇ ಇದ್ದು ನನಗೆ ಯಾಕೆ ವೈಕುಂಠ ದರುಶನವನ್ನು ಮಾಡಿಸಲೊಲ್ಲ ಈ ಸಾರೆನನಗೆ ಅವಶ್ಯವಾಗಿ ದರುಶನ ಮಾಡಿಸಲಿಕ್ಕೇಬೇಕು ಎಂದನು ಅದಕ್ಕೆ ಬೀರಬಲನು ಅಲ್ಲಿ ಹೋಗುವದು ಬಹಳ ಕಷ್ಟಸಾಧ್ಯವು ಎಂದನು. ಅದಕ್ಕೆ ಬಾದಶಹನು ಬೇಕಾದಷ್ಟು ಕಷ್ಟವಿರಲಿ ! ನಾನು ಬಂದೇ ಬರುತ್ತೇನೆ ನೀನು ಅವಶ್ಯವಾಗಿ ನನ್ನನ್ನು ಕರೆದುಕೊಂಡು ಹೋಗಲಿಕ್ಕೇ ಬೇಕು ಎಂದನು ಆಗ ಬೀರಬಲನು ಒಳ್ಳೇದು ಮಾರ್ಗದಲ್ಲಿ ನಿಮಗೆ ಭೂತ ಪಿಶಾಚಿಗಳು ಬಂದು ಬಾದಶಹರೇ ಎಲ್ಲಿಗೆ ಹೋಗುತ್ತೀರಿ ? ಎಂದು ಪ್ರಶ್ನೆ ಮಾಡುವವು ಹೆದರಿಕೆಯನ್ನು ಹಾಕುವವು ಆದರೆ ಅವು ನಿಮಗೆ ಎಷ್ಟೇ ಪ್ರಶ್ನೆಗಳನ್ನು ಮಾಡಿದರೂಸಹ ನೀವು ಒಂದಾದರೂ ಮಾತಾಡಕೂಡದು ಮಾತಾಡಿದರೆ ಅವು ನಿಮ್ಮನ್ನು ಕೆಳಗೆ ಚೆಲ್ಲಿಬಿಡುವವು ಎಂದು ಹೇಳಿದನು ಬಾದಶಹನು ಒಪ್ಪಿಕೊಂಡನು ಆಗಬೀರಬಲನು ಬಾದಶಹನ ಕಣ್ಣುಗಳನ್ನು ಕಟ್ಟಿ ಮೋರೆಗೆ ಕಪ್ಪು ಹಚ್ಚಿ ಗಡ್ಡದ ಕೂದಲುಗಳನ್ನು ಕತ್ತರಿಸಿ, ಕತ್ತೆಯಮೇಲೆ ಕುಳ್ಳಿರಿಸಿ ವಿವರದ ಮಾರ್ಗವಾಗಿ ತನ್ನ ಮನೆಗೆ ಕರೆದುಕೊಂಡು ಹೋಗಿ ಕೆಲವು ಹೊತ್ತು ಅತ್ತ ಇತ್ತ ಸಂಚರಿಸಿ ಪ್ರಾತಃ ಕಾಲವಾಗುವದಕ್ಕಿಂತ ಮುಂಚಿತವಾಗಿ ಆ ಗರ್ಧಬದಮೇಲೆ ಕುಳ್ಳಿರಿಸಿ ವಿವರದ ಮಾರ್ಗವಾಗಿ ಬಿಟ್ಟು ಬಿಟ್ಟನು ಆ ಗಾರ್ದಭವು ಸುರಂಗದೊಳಗಿಂದ ಹೊರಬಿದ್ದು ಕೋಟೆಯಲ್ಲಿ ಸಂಚರಿಸಹತ್ತಿತು ಆಗ ವಿದೂಪಿಯಾಗಿರುವ ಬಾದ

ಶಹನ ಪರಿಚೆಯುವನ್ನು ಹಿಡಿದು ಅಮಾತ್ಯ ಅಮೀರ ಮೊದಲಾದವರಿಗೆ ತಿಳಿಸಿದರು. ಆಗ ಅವರು ಬಂದು ಬಾದಶಹನನ್ನು ಕುರಿತು. ಜಂಹಾಪನಾಹ! ತಮಗೆ ಭ್ರಾಂತಿಹಿಡಿದಿದೆಯೋ! ಎಲ್ಲಿಗೆಹೋಗುತ್ತೀರಿ? ಯಾವ ಪ್ರಾಣಿಯನ್ನು ಆರೋಹಣ ಮಾಡಿರುವಿರಿ! ಎಂದು ಪ್ರಶ್ನೆಗಳನ್ನು ಮಾಡ ಹತ್ತಿದರು ಆದರೆ ಅವು ಪಿಶಾಚಿಗಳೆಂದು ತಿಳಿದು ಉತ್ತರಕೊಟ್ಟರೆ ಬೀಳುವೆನೆಂಬ ಭಯದಿಂದ ಒಂದು ತುಟಿಯನ್ನು ಎರಡು ಮಾಡಲಿಲ್ಲ ಅದನ್ನು ಕಂಡು ಒಬ್ಬ ವಜೀರನು ಆ ಕತ್ತೆಯನ್ನು ಹಿಡಿದು ನಿಲ್ಲಿಸಿ ಬಾದಶಹನ ಕಣ್ಣಿನಕಟ್ಟನ್ನು ಸಡಲಿಸಿದನು ಆಗ ತನಗುಂಟಾದ ವಿಸ್ಮೃಪತೆಯನ್ನು ಕಂಡು ಲಜ್ಜಿತನಾಗಿ ಅರಮನೆಯನ್ನು ಹೊಕ್ಕನು ಮರುದಿವಸ ಬೀರಬಲನನ್ನು ಹಿಡತರಿಸಿ ಇದು ಏನು ಮಾಡಿದಿ! ನಿನಗೆ ಜೀವವು ಬೇಡಾಗಿದಯೆಂಬಂತೆ ಕಾಣುತ್ತದೆ! ಎಂದು ಕೇಳಿದನು ಆಗ ಬೀರಬಲನು ಸರಕಾರ ಪುಣ್ಯವಂತರಾದ ವ್ಯತಮನುಷ್ಯರಿಗೆ ವೈಕುಂಠ ದರ್ಶನವು ದೊರೆಯುವದು ದುರ್ಲಭವಾಗಿರಲು ನಿಮ್ಮಂಥವರಿಗೆ ವೈಕುಂಠ ದರ್ಶನವು ಹ್ಯಾಗೆ ಲಭಿಸುವದು! ಎಂದು ಕೇಳಿದನು. ಬಾದಶಹನು ನಿರುತ್ತರನಾದನು.

—(೨೨೭. ಹಂಚಿಕೆಯ ಇಡಿಗಂಟು.) —

ಒಬ್ಬ ಮುಸಲ್ಮಾನನು ಅಲ್ಪಸ್ವಲ್ಪ ವೈದ್ಯಕಿಯನ್ನುಮಾಡಿ, ಹೊಟ್ಟೆ ಹೊರಕೊಳ್ಳುತ್ತಿದ್ದನು ಅವನಿಗೂ ಬೀರಬಲನಿಗೂ ವೈರವಿತ್ತು ಅದರಿಂದ ಅವನು ಯಾವಾಗಲೂ ಬೀರಬಲನನ್ನು ಅವಮಾನಗೊಳಿಸಬೇಕೆಂಬ ಹಂಚಿಕೆಯ ಶೋಧದಲ್ಲಿಯೇ ಇದ್ದನು. ಒಂದುದಿವಸ ಬಾದಶಹನು ಬೀರಬಲನನ್ನು ಕುರಿತು ಬೀರಬಲ ಈ ವೈದ್ಯನುನಿನ್ನನ್ನು ಅವಮಾನ ಗೊಳಿಸಬೇಕೆಂಬಹಂಚಿಕೆಯಲ್ಲಿಯೇ ಇದ್ದಾನೆ; ಅದರಿಂದ ನೀನೇ ಇವನಿಗೆ ಅವಮಾನವಾಗುವಂತೆ ಮಾಡುಎಂದು ಹೇಳಿದನು ಆಗ ಬೀರಬಲನು ಒಳ್ಳೇದು;ನಾನುಪರದೆಯೊಳಗೆ ಕೂಡ್ರುತ್ತೇನೆ ನೀವು ಅವನು ಬಂದಕೂಡಲೆ ನನ್ನ ಮಗಳ ಮೈಯಲ್ಲಿ ಕಿಂಚಿತ್ತು ಜಾಡ್ಯ ವುಂಟಾಗಿದೆ, ಅದರಿಂದ ನಾಡಿಯನ್ನುನೋಡಿ ಔಷಧ ಕೊಡಬೇಕು ಎಂದು ಹೇಳಿರಿ ಎಂದು ಅಂದನು ಅಷ್ಟರಲ್ಲಿ ಆ ವೈದ್ಯನು ಸಭಾಸ್ಥಾನಕ್ಕೆಬಂದನು ಬೀರಬಲನು ಅವನು ಬರುವದರೊಳಗಾಗಿ ಪರದೆಯೊಳಗೆ ಹೋಗಿ, ಕುಳಿತುಕೊಂಡನು ವೈದ್ಯನು ಬಂದಕೂಡಲೆ ಬಾದಶಹನು ವೈದ್ಯರೇ! ನನ್ನಮಗಳ ಪ್ರಕೃತಿಯಲ್ಲಿ ಕಿಂಚಿತ್ ಜಾಡ್ಯ ವ್ಯತ್ಪನ್ನವಾಗಿದೆ ಅವಳನಾಡಿಯನ್ನು ಪರೀಕ್ಷಿಸಿ ಚಿಕಿತ್ಸಾ ಪ್ರಬಂಧವನ್ನು ಮಾಡಿರಿ! ಎಂದು ಹೇಳಿದನು ಆಗ ವೈದ್ಯನು ಪರದೆಯೊಳಗೆ ಕೈಚಾಚಿದನು ಬೀರಬಲನು ತ

ಬಾದಶಹನ ಸಮ್ಮುಖದಲ್ಲಿ ಬಂದು ನಿಂತುಕೊಂಡಳು ಅವಳನ್ನು ನೋಡಿ ಬಾದಶಹನು ನಸುನಗುತ್ತ ಮೇಲ್ಭಾಗವಂತೂ ಒಳ್ಳೇ ಅಲಂಕಾರವಾಗಿ ಕಾಣುತ್ತದೆ ಆದರೆ ಕೆಳಭಾಗವು ಹ್ಯಾಗೆ ಇರುವದೆಂಬದನ್ನು ತೋರಿಸು ಎಂದನು ಈ ಮಾತಿಗೆ ಆಪರಿಚಾರಿಕೆಯು ನಿಮ್ಮ ಅಜ್ಞಾನಕ್ಕೆ ಬೆಲೆಇಲ್ಲ ನೀವು ಯಾವಮಾರ್ಗದಿಂದ ಬಂದಿರೋ ಆ ಮಾರ್ಗವು ಹ್ಯಾಗದೆ, ಎಂಬ ಸಂಗತಿಯು ನಿಮಗೆ ಇನ್ನೂ ಗೊತ್ತಾಗಲಿಲ್ಲವೇ? ಎಂದು ಕೇಳಿದಳು ಬಾದಶಹನು ನಿರುತ್ತರನಾದನು.

—(೨೩೦. ಈ ಬೀಗದ ಕೈಗಳು ಯಾವ ಅಂತರ್ಗೃಹದವು ?)—

ಬೀರಬಲನು ಒಂದು ದಿವಸ ತನ್ನ ಗೃಹದ ಪರಿಚಾರಿಕೆಯ ಜಾಣತನವನ್ನು ಬಾದಶಹನ ಸಮ್ಮುಖದಲ್ಲಿ ಬಹುಪರಿಯಾಗಿ ಹೊಗಳಿದನು ಆಗ ಬಾದಶಹನು ಅವಳನ್ನು ಕರೆಯಿಸು ! ಎಂದು ಹೇಳಿದನು ಅಪ್ಪಣೆಯ ಮೇರೆಗೆ ಅವಳನ್ನು ಕರೆಯಿಸಲು, ಅವಳು ಬೀಗದ ಕೈಗಳ ಸರ ವೊಂದನ್ನು ನಡುವಿನಲ್ಲಿ ಕಟ್ಟಿಕೊಂಡು ಸಭೆಗೆಬಂದು ಒಯ್ಯಾರದಿಂದ ಬಾದಶಹನಿಗೆ ನಮಸ್ಕರಿಸಿದಳು ಆಗ ಬಾದಶಹನುನಸುನಗುತ್ತ ಈ ಬೀಗದ ಕೈಗಳು ಯಾವ ಅಂತರ್ಗೃಹದವು? ಎಂದು ಪ್ರಶ್ನೆಮಾಡಿದನು ಆಗ ಆ ಪರಿಚಾರಿಕೆಯು ಖಾವಂದ! ತಾವು ನವಮಾಸದ ವರೆಗೆ ಯಾವ ಅಂತರ್ಗೃಹದಲ್ಲಿ ವಾಸ ಮಾಡಿದ್ದಿರೋ, ಆ ಅಂತರ್ಗೃಹದ್ದು ಎಂದು ಉತ್ತರಕೊಟ್ಟಳು ಆ ಕೂಡಲೆ ಬಾದಶಹನು ಮುಂದೆ ಮಾತಾಡಲಿಕ್ಕೆ ತಿಳಿಯದೆ, ಪ್ರಸನ್ನತೆಯಿಂದ ಆ ಪರಿಚಾರಿಕೆಗೆ ಬಹುಮಾನ ವನ್ನಿತ್ತು ಕಳುಹಿಸಿದನು.

—(೨೩೧. ಬೀರಬಲನ ಪುತ್ರಿಯೂ, ಬಾದಶಹನೂ.)—

ಒಂದು ದಿವಸ ಬೀರಬಲನ ಪುತ್ರಿಯು ಜನ್ಮಾವಸ್ಥೆಯಿಂದ, ಹೂಳಿಕೊಳ್ಳುವದಕ್ಕೆ ಕುಳಿತುಕೊಂಡಿದ್ದಳು ಆ ಸಮಯದಲ್ಲಿ ಅಕಸ್ಮಾತ್ತಾಗಿ ಬಾದಶಹನು ಅಲ್ಲಿಗೇ ಹೋದನು ಮತ್ತು ಅವಳ ಸೀರೆ ಕುಪ್ಪಸಗಳನ್ನೆಲ್ಲ ತೆಗೆದುಕೊಂಡು, ಒಂದು ಮೂಲೆಯಲ್ಲಿ ಅವಿತುಕೊಂಡು ಕುಳಿತನು ಅವಳು ಸ್ನಾನ ತೀರಿಸಿಕೊಂಡು ಬಟ್ಟೆಗಳನ್ನು ನೋಡಲು, ಕಾಣಲಿಲ್ಲ ಮೂಲೆಯಲ್ಲಿ ಕುಳಿತಿದ್ದ ಬಾದಶಹನಮೇಲೆ ದೃಷ್ಟಿಯು ಬಿತ್ತು ಆಗ ಅವಳು ಸ್ತನಗಳನ್ನು ಮುಚ್ಚಿಕೊಂಡು ಬಾದಶಹನಮುಂದೆ ಬಂದಳು ಆಗ ಬಾದಶಹನು ನೀನು ಉಳಿದ ಅಂಗಾಂಗಳನ್ನು ಮುಚ್ಚಿಕೊಳ್ಳದೆ ಸ್ತನಗಳನ್ನೇ ಯಾಕೆ ಮುಚ್ಚಿಕೊಂಡಿ ? ಎಂದು ಪ್ರಶ್ನೆಮಾಡಿದನು ಆಗ ಅವಳು - ಖಾವಂದ ! ತಾವು ಚಿಕ್ಕಂದಿನಲ್ಲಿ ನನ್ನನ್ನು ಎತ್ತಿಕೊಂಡು ಲಾಲನೆ ಪಾಲನೆ ಮಾಡಿರುವಿ

ನ್ನ ಭುಜಪಂಡವನ್ನು ಮುಂದೆ ಮಾಡಿದನು ವೈದ್ಯನು ಅದನ್ನು ಮುಟ್ಟಿದ ಕೂಡಲೆ ಗಾಬರಿಯಾಗಿ ಹೊರಗೆ ಕೈ ತೆಗೆದುಕೊಂಡನು ಇಷ್ಟಾದಮೇಲೆ ಬೀರಬಲನು ಅವನ ಭುಜದಂಡವನ್ನು ಹಿಡಿದುಕೊಂಡು ಹೊರಗೆಬಂದು ಇದು ಹಂಚಿಕೆಯ ಇಡಿಗಂಟು ವೈದ್ಯಸಾಹೇಬ! ಬಿಸಮಿಲ್ಲಾಹ ಉರ್ಹಮಾನುರ್ರಹೀಮ ಎಂದು ಹೇಳಿದನು ವೈದ್ಯನು ನಾಚಿಕೆಯಿಂದ ತಲೆಬೊಗ್ಗಿಸಿದನು ಪುನರಪಿ ಬೀರಬಲನ ಹೆಸರನ್ನು ಎತ್ತಲಿಲ್ಲ.

—(೨೨೮. ಎರಡು ಸಾವಿರ ಮೂರ್ಖರು.)—

ಒಂದು ಸಮಯದಲ್ಲಿ ಬೀರಬಲನು ತನ್ನ ಸ್ವದೇಶಕ್ಕೆ ಬಂದಿದ್ದನು ಮರಳಿ ದಿಲ್ಲಿಗೆ ಬರಬೇಕೆಂದು ಹೊರಡಲು ಎರಡುಸಾವಿರ ಜನ ಬ್ರಾಹ್ಮಣಕುಲದ ತರುಣರು ತಮಗೆ ಸೈನ್ಯದಲ್ಲಿ ಕೆಲಸವನ್ನು ಕೊಡಿಸಬೇಕೆಂದು ಬೀರಬಲನ ಬೆನ್ನುಹತ್ತಿದನು ಅವರೆಲ್ಲರನ್ನೂ ದಂಡಿನಲ್ಲಿ ನಿಯಮಿಸಿಕೊಂಡು ದಿಲ್ಲಿಗೆ ಬಂದನು ಆದರೆ ಅವರಿಗೆ ವೇತನವನ್ನು ಹ್ಯಾಗೆ ಕೊಡಬೇಕು? ಎಂದು ಚಿಂತಿಸಿ ಸ್ವಸ್ಥಕುಳಿತುಕೊಂಡನು ಮುಂದೆ ಕೆಲವು ದಿವಸಗಳಾದ ಮೇಲೆ ಬಾದಶಹನೇ ಬೀರಬಲನನ್ನು ಕರೆಯಿಸಿಕೊಂಡು ನಿನ್ನ ದೇಶವು ಸೌಖ್ಯದಲ್ಲಿರುವದೋ? ನನ್ನಸಲುವಾಗಿ ಏನು ತೆಗೆದುಕೊಂಡು ಬಂದಿರುವಿ? ಎಂದು ಕೇಳಿದನು ಆಗ ಬೀರಬಲನು ಸರಕಾರ! ಎರಡು ಸಾವಿರ ಜನ ಮೂರ್ಖರನ್ನು ಕರೆತಂದಿರುವೆನು; ಎಂದು ಉತ್ತರಕೊಟ್ಟನು ಅದಕ್ಕೆ ಬಾದಶಹನು ಅವರು ಮೂರ್ಖರೆಂದು ಹ್ಯಾಗೆ ಹೇಳುವಿ? ಎಂದು ಕೇಳಿದನು ಬೀರಬಲನು-ಆ ಮನುಷ್ಯರಿಗೆ ಕಿಂಚಿತ್ತಾದರೂ ಜ್ಞಾನವಿದ್ದಂತೆ ಕಂಡು ಬರುವದಿಲ್ಲ. ಯಾಕಂದರೆ, ತಮ್ಮಲ್ಲಿ ಚಾಕರಿಯು ದೊರೆಯದಿದ್ದ ಪಕ್ಷದಲ್ಲಿ ಸ್ವದೇಶಕ್ಕೆ ಮರಳಿ ಹೋಗುವಬಗೆ ಹ್ಯಾಗೆ? ಎಂಬವನ್ನು ಸಹಾ ಯೋಚಿಸದೆ ನನ್ನೊಡನೆ ಹೊರಟು ಬಂದಿದ್ದಾರೆ ಅದರಿಂದ ಅವರಿಗೆ ನಾನು ಮೂರ್ಖರೆಂದು ತಿಳಿದುಕೊಂಡಿದ್ದೇನೆ ಎಂದು ಉತ್ತರಕೊಟ್ಟನು. ಆಗ ಬಾದಶಹನು ನಕ್ಕು ಒಳ್ಳೇದು ಅವರಿಗೆ ಸೈನ್ಯದಲ್ಲಿ ನಿಯಮಿಸಿಕೊಂಡು ಪ್ರತಿಮಾಸಕ್ಕೆ ಸರಕಾರದ ಖಜಾನೆಯೊಳಗಿಂದ ವೇತನವನ್ನು ಸಲ್ಲಿಸುತ್ತ ಹೋಗು! ಎಂದು ಅಪ್ಪಣೆ ಮಾಡಿದನು ಬೀರಬಲನು ಬಾದಶಹನ ಅಪ್ಪಣೆಯಂತೆ ಮಾಡಿದನು.

—(೨೨೯. ಬೀರಬಲನ ದಾಸಿ.)—

ಒಂದು ಸಮಯದಲ್ಲಿ ಬಾದಶಹನ ಮನಸ್ಸಿನಲ್ಲಿ ಬೀರಬಲನ ಗೃಹದ ಪರಿಚಾರಿಕೆಯರನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವು ಜನಿಸಿತು. ಕೂಡಲೆ ಅವನು ಬೀರಬಲನ ಗೃಹಕಡೆಗೆ ಬಂದನು ಆಗ ಒಬ್ಬ ದಾಸಿಯು

ಗ ತಾವು ನನ್ನ ಸರ್ವಾಂಗವನ್ನೂ ನೋಡಿರುವಿರಿ, ಆದರೆ ಎದೆಯ ಮೇಲಿನ ಸ್ತನಗಳನ್ನು ನೋಡಿದ್ದಿಲ್ಲ, ಅದರಿಂದ ಸ್ತನಗಳನ್ನು ಮುಚ್ಚಿಕೊಂಡು, ತಮ್ಮ ಎದುರಿಗೆ ಬಂದೆನು. ಎಂದು ಹೇಳಿದಳು ಬಾದಶಹನು ಸುಮ್ಮನಾದನು. ... ... *

—(೨೩೨. ಹಿಂದೂಗಳಲ್ಲಿ ಯಾವ ಜಾತಿಯವರು ಚತುರರು?)—

ಬಾದಶಹ—ಹಿಂದುಗಳಲ್ಲಿ ಯಾವಜಾತಿಯವರು ಚತುರರು ?

ತೋಡರಮಲ್ಲ—ಬ್ರಾಹ್ಮಣರು.

ಬೀರಬಲ—ಅಲ್ಲ, “ ಲಾಲಾ ” ಜಾತಿಯವರು ಚತುರರು.

ಬಾದಶಹ—ಇದನ್ನು ಪರೀಕ್ಷಿಸಿ ನೋಡಬೇಕು ?

ಮರುದಿವಸ ಬೀರಬಲನೂ ಬಾದಶಹನೂ ಕೂಡಿಕೊಂಡು ನಗರಬಲ್ಲಿ ರಾತ್ರಿಸಮಯದಲ್ಲಿ ಸಂಚಾರಕ್ಕೆ ಹೊರಟರು ಒಂದು ಬೀದಿಯಲ್ಲಿ ಒಬ್ಬ ಲಾಲನಮನೆಯು ಹತ್ತಿತು ಆ ಲಾಲಾಜಿಯ ಹೆಂಡತಿಯು ತನ್ನ ಪತಿಗೆ ಇನ್ನು ಉಪಜೀವನವು ಹ್ಯಾಗೆ ನಡೆಯಬೇಕು ಮಕ್ಕಳು ಮರಿಗಳೆಲ್ಲ ಉಪೋಷಣದಿಂದ ಮರುಗಹತ್ತಿವೆ ಎಂದಳು ಆಗ ಲಾಲಾಜಿಯು ಹೆದರಬೇಡ ನನಗೆ ಚಾಕರಿಯು ಹತ್ತಿದದಿವಸವೇ ಮನೆಯನ್ನೆಲ್ಲ ದ್ರವ್ಯದಿಂದ ತುಂಬಿಬಿಡುತ್ತೇನೆ ಎಂದು ಹೇಳಿದನು ಈ ಮಾತುಗಳು ಕಿವಿಗೆಬಿದ್ದ ಕೂಡಲೆ ಅವರಿಬ್ಬರೂ ಅಲ್ಲಿಂದಲೇ ಹಿಂದಿರುಗಿ ತಮ್ಮ ತಮ್ಮ ಸ್ಥಾನಗಳಿಗೆ ಬಂದರು ಮತ್ತು ಆಲಾಲಾಜಿಗೆ ನಮ್ಮ ಅರಮನೆಯಲ್ಲಿ ಒಂದು ಕೆಲಸವನ್ನು ಕೊಡು ಆದರೆ ವೇತನವನ್ನು ತೀರಕಡಿಮೆಕೊಡು ಎಂದು ಹೇಳಿ ಬಾದಶಹನು ತನ್ನ ಸ್ಥಾನಕ್ಕೆತೆರಳಿದನು ಮರುದಿವಸ ಬೀರಬಲನು ಅವನನ್ನು ಕರೆಯಿಸಿ ಈ ಹೊತ್ತಿನಿಂದ ನಿನಗೆ ಮಾಸ ಒಂದಕ್ಕೆ ಹತ್ತು ರೂಪಾಯಿ ವೇತನದ ಮೇಲೆ ಅಶ್ವಶಾಲೆಯ ಕಟ್ಟೆಯಮೇಲೆ ಕುಳಿತುಕೊಳ್ಳುವ ಕೆಲಸದ ಮೇಲೆ ನಿಯಮಿಸಿದ್ದೇನೆ ಎಂದು ಹೇಳಿದನು ಆಗ ಲಾಲಾಜಿಯು ಅಶ್ವಶಾಲೆಗೆ ಬಂದು ಕಟ್ಟೆಯ ಮೇಲೆ ಕುಳಿತು ಕೊಂಡನು ಮರುದಿವಸ ಪ್ರಾತಃಕಾಲದಲ್ಲಿ ಎದ್ದುಬಂದು ಪ್ರತಿಯೊಂದು ಕುದುರೆಯ ಲದ್ದಿಯನ್ನು ತೂಕ ಮಾಡಿ ನೋಡಹತ್ತಿದನು. ಆಗ ಪ್ರತಿಯೊಬ್ಬತುರಗರಕ್ಷಕನು ಬಂದು ನೀವು ಲದ್ದಿಯನ್ನು ಯಾಕೆ ತುಲನೆ ಮಾಡುತ್ತಿರುವಿರಿ ! ಎಂದು ಕೇಳಹತ್ತಿದನು ಆಗ ಲಾಲಾಜಿಯು ಏನೂ ಇಲ್ಲ ಬಾದಶಹನು ನನ್ನನ್ನು ಇದೇ ಕಾರ್ಯಕ್ಕೆ ನಿಯಮಿಸಿದ್ದಾನೆ ಪ್ರತಿಯೊಂದು ಅಶ್ವಕ್ಕೆ ಪ್ರತಿದಿವಸದಲ್ಲಿ ಎಷ್ಟು ಆಹಾರಕೊಡಲ್ಪಡುತ್ತದೆ ಮತ್ತು ಆಮಾನದಿಂದ ಕುದುರೆಯು ಎಷ್ಟು ಲದ್ದಿಯನ್ನು ಹಾಕುತ್ತಿರುವದು ಎಂಬದನ್ನು ಪರೀ

ನು ನಿಜಸಂಗತಿಯನ್ನೆಲ್ಲ ಹೇಳಿಬಿಟ್ಟನು. ಆಗ ದೇವಿಯು ಕುಪಿತಳಾಗಿ "ಈ ದಿವಸದಿಂದ ಲಾಲಾಜಾತಿಯ ಜನರಮನೆಯಲ್ಲಿ ನಾನು ವಾಸಮಾಡುವದಿಲ್ಲ" ಎಂದು ಹೇಳಿ ಅಂತರ್ಧಾನವಾದಳು ಈ ಕಾರಣದಿಂದ "ಲಾಲಾ" ಜನರು ದರಿದ್ರರಾಗಿರುವರು ಎಂದು ಬೀರಬಲನು ಹೇಳಿದನು.

—(೨೩೪ ಮುಸಲ್ಮಾನರ ಇಸ್ತಿಂಜಾ.)—

ಒಂದುಸಮಯದಲ್ಲಿ ಬಾದಶಹನು "ಬೀರಬಲ! ನಿಮ್ಮಜನರು ಯಾವಾಗಲೂ ಅಸ್ವಚ್ಛತೆಯಿಂದ ಇರುವರು. ನಮ್ಮಜನರು ಯಾವಾಗಲೂ ಸ್ವಚ್ಛವಾಗಿರುವರು" ಎಂದನು. ಅದಕ್ಕೆ ಬೀರಬಲನು ಅದು ಹ್ಯಾಗೆ! ಎಂದುಪ್ರಶ್ನೆಮಾಡಿದನು. ಈ ಪ್ರಶ್ನೆಗೆ ಬಾದಶಹನು ನಿಮ್ಮಜನರು ಮೂತ್ರವಿಸರ್ಜನೆ ಮಾಡಿ ಹಾಗೆಯೇ ದೋತರವನ್ನು ಬಿಟ್ಟುಬಿಡುತ್ತಾರೆ, ನಮ್ಮಜನರು ಮೂತ್ರವಿಸರ್ಜನೆಯ ನಂತರ ಮಣ್ಣನ್ನು ಹಚ್ಚಿ ಶುದ್ಧಮಾಡುತ್ತಾರೆ; ಎಂದು ಉತ್ತರ ಹೇಳಿದನು. ಅದಕ್ಕೆ ಬೀರಬಲನು ಹಾಗಲ್ಲ? ಇದಕ್ಕೆ ಬೇರೆಕಾರಣವುಂಟು, ಅದೇನಂದರೆ ಮೂತ್ರವಿಸರ್ಜನೆಯ ಕಾಲದಲ್ಲಿ ಅದರಮೇಲೆ ದೃಷ್ಟಿ ಬೀಳಲು, ಆಗ ನಿಮ್ಮ ಮನಸ್ಸಿನಲ್ಲಿ "ಇದು ಕಕ್ಕನ ಮಗಳನ್ನೂ, ಮಾವನ ಮಗಳನ್ನೂ ಅಕ್ಕತಂಗಿಯರನ್ನೂ ಸಹ ಬಿಡಲಿಲ್ಲವೆಂದು ತಿಳಿದು ಅದರಮೋರೆಗೆ ಮಣ್ಣುಹಚ್ಚುತ್ತೀರಿ" ಎಂದು ಹೇಳಿದನು. ಅದನ್ನು ಕೇಳಿ ಬಾದಶಹನು ಲಜ್ಜಿತನಾದನು.

—(೨೩೫ ಬಾದಶಹನ ಜಾಮಾತ.)—

ಒಂದುದಿವಸ ಸಭಾಸ್ಥಾನದಲ್ಲಿ ಅಕಬರನ ಜಾಮಾತನು ಬಂದನು, ಸಭಿಕರೆಲ್ಲರೂಚುಟಿಕೆಯನ್ನು ಬಾರಿಸಹತ್ತಿದರು. ಆದರೆ ಮಥುರೆಯ ಒಬ್ಬ ವರ್ತಕನು ತನ್ನ ಅಂಗುಲಿಯನ್ನು ತೋರಿಸಿದನು, ಹೀಗೇಕೆ! ಎಂದು ಬಾದಶಹನು ಪ್ರಶ್ನೆಮಾಡಿದನು. ಆಗ ಆ ವರ್ತಕನು "ಈ ಜನರು ಚುಟಿಕೆಯನ್ನು ಬಾರಿಸಿದರು, ಇದರ ಕಾರಣವೇನಂದರೆ ಚುಟಿಕೆಬಾರಿಸುವಷ್ಟು ಸಮಯದಲ್ಲಿ ನಿಮ್ಮನ್ನು ನಾಶಮಾಡುತ್ತೇವೆ" ಎಂಬಅಭಿಪ್ರಾಯದಿಂದ ಗರ್ಭಿತವಾದ್ದರಿಂದ ನಾನು ಒಂದು ಅಂಗುಲಿನಿರ್ದೇಶವನ್ನು ಮಾಡಿದೆನು, ಇದರ ಆಶಯವೇನಂದರೆ ನಿಮ್ಮಿಂದ ಒಂದಂಗುಲಿಯನ್ನು ಸಹ ಮಣಿಸುವದು ಆಗಲಿಕ್ಕಿಲ್ಲ ಒಂದು ಅಂಗುಲಿಯನ್ನು ತೋರಿಸಿದೆನು ಎಂದು ಕಥನಮಾಡಿದನು ಈ ಮಾತನ್ನು ಶ್ರವಣಮಾಡಿ ಬಾದಶಹನು ಪ್ರಸನ್ನನಾದನು ಸಭಾಸದರು ಲಜ್ಜಿತರಾದರು.

—(೨೩೬ ನಾನು ಮಾತಾಡಿಸಿಕೊಳ್ಳುವೆನು)—

ಒಂದಾನೊಂದು ಸಮಯದಲ್ಲಿ ಬೀರಬಲನು ಬಾದಶಹನ ದರುಶನಕ್ಕೆ ಬರಹತ್ತಿದ್ದನು. ಆಗ ಅವನನ್ನು ನೋಡಿ ಬಾದಶಹನು “ ಬೀರಬಲ್ಲ ! ಕೇಳು ನನಗೆ ನಿನ್ನೊಡನೆ ಈಗ ಮಾತನಾಡಲು ಅವಕಾಶವಿಲ್ಲ ” ಎಂದನು ಅದಕ್ಕೆ ಬೀರಬಲನು- “ ನಾನೇ ಮಾತನಾಡಿಸಿಕೊಳ್ಳುತ್ತೇನೆ ನೀವು ಹೆದರಬೇಡಿರಿ ! ಎಂದನು. ಈ ಉತ್ತರವನ್ನು ಕೇಳಿ ಬಾದಶಹನು ಬಿದ್ದುಬಿದ್ದು ನಕ್ಕನು.

—(೨೩೭ ನಾವಕೀ ರಕ್ಷಾ.)—

ಒಂದಾನೊಂದು ಸಮಯದಲ್ಲಿ ಬಾದಶಹನು ಬೀರಬಲನನ್ನು ಕುರಿತು ನೀನು ಎಂದಾದರೂ ಡೋಣಿಯಲ್ಲಿ ಕುಳಿತಾಗ ಅದು ಮುಳುಗಹತ್ತಿದರೆ ಆ ಸಮಯದಲ್ಲಿ “ ನಾವಕೀರಕ್ಷಾ, ಎಂಬ ಗ್ರಂಥವನ್ನು ತೆರೆದು. ಅದರಲ್ಲಿರುವ ಉಪಾಯಗಳಂತೆ ವರ್ತಿಸಿದರೆ ಡೋಣಿಯು ಎಂದೂ ಮುಳುಗಲಾರದು ,, ಎಂದು ಹೇಳಿದನು. ಅದಕ್ಕೆ ಬೀರಬಲನು- ನಿಜವದೆ; ಆ ಸಮಯದಲ್ಲಿ ಗ್ರಂಥವನ್ನು ನೋಡಲಿಕ್ಕೆ ಸಂಧಿಯು ದೊರೆತರೂ ದೊರೆಯಬಹುದು ಎಂದನು. ಈ ಉತ್ತರವನ್ನು ಕೇಳಿ ಬಾದಶಹನು ನಗಹತ್ತಿದನು.

—(೨೩೮ ಅತ್ತರ [ಸೌಗಂಧಿತೈಲ] ವ್ವಾ, ನಶ್ಯವ್ವಾ.)—

ಒಂದುದಿವಸ ಬಾದಶಹನು ವಿನೋದಮಾಡಬೇಕೆಂದು ಬೀರಬಲನಿಗೆ ಸುಗಂಧದೆಣ್ಣೆಗೆ ಪ್ರತಿಯಾಗಿ ಮೂತ್ರವನ್ನು ಹಚ್ಚಿ ಹಾಸ್ಯಮಾಡಹತ್ತಿದನು ಬೀರಬಲನು ಕೈಯನ್ನು ಅವಘ್ರಾಣಿಸಿ ನಾಚಿಕೆಯಿಂದ ತಲೆಬೊಗ್ಗಿಸಿದನು, ಏನೂ ಮಾತಾಡಲಿಲ್ಲ ತನ್ನ ಕೆಲಸದಲ್ಲಿಯೇ ತೊಡಗಿದನು. ಮುಂದೆ ಕೆಲವು ದಿವಸಗಳಮೇಲೆ ಬಾದಶಹನಿಗೆ ಸಿರೋವೇದನೆಯುಂಟಾಯಿತು, ಆಗ ಬೀರಬಲನು- ಹುಜೂರ ? ನನ್ನಬಳಿಯಲ್ಲಿ ಒಂದುಪ್ರಕಾರದ ನಶ್ಯವಿರುವದು ಅದನ್ನು ಅವಘ್ರಾಣಿಸಿದ ಉತ್ತರಕ್ಷಣದಲ್ಲಿಯೇ ಶಿರೋವೇದನೆಯು ನಿಂತುಹೋಗುವದು ಎಂದು ಹೇಳಿದನು. ಅದಕ್ಕೆ ಬಾದಶಹನು ಶೀಘ್ರವಾಗಿ ತಂದುಕೊಡು ! ಎಂದು ಅಪ್ಪಣೆಮಾಡಿದನು. ಆಗ ಬೀರಬಲನು ಶುಷ್ಕವಾಗಿರುವ ಮಲವನ್ನು ತಂದು ಸಣ್ಣಾಗಿ ಅರೆದು, ಒಂದು ಬೆಳ್ಳಿಯ ಡಬ್ಬಿಯಲ್ಲಿ ತುಂಬಿಕೊಂಡು ಒಯ್ದು ಬಾದಶಹನಿಗೆಕೊಟ್ಟನು ಬಾದಶಹನು ಅದನ್ನು ಅವಘ್ರಾಣಿಸಿ ಕೆಟ್ಟಮೋರೆಯನ್ನು ಮಾಡಿ ಇದು ಯಾವಪದಾರ್ಥದಿಂದ ಮಾಡಿದ ನಶ್ಯವು ಎಂದು ಕೇಳಿದನು. ಅದಕ್ಕೆ ಬೀರಬಲನು ಕೈಜೋಡಿಸಿ,- ಹುಜೂರ ? ಹಿಂದಕ್ಕೆ ತಾವು ನನಗೆ ಸುಗಂಧತೈಲವನ್ನು ಹಚ್ಚಿದ್ದಿಲ್ಲವೇ ! ಆ ಪದಾರ್ಥದ ಅರ್ಕದಿಂದ ಈ ನಶ್ಯವು ಸಿದ್ಧವಾಗಿದೆ ಎಂದು ಉತ್ತರಕೊಟ್ಟನು. ಈ ಮಾ

ತನ್ನು ಕೇಳಿ ಬಾದಶಹನು ಲಜ್ಜಿತನಾದನು,

—(೨೩೯ ನನ್ನವಾದ್ಯವು ಪೃಥಕ್ಕಾಗಿ ನುಡಿಯುವದಿಲ್ಲ.)—

ಒಂದಾನೊಂದು ಸಮಯದಲ್ಲಿ ಬಾದಶಹನು ಬೀರಬಲನನ್ನು ಗಾಯನವಾದನ ಶಾಲೆಯ ಮುಖ್ಯಸ್ಥನನ್ನಾಗಿ ನಿಯಮಿಸಿದನು, ಆದರೆ ಆ ವಿದ್ಯೆಯಲ್ಲಿ ಬೀರಬಲನಿಗೆ ಕಿಂಚಿತ್ತಾದರೂ ಅಭಿರುಚಿಯಿದ್ದಿಲ್ಲ. ಒಂದುದಿವಸ ಗಾಯಕರ ಸಮ್ಮೇಲನವು ಆರಂಭವಾಯಿತು ಎಲ್ಲರೂ ಒಂದೊಂದು ವಾದ್ಯವನ್ನು ಬಾರಿಸಹತ್ತಿದರು, ಬೀರಬಲನು ಒಂದು ಹೊರಸಿನಕಾಲಿಗೆ ಬಟ್ಟೆಯನ್ನು ಸುತ್ತಿಕೊಂಡು ಬಂದು ಒಂದು ಕಟ್ಟಿಗೆಯಿಂದ ಬಾರಿಸಹತ್ತಿದನು, ಈ ಕೌತುಕವನ್ನು ಕಂಡು ಬಾದಶಹನು ಪ್ರತಿಯೊಬ್ಬನು ಪೃಥಕ್‌ಪೃಥಕ್ಕಾಗಿ ಬಾರಿಸಿರಿ! ಎಂದು ಅಪ್ಪಣೆಮಾಡಿದನು, ಎಲ್ಲರೂ ತಮ್ಮ ವಾದನಪಟುತ್ವವನ್ನು ಪ್ರಕಟಗೊಳಿಸಿದರು, ಬೀರಬಲನ ಪಗದಿಯುಬಂದಕೂಡಲೆ ಹುಜೂರ ನನ್ನ ವಾದ್ಯವು ಪೃಥಕ್ಕಾಗಿ ನುಡಿಯುವದಿಲ್ಲ ಎಂದು ಹೇಳಿದನು. ಆ ದಿನ ಮೊದಲ್ಗೊಂಡು ಬಾದಶಹನು ಆ ಅಧಿಕಾರದಿಂದ ಬೀರಬಲನನ್ನು ತಪ್ಪಿಸಿದನು.

—(೨೪೦. ವರ್ತಕನ ಚತುರನಾದ ಮಗನು.)—

ಒಂದುದಿವಸ ಬಾದಶಹನು ಗಜಾರೋಹಣ ಮಾಡಿಕೊಂಡು ನಗರದಲ್ಲಿ ಸಂಚಾರಕ್ಕೆ ಹೊರಟಿದ್ದನು ಅವನನ್ನು ನೋಡಿ ಒಬ್ಬ ವರ್ತಕನ ಚಿಕ್ಕಮಗನು-"ಎಲೋ, ಆನೆಯವನೇ! ಆನೆಯನ್ನು ಕ್ರಯಕ್ಕೆ ಕೊಡುವಿಯಾ ಎಂದು ಕೇಳಿದನು ಆ ಅಜ್ಞಾನಿಯಾದ ಬಾಲಕನ ಕಥನವನ್ನು ಕೇಳಿ, ಬಾದಶಹನಿಗೆ ಕೋಪವು ಬಂತು ಆದರೂ ಅವನ ಸಹನಮಾಡಿಕೊಂಡು ಸುಮ್ಮನೆ ಹೊರಟು ಹೋದನು ಮರುದಿವಸ ಆ ಬಾಲಕನನ್ನು ಕರೆಯಿಸಿ, - ಈ ದಿವಸ ಗಜವನ್ನು ಕ್ರಯಕ್ಕೆ ತೆಗೆದು ಕೊಳ್ಳುವಿಯಾ? ಎಂದು ಕೇಳಿದನು ಆಗ ಅವನು ಕೈಜೋಡಿಸಿ ನಿಂತುಕೊಂಡು - ಖುದಾವಂದ! ಆ ವರ್ತಕನು ನಿನ್ನೆಯದಿವಸವೇ ಹೊರಟು ಹೋದನು ಎಂದು ಉತ್ತರ ಕೊಟ್ಟನು. ಈ ಉತ್ತರದಿಂದ ಬಾದಶಹನು ಪ್ರಸನ್ನನಾದನು.

—(೨೪೧. ಚತುರನಾದ ಚೌಬೆ.)—

ಒಂದುದಿವಸ ಬಾದಶಹನು ಬೀರಬಲನನ್ನು ಕುರಿತು- ಮಥುರಾ ಪಟ್ಟಣದಲ್ಲಿಯ ಚೌಬೇ ಜನರು, ಸಮಯೋಚಿತ ಉತ್ತರವನ್ನು ಕೊಡುವದರಲ್ಲಿ ಬಹು ಸಮರ್ಥರೆಂದು ಕೇಳಿದ್ದೇನೆ, ಅದರಿಂದ ಈ ಪಟ್ಟಣದಲ್ಲಿ ಯಾರಾದರೂ ಇದ್ದರೆ ನಾಳೆಯ ದಿವಸ ಓಲಗಕ್ಕೆ ಕರೆದುಕೊಂಡು ಬಾ! ಎಂದು ಅಪ್ಪಣೆ ಮಾಡಿದನು ಅದರಂತೆ ಒಬ್ಬ ಮನುಷ್ಯನನ್ನು ಬೀರಬಲನು ಕರೆ